ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹವ್ಯಕರು ಮತ್ತು ಯಕ್ಷಗಾನ

ಸಂಶೋಧಕರು :

ಶಂಕರ ಕಾಶೀನಾಥ ಶಾಸ್ತ್ರೀ

ನೋಂ. BRDSH - ೦೦೧೦೪

ಕೋಟೆಗುಡ್ಡ

ತಾಲ್ಲೂಕು ಕುಮಟಾ, ಉತ್ತರ ಕನ್ನಡ

ಮಾರ್ಗದರ್ಶಕರು :

ಡಾ. ಗೋಪಾಲಕೃಷ್ಣ ಹೆಗಡೆ

ಕನ್ನಡ ವಿಭಾಗ ಮುಖ್ಯಸ್ಥರು

ಡಾ॥ ಎ.ವಿ. ಬಾಳಿಗಾ ಕಾಲೇಜು

ತಾಲ್ಲೂಕು ಕುಮಟಾ, ಉತ್ತರ ಕನ್ನಡ

ಅಧ್ಯಯನ ಕೇಂದ್ರ :

ಡಾ॥ ಬಿ.ಆರ್. ದರೂರ ಸಂಶೋಧನಾ ಕೇಂದ್ರ

ಹಾರೂಗೇರಿ, ರಾಯಭಾಗ ತಾಲ್ಲೂಕು

ಬೆಳಗಾವಿ ಜಿಲ್ಲೆ

ಕನ್ನಡ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರಪಡಿಸಿದ ಮಹಾಪ್ರಬಂಧ ೨೦೧೨

578

ಶ೦.ಶ೦-ಹ-ಟ್ರಿಪ್

578

AKSHARA GRANTHALAYA

ACC.NO. 049469

578

578

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹವ್ಯಕರು ಮತ್ತು ಯಕ್ಷಗಾನ

ಸಂಶೋಧಕರು :

ಶಂಕರ ಕಾಶೀನಾಥ ಶಾಸ್ತ್ರೀ
ನೋಂ. **BRDSH** - ೦೦೧೦೪
ಕೋಟೆಗುಡ್ಡ
ತಾಲ್ಲೂಕು ಕುಮಟಾ, ಉತ್ತರ ಕನ್ನಡ

ಮಾರ್ಗದರ್ಶಕರು :

ಡಾ. ಗೋಪಾಲಕೃಷ್ಣ ಹೆಗಡೆ
ಕನ್ನಡ ವಿಭಾಗ ಮುಖ್ಯಸ್ಥರು
ಡಾ॥ ಎ.ವಿ. ಬಾಳಿಗಾ ಕಾಲೇಜು
ತಾಲ್ಲೂಕು ಕುಮಟಾ, ಉತ್ತರ ಕನ್ನಡ

ಅಧ್ಯಯನ ಕೇಂದ್ರ :

ಡಾ॥ ಬಿ.ಆರ್. ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ, ರಾಯಭಾಗ ತಾಲ್ಲೂಕು
ಬೆಳಗಾವಿ ಜಿಲ್ಲೆ

**ಕನ್ನಡ ಅಧ್ಯಯನ ವಿಭಾಗದಲ್ಲಿ ಪಿಹೆಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಮಹಾಪ್ರಬಂಧ ೨೦೧೨**

398.2092
SHA h

049469

ಪ್ರಮಾಣ ಪತ್ರ

ಶಂಕರ ಕಾಶೀನಾಥ ಶಾಸ್ತ್ರೀ ಅವರು – **"ಹವ್ಯಕರು ಮತ್ತು ಯಕ್ಷಗಾನ"** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಡಿ ಕನ್ನಡದಲ್ಲಿ ಪಿಹೆಚ್.ಡಿ. ಪದವಿಗಾಗಿ ಮಹಾಪ್ರಬಂಧ ರಚಿಸಿದ್ದು, ಈ ಪ್ರಬಂಧವು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಡಾ. ಗೋಪಾಲಕೃಷ್ಣ ಹೆಗಡೆ

ಡಾ|| ಗೋಪಾಲಕೃಷ್ಣ ಎಲ್ ಹೆಗಡೆ
ಸಂಶೋಧನಾ ಮಾರ್ಗದರ್ಶಕರು
ಶ್ರೀ ಬಿ ಆರ್ ದರೂರ ಸಂಶೋಧನಾ ಕೇಂದ್ರ. ಹಾರೂಗೇರಿ.
ಕನ್ನಡ ವಿಶ್ವವಿದ್ಯಾಲಯ. ಹಂಪಿ

ಘೋಷಣಾ ಪತ್ರ

ಶಂಕರ ಕಾಶೀನಾಥ ಶಾಸ್ತ್ರೀ ಎಂಬುವವನಾದ ನಾನು **"ಹವ್ಯಕರು ಮತ್ತು ಯಕ್ಷಗಾನ"** ಎಂಬ ವಿಷಯದ ಕುರಿತು **ಡಾ. ಗೋಪಾಲಕೃಷ್ಣ ಹೆಗಡೆ,** ಕನ್ನಡ ವಿಭಾಗ ಮುಖ್ಯಸ್ಥರು ಡಾ॥ ಎ.ವಿ. ಬಾಳಿಗಾ ಕಾಲೇಜು, ಕುಮಟಾ ಇವರ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಪದವಿಗಾಗಿ ಮಹಾಪ್ರಬಂಧವನ್ನು ರಚಿಸಿರುತ್ತೇನೆ. ಈ ಪ್ರಬಂಧವು ಬೇರೆ ಯಾವುದೇ ಪದವಿಗಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಪ್ರಕಟಗೊಂಡಿಲ್ಲ ಎಂದು ಈ ಮೂಲಕ ಘೋಷಿಸುತ್ತೇನೆ.

ಸ್ಥಳ : ಕುಮಟಾ

ದಿನಾಂಕ: ೧.೧.೧೨

ತಮ್ಮ ವಿಶ್ವಾಸಿ,

ವಿಷಯಾನುಕ್ರಮಣಿಕೆ

ಅಧ್ಯಾಯ ೧

೧.೧. ಪೀಠಿಕೆ

ಸಂಸ್ಕೃತಿಯ ಕುರಿತು ಅರಿಯುವಾಗ ಜನಜೀವನದ ಮೌಲ್ಯ, ಆಚಾರ, ವಿಚಾರ, ನಂಬಿಕೆ-ನಡವಳಿಕೆಗಳನ್ನು ಕುರಿತು ಶೋಧಿಸಬೇಕಾಗುತ್ತದೆ. ಜನ ಸಂಸ್ಕೃತಿಯ ಮೂಲಕವೇ ವಿಕಾಸಗೊಳ್ಳುವ ಕಲೆಗಾಗಿ ಜನರ ತ್ಯಾಗ, ಕಾಳಜಿ ಮನೋಭಾವಗಳು ಬಹಳ ಮುಖ್ಯ. ಕಲೆಯನ್ನು ಮುಂದಿನ ತಲೆಮಾರಿಗೆ ವರ್ಗಾಯಿಸುವ, ಉಳಿಸಿ ಬೆಳೆಸುವ ಹೊಣೆಹೊತ್ತ ಸಾಮಾಜಿಕರ ಪ್ರಯತ್ನಗಳ ಅರಿವು ಕಲೆಯ ವಿಕಾಸದ, ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

"ಹವ್ಯಕರು ಮತ್ತು ಯಕ್ಷಗಾನ"- ಸಂಶೋಧನೆಯು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಬಹಳಮಹತ್ವದ್ದಾಗಿದೆ. ಹವ್ಯಕರು ಯಕ್ಷಗಾನವನ್ನು ಕಲೆಯಾಗಿ ಆರಾಧಿಸಿ ಸಂಸ್ಕೃತಿಯಾಗಿ ಜೀವನದಲ್ಲಿ ಅಳವಡಿಸಿಕೊಂಡರು. "ಜೀವನಕ್ಕಾಗಿ ಕಲೆ, ಕಲೆಗಾಗಿಯೇ ಜೀವನ" ಎಂದೇ ಭಾವಿಸಿದ ಕಲಾವಿದರನ್ನು ಕಂಡಾಗ ಹವ್ಯಕರು ಯಕ್ಷಗಾನಕ್ಕೆ ನೀಡಿದ್ದೆಷ್ಟು? ಯಕ್ಷಗಾನದಿಂದ ಪಡೆದಿದ್ದೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಕಾಸರಗೋಡು, ಶಿವಮೊಗ್ಗ ಕೊಡಗು ಚಿಕ್ಕಮಗಳೂರಿನ ಕೆಲವು ಭಾಗಗಳಲ್ಲಿ ಹವ್ಯಕರು ವಾಸಿಸಿದ್ದಾರೆ. ಶಿರ್ಸಿ, ಸಿದ್ದಾಪುರ, ಯಲ್ಲಾಪುರ, ಅಂಕೋಲಾ, ಕುಮಟಾ, ಜೋಯ್ಡಾ, ಹೊನ್ನಾವರ ತಾಲ್ಲೂಕಿನ ದುರ್ಗಮ ಪ್ರದೇಶಗಳಲ್ಲಿ ಬಹುತೇಕ ಹವ್ಯಕರಿಂದಲೇ ಪೋಷಿಸಲ್ಪಡುವ ಕಲೆಯಾಗಿದೆ. ಈ ಸಂಗತಿಯು ಯಕ್ಷಗಾನದ ಮೂಲ ಮತ್ತು ಹವ್ಯಕರ ಮೂಲನೆಲೆಯ ಸಂಬಂಧದ ಕುರಿತು ಅಧ್ಯಯನಕ್ಕೆ ಪ್ರೇರೇಪಿಸಿದೆ.

ಯಕ್ಷಗಾನ ಕಲಾವಿದರಲ್ಲಿ ಯಕ್ಷಗಾನವನ್ನೇ ನಂಬಿಬದುಕುವವಮಟ್ಟಿಗೆ ಕಲೆಯನ್ನು ಪ್ರೀತಿಸುವವರಿದ್ದಾರೆ. ಹಿಮ್ಮೇಳ ಮುಮ್ಮೇಳದ ಕಲಾವಿದರಾಗಿ, ಸಂಘಟಕರಾಗಿ, ಸಂಶೋಧಕರಾಗಿ, ವಿಮರ್ಶಕರಾಗಿ ಕಲಾಸೇವೆ ಕೈಗೊಂಡವರಿದ್ದಾರೆ. ಯಕ್ಷಗಾನದಲ್ಲಿ ಇವರು ಹೊಂದಿದ ಆಸಕ್ತಿ ಉಳಿದೆಲ್ಲ ಕಲೆಗಳಿಗಿಂತ ವಿಶೇಷವಾದುದಾಗಿದೆ. ಅಂತಹ ಆಸಕ್ತಿಗೆ ಪ್ರೇರಣೆಯಾದ ಅಂಶಗಳನ್ನು ಕುರಿತು ಶೋಧಿಸಬೇಕಾಗಿದೆ.

ಯಕ್ಷಗಾನದ ಕುರಿತಾದ ಒಲವು ಹವ್ಯಕರ ಪುರುಷರಿಗೆ ಮಾತ್ರ ಸೀಮಿತವಾಗಿರದೆ. ಇಡೀ ಕುಟುಂಬದ ಆರಾಧನೆಯ ಕಲೆಯಾಗಿದೆ. ಆಧುನಿಕ ಕಾಲದ ಇತರ ಮಾಧ್ಯಮಗಳ ಪ್ರಭಾವದ ಮಧ್ಯೆಯೂ ಅನೇಕ ಮಕ್ಕಳು ಯಕ್ಷಗಾನ ಕಲೆಯನ್ನು ಹವ್ಯಾಸವನ್ನಾಗಿಸಿಕೊಂಡಿದ್ದಾರೆ.

ಸಂಸ್ಕೃತಿಯ ಕುರಿತಾದ ಕಾಳಜಿಯಿಂದ ಕಲೆಯನ್ನು ಗೌರವಿಸುವ ಇಡೀ ಸಮಾಜದ ಪ್ರಜ್ಞೆಯು ಅನುಕರಣೀಯವಾಗಿದೆ. "ಹವ್ಯಕರು ಮತ್ತು ಯಕ್ಷಗಾನ" ಎಂಬ ಅಧ್ಯಯನವು ಜನಾಂಗ ಮತ್ತು ಸಂಸ್ಕೃತಿಯ ಸಂಬಂಧದ ನೆಲೆಯನ್ನು ಪರಿಶೋಧಿಸುವುದಕ್ಕೆ ಎಡೆಮಾಡಿಕೊಡುತ್ತದೆ.

ಇದರಿಂದ ಯಕ್ಷಗಾನವನ್ನು ಭಿನ್ನನೆಲೆಗಳಲ್ಲಿ ಅರ್ಥೈಸುವ ದೃಷ್ಟಿಕೋನವು ಜಾಗ್ರತ ಗೊಳ್ಳುವುದರಿಂದ ಕಲೆಯ ಕಾಳಜಿ ಆ ಸಮಾಜಕ್ಕೆ ಹಾಗೂ ಇತರ ಸಮಾಜಕ್ಕೆ ಆಕರ್ಷಕವಾಗಲು ಸಹಕಾರಿಯಾಗುವುದೆಂದು ಭಾವಿಸಲಾಗಿದೆ.

ಕನ್ನಡನಾಡಿನ ಕರಾವಳಿಯ ಕಲೆಯೆಂದು ಪ್ರಾದೇಶಿಕವಾಗಿ ಗುರುತಿಸಿಕೊಂಡ ಯಕ್ಷಗಾನ ಮೈದೋರಿದ ಬಗೆ ಕೂತೂಹಲಕಾರಿಯಾಗಿದೆ. ದೇವಾಲಯದಿಂದ ಬಯಲಿಗೆಬಂದ ಈ ಕಲೆ ಬಯಲಾಟ, ಮೊಕ್ಕಾಂ ಪದ್ಧತಿ ಡೇರೆಮೇಳ, ತಿರುಗಾಟದ ಮೇಳ ಮುಂತಾದ ಸಾಂಸ್ಥಿಕರೂಪದಲ್ಲಿ ಕಾಣಿಸಿಕೊಂಡಿದೆ. ತಾಳಮದ್ದಳೆಯಂತಹ ವಾಕ್‌ವೈಭವದ ಕೂಟಗಳಲ್ಲಿ, ಪ್ರಸಂಗಕೃತಿಗಳ ಮೂಲಕ ಪ್ರತ್ಯೇಕ ಸಾಹಿತ್ಯ ಪ್ರಕಾರದಲ್ಲಿ, ರಂಗಚಿಂತನೆಯ ಅಭಿವ್ಯಕ್ತಿಮಾರ್ಗದಲ್ಲಿ, ಸಂಶೋಧನೆಯ ಅಧ್ಯಯನ ಮಾರ್ಗದಲ್ಲಿ ವಿಫುಲವಾಗಿ ಬೆಳೆಯುತ್ತಿರುವ ಕಲೆ ಇದಾಗಿದೆ. ಯಕ್ಷಗಾನದ ಹುಟ್ಟು ವಿಕಾಸದಕುರಿತಾದ ಜಿಜ್ಞಾಸೆ ವೈಚಾರಿಕವಾಗಿ ಜೀವಂತವಾಗಿದ್ದು ಮೂಲಸ್ವರೂಪದ ಕುರಿತಾಗಿ ನಡೆದಷ್ಟು ಚಿಂತನೆಗಳು ಇನ್ನಾವುದೆ ಕಲೆಯಕುರಿತಾಗಿ ನಡೆದಿಲ್ಲ ಎಂಬುದು ಸತ್ಯವಾಗಿದೆ. ಪಾಮರರಿಂದ ಪಂಡಿತರವರೆಗೂ ಒಂದಿಲ್ಲೊಂದು ಬಗೆಯಲ್ಲಿ ತೊಡಗಿಕೊಂಡು ಬಹುಜನರ ಚಿಂತನೆಯ ಕಲೆಯಾಗಿ ಬೆಳೆದುಬಂದಿದೆ.

ದೇವಾಲಯದಿಂದ ಆರಂಭಿಸಿ ಆಧುನಿಕ ಭವ್ಯ ಸಭಾಗೃಹದವರೆಗೆ ಕನ್ನಡ ಕರಾವಳಿಯಿಂದ ಪಶ್ಚಿಮದ ಆಮೇರಿಕಾದಂತಹ ದೇಶಗಳವರೆಗೆ ಕಲೆ ಪಸರಿಸಿಕೊಂಡಿದೆ. ತನ್ನ ನೆಲೆಯಿಂದ ವಿಶ್ವವ್ಯಾಪಿ ಬೆಳೆದು, ಅಪಾರ ಸಂಖ್ಯೆಯ ರಸಿಕ ವರ್ಗವನ್ನು ಸೃಷ್ಟಿಸಿದೆ.

ಕಲೆಯು ವಿಕಾಸಗೊಂಡು ವ್ಯಾಪಿಸಿದ ನೆಲೆಯಲ್ಲಿ ಲಕ್ಷಾಂತರ ಪ್ರೇಕ್ಷಕವರ್ಗ ಯಕ್ಷಗಾನವೇ ಉದ್ಯೋಗವಾಗಿರುವ ಸಾವಿರಾರು ಕುಟುಂಬಗಳು, ಯಕ್ಷಗಾನದ್ದೇ ಪರಂಪರೆಯ ಅನೇಕ ತಲೆಮಾರುಗಳನ್ನು ಹೊಂದಿರುವ ಕುಟುಂಬಗಳನ್ನು ಕನ್ನಡನಾಡಿನಲ್ಲಿ ಗುರುತಿಸಬಹುದಾಗಿದೆ. ಕರಾವಳಿ ಮಲೆನಾಡಿನಲ್ಲಿ ಪರಂಪರೆಯಾಗಿ ಬೆಳೆದುಬಂದ ಮನೆತನಗಳು ಕಲೆಯನ್ನು ಜತನದಿಂದ ಉಳಿಸಿಕೊಂಡು ಬಂದಿವೆ. ಕಥೆಯ ಪಾತ್ರವೇ ಅನ್ವರ್ಥಕ ಹೆಸರಾಗಿ ಉಳಿದ ಮನೆತನಗಳನ್ನು, ಅಧ್ಯಯನದಲ್ಲಿ ಗುರುತಿಸಲಾಗಿದೆ. ಮನೆಯಲ್ಲಿ ದೇವರ ಪೂಜೆಯೊಂದಿಗೆ ಯಕ್ಷಗಾನ ಕಿರೀಟವನ್ನು ಪೂಜಿಸುವ ಪರಂಪರೆ ಹೊಂದಿದ ಮನೆಗಳು ಕಲೆಯ ಅಧ್ಯಯನದ ದೃಷ್ಟಿಯಿಂದ ಮಹತ್ವವೆನಿಸಿದೆ. ಬಾಲ್ಯದಲ್ಲಿಯೇ ಕಲೆಯ ಆಕರ್ಷಣೆಯಿಂದ ಅದನ್ನೇ ನಂಬಿ ಇಡೀ ಜೀವಮಾನವನ್ನು ಕಲೆಗಾಗಿ ಸಮರ್ಪಿಸಿಕೊಂಡ ಗೀಳು ಕಲೆಯ ಪ್ರಭಾವವನ್ನು ಅರುಹುತ್ತದೆ. ಇಡೀ ಊರಿನ ಎಲ್ಲಾ ಹವ್ಯಕ ಮನೆಗಳು ಯಕ್ಷಗಾನದ ಆವಾರದಲ್ಲಿ ಇಂದಿಗೂ ಇರುವದನ್ನು ಕಾಣಬಹುದಾಗಿದೆ. ಬಾಲ್ಯದಲ್ಲಿ ಮಕ್ಕಳನ್ನು ಆಡಿಸುವ ಕ್ರಮ ಕೂಡ ಯಕ್ಷಗಾನದ ಹಾಡು ಕುಣಿತಗಳನ್ನು ಆಧರಿಸಿ ನಡೆದುಕೊಂಡು ಬಂದ ನಿದರ್ಶನಗಳು ಇಂದಿಗೂ ಅಂತಹ ಊರುಗಳಲ್ಲಿ ಇದೆ.

ಆರಾಧನಾ ಮೂಲದಿಂದ ಬೆಳೆದು ಬಂದಿರುವ ಯಕ್ಷಗಾನಕ್ಕೆ ಸಾಮಾಜಿಕ ಜೀವನವನ್ನು ಮುದುಪಿಟ್ಟು ಬೆಳೆದ ಜನಾಂಗದ ಕೊಡುಗೆಯನ್ನು ಅಧ್ಯಯನ ನಡೆಸಬೇಕಾದ ಅನಿವಾರ್ಯತೆ ಕಂಡುಬರುತ್ತದೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳು ಮತ್ತು ಮಲೆನಾಡಿನ ಪ್ರದೇಶಗಳಲ್ಲಿ ಯಕ್ಷಗಾನದೊಂದಿಗೆ ನೆಲೆನಿಂತ ವಿವಿಧ ಜನಾಂಗಗಳು ಇದ್ದರೂ ಕಲೆಯ ಎಲ್ಲಾ ಅಂಗಗಳಲ್ಲಿ ಗಣನೀಯ ಕೊಡುಗೆ ನೀಡಿದ ಹಾಗೂ ಯಕ್ಷಗಾನದ ಗಾಢ ಪ್ರಭಾವಕ್ಕೊಳಗಾದ ತಲೆಮಾರುಗಳನ್ನು ಹೊಂದಿದ ಹವ್ಯಕ ಜನಾಂಗದಕುರಿತಾದ ಅಧ್ಯಯನ ನಡೆಸಬೇಕಾದದ್ದು ಯಕ್ಷಗಾನ ಕಲೆಯ ವಿಕಾಸದ ಇತಿಹಾಸವನ್ನು ಪುನರ್ ದಾಖಲಿಸುವ ದೃಷ್ಟಿಯಿಂದ ಅತ್ಯಂತ ಅಗತ್ಯವೆನಿಸುತ್ತದೆ.

ಅನೇಕ ವರ್ಷಗಳಿಂದ ಯಕ್ಷಗಾನವನ್ನು ನೋಡುತ್ತ, ಕಲೆಯ ಇತಿಹಾಸವನ್ನು ಕೇಳುತ್ತಾ ಇರುವ ಸಾಮಾನ್ಯನಿಗೂ ಯಕ್ಷಗಾನ ನೆಲೆನಿಂತ ಪ್ರದೇಶದಲ್ಲಿ ಸಂಚರಿಸಿದಾಗ ದೊರಕುವ ಮಾಹಿತಿಗಳು ಕಲೆಗಾಗಿ ಸಮರ್ಪಣೆಗೊಂಡ ಬದುಕನ್ನು ಕಂಡಾಗ ಯಕ್ಷಗಾನಕ್ಕೆ ಅನ್ಯೋನ್ಯತೆಯನ್ನು ಧಾಖಲಿಸುವ ಪ್ರಯತ್ನದ ಪ್ರಶ್ನೆ ಮೂಡದಿರಲು ಸಾಧ್ಯವಿಲ್ಲ. ಅಂತೆಯೇ ಅಸಂಖ್ಯ ಕುಟುಂಬಗಳು ಇದರ ಪ್ರಭಾವಕ್ಕೊಳಗಾದ ಜನಾಂಗದ ಕೊಡುಗೆಯನ್ನು ಒಟ್ಟಾಗಿ ವಿಶ್ಲೇಷಿಸುವ ಅಧ್ಯಯನದ ಮೂಲಕ ಕಲೆಗೆ, ಕಲೆಗಾಗಿ ಜನಾಂಗವೊಂದು ತೊಡಗಿಕೊಂಡ ಕುರಿತು ಚಿಂತನೆನಡೆಸುವುದು ಇತಿಹಾಸದ ದೃಷ್ಟಿಯಿಂದಲೂ ಮಹತ್ವವೆನಿಸುತ್ತದೆ.

ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಕಾಸರಗೋಡು ಹಾಗೂ ಮಲೆನಾಡು ಪ್ರದೇಶಗಳನ್ನು ಸಂಚರಿಸುವಾಗ ಮೂರುನೂರಕ್ಕೂ ಹೆಚ್ಚು ಯಕ್ಷಗಾನದ ಮೇಳಗಳ ಅಳಿದುಳಿದ ಇತಿಹಾಸ ದೊರೆಯುತ್ತದೆ. ಇಂದಿಗೂ ಐವತ್ತಕ್ಕೂ ಹೆಚ್ಚು ಯಕ್ಷಗಾನ ಕಲಾಕೇಂದ್ರಗಳಿವೆ. ಹತ್ತಾರು ಹವ್ಯಕ ಮನೆಗಳು ಯಕ್ಷಗಾನ ಆಹಾರ್ಯ ತಯಾರಿಸುವ ಟಂಕಸಾಲೆಯಾಗಿದೆ. ಪ್ರತಿ ಊರಿನಲ್ಲಿ ಯಕ್ಷಗಾನವನ್ನು ಉಪಾಸಿಸುವ ಕುಟುಂಬಗಳಿವೆ. ಯಕ್ಷಗಾನದಿಂದ ಜೀವಿಸುವ ವೃತ್ತಿನಿರತ ಕುಟುಂಬಗಳಿವೆ. ಯಕ್ಷಗಾನದಿಂದ ಮನೆಮಠಗಳನ್ನು ಕಳೆದುಕೊಂಡವರ ಚರಿತ್ರೆಯೂ ದಾಖಲಾಗಿರುತ್ತದೆ.

ಅಪಾರ ಪ್ರಮಾಣದ ಕಲಾ ರಸಿಕರನ್ನು ಹೊಂದಿದ ಯಕ್ಷಗಾನ ಕಲೆಗೆ ಈ ಪ್ರದೇಶದಲ್ಲಿ ಇರುವ ಆದರದ ಹಿಂದೆ ಉಪಾಸನೆಯ ಆಶಯವಿದೆ. ಈ ಹಿನ್ನೆಲೆಯಲ್ಲಿ ಮೂವತ್ತು ಹರಕೆಯಾಟದ ಮೇಳಗಳು ಇಂದಿಗೂ ಹರಕೆಯಾಗಿಯೇ ಕಲೆಯನ್ನು ಆರಾಧಿಸುತ್ತಿದೆ.

ಪ್ರಥಮ ಏಕಾದಶಿಯಿಂದ ಮೋಹಿನಿ ಏಕಾದಶಿಯ ಪರ್ಯಂತ ನಡೆಯುವ ತಾಳಮದ್ದಳೆ ಜಾಗರಗಳು ಅವಿರತವಾಗಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದ ದಾಖಲೆ ಹವ್ಯಕ ಮನೆಗಳಲ್ಲಿವೆ, ದೇವಾಲಯಗಳಲ್ಲಿವೆ, ಹಾಡು ಹಬ್ಬದ ಇನ್ನೊಂದು ಪ್ರಕಾರವಾಗಿ ದೇವಾಲಯಗಳಲ್ಲಿ ಪ್ರಾಚೀನ ಕಾಲದಿಂದ ನಡೆದುಕೊಂಡು ಬಂದ ಭಜನೆ ಕುಣಿತಗಳು ಈ ಪ್ರದೇಶದ ದೇವಾಲಯಗಳಲ್ಲಿ ಪ್ರಾಚೀನ ಕಾಲದಿಂದ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಹವ್ಯಕರು ರೂಢಿಸಿಕೊಂಡ ಕನ್ನಡ ಉಪಭಾಷಾ ಪ್ರಭಾವ ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ತಾಳಮದ್ದಳೆಯ ಆಶುಕಥೆಯಲ್ಲಿ ಶೈಲಿಯಾಗಿ ರೂಪಗೊಂಡಿದೆ ಹಿಂದೆ ಈ ಪ್ರದೇಶದಲ್ಲಿ ಶಿಕ್ಷಣ ಕೇಂದ್ರವಾಗಿದ್ದ ಮಠಮಂದಿರ ಶಾಲೆಗಳಲ್ಲಿ ಐಗಳು ಯಕ್ಷಗಾನೀಯ ಶೈಲಿಯಲ್ಲಿ ರಾಮಾಯಣ ಮಹಾಭಾರತವನ್ನು ಹೇಳಿಕೊಡುತ್ತಿದ್ದರೆಂಬುದ್ದನ್ನು

ಇಂದಿಗೂ ಜನರು ಉಲ್ಲೇಖಿಸುತ್ತಾರೆ. ಯಕ್ಷಗಾನ ಹಿಮ್ಮೇಳ ಮುಮ್ಮೇಳಗಳಲ್ಲಿ ಸೂತ್ರಧಾರ, ಹಾಸ್ಯಗಾರ, ಸಭಾಹಿತರೆಂಬ ಪದನಾಮಗಳನ್ನು ಹೊಂದಿದ್ದು ಅದೇ ಹೆಸರಿನ ಮನೆತನಗಳನ್ನು ಹೊಂದಿದ ಹವ್ಯಕ ಕುಟುಂಬಗಳು ಯಕ್ಷಗಾನದಲ್ಲಿ ೯-೧೦ ತಲೆಮಾರುಗಳಿಂದ ತೊಡಗಿಕೊಂಡಿರುವುದು ಕಲೆ ಮತ್ತು ಜನಾಂಗದ ಸಂಬಂಧವನ್ನು ಕೂಲಂಕಷವಾಗಿ ಅಧ್ಯಯನ ಮಾಡಲು ಪ್ರೇರಣೆಯೊದಗಿಸುತ್ತದೆ.

ಯಕ್ಷಗಾನ ಕಲೆ ಪಸರಿಸಿದ ಪ್ರದೇಶಗಳು ಇಂದು ವಿಶ್ವವ್ಯಾಪಿಯಾಗಿದೆ. ಆದರೆ ಅದು ಮೂಲದಲ್ಲಿ ಕರಾವಳಿ ಮಲೆನಾಡಿನಲ್ಲಿ ಮಾತ್ರ ಇತ್ತು ಎಂಬುದು ಖಚಿತವಾಗಿದೆ. ಇಲ್ಲಿನ ಜನರು ಉದ್ಯೋಗದ ನಿಮಿತ್ತ ನೆಲೆಸಿದ ಭಾಗಗಳಲ್ಲಿ ಈ ಕಲೆಯನ್ನು ಪ್ರಕಾಶಗೊಳಸಿದ್ದು ಕಾಲಕಾಲಕ್ಕೆ ಮೇರೆ ವಿಸ್ತಾರಗೊಳ್ಳುತ್ತ ಸಾಗಿದೆ. ಸಾಗರದಾಚೆಗೆ ಕಲೆಯನ್ನು ಕೊಂಡೊಯ್ದು ವಿದ್ಯಾವಂತರು ಜೀವನದ ಸ್ಥಿತ್ಯಂತರ ಹಾಗೂ ಸಂಸ್ಕೃತಿಯ ಹೊಂದಾಣಿಕೆ, ಜೀವನ ವಿಧಾನದ ಹೊಸತನದಲ್ಲೂ ಮೂಲ ನೆಲೆಯ ಕೊಡುಗೆಯನ್ನು ವಲಸೆ ಹೋದ ಪ್ರದೇಶಲ್ಲೂ ಪರಿಚಯಿಸಿದ್ದು, ಕಲೆಯ ಜೀವಂತಿಕೆ ಮತ್ತು ಸತ್ವದ ಕಾರಣದಿಂದ ಎಂಬುದು ಗೋಚರಿಸುತ್ತದೆ. ಈ ಅಧ್ಯಯನವು ಜನಸಮೂದಾಯದ ಕಲೆಯ ಕೊಡುಗೆಯನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ನೋಡುವುದಕ್ಕೆ ಸೀಮಿತವಾಗಿದೆ. ಅಲ್ಲದೆ ಕಲೆಗಾಗಿ ತೊಡಗಿಕೊಂಡ ಜನಾಂಗದ ಮೇಲೆ ಪರಿಣಾಮ ಬೀರಿದ ಸಾಮಾಜಿಕ, ಆರ್ಥಿಕ, ಅಂಶಗಳನ್ನು ಗುರುತಿಸುವುದು ಜನಾಂಗದ ಭಾಷೆ, ಹಾಗೂ ಸಾಹಿತ್ಯಿಕ ಚಟುವಟಿಕೆಗಳ ಪ್ರಭಾವವನ್ನು ಗುರುತಿಸುವುದು ಉದ್ದೇಶವಾಗಿದೆ.

ಜನಾಂಗ ಮತ್ತು ಪ್ರಾದೇಶಿಕ ನೆಲೆಯಲ್ಲಿ ವಿಕಾಸಗೊಂಡ ಕಲೆಯ ಇತಿಹಾಸಕ್ಕೆ ಆಯಾ ಕಾಲದ ಕೊಡುಗೆಗಳು ಹೇಗೆ ಪ್ರಭಾವ ಬೀರಿದವು ಎಂಬುವದನ್ನು ವಿಶ್ಲೇಷಿಸುವದಕ್ಕಾಗಿ ಕಲೆಯ ವಿವಿಧ ಅಂಗಗಳಲ್ಲಿ ಮೇಳಯಿಸಿದ ನಂಬಿಕೆಯನ್ನು ಪರಂಪರೆಯನ್ನು ನಾವಿನ್ಯತೆಯನ್ನು ಗುರುತಿಸುವುದು ಕೂಡಾ ಅಷ್ಟೇ ಮುಖ್ಯವಾಗಿದೆ. ಏಕೆಂದರೆ ಜನಸಮೂದಾಯ ರೂಢಿಸಿಕೊಂಡ ಆಚರಣೆ, ಶಿಷ್ಟಾಚಾರ ನಂಬಿಕೆಗಳು ಕಲೆ ಮತ್ತು ಜನಾಂಗದ ನಡುವೆ ತಾರತಮ್ಯವನ್ನು ಪೋಷಿಸುತ್ತದೆ.

ಈ ಅಧ್ಯಯನವು ಜನಾಂಗದ ಕುರಿತಾದ ಪ್ರಮುಖ ಪ್ರಶ್ನೆಗಳನ್ನು ಎತ್ತಿದೆ. "ಆಧುನಿಕ ಕಾಲದಲ್ಲಿ ಎಲ್ಲವನ್ನು ವ್ಯಾಪಾರವೆಂದು ಸ್ವೀಕರಿಸುವ ಮಾರುಕಟ್ಟೆಯ ಕೊಳ್ಳುಬಾಕುತನ ಈ ಕಲೆಯ ಆರಾಧಕರಾದ ಹವ್ಯಕರಲ್ಲಿ ಇದೆಯೇ?"

ಒಂದು ಕಡೆ ಬ್ರಾಹ್ಮಣ್ಯದ ಮಡಿವಂತಿಕೆ ಇನ್ನೊಂದೆಡೆ ಬದುಕಿಗಾಗಿ ಕೃಷಿ, ಮತ್ತೊಂದೆಡೆ ಇತರ ಸಮಾಜಗಳೊಂದಿಗೆ ಬೆಳೆಸಿಕೊಂಡ ಬಂದ ಯಕ್ಷಗಾನ ಇವುಗಳ ತಾತ್ವಿಕ ಹೊಂದಾಣಿಕೆಯ ರಹಸ್ಯವೇನು? ಎಂಬ ಪ್ರಶ್ನೆಗೆ ಉತ್ತರ ಹುಡುಕುವುದು ನಮ್ಮ ಅಧ್ಯಯನಕ್ಕೆ ಕಾರಣವಾಗಿದೆ.

ಹವ್ಯಕರಲ್ಲಿ ಯಕ್ಷಗಾನಕ್ಕಾಗಿ ಬ್ರಾಹ್ಮಣ್ಯದ ಗತಿವಿಧಿಗಳನ್ನು ಅಲಕ್ಷಿಸಿ ಕಲೆಗಾಗಿ ಕೃಷಿಗೆ ತಿಲಾಂಜಲಿಯನ್ನು ಕೊಟ್ಟವರಿದ್ದಾರೆ. ಆದರೆ ಯಕ್ಷಗಾನವನ್ನು ಕೊನೆಉಸಿರಿನವರೆಗೂ ಹಿಡಿದುಕೊಂಡಿದ್ದಾರೆ. ಹಾಗಾದರೆ ಮನುಷ್ಯನ ಮತ ಧರ್ಮಾಚರಣೆಗಿಂತಲೂ ಊಟಕ್ಕೆ ಬೇಕಾದ ಉದ್ಯೋಗಕ್ಕಿಂತಲೂ ಕಲೆಯ ಆಕರ್ಷಣೆ ಬಲವತ್ತರವಾದದ್ದೆ? ಅಥವಾ ಇದು ವೈದಿಕ ಧರ್ಮವೊಂದು ಮರುಹುಟ್ಟು ಪಡೆದ ವಿಧಾನವಾಗಿದೆಯೇ?

ಬ್ರಾಹ್ಮಣ್ಯವನ್ನು ಉಳಿಸಿಕೊಂಡು ಈ ಕಲೆಯನ್ನು ಸಾಧಿಸಿ ಪೋಷಿಸಿಕೊಂಡು ಬಂದ ಹವ್ಯಕರು ಕೂಡಾ ನಮ್ಮ ಅಧ್ಯಯನ ಕುತೂಹಲಕ್ಕೆ ಕಾರಣರಾಗಿದ್ದಾರೆ. ವೈದಿಕವನ್ನು ಉಳಿಸಿಕೊಂಡು ತಾಳಮದ್ದಳೆಯಲ್ಲಿ ತೊಡಗಿಸಿಕೊಂಡು ಕೃತಾರ್ಥರಾದವರಿದ್ದಾರೆ.

ಈ ಪ್ರಮುಖ ಪ್ರಶ್ನೆಗಳಿಗೆ ಯಕ್ಷಗಾನ ಕಲೆಯಲ್ಲಿ ತೊಡಗಿಕೊಂಡವರ ಬದುಕು ಹೇಗೆ ಉತ್ತರದಾಯಿತ್ವದ ಹೊಣೆ ಹೊತ್ತಿದೆ ಎಂಬುದನ್ನು ಅಧ್ಯಯನದಲ್ಲಿ ನಿರೀಕ್ಷಿಸಲಾಗಿದೆ.

ಕನ್ನಡ ನಾಡಿನ ಕರಾವಳಿ ಮಲೆನಾಡಿನ ಪ್ರದೇಶಗಳಲ್ಲಿ ಅನೇಕ ಜನಾಂಗಗಳು ಯಕ್ಷಗಾನ ಕಲೆಯನ್ನು ಪೋಷಿಸಿರುವುದು ಕಂಡುಬರುತ್ತದೆ. ಕಲೆಯ ವಿಕಾಸ ದೃಷ್ಟಿಯಿಂದ ಎಲ್ಲಾ ಜನಾಂಗದ ಕೊಡುಗೆಗಳು ಗಣ್ಯವೇ ಆಗಿದೆ. ಅಧ್ಯಯನ ದೃಷ್ಟಿಯಿಂದ ಹವ್ಯಕ ಸಮುದಾಯದ ಕೊಡುಗೆಯನ್ನಷ್ಟೆ ಅಧ್ಯಯನಕ್ಕೆ ಮಿತಿಗೊಳಿಸಲಾಗಿದೆ. ಯಕ್ಷಗಾನ ಕಲೆಯಲ್ಲಿ ಹವ್ಯಕರು ತೊಡಗಿಕೊಂಡ ಪ್ರೇರಣೆ ಮತ್ತು ಸಂಸ್ಕೃತಿಯ ಪ್ರಭಾವವನ್ನು ವಿಶ್ಲೇಷಿಸುವುದು ಉದ್ದೇಶವಾಗಿದೆ. ಈ ಕಾರಣದಿಂದ ಕಾಲ ಕ್ರಮೇಣ ವಿಸ್ಮೃತಿಗೊಳ್ಳುವ ಸಾಧ್ಯತೆಯಿರುವ ಮಹಾನ್ ಕೊಡುಗೆಯನ್ನು ನೀಡಿದ ಮನೆತನಗಳ ಪರಂಪರೆ ಹಾಗೂ ಕಲೆಯ ಅಂಗೋಪಾಂಗಗಳಲ್ಲಿ ವಿಶಿಷ್ಟ ಕೊಡುಗೆಯನ್ನು ನೀಡಿದ ಜನಾಂಗದ ಸಮಷ್ಟಿಯಾದ ಕಲಾಧೋರಣೆಯನ್ನು ದಾಖಲಿಸುವುದು ಕೂಡಾ ಅಧ್ಯಯನದ ಪ್ರಯತ್ನವಾಗಿದೆ.

೧.೨ ಅಧ್ಯಯನಗಳ ಸಮೀಕ್ಷೆ

ಕನ್ನಡನಾಡಿನ ಒಂದು ಜನಾಂಗವಾದ ಹವ್ಯಕರು ಕರಾವಳಿ, ಮಲೆನಾಡಿನಲ್ಲಿ ನೆಲೆಸಿರುತ್ತಾರೆ. ಈ ನೆಲೆಯಿಂದ ದೇಶವಿದೇಶಗಳಿಗೂ ನೆಲೆಯನ್ನು ಅರಸಿ ಹೋದವರಾಗಿದ್ದಾರೆ. ಈ ಜನಾಂಗದ ಸಂಸ್ಕೃತಿಯ ಪ್ರಮುಖ ಭಾಗವೆಂದು ಯಕ್ಷಗಾನ ಕಲೆ ಪ್ರತಿಬಿಂಬಿತವಾಗಿದೆ. ಹವ್ಯಕರು ಮತ್ತು ಯಕ್ಷಗಾನ ಶೀರ್ಷಿಕೆಯು ಸೂಚಿಸುವಂತೆ ಹವ್ಯಕ ಜನಾಂಗ ಮತ್ತು ಯಕ್ಷಗಾನ ಕಲೆಯ ಕುರಿತು ನಡೆಸಿದ ಅಧ್ಯಯನಗಳನ್ನು ಆಧಾರವಾಗಿಸಿ ಕೊಂಡು ಈ ಕ್ಷೇತ್ರಗಳಲ್ಲಿ ಕೈಗೊಂಡ ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ.

೧.೨.೧) ಇಡುಗುಂಜಿ ಮೇಳ (೧೯೬೮) : ಡಾ. ರಾಮಕೃಷ್ಣ ಜೋಶಿಯವರು ಈ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದ್ದಾರೆ. ಪ್ರಬಂಧವು ಪೂರ್ವವೃತ್ತ, ಮೇಳ ನಡೆದು ಬಂದ ದಾರಿ, ಕಲಾವಿದರ ಸಾಧನೆ ಸಿದ್ಧಿ ಯಕ್ಷಗಾನ ಕಲೆಗೆ ಇಡುಗುಂಜಿ ಮೇಳದ ಕೊಡುಗೆಗಳನ್ನು ಅಧ್ಯಯನ ಒಳಗೊಂಡಿದೆ. ಅಧ್ಯಯನದಲ್ಲಿ ಪೂರ್ವ ವೃತ್ತವನ್ನು ಪ್ರಸ್ತಾಪಿಸಿ ಯಕ್ಷಗಾನದ ಮೂಲದ ಕುರಿತು ವಿವೇಚಿಸಿರುತ್ತಾರೆ. ಗುಂಡಬಾಳ ಕ್ಷೇತ್ರದ ಯಕ್ಷಗಾನ ಪರಂಪರೆ, ಕರ್ಕಿಮೇಳದ ಪ್ರಾಚೀನತೆ, ಇಡುಗುಂಜಿಯ ಗಣಪತಿ ಯಕ್ಷಗಾನ ಪರಂಪರೆಯ ಆರಾಧ್ಯದೈವವಾಗಿದ್ದನ್ನು ದಾಖಲಿಸಿದ್ದಾರೆ.

ಇಡುಗುಂಜಿ ಮೇಳವು ನಡೆದು ಬಂದ ದಾರಿಯಲ್ಲಿ ಸಂಘಟನೆಯ ಪರಿಶ್ರಮವನ್ನು ದಾಖಲಿಸಿದ್ದಾರೆ. ಕೆರೆಮನೆ ಶಿವರಾಮ ಹೆಗಡೆಯವರ ಕಲಾಸಾಧನೆ – ಸಿದ್ಧಿಯನ್ನು ಅವರ ಕಲಾ ಪ್ರತಿಭೆಯು ಪಾತ್ರಾಭಿನಯದ ಅಭಿವ್ಯಕ್ತಿಯನ್ನು ಚಿತ್ರಿಸಿದ್ದಾರೆ. ಕೆರೆಮನೆ ಕಲಾಶ್ರಿತ ಮನೆತನವಾಗಿ ಬೆಳೆದು ಬಂದ ಬಗೆಯನ್ನು ವಿವೇಚಿಸಿದ್ದಾರೆ. ಇಡುಗುಂಜಿ ಮೇಳದಲ್ಲಿ ಕಲಾವಿದರಾಗಿದ್ದ ಪ್ರಮುಖರ

ಕುರಿತಾದ ಮಾಹಿತಿಗಳನ್ನು ನೀಡಿದ್ದಾರೆ. ಯಕ್ಷಗಾನದ ಇಂದಿನ ಸ್ಥಿತಿ ಹೇಗಿದೆ ಎಂಬುದನ್ನು ವಿವೇಚಿಸಿರುತ್ತಾರೆ.

೧.೨.೨) **SEMIOTICS OF YAKSHAGANA** ಡಾ. ಗುರುರಾವ್ ಬಾಪಟ್ ಸಂಕೇತಶಾಸ್ತ್ರದ ದೃಷ್ಟಿಕೋನದಿಂದ ಯಕ್ಷಗಾನ ಸಂಶೋಧನೆ ನಡೆಸಿ ಪ್ರಬಂಧ ಪ್ರಕಟಿಸಿದ್ದಾರೆ. ಸಂಕೇತ ಶಾಸ್ತ್ರ ಎನ್ನವುದು ಸಾಮಾಜಿಕ ವಿಜ್ಞಾನಗಳಲ್ಲೊಂದು. ಸಂಕೇತವು ಸಂವಹನವಾಗಬಲ್ಲದು. ಸಂಕೇತಗಳು ಸ್ಫುರಿಸುವ ಸಂಕೀರ್ಣವಾದ ಪ್ರಕ್ರಿಯೆಯನ್ನು ಪ್ರತ್ಯೇಕ ವಿಜ್ಞಾನವಾಗಿ ಅಭ್ಯಸಿಸಬಹುದಾದ ಸಾಧ್ಯತೆಯನ್ನು ೨೦ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸ ಪ್ರೆಢರಿಕ್ ಸಾಸರ್ ಸೂಚಿಸಿದ್ದನ್ನು ಅಲ್ಲಿಂದ ಮುಂದೆ ಸಂಕೇತಶಾಸ್ತ್ರ ಪ್ರತ್ಯೇಕ ವಿಜ್ಞಾನವಾಗಿ ಬೆಳೆಯಿತು.

ಸಂಕೇತಶಾಸ್ತ್ರದ ಆಧಾರದಲ್ಲಿ ಸಂಶೋಧನೆಯನ್ನು ಮಾನವಶಾಸ್ತ್ರ, ಜಾನಪದ ಅಧ್ಯಯನ, ಮನಃಶಾಸ್ತ್ರ ಮುಂತಾದ ವಿಭಾಗಗಳಲ್ಲಿ ನಡೆಸಲಾಗುತ್ತಿದೆ. ಸಂಕೇತಗಳು ಭಾಷೆಗಿಂತಲೂ ಸೂಕ್ಷ್ಮವಾಗಿ, ಗೂಢವಾಗಿ ಸಂವಹನ ಉಂಟು ಮಾಡುವುದಕ್ಕೆ ಸಾಧನವಾಗಿದೆ. ಸಂಕೇತಶಾಸ್ತ್ರದ ಆಧಾರದಲ್ಲಿ ಯಕ್ಷಗಾನದ ವಿವಿಧ ಅಂಶಗಳನ್ನು ವಿಶ್ಲೇಷಿಸಿದ್ದಾರೆ. ಅರ್ಥದಲ್ಲಿ ಭಾಷೆ ಹೇಗೆ ವ್ಯಂಜನವಾಗುತ್ತದೆ? ಮತ್ತು ಪ್ರಸರಣವಾಗುತ್ತದೆ? ಯಕ್ಷಗಾನದಲ್ಲಿ ಸಾಂಕೇತಿಕತೆಯನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸಿರುವ ಮೊದಲ ಅಧ್ಯಯನ ಇದಾಗಿದೆ. ಕೀಚಕವಧೆಯ ಪ್ರಸಂಗವನ್ನು ಆಧರಿಸಿ ಪ್ರಸಂಗ ಪಠ್ಯವು ರಂಗಪ್ರಯೋಗಗೊಳ್ಳುವಾಗ ಪಡೆಯುವ ರೂಪವನ್ನು ತುಲನಾತ್ಮಕವಾಗಿ ವಿವೇಚಿಸಿದ್ದಾರೆ.

೧.೨.೩) **ಕಥಕ್ಕಳಿ ಮತ್ತು ಯಕ್ಷಗಾನ (೧೯೮೯)** : ಡಾ. ಮಹಾಲಿಂಗೇಶ್ವರ ಶರ್ಮ ದಕ್ಷಿಣ ಭಾರತದ ಕಲೆಗಳಾದ ಕಥಕ್ಕಳಿ ಮತ್ತು ಯಕ್ಷಗಾನದ ಪರಸ್ಪರ ಸಂಬಂಧವನ್ನು ಕುರಿತು ಅಧ್ಯಯನ ಮಾಡಿರುತ್ತಾರೆ. ಕಥಕ್ಕಳಿಯ ಹುಟ್ಟು ಬೆಳವಣಿಗೆ, ಯಕ್ಷಗಾನ ಮತ್ತು ಕಥಕ್ಕಳಿಯ ಪರಸ್ಪರ ಸಾಮ್ಯಾಂಶಗಳನ್ನು ವಿಶ್ಲೇಷಿಸಿದ್ದಾರೆ.

೧.೨.೪) **ತಾಳಮದ್ದಳೆಯಲ್ಲಿ ಸೃಜನಶೀಲತೆ (೧೯೯೪)** ಡಾ. ವಿಜಯ ನಳಿನಿ ರಮೇಶ್‌ರವರು ಸಂಶೋಧನಾ ಪ್ರಬಂಧವನ್ನು "ತಾಳಮದ್ದಳೆ ಮತ್ತು ಸೃಜನಶೀಲತೆ" ವಿಷಯದ ಕುರಿತು ಮಂಡಿಸಿರುತ್ತಾರೆ.

ತಾಳಮದ್ದಳೆಯ ಸ್ವರೂಪ, ಸಹಧರ್ಮಿ ಕಲೆಗಳೊಂದಿಗೆ ನಂಟು, ವಿಶ್ವದ ರಂಗಭೂಮಿ ಸಿದ್ಧಾಂತಗಳ ಅವಲೋಕನದ ಹಿನ್ನೆಲೆಯಲ್ಲಿ ಪ್ರಬಂಧದಲ್ಲಿ ವಿಷಯವನ್ನು ವಿವೇಚಿಸಲಾಗಿದೆ. ತಾಳಮದ್ದಳೆ ಸ್ವರೂಪದ ಕುರಿತು ಪ್ರಬಂಧದಲ್ಲಿ ಆಳವಾಗಿ ಚಿಂತಿಸಲಾಗಿದೆ. ಪ್ರಸಂಗ ರಚನೆ, ಪ್ರಸಂಗ ಪಠ್ಯ ಸಂಪಾದನೆ, ಭಾಗವತಿಕೆ. ಅರ್ಥಗಾರಿಕೆ ಹಾಗೂ ಪ್ರೇಕ್ಷಕ ಗ್ರಹಿಕೆ ಎಂಬ ಐದು ಹಂತಗಳಲ್ಲಿ ತಾಳಮದ್ದಳೆ ಹೇಗೆ ಸೃಜನಶೀಲತೆಯನ್ನು ನಿರೀಕ್ಷಿಸುತ್ತದೆ ಎಂಬುದರ ಕುರಿತು ಸಾಧಾರವಾಗಿ ವಿಶ್ಲೇಷಿಸಿದ್ದಾರೆ. ತಾಳಮದ್ದಳೆಯ ಕ್ಷೇತ್ರದ ಮೊದಲ ಸಂಶೋಧನೆ ಇದಾಗಿದೆ.

೧.೨.೫) **ಯಕ್ಷಗಾನ ಛಂದಸ್ಸು – ಒಂದು ಅಧ್ಯಯನ (೧೯೯೮)** : ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು ಯಕ್ಷಗಾನ ಛಂದಸ್ಸಿನ ಕುರಿತು ಅಧ್ಯಯನ ನಡೆಸಿ ಪ್ರಬಂಧ ಪ್ರಕಟಿಸಿದ್ದಾರೆ. ಯಕ್ಷಗಾನ ಛಂದಸ್ಸು ವ್ಯಾಪ್ತಿ ಮತ್ತು ಉದ್ದೇಶ, ಯಕ್ಷಗಾನ ಕಾವ್ಯ ಮತ್ತು ಛಂದಸ್ಸಿನ ತತ್ವಗಳು, ಯಕ್ಷಗಾನ ಮತ್ತು ಅಕ್ಷರಗಣ

ಛಂದಸ್ಸು, ಯಕ್ಷಗಾನ ಮತ್ತು ಮಾತ್ರಾಗಣ ಛಂದಸ್ಸು, ಯಕ್ಷಗಾನ ಮತ್ತು ಅಂಶಗಣ ಛಂದಸ್ಸು, ಅಂಶಗಣ ಮತ್ತು ಮಾತ್ರಾಗಣ ಛಂದೋಮಿಶ್ರಣ, ಯಕ್ಷಗಾನ ತಾಳಸಾಹಿತ್ಯ, ಚಿತ್ರಕಾವ್ಯ, ವಿಷಯಗಳನ್ನು ಪ್ರಬಂಧದಲ್ಲಿ ಕೂಲಂಕಷವಾಗಿ ವಿವೇಚಿಸಿದ್ದಾರೆ. ಯಕ್ಷಗಾನ ಛಂದಸ್ಸಿನ ಲಕ್ಷಣಗಳನ್ನು ವಿಶ್ಲೇಷಿಸಿ ಯಕ್ಷಗಾನ ಶಾಸ್ತ್ರೀಯ ಕಲೆ, ಪ್ರಸಂಗ ಪದ್ಯಗಳು, ವಿಶಿಷ್ಟ ರಚನೆಗಳು ಎಂಬುದನ್ನು ವಿವಿಧ ಛಂದಸ್ಸಿನ ಪ್ರಕಾರಗಳಲ್ಲಿ ಯಕ್ಷಗಾನ ಪದ್ಯ ರಚನೆಗೊಂಡಿರುವುದನ್ನು ಉದಾಹರಣೆ ಸಹಿತ ವಿಶ್ಲೇಷಿಸಿದ್ದಾರೆ.

೧.೨.೬) ಯಕ್ಷಗಾನ ಮಹಾಭಾರತ ಪ್ರಸಂಗಗಳು (೧೯೯೦) ಡಾ. ಆನಂದರಾಮ ಉಪಾಧ್ಯರು ಯಕ್ಷಗಾನ ಮಹಾಭಾರತ ಪ್ರಸಂಗಗಳು ವಿಷಯದ ಕುರಿತು ಸಂಪ್ರಬಂಧವನ್ನು ಪ್ರಕಟಿಸಿದ್ದಾರೆ. ಯಕ್ಷಗಾನ ಉಗಮ-ವಿಕಾಸ, ಭಾರತ ಕಲಾಪರಂಪರೆ, ಮಹಾಭಾರತ ಪ್ರಸಂಗಗಳ ವಸ್ತು ವಿವರಣೆ, ಪ್ರಸಂಗಗಳ ಸಾಹಿತ್ಯ ಸ್ವರೂಪ, ಪ್ರಸಂಗಗಳ ಸಾಂಸ್ಕೃತಿಕ ಅಧ್ಯಯನ, ಪ್ರಯೋಗ ವೈವಿಧ್ಯ ಹಾಗೂ ಪ್ರಸಂಗಕಾರರ ಕುರಿತು ಪ್ರಬಂಧದಲ್ಲಿ ಶೋಧಿಸಿದ್ದಾರೆ. ಸಂಶೋಧನೆಯಲ್ಲಿ ಪ್ರಸಂಗ ಸಾಹಿತ್ಯ ಮತ್ತು ಪ್ರಯೋಗದ ಕುರಿತು ವಿವೇಚಿಸಿದ್ದಾರೆ. ಮಹಾಭಾರತದ ಕಥೆಯನ್ನು ಪ್ರಸಂಗದಲ್ಲಿ ಅಳವಡಿಸಿಕೊಂಡ ಬಗ್ಗೆ ಹಾಗೂ ಕವಿಯ ಕಾಲ ಮತ್ತು ಪ್ರಸಂಗ ಕೃತಿ ನಿರ್ಮಾಣದ ಕುರಿತು ಸಮಗ್ರವಾಗಿ ಅಧ್ಯಯನ ನಡೆಸಿರುತ್ತಾರೆ.

೧.೨.೭) ಕರ್ಕಿ ಹಾಸ್ಯಗಾರ ಮೇಳ - ಸಂಪ್ರದಾಯ ಪ್ರಯೋಗಶೀಲತೆ : ಡಾ. ನಾರಾಯಣ ಮಧ್ಯಸ್ಥರು ಕರ್ಕಿ ಹಾಸ್ಯಗಾರ ಮೇಳದ ಕುರಿತು ಸಂಶೋಧನೆ ನಡೆಸಿ ಪ್ರಬಂಧ ಮಂಡಿಸಿರುತ್ತಾರೆ. ಯಕ್ಷಗಾನ ಕಲೆಯ ಉಗಮ ಮತ್ತು ವಿಕಾಸ, ಉತ್ತರ ಕನ್ನಡ ತಿಟ್ಟಿನ ಪರಂಪರೆ, ಕರ್ಕಿ ಹಾಸ್ಯಗಾರ ಮೇಳ ನಡೆದು ಬಂದ ದಾರಿ, ಕಲಾವಿದರ ಸಾಧನೆ-ಸಿದ್ಧಿ, ಯಕ್ಷಗಾನ ಕಲೆಗೆ ಕರ್ಕಿಮೇಳದ ಕೊಡುಗೆಗಳನ್ನು ಅಧ್ಯಯನದಲ್ಲಿ ವಿಶ್ಲೇಷಿಸಿದ್ದಾರೆ. ಉತ್ತರಕನ್ನಡದ ಸಂಪ್ರದಾಯಶೀಲ ಮೇಳವಾಗಿ ಕರ್ಕಿ ಮನೆತನದ ಕಲಾವಿದರ ಕಲಾಮೌಲ್ಯ ಯಕ್ಷಗಾನಕ್ಕೆ ಅಪಾರ ಕೊಡುಗೆ ನೀಡಿದೆ. ಮೇಳದ ಕಲಾವಿದರು ಯಕ್ಷಗಾನ ಪ್ರದರ್ಶನದ ಜನಾಕರ್ಷಣೆಗೆ ಹೇಗೆ ಕಾರಣರಾದರು? ಕರ್ಕಿಮೇಳವು ಅನ್ಯಭಾಷಿಕ ರಂಗಭೂಮಿಯ ಮೇಲೆ ಪ್ರಭಾವ ಬೀರಿದ್ದು ಹೇಗೆ? ಎಂಬುದನ್ನು ವಿವೇಚಿಸಿದ್ದಾರೆ.

೧.೨.೮) ತೆಂಕುತಿಟ್ಟು ಯಕ್ಷಗಾನ ಸಂಪ್ರದಾಯ ಶೇಣಿ ಚಿಂತನೆ **:** ಡಾ. ಪುರುಷೋತ್ತಮ ಪೈಕರು ಶೇಣಿ ಚಿಂತನೆಯ ಕುರಿತು ಪ್ರಬಂಧ ಸಾದರಪಡಿಸಿರುತ್ತಾರೆ. ಶೇಣಿಯವರು ಯಕ್ಷಗಾನ ರಂಗವಲ್ಲಿ ಮಹಾನ್ ಕಲಾವಿದರು ಹಾಗೂ ಚಿಂತಕರು ಹೌದು. ಪ್ರಸಂಗ, ವೇಷಗಾರಿಕೆ, ಅಭಿನಯ, ಅರ್ಥಗಾರಿಕೆ, ಆಹಾರ್ಯಗಳ ಕುರಿತು ಶೇಣಿಯವರ ವಿಚಾರವನ್ನು ಪ್ರಾಯೋಗಿಕವಾಗಿ ರಂಗಪ್ರಯೋಗದ ಹಿನ್ನೆಲೆಯಲ್ಲಿ ವಿವೇಚಿಸಿದ್ದಾರೆ.

೧.೨.೯) ಶಂಭು ಹೆಗಡೆ ಸಂಪ್ರದಾಯ, ಪಾತ್ರ ನಿರ್ವಹಣ **ಮತ್ತು ಹೊಸ ಮಾರ್ಗ** : ಡಾ. ಜಿ.ಎಸ್. ಭಟ್ಟರು ಈ ಅಧ್ಯಯನ ಪ್ರಬಂಧವನ್ನು ಪ್ರಕಟಿಸಿದ್ದಾರೆ. ಡಾ. ಜಿ.ಎಸ್. ಭಟ್ಟರು ಟಿ.ಎಸ್. ಇಲಿಯಟ್‌ನ ಪರಂಪರೆ, ಸಂಪ್ರದಾಯ ಇತಿಹಾಸ ಪ್ರಜ್ಞೆಯ ಚಿಂತನೆಯ ಹಿನ್ನೆಲೆಯಲ್ಲಿ 'ನಟ ಸಂಪ್ರದಾಯ' ಚಿಂತನೆಯನ್ನು ಆಧಾರವಾಗಿಟ್ಟು ಶಂಭು ಹೆಗಡೆಯವರ ಪಾತ್ರನಿರ್ವಹಣಾ ಮಾರ್ಗ, ಸಂಘಟನಾ ಮಾರ್ಗ, ಪ್ರಾಯೋಗಿಕ ರಂಗಭೂಮಿಯ ಆವಿಷ್ಕಾರಕ್ಕೆ ಸಂಬಂಧಿಸಿ ಶೋಧಿಸಿದ್ದಾರೆ. ಶಂಭುಹೆಗಡೆಯವರ "ನಟಸಂಪ್ರದಾಯ" ಪರಂಪರೆಯನ್ನು ಗುರುತಿಸಿ ವಿವಿಧ ಕಲಾತ್ಮಕ ಪ್ರಯೋಗ ಶೀಲತೆಯ ಸೃಜನಶೀಲ ಮಾರ್ಗವನ್ನು ಶೋಧಿಸಿದ್ದಾರೆ.

೧.೨.೧೦) **ಯಕ್ಷಗಾನಕ್ಕೆ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಕೊಡುಗೆ :** ಡಾ. ವಸುಧಾ ಹೆಗಡೆಯವರು ಸಂಶೋಧನೆಯಲ್ಲಿ ಚಿಟ್ಟಾಣಿಯವರ ಪಾತ್ರನಿರ್ವಹಣೆ, ಭಾವಾಭಿವ್ಯಕ್ತಿಯನ್ನು ವಿಶ್ಲೇಷಿಸಿ ಚಿಟ್ಟಾಣಿಯವರು ಯಕ್ಷಗಾನ ಕ್ಷೇತ್ರದಲ್ಲಿ ಪ್ರಸಿದ್ಧ ನಟನಾಗಲು ಅವರ ಸೃಜನಶೀಲ ಪ್ರತಿಭೆ ಹೇಗೆ ಕಾರಣವಾಯಿತೆಂಬುದನ್ನು ವಿಶ್ಲೇಷಿಸಿದ್ದಾರೆ.

೧.೨.೧೧) **ರಂಗ ಸಂಕಥನಕಾರ ಚಿಟ್ಟಾಣಿ ರಾಮಚಂದ್ರ ಹೆಗಡೆ :** ಡಾ. ಕಾ.ವೆಂ. ಶ್ರೀನಿವಾಸರು ತಮ್ಮ ಅಧ್ಯಯನದಲ್ಲಿ ಸಂಕಥನಗಾರಿಕೆಯನ್ನು ಮಾದರಿಯಾಗಿಟ್ಟು ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಪಾತ್ರ ನಿರ್ವಹಣೆಯನ್ನು ವಿಶ್ಲೇಷಿಸಿದ್ದಾರೆ. "ರಂಗಸಂಕಥನ" ಚಿಂತನೆಯು ಯಕ್ಷಗಾನ ರಂಗದಲ್ಲಿ ಪ್ರತಿಭಾವಂತ ಕಲಾವಿದನಿಂದ ಹೇಗೆ ಮೂರ್ತಗೊಳ್ಳುತ್ತದೆ ಎಂಬುದನ್ನು ಸಂಶೋಧಕರು ವಿವೇಚಿಸಿದ್ದಾರೆ.

೧.೨.೧೨) **ಯಕ್ಷಗಾನದ ಹಾಸ್ಯಗಾರರು :** ಡಾ. ಜಿ.ವಿ. ಗಣೇಶರವರು ಹಾಸ್ಯಗಾರರ ಕುರಿತು ಸಂಪ್ರಬಂಧ ರಚಿಸಿದ್ದಾರೆ. ಭರತನಾಟ್ಯ ಶಾಸ್ತ್ರದಲ್ಲಿ ಉಲ್ಲೇಖಿತವಾದ ನವರಸಗಳಲ್ಲಿ "ಹಾಸ್ಯ"ವು ಒಂದು. ಯಕ್ಷಗಾನದಲ್ಲಿ ಹಾಸ್ಯಕ್ಕೆ ವಿಶಿಷ್ಟ ರಂಗ ನಡೆಯಿದೆ. ಭಾಷೆ, ಕುಣಿತ, ಅಭಿನಯಗಳ ವೈವಿಧ್ಯತೆಯಿದೆ. ಸೃಜನಶೀಲ ರಂಗಭೂಮಿಯಾದ ಯಕ್ಷಗಾನದಲ್ಲಿ ಹಾಸ್ಯಗಾರ ಪ್ರತಿಭಾವಂತನೆ ಆಗಿರಬೇಕು. ಇಂತಹ ಹಾಸ್ಯಗಾರರು ಪ್ರೇಕ್ಷಕರಿಗೆ ಒದಗಿಸುವ ರಸಾನುಭವನ್ನು ಕುರಿತು ವಿಶ್ಲೇಷಿಸಿರುತ್ತಾರೆ. ತೆಂಕು ಹಾಗೂ ಬಡಗಿನ ಹಾಸ್ಯ ಕಲಾವಿದರನ್ನು ಗಮನಿಸಿದ್ದಾರೆ.

೧.೨.೧೩) **SANSKRIT SOURCE OF YAKSHAGANA** ಡಾ. ಜಿ.ಎಸ್. ಹೆಗಡೆಯವರು "ಸಂಸ್ಕೃತ ಭಾಷೆ"ಯಲ್ಲಿ ಯಕ್ಷಗಾನದ ಕುರಿತಾದ ಆಧಾರಗಳನ್ನು ಪರಿಶೋಧಿಸಿದ್ದಾರೆ. ಭರತನಾಟ್ಯ ಶಾಸ್ತ್ರದ ಆಧಾರದಲ್ಲಿ ಯಕ್ಷಗಾನ ಪ್ರಾಯೋಗಿಕತೆಯನ್ನು ವಿವೇಚಿಸಿರುತ್ತಾರೆ. ರಸಪ್ರತಿಪಾದನೆಗೆ ಕಾರಣವಾದ "ವೃತ್ತಿಗಳನ್ನು" ಸಂಶೋಧಕರು ವಿವೇಚಿಸಿದ್ದಾರೆ.

೧.೨.೧೪) **ಕೆರೆಮನೆ ಮಹಾಬಲ ಹೆಗಡೆ :** ಜಿ.ಕೆ. ಹೆಗಡೆ ಹರಿಕೇರಿಯವರು ಕೆರೆಮನೆ ಮಹಾಬಲ ಹೆಗಡೆಯವರ ಕುರಿತು ಅಧ್ಯಯನ ನಡೆಸಿದ್ದಾರೆ. ಮಹಾಬಲ ಹೆಗಡೆಯವರ ಪಾತ್ರನಿರ್ವಹಣೆ, ರಂಗಚಿಂತನೆ ಹಾಗೂ ಸಾಧನೆಗಳನ್ನು ಅಧ್ಯಯನದಲ್ಲಿ ದಾಖಲಿಸಲಾಗಿದೆ.

೧.೨.೧೫) **ಯಕ್ಷಸ್ತ್ರಿ – ನಾಗವೇಣಿ ವಿ.ಎನ್.**: ಡಾ. ನಾಗವೇಣಿ ವಿ.ಎನ್. ಯಕ್ಷಸ್ತ್ರಿ ಎಂಬ ವಿಷಯದ ಕುರಿತು ಅಧ್ಯಯನ ನಡೆಸಿ ಸಂಪ್ರಬಂಧ ಮಂಡಿಸಿ ಪಿಹೆಚ್.ಡಿ. ಪಡೆದಿದ್ದಾರೆ. ಈ ಪ್ರಬಂಧವನ್ನು ಮಂಗಳೂರು ವಿಶ್ವವಿದ್ಯಾಲಯ "ಯಕ್ಷಸ್ತ್ರಿ" 'ಸ್ತ್ರೀ ವೇಷ, ಸ್ತ್ರೀ ಪಾತ್ರ ಮತ್ತು ಮಹಾಯಕ್ಷಗಾನ ವಿವೇಚನೆ" ಎಂಬ ಶೀರ್ಷಿಕೆಯಲ್ಲಿ ೨೦೧೨ರಲ್ಲಿ ಪ್ರಕಟಿಸಿದೆ. ಈ ಕೃತಿಯಲ್ಲಿ ಮೊದಲು ಯಕ್ಷಗಾನದಲ್ಲಿ ಬರುವ ಸ್ತ್ರೀ ವೇಷಗಳನ್ನು ಪೂರ್ವರಂಗದ ಸ್ತ್ರೀವೇಷಿ ನೂತನ ಪ್ರಯೋಗಗಳಾದ ಏಕವ್ಯಕ್ತಿ ಮುಂತಾದ ಪ್ರಯೋಗಗಳು ಇವೆಲ್ಲವೂಗಳ ಸಹಿತವಾಗಿ ವಿವೇಚಿಸಲಾಗಿದೆ. ನಂತರ ಸ್ತ್ರೀವೇಷ ಮತ್ತು ವೇಷಗಾರಿಗಳ ಪರಿಸ್ಥಿತಿ, ಸ್ಥಿತಿ, ಸ್ಥಾನಮಾನ ಮುಂತಾದವುಗಳ ವಿಶ್ಲೇಷಣೆ ನಡೆಸಿದ್ದಾರೆ. ಸ್ತ್ರೀಪಾತ್ರಗಳ ವೈವಿಧ್ಯ ಹಾಗೂ ಮೌಲ್ಯ ವಿವೇಚನೆಯು ಇಲ್ಲಿದೆ. ಹೆಣ್ಣು ಬಣ್ಣಗಳ ವೈವಿಧ್ಯತೆಯೂ ಇಲ್ಲಿದೆ. ಜೊತೆಗೆ ಸ್ತ್ರೀ ವೇಷಧಾರಿಗಳ ನೂರು ವರ್ಷಗಳ ಇತಿಹಾಸ ಇಲ್ಲಿ ದಾಖಲಾಗಿದೆ. ಮಹಿಳಾ ಯಕ್ಷಗಾನ ಈವರೆಗಿನ ಪ್ರಯತ್ನ ಕಲಾವಿದೆಯರ, ಕಲಾತಂಡಗಳ ಸಮೀಕ್ಷೆಯೂ ಇಲ್ಲಿದೆ.

೧.೨.೧೬) ಯಕ್ಷಗಾನ ರಾಮಾಯಣ ಪ್ರಸಂಗಗಳು : ಡಾ. ಎಸ್.ಡಿ. ಹೆಗಡೆಯವರು ರಾಮಾಯಣ ಪ್ರಸಂಗಗಳ ಕುರಿತು ಸಂಶೋಧನಾ ಪ್ರಬಂಧ ಮಂಡಿಸಿದ್ದಾರೆ. ಇವರು ಯಕ್ಷಗಾನದ ಉಗಮ, ವಿಕಾಸ, ರಾಮಾಯಣದ ಪ್ರಸಂಗಗಳ ರಂಗ ಪ್ರಯೋಗದ ಕುರಿತು ವಿಸ್ತೃತವಾಗಿ ಚರ್ಚಿಸಿರುತ್ತಾರೆ.

ಇತರ ಅಧ್ಯಯನಗಳು : ಹವ್ಯಕ ಭಾಷೆಯ ಕುರಿತು ಡಾ. ಕೆ.ಜಿ. ಶಾಸ್ತ್ರಿಯವರು "ಹವ್ಯಕ ಉಪಭಾಷೆ" ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿದ್ದಾರೆ. ಈ ಅಧ್ಯಯನದಲ್ಲಿ ಕನ್ನಡದ ಉಪಭಾಷೆಯಾದ ಹವ್ಯಕ ಭಾಷೆಯಲ್ಲಿನ ಪದಗಳ ವ್ಯುತ್ಪತ್ತಿ ಮತ್ತು ಸಮಾಜಶಾಸ್ತ್ರಿಯ ಹಿನ್ನೆಲೆಯ ಸಂರಚನೆ ಕುರಿತಂತೆ ವಿವೇಚಿಸಿರುತ್ತಾರೆ. ಡಾ. ಜಿ.ಎಸ್. ಹೆಗಡೆಯವರು "ಹವ್ಯಕ ಸಂಸ್ಕೃತಿ ಅಧ್ಯಯನ" ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿರುತ್ತಾರೆ. ಹವ್ಯಕರ ಬದುಕಿನಲ್ಲಿ ಹಾಸುಹೊಕ್ಕಾದ ಆಚರಣೆಗಳನ್ನು ಅಧ್ಯಯನ ನಡೆಸಿ ಅವುಗಳ ಮಹತ್ವ ಮತ್ತು ಉದ್ದೇಶವನ್ನು ನಿರೂಪಿಸಿದ್ದಾರೆ. ಹವ್ಯಕರ ನಿತ್ಯಜೀವನದ ಆಚರಣೆ ಕಲಾತ್ಮಕ ಚಿಂತನೆಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಶೋಧಿಸಿರುತ್ತಾರೆ.

ಉತ್ತರಕನ್ನಡದ ಜನಪದ ಕಲೆಗಳ ಕುರಿತು ಡಾ. ಎನ್.ಆರ್. ನಾಯಕರು ಅಧ್ಯಯನ ನಡೆಸಿರುತ್ತಾರೆ. ತಮ್ಮ ಅಧ್ಯಯನದಲ್ಲಿ "ಹವ್ಯಕ ಸಂಸ್ಕೃತಿ" ಮತ್ತು ಯಕ್ಷಗಾನ ಕಲೆಯ ನಡುವಿನ ಸಂಬಂಧವನ್ನು ವಿವೇಚಿಸಿದ್ದಾರೆ.

ಹವ್ಯಕ ಜನಾಂಗದ ಯಕ್ಷಗಾನದ ಒಲವಿನ ಕುರಿತು ವಿವಿಧ ಲೇಖನಗಳಲ್ಲಿ ವಿದ್ವಾಂಸರು ಕಲಾವಿದರ ಬದುಕಿನ ಚಿತ್ರಣಗಳಲ್ಲಿ ಉಲ್ಲೇಖಿಸಿರುತ್ತಾರೆ.

ಯಕ್ಷಗಾನದ ಸಾಮಾಜಿಕ ಸಾಂಸ್ಕೃತಿಕ ನೆಲೆಗಳನ್ನು ವಿದ್ವಾಂಸರು ವಿವೇಚಿಸಿದ್ದಾರೆ. ಡಾ. ಮಾಧವ ಪೆರಾಜೆಯವರು "ಯಕ್ಷಗಾನ ತಾಳಮದ್ದಳೆ ನವ್ಯೋತ್ತರ ಸಂಕಥನದಲ್ಲಿ" ಪ್ರಸಿದ್ಧ ಕಲಾವಿದರ ಅರ್ಥಗಾರಿಕೆಯಲ್ಲಿನ ಸಂಕಥನ ಸ್ವರೂಪವನ್ನು ನಿರೂಪಿಸಿರುತ್ತಾರೆ. ಡಾ. ಎಸ್. ಮೋಹನ ಕುಂಟಾರರು "ಯಕ್ಷಗಾನದ ವಾಚಿಕಾಧ್ಯಯನದಲ್ಲಿ" ಯಕ್ಷಗಾನ ಕಲೆಯ ಸಾಮಾಜಿಕ ಸಾಂಸ್ಕೃತಿಕ ಚಿಂತನೆಗಳನ್ನು, ಸಂಘರ್ಷಗಳನ್ನು ವಾಚಿಕಾಭಿವ್ಯಕ್ತಿಯ ಹಿನ್ನೆಲೆಯಲ್ಲಿ ಸಾಧಾರವಾಗಿ ವಿಶ್ಲೇಷಿಸಿರುತ್ತಾರೆ. ಡಾ. ಗೋಪಾಲಕೃಷ್ಣ ಹೆಗಡೆಯವರು "ಯಕ್ಷಗಾನ ವರ್ಣವೈಭವ" ಗ್ರಂಥದಲ್ಲಿ ಯಕ್ಷಗಾನದ ಸಮಾಜಶಾಸ್ತ್ರೀಯ ಶೋಧನೆಯನ್ನು ನಿರೂಪಿಸಿರುತ್ತಾರೆ. ಡಾ. ಟಿ. ಕೇಶವ ಭಟ್ಟರು "ಹವ್ಯಕ ಶೋಭಾನೆಗಳಲ್ಲಿ" ಯಕ್ಷಗಾನ ಪ್ರಸಂಗದ ಧಾಟಿ ಮಟ್ಟುಗಳಿಗೆ ಶೋಭಾನೆ ಪದಗಳ ಧಾಟಿ ಮಟ್ಟಿನ ಸಾಮ್ಯತೆಯನ್ನು ಕುರಿತು ತೌಲನಿಕವಾಗಿ ಅಧ್ಯಯನ ನಡೆಸಿರುತ್ತಾರೆ.

ಯಕ್ಷಗಾನ ಮತ್ತು ಸಾಮಾಜಿಕ ಸಂಬಂಧಗಳ ಕುರಿತು ಅಧ್ಯಯನಗಳಿಗೆ ವಿಫುಲವಾದ ಅವಕಾಶಗಳಿಗೆ ಈ ಅಧ್ಯಯನಗಳು ಪ್ರೇರಣೆಯಾಗಿವೆ. ಹವ್ಯಕರು ಯಕ್ಷಗಾನ ಬಯಲಾಟ ತಾಳಮದ್ದಳೆಗಳಲ್ಲಿ ತೊಡಗಿಕೊಂಡ ಮಾರ್ಗ ಹಾಗೂ ಪ್ರಯತ್ನಗಳ ಸಮಗ್ರವಾದ ಅಧ್ಯಯನಕ್ಕೆ ಸಂಶೋಧನಾ ಕ್ಷೇತ್ರದಲ್ಲಿನ ಅಧ್ಯಯನಗಳಿಂದ ವಿಫುಲವಾದ ಆಕರಗಳು ಲಭ್ಯವಿದೆ. ಆದರೆ ಸಂಶೋಧನೆಯ ವ್ಯಾಪ್ತಿಯ ದೃಷ್ಟಿಯಿಂದ ಹವ್ಯಕರ ಕುರಿತಾದ ಮತ್ತು ಹವ್ಯಕರ ಕೃತಿಗಳನ್ನು ಪರಾಮರ್ಶಿಸಲಾಗಿದೆ. ಅಲ್ಲದೆ ಕಲೆಯ ಸಾಮಾಜಿಕ ನೆಲೆಯನ್ನು ಶೋಧಿಸುವ ಅಧ್ಯಯನವನ್ನು ನೆಲೆಯಾಗಿಟ್ಟು ಪ್ರಸ್ತುತ ಅಧ್ಯಯನವನ್ನು ನಡೆಸಲಾಗಿದೆ.

೧.೩ ಅಧ್ಯಯನ ಸ್ವರೂಪ

ಹವ್ಯಕರು ಮತ್ತು ಯಕ್ಷಗಾನ ಈ ಅಧ್ಯಯನ ವಿಷಯವು ಯಕ್ಷಗಾನಕ್ಕೆ ಹವ್ಯಕರ ಕೊಡುಗೆಗಳನ್ನು ದಾಖಲಿಸುವ ಉದ್ದೇಶವನ್ನು ಹೊಂದಿದೆ. ಹವ್ಯಕರು ಯಕ್ಷಗಾನಕ್ಕೆ ನೀಡಿದ ಕೊಡುಗೆಗಳು ವಿಫುಲವಾಗಿವೆ. ಆದರೂ ಕಲೆಯಲ್ಲಿ ಜನಾಂಗವೊಂದು ಅವುಗಳನ್ನು ಪ್ರಪ್ರತ್ಯೇಕವಾಗಿ ಅಧ್ಯಯನ ನಡೆಸುವಷ್ಟು ವ್ಯಾಪ್ತವಾಗಿದೆ, ತೊಡಗಿಕೊಂಡ ಆಶಯವನ್ನು ಶೋಧಿಸುವುದು ಇಲ್ಲಿನ ಪ್ರಯತ್ನವಾಗಿದೆ. ಆದ್ದರಿಂದ ಹವ್ಯಕರ ಭಾಷಿಕ ಅಭಿವ್ಯಕ್ತಿ, ಸಂಘಟನೆ, ಕಲಾವಿದರ ಕೊಡುಗೆಯನ್ನು ಅಧ್ಯಯನದ ಕ್ಷೇತ್ರವಾಗಿಸಿ ಅಧ್ಯಯನವು ತೊಡಗಿಕೊಂಡಿದೆ. ಹವ್ಯಕರು ಯಕ್ಷಗಾನದಲ್ಲಿ ಹೇಗೆ ಪರಂಪರೆಯ ಪೋಷಕರಾದರು ಎನ್ನುವುದು ಅವರ ನೆಲೆಗಳಿಂದ, ಮನೆತನಗಳಿಂದ ಸಂಸ್ಕಾರಗೊಂಡ ಹಿನ್ನೆಲೆಯನ್ನು ಚರ್ಚಿಸಲಾಗಿದೆ. ಹವ್ಯಕರು ಪರಂಪರೆಯ ನೆಲೆಯಲ್ಲಿ ಯಕ್ಷಗಾನವನ್ನು ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಸಿಕೊಂಡಿದ್ದನ್ನು ಶೋಧಿಸುವುದು ಈ ಅಧ್ಯಯನದ ವಿಧಾನ ಮತ್ತು ಸ್ವರೂಪವಾಗಿದೆ.

೧.೪ ಉದ್ದೇಶಗಳು

೧.೪.೧. ಯಕ್ಷಗಾನ ಕಲೆ ಉತ್ತರಕನ್ನಡದಿಂದ ಕೇರಳ ಕಾಸರಗೋಡಿನ ಕರಾವಳಿ ಪ್ರದೇಶಗಳಲ್ಲಿ ಮಲೆನಾಡು ಭಾಗದಲ್ಲಿ ಜನರು ಆರಾಧಿಸಲ್ಪಡುವ ಮನೋರಂಜನಾ ಕಲೆಯಾಗಿದೆ. ಕಲೆಯು ವಿಕಾಸಗೊಂಡ ಈ ಪ್ರದೇಶವು ಹವ್ಯಕ ಜನಾಂಗದವರ ನೆಲೆಯೂ ಆಗಿದೆ. ಕಲೆಯು ಪಸರಿಸಿದ ನೆಲೆಗಳು ಜನಾಂಗದೊಂದಿಗೆ ಪರಸ್ಪರಾಶ್ರಯಗೊಂಡಿರುವುದು ಹೇಗೆ ಎಂಬುದನ್ನು ವಿಶ್ಲೇಷಿಸುವದು. ಈ ಪ್ರದೇಶದಲ್ಲಿ ಕಲೆಯನ್ನು ಪ್ರದರ್ಶನ ನೀಡುತ್ತಿರುವ ಹಾಗೂ ಹಿಂದೆ ಇತಿಹಾಸದಲ್ಲಿ ಗತಿಸಿಹೋದ ಮೇಳಗಳು ೩೦೦ ರಷ್ಟಿವೆ. ನೂರಾರು ಹವ್ಯಾಸಿ ಸಂಘಟಣೆಗಳು, ತಾಳಮದ್ದಳೆ ಕೂಟಗಳು ಅಸಂಖ್ಯವಾಗಿವೆ. ಯಕ್ಷಗಾನ ಕಲಿಕಾಕೇಂದ್ರಗಳು, ಸಂಶೋಧನಾ ಕೇಂದ್ರಗಳು ಈ ಪ್ರದೇಶದಲ್ಲಿವೆ. ಇವುಗಳಲ್ಲಿ ನಾಲ್ಕಾರು ತಲೆಮಾರಿನಿಂದ ತೊಡಗಿಕೊಂಡ ಹವ್ಯಕರು ಇಂದಿಗೂ ಧಾರಾಳವಾಗಿ ಸಿಗುತ್ತಾರೆ. ಯಕ್ಷಗಾನ ಕಲೆಯ ಇತಿಹಾಸದಲ್ಲಿ ಸುಮಾರು ಸಾವಿರದಐದುನೂರು ಕುಟುಂಬಗಳು ಈ ಕಲೆಗೆ ಮುಡಿಪಾಗಿವೆ. ಲಕ್ಷಾಧಿಕ ಜನರು ಈ ಕಲೆಯ ಆರಾಧಕರು, ಕಲಾ ರಸಿಕರು ಹವ್ಯಕ ಜನಾಂಗದಲ್ಲಿದ್ದಾರೆ. ಈ ನೆಲೆಯಲ್ಲಿ ಒಂದು ಕಲೆಯನ್ನು ಇಷ್ಟೊಂದು ಪ್ರಮಾಣದ ಜನರು ಈ ಜನಾಂಗದಲ್ಲಿ ಆರಾಧಿಸಲು ಕಾರಣವೇನು? ಇದರ ಔಚಿತ್ಯವೇನು ಎಂಬುದನ್ನು ಅರಿಯುವುದು ಅವಶ್ಯವಾಗಿದೆ.

೧.೪.೨. ಕಲೆಯ ಹುಟ್ಟು ಕನ್ನಡನಾಡಿನಲ್ಲಿ ಪ್ರಾದೇಶಿಕ ಚೌಕಟ್ಟಿಗೊಳಪಟ್ಟರೂ ವಿಶ್ವವ್ಯಾಪಿ ಬೆಳೆಯಲು ಹವ್ಯಕ ಜನಾಂಗದ ಪಾತ್ರವೇನು ಎಂಬುದನ್ನು ಶೋಧಿಸುವುದು.

೧.೪.೩. ಯಕ್ಷಗಾನದ ಹಿಮ್ಮೇಳ, ಮುಮ್ಮೇಳ, ಇತರ ಅಂಗೋಪಾಂಗಗಳಲ್ಲಿ ಗಣನೀಯ ಕೋಡುಗೆಯನ್ನು ನೀಡಿ ರಾಜ್ಯ, ರಾಷ್ಟ್ರಮಟ್ಟದ ಗಮನ ಸೆಳೆದ, ಪ್ರಶಸ್ತಿಗೆ ಭಾಜನರಾದ ಜನಾಂಗದ ಪ್ರಸಿದ್ಧರ ಕೊಡುಗೆಗಳನ್ನು ದಾಖಲಿಸುವುದು.

೧.೪.೪. ಯಕ್ಷಗಾನದ ಪರಂಪರೆಯಲ್ಲಿ ಶೈಲಿ ಪ್ರವರ್ತಕ ಮನೆತನಗಳ ಕೊಡುಗೆಗಳನ್ನು ದಾಖಲಿಸುವುದು.

೧.೪.೫. ಯಕ್ಷಗಾನ ಕಲೆಯ ಅಂಗಕಲೆಯಾದ ತಾಳಮದ್ದಳೆ ಪ್ರಕಾರದ ಅರ್ಥಧಾರಿಗಳೆನಿಸಿ ರಾಮಾಯಣ, ಭಾರತ, ಭಾಗವತ ಪುರಾಣ ಮೀಮಾಂಸೆಗಳ ಜ್ಞಾನವನ್ನು ಆಶುಕಥನದ ಮೂಲಕ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿ ಪರಂಪರೆಯ ಪೌರಾಣಿಕ ಪ್ರಜ್ಞೆಯನ್ನು ಸಮಕಾಲೀನಗೊಳಿಸಿ ವರ್ತಮಾನದಲ್ಲಿ ಮಹಾನ್ ಅರ್ಥಧಾರಿಗಳೆನಿಸಿದ ಹವ್ಯಕ ಕಲಾವಿದರ ಕೊಡುಗೆಗಳನ್ನು ದಾಖಲಿಸುವುದು.

೧.೪.೬. ಯಕ್ಷಗಾನ ಕಲೆಯ ಉಳಿವಿಗಾಗಿ ಸಂಘಟಕರಾಗಿ ಮೇಳದ ಯಜಮಾನರಾಗಿ ಆರ್ಥಿಕ ಲಾಭ–ನಷ್ಟವನ್ನು ಅನುಭವಿಸಿದ ಮೇಳಕಟ್ಟುವ ಸಾಹಸಕ್ಕೆ ಕೈ ಹಾಕಿ ಸೋಲನ್ನು ಅನುಭವಿಸಿದ ಹವ್ಯಕಮಹನೀಯರ ಸಂಕಷ್ಟಗಳನ್ನು ದಾಖಲಿಸುವುದು.

೧.೪.೭. ಯಕ್ಷಗಾನದ ವೃತ್ತಿ ಕಲಾವಿದರಾಗಿ ಜೀವನೋಪಾಯ ಸಾಗಿಸಿದ, ಸಾಗಿಸುತ್ತಿರುವ ಅನೇಕ ಕುಟುಂಬಗಳು ಕಲೆಯನ್ನು ವೃತ್ತಿಯಾಗಿಸಿಕೊಂಡ ಕಲಾಶ್ರಿತ ಕುಟುಂಬಗಳನ್ನು ದಾಖಲಿಸುವುದು.

೧.೪.೮. ಹವ್ಯಕ ಜನಾಂಗದ ನಂಬಿಕೆ, ನಡವಳಿಕೆ ಆಚಾರ ವಿಚಾರ, ಭಾಷೆ ಸಾಮಾಜಿಕ ಬದುಕಿನ ಮೇಲೆ ಯಕ್ಷಗಾನ ಕಲೆಯ ಪ್ರಭಾವವನ್ನು ದಾಖಲಿಸುವುದು.

೧.೪.೯. ವಿವಿಧ ವೃತ್ತಿಯಲ್ಲಿದ್ದು ಯಕ್ಷಗಾನ ಕಲೆಯ ಆರಾಧಕರಾಗಿರುವ ಪ್ರಸಿದ್ದರ ಕಲಾ ಕೊಡುಗೆಗಳನ್ನು ಅರಿಯುವುದು.

೧.೪.೧೦. ಯಕ್ಷಗಾನ ಕಲೆಯ ರಂಗಕ್ರಿಯೆಗಾಗಿ ಅಗತ್ಯವಿರುವ ಆಹಾರ್ಯಗಳ ಸಿದ್ಧತೆ, ಹಿಮ್ಮೇಳ ಮುಮ್ಮೇಳದ ಪರಿಕರಗಳ ಸಿದ್ಧತೆ ಪ್ರಸಾದನ ಸಾಮಗ್ರಿಗಳ ಸಿದ್ಧತೆಗಾಗಿ ಶ್ರಮಿಸುತ್ತಿರುವ ಹವ್ಯಕ ಕುಟುಂಬಗಳನ್ನು ದಾಖಲಿಸುವುದು.

೧.೪.೧೧. ಯಕ್ಷಗಾನ ಕಲೆಯ ಕುರಿತಾದ ಹವ್ಯಕ ಕೃತಿಕಾರರು ಸಂಶೋಧಕರು, ಯಕ್ಷಗಾನ ಪತ್ರಿಕಾ ಕರ್ತರು, ಮಾಹಿತಿದಾರರು, ಯಕ್ಷಕಲಾಕೇಂದ್ರಗಳು ಸಂಗ್ರಹಕಾರರು, ಯಕ್ಷಗಾನದ ಗೊಂಬೆ ತಯಾರಕರು ಇತ್ಯಾದಿ ಕಲಾಪೋಷಕರ ಕೊಡುಗೆಯನ್ನು ಸಮಗ್ರವಾಗಿ ವಿಶ್ಲೇಷಿಸುವುದು.

೧.೪.೧೨. ಹವ್ಯಕರು ಮತ್ತು ಯಕ್ಷಗಾನ ಸಂಶೋಧನೆಯ ಮೂಲಕ ಯಕ್ಷಗಾನದ ಬಡಗು ತೆಂಕುತಿಟ್ಟುಗಳ ಪ್ರದೇಶಗಳನ್ನು ಕ್ಷೇತ್ರಕಾರ್ಯ ನಡೆಸಿ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸುವ ಮೂಲಕ ಯಕ್ಷಗಾನ ಇತಿಹಾಸ ಕ್ರೋಢೀಕರಣ ಮಾಡುವುದು ಕೂಡ ಈ ಮಹಾಪ್ರಬಂಧದ ಉದ್ದೇಶವಾಗಿದೆ.

೧.೫. ಅಧ್ಯಯನ ವ್ಯಾಪ್ತಿ

ಹವ್ಯಕರು ಮತ್ತು ಯಕ್ಷಗಾನ ಮಹಾಪ್ರಬಂಧ ರಚನೆಯ ಅಧ್ಯಯನ ದೃಷ್ಟಿಯಿಂದ ಹವ್ಯಕ ಜನಾಂಗದ ನೆಲೆಗಳಾದ ಉತ್ತರಕನ್ನಡದ ಕರಾವಳಿಯ ಕಾರವಾರದಿಂದ ಭಟ್ಕಳದವರೆಗೆ, ಮಲೆನಾಡಿನ ಯಲ್ಲಾಪುರದಿಂದ ಶಿರಸಿ ಸಿದ್ದಾಪುರ ಸಾಗರ ತಾಲ್ಲೂಕಿನ ಪ್ರದೇಶಗಳನ್ನು ಉಡುಪಿ ಜಿಲ್ಲೆ, ಮಂಗಳೂರು ಜಿಲ್ಲೆ ಕೇರಳದ ಕಾಸರಗೋಡು ಪ್ರದೇಶಗಳನ್ನು ಕ್ಷೇತ್ರ ಕಾರ್ಯಕ್ಕಾಗಿ ಆಯ್ದುಕೊಳ್ಳಲಾಗಿದೆ. ಈ ಮೂಲ ನೆಲೆಯಿಂದ ಹೊರರಾಜ್ಯ ಹೊರರಾಷ್ಟ್ರ, ಇತರ ಜಿಲ್ಲೆಗಳಲ್ಲಿ ನೆಲೆಯಿಂದ ಹವ್ಯಕರನ್ನು ಅಧ್ಯಯನಕ್ಕೆ

ಒಳಪಡಿಸಿದೆ ಯಕ್ಷಗಾನ ಕಲೆಯೂ ಈ ಪ್ರದೇಶಗಳಲ್ಲೆ ಕಂಡು ಬರುವುದರಿಂದ ಹವ್ಯಕರ ಮತ್ತು ಯಕ್ಷಗಾನದ ನೆಲೆಗಳೆರಡನ್ನು ಅಧ್ಯಯನದ ಕ್ಷೇತ್ರವ್ಯಾಪ್ತಿಗೆ ಒಳಪಡಿಸಿದೆ.

ಯಕ್ಷಗಾನಕ್ಕೆ ಹವ್ಯಕರ ಪ್ರಮುಖರ ಕೊಡುಗೆಗಳನ್ನು ಸಮಗ್ರವಾಗಿ ವಿಶ್ಲೇಷಿಸುವುದು. ಶೈಲಿಪ್ರವರ್ತಕ ಮನೆತನಗಳ ಕುರಿತು ಅಧ್ಯಯನ ನಡೆಸುವದು. ಹಿಮ್ಮೇಳ ಮುಮ್ಮೇಳ, ಕಲಾವಿದರು [illegible] ಸಿದ್ದತೆಗೊಳಿಸುವರು, ಪ್ರಸಂಗಕರ್ತರು ಕುರಿತು ಅಧ್ಯಯನ ನಡೆಸಲು ಸಿದ್ಧತೆ ಕಲ್ಪಿಸಿಕೊಳ್ಳಲಾಗಿದೆ.

ಪ್ರದೇಶಗಳಲ್ಲಿ ನೆಲೆಗೊಂಡ ಜನಸಮೂದಾಯದ ಅಧ್ಯಯನವಾದ್ದರಿಂದ ಕ್ಷೇತ್ರಕಾರ್ಯದ ಮೂಲಕ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

೧. ಕ್ಷೇತ್ರಕಾರ್ಯದ ಮಾಹಿತಿಗಳು, ಸಂದರ್ಶನ.

೨. ಯಕ್ಷಗಾನದ ಪತ್ರಿಕೆಗಳು, ನಿಯತಕಾಲಿಕೆ, ಸ್ಮರಣ ಸಂಚಿಕೆಗಳು.

೩. ಯಕ್ಷಗಾನಕ್ಕೆ ಸಂಬಂಧಿಸಿದ ಸಂಶೋಧನಾ ಗ್ರಂಥಗಳು ಹಾಗೂ ಇತರ ಪ್ರಕಟಿತ ಗ್ರಂಥಗಳ ಪರಾಮರ್ಶಿಸುವುದು.

೧.೬. ಕ್ಷೇತ್ರಕಾರ್ಯ

ಈ ಸಂಶೋಧನೆಗಾಗಿ ಕಾರವಾರ, ಅಂಕೋಲ, ಯಲ್ಲಾಪುರ, ಕುಮಟಾ, ಹೊನ್ನಾವರ, ಸಿರಸಿ, ಸಿದ್ಧಾಪುರ, ಸಾಗರ, ದಕ್ಷಿಣಕನ್ನಡ, ಕೇರಳ ಕಾಸರಗೋಡಿನವರೆಗಿನ ಕಲಾವಿದರ ಮನೆ, ಕಲಾಕೇಂದ್ರಗಳನ್ನು ಸಂದರ್ಶಿಸಿ ಮಾಹಿತಿ ಕಲೆಹಾಕಲಾಗಿದೆ. ಸಂಶೋಧನೆಗೆ ಅಗತ್ಯವಾದ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಅಧ್ಯಯನ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿ ವರ್ತಮಾನದಲ್ಲಿರುವ ಕಲಾವಿದರ ಮನೆಗಳಿಗೆ ಭೇಟಿನೀಡಿ ಮನೆತನಗಳ ಇತಿಹಾಸದಲ್ಲಿ ಕುಟುಂಬದ ಹಿರಿಯರ ಕೊಡುಗೆಗಳನ್ನು ದಾಖಲಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿರುವ ದೇವಾಲಯಗಳಲ್ಲಿ ಮಠ ಮಂದಿರಗಳಲ್ಲಿನ ದಾಖಲೆಗಳ ಮಾಹಿತಿ ಸಂಗ್ರಹಿಸಲಾಗಿದೆ. ಹಿರಿಯ ಕಿರಿಯ ಕಲಾವಿದರು, ಚಿಂತಕರು, ಸಂಶೋಧಕರು ಕಲಾಸಕ್ತರೊಂದಿಗೆ ಚರ್ಚಿಸಿ ಮಾಹಿತಿಯನ್ನು ಕಲೆಹಾಕಲಾಗಿದೆ.

ಯಕ್ಷಗಾನ ನಿಯತಕಾಲಿಕೆಗಳು, ಪತ್ರಿಕೆಗಳು, ಸಂಸ್ಮರಣ ಗ್ರಂಥಗಳು, ಅಧ್ಯಯನಕ್ಕೆ ಅಗತ್ಯವಾದ ಮಾಹಿತಿಗಳನ್ನು ಹೊಂದಿದ್ದು ಅವುಗಳನ್ನು ಅಧ್ಯಯನ ನಡೆಸಿ ಮಾಹಿತಿ ಕ್ರೋಢಿಕರಿಸಲಾಗಿದೆ. ಶ್ರೀ ಗೋಪಾಲಕೃಷ್ಣ ಭಾಗವತರ ಸಂಪಾದಕತ್ವದ "ಯಕ್ಷರಂಗ" ಮಾಸಪತ್ರಿಕೆ. ಶ್ರೀ ನಾಜಗಾರ ಶಾಸ್ತ್ರಿಯವರ ಶೃಂಗಾರ ಮಂಟಪ ಹಾಗೂ ಇತರ ಗ್ರಂಥಗಳನ್ನು ಪರಿಶೀಲಿಸಿ ಅಧ್ಯಯನ ನಡೆಸಲಾಗಿದೆ.

೧.೭. ಅಧ್ಯಾಯಗಳ ವಿಂಗಡಣೆ

ಅಧ್ಯಾಯ ೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಸಂಶೋಧನೆಯ ವಿಷಯಕ್ಕೆ ಸಂಬಂಧಿಸಿದಂತೆ ಪೀಠಿಕೆ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಅಧ್ಯಯನ ಕ್ರಮ ವಿಧಾನಗಳನ್ನು ಅಧ್ಯಯನದ ಅಗತ್ಯತೆ ಮತ್ತು ಸ್ವರೂಪವನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ೨. ಹವ್ಯಕರ ಮತ್ತು ಯಕ್ಷಗಾನದ ನೆಲೆ

ಹವ್ಯಕರ ಜೀವನ ವ್ಯವಸ್ಥೆಯು ಕಾಲಕಾಲಕ್ಕೆ ಬದಲಾಗಿದ್ದು ಕೃಷಿಯಾಧಾರಿತ ಬದುಕಿನಿಂದ ತಂತ್ರಜ್ಞಾನಕ್ಷೇತ್ರ, ಸರ್ಕಾರಿ ಉದ್ಯೋಗಾವಲಂಬನೆಯ ಪರಿಣಾಮವಾಗಿ ಗ್ರಾಮಗಳಿಂದ ನಗರಕ್ಕೆ ಕುಟುಂಬಗಳು ವಲಸೆಹೋಗುತ್ತಿದೆ. ಗ್ರಾಮ ಜೀವನದಲ್ಲೂ ನಗರ ಸೌಲಭ್ಯಗಳನ್ನು ರೂಢಿಸಿಕೊಂಡು ಊರುಗಳು ಆಧುನೀಕರಣಗೊಳ್ಳುತ್ತಿದೆ. ಯಕ್ಷಗಾನ ಕಲೆಯ ಹಿಂದಿನ ಶತಮಾನಗಳಲ್ಲಿ ಎದುರಿಸುತ್ತಿದ್ದ ಸವಾಲು ಮತ್ತು ಅದರ ಪರಿಣಾಮಗಳು ಈಗ ವಿಜ್ಞಾನ, ತಂತ್ರಜ್ಞಾನ, ವಿದ್ಯುನ್ಮಾನ ಯುಗದಲ್ಲಿ ಬದಲಾಗಿ ನಾವೀನ್ಯತೆಗೊಳಪಟ್ಟಿದೆ. ಕಲೆಯ ರಂಗತಂತ್ರ, ಪ್ರಭಾವಗಳಲ್ಲೂ ತೀವ್ರ ಬದಲಾವಣೆಯಾಗಿದೆ.

ಅಧ್ಯಾಯ ೩. ಶೈಲಿ ಪ್ರವರ್ತಕರ ಮನೆತನಗಳು ಮತ್ತು ಮೇಳಗಳು

ಹವ್ಯಕರಲ್ಲಿ ಸಭಾಹಿತ, ಭಾಗವತ, ಹಾಸ್ಯಗಾರ ಎಂಬ ಮನೆತನಗಳಿದ್ದು ಇದೇ ಹೆಸರಿನ ಪರಂಪರೆಯ ಕುಟುಂಬಗಳು ಯಕ್ಷಗಾನದಲ್ಲಿ ಮೇಳದ ಸಂಘಟನೆ ಸೂತ್ರಧಾರಿಕೆ, ಪಾತ್ರಧಾರಿಕೆಯ ಮೂಲಕ ತೊಡಗಿಕೊಂಡಿವೆ. ಈ ಮನೆತನಗಳು ಶೈಲಿ, ಪರಂಪರೆ, ಕಲಾಸಂಪ್ರದಾಯಕ್ಕೆ ನೀಡಿದ ಕೊಡುಗೆಗಳು ವಿಶಿಷ್ಟವಾದುದಾಗಿದೆ. ಇವುಗಳನ್ನು ಅಧ್ಯಯನ ನಡೆಸುವುದು ಈ ಅಧ್ಯಾಯನದ ಉದ್ದೇಶವಾಗಿದೆ.

ಅಧ್ಯಾಯ ೪. ಹವ್ಯಕರು ಮತ್ತು ಯಕ್ಷಗಾನ ವಾಙ್ಮಯ

ಯಕ್ಷಗಾನ ಪ್ರಸಂಗ ಸಾಹಿತ್ಯ, ಗ್ರಂಥಸಾಹಿತ್ಯ, ಆಶುವಾಙ್ಮಯ ಪ್ರಕಾರಕ್ಕೆ ಹವ್ಯಕರು ನೀಡಿದ ಕೊಡುಗೆಗಳನ್ನು ಸ್ಥೂಲವಾಗಿ ವಿವೇಚಿಸಲಾಗಿದೆ.

ಅಧ್ಯಾಯ ೫. ಸಂಘಟನೆ

ಯಕ್ಷಗಾನ ಬಯಲಾಟದ ಸಂಘಟನೆ, ತಿರುಗಾಟಮೇಳ, ಹರಕೆಮೇಳ ಹಾಗೂ ತಾಳಮದ್ದಳೆ ಕೂಟಗಳ ಸಂಘಟನೆಯನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ೬. ಕಲಾವಿದರು

ಹಿಮ್ಮೇಳದ ಭಾಗವತರು, ಬಡಗು, ತೆಂಕು ಹಾಗೂ ಸವ್ಯಸಾಚಿ ಭಾಗವತರ ಕಲಾಸೇವೆಯನ್ನು ದಾಖಲಿಸಿ ವೈಶಿಷ್ಟ್ಯತೆಗಳನ್ನು ದಾಖಲಿಸಲಾಗುವುದು.

ಮದ್ದಳೆವಾದಕರು, ಚಂಡೆವಾದಕರು, ಮುಮ್ಮೇಳದ ಪ್ರಸಿದ್ಧಕಲಾವಿದರು ಹಾಸ್ಯಗಾರರು, ಸ್ತ್ರೀವೇಷ, ರಾಜವೇಷ, ಪುಂಡುವೇಷ, ದೈತ್ಯವೇಷ, ಬಣ್ಣದವೇಷ, ಸಂಕೀರ್ಣವೇಷಗಳ ಕಲಾವಿದರನ್ನು ತೆಂಕು, ಬಡಗು ಬಡಗು ೨ ರ ಮಟ್ಟಿನಲ್ಲಿ ಸೇವೆಸಲ್ಲಿಸಿ ಕಲಾಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ವೈಶಿಷ್ಟ್ಯತೆಗಳನ್ನು ದಾಖಲಿಸಲಾಗುತ್ತದೆ.

ಪ್ರಸಿದ್ಧ ಅರ್ಥವಾದಿಗಳು, ಚಿನ್ನದ ಪೆಟ್ಟಿಗೆ ತಯಾರಕರು, ಸಂಘಟಕರು ಸಂಚಾಲಕರು ಹಾಗೂ ಪ್ರಶಸ್ತಿವಿಜೇತರ ವಿವರ ಸಂಗ್ರಹಿಸಿ ಅವರ ವಿಶಿಷ್ಟ ಕೊಡುಗೆಗಳನ್ನು ದಾಖಲಿಸುವುದು.

ಅಧ್ಯಾಯ ೭. ಸಮಾರೋಪ

ಸಂಶೋಧನೆಯ ಫಲಿತಾಂಶವನ್ನು ವಿಶ್ಲೇಷಿಸುವುದು. ಮಹಾಪ್ರಬಂಧದ ಕೊನೆಯಲ್ಲಿ ಪ್ರಸಂಗ ಕರ್ತರ, ಕೃತಿಗಳ ಕಲಾವಿದರ ಯಾದಿ, ಆಕರ ಗ್ರಂಥಗಳ ಯಾದಿಯನ್ನು ಸಮಗ್ರವಾಗಿ ದಾಖಲಿಸುವುದು.

ಅಧ್ಯಾಯ – ೨

ಹವ್ಯಕರ ನೆಲೆ ಮತ್ತು ಯಕ್ಷಗಾನದ ಸೆಲೆ

೨.೧ ಹವ್ಯಕರ ನೆಲೆ

ಭಾರತದ ಪಶ್ಚಿಮ ಕರಾವಳಿಯ ತೀರವನ್ನು ಕೊಂಕಣತೀರವೆಂದು ಕರೆಯುತ್ತಾರೆ. "ದಕ್ಷಿಣ ಕನ್ನಡ, ಉತ್ತರ ಕನ್ನಡ, ಕುಲಾಬಾ ಠಾಣಾ ರತ್ನಾಗಿರಿ ಜಿಲ್ಲೆಯನ್ನೊಳಗೊಂಡ ಭಾಗವನ್ನು ಕೊಂಕಣ ಎಂದು ಹೆಸರಿಸಿದ್ದಾರೆ. ಕೊಂಕಣ ಪದಕ್ಕೆ ಕೊಳ್ + ಕಣ > ಕೊಳ್ಕಣ > ಕೊಂಕಣ, ಕೊಳ್ ಕಾನಮ್ (ತಮಿಳುಪದ) ಇತ್ಯಾದಿ ವ್ಯುತ್ಪತ್ತಿಯಿದೆ. ಅರಣ್ಯ ಪ್ರದೇಶ ಎಂಬರ್ಥದಲ್ಲಿ ಬಂದಿರಬಹುದೆಂದು ಹೇಳಲಾಗಿದೆ." ಪುರಾಣ ಹಾಗೂ ಶಾಸನಗಳಲ್ಲಿ ಕಿರಾತ, ವಿರಾಟ, ಮರಾಠ, ಕೊಂಕಣ, ಹೈಗ, ತುಳುವ, ಕೇರಳ ಎಂದು "ಸಪ್ತಕೊಂಕಣ"ಗಳಲ್ಲಿ ಹೈಗದೇಶವೆ ಉತ್ತರಕನ್ನಡ ಎಂದು ಉಲ್ಲೇಖಿಸಿರುತ್ತಾರೆ.[೧]

ಹೈಗ ದೇಶಕ್ಕೆ ಗೋರಾಷ್ಟ್ರದೇಶ, ನಾಗರಖಂಡ, ಪರಶುರಾಮಕ್ಷೇತ್ರ ಎಂಬ ವಿವಿಧ ಹೆಸರುಗಳಿದ್ದವು. "ಹೈಗದೇಶವಾಸಿಗಳು ಹವ್ಯಕರು" ಎಂಬ ವಾದವನ್ನು ಹೆಚ್.ಎಂ. ತಿಮ್ಮಪ್ಪ ಕಲಸಿಯವರು ಅಲ್ಲಗಳೆಯುತ್ತಾರೆ. "ಹೈಗದೇಶವೆಂದರೆ ಗೋಕರ್ಣದಿಂದ ಸೀತಾನದಿಯವರೆಗಿನ ಪ್ರದೇಶ ಇದಕ್ಕೆ ಹವ್ಯದೇಶವೆಂದು ಹೆಸರು, ದೇಶ ಭೇದದಿಂದಲೆ ಹೆಸರು ಬರುವುದಾದರೆ ಇಲ್ಲಿ ನೆಲೆಸಿದ ಉಳಿದವರಿಗೂ ಬರಬೇಕಲ್ಲವೆ?" ಎಂದು ಪ್ರಶ್ನಿಸುತ್ತಾರೆ. 'ವಿಪ್ರಾಣಾಂ ವಿಭೇದವೃತ್ತಿತಃ" ಎನ್ನುವುದರಿಂದ ಹವ್ಯಕರು ವೃತ್ತಿಯಿಂದಲೆ, ಹವ್ಯಕರು ಎಂಬ ಹೆಸರು ಅನ್ವರ್ಥವಾಗಿ ಬಂದಿದೆ ಹೊರತು ದೇಶಭೇದದಿಂದಲ್ಲ ಎಂದು ತೀರ್ಮಾನಿಸಿದ್ದಾರೆ.[೨]

'ಹವ್ಯಕ' ಪದಕ್ಕೆ ಸಂಬಂಧಿಸಿ ವಿಸ್ತೃತವಾದ ಚರ್ಚೆ ನಡೆದು ಮೂಲವನ್ನು ಶೋಧಿಸುವ ಪ್ರಯತ್ನ ಸಾಕಷ್ಟು ನಡೆದಿದೆ. ದೇಶವಾಚಕವೆ? ವೃತ್ತಿ ಸೂಚಕವೆ? ಎಂಬ ಜಿಜ್ಞಾಸೆ ಜೀವಂತವಾಗಿ ಉಳಿದಿದೆ. ಹೈವೆನಾಡಿನ ಹೊನ್ನಾವರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ವಿಜಯನಗರದ ಮಾಂಡಳಿಕರು ಸಪ್ತಕೊಂಕಣವನ್ನು ಅಧೀನದಲ್ಲಿಟ್ಟಿದ್ದರು. ಗಂಗೊಳ್ಳಿಯಿಂದ ಗಂಗಾವಳಿಯವರೆಗಿನ ಪ್ರದೇಶಗಳು ರಾಷ್ಟ್ರಕೂಟರ, ಕಲ್ಯಾಣಿ ಚಾಲುಕ್ಯರ, ಕಲಚೂರ್ಯರ, ದೇವಗಿರಿಯಾದವರ, ವಿಜಯನಗರದ ಮಾಂಡಳಿಕರವರೆಗಿನ ಇತಿಹಾಸದಲ್ಲಿ ಸಾಕಷ್ಟು ಶಾಸನಗಳು ಹೈಗ ದೇಶದ ಚರಿತ್ರೆಯನ್ನು ದಾಖಲಿಸಿವೆ.[೩]

ಟಿ. ಕೇಶವಭಟ್ಟರು "ಹವ್ಯಕರ ಶೋಭಾನೆಗಳು" ಗ್ರಂಥದಲ್ಲಿ ಅಹಿಕರು ಇದು ಅಕ್ಷರ ಪಲ್ಲಟದಿಂದ ಅಹಿಕ–ಹಇಕ – ಹಯಿಕ – ಹವಿಕ –ಹವ್ಯಕ ಎಂದಾಯಿತೆಂದು ಅಭಿಪ್ರಾಯಪಡುತ್ತಾರೆ. ಡಾ. ಕೆ.ಜಿ.

---

೧. ಕಾರವಾರ ಜಿಲ್ಲೆಯ ಜನಪದ ಗೀತೆಗಳು – ಡಾ. ಎನ್.ಆರ್. ನಾಯಕ್, ಪು. ೧೮, "ಕೊಂಕಣ"

೨. ಹವ್ಯಕರ ಇತಿಹಾಸ ಹೆಚ್.ಎಂ. ಕಲಸಿ, ಹವ್ಯಕರ ಇತಿಹಾಸ ಪು.

೩. ಹೈಗನಾಡಿನ ಚರಿತ್ರೆ – ಬಿ.ಹೆಚ್. ಶ್ರೀಧರ್ – ಕೆಳದಿ ವಸ್ತುಸಂಗ್ರಹಾಲಯದಲ್ಲಿರುವ ಗೋಕರ್ಣ ಇತಿಹಾಸ ಭಾಗ ೧, ೨

ಶಾಸ್ತ್ರಿಯವರು ಹವ್ಯಕರು ಉತ್ತರಭಾರತದ ಅಹಿಕ್ಷೇತ್ರದಿಂದ ಬಂದವರು ಎಂಬ ಅಭಿಪ್ರಾಯಪಟ್ಟಿದ್ದಾರೆ. "ಅಹಿಕ" ಎಂಬುದು ಅಹಿಕ್ಷೇತ್ರವೆಂಬುದರ ಶಬ್ದರೂಪವಾಗಿದೆ[೪] ಎಂದು ಅನೇಕ ವಿದ್ವಾಂಸರು ಉಲ್ಲೇಖಿಸಿರುವುದು ಹವ್ಯಕರು ಮೂಲತಃ ಹೈಗ ದೇಶದವರೇ? ನೆಲೆಯಾದ ಕಾರಣ ಹವ್ಯಕರಾದರೆ? ಎಂಬ ಪ್ರಶ್ನೆಗೂ ಕಾರಣವಾಗಿದೆ. ಹವ್ಯಕರ ಮೂಲದ ಕುರಿತಾದ ಈ ಎರಡು ವಾದಗಳಿಗೆ ಸಂಬಂಧಿಸಿದಂತೆ ಇತಿಹಾಸ ಗ್ರಂಥಗಳು, ಶಾಸನ ಸಾಹಿತ್ಯ, ಉತ್ತರ ಸಹ್ಯಾದ್ರಿ ಖಂಡ, ಸೋದೆ ಕೈಫಿಯತ್ತು, ಉತ್ತರ ಕನ್ನಡ ಜಿಲ್ಲಾ ಗೆಜಿಟಿಯರ್ ಮುಂತಾದ ಆಧಾರಗಳಿಂದ "ಉತ್ತರದ ಅಹಿಚ್ಛತ್ರ" ದಿಂದಲೆ ಬ್ರಾಹ್ಮಣರನ್ನು ಕರೆತಂದಿದ್ದು, ಮಯೂರವರ್ಮನು ಹೈಗ ದೇಶದಲ್ಲಿ ನೆಲೆಗೊಳಿಸಿದನು ಎಂಬುದರಲ್ಲಿ ಎರಡು ಮಾತಿಲ್ಲ" ಎಂದು "ಹವ್ಯಕ ಇತಿಹಾಸ" ಗ್ರಂಥ ರಚಿಸಿದ ಹೆಚ್.ಎಂ. ತಿಮ್ಮಪ್ಪ ಕಲಸಿಯವರು ಉಲ್ಲೇಖಿಸಿರುತ್ತಾರೆ. "ಹವ್ಯಕರು ಎಂಬುದು ಕದಂಬ ರಾಜನಾದ ಲೋಕಾದಿತ್ಯನು ಗೌರವಪೂರ್ವಕವಾಗಿ ನೀಡಿದ ನಾಮಧೇಯವಾಗಿದೆ.[೫] ಧಾರ್ಮಿಕ ಕಾರ್ಯಗಳಿಗೆ ನಿಯುಕ್ತಿಗೊಳಿಸಿದ ಹವ್ಯಕರಿಗೆ ವಾಸಕ್ಕಾಗಿ ಅಗ್ರಹಾರಗಳನ್ನು ನೀಡಿ ನೆಲೆಗೊಳಿಸಿದ್ದು ಆ ಕ್ಷೇತ್ರಗಳು ಇಂದು ಹವ್ಯಕರ ನೆಲೆಗಳಾಗಿ ಮುಂದೆ ವಿಸ್ತಾರಗೊಳ್ಳುತ್ತ ಪಡುಕರಾವಳಿಯಿಂದ ಮಲೆನಾಡಿನವರೆಗೂ ವ್ಯಾಪಿಸಿತು ಎಂಬುದು ಸ್ಪಷ್ಟವಾಗುತ್ತದೆ.

ಗೋಕರ್ಣದ ದಕ್ಷಿಣ ದಿಕ್ಕಿನಲ್ಲಿ ಗುರುಭಟ್ಟಾಚಾರ್ಯರಿಂದ ಪ್ರೇರಿತರಾಗಿ ಹವಿರ್ದಾನಗಳಲ್ಲಿ ದೇವತೆಗಳನ್ನು ತುಷ್ಟಿಗೊಳಿಸುವ ಕಾರ್ಯದಲ್ಲಿ ನಿರತರಾದ ಹವ್ಯಕರನ್ನು ಏಳು ಸಂಕೇತನಾಮಗಳಿಂದ ಕಾರ್ಯನಿಯುಕ್ತರನ್ನಾಗಿಸಲಾಯಿತು. ಸಭಾಹಿತ, ಮಧ್ಯಸ್ಥ, ಯಾಜಿ, ಅವಭೃಥ, ಭಟ್ಟ, ತಾಂತ್ರಿಕ, ಪ್ರಭು (ಹೆಗಡೆ) ಗಳೆಂದು ಸಭೆ, ಧರ್ಮ, ಯಜ್ಞ, ವೇದಜ್ಞಾನ, ಆಗಮ ತಂತ್ರಜ್ಞಾನ, ಗ್ರಾಮಾಡಳಿತಗಳ ಹೊಣೆಗಾರಿಕೆಗಳನ್ನು ನೀಡಲಾಯಿತು. ಇದಕ್ಕಾಗಿ ೧೦ ಪಟ್ಟಣಗಳು, ೧೬ ಗ್ರಾಮಗಳು, ೧೦ ದುರ್ಗಾಸ್ಥಾನಗಳನ್ನು ವಿಷ್ಣು, ವಿಘ್ನೇಶ್ವರರಿಂದ ಯುಕ್ತವಾದ ಐದು ಶಿವಕ್ಷೇತ್ರವನ್ನು ನೀಡಲಾಯಿತು."[೬]

"ಹವ್ಯಕರು ಕಶ್ಯಪ, ವಸಿಷ್ಠ, ವಿಶ್ವಾಮಿತ್ರ, ಅಂಗಿರಾ, ಜಮದಗ್ನಿ, ಭರದ್ವಾಜ, ಗೌತಮ ಎಂಬ ಏಳು ಗೋತ್ರದಲ್ಲಿ ಹಂಚಿಹೋಗಿದ್ದಾರೆ. ವಿನಾಯಕ, ವಿಷ್ಣು, ಸ್ಕಂದ, ಅಗ್ನಿ, ಸೂರ್ಯ, ದುರ್ಗಾ ಹೀಗೆ ಏಳು ದೇವತೆಗಳನ್ನು ಆರಾಧಿಸುವವರಾದರು. ಅವರವರ ಕಾರ್ಯಗಳಿಗನುಗುಣವಾಗಿ ಬೇರೆ ಬೇರೆ ಸ್ಥಳಗಳಲ್ಲಿ ಭೂದಾನ ನೀಡಿ ಲೋಕಾದಿತ್ಯನು ನೆಲೆಗೊಳಿಸಿದ್ದನೆಂದು ಹವ್ಯದೇಶದ ಸ್ಥಿತಿಯನ್ನು ವೇದ ರತ್ನ ಸಾಂಬದೀಕ್ಷಿತರು ದಾಖಲಿಸಿದ್ದಾರೆ."[೭]

ಹವ್ಯಕರ ನೆಲೆಯ ಕುರಿತಾಗಿ ಖಚಿತವಾಗಿ ಉಲ್ಲೇಖವಿರುವ ಪುರಾಣಗಳು, ಶಾಸನಗಳು ಐತಿಹಾಸಿಕ ದಾಖಲೆಗಳಾದ ಗೆಜಿಟಿಯರ್‌ಗಳು ಪ್ರವಾಸಿ ಕಥನಗಳನ್ನು ಪರಾಮರ್ಶಿಸಲು ಸಾಧ್ಯವಿದೆ.

---

೪. ಟಿ. ಕೇಶವ ಭಟ್ – ಹವ್ಯಕ ಸೋಭಾನಗಳು ಪುಟ – ೧೫೧

೫. ಅಹಿಚ್ಛತ್ರ – ಲೇಖನ – ಹೆಚ್.ಎಂ. ತಿಮ್ಮಪ್ಪ ಕಲಸಿ, ಹವ್ಯಕ ಮಾಸ ಪತ್ರಿಕೆ – ಜೂನ್ ೨೦೧೦ – ಪುಟ ೨೦

೬. ಹವ್ಯಕಾಚ್ಛೇತಿ ವಿಪ್ರಾಣಾಂ ನಾಮಧೇಯಂ ಚಕಾರಸಃ – ಹವ್ಯಕ ಮಾಸಪತ್ರಿಕೆ – ಪು. ೧೯–೪– ೨೦೦೯

೭. ವೇದರತ್ನ ಸಾಂಬದೀಕ್ಷಿತ್ – ಅಹೋಜಾ – ಅಗ್ನಿ ಸೇವಾ ಟ್ರಸ್ಟ್ – ಸ್ಮರಣ ಸಂಚಿಕೆ – "ಉತ್ತರ ಸಹ್ಯಾದ್ರಿಯಲ್ಲಿ ಹವ್ಯಕರು" – ಪುಟ ೫೦

೨.೧.೧. ಉತ್ತರ ಸಹ್ಯಾದ್ರಿ ಖಂಡ

ಉತ್ತರ ಸಹ್ಯಾದ್ರಿ ಖಂಡವು ವೇದ ವ್ಯಾಸರಿಂದ ರಚಿತವಾದ ಸ್ಕಂದ ಪುರಾಣದಲ್ಲಿದೆ. ಸ್ಕಂದ ಪುರಾಣವು ೮೧೦೦೦ ಶ್ಲೋಕವನ್ನು ಹೊಂದಿದ್ದು, ಮಾಹೇಶ್ವರ ಖಂಡ, ವೈಷ್ಣವ ಖಂಡ, ಬ್ರಹ್ಮಖಂಡ, ಕಾಶೀಖಂಡ, ರೇವಾಖಂಡ, ತಾಪೀಖಂಡ, ಪ್ರಭಾಸಖಂಡಗಳೆಂಬ ಏಳು ವಿಭಾಗವನ್ನು ಹೊಂದಿದೆ. ಇವುಗಳಲ್ಲಿನ ಉಪಖಂಡಗಳಲ್ಲಿ ಸಹ್ಯಾದ್ರಿ ಖಂಡವೂ ಒಂದಾಗಿದೆ. ಸಹ್ಯಾದ್ರಿ ಖಂಡವು ೧೫೦೦ ಶ್ಲೋಕಗಳನ್ನು ಹೊಂದಿದ್ದು, ೩೪ ಅಧ್ಯಾಯಗಳಿಂದ ಕೂಡಿದೆ. ಈ ಪುರಾಣದ ೧೪, ೧೫, ೧೬ನೇ ಶ್ಲೋಕಗಳು ೩೨ನೇ ಅಧ್ಯಾಯದಲ್ಲಿ ಹವ್ಯಕರ ಮೂಲದ ಕುರಿತು ಉಲ್ಲೇಖಗಳನ್ನು ಹೊಂದಿದೆ.[೮]

೨.೧.೨. ಮೃಗೇಶ ವರ್ಮನ ಶಿಲಾಶಾಸನ[೯]

ಕದಂಬ ದೊರೆ ಮೃಗೇಶ ವರ್ಮನ ಕಾಲ ಕ್ರಿ.ಶ. ೭೪೫. ಇವನ ಕಾಲದಲ್ಲಿ ರಚಿತವಾದ ಶಿಲಾಶಾಸನವು ಲೋಕಾದಿತ್ಯನ ಆಳ್ವಿಕೆಯ ಕುರಿತು ಉಲ್ಲೇಖಿಸಿದೆ. ಲೋಕಾದಿತ್ಯನು ಹವ್ಯಕರೆಂದು ನಾಮಾಂಕಿತಗೊಳಿಸಿದ್ದು ಶಾಸನದಲ್ಲಿ ಕಾಣಬಹುದು.

೨.೧.೩. ತಾಳಗುಂದ ಶಿಲಾಶಾಸನ[೧೦]

ಮಯೂರವರ್ಮನು ಅಹಿಚ್ಛತ್ರದಿಂದ ಕರೆತಂದ ಬ್ರಾಹ್ಮಣರು ಅವನ ಮರಣಾನಂತರ ಪುನಃ ಸ್ವದೇಶಕ್ಕೆ ಮರಳಿದ್ದು, ಅವನ ಮಗ ಕಂಗವರ್ಮನು ಪುನಃ ಅವರನ್ನು ಬರಮಾಡಿ ಕುಂದೂರು (ತಾಳಗುಂದ)ದಲ್ಲಿ ನೆಲೆಗೊಳಿಸಿದನು. ಅವರ ಗುರುತಿಗಾಗಿ ಚೂಡಾಕರ್ಮ ಮತ್ತು ಜುಟ್ಟು ಬಿಡುವಂತೆ ಆಜ್ಞೆ ಮಾಡಿದನು. ಗೋವುಗಳು ಸಮೃದ್ಧವಾಗಿರುವ ಗೋರಾಷ್ಟ್ರ ದೇಶದ ಬ್ರಾಹ್ಮಣರು ಗೋವಿನ ಪಾದದಷ್ಟು ಕೂದಲನ್ನು ಮಾತ್ರ ಬಿಡುವಂತೆ ಆಜ್ಞಾಪಿಸಿದ್ದನೆಂಬ ಉಲ್ಲೇಖವಿದೆ.

೨.೧.೪. ಹೊನ್ನಳ್ಳಿ ಮಠದ ದಾಖಲೆ[೧೧]

ಹೊನ್ನಳ್ಳಿ (ಸ್ವರ್ಣವಲ್ಲಿ) ಮಠದ ದಾಖಲೆಯಲ್ಲಿ ಲೋಕಾದಿತ್ಯನು ಗೋಕರ್ಣದಿಂದ ಬ್ರಾಹ್ಮಣರನ್ನು ಕರೆತಂದ ವಿವರವಿದೆ.

By lokaditya from Gokarna which is in extreme north of Haiga and in the local history of the Honnalli mutta in Sonda.

South Kanara manual page 138

೨.೧.೫. ಕೆನರಾ ಡಿಸ್ಟ್ರಿಕ್ಟ್ ಮ್ಯಾನ್ಯುಯೆಲ್[೧೨]

ಹೈಗ ದೇಶದಿಂದ ತೆರಳಿ ತುಳುನಾಡಿನಲ್ಲಿ ವಾಸವಾಗಿದ್ದ ಬ್ರಾಹ್ಮಣರನ್ನು ಹುಬ್ಬಾಸಿಗನೆಂಬುವವನು ಕೊಳ್ಳೆ ಹೊಡೆದ ಕಾರಣ ಲೋಕಾದಿತ್ಯನು ಹುಬ್ಬಾಸಿಗನನ್ನು ಕೊಂದು ಪುನಃ ತನ್ನ ನಾಡಿಗೆ ಕರೆತಂದು

---

೮. ಹವ್ಯಕರ ಇತಿಹಾಸ – ಪುಟ ೩೨೦ – ಹೆಚ್.ಎಂ. ತಿಮ್ಮಪ್ಪ ಕಲಸಿ, ಸಾಗರ

೯. ಹವ್ಯಕ ಇತಿಹಾಸ ದರ್ಶನ – ಶಾಸನ ಪಾಠಗಳ ಸಾರಾಂಶ – ಪುಟ ೩೬೯–೩೭೦

೧೦. ಅದೇ ಪುಟ

೧೧. ಹವ್ಯಕರ ಇತಿಹಾಸ – ಪುಟ – ಹೆಚ್.ಎಂ. ತಿಮ್ಮಪ್ಪ ಕಲಸಿ, ಸಾಗರ – ಹವ್ಯಕ ಇತಿಹಾಸದರ್ಶನ – ಗುರುಮಠಗಳು – ಪುಟ ೬೦

೧೨. ಹವ್ಯಕ ಇತಿಹಾಸ ದರ್ಶನ – ಪುಟ ೫೨೪

ಶರಾವತಿ ತೀರದ ಗುಣವಂತೆ, ಇಡಗುಂಜಿ, ಬಳ್ಕಂದೂರುಗಳನ್ನು ಕೊಟ್ಟು ಹಲವು ಗ್ರಾಮಗಳಲ್ಲಿ ನೆಲೆಗೊಳಿಸಿದನೆಂಬ ದಾಖಲೆಯಿದೆ.

೨.೧.೬. ಟಾಲೆಮಿಯ ಪ್ರವಾಸಿ ಕಥನ

ಟಾಲೆಮಿ ತನ್ನ ಪ್ರವಾಸಿ ಕಥನದಲ್ಲಿ ಉತ್ತರ ಕನ್ನಡದಲ್ಲಿ ಹೈಗರು ದಕ್ಷಿಣ ಕನ್ನಡದಲ್ಲಿ ತುಳುವರು ಇದ್ದರೆಂದು ದಾಖಲಿಸಿದ್ದಾನೆ.[೧೩]

Together with Haiga North Kanara and Tuluva in South Kanara the capital was Banavasi.

೨.೧.೭. ಇತರೆ ದಾಖಲೆಗಳು

ಶಾರದಾಪ್ರಸಾದರ ಪ್ರೌಢ ಇತಿಹಾಸ (ಪುಟ ೬೮) ಶ್ರೀ ಕೃಷ್ಣರಾವ್ ಮತ್ತು ಕೇಶವ ಭಟ್ಟರ "ಕರ್ನಾಟಕ ಇತಿಹಾಸ ದರ್ಶನ" (ಪುಟ ೧೩, ೧೪) ಹಿಂದೂ ದೇಶ ಚರಿತ್ರೆಗಳಲ್ಲಿ ಹವ್ಯಕರ ನೆಲೆಯ ಕುರಿತು ಪ್ರಸ್ತಾವಿಸಿದೆ.[೧೪]

ಹವ್ಯಕರ ಭಾಷಾಶಾಸ್ತ್ರೀಯ ಆಧಾರದ ಮೇಲೆ ದ್ರಾವಿಡರು ಹಾಗೂ ದಕ್ಷಿಣ ಭಾರತ ಮೂಲದವರು ಎಂದು ತರ್ಕಿಸುವುದಕ್ಕೆ ೧೪ನೇ ಶತಮಾನದಲ್ಲಿ ಶ್ರೀ ವಿದ್ಯಾರಣ್ಯರು ಶ್ರೀರಾಮಚಂದ್ರಾಪುರ ಮಠಕ್ಕೆ ನೀಡಿದ ತಾಮ್ರ ಶಾಸನದಲ್ಲಿ ಹವ್ಯಕರು ದ್ರಾವಿಡರು ಎಂದು, ("ಹೈವ ದೇಶಸ್ಥಿತ ಚೈವ ದ್ರಾವಿಡ ಸಂಜ್ಞಿತ") ಹವ್ಯಕರ ಸಾಹಿತ್ಯದಲ್ಲಿ ಕಂಡುಬರುವ ತಿಗಳಾರಿಲಿಪಿಕೂಡ ದ್ರಾವಿಡ ಸಂಸ್ಕೃತಿಯವರೆಂಬುದನ್ನು ದೃಢಗೊಳಿಸುತ್ತದೆ.[೧೫]

ಉತ್ತರಕನ್ನಡದಲ್ಲಿ ವಾಸಿಸುವ ಹವ್ಯಕರಿಗೆ ಭಟ್ಟ, ಹೆಗಡೆ, ಸಭಾಹಿತ ಮುಂತಾದ ವೃತ್ತಿ ವಾಚಕ ಹೆಸರುಗಳಿವೆ. ಮಠಪರಂಪರೆ, ಧಾರ್ಮಿಕ ವಿಧಿವಿಧಾನಗಳಿಂದ ಬ್ರಾಹ್ಮಣರಲ್ಲಿ ಹವ್ಯಕರ ಪ್ರತ್ಯೇಕತೆ ಇದೆ. ಗೋತ್ರ ಪ್ರವರಗಳು, ಒಳಪಂಗಡಗಳಿಲ್ಲದಿರುವುದು, ವೇದಾಚಮನ, ಪಂಚಾಯತನ, ಪೂಜೆ, ವಿವಾಹಾದಿ ಸಂಸ್ಕಾರದ ವಿಶೇಷತೆಗಳು ಮರಣೋತ್ತರ ಅಪರ ಕ್ರಿಯಾ ವಿಧಾನಗಳು ಉಳಿದ ಬ್ರಾಹ್ಮಣರಿಗಿಂತ ಭಿನ್ನವಾದವುಗಳೇ ಆಗಿದೆ. ಇಂತಹ ಪ್ರತ್ಯೇಕ ಜೀವನ ಕ್ರಮವನ್ನು ಪೊಂದಿದವರು ಇಂದಿಗೂ ತಮ್ಮ ನೆಲೆಗಳಲ್ಲಿ ಆ ಜೀವನ ಕ್ರಮವನ್ನು ಪಾಲಿಸುತ್ತಲೆ ಬಂದಿರುವ ಹಿನ್ನೆಲೆಯಲ್ಲಿ ಹವ್ಯಕರ ನೆಲೆಗಳು ಭಿನ್ನ ಸಂಸ್ಕೃತಿಯ ನೆಲೆಯಾಗಿಯೆ ಉಳಿದುಕೊಂಡು ಬಂದಿದೆ. ಈ ನೆಲೆಗಳಲ್ಲಿ ಇಂದಿಗೂ ಹೆಚ್ಚಾಗಿ ಹವ್ಯಕರೇ ನೆಲೆಸಿರುತ್ತಾರೆ.

೨.೨. ಹವ್ಯಕರ ಪ್ರಾಚೀನ ನೆಲೆಗಳು

ಕದಂಬ ರಾಜಶಾಸನದಂತೆ ಹವ್ಯಕರಿಗೆ ಮೂವತ್ತೆರಡು ಗ್ರಾಮಗಳನ್ನು ದಾನವಾಗಿ ಕೊಟ್ಟ ಪ್ರದೇಶಗಳು ಹವ್ಯಕರ ಮೂಲ ನೆಲೆಯಾಗಿದೆ. ಶರಾವತಿ ನದಿಯಿಂದ ಸಣ್ಣಬಲಸೆವರೆಗಿನ ಪ್ರದೇಶವನ್ನು

---

೧೩. ಹವ್ಯಕ ಇತಿಹಾಸ ದರ್ಶನ – ಪುಟ ೫೨೪

೧೪. ಹವ್ಯಕರ ಇತಿಹಾಸ – ಪುಟ ೧೫ – ಹೆಚ್.ಎಂ. ತಿಮ್ಮಪ್ಪ ಕಲಸಿ

೧೫. ಹವ್ಯಕರ ಇತಿಹಾಸ ದರ್ಶನ – ಪುಟ ೩೭೮ – ತಿಗಳಾರಿಲಿಪಿ

ಗೋರಾಷ್ಟ್ರದೇಶವೆಂದು ಕರೆಯಲಾಗಿದೆ. ಇವುಗಳಲ್ಲಿ ಹದಿನಾರು ಗ್ರಾಮಗಳು ಅಗ್ರ ಗ್ರಾಮಗಳಾಗಿದ್ದವು.[೧೬]

೧. ಕರೂರು – ಶಿವಮೊಗ್ಗ ಜಿಲ್ಲೆ, ಸಾಗರ ತಾಲ್ಲೂಕು
೨. ಹೆಗ್ಗರಣಿ – ಉತ್ತರ ಕನ್ನಡ ಜಿಲ್ಲೆ, ಸಿದ್ದಾಪುರ
೩. ಬಲ್ಕಂದೂರು – ಕುಂದ್ಯಾವನ, ಕುಮಟಾ ತಾಲ್ಲೂಕು
೪. ಮುಂದುಕೋಡು – ಅಗ್ರಶೃಂಗ ಕುಮಟಾ ತಾಲ್ಲೂಕು
೫. ಸಣ್ಣೂರು – ಸಂಡೂರು, ಕುಮಟಾ
೬. ರೊಂಟೂರು – ವಂದೂರು ಹೊನ್ನಾವರ
೭. ಮಣ್ಣಿ – ಮಣಕಿ ಕುಮಟಾ ತಾಲ್ಲೂಕು
೮. ವಳ್ಳಿ – ವಲ್ಕಿ ಹೊನ್ನಾವರ
೯. ಬ್ರಹ್ಮೂರು – ಬ್ರಹ್ಮೂರು ಅಂಕೋಲಾ ತಾಲ್ಲೂಕು
೧೦. ದೂರ್ವಾ – ಕರ್ಕಿ ಹೊನ್ನಾವರ
೧೧. ಗುಣವಂತೆ – ಹೊನ್ನಾವರ ತಾಲ್ಲೂಕು
೧೨. ಇಡಗುಂಜಿ – ಹೊನ್ನಾವರ
೧೩. ಬಳ್ಕೂರು – ಹೊನ್ನಾವರ
೧೪. ಮೃಗೋರು – ಮೃಗವನ್ಯಾ
೧೫. ಮರುತ್ವದ – ವಜ್ರಳ್ಳಿ
೧೬. ಕಾಳಾಖ್ಯಕುಲ್ಯ – ಕಲ್ಲೇಶ್ವರ

ವಿಶೇಷ ಗ್ರಾಮ

ಬಂಕಿ ಮತ್ತು ಕಾಕಾಲು (ಕಾಗಾಲು)

ಘಟ್ಟ ಪ್ರದೇಶಗಳು – ಹತ್ತು

೧. ಭಂಗನಾ – ಬಂಗಣಿ
೨. ಭಗವತಿ
೩. ವಟೇಕ
೪. ಸರತ
೫. ಚಕ್ರಶಿಲಾ
೬. ಉಡಕುಂದ
೭. ಮುಳ್ಯಗ್ರಶೃಂಗ
೮. ಹಿನ್ನೂರು
೯. ಬನ್ನೂರು

---

೧೬. ಅತೀತದಲ್ಲೊಂದು ಪಯಣ – ಪುಟ ೮೬ – ಪರಮೇಶ್ವರಿ ತನಯ

೧೦. ಕರಿಘಟ್ಟಾ – ಕರಿಕಾನು

ದುರ್ಗಾಸ್ಥಾನಗಳು ಹತ್ತು

೧. ಹೇಮ – ಬಂಗಾರಮಕ್ಕಿ ಹೊನ್ನಾವರ
೨. ಕುಂದೋರು – ಹೊಳೆಗದ್ದೆ
೩. ಬೇಗಾರು – ಯಲ್ಲಾಪುರ
೪. ಮೃಗವನ್ಯಾ – ಭುವನಗಿರಿ, ಸಿದ್ದಾಪುರ
೫. ಆರ್ಯಶೃಂಗಾ – ಅಂಕೋಲ
೬. ಪುನ್ನಾಗಾರ – ಹೊನ್ನಾವರದ ದುರ್ಗಾಕೇರಿ
೭. ಮಹಿಷಗಿರಿ – ಕೋಣಾರೆ
೮. ರಾಮಾಗ್ರಶೃಂಗ – ಪುರುಷಗೋಡು, ಕುಮಟಾ
೯. ಕಾನಮಕ್ಕಿ – ಶಿರಸಿ
೧೦. ಗಂಡಕವನ

ಶೈವ ಕ್ಷೇತ್ರಗಳು ಐದು

೧. ಗೋಕರ್ಣ
೨. ಧಾರೇಶ್ವರ
೩. ಅಗ್ರಶೃಂಗ
೪. ಯಾಣ
೫. ಕಡುವ

ಪಟ್ಟಣಗಳು – ಹತ್ತು

೧. ಕುಚಿನಾಡು
೨. ಕುಮಟಾ
೩. ಹೊಸಾಕುಳಿ
೪. ನಂದೊಳ್ಳಿ
೫. ಹೈಗುಂದ
೬. ಸ್ಯೆಂಗಲ
೭. ಗೋಷ್ಟಿಕಾ – ಮುಟ್ಟಾ ಹೊನ್ನಾವರ
೮. ಗೇರುಸೊಪ್ಪಾ
೯. ಬಾಹ್ಯಸ್ಥ
೧೦. ಹೊನ್ನಾವರ

ಈ ನೆಲೆಗಳಲ್ಲದೆ ಅಗ್ರಹಾರಗಳನ್ನು ಮಯೂರವರ್ಮನ ನಂತರದ ಅರಸರು ಬಿಟ್ಟುಕೊಟ್ಟರು. ಅವುಗಳು ಪ್ರಸಿದ್ಧ ವಿದ್ಯಾಕೇಂದ್ರಗಳಾಗಿದ್ದವು. ಷಟ್ಕರ್ಮ ನಿರತರಾಗಿದ್ದ ಹವ್ಯಕರಿಂದ ಸಾಮಾಜಿಕ,

ಧಾರ್ಮಿಕ ಕಾರ್ಯಗಳು ನಡೆದುಕೊಂಡು ಬಂದವು. ವ್ಯವಸಾಯ, ಪಶುಪಾಲನೆಯೊಂದಿಗೆ ಜೀವನ ಸಾಗಿಸುವ ಕ್ರಮ ರೂಢಿಗೊಂಡಿತು. ಹವ್ಯಕರು ಸಾಮಾನ್ಯವಾಗಿ ತೋಟದ ವ್ಯವಸಾಯಕ್ಕಾಗಿ ಹಳ್ಳ, ಹೊಳೆಸಾಲುಗಳ ದಡವನ್ನರಸಿ ತೋಟದ ಬೇಸಾಯದ ಭೂಮಿಯನ್ನು ಹಸನಾಗಿಸುತ್ತ ಸಾಗಿದ್ದು ಜೀವನ ಕ್ರಮವಾಗಿದೆ. ಒಂದೊಂದು ಗೋತ್ರದ ಕುಟುಂಬಗಳು ಒಂದೆಡೆ ವಾಸಿಸುವ ಪರಿಪಾಠ ಬೆಳೆದು ಬಂದಿರುವ ಪ್ರಾದೇಶಿಕತೆಯ ಕಾರಣದಿಂದ ಕರಾವಳಿ ಹಾಗೂ ಘಟ್ಟದ ಮೇಲಿನ ಭಾಗಗಳ ಜನರ ಆಚಾರ ವಿಚಾರ, ರೂಢಿ ಸಂಪ್ರದಾಯಗಳಲ್ಲೂ ವ್ಯತ್ಯಾಸಗಳು ಕಾಣಿಸಿಕೊಂಡವು.

ಅವಿಭಕ್ತ ಕುಟುಂಬ ಪದ್ಧತಿಯ ಪಿತೃ ಪ್ರಧಾನ ವ್ಯವಸ್ಥೆಯ ಕುಟುಂಬಗಳು ದಾಯಭಾಗದ ಮೂಲಕ ಪ್ರತ್ಯೇಕಗೊಳ್ಳುತ್ತ ವಿಸ್ತರಿಸಲ್ಪಟ್ಟವು. ಪ್ರಾದೇಶಿಕ, ಪ್ರಾಕೃತಿಕ ಸೌಲಭ್ಯಗಳು ಹವ್ಯಕರ ಉದ್ಯೋಗಕ್ಕೆ ಪೂರಕವಾದವು. ಈ ನೆಲೆಗಳಲ್ಲಿ ಸಮೃದ್ಧವಾದ ವ್ಯವಸಾಯದಿಂದ ಜೀವನ ನಿರ್ವಹಣೆ ಅನುಕೂಲಕರವಾಗಿಯೂ ಇತರೆಡೆಗಳಲ್ಲಿ ಸಂಪನ್ಮೂಲಗಳ ಕೊರತೆಯಿಂದ ಕಠಿಣ ಪರಿಶ್ರಮದ ಬದುಕನ್ನು ಅನುಭವಿಸುವಂತಾಯಿತು. ಕೃಷಿಯೇತರ ಉದ್ಯೋಗಬಗ್ಗದ ಹವ್ಯಕರು ಶಿಕ್ಷಣ ಮಾರ್ಗವನ್ನು ಅನುಸರಿಸಿ ಬೋಧನೆ ವೃತ್ತಿಗಳಲ್ಲಿ ಹೆಚ್ಚಾಗಿ ಒಲವು ತೋರುತ್ತ ಸಾಗಿದರು.

ಧಾರ್ಮಿಕ ಕಾರ್ಯಗಳಿಗಾಗಿಯೆ ನಿಯುಕ್ತರಾದ ಹವ್ಯಕರ ಮನೆಗಳಲ್ಲಿ ಪಂಚಾಯತನ ಪೂಜೆ, ವೇದಮಾರ್ಗದ ಕರ್ಮಾಚರಣೆಗಳು, ಯಜ್ಞ ಯಾಗಾದಿಗಳು, ಪಿತೃಕಾರ್ಯಗಳು, ಹಬ್ಬ ಹರಿದಿನಗಳು ವಾರ್ಷಿಕ ಆಚರಣೆಗಳಾಗಿ ನಡೆದು ಬಂದವು. ದೈನಂದಿನ ಜೀವನದಲ್ಲಿ ನಿತ್ಯ ಕಾರ್ಯಗಳು, ನೈಮಿತ್ತಿಕ ಹಾಗೂ ಕಾಮ್ಯ ಕಾರ್ಯಗಳು ವಿಶೇಷವಾಗಿ ರೂಢಿಗೊಂಡವು. ಸಾಮಾಜಿಕ ಜೀವನದಲ್ಲಿ ಉಪನಯನ, ವಿವಾಹ ಮುಂತಾದ ಕಾರ್ಯಗಳು ವಿಧಿವತ್ತಾಗಿ ಶಾಸ್ತ್ರಸಮ್ಮತವಾಗಿ ರೂಢಿಗೊಂಡವು. ವಿವಾಹದಲ್ಲಿ ವೈದಿಕ ಧರ್ಮಾಚರಣೆಗಳಲ್ಲದೆ ಕಲಾತ್ಮಕ ಅಂಶಗಳು ಸೇರ್ಪಡೆಗೊಂಡವು. ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿ ಶಾಸ್ತ್ರೋಕ್ತ ಸಂಪ್ರದಾಯಗಳಲ್ಲಿ ಪುರಾಣದ ಕಲ್ಪನೆಗಳನ್ನು ಅಳವಡಿಸಿಕೊಂಡು ಕಲಾರಾಧನೆಯ ಅಂಶಗಳು ಸಾಮಾಜಿಕ ಆಚರಣೆಗಳಲ್ಲಿ ಮೊದಲ್ಗೊಂಡಿತು. ಸಂಭ್ರಮದ ಆಚರಣೆಗಳಲ್ಲಿ ಹಾಡು–ಶೇಡಿಗಳು, ಮಹಿಳೆಯರ ಸಂಸ್ಕೃತಿಗಳಾಗಿ, ಭಜನೆ – ಕುಣಿತಗಳು ಪುರುಷರ ಧಾರ್ಮಿಕ ಕಲೆಗಳಾಗಿ ಹೊರಹೊಮ್ಮಿದವು. ಸಂಕಷ್ಟಗಳಲ್ಲಿ ಹರಕೆ, ದೈವಿ ಆರಾಧನೆ ಸಾಮೂಹಿಕಗೊಂಡು ತಾಂತ್ರಿಕರ ಪ್ರಭಾವದಿಂದ ಹಬ್ಬ ಹರಿದಿನಗಳು ಸಾಮೂಹಿಕವಾಗಿ ಆಚರಿಸಲ್ಪಟ್ಟವು.

ದೇವತರಾಧಾನೆಯಲ್ಲಿ ಆಳವಾದ ನಂಬಿಕೆಯನ್ನು ಹೊಂದಿ ತಾವು ನೆಲೆಸಿದ ನೆಲೆಗಳಲ್ಲಿ ಶಕ್ತಿಪೂಜೆ, ಗಣಪತಿ, ಶಿವನಪೂಜೆಯನ್ನು ಕೈಗೊಂಡರು. ಹದಿನಾರು ಗ್ರಾಮಗಳ ದೇವಾಲಯ ಆಡಳಿತಕ್ಕಾಗಿಯೇ ಸಭಾಹಿತರನ್ನು ನಿಯಮಿಸಿದ್ದ ದಾಖಲೆಗಳು ದೇವಾಲಯಗಳ ಇತಿಹಾಸದಿಂದ ತಿಳಿದು ಬರುತ್ತದೆ.[೧೭]

ಕದಂಬ ಅರಸರ ಅಣತಿಯಂತೆ ಹತ್ತು ದುರ್ಗಾಸ್ಥಾನಗಳು, ಐದು ಶಿವ, ಗಣಪತಿ ಸ್ಥಾನಗಳಾಗಿ ವಿಂಗಡಿಸಿ ಬಿಟ್ಟುಕೊಡಲಾಯಿತು. ಇದರಿಂದಲೆ ಹವ್ಯಕರ ನೆಲೆಯಲ್ಲಿ ದುರ್ಗಿ, ಶಿವ, ಗಣಪತಿ

೧೭. ಕ್ಷೇತ್ರ ಕಾರ್ಯ – ಇಡಗುಂಜಿ – ನೋ. ಅನುಬಂಧ

ದೇವಾಲಯಗಳು ಇಂದಿಗೂ ಆರಾಧಿಸಲ್ಪಡುತ್ತಿದೆ. ಗಣಪತಿಯನ್ನು ಎಲ್ಲದಕ್ಕೂ ಮೊದಲು ಪೂಜಿಸುವ ದೈವವಾಗಿ ಹವ್ಯಕರ ಆಚರಣೆಗಳಲ್ಲಿ ವಿಶೇಷವಾಗಿ ಕಾಣುತ್ತೇವೆ. ಹೆಂಗಸರ ಹಾಡುಗಳು, ಶೋಭಾನೆಗಳಲ್ಲೂ ಗಣಪತಿಯು ಮೊದಲ ಪೂಜೆಯ ದೇವರಾಗಿಯೆ ಆರಾಧಿಸಲ್ಪಟ್ಟಿದೆ. ಗೋಕರ್ಣದಿಂದ ಕೇರಳದ ಕಾಸರಗೋಡಿನವರೆಗೂ ಇರುವ ಗಣಪತಿ ದೇವಾಲಯಗಳು ಯಕ್ಷಗಾನ ಕಲಾಕೇಂದ್ರಗಳಾಗಿಯೆ ಉಳಿದುಕೊಂಡಿವೆ.[೧೮] ಅಗ್ರಹಾರಗಳು ಮತ್ತು ದೇವಾಲಯಗಳು ಯಕ್ಷಗಾನ ಅಭ್ಯಾಸದ ಕೇಂದ್ರಗಳಾಗಿದ್ದವು. ಐಗಳ ಮಠದಲ್ಲಿ ವೇದಾಧ್ಯಯನದೊಂದಿಗೆ ಯಕ್ಷಗಾನ ಪ್ರಸಂಗಗಳನ್ನು ಕಂಠಪಾಠ ಮಾಡಿಸುವ ಪದ್ಧತಿ ಇತ್ತು. ಯಕ್ಷಗಾನ, ನಿತ್ಯ ನೈಮಿತ್ತಿಕ ಕಾಮ್ಯ ಕರ್ಮ, ಸಾಹಿತ್ಯ, ಭಜನೆ ಪ್ರಸಂಗಗಳ ಆರಂಭದಲ್ಲಿ ಸ್ತುತಿಸಲ್ಪಡುವ ವಿಘ್ನೇಶನ ಆರಾಧನೆ ಹವ್ಯಕರಲ್ಲಿ ನೆಲೆಗೊಂಡಿತ್ತು. ಹವ್ಯಕರ ನೆಲೆಗಳು ಯಕ್ಷಗಾನ ನೆಲೆಗಳಾಗುವುದಕ್ಕೆ ವಿದ್ಯಾಕೇಂದ್ರಗಳು ಕಾರಣವಾಯಿತು. ಇದರಿಂದ ದೇವಾಲಯಗಳು ಕಲಾಕೇಂದ್ರವಾಗಿ ಕಲಾಪ್ರಸಾರ ಕೇಂದ್ರವಾಯಿತು.

೨.೩. ಜೀವನ ವ್ಯವಸ್ಥೆ

ಹವ್ಯಕರು ಮೂಲತಃ ಗ್ರಾಮ ವಾಸಿಗಳು. ಕಾನನದ ನಡುವೆ ಕೃಷಿಯನ್ನು ಕೈಗೊಂಡು ಜೀವನ ವ್ಯವಸ್ಥೆ ರೂಪಿಸಿಕೊಂಡವರಾಗಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಬೇಸಾಯದಲ್ಲಿ ತೋಟದ ಬೇಸಾಯವೇ ಹವ್ಯಕರಿಗೆ ಒಲವಿದೆ. ಈ ವ್ಯವಸಾಯದ ಲಾಭ ನಷ್ಟಗಳನ್ನು ಸಹಿಸುತ್ತಲೆ ಅದನ್ನೇ ನಂಬಿಕೊಂಡು ಬಂದಿದ್ದರಿಂದ ಹವ್ಯಕರ ಜೀವನ ವ್ಯವಸ್ಥೆಯಲ್ಲಿ ಶ್ರಮ ಜೀವನವೇ ಪ್ರಧಾನವಾಯಿತು. ತೋಟದ ಬೇಸಾಯದ ಕೊಟ್ಟೆಕೊನೆ, ಆಧುನಿಕ ಸಲಕರಣೆಗಳ ಕೊರತೆಯಿಂದ ಹೊರೆಹೊರುವ ಕೆಲಸದಿಂದ ದಣಿದ ಬದುಕಿಗೆ ಯಕ್ಷಗಾನ ಕಲೆ ಪಥ್ಯವೆನಿಸಿತು.

ವೈದಿಕಾಚರಣೆಗಾಗಿ ಹವ್ಯಕರನ್ನು ನಿಯಮಿಸಿದರೂ ಅದು ಉಪ ಜೀವಿಕೆಯಾಗಿಯೆ ಉಳಿಯುವಂತಾಯಿತು. ಕುಟುಂಬ ನಿರ್ವಹಣೆ ಕಠಿಣವಾದ ಕಾಲದಲ್ಲಿ ಜೀವನ ನಿರ್ವಹಣೆಗಾಗಿ ತೋಟವನ್ನು ಅವಲಂಬಿಸಬೇಕಾಯಿತು.

ಅವಿಭಕ್ತ ಕುಟುಂಬ ಪದ್ಧತಿಯು ಸಮಾಜದ ವ್ಯವಸ್ಥೆಯಾದ ಅಂದಿನ ದಿನದಲ್ಲಿ ಕುಲಗೌರವಕ್ಕಾಗಿ ಎಲ್ಲರೂ ಸ್ವಹಿತ ತ್ಯಾಗ ಮಾಡಬೇಕಾದ ಅನಿವಾರ್ಯತೆ ಇತ್ತು. ಮನೆಯ ಯಜಮಾನ ಹೊರ ವ್ಯವಹಾರಗಳಲ್ಲಿ ತೊಡಗಿಕೊಂಡರೆ ಉಳಿದವರು ಅವನಿಗೆ ಸಹಕಾರಿಗಳಾಗಿರಬೇಕು. ಸ್ತ್ರೀಯರು ಮನೆವಾರ್ತೆಗೆ ಸೀಮಿತವಾಗಿರುವುದು, ಒಳ ಮನೆಯಲ್ಲೇ ಕಾಲ ಕಳೆಯುವುದು ಸಾಮಾನ್ಯವಾಗಿತ್ತು.

ವಾರ್ಷಿಕವಾಗಿ ಆಚರಿಸುವ ಹಬ್ಬಹರಿದಿನಗಳು ಮತ್ತು ಪಿತೃ ಕಾರ್ಯಗಳು ಸಾಮಾಜಿಕವಾಗಿ ವಿವಾಹ, ಉಪನಯನಗಳನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ಇಲ್ಲಿಯೂ ದೇವರಾತಾಧನೆ, ಪೂಜೆ, ವಿವಿಧ ಚಡಂಗಗಳಲ್ಲಿ ತೊಡಗಿಸಿಕೊಳ್ಳುವುದೆ ಪ್ರಮುಖ ಉದ್ದೇಶವಾಗಿತ್ತು. ಹವ್ಯಕರು ಆತಿಥ್ಯಕ್ಕೆ ಹೆಸರಾದವರು. ನೆಂಟರಿಷ್ಟರನ್ನು, ಬಳಗವನ್ನು ಕರೆದು ಉಣಬಡಿಸಿ ಸಂತಸಪಡಿಸುವುದು ಉದ್ದೇಶವಾಗಿತ್ತು. ಸ್ತ್ರೀಯರಿಗೆ ವಿಶೇಷ ದಿನಗಳಲ್ಲಿ ಹಾಡು ಹೇಳುವುದು ಒಂದು ಸಂಪ್ರದಾಯವೇ ಆಗಿತ್ತು. ದೇವತಾ ಪೂಜೆಗಳಲ್ಲಿ

೧೮. ಕ್ಷೇತ್ರ ಕಾರ್ಯ – ಕೇರಳದ ಕಾಸರಗೋಡು

ಮಂಗಳಾರತಿ ಪದಗಳು, ದೇವರ ಸ್ತುತಿಸುವ ಹಾಡುಗಳನ್ನು ಹಾಡಿದರೆ ಮದುವೆಗಳಲ್ಲಿ ಹಾಡುವ ಹಾಡುಗಳು ಬೇರೆ, ಉಪನಯನದ ಹಾಡುಗಳೇ ಬೇರೆ. ಹೀಗೆ ಬೇರೆ ಬೇರೆ ಸನ್ನಿವೇಶಕ್ಕೆ ತಕ್ಕಂತೆ ಹಾಡು ಹೇಳುವ ಕ್ರಮ ಇಂದಿಗೂ ರೂಢಿಯಲ್ಲಿದೆ.[೧೯]

ಗಂಡಸರು ನಿತ್ಯ ಮನೆಯಲ್ಲಿ ಮುಸ್ಸಂಜೆ ಭಜನೆ ಮಾಡುವ ಪದ್ಧತಿಯನ್ನು ರೂಢಿಸಿಕೊಂಡಿದ್ದು, ಕೆಲವು ಪ್ರದೇಶಗಳಲ್ಲಿ ಮನೆಗಳಲ್ಲೂ ಆ ಆಚರಣೆಗಳಿವೆ ಮತ್ತು ಊರಿನ ಜನರೆಲ್ಲ ಸೇರಿ ಊರ ದೇವಾಲಯದಲ್ಲಿ ಕಾರ್ತೀಕ ಮಾಸದಲ್ಲಿ ತಾಳಮೇಳಗಳೊಂದಿಗೆ ಭಜನೆ ಮಾಡುವ ಕ್ರಮ ರೂಢಿಯಲ್ಲಿದೆ.[೨೦]

ಹವ್ಯಕ ಸ್ತ್ರೀಯರ ಹಾಡುಗಳು, ಪುರುಷರ ಭಜನೆಗಳು, ಯಕ್ಷಗಾನ ಕಲೆಯ ವಿಕಾಸಕ್ಕೆ ಪ್ರಮುಖವಾದ ಸೆಲೆ ಎಂಬುದನ್ನು ಶೋಭಾನೆಗಳಿಂದ ಮತ್ತು ಭಾಜನಗಬ್ಬಗಳ ಆಧಾರಗಳಿಂದ ಡಾ. ಗೋಪಾಲಕೃಷ್ಣ ಹೆಗಡೆಯವರು ದೃಢಪಡಿಸಿರುವುದಕ್ಕೆ ಇನ್ನಷ್ಟು ಆಧಾರಗಳು ದೊರೆತಂತಾಗಿದೆ. ಆದ್ದರಿಂದ ಯಕ್ಷಗಾನ ಕಲೆ ಹವ್ಯಕರ ಜೀವನ ವ್ಯವಸ್ಥೆಯ ಮೂಲದಲ್ಲಿಯೇ ನೆಲೆಗೊಂಡಿದೆ ಎಂದು ಖಚಿತಗೊಳ್ಳುತ್ತದೆ.

೨.೩.೧. ಜೀವನ ವ್ಯವಸ್ಥೆ ಅಂದು

ಹವ್ಯಕರ ಜೀವನ ವ್ಯವಸ್ಥೆಯು ಕಾಲಕಾಲಕ್ಕೆ ಬದಲಾದರೂ ಹಿಂದೆ ಸೌಲಭ್ಯಗಳಿಲ್ಲದ ನೆಲೆಗಳಲ್ಲಿ ಬದುಕು ಹೋರಾಟವಾಗಿತ್ತು. ನದಿಗಳು, ಹೊಳೆ ಹಳ್ಳಗಳು, ಗುಡ್ಡಗಳ ತಪ್ಪಲಿನಲ್ಲಿ ವಾಸವಾಗಿದ್ದ ಹವ್ಯಕರು ರಸ್ತೆ ಸಂಪರ್ಕದಿಂದ ವಂಚಿತರಾಗಿದ್ದರು. ಪಟ್ಟಣ ಪ್ರದೇಶಗಳಿಗೆ ಹೋಗಲು ಕಾಲ್ನಡಿಗೆಯ ಮೂಲಕವೇ ಸಾಗಬೇಕಾಗಿತ್ತು. ಆಧುನಿಕವಾದ ಯಾವುದೇ ಸೌಕರ್ಯಗಳು ಇರಲಿಲ್ಲ. ಇಂದಿನ ಘಟ್ಟದ ಮೇಲಿನ ಪ್ರದೇಶಗಳು, ಶರಾವತಿ ಹಿನ್ನೀರಿನ ಪ್ರದೇಶಗಳು ದುರ್ಗಮವಾಗಿಯೇ ಉಳಿದುಕೊಂಡಿದೆ. ಅಂತಹ ಹಳ್ಳಿಗಳಲ್ಲೂ ಯಕ್ಷಗಾನ ಕಲೆಯನ್ನು ಪೋಷಿಸಿದ್ದು ಹವ್ಯಕರ ಸಾಧನೆಯಾಗಿದೆ.[೨೧]

ವಿದ್ಯುತ್ ಸಂಪರ್ಕಗಳಿಲ್ಲದ ಪ್ರದೇಶಗಳಲ್ಲಿ ಹಿಲಾಲುಗಳನ್ನು ಬಳಸಿ ರಂಗಸಜ್ಜಿಕೆಗೆ ಬೆಳಕನ್ನು ವ್ಯವಸ್ಥೆಗೊಳಿಸಿದ್ದು ಅಂದಿನ ಕಾಲದ ಜನರ ಕಲಾರಾಧನೆಗೆ ಸಾಕ್ಷಿಯಾಗಿದೆ.

ತೋಟದ ಬೇಸಾಯದಿಂದ ಕುಟುಂಬ ನಿರ್ವಹಣೆಯು ಕಠಿಣವಾದ ಪರಿಸ್ಥಿತಿಯಲ್ಲಿ ತೀವ್ರ ಬಡತನವನ್ನು ಹಿಂದಿನವರು ಅನುಭವಿಸಿದ್ದಾರೆ. ಅವಿಭಕ್ತ ಕುಟುಂಬಗಳು ಪ್ರತ್ಯೇಕಗೊಳ್ಳುತ್ತ, ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಗೊಳ್ಳುತ್ತ ಹವ್ಯಕರ ನೆಲೆಗಳು ವಿಸ್ತಾರಗೊಂಡಿದೆ. ಶ್ರಮ ಜೀವನಕ್ಕೆ ಮನರಂಜನೆಯ ಯಾವುದೇ ಮಾಧ್ಯಮವಿಲ್ಲದ ಕಾರಣ ಇತಿಹಾಸ ಪುರಾಣ ಕಥಾನಕಗಳ ಯಕ್ಷಗಾನ ರಂಗ ಹವ್ಯಕರನ್ನು ಆಕರ್ಷಿಸಿತು. ಬಿಡುವಿನ ವೇಳೆಯಲ್ಲಿ ಯಕ್ಷಗಾನ ಅಭ್ಯಾಸವನ್ನು, ಜಾಗರಗಳನ್ನು ಏರ್ಪಡಿಸಿ ಕಲೆಯನ್ನು ಕಲಿಯಲು ಕಲಾವಿದರನ್ನು ಆಶ್ರಯಿಸಿದರು.

ಮೂಲ ನೆಲೆಯಿಂದ ದೂರದೂರಕ್ಕೆ ಸಾಗಿ ವಾಸಿಸಿದವರ ಊರುಗಳಿಗೆ ತಮ್ಮೊಂದಿಗೆ ತಮ್ಮ ಆರಾಧನೆಯ ಕಲೆಯನ್ನೊಯ್ದು ಕಲಾ ಪ್ರಸರಣಕ್ಕೆ ಕಾರಣವಾದರು. "ಯಕ್ಷಗಾನ ಕಲೆ ಎಲ್ಲಿಂದ

೧೯. ಕ್ಷೇತ್ರ ಕಾರ್ಯ – ರೋಹಿಣಿ ಶ್ರೀಧರರೊಂದಿಗೆ ಸಮಾಲೋಚನೆ – ಸಾಗರ

೨೦. ಕ್ಷೇತ್ರ ಕಾರ್ಯ – ವಿವಿಧ ಊರುಗಳಲ್ಲಿ

೨೧. ಕ್ಷೇತ್ರ ಕಾರ್ಯ – ಸಾಗರ ತಾಲ್ಲೂಕು

ಎಲ್ಲಿಗೆ?" ಎಂದು ಕಲೆಯ ಪ್ರಸರಣವಾಗಿದೆಯೋ ಅಲ್ಲೆಲ್ಲ ಕಲೆ ಪ್ರಸರಣಗೊಂಡಿದೆ.

೨.೩.೨. ಜೀವನ ವ್ಯವಸ್ಥೆ ಇಂದು

ಹವ್ಯಕರಲ್ಲಿ ಈಗ ಸುಶಿಕ್ಷಿತರ ಸಂಖ್ಯೆಯು ಬೆಳೆದಂತೆ ಹೊಸ ತಲೆಮಾರಿನ ಯುವಕರು ವೃತ್ತಿ ತರಬೇತಿಗಳನ್ನು ಹೊಂದಿ ಬೇರೆ ಬೇರೆ ಊರುಗಳಲ್ಲಿ ಉದ್ಯೋಗವನ್ನು ಪಡೆದಿರುತ್ತಾರೆ. ದೇಶ ವಿದೇಶಗಳವರೆಗೂ ವ್ಯಾಪಿಸಿದ್ದಾರೆ. ಆಧುನಿಕ ಜೀವನದ ಪರಿಣಾಮದಿಂದ ಮಾಧ್ಯಮ ವ್ಯವಸ್ಥೆಯು ಮನೆ ಮನೆಯಲ್ಲೂ ಮನರಂಜನೆಯ ಅನೇಕ ಸಾಧ್ಯತೆಗಳನ್ನು ತೆರೆದಿಟ್ಟಿದೆ. ಇಂದಿನ ಚಿಕ್ಕ ಕುಟುಂಬ ವ್ಯವಸ್ಥೆಯಲ್ಲಿ ಗ್ರಾಮೀಣ ಕೃಷಿ ಬದುಕಿನಿಂದ ವಿಮುಖರಾಗಿ ನಗರ ಜೀವನದತ್ತ ಒಲವು ಮೂಡಿಸಿದ್ದಾರೆ. ಹೊಸ ತಲೆಮಾರು ಉದ್ಯೋಗಕ್ಕಾಗಿ ಆಧುನಿಕ ಶಿಕ್ಷಣದ ಮಾರ್ಗವನ್ನು ಅನುಸರಿಸಿದೆ. ಪರಿಣಾಮವಾಗಿ ಹಳ್ಳಿಗಳಲ್ಲಿ ಹಿಂದೆ ಬಹು ಸಂಖ್ಯೆಯಲ್ಲಿ ನಡೆಯುತ್ತಿದ್ದ ಪ್ರದರ್ಶನಗಳು ಪಟ್ಟಣದಲ್ಲೇ ನಡೆಯುವಂತಾಗಿದೆ. ಬೆಂಗಳೂರು, ಮುಂಬೈ, ವಿದೇಶಗಳಾದ ಅಮೇರಿಕಾಗಳಲ್ಲಿ ನೆಲೆಸಿರುವ ಹೊಸ ತಲೆಮಾರಿನ ಯುವಕರು ಕಲೆಯನ್ನು ಅಲ್ಲಿಗೂ ಕೊಂಡೊಯ್ದಿದ್ದಾರೆ.

ನಗರ ಜೀವನ ಹಾಗೂ ಹೊಸ ಉದ್ಯೋಗಕ್ಕೆ ಅನುಗುಣವಾಗಿ ಸಮಯ ಮಿತಿಯಲ್ಲಿ ಯಕ್ಷಗಾನವನ್ನು ನಡೆಸುವ ಮಿತಿ ಕಲೆಗೆ ಒದಗಿ ಬಂದಿದೆ. ಹೊಸ ಆವಿಷ್ಕಾರಗಳಿಂದ ಕೂಡಿದ, ಸೌಕರ್ಯಗಳಿಂದ ಕೂಡಿದ ಭವನಗಳಲ್ಲಿ ಪ್ರದರ್ಶನಗೊಳ್ಳುವುದಕ್ಕೆ ಆರಂಭವಾಗಿದೆ. ಜೀವನ ವ್ಯವಸ್ಥೆಗನುಗುಣವಾಗಿ ಕಲೆ ಬದಲಾದ ಕ್ರಮವನ್ನು ಕಾಣಬಹುದಾಗಿದೆ.

೨.೪ ಯಕ್ಷಗಾನದ ಸೆಲೆ

ಹವ್ಯಕರ ನೆಲೆಗೊಂಡ ಪ್ರಾಚೀನ ಪ್ರದೇಶಗಳು ಮೂಲದಲ್ಲಿ ಶಕ್ತಿ, ಶಿವಗಣಪತಿ ಆರಾಧನೆಯ ಸ್ಥಾನಗಳಾಗಿದ್ದವು. ಇವುಗಳೇ ಯಕ್ಷಗಾನದ ನೆಲೆಗಳೂ ಆಗಿದೆ. ಈ ಹಿನ್ನೆಲೆಯಲ್ಲಿ ಹವ್ಯಕರ ಕುರಿತಾದ ಅಧ್ಯಯನ, ಯಕ್ಷಗಾನ ನೆಲೆಗಳ ಅಧ್ಯಯನ ಪರಸ್ಪರ ಪೂರಕವಾದುದು.

ಕನ್ನಡ ಕರಾವಳಿಯಲ್ಲಿ ಅಪಾರ ಸಂಖ್ಯೆಯ ಕಲಾರಾಧಕರನ್ನು ಹೊಂದಿರುವ ಯಕ್ಷಗಾನ ನೆಲೆಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಯಕ್ಷಗಾನದ ಮೊದಲ ವಿವೇಚನಾ ಗ್ರಂಥವೆಂದು ಗುರುತಿಸಲ್ಪಡುವ ಸೇಡಿಯಾಪು ಕೃಷ್ಣಭಟ್ಟರ ತಾಳಮದ್ದಳೆ ವಿವೇಚನೆ (೧೯೩೦)ಯಿಂದ ಆರಂಭಿಸಿ ಇಂದಿನವರೆಗೂ ಯಕ್ಷಗಾನದ ನೆಲೆ ಮತ್ತು ಮೂಲ ಸ್ವರೂಪದ ಕುರಿತು ಚರ್ಚೆಗಳು ನಡೆಯುತ್ತಲೆ ಇದೆ. ಇಂದಿಗೂ ಊಹೆಗಳು ಜೀವಂತವಾಗಿಯೇ ಉಳಿದುಕೊಂಡಿದೆ. ಆದರೆ ಉತ್ತರಕನ್ನಡ, ದಕ್ಷಿಣಕನ್ನಡ ಜಿಲ್ಲೆಗಳು ಹಾಗೂ ಮಲೆನಾಡಿನ ಭಾಗಗಳಲ್ಲಿ ಪ್ರಚಲಿತವಾಗಿ ರೂಢಿಯಿಂದ ಕರೆಯಲ್ಪಡುವ ಯಕ್ಷಗಾನ "ಆಟ", 'ಬಯಲಾಟ', "ಹರಕೆಯಾಟ", "ಪ್ರಸಂಗ", "ಕೂಟ", "ಬೈಠಕ್", "ಜಾಗರ" ಎಂಬ ವಿವಿಧ ರೂಪದಿಂದ ಆರಾಧಿಸಲ್ಪಡುವ ಈ ಪ್ರಕಾರ ಮನೆತನಗಳ ಸೊತ್ತಾಗಿ ಕಾಣಬರುತ್ತವೆ.

ಕರಾವಳಿ ಕನ್ನಡ ಜಿಲ್ಲೆಗಳಲ್ಲಿ ಯಕ್ಷಗಾನ ಕಲೆಯನ್ನು ಪರಿಶೋಧಿಸಿದಾಗ ಇದರ ಕುರುಹು ಮನೆಮನೆಗಳಲ್ಲೂ ಪುರಾಣ ಪ್ರಜ್ಞೆಯ ಪ್ರತಿರೂಪವಾಗಿ, ಸಂಸ್ಕೃತಿಯ ಫಲಿತವಾಗಿ ಕೃಷಿಕರ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಸಮಕಾಲೀನ ಬದುಕಿಗೆ ನೈತಿಕ ಆದರ್ಶವಾಗಿ, ಜೀವನ ಸಂಘರ್ಷಕ್ಕೆ ಪುರಾಣ

ನೆಲೆಗಟ್ಟಿನ ಪರಿಹಾರ ರೂಪವಾಗಿ ಆರಾಧನೆಯ ಸ್ವರೂಪದಿಂದ ದೇವಾಲಯದಲ್ಲಿ ತನ್ನ ಸಾಂಕೇತಿಕತೆಯನ್ನು ಸ್ಥಾಪಿಸಿದೆ. ಕಲಾಭಿವ್ಯಕ್ತಿಯ ಮೂಲಕ ಮನುಷ್ಯನಿಗೆ ದೇವರ, ರಾಕ್ಷಸರ ಅವತಾರವಾಗಿ ವಿಜೃಂಭಿಸುವ 'ಅವತಾರಿ ಕಲೆ' ಆರಾಧನೆ ಮತ್ತು ರಂಜನೆಯ ಉದ್ದೇಶದಿಂದಲೆ ಯಕ್ಷಗಾನವೆಂದು ಹೆಸರಾಗಿದೆ. ಆಟ ಬಯಲಾಟವೆಂದು ರೂಢಿಗೊಂಡ ಕಲೆಯ ಹಿನ್ನೆಲೆ ಏನು ಎಂಬುದು ಕರಾವಳಿ ಜಿಲ್ಲೆಯ ಮನೆಗಳನ್ನು ಸಂದರ್ಶಿಸಿದಾಗ ದೊರಕುವ ದಾಖಲೆಗಳು ವಾಸ್ತವಿಕ ಸತ್ಯವನ್ನು ಹೊರಗೆಡಹುತ್ತದೆ. ಯಕ್ಷಗಾನದ ಕಿರೀಟಗಳ ಪೂಜೆ, ಕಲಾವಿದರ ಶೈಲಿಯ ವರ್ಣನೆಗಳು ರಂಗಭೂಮಿಗೆ ಸಂಬಂಧಿಸಿದ್ದು. ವೈಚಾರಿಕರು ಶೋಧಿಸುವ ಇತಿಹಾಸ ಪ್ರಸಂಗ ಸಾಹಿತ್ಯಕ್ಕೆ ಸಂಬಂಧಿಸಿದ್ದು. "ಪ್ರಸಂಗ ಸಾಹಿತ್ಯ ಮೂಲವನ್ನು ಶೋಧಿಸುವಾಗ ದಕ್ಷಿಣ ಭಾರತದ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ತಂಜಾವೂರು, ಮಹಾರಾಷ್ಟ್ರಗಳಲ್ಲೂ ಆಧಾರಗಳು ದೊರೆತಿವೆ. ಕರ್ನಾಟಕದ ಪ್ರಸಂಗಗಳು, ತಾಳೆಗರಿಗಳಲ್ಲಿ ಕೆಳದಿ, ಹಂಪಿ, ಧಾರವಾಡ, ಬೆಂಗಳೂರು, ಉಡುಪಿ, ಮೇಲುಕೋಟೆ ಮುಂತಾದ ಸಂಗ್ರಹಾಲಯದಲ್ಲಿ ದೊರಕಿದೆ. ದಕ್ಷಿಣ ಭಾರತದಲ್ಲಿ ವ್ಯಾಪಕವಾಗಿ ಬೆಳೆದು ಬಂದ ಸಾಹಿತ್ಯ ಪ್ರಕಾರವಾಗಿ ಕಂಡುಬರುತ್ತದೆ. ಕೆಲವು ಕಥಾಪ್ರಸಂಗಗಳು ಕನ್ನಡದಲ್ಲಿ ಶರಣಸಾಹಿತ್ಯ ಪ್ರಭಾವದಿಂದಲೂ ರಚನೆಗೊಂಡ ಸಾಧ್ಯತೆಯಿದೆ ಎಂದು ಊಹಿಸಲಾಗಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಅಳಿಯ ಲಿಂಗರಾಜು ಕನ್ನಡ ಜಿಲ್ಲೆಗಳ ಸಂಪರ್ಕದಿಂದ ಯಕ್ಷಗಾನ ಕೃತಿಗಳನ್ನು ರಚಿಸಿದ ದಾಖಲೆಯಿದೆ. ಯಕ್ಷಗಾನ ಪ್ರಸಂಗ ಸಾಹಿತ್ಯಗಳು ಇಷ್ಟು ವಿಸ್ತಾರವಾದ ಹರವನ್ನು ಹೊಂದಿದ್ದರೂ ಅದರ ಕಾಲಾನುಕ್ರಮದಿಂದ ಆದಿಪರ್ವವೆ ಮೊದಲು ರಚನೆಗೊಂಡಿದ್ದು ಎಂದು ಪ್ರಸಂಗದ ರಚನಾ ವಿಧಾನವನ್ನು ಶೋಧಿಸಿ ಹೇಳಲಾಗಿದೆ. ಇದನ್ನು ರಚಿಸಿದ ಕವಿ ಉತ್ತರಕನ್ನಡದವನಾಗಿದ್ದು, ಹವ್ಯಕ ಕವಿಯು ರಚನೆಕಾರ ಎಂದು ನಿರ್ಣಯಿಸಿದ್ದಾರೆ."[೨೨]

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲೆ ರಚನೆಗೊಂಡರೂ ಎಲ್ಲವೂ ರಂಗ ಕೃತಿಗಳಾಗಿಲ್ಲ. ಇದರಿಂದ ಪ್ರಸಂಗ ಕೃತಿ ಮತ್ತು ಬಯಲಾಟವನ್ನು ಸಾಮಾನ್ಯೀಕರಿಸಲು ಸಾಧ್ಯವಿಲ್ಲ. ಪ್ರಸಂಗಗಳು ಎಲ್ಲೇ ಲಭ್ಯವಾಗಿದ್ದರೂ ಬಯಲಾಟ ಎಂದು ಗುರುತಿಸುವ ಕಲೆ ಕರಾವಳಿಗೆ ಸೀಮಿತವಾಗಿತ್ತು ಎಂದು ಅರಿವಾಗುತ್ತದೆ. ಯಕ್ಷಗಾನ ರಂಗಭೂಮಿಯ ಅತ್ಯಂತ ಪ್ರಧಾನವಾದ ಭಾವನೆಯೆಂದರೆ ಭಕ್ತಿ. ಯಕ್ಷಗಾನದ ಕಿರೀಟ ಪೂಜನೀಯವಾದುದು. ಕಲಾವಿದ ಮೇಳಾರಂಭದಲ್ಲಿ ವಾರ್ಷಿಕವಾಗಿ ಗಣಪತಿಗೆ ಪೂಜೆ ಸಲ್ಲಿಸುವುದು ರೂಢಿಯಾಗಿದೆ. ಸಂಚಾಲಕರು ಮೇಳದ ಮೊದಲ ಆಟವನ್ನು ದೇವಾಲಯದಲ್ಲೆ ನಡೆಸುತ್ತಾರೆ. ಮೇಳಕ್ಕೆ ಕ್ಷೇತ್ರದ ದೇವರ ಹೆಸರು ಸಾಮಾನ್ಯವಾದುದು. ಅದರಲ್ಲಿ ಬಹುತೇಕ ಮೇಳಗಳು "ಮಹಾಗಣಪತಿಯ" ಹೆಸರಿನಲ್ಲೆ ಉಳಿದುಕೊಂಡಿದೆ. ನಂತರ ಶಕ್ತಿ ಸ್ವರೂಪ ಆರಾಧನೆ, ದುರ್ಗೆಯ ಆರಾಧನೆಯ "ದುರ್ಗಾಂಬಾ ಮಂಡಳಿ"ಗಳಿವೆ. ಉತ್ತರಕನ್ನಡದಲ್ಲಿ ಇಡಗುಂಜಿಯ ಗಣಪತಿ ಯಕ್ಷಗಾನ ಪ್ರಿಯ, ಇತರ ದೇವಾಲಯಗಳ ಹರಕೆ ಮೇಳವಿದ್ದರು ಯಕ್ಷಗಾನ ಆರಂಭದಲ್ಲಿ ಗಣಪತಿಗೆ ಅಗ್ರ ಪೂಜೆ. ಗೋಕರ್ಣದಿಂದ ಮಧೂರಿನವರೆಗಿನ ಪ್ರದೇಶದಲ್ಲಿ ಗಣಪತಿ ದೇವಾಲಯಗಳೇ ಹೆಚ್ಚು.[೨೩]

ಯಕ್ಷಗಾನ ಕಲಾವಿದ ಕೆರೆಮನೆ ಶಿವರಾಮ ಹೆಗಡೆಯವರು "ನಮ್ಮ ಸೀಮೆಯಲ್ಲಿ ಯಾರೇ

೨೨. ಹೊಸ್ತೋಟ ಮಂಜುನಾಥ ಭಾಗವತರೊಂದಿಗೆ ಚರ್ಚಿಸಿದೆ.
೨೩. ಕಾರ್ಯಕ್ಷೇತ್ರ – ಮಧೂರು, ಕಾಸರಗೋಡು

ಮೇಳ ಮಾಡಲಿ ಯಾವ ಕಾಲದಲ್ಲಿಯೇ ಮಾಡಲಿ ಇಡಗುಂಜಿ ದೇವರ ಹೆಸರಿನಲ್ಲಿಯೆ ಮೇಳ ಮಾಡುತ್ತಿದ್ದರು. ಮೇಲಾಗಿ ಅಲ್ಲಿಯ ಮೊದಲು ಸೇವೆಯ ಹರಕೆ ಆಟ ಆಡಿ ಅಲ್ಲಿಂದಲೆ ತಿರುಗಾಟ ಹೊರಡುತ್ತಿದ್ದರು. ಅವನ ಅಂದರೆ, ಇಡಗುಂಜಿ ದೇವರ ಹೆಸರಿಡುವುದೇ ಸೂಕ್ತವೆಂದು ಭಾವಿಸುತ್ತಿದ್ದರು. ಅವನೂ ಭಾರಿ ಆಟದ ಹುಚ್ಚಿದ್ದವ ಎಂದು ಇವತ್ತಿಗೂ ನನ್ನ ಭಾವನೆ. ಅವನ ಹೆಸರಿನಲ್ಲಿ ನಿರಂತರವಾಗಿ ಮೇಳ ನಡೆದುಕೊಂಡು ಬಂದ ಹಾಗೆ ಕಾಣುತ್ತದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದು ಇಂದಿಗೂ ಆಚರಿಸಲ್ಪಡುತ್ತಿದೆ.

"ಖ್ಯಾತ ಇತಿಹಾಸಕಾರ ಮತ್ತು ಪುರಾತತ್ವ ತಜ್ಞ ಡಾ. ಅ. ಸುಂದರ ಇವರು ೧೯೭೦ರ ದಶಕದಲ್ಲಿ ಹೈಗುಂದ ಸ್ಥಳ ಸಮೀಕ್ಷೆ ನಡೆಸಿದಾಗ ಕಂಡು ಬರುವ ದೊಡ್ಡ ಯಕ್ಷ ೧೭೦ ಸೆ.ಮಿ., ಸಣ್ಣ ಯಕ್ಷ ೬೫ ಸೆ.ಮೀ. ಸೂರ್ಯ ೧೭೦ ಸೆ.ಮೀ. ಅಳತೆಯ ಮೂರ್ತಿಗಳನ್ನು ದಾಖಲಿಸಿದ್ದಾರೆ." ಡಾ. ಅನಿಲ್ ಗುಪ್ತ ಈ ಭವ್ಯ ಯಕ್ಷನ ವಿಗ್ರಹವು ೪–೫ನೆ ಶತಮಾನದ್ದೆಂದು ಊಹಿಸಿದ್ದಾರೆ. ಶರಾವತಿ ನದಿ ತೀರದ ಪುರಾತತ್ವ ಆಧಾರಗಳಲ್ಲಿ ಯಕ್ಷ ಮೂರ್ತಿಗಳು, ಯಜ್ಞ ಕುಂಡದ ಅವಶೇಷಗಳು ದೊರೆತಿವೆ. ಈ ಎಲ್ಲಾ ಆಧಾರಗಳಿಂದಲೂ ಯಕ್ಷಾರಾಧನೆಯು ಈ ಪ್ರದೇಶದಲ್ಲಿ ಹಿಂದಿನಿಂದಲೂ ನಡೆದು ಬಂದಿದೆ ಎಂದು ದೃಢಗೊಳಿಸಲು ಸಾಧ್ಯ.[೨೪]

೨.೪.೧. ಯಕ್ಷಾರಾಧನೆಯ ಯಕ್ಷ ಪ್ರಶ್ನೆ

'ಯಕ್ಷಗಾನ' ಸಮಸ್ತ ಪದದ ಕುರಿತು ಅನೇಕ ವಿದ್ವಾಂಸರು ಬೇರೆ ಬೇರೆಯಾದ ಅಭಿಪ್ರಾಯವನ್ನು ತಳೆದಿದ್ದಾರೆ. ಮುಳಿಯ ತಿಮ್ಮಪ್ಪಯ್ಯನವರು "ಯಕ್ಷ ಎಂದರೆ ಯಜ್ಞ ಮಾಡುವಾತನು ಅಥವಾ ಪೂಜಿಸುವಾತನು" ಎಂಬ ಅರ್ಥವೆ ಸಕಾರಣವಾದುದು. ಯಕ್ಷ ಶಬ್ದಕ್ಕೆ ಅರ್ಥ ಹಚ್ಚಲು "ಗಂಧರ್ವಗಾನ – ಯಕ್ಷಗಾನ, ಏಕಲಗಾನ, ಎಕ್ಕಳಗಾನ, ಯಕ್ಕ – ಜಕ್ಕ ಇತ್ಯಾದಿ[೨೫] ಪದಗಳನ್ನು ಊಹಿಸಿದ್ದಾರೆ. ಯಕ್ಷೋಪಾಸನೆ ಬೌದ್ಧರು, ಜೈನರಲ್ಲೂ ರೂಢಿಯಲ್ಲಿದೆ. "ಯಕ್ಷರಾಧನೆಯನ್ನು ಸಿಂಹಳದಲ್ಲಿಯೂ ಜನಪದ ಮತೀಯ ನೃತ್ಯ ಪದ್ಧತಿಯಲ್ಲಿ ಪರಾಂಬರಿಸಬಹುದು.[೨೬] ಈ ಎಲ್ಲ ಸಂಗತಿಗಳು ಯಕ್ಷರಾಧನೆಯು ರೂಢಿಯಲ್ಲಿರುವುದನ್ನು ತಿಳಿಸುತ್ತದೆ. ಆದರೆ ಯಕ್ಷಾರಾಧನೆಯ ಕ್ರಮ ಮತ್ತು ಯಕ್ಷಗಾನಕ್ಕೂ ಯಾವ ಸಂಬಂಧವಿದೆ? ಎಂಬುದನ್ನು ಖಚಿತವಾಗಿ ಹೇಳಲಿಲ್ಲ.

ಉತ್ತರಕನ್ನಡ ದೇವಾಲಯಗಳಲ್ಲಿನ ಮೂರ್ತಿ ಶಿಲ್ಪ ಮತ್ತು ಯಕ್ಷ ಗಣಪತಿಯ ಆರಾಧನೆಯ ಕುರಿತು ಡಾ. ಜಿ.ಎಲ್. ಹೆಗಡೆಯವರು ಸಂಶೋಧಿಸಿರುವುದು ಯಕ್ಷಾರಾಧನೆ ಮತ್ತು ಯಕ್ಷಗಾನದ ಸಂಬಂಧವನ್ನು ಸುಸ್ಪಷ್ಟಗೊಳಿಸಿದೆ. ಕರ್ನಾಟಕದ ಕರಾವಳಿಯ ಯಕ್ಷಗಾನ ಕಲೆಯನ್ನು ಆರಾಧಿಸುವಲ್ಲಿ ಸಾಕಷ್ಟು ತಾತ್ವಿಕವಾದ ನೆಲೆಗಳಿವೆ. ಈ ಭೂ ಭಾಗದಲ್ಲಿರುವ ದೇವಾಲಯಗಳಲ್ಲಿ ಅದರ ಮೂಲ ಕಲ್ಪನೆಯಿದೆ. ಯಕ್ಷಗಾನವು ಉಳಿದ ಕಲೆಗಳಿಗಿಂತ ಭಿನ್ನವಾಗಿ ರಹಸ್ಯವಾದ ಸಾಂಕೇತಿಕತೆಯನ್ನು

೨೪. ಹವ್ಯಕ ಮಾಸ ಪತ್ರಿಕೆ – ಮೇ ೨೦೧೨ – ಹೈಗುಂದ ಹವ್ಯಕರ ಮೂಲವಲ್ಲ ನೆಲೆ ಹೌದು – ಲೇಖಾಂಕ ೧೦೮ – ಪುಟ ೩೦.

೨೫. ಯಕ್ಷಾಂದೋಳ – ಅಮೃತ ಸೋಮೇಶ್ವರ – ಪುಟ ೫

೨೬. ಯಕ್ಷಗಾನ ವರ್ಣ ವೈಭವ – ಡಾ. ಜಿ.ಎಲ್. ಹೆಗಡೆ – ಪುಟ ೬

ಹೊಂದಿದೆ. ದೇವಾಲಯಗಳಲ್ಲಿ ಪೂಜಾ ವಿಧಾನಗಳ ಮೂಲಕ ಆರಾಧಿಸಲ್ಪಡುವ ಕಾಲದಲ್ಲಿ "ದೇವಾಲಯದ ಕೂಸಾಗಿತ್ತು ಕಲೆ"[೨೭] ಎಂದು ಹೇಳಲಾಗಿದೆ. ಯಕ್ಷಗಾನದಲ್ಲಿ ಆರಾಧಿಸುವ ಗಣಪತಿ ಯಕ್ಷಗಾನದ ಅಧಿದೈವ; "ಕನ್ನಡ ಕರಾವಳಿ ಅದರಲ್ಲೂ ಉತ್ತರಕನ್ನಡದ ಕರಾವಳಿ ಗಾಣಪತ್ಯದ ಪ್ರಾಚೀನ ಕೇಂದ್ರ" ಯಕ್ಷಗಾನ ಮತ್ತು ಗಾಣಪತ್ಯ ನೆಲೆಯ ಸಂಬಂಧವು ಖಚಿತವಾಗಿ ಯಕ್ಷಗಾನ ಕಲೆಯ ಮೂಲವನ್ನು ದೃಢಗೊಳಿಸುತ್ತದೆ.

೨.೪೨. ಯಕ್ಷಗಣಪತಿ : "ಕರ್ನಾಟಕದಲ್ಲಿನ ಗಾಣಪತ್ಯ ಪಂತದ ಹಳೆಯ ಸ್ಥಾನವೆಂದು ವಿಶಿಷ್ಟವಾದ ದ್ವಿಭುಜವುಳ್ಳ ನಿಂತ ಭಂಗಿಯ ಗಣಪತಿಯನ್ನುಳ್ಳ ಗೋಕರ್ಣ ಹಾಗೂ ಇಡುಗುಂಜಿಗಳನ್ನು" ಕ್ರಿ.ಶ. ೨-೩ನೇ ಶತಮಾನದ ಈ ಗಣಪತಿ ವಿಗ್ರಹದ ವಿಶೇಷ ಲಕ್ಷಣಗಳ ಆಧಾರದಿಂದ "ಕುಬ್ಜಯಕ್ಷ" ಎಂದು ನಿರ್ಣಯಿಸಿದೆ. ಗಣಪತಿಯ ಯಕ್ಷ ಎಂದು ಸಹಸ್ರನಾಮಗಳಲ್ಲಿ ಕರೆಸಿಕೊಂಡಿದ್ದಾನೆ. ಯಕ್ಷಗಾನದ ಅಧಿದೇವತೆಯಾದ ಗಣಪತಿಯ ಆರಾಧನೆಯೆ ಈ ಕಲೆಯಾದ್ದರಿಂದ ಯಕ್ಷಗಾನ ಕಲೆಎಂದು ಕರೆಯುವುದು ಸಮಂಜಸವಾಗಿದೆ.

"ಸಂಗೀತದ ಮುಖ್ಯ ಅಂಶಗಳಾದ ನಾದ, ಶೃತಿ, ಸ್ವರ, ಮೂರ್ಛನಾ, ತಾನ, ವರ್ಣ, ಅಲಂಕಾರ, ಗಮಕ, ರಾಗ, ತಾಳ, ಭಾವ ಎಲ್ಲವೂ ಗೌರಿಗಣೇಶ ವಿಗ್ರಹಗಳಲ್ಲಿ ಸೂಚಿತವಾಗಿದೆ."[೨೮] ಯಕ್ಷ ಗಣಪತಿಯ ಆರಾಧನೆಯ ಮೂಲದಿಂದಲೇ ಯಕ್ಷಗಾನದಲ್ಲಿ ಬಳಸುವ ಕಿರೀಟವನ್ನು ಪೂಜಿಸುವ ಪದ್ಧತಿ ಕೆಲವು ಮನೆತನಗಳಲ್ಲಿ ಬೆಳೆದು ಬಂದಿದೆ.

೨.೪.೩. ಗಣಪತಿ ಕಿರೀಟ : ಯಕ್ಷಗಾನ ಕಿರೀಟವನ್ನು ಪೂಜ್ಯ ಭಾವನೆಯಿಂದ ಕಾಣುವ ಪದ್ಧತಿ ಹವ್ಯಕರಲ್ಲಿದೆ. ಈ ಕಿರೀಟ ರಚನೆಯ ಕಲಶ, ಇಕ್ಕೆಲಗಳ ಆನೆಸೊಂಡಿಲ ಆಕೃತಿಯ ಜೋಡಣೆಯನ್ನು ಹೊಂದಿದೆ. "ದ್ವಿಮುಖ ಗಣಪತಿಯ ನೆನಪಿಸುವ ಕಾಷ್ಟಶಿಲ್ಪವು ವನಸ್ಪತಿ ಮೂಲದ ಯಕ್ಕೆ ಗಣಪತಿಯನ್ನು ಸಂಕೇತಿಸುತ್ತವೆ."[೨೯]

ಯಕ್ಷಗಾನ ನೆಲೆಗಳಲ್ಲಿ ಕಿರೀಟ ಪೂಜಿಸುವ ಮನೆತನಗಳನ್ನು ಸಂದರ್ಶಿಸಿದಾಗ ಈ ಪದ್ಧತಿ ತಲೆಮಾರುಗಳ ಹಿಂದಿನಿಂದ ನಡೆದುಕೊಂಡು ಬಂದಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಹಿಂದಿನ ತಲೆಮಾರಿನ ಕಲಾವಿದರು ಈ ತಾಂತ್ರಿಕ ರಹಸ್ಯವನ್ನರಿತು ಪೂಜಿಸುವ ಕ್ರಮವನ್ನು ರೂಢಿಸಿಕೊಂಡರು.

ಯಕ್ಷಗಾನದ ಕಿರೀಟವನ್ನು ಮನೆಯ ದೇವರ ಪೀಠದಲ್ಲಿ ಇಟ್ಟು ಪೂಜಿಸುವ ಪರಂಪರೆಯನ್ನು ಹೊಂದಿದ ಮನೆಗಳನ್ನು ಹವ್ಯಕರ ನೆಲೆಗಳಲ್ಲಿ ಕಾಣುತ್ತೇವೆ. ಇದರಿಂದ ಡಾ. ಗೋಪಾಲಕೃಷ್ಣ ಹೆಗಡೆಯವರು ಶೋಧಿಸಿದ ಯಕ್ಷಾರಾಧನೆಯ ತತ್ತ್ವದ ಯಕ್ಷಗಾನದ ಹಿನ್ನೆಲೆಗೆ ಇನ್ನಷ್ಟು ಆಧಾರ ದೊರೆತಂತಾಗುತ್ತದೆ.

೨.೪.೪ ಗುಂಡಿಬೈಲು : ಸುಮಾರು ೪ ಶತಮಾನದ ಹಿಂದೆ ಯಕ್ಷಗಾನದಲ್ಲಿ ಬಳಸುತ್ತಿದ್ದ ಕಿರೀಟವನ್ನು ಗುಂಡಿಬೈಲು ನಾರಾಯಣಭಟ್ಟರ ಮನೆಯಲ್ಲಿ ಪೂಜಿಸುತ್ತಿದ್ದಾರೆ. ಉತ್ತರಕನ್ನಡ ಯಕ್ಷಗಾನ ಪರಂಪರೆಯಲ್ಲಿ

---

೨೭. ಯಕ್ಷಗಾನ ವರ್ಣ ವೈಭವ – ಪುಟ ೮ – ಡಾ. ಜಿ.ಎಲ್. ಹೆಗಡೆ

೨೮. ಯಕ್ಷಗಾನ ವರ್ಣ ವೈಭವ – ಪುಟ ೧೨ – ಡಾ. ಜಿ.ಎಲ್. ಹೆಗಡೆ

೨೯. ಯಕ್ಷಗಾನ ವರ್ಣ ವೈಭವ – ಪುಟ ೮ – ಡಾ. ಜಿ.ಎಲ್. ಹೆಗಡೆ

ಅಣ್ಣುಹಿತ್ಲು ಸದಾನಂದ ಹೆಗಡೆ, ಕುಶಾಲ ಹೆಗಡೆ ಅತ್ಯಂತ ಹಿರಿಯರಲ್ಲೊಬ್ಬರು. ಅವರು ಬಳಸಿದ ಕಿರೀಟವನ್ನು ಮೂಡ್ಕಣಿ ನಾರಾಯಣ ಹೆಗಡೆಯವರು ಧರಿಸಿದ್ದರು. ಅದು ಮುಂದೆ ಮಾಳ್ಕೋಡ್ ಗಣಪ ಹೆಗಡೆಯವರ ಮೂಲಕ ಗುಂಡಿಬೈಲು ಗಣೇಶ ಭಟ್ಟರಿಗೆ ಪ್ರಾಪ್ತವಾಯಿತು. ಅವರಿಗೆ ಕೆಕ್ಕಾರು ಗಣೇಶಭಟ್ಟರು ಎಂದು ಹೆಸರಿತ್ತು. ಅವರ ಸಹೋದರ ಗುಂಡಿಬೈಲು ವಿಷ್ಣುಭಟ್ಟರು ಈ ಕಿರೀಟವನ್ನು ಬಳಸಿದರು. ಅವರಿಂದ ಈಗ ಗುಂಡಿಬೈಲು ನಾರಾಯಣ ಭಟ್ಟರಲ್ಲಿ ಉಳಿದುಕೊಂಡ ಕಿರೀಟ ಅವರ ಮನೆಯ ಪೂಜಾಗೃಹದಲ್ಲಿ ಪೂಜೆಗೊಳ್ಳುತ್ತಿದೆ. ಇವರು ಹದಿನೇಳು ವರ್ಷಗಳ ಕಾಲ ಅಂದರೆ ೧೯೮೬ ರಿಂದ ೨೦೦೪ರವರೆಗೆ ಗುಂಡಬಾಳಾ ಮೇಳದ ಸಂಚಾಲಕರಾಗಿ, ಕಲಾವಿದರಾಗಿ ಮೇಳವನ್ನು ನಡೆಸಿದರು.[೩೦]

೨.೪.೫. ಅಣಲಗಾರ : ಯಲ್ಲಾಪುರ ತಾಲ್ಲೂಕಿನಲ್ಲಿ ನಾಲ್ಕು ತಲೆಮಾರುಗಳ ಹಿಂದಿನಿಂದ ಯಕ್ಷಗಾನವನ್ನು ಆರಾಧಿಸುವ ಸಂಪ್ರದಾಯವಿದೆ. ಅಣಲಗಾರಿನ ಮಹಾಗಣಪತಿ ದೇವಾಲಯದ ಹೆಸರಿನಲ್ಲಿ ಮೇಳವಿತ್ತು. ಈಗಲೂ ಯಲ್ಲಾಪುರ ನರಸಿಂಹಭಟ್ಟರು ಸ್ಥಾಪಿಸಿದ ಮಕ್ಕಳ ಮೇಳವೊಂದಿದೆ.[೩೧]

ಅಣಲಗಾರಿನಲ್ಲಿರುವ ಮಂಗಳಾರ್ತಿ ಮನೆಯಲ್ಲಿ ಕಿರೀಟವನ್ನು ಪೂಜಿಸುವ ಪರಂಪರೆಯಿದೆ. ವರ್ತಮಾನದಲ್ಲಿ ಉದ್ಯೋಗ ನಿಮಿತ್ತ ಬೇರೆಡೆ ಸಾಗಿಹೋದ ಈ ಕುಟುಂಬದ ಸದಸ್ಯರು ಯಕ್ಷಗಾನವನ್ನು ಹವ್ಯಾಸವಾಗಿ ರೂಢಿಸಿಕೊಂಡಿದ್ದಾರೆ. ಆದರೂ ಮಂಗಳಾರ್ತಿ ಮನೆಯಲ್ಲಿರುವ ಯಕ್ಷಗಾನ ಕಿರೀಟ ಪೂಜೆಗೊಳ್ಳುತ್ತಿರುವುದು ವಾಡಿಕೆಯಾಗಿದೆ.

೨.೪.೬. ಬೆಳೆಯೂರು : ಶಿವಮೊಗ್ಗ ಜಿಲ್ಲೆಯ, ಸಾಗರ ತಾಲ್ಲೂಕಿನ ಬೆಳೆಯೂರು ಪ್ರತಿ ಮನೆ ಯಕ್ಷಗಾನದ ಪರಂಪರೆಯುಳ್ಳ ಹಳ್ಳಿ. ಈಗ ಸುಮಾರು ನೂರು ಮನೆಗಳಿರುವ ಈ ಹಳ್ಳಿಯಲ್ಲಿ ಬಹುತೇಕ ಹವ್ಯಕರೇ ನೆಲೆಸಿದ್ದಾರೆ. ಅವರಲ್ಲಿ ಎಲ್ಲಾ ಮನೆಗಳಿಗೂ ಯಕ್ಷಗಾನದ ಸಂಪರ್ಕವಿದೆ. ಈ ಊರಲ್ಲಿ ಬಿಡುವಿನ ವೇಳೆಯಲ್ಲಿ ಯಕ್ಷಗಾನದ್ದೆ ಚರ್ಚೆ, ಮಾತು ಸಾಮಾನ್ಯವಾಗಿದೆ. "ಮಕ್ಕಳನ್ನು ಆಡಿಸುವಾಗಲೂ ತೈಕುತಾ ಬಿಡ್ತಿಗೆ" ಎಂಬ ಪ್ರತೀತಿಯಿದೆ. ಇಡೀ ಊರಿಗೆ ಯಕ್ಷಗಾನವು ಒಂದು ಸ್ಮೃತಿಯಾಗಿ ಉಳಿದುಕೊಂಡಿದೆ. ಸುಮಾರು ೧೮೫೦ರಲ್ಲಿ ಈ ಊರಿನಲ್ಲಿದ್ದ ಯಕ್ಷಗಾನದ ಗೊಂಬೆಯಾಟದ ಮೇಳ ಬೆಂಕಿ ಆಕಸ್ಮಿಕದಲ್ಲಿ ಪರಿಕರಗಳೆಲ್ಲ ಸುಟ್ಟು ಹೋದವು. ಮುಂದೆ ಕಾಶ್ಯೆನ ಹೆಗಡೆ, ಕೊಲ್ಲೂರಯ್ಯನವರ ಪ್ರಯತ್ನದಿಂದ ಮೇಳ ಸ್ಥಾಪನೆಯಾಯಿತು. ಈ ತಲೆಮಾರು ಕರ್ಕಿಯ ವರದ ಹಾಸ್ಯಗಾರ, ಗುಬ್ಬಿ ಗಣಪತಿ ಹೆಗಡೆಯವರ ಸಮಕಾಲೀನರು. ಈ ಮೇಳ ಪುನರುತ್ಥಾನಗೊಂಡು ಮಹಾಗಣಪತಿ ಯಕ್ಷಗಾನ ಮಂಡಳಿ ಬೆಳೆಯೂರು ಎಂದೇ ಪ್ರಸಿದ್ಧವಾಗಿದೆ. ಮೇಳದ ಸಂಚಾಲಕರಾದ ಶ್ರೀರಂಗನಾಥ ಹಾಗೂ ಅವರ ಮಗ ಸಂಜಯ ಕಲಾವಿದರು. ಸಂಜಯ ಬೆಳೆಯೂರು ಯಕ್ಷಗಾನ ವೇಷಭೂಷಣ ತಯಾರಕರು ಹೌದು. ಇವರ ಮನೆಯ ದೇವರ ಪೀಠದಲ್ಲಿ ನಾಲ್ಕು ತಲೆಗಳಿಗಳ ಹಿಂದಿನ ಕಿರೀಟ ಮತ್ತು ಚಕ್ರ ಪೂಜೆಗೊಳ್ಳುತ್ತಿದೆ. ಚಕ್ರದ ಮೇಲೆ ಕೆತ್ತಲಾದ ಹೆಸರು ಅದರ ಲಿಪಿ ನೂರೈವತ್ತು ವರ್ಷ ಹಿಂದಿನದೆಂದು ತೋರುತ್ತದೆ. ಈ ಊರಿನ ಬೆಳೆಯೂರು ವೆಂಕಪ್ಪ ಭಾಗವತರು ಪ್ರಸಿದ್ಧರಾಗಿದ್ದರು. ದಿ॥ ಕೊಲ್ಲೂರು

೩೦. ಕಾರ್ಯಕ್ಷೇತ್ರ – ಗುಂಡಿಬೈಲು

೩೧. ಯಲ್ಲಾಪುರ ಕ್ಷೇತ್ರಕಾರ್ಯ

ಗಣೇಶಯ್ಯ ಹೆಗಡೆ, ಫಣಿರಾಮ, ದೊಡ್ರಾಯ, ಕೊಲ್ಲೂರಯ್ಯ ಮುಂತಾದವರು ಕಟ್ಟಿದ ಮೇಳದ ವೇಷಭೂಷಣಗಳು ಇಂದಿಗೂ ಇವೆ. ಇವುಗಳಲ್ಲಿ ಹನುಮಂತನ ಕಿರೀಟ ಮತ್ತು ಚಕ್ರವನ್ನು ರಂಗನಾಥ ಬೆಳೆಯೂರು ಇವರ ಮನೆಯಲ್ಲಿ ದೇವರ ಪೀಠದಲ್ಲಿಟ್ಟು ಪೂಜಿಸಲಾಗುತ್ತಿದೆ.[೨೨]

ಈ ಊರಿನಲ್ಲಿ ಈಶ್ವರ ದೇವಾಲಯದಲ್ಲಿ ಗಣಪತಿ ವಿಗ್ರಹವಿದೆ. ಕಾನ್‌ಗಣಪತಿ ಎಂದು ಕರೆಯುವ ಈ ಗಣಪತಿ ಶಿಲ್ಪ ರಚನೆ ವಿಶಿಷ್ಟವಾದುದಾಗಿದೆ. ಕೈಯಲ್ಲಿ ಜಪಸರವನ್ನು ಹಿಡಿದುಕೊಂಡ ಗಣಪತಿ ವಿಗ್ರಹ ಕೂಡ ಪ್ರಾಚೀನವಾದುದು. ಈ ಗಣಪತಿಯ ಹೆಸರಿನಲ್ಲಿಯ ಮೇಳ ನಡೆಯುತ್ತಿದೆ.

ಮೂಲತಃ ವೇದಮಾರ್ಗಿಗಳು ಪುರಾಣದಲ್ಲಿ ನಂಬಿಕೆಯುಳ್ಳವರು ಆದ ಹವ್ಯಕರು ಗಣಪತಿಯನ್ನು ಆದಿಪೂಜಿತ ಎಂದು ಆರಾಧಿಸುವಲ್ಲಿ ವಿಘ್ನಗಳನ್ನು ನಿವಾರಿಸಲು ಶಕ್ತ ಎಂಬ ಕಾರಣದಿಂದಾಗಿದೆ. ಪ್ರಾಚೀನರು ತಂತ್ರಾಗಮಗಳ ಸಾಧಕರಾಗಿದ್ದು, ದೈವಿ ವಿಗ್ರಹದ ಶಿಲ್ಪದಲ್ಲಿ ಸಾಂಕೇತಿಕವಾಗಿ ಆಕಾರ ರೂಪಿಸಿಯೇ ಆರಾಧಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶಿಲ್ಪಶಾಸ್ತ್ರದಲ್ಲಿರುವ ಗಣಪತಿಯ ಸಾಂಕೇತಿಕ ರಚನೆಗಳು, ಕಲ್ಪನೆಗಳು ಯಕ್ಷಗಾನ ಕಿರೀಟದಲ್ಲಿ ಕಂಡುಬಂದಿರುವುದರಿಂದ ಗಣಪತಿ ಕಿರೀಟ ಪೂಜೆಯಿಂದ ಯಕ್ಷಗಾನ ಪ್ರದರ್ಶನ ಆರಂಭವಾಗುವುದು ಪದ್ಧತಿಯಾಗಿದೆ.

೨.೪.೭. ದೇವದಾಸಿಯರ ನೃತ್ಯ ಸೇವೆ

ಹಿಂದೆ ದೇವಾಲಯಗಳಲ್ಲಿ ದೇವದಾಸಿಯರಿಂದ ನೃತ್ಯ ಪ್ರದರ್ಶನಗೊಳ್ಳುತ್ತಿತ್ತು. ಈ ಪದ್ಧತಿಯು ಇಂದಿಗೂ ಉಳಿದುಕೊಂಡು ಬಂದಿದೆ. ಈ ಪದ್ಧತಿಯು ಯಕ್ಷಗಾನ ರಂಗದಲ್ಲಿ ಮಹತ್ತರವಾದ ಪರಿಣಾಮಕ್ಕೆ ಎಡೆಮಾಡಿಕೊಟ್ಟಿದೆ. ಏಕೆಂದರೆ ಯಕ್ಷಗಾನ ಆರಾಧನಾ ಕಲೆಯಾಗಿ ದೇವಾಲಯದಿಂದ ಬಯಲಿಗೆ ಬಂದಿದ್ದು ಗಂಡು ಕಲೆಯಾಗಿದ್ದ ಯಕ್ಷಗಾನದಲ್ಲಿ ಸ್ತ್ರೀಯರ ಲಯಗಾರಿಕೆ ಮಿಳಿತಗೊಂಡಿದ್ದು ಈ ಪದ್ಧತಿಯಿಂದಲೆ.

ಆರಾಧನಾ ಕಲೆಯೊಂದು ರಂಗಕಲೆಯಾಗಿ ಪರಿವರ್ತನೆಗೊಳ್ಳುವ ಹಂತದಲ್ಲಿ ಆರಾಧಾನ ಮೂಲದಲ್ಲಿದ್ದ ದೇವದಾಸಿಯರು ಹಿಂದೆಯೇ ಉಳಿದರು. ಅವರ ವೇಷಭೂಷಣಗಳು, ನೃತ್ಯ ವಿಧಾನಗಳು ಪುರುಷ ಲಯದೊಂದಿಗೆ ಐಕ್ಯಗೊಂಡವು." ಯಕ್ಷಗಾನದ ಸ್ತ್ರೀ ವೇಷಕ್ಕೆ ದೇವದಾಸಿಯರು ಕಾರಣರಾಗಿ ದೇವದಾಸಿಯರು ದೇವಾಲಯಕ್ಕೆ ಸೀಮಿತಗೊಂಡರು. ಉತ್ತರಕನ್ನಡದ ಇಡಗುಂಜಿ ಗಣಪತಿ ದೇವಾಲಯ, ಅಗ್ರಹಾರದ ಗಣಪತಿ ದೇವಾಲಯ, ಕರ್ಕಿ ಮೂಡಗಣಪತಿ ದೇವಾಲಯಗಳಲ್ಲಿ ಇತ್ತೀಚಿನವರೆಗೂ ಈ ಪ್ರಕಾರದ ಸೇವೆ ನಡೆಯುತ್ತಿದ್ದ ಬಗ್ಗೆ ತಿಳಿದು ಬರುತ್ತದೆ.

೨.೪.೮ ಯಾಮಾಷ್ಟಕ ಸೇವೆ

ಹಾಡುತ್ತ ಕುಣಿಯುವ ವಿಧಾನದ ಕುಣಿತಗಳು ಜನಪದರಲ್ಲಿ ಸಾಕಷ್ಟು ರೂಢಿಯಲ್ಲಿವೆ. ಇಂತಹ ಕುಣಿತಗಳಿಗೆ ಭಜನಾ ಕುಣಿತವೆ ಪ್ರೇರಣೆಯಾಗಿದ್ದೀತು! ಉತ್ತರಕನ್ನಡ, ದಕ್ಷಿಣ ಕನ್ನಡದಲ್ಲಿ ಈ ಕುಣಿತಗಳು ಇಂದಿಗೂ ರೂಢಿಯಲ್ಲಿದೆ. ದೇವಾಲಯಗಳಲ್ಲಿ ದೇವದಾಸಿಯರ ನೃತ್ಯವಿದ್ದಂತೆ ಪುರುಷರು ನರ್ತಿಸುವ ವಿಧಾನವು ಹಿಂದಿನಿಂದಲೇ ರೂಢಿಯಲ್ಲಿತ್ತು ಎಂಬುದಕ್ಕೆ ಆಧಾರವಿದೆ. ದೇವರ

---

೩೨. ಬೆಳೆಯೂರು ಕಾರ್ಯಕ್ಷೇತ್ರ

ಸ್ತುತಿ ಪದ್ಯಗಳನ್ನು ಹಾಡುತ್ತಾ ನಂದಾದೀಪದ ಸಾಕ್ಷಿಯಲ್ಲಿ ಮಂಡಲಾಕಾರವಾಗಿ ಕುಣಿಯುವುದು ಇಲ್ಲಿನ ವಿಧಾನವಾಗಿದೆ. ದೇವಾಲಯದಲ್ಲಿ "ಅಷ್ಟಯಾಮ"ಗಳಲ್ಲಿ ಇದು ನಡೆಯುವ ಕಾರಣದಿಂದ ಇದನ್ನು ಯಾಮಾಷ್ಟಕ ಸೇವೆ ಎಂದು ಕರೆಯಲಾಗಿದೆ. ಈ ಭಜನಾ ಕುಣಿತಗಳು ಹಿಂದೆ ಅಹಾರ್ಯ ಅಭಿನಯ ಸಹಿತವಾಗಿ ಇಡೀ ರಾತ್ರಿ ನಡೆಯುತ್ತಿತ್ತು. ಭಜನಾ ಕುಣಿತಗಳು ಕಾಲಕ್ರಮೇಣ ಕಥಾಪ್ರಸಂಗಗಳ ಅಳವಡಿಕೆಯಿಂದ ಜಾಗರ ಅಥವಾ ಯಕ್ಷಗಾನವೇ ಆಗಿ ಬೆಳೆದಿದೆ ಎಂದೆನಿಸುತ್ತದೆ.

ಕುಮಟಾ ತಾಲ್ಲೂಕಿನ ಮೂರೂರು, ಕರ್ಕಿ, ಹೊಸಾಕುಳಿ ಲಕ್ಷ್ಮೀನಾರಾಯಣ ದೇವಾಲಯಗಳಲ್ಲಿ ಇಂತಹ ಪದ್ಧತಿ ಇದೆ. ದಕ್ಷಿಣ ಕನ್ನಡದ ಕ್ಷೇತ್ರ ಕಾರ್ಯದಲ್ಲಿ ತೊಡಗಿದಾಗ ಸ್ತ್ರೀ ವೇಷಧಾರಿ ಪಾತಾಳ ವೆಂಕಟರಮಣ ಭಟ್ಟರು ಬೆಳ್ತಂಗಡಿಯಲ್ಲಿ ಸುಮಾರು ೨೫ ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡುಬಂದಿದ್ದನ್ನು ನೋಡಲಾಗಿದೆ.[೩೩]

ಕರಾವಳಿಯಲ್ಲಿ ಬಹಳ ಹಿಂದಿನಿಂದಲೂ ರೂಢಿಯಲ್ಲಿರುವ ಈ ಭಜನಾ ಕುಣಿತಗಳು ಯಕ್ಷಗಾನಕ್ಕೆ ಸಾಮ್ಯ ಲಕ್ಷಣವನ್ನು ಹೊಂದಿದೆ. "ಅಷ್ಟಯಾಮಗಳ ಕಾಲಮಾನದ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮ ನಡೆಯುತ್ತದೆ. ಈ ನೃತ್ಯ, ನಿದ್ದೆ ಬಿಡುವ ವ್ರತ ಸಂಪ್ರದಾಯಗಳು ಇಲ್ಲಿಂದ ಯಕ್ಷರಂಗಕ್ಕೆ ಸೇರಿಕೊಂಡ ಹಾಗೆ ಕಾಣುತ್ತದೆ. ಗಣಪತಿ ಸ್ತುತಿಯೊಂದಿಗೆ ಪ್ರಾರಂಭಿಸಿ ದಶಾವತಾರಗಳ ಸ್ತುತಿಯನ್ನು ಒಳಗೊಂಡು ಮರುದಿನದ ಮಂಗಳಾರತಿ, ಮಂಗಳ ಪದ್ಯದೊಂದಿಗಲ್ಲದೆ ಸಾರ್ವತ್ರಿಕ ಭೋಜನಗಳೊಂದಿಗೆ ಈ ವ್ರತ ಸಮಾಪ್ತಿಯಾಗುತ್ತಿತ್ತು. ಯಕ್ಷಗಾನ ಕೂಡ ಈ ಬಗೆಯ ವ್ರತಾಚರಣೆಯಾಗಿದೆಯಲ್ಲದೆ ಈ ಕುಣಿತದಿಂದ ಅದು ಸ್ಫೂರ್ತಿಗೊಂಡಿದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ."

೨.೫. ಯಕ್ಷಗಾನ ಅಂದು

ಯಕ್ಷಗಾನ ಕಲೆಗೆ ಅನೇಕ ತಲೆಮಾರುಗಳ ಇತಿಹಾಸವಿದೆ. ಯಕ್ಷಗಾನದ ಆರಂಭದ ಕಾಲವನ್ನು ಖಚಿತವಾಗಿ ಹೀಗೆ ಎಂದು ಹೇಳಲಾಗದಿದ್ದರೂ ಮನೆತನಗಳ ಪರಂಪರೆಯ ಮೂಲಕ ವಿಕಾಸವಾದ ಕ್ರಮವನ್ನು ಊಹಿಸಬಹುದು. ಯಕ್ಷಗಾನ ಮೊದಲ್ಗೊಂಡದ್ದು ದೇವಾಲಯಗಳಲ್ಲಿ ಎನ್ನುವುದನ್ನು ಒಪ್ಪಲೇಬೇಕಾಗುತ್ತದೆ. ದೇವಾಲಯದ ವಾದನ, ದೇವದಾಸಿ ನೃತ್ಯ, ಯಾಮಾಷ್ಟಕ ಪೂಜೆಗಳ ಉಲ್ಲೇಖಗಳಿಂದ ಈಗಾಗಲೇ ಸಂಶೋಧಕರು ದೃಢಪಡಿಸಿದ್ದಾರೆ. "ದೇವಾಲಯದಿಂದ ಬಯಲಿಗೆ" ಬಂದ ಕಾಲದಲ್ಲಿ ಯಕ್ಷಗಾನ ಪ್ರದರ್ಶನ ವ್ಯವಸ್ಥೆಗೊಳಪಟ್ಟಿತು ಎನ್ನಲು ಸಾಧ್ಯವಿದೆ. ಆರಾಧನೆಯಿಂದ ಬಯಲಾಟವಾಗಿ ಆಕರ್ಷಣೆಗೆ ಕಾರಣವಾದದ್ದು ವಿಕಾಸವಾಗಿದೆ. ಯಕ್ಷಗಾನ ಎಷ್ಟೇ ಬೆಳೆಯಲಿ, ಕ್ರಮಿಸಲಿ ಪ್ರದರ್ಶನ ಆರಂಭ ಮತ್ತು ಅಂತ್ಯಕ್ಕೆ ಮತ್ತೆ ದೇವಾಲಯವನ್ನು ಸೇರುವುದು ಸಂಪ್ರದಾಯವಾಗಿದೆ.

ಬಯಲಾಟವಾಗಿ ಬಯಲಿಗೆ ಬಂದ ಯಕ್ಷಗಾನಕ್ಕೆ ಆಧುನಿಕ ಪ್ರದರ್ಶನಗಳ ವ್ಯವಸ್ಥೆಗಳಿರಲಿಲ್ಲ. ಕಂಬನೆಟ್ಟು ವೇದಿಕೆ ರಚಿಸಿ ಪ್ರದರ್ಶನಕ್ಕೆ ಸಿದ್ಧಗೊಳಿಸಬೇಕಿತ್ತು. ದೂರದ ಊರುಗಳಿಗೆ ಸಾಗುವಾಗ ಪೆಟ್ಟಿಗೆಗಳನ್ನು ತಲೆಯ ಮೇಲೆ ಹೊತ್ತು ದೂರದ ಸ್ಥಳಗಳಿಗೆ ಸಾಗಬೇಕಿತ್ತು. ಹೀಗೆ ಸಾಗುವಾಗ ಬೀಡುಬಿಟ್ಟಲ್ಲಿ ಯಕ್ಷಗಾನದ ತಾಲೀಮು ನಡೆದ ಆ ಸ್ಥಳಗಳು ಇಂದು ಯಕ್ಷಗಾನದ ನೆಲೆಯಾಗಿಯೆ

೩೩. ಕಾರ್ಯಕ್ಷೇತ್ರ – ಬೆಳ್ತಂಗಡಿ, ಮೂರೂರು, ಕರ್ಕಿ, ಹೊಸಾಕುಳಿ

ಬೆಳೆದು ಬಂದಿದೆ. ಕರಾವಳಿಯ ಕಲಾವಿದರ ಮೇಳಗಳು ಸಿದ್ದಾಪುರದ ಘಟ್ಟಪ್ರದೇಶಗಳಿಗೆ ತೆರಳುವಾಗ ಹಿಂದೆ ಗುಂಡಬಾಳೆಯಲ್ಲಿ ನೆಲೆನಿಂತು ಪ್ರದರ್ಶನ ನೀಡುತ್ತಿದ್ದರು ಎಂಬ ನಿದರ್ಶನವಿದೆ.

ಯಕ್ಷಗಾನ ಕಲೆ ಪ್ರಸರಣಗೊಂಡು ನೆಲೆಗಳನ್ನು ಹೊಂದಲು ಆಗಿನ ಸೌಲಭ್ಯದ ಕೊರತೆಯೂ ಕಾರಣವೆನ್ನಲು ಸಾಧ್ಯವಿದೆ.

ಭಾಗವತರು ಧ್ವನಿವರ್ಧಕದ ವ್ಯವಸ್ಥೆಗಳಿಲ್ಲದೆ ಇಡೀ ರಾತ್ರಿ ಪದ್ಯವನ್ನು ಹೇಳಬೇಕಿತ್ತು. ಪದ್ಯಗಳು ಕಂಠಸ್ಥವಾಗಿರುವುದು ವಿಶೇಷವಾಗಿತ್ತು. ವಿದ್ಯುತ್ ಸೌಕರ್ಯಗಳಿಲ್ಲದ ರಂಗದಲ್ಲಿ ಹಿಲಾಲಿನ ಬೆಳಕಿನಲ್ಲಿ ಯಕ್ಷಗಾನ ಪ್ರದರ್ಶನಗೊಳ್ಳುತ್ತಿತ್ತು. ಅರದಾಳದ ಕಲ್ಲಿನಿಂದ ತಯಾರಿಸಿದ ಬಣ್ಣಗಾರಿಕೆ ಪರಂಪರೆಯ ಕುಣಿತಗಳಿಂದ ಅಂದೂ ಅಪ್ಯಾಯಮಾನವೆ ಆಗಿತ್ತು. ಚೌಕಿಯಲ್ಲಿ ಗಣಪತಿ ಪೂಜೆಯಿಂದ ಆರಂಭಿಸಿ ಉತ್ತರಕನ್ನಡ ಪರಂಪರೆ ಮತ್ತು ದಕ್ಷಿಣಕನ್ನಡ ಪರಂಪರೆಗಳಲ್ಲಿ ಸಭಾ ಲಕ್ಷಣಗಳನ್ನು ಪರಿಪಾಟವಾಗಿ ಅಭಿನಯಿಸಲಾಗುತ್ತಿತ್ತು.

ಯಕ್ಷಗಾನ ಒಂದು ಭಕ್ತಿಪ್ರಧಾನವಾದ ಕಲಾರಾಧನೆಯಾಗಿ ದೈವೀ ಆರಾಧನೆಯ ಸ್ವರೂಪದಲ್ಲಿ ಪ್ರದರ್ಶನಗೊಳ್ಳುತ್ತಿತ್ತು. ನಿಯಮಿತ ಪ್ರದರ್ಶನಗಳು ನಿರ್ದಿಷ್ಟ ಊರುಗಳಲ್ಲಿ ಪ್ರದರ್ಶಿತವಾಗುತ್ತಿತ್ತು. ಕಾಲಕ್ರಮೇಣ ಬಯಲಾಟ, ಡೇರೆ ಮೇಳವಾಗಿ ಟೆಂಟಿನಾಟವಾಗಿ ವ್ಯವಸಾಯಿ ಮೇಳವಾಗಿ ಪರಿವರ್ತನೆ ಹೊಂದಿತು. ತಾಂತ್ರಿಕ ಸೌಲಭ್ಯ, ಯಾಂತ್ರಿಕ ಜೀವನದಿಂದ ಯಕ್ಷಗಾನ ರಂಗನಿರ್ದೇಶನ ಪ್ರಸ್ತುತಿಯಲ್ಲಿ ಮಾರ್ಪಾಡು ಅನಿವಾರ್ಯವಾಗಿಯೇ ಉಂಟಾಯಿತು.

ಯಕ್ಷಗಾನದ ಇತಿಹಾಸವನ್ನು ಹಿಂದೆ ಹಿಂದೆ ಹುಡುಕುತ್ತಾ ಹೋದಂತೆ ಹವ್ಯಕರ ಮನೆತನಗಳ ಇತಿಹಾಸವು ಗೋಚರವಾಗುತ್ತದೆ. ಇಂತಹ ಬಹುದೀರ್ಘ ಇತಿಹಾಸವನ್ನು ದಾಖಲಿಸದೆ ಇರುವುದೂ ಅಧ್ಯಯನದ ದೃಷ್ಟಿಯಿಂದ ಬಹುದೊಡ್ಡ ಕೊರತೆಯಾಗಿದೆ.

೨.೬. ಯಕ್ಷಗಾನ – ಇಂದು

ಮೇಳ ವ್ಯವಸ್ಥೆಯ ಸಂಚಾರಿ ಕಲೆಯಾಗಿ ಯಕ್ಷಗಾನ ಹಳ್ಳಿಹಳ್ಳಿಗಳಲ್ಲಿ ಪ್ರದರ್ಶನಗೊಂಡು ಈಗ ನಗರಗಳಲ್ಲಿ ದೇಶ ವಿದೇಶಗಳಲ್ಲೂ ಪ್ರಚಲಿತವಾಗಿದೆ. ಯಕ್ಷಗಾನ ಎಲ್ಲಿಗೆ ವ್ಯಾಪಿಸಲಿ ಮೇಳ ಹೊರಡುವುದು ಇಲ್ಲಿಂದಲೆ ತನ್ನ ಮೂಲ ನೆಲೆಯಿಂದಲೆ; ಮೂಲ ನೆಲೆಯ ಕಲೋಪಾಸಕರು ಕಂಡುಕೊಂಡ ಹೊಸ ನೆಲೆಗಳತ್ತ ಯಕ್ಷಗಾನ ಸಾಗಿ ಅಲ್ಲಲ್ಲಿ ತನ್ನದೇ ಆದ ಪ್ರಭಾವವನ್ನು ಬೀರಿದೆ. ಈಗ ಯಕ್ಷಗಾನಕ್ಕೆ ಸರ್ಕಾರಿ ಮನ್ನಣೆಯಿದೆ. ಮಠಮಾನ್ಯಗಳ ಮನ್ನಣೆಯಿದೆ. ಎಲ್ಲಾ ಗಡಿಯನ್ನು ಮೀರಿ ಕಲೆಯಾಗಿ ಬೆಳೆದಿದೆ. ಅಂತೆಯೇ ಕಲಾತ್ಮಕತೆಯಲ್ಲೂ ಬದಲಾವಣೆಯಾಗಿ ಮೂಲವನ್ನು ಪರಂಪರೆಯಾಗಿಯೇ ಬಿಟ್ಟು ಹೊಸ ಪ್ರಯೋಗ, ಹೊಸ ಆವಿಷ್ಕಾರ ಪರಿಷ್ಕರಣೆ "ಸುಧಾರಣೆಯ ಸುಧೋರಣೆಯ" ನೆಲೆಯಲ್ಲಿ ಹೊಸತನವನ್ನು ಅಳವಡಿಸಿಕೊಂಡು ಬದಲಾಗುತ್ತ ಬಂದಿದೆ.

ಪ್ರಸ್ತುತ ಸುಮಾರು ಮೂವತ್ತು ವ್ಯವಸಾಯ ಮೇಳಗಳು, ಇಪ್ಪತ್ತು ಹರಕೆ ಮೇಳಗಳು, ಎರಡುನೂರರಷ್ಟು ಹವ್ಯಾಸಿ ಕೂಟಗಳು ಯಕ್ಷಗಾನರಂಗದಲ್ಲಿ ನಿರತವಾಗಿದೆ. ನಾಲ್ಕೈದು ಲಕ್ಷ ಅಭಿಮಾನಿಗಳು ಪ್ರತಿವರ್ಷ ಯಕ್ಷಗಾನವನ್ನು ನೋಡಿ ಆನಂದಿಸುತ್ತಿದ್ದಾರೆ. ರಾಮಾಯಣ, ಮಹಾಭಾರತ, ಭಾಗವತ ಪ್ರಸಂಗಗಳೊಂದಿಗೆ ಹೊಸ ಪ್ರಸಂಗಗಳು ಪ್ರದರ್ಶನಗೊಳ್ಳುತ್ತಿದೆ. ಕೇವಲ ದೀಪಾವಳಿಯಿಂದ ವೈಶಾಖದವರೆಗೆ

ಪ್ರದರ್ಶನಗೊಳ್ಳುತ್ತಿದ್ದ ಪ್ರದರ್ಶನಗೊಳ್ಳುವುದರ ಬದಲು ಇಡೀ ವರ್ಷವು ಪ್ರದರ್ಶನಗೊಳ್ಳುವ ವ್ಯವಸ್ಥೆಯಿದೆ.

ಇಡೀ ರಾತ್ರಿಪ್ರಯೋಗಗಳು ಕಾಲಮಿತಿಗೊಳಪಟ್ಟು ಮೂರು ತಾಸಿನ ಪ್ರಯೋಗಕ್ಕೆ ಸೀಮಿತವಾಗುತ್ತಿದೆ. ನಟಪ್ರಧಾನ ಪ್ರದರ್ಶನಗಳು ಪಾತ್ರ ಪ್ರಧಾನವಾಗಿ ಪ್ರಯೋಗಗೊಳ್ಳುತ್ತಿದೆ. ಹಿಂದೆ ಪ್ರಸಂಗವನ್ನು ಇಷ್ಟಪಟ್ಟು ಆಡಿಸುವ ವ್ಯವಸ್ಥೆಯ ಬದಲು ಈಗ ಪ್ರಸಿದ್ಧ ನಟನ ಜನಪ್ರಿಯ ಪಾತ್ರಕ್ಕಾಗಿ ಆಟ ಆಡಿಸುವ ಪ್ರಯತ್ನವು ನಡೆಯುತ್ತಿದೆ.

ಯಕ್ಷಗಾನದ ಪೂರ್ವರಂಗ ಬಿಟ್ಟು ನೇರ ಕಥಾ ಪ್ರಸಂಗವನ್ನು ಆರಂಭಿಸುವ ಪದ್ಧತಿ ರೂಢಿಯಾಗಿದೆ. ಸಾಂಪ್ರದಾಯಿಕ ಮಟ್ಟಿನ ಕುಣಿತಗಳು ಮರೆಯಾಗುತ್ತಿದೆ. ಬಣ್ಣಗಾರಿಕೆ, ವೇಷಗಾರಿಕೆಯಲ್ಲಿ ಹೊಸ ವಿಧಾನಗಳು ಅಳವಡಿಸಿದೆ. ವೇಷಕಟ್ಟುವ ವಿಧಾನದಲ್ಲಿ ಹೊಸತನವನ್ನು ಅಳವಡಿಸಿಕೊಳ್ಳಲಾಗುತ್ತಿದೆ.

ಮೇಳ ವ್ಯವಸ್ಥೆ ಆಧುನಿಕರಣಗೊಂಡು ತಾಂತ್ರಿಕ ಸೌಲಭ್ಯದಿಂದ ಕೂಡಿದೆ. ದೂರದ ಊರುಗಳಿಗೂ ಮೇಳ ಸಾಗಲು ವಾಹನ ವ್ಯವಸ್ಥೆಯಿದೆ. ಮೇಳದ ಕಟ್ಟುಪಾಡುಗಳು ಸಡಿಲಗೊಂಡು ಕಲಾವಿದರು ಹೊಸತನವನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಯಕ್ಷಗಾನದ ನೆಲೆ ಭೌಗೋಳಿಕವಾಗಿ ಕರಾವಳಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ದೇವಾಲಯಗಳೆ. ದೇವಾಲಯಗಳಲ್ಲಿನ ಪೂಜೆ ವಿಧಾನದ ಸಾಮಾಜಿಕರಣದಲ್ಲಿ ಕಲೆಯ ಅವತಾರವನ್ನು ತಾಳಿದ ಯಕ್ಷಗಾನ ಸಾಕಷ್ಟು ಪ್ರಬಲ ಆಧಾರಗಳಿಂದ ಗಾಣಪತ್ಯರ ಪ್ರದೇಶಧ ಕಲೆ ಎಂಬುದು ನಿಖರವಾಗಿ ಸಾಬೀತುಗೊಳ್ಳುತ್ತದೆ. ಕಾಲಕಾಲಕ್ಕೆ ಮೂಲತತ್ವಗಳನ್ನು ಗರ್ಭೀಕರಿಸಿಕೊಂಡು ಬಾಹ್ಯ ಬದಲಾವಣೆಗೆ ಒಗ್ಗಿ ಹೊಸ ಹೊಸ ಆಯಾಮಗಳು ಯಕ್ಷಗಾನದಲ್ಲಿ ಪ್ರಾದೇಶಿಕ, ಭೌಗೋಳಿಕ ಪ್ರಭಾವದಿಂದ ಸೌಕರ್ಯಗಳಿಂದ ಸ್ಥಳೀಯ ಸಾಂಸ್ಕೃತಿಕ ಪ್ರಭಾವದಿಂದ ಉಂಟಾಗಿದ್ದರೆ ಆಶ್ಚರ್ಯವೇನಿಲ್ಲ. ಅಂತಹ ನೆಲೆಗಳನ್ನು ಯಕ್ಷಗಾನದ ಅಂದು ಇಂದಿನ ಸ್ಥಿತಿಗಳ ಆಧಾರದಿಂದ ಪರ್ಯಾಲೋಚಿಸುವುದಕ್ಕೆ ಸಾಧ್ಯವಿದೆ. ಆಧುನಿಕ ತಂತ್ರಜ್ಞಾನದ ದೂರದರ್ಶನದ, ಮನರಂಜನೆಯ ಪ್ರಭಾವದಿಂದ ಜನಯಕ್ಷಗಾನದ ಇಡೀ ರಾತ್ರಿ ಪ್ರದರ್ಶನದಿಂದ ದೂರ ಉಳಿಯುತ್ತಿದ್ದಾರೆ.

ಯಕ್ಷಗಾನದ ಪ್ರಾದೇಶಿಕ ಮಟ್ಟುಗಳ ಸೂಕ್ಷ್ಮತೆ ಅಳಿದು ಕುಣಿತಗಳು ಸಮನ್ವಯಗೊಳ್ಳುತ್ತಿವೆ. ಎಲ್ಲಾ ತಿಟ್ಟುಗಳನ್ನು ಒಪ್ಪಿಕೊಳ್ಳುವ ಪ್ರೇಕ್ಷಕ ವರ್ಗದಿಂದಾಗಿಹೆಚ್ಚು ಬಡಗಿನ ಪ್ರದರ್ಶನಗಳು ವ್ಯಾಪಕಗೊಳ್ಳುತ್ತಿದೆ. ಯಕ್ಷಗಾನದ ಹಳೆಯ ತಲೆಮಾರಿನ ಕಲಾವಿದರ ಮನೆತನಗಳಲ್ಲಿ ಕಲೆಯನ್ನು ಪರಂಪರೆಯಾಗಿ ಉಳಿಸುವ ಹೊಸ ಪೀಳಿಗೆ ಯಕ್ಷಗಾನದಿಂದ ವಿಮುಖಗೊಂಡು ಉದ್ಯೋಗವನ್ನರಿಸಿ ನಗರಗಳಲ್ಲಿ ನೆಲೆಯಾಗ ತೊಡಗಿದೆ.

ಯಕ್ಷಗಾನ ಕಲೆಯ ಸಂಕ್ರಮಣ ಕಾಲದಲ್ಲೂ ಹವ್ಯಕರು ಯಕ್ಷಗಾನವನ್ನು ಆರಾಧಿಸುತ್ತಿರುವುದು ಮನಗಾಣುತ್ತೇವೆ. ಬೆಂಗಳೂರು, ಮುಂಬೈ ಅಮೇರಿಕಾಗಳಲ್ಲಿ ಹವ್ಯಕ ಕಲಾಕೂಟಗಳು ತಲೆಎತ್ತಿ ಪ್ರಸಿದ್ಧ ಕಲಾವಿದರ ಪ್ರದರ್ಶನ ಏರ್ಪಡಿಸಿ ಪರಂಪರೆಯನ್ನು ಉಳಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಹತ್ತಾರು ಮಕ್ಕಳ ಕೂಟಗಳು ಅನೇಕ ಬಾಲ ಪ್ರತಿಭೆಗಳನ್ನು ರಂಗಕ್ಕೆ ತಂದಿದೆ. ಮಹಿಳೆಯರು ಯಕ್ಷಗಾನ ತಾಳಮದ್ದಳೆಯಲ್ಲಿ ಹೆಚ್ಚೆಚ್ಚು ತೊಡಗಿಕೊಳ್ಳುತ್ತಿದ್ದಾರೆ. ಯಕ್ಷಗಾನದ ಕುರಿತಾದ ವಿಮರ್ಶೆ, ಸಂಶೋಧನೆಗಳು ಬೆಳೆಯುತ್ತಿದೆ. ಯಕ್ಷಗಾನ ದೇಶ ವಿದೇಶದಲ್ಲಿ ಪ್ರದರ್ಶನಗೊಳ್ಳಲು ಹವ್ಯಕರು ಶ್ರಮಿಸುತ್ತಿರುವುದು ಕಲೆಯ ಕುರಿತಾದ ಗೌರವವನ್ನು ಸಾಕ್ಷೀಕರಿಸುತ್ತದೆ.

ಈಗಲೂ ಯಕ್ಷಗಾನದಲ್ಲಿ ಹವ್ಯಕರು ತೊಡಗಿಕೊಂಡಷ್ಟು ಉಳಿದ ಜನಾಂಗಗಳು ತೊಡಗಿಕೊಂಡಿಲ್ಲ. ವೃತ್ತಿ ಮೇಳ, ಹರಕೆ ಮೇಳಗಳಲ್ಲಿ ಬಹುಪಾಲು ಹವ್ಯಕ ಕಲಾವಿದರು ಇದ್ದಾರೆ. ಇರುವ ಕಲಾವಿದರು ಪ್ರತಿಯೊಬ್ಬರೂ ಅಪಾರ ಜನಮನ್ನಣೆಯನ್ನು ಹೊಂದಿದ್ದಾರೆ. ಮೇಳದ ಆಕರ್ಷಣೆಗೆ ಕಾರಣವಾದ ಪ್ರತಿಭಾವಂತರು ಇದ್ದಾರೆ. ಇತ್ತೀಚೆಗೆ ಚಿಟ್ಟಾಣಿ ರಾಮಚಂದ್ರ ಹೆಗಡೆಯವರಿಗೆ ಸಂದ ಪದ್ಮಶ್ರೀ ಪ್ರಶಸ್ತಿಯಿಂದ ರಾಷ್ಟ್ರ ಮಟ್ಟದ ಮನ್ನಣೆ ಯಕ್ಷಗಾನಕ್ಕೆ ಸಂದಂತಾಗಿದೆ. ಯಕ್ಷಗಾನಕ್ಕಾಗಿ ದುಡಿದ ಇನ್ನೂ ಅನೇಕ ಮಹನೀಯರು ಹವ್ಯಕರಲ್ಲಿದ್ದಾರೆ. ಜೀವನ ವ್ಯವಸ್ಥೆ, ಕಾಲ ಬದಲಾದರೂ ಯಕ್ಷಗಾನದ ಕುರಿತಾದ ಹವ್ಯಕರ ಧೋರಣೆ ಬದಲಾಗಿಲ್ಲ. ಕಲೆಯನ್ನು ಕಾಳಜಿಯಿಂದ ಬೆಳೆಸುತ್ತಲೇ ಸಾಗಿದ್ದಾರೆ.

ಯಕ್ಷಗಾನ ಕಲೆಯನ್ನು ನಂಬಿರುವ ಕುಟುಂಬಗಳು ಹವ್ಯಕರಲ್ಲಿ ಇಂದಿಗೂ ಕಲೆಗಾಗಿ, ಕಲೆಯಿಂದಲೇ ಜೀವನ ನಿರ್ವಹಿಸುತ್ತಿವೆ.





ಅಧ್ಯಾಯ – ೩

ಶೈಲಿ ಪ್ರವರ್ತಕ ಮನೆತನಗಳು ಮತ್ತು ಮೇಳಗಳು

೩.೧. ಶೈಲಿ ಪ್ರವರ್ತಕ ಮನೆತನಗಳು

ಯಕ್ಷಗಾನಕ್ಕೂ ಹವ್ಯಕ ಮನೆತನಗಳಿಗೂ ನಿಕಟವಾದ ಸಂಬಂಧವಿದೆ. ಅಂದರೆ ಅನೇಕ ಮನೆತನಗಳು ಯಕ್ಷಗಾನವನ್ನು ತಮ್ಮ ಹೆಸರಿನೊಂದಿಗೆ ಪ್ರತಿನಿಧಿಸುತ್ತದೆ. ಯಕ್ಷಗಾನ ಕಲೆ ಕುಟುಂಬದಲ್ಲಿ ಹಿರಿಯರಿಂದ ಕಿರಿಯರಿಗೆ ತಲೆಮಾರಿನಿಂದ ತಲೆಮಾರಿಗೆ ಬಳುವಳಿಯಾಗಿ ಬಂದಿದೆ. ತಲೆಮಾರಿನ ಹಿರಿಯರ ಕೊಡುಗೆಗಳು ಪ್ರೇರಣೆಯಾಗಿ ಹೊಸ ತಲೆಮಾರಿನವರು ಯಕ್ಷಗಾನದಲ್ಲಿ ತೊಡಗಿಕೊಂಡ ಕಾರಣದಿಂದ ಒಂದು ಮನೆತನದ ಅನೇಕ ತಲೆಮಾರು ಯಕ್ಷಗಾನದಲ್ಲಿ ತೊಡಗಿಕೊಂಡಿದೆ. ಉತ್ತರಕನ್ನಡ, ದಕ್ಷಿಣಕನ್ನಡ, ಮಲೆನಾಡಿನಲ್ಲಿ ಇಂತಹ ಅನೇಕ ಕುಟುಂಬಗಳಿದೆ. ಕುಟುಂಬ ಪರಂಪರೆಯ ಕಲಾವಿದರೆ ಸೇರಿ ಮನೆತನದ ಮೇಳವಾಗಿದ್ದಕ್ಕೆ ಕರ್ಕಿ ಮೇಳವು ನಿದರ್ಶನವಾಗಿದೆ.

ಹೀಗೆ ಮನೆತನದಲ್ಲಿ ಕಲೆಯ ಪರಂರೆಯನ್ನು ಕೆರೆಮನೆ, ಚಿಟ್ಟಾಣಿ, ಕೊಂಡದ ಕುಳಿ ಗುಂಡಿಬೈಲು, ಸಾಗರದ ಬೆಳೆಯೂರು, ದಕ್ಷಿಣ ಕನ್ನಡದ ಪದ್ಯಾಣ, ಮಾಂಬಾಡಿ, ದೇವಕ್ಕಾನ ಕುದ್ರೇಕ್ಕೋಡು ಕುಟುಂಬಗಳು ಯಕ್ಷಗಾನದಲ್ಲಿ ತೊಡಗಿಕೊಂಡಿವೆ. ಇದು ಕಲಾವಿದರ ಮನೆತನದ ಪರಂಪರೆಯಾದರೆ, ಯಕ್ಷಗಾನದ 'ಸಭಾಹಿತ ಮಟ್ಟು' 'ಸಭಾಹಿತ ಪ್ರತಿ' ಎಂದು ಉತ್ತರಕನ್ನಡದ ಶೈಲಿಯನ್ನು ಅಧಿಕೃತವಾಗಿ ರೂಪಿಸಿದ ಸಭಾಹಿತರು, ಭಾಗವತರು, ಹಾಸ್ಯಗಾರರು ಎಂಬ ಮೂರು ಮನೆತನಗಳು ಉತ್ತರ ಕನ್ನಡದಲ್ಲಿ ಇವೆ. ಯಕ್ಷಗಾನದಲ್ಲಿ ಸೂತ್ರಧಾರನಾದ ಭಾಗವತ, ಪಾತ್ರಧಾರಿಯಾದ ಹಾಸ್ಯಗಾರ ಎಂಬ ಹೆಸರುಳ್ಳ ಮನೆತನ ಎಂದಿಗೂ ಕಲೆಯನ್ನು ಮುಂದುವರೆಸಿಕೊಂಡು ಹೋಗುವ ಹೊಣೆ ಹೊತ್ತಿದೆ. ಕಲೆಯನ್ನು ಪ್ರತಿನಿಧಿಸುವ ಈ ಮನೆತನಗಳ ಇತಿಹಾಸವು ಉತ್ತರ ಕನ್ನಡ ಯಕ್ಷಗಾನದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ.

೩.೧.೧. ಸಭಾಹಿತರು

ಸಭಾಹಿತರು ಮಯೂರವರ್ಮನ ಕಾಲದಲ್ಲಿ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಹಿತಕ್ಕಾಗಿ ನಿಯಮಿಸಲ್ಪಟ್ಟವರು. ಇಡಗುಂಜಿ ಇವರ ಮೂಲ. ಈಗ ನಾಲ್ಕನೂರು ವರ್ಷಗಳಿಂದ ಈಚೆಗೆ ಅಗ್ರಹಾರ (ಹಳದಿಪುರ)ದಲ್ಲಿ ಒಂದು ಕವಲು, ಅಘನಾಶಿನಿಯಲ್ಲಿ ಒಂದು ಕವಲು ಗೋಕರ್ಣ, ಮತ್ತಿಘಟ್ಟ ಸಾಗರದಲ್ಲಿ ಹೀಗೆ ಹಬ್ಬಿಕೊಂಡಿದೆ. ಅಲ್ಲೆಲ್ಲ ದೇವಾಲಯಕ್ಕೆ ಅಂಟಿಕೊಂಡೆ ಇವರು ಇದ್ದಾರೆ. ಸಾಮಾಜಿಕವಾಗಿಯೂ ತಮ್ಮ ವರ್ಚಸ್ಸನ್ನು ಇಟ್ಟುಕೊಂಡಿದ್ದಾರೆ. ಶೈಕ್ಷಣಿಕವಾಗಿಕೂಡಾ ಮುಂದುವರಿದ ಮನೆತನ ಇದು. ಈ ಮನೆತನದ ಹೆಸರು ಯಕ್ಷಗಾನದೊಂದಿಗೆ ಉಳಿದು ಕೊಳ್ಳುವಂತಹದ್ದು.[೧]

೧. ಡಾ. ಜಿ.ಜಿ. ಸಭಾಹಿತರ ಸಂದರ್ಶನ ಹಾಗೂ ತಿಮ್ಮಪ್ಪ ಕಲಸಿಯವರ ಸಂದರ್ಶನ.

ದೇವಾಲಯದ ಪಾರುಪತ್ಯಗಾರರೂ ಆದ ಸಭಾಹಿತರು ದೇವಾಲಯಗಳ ಆಡಳಿತದೊಂದಿಗೆ ಯಕ್ಷಗಾನ ಮೇಳದ ಮುಂದಾಳು ಆಗಿದ್ದರು. ಈ ಮನೆತನದಲ್ಲಿ ಪ್ರಸಂಗಕರ್ತರು ಭಾಗವತರು ಮದ್ದಳೆವಾದಕರು ಆಗಿ ಹೋಗಿದ್ದಾರೆ. ಇವರ ಕಾಲವನ್ನ ಗಮನಿಸಿದಾಗ ಯಕ್ಷಗಾನ ಹವ್ಯಕರ ಪ್ರಾಚೀನ ಪರಂಪರೆ ಎಂಬುದು ಸ್ಪಷ್ಟವಾಗುತ್ತದೆ.

ಸುಮಾರು ೪೦೦ ವರ್ಷದೀಚಿನ ಕಾಲದಲ್ಲಿ ಹದಿನೇಳನೆ ಶತಮಾನದಲ್ಲಿ ಬಾಳಿದ್ದ ವಿಷ್ಣು ಸಭಾಹಿತರು ಪ್ರಸಂಗ ಕರ್ತರಾಗಿದ್ದರು. ಒಂದು ಶತಮಾನದ ಹಿಂದೆ ಪುಟ್ಟಸಭಾಹಿತರು ಮದ್ದಳೆ ವಾದಕರಾಗಿದ್ದರು. ಅಷ್ಟೇ ಪ್ರಾಚೀನ ಪರಂಪರೆ ಇರುವ ಕರ್ಕಿಯ ಯಕ್ಷಗಾನ ಮಂಡಳಿ "ಸಭಾಹಿತ ಮಟ್ಟನ್ನು" ರಂಗದಲ್ಲಿ ರೂಢಿಸಿಕೊಂಡಿತ್ತು. ಯಕ್ಷಗಾನ ರಂಗ ಕೃತಿ ರಚನೆಯಾಗುವ ಮುನ್ನವೆ ಯಕ್ಷಗಾನ ಕಲೆ ರೂಪಗೊಂಡಿರಬೇಕು, ಸಭಾಹಿತರು ಮಯೂರವರ್ಮನ ಕಾಲದಿಂದಲೆ ಸಾಮಾಜಿಕ ಧಾರ್ಮಿಕ ಕಾರ್ಯಗಳಿಗೆ ನಿಯಕ್ತಿಗೊಂಡವರಾಗಿದ್ದಾರೆ.

ಈ ಮನೆತನದ ಹಿರಿಯರು ಯಕ್ಷಗಾನ ಕ್ಷೇತ್ರಕ್ಕೆ ಕೊಡುಗೆ ನೀಡಿರಲೇಬೇಕು. ಈ ಹಿನ್ನಲೆಯಲ್ಲಿ ಯಕ್ಷಗಾನ ಇತಿಹಾಸ ಸುಮಾರು ಎಂಟನೇ ಶತಮಾನದಷ್ಟು ಹಿಂದೆಯೆ ಆರಂಭಗೊಂಡಿರಬೇಕೆಂಬ ಅಭಿಪ್ರಾಯ ಮನೆತನದ ಇತಿಹಾಸದಿಂದ ತಿಳಿದು ಬರುತ್ತದೆ. ಸಭಾಹಿತ ಮನೆತನದಲ್ಲಿ ವಿಷ್ಣು, ನಾರಾಯಣ, ಗಣಪತಿಯೆಂಬ ಹೆಸರು ತಲೆಮಾರಿನಿಂದಲೂ ರೂಢಿಯಲ್ಲಿರುವುದರಿಂದ ವಿಷ್ಣು ಸಭಾಹಿತರ ಪೂರ್ವದಲ್ಲೆ ಯಕ್ಷಗಾನದ ನಂಟು ಈ ಮನೆತನಕ್ಕೆ ಇತ್ತು ಎಂಬುದು ಅರಿವಾಗುತ್ತದೆ.

೩.೧.೨. ವಿಷ್ಣು ಸಭಾಹಿತ

ಹದಿನೇಳನೆ ಶತಮಾನದಲ್ಲಿ ಸಭಾಹಿತ ಮನೆತನದಲ್ಲಿ ವಿಷ್ಣು ಸಭಾಹಿತರೆಂಬ ಪ್ರಸಂಗಕರ್ತರು ಆಗಿ ಹೋಗಿರುತ್ತಾರೆ. ಇವರು ನಾರಾಯಣ ಸಭಾಹಿತರ ಆರು ಮಕ್ಕಳಲ್ಲಿ ಕೊನೆಯವರು ಇವರು 'ಚಂದ್ರಹಾಸ', 'ಮಾರಿ ಮುಖ ಕಾಳಗ', 'ಶತಾಸ್ಯರಾವಣನ ಕಾಳಗ' ಕೃತಿಯನ್ನು ರಚಿಸಿದ್ದರು.

ವಿಷ್ಣು ಸಭಾಹಿತರ ಕೃತಿಗಳನ್ನು ಕಡತೋಕಾ ಮಂಜುನಾಥ ಭಾಗವತರ ಕರ್ಕಿಸವಲಿನ ಶಂಕರನಾರಾಯಣ ಹೆಗಡೆಯವರ ಮನೆಯಲ್ಲಿರುವ ತಾಳೆಗರಿಗಳನ್ನು ಓದಿ "ಆ ಪ್ರತಿಯ ಅವರ ದೊಡ್ಡಜ್ಜ ಪರಮಯ್ಯ ಹೆಗಡೆಯವರ ಕಾಲದಲ್ಲಿಯೇ ಇತ್ತು. ಅವರ ದೊಡ್ಡಜ್ಜ ೯೦-೯೫ ವರ್ಷ ಹಿಂದಿನವರಾಗಿದ್ದರು. ಚಂದ್ರಗುತ್ತಿಯ ಪರಶುರಾಮಪ್ಪನವರಿಂದ ಪಡೆದ ಪ್ರತಿ ಇದಾಗಿತ್ತು. ಇದರಿಂದ ತಿಳಿಯುವುದೇನೆಂದರೆ ವಾಹನ ಸಂಪರ್ಕವಿಲ್ಲದ ಕಾಲದಲ್ಲಿ ಹಳದಿಪುರದಿಂದ ದೂರದ ಚಂದ್ರಗುತ್ತಿಯವರೆಗೆ ಒಬ್ಬ ಪ್ರಸಂಗ ಕರ್ತನ ಪ್ರತಿಯು ಹೋಗಬೇಕಾದರೆ ಆ ಪ್ರಸಂಗಗಳು ಸಾಕಷ್ಟು ಪ್ರಚಾರವಾಗಿರಬೇಕು. ಸುಮಾರು ೧೫೦ ವರ್ಷದಹಿಂದೆ ಅವುಗಳ ಆಡುವ ಪರಿಪಾಠವಿದ್ದಿರಬೇಕು."[೨]

---

೨. ಯಕ್ಷಗಾನ ವನವಿಹಾರ-ಕಡತೋಕಾ ಮಂಜುನಾಥ ಭಾಗವತ- ಪುಟ ೨೮.

ಕರ್ಕಿಯ ಹಾಸ್ಯಗಾರರ ದುರ್ಗಾಂಬಾ ಯಕ್ಷಗಾನ ಮಂಡಳಿಯು ಸಭಾಹಿತರ ಕೃತಿಯನ್ನು ಹಿಂದೆ ಆಡುತ್ತಿದ್ದರು. ಈ ಮಂಡಳಿಯ ಇತಿಹಾಸವೂ ನಾಲ್ಕು ನೂರು ವರ್ಷದ ಹಿಂದೆ ಆರಂಭಗೊಳ್ಳುವುದರಿಂದ ಸಭಾಹಿತರ ಮತ್ತು ಯಕ್ಷಗಾನದ ಸಂಬಂಧ ಪ್ರಾಚೀನವೆಂದು ಊಹಿಸಬಹುದು.

"ಚಂದ್ರಹಾಸ ಚರಿತೆಯ ಕರ್ಕಿ ಸವಲು ಪ್ರತಿಯ ೮೨ನೇ ಓಲೆಯಲ್ಲಿ" ಸೌರಾಷ್ಟ್ರ ತ್ರಿವುಡೆಯ ಈ ಕೆಳಗಿನ ಪದ್ಯದಲ್ಲಿ ಕವಿ ವಿಷ್ಣು ಸಭಾಹಿತರ ಸ್ಥಳ, ಕುಲಗೋತ್ರಗಳ ಪೂರ್ಣ ಪರಿಚಯವಿದೆ.[೩]

ಬಸವರಾಜಪುರಾಗ್ರಹಾರದಿ ಎಸೆವ ಕರಿಮುಖನವನ ಸೇವಕ
ಪೆಸರಿಸಿದ ನಾರಾಯಣ ಸಭಾಹಿತ ನೆಸೆಯಲವನ ॥೧॥
ಕಿರಿಯ ಸುತನಾವಿಷ್ಣು ಶ್ರೀ ಹರಿಚರಣ ಸೇವೆಯ ಮಾಡುಲೋಸುಗ।
ಸರಸಪದರೂಪ ದೊಳಗಿದನು/ ವಿರಚಿಸಿಹೆನು ॥೨॥
ಇಳೆಯ ಜನರಿಂದಳಿಯದೇ ನರಕೃತಿಯದೆನ್ನದೆ॥
ಬಲಿದು ಲಾಲಸೆ ಹರಿಯ ಪದಸಿರಿ ॥ ಫಲಿಸುವರ್ಗೆ ॥೩॥
ಧಾರಿಣಿಯಳೊತ್ಯಧಿಕವೆನಿಸಿಯೆ । ಮೆರೆದು ವಿಭವದೊಳಿರುವ ಇಡಕುಂಚ॥
ಪುರದಿ ನೆಲಸಿಹ ಶ್ರೀಗಣೇಶನ । ಕರುಣದಿಂದ ॥೪॥

ಬಸವರಾಜ ಪುರವೆಂಬುದು ಹೊನ್ನಾವರ ತಾಲ್ಲೂಕಿನ ಅಗ್ರಹಾರವಾಗಿದ್ದು ಇಲ್ಲಿಯೂ ಗಣಪತಿ ದೇವಾಲಯವಿದೆ. ಸಭಾಹಿತರೆ ಆ ದೇವಾಲಯದ ಮೊಕ್ತೇಸರರಾಗಿರುತ್ತಾರೆ. ಕವಿ ಪದ್ಯದಲ್ಲಿ ಇಡಗುಂಜಿ ಗಣಪತಿಯ ಸೇವಕರು ಎಂದು ಉಲ್ಲೇಖಿಸಿದ್ದಾನೆ. ಇದರಿಂದ ಇಡಗುಂಜಿ ಗಣಪತಿ ಆರಾಧಕರಾದ ಸಭಾಹಿತರು ಯಕ್ಷಗಾನವನ್ನು ಪೋಷಿಸಿದರು. ಇತಿಹಾಸದಲ್ಲೂ ಸಭಾಹಿತರು ಮತ್ತು ಯಕ್ಷಗಾನ ಕಲೆಯ ಪೋಷಣೆಯ ಕುರಿತು ವಿವರವಿದೆ.

೩.೧.೩. ಸಭಾಹಿತಪ್ರತಿ

ಸಭಾಹಿತರ ಮನೆತನದವರು ತಾಡೋಲೆಗಳಲ್ಲಿನ ಯಕ್ಷಗಾನ ಕೃತಿಯನ್ನು ಸಂಗ್ರಹಿಸಿಡುತ್ತಿದ್ದರು. ಅದರ ಪ್ರತಿ ತೆಗೆಯುವ ಹೊಣೆಯು ಅವರಿಗಿತ್ತು. ಉತ್ತರಕನ್ನಡದ ಯಾರೇ ಪ್ರಸಂಗವನ್ನು ಆಯ್ದುಕೊಂಡು "ತಾವು ಇಚ್ಛಿಸಿದ ಪ್ರಸಂಗವನ್ನು ಸಭಾಹಿತರ ಮನೆಯ ತಾಡೋಲೆಗಳಿಂದ ಪ್ರತಿಮಾಡಿಕೊಂಡು ಬರುತ್ತಿದ್ದರು. ಈ ಪ್ರತಿಯನ್ನು ಸಭಾಹಿತ ಪ್ರತಿ ಎಂದು ಕರೆಯುತ್ತಿದ್ದರು."[೪]

ಸಭಾಹಿತ ಪ್ರತಿಗಳು ಶಿರಸಿ, ಸಿದ್ದಾಪುರ, ಯಲ್ಲಾಪುರ, ಚಂದ್ರಗುತ್ತಿಗಳಲ್ಲೂ ಲಭ್ಯವಿತ್ತು. ಸಂಪರ್ಕಗಳಿಂದ ಆ ಕಾಲದಲ್ಲಿ ಪ್ರಸಂಗ ಕೃತಿಗಳನ್ನು ದೂರದ ಊರುಗಳಿಗೆ ಕೊಂಡೊಯ್ದು ಇಡಬೇಕಾದರೆ

---

೩. ಯಕ್ಷಗಾನ ವಿಹಾರ–ಕಡತೋಕಾ ಮಂಜುನಾಥ ಭಾಗವತ ಪು.–೨೭
೪. ಯಕ್ಷಗಾನ ಪ್ರಯೋಗದಲ್ಲಿ ಉತ್ತರಕನ್ನಡ ವೈಶಿಷ್ಟ್ಯಗಳು – ಹೊಸ್ತೋಟ ಮಂಜುನಾಥ ಭಾಗವತ ಪು–೧೨೩ –ಸತ್ಯಲೋಕ – ಪು. ೧೩೪

ಸಭಾಹಿತ ಮನೆತನದ ಈ ಪದ್ಧತಿ ಸಾಕಷ್ಟು ಪ್ರಚಾರ ಪಡೆದಿರಬೇಕು. ಇದರಿಂದ ಸಭಾಹಿತ ಮನೆತನದಲ್ಲಿ ಕಲಾವಿದರು ಭಾಗವತರು ಇರಬೇಕು ಎಂದು ಊಹಿಸಬಹುದಾಗಿದೆ.

೩.೧.೪. ಸಭಾಹಿತ ಮಟ್ಟು[೫]

ಉತ್ತರ ಕನ್ನಡದ ಯಕ್ಷಗಾನ ಪರಂಪರೆಗೆ ಹಿಂದೆ ಸಭಾಹಿತ ಮಟ್ಟು ಎಂದೆ ಕರೆಯುತ್ತಿದ್ದರು. ಇದು ಯಕ್ಷಗಾನದ ಹಾಡುಗಾರಿಕೆಯ ಶೈಲಿಯಾಗಿದೆ. ಈ ಪದ್ಧತಿಗೆ ವಿಶೇಷ ಮನ್ನಣೆ ಇತ್ತು.

"ಸಭಾಲಕ್ಷಣದಿಂದ ಮಂಗಲದವರೆಗೆ ತನ್ನದೆ ಆದ ವಿಶಿಷ್ಟ ನಡೆಯನ್ನು ಹೊಂದಿದ ಸಭಾಹಿತ ಮಟ್ಟು ತನ್ನಷ್ಟಕ್ಕೆ ತಾನೂ ಪರಿಪೂರ್ಣವಾಗಿತ್ತು. ಪ್ರವೇಶ ಒಡ್ಡೋಲಗ, ಯುದ್ಧ ನೃತ್ಯ, ಸ್ತ್ರೀವೇಷ ಕುಣಿತ ಆ ಕಾಲದಲ್ಲಿ ಏಕಪ್ರಕಾರವಾಗಿ ಅನುಸರಿಸಲ್ಪಡುತ್ತಿತ್ತು.

೩.೧.೫. ಸಭಾಹಿತ ಮಟ್ಟು ಮತ್ತು ಉತ್ತರ ಕನ್ನಡದ ಯಕ್ಷಗಾನದ ವೈಶಿಷ್ಟಗಳು[೬]

೧. ವಿಲಂಬಲಯದ ಹಾಡುಗಾರಿಕೆ, ಪದ್ಯ ಹೇಳುವಲ್ಲಿ ಭಾವಕ್ಕೆ ಪ್ರಾಧಾನ್ಯತೆ ನೀಡಲು ಅನುವಾಗುವಂತೆ ಪದ್ಯದ ಶಬ್ಧದಗಳನ್ನು ವಿಂಗಡಿಸಿ ಹೇಳುವುದರಿಂದ ವಿಲಂಬಯ ರೂಢಿಯಲ್ಲಿದೆ.

೨. ಚೌಕಿಯಲ್ಲಿ ಗಣಪತಿ ಪೂಜೆ ಮಾಡುವಾಗ "ಗಜಮುಖದವಗೆ ಗಣಪಗೆ" ಎಂದು ಭಾಗವತ ಹೇಳಿದರೆ – ತ್ರಿಜಗವಂದಿತಗೆ ಆರತಿ ಎತ್ತಿರೆ ಎಂಬುದಾಗಿ ನಟರು ಸಾಮೂಹಿಕವಾಗಿ ಭಜನೆಯಂತೆ ಹೇಳುತ್ತಿದ್ದರು.

೩. ಹಾಡಿನ ಲಯಕ್ಕೆ ಸಂಬಂಧಿಸಿದಂತೆ ಸ್ವರಕ್ಕೆ ಸಂಬಂಧಿಸಿದ ವೈಶಿಷ್ಟ್ಯ – ಮಂದರ – ಮಧ್ಯ – ತಾರ ಈ ಮೂರು ಸಪ್ತಕಗಳಲ್ಲಿ ಮಂದರ ಮತ್ತು ಮಧ್ಯ ಸಪ್ತಕಗಳನ್ನು ಹೆಚ್ಚಾಗಿ ಬಳಸುವುದು ಉತ್ತರ ಕನ್ನಡದ ವೈಶಿಷ್ಟ್ಯವಾಗಿದೆ.

೪. ವಿಲಂಬಿತ ಗತಿಯ ನುಡಿತಕ್ಕೆ ಅನೂಕೂಲವಾಗುವಂತೆ ಮದ್ದಳೆಯ ಆಕಾರ ಆಯಗಳು ೨೪ ಇಂಚು. ಇದಕ್ಕೂ ಮಿಕ್ಕಿ ಉದ್ದಳತೆ ಪಡೆದಿದ್ದವು ಬೆರಳು – ಹೊರಳಿಕೆ – "ಧಿಮಕಿಟತಕ ತರಿಕಿಟತಕ – ದಿಮಕಿಟತರಿಕಿಟ ಕಟತಕ ದಿಮಕಿಟ ತರಿಕಿಟ ತರಿಕಿಟ ಕಿಟತಕ" ಈ ನುಡಿಗಳ ಸಂಯೋಜನೆ ಹೆಚ್ಚು, ಧೇಂ ತತ್ತಾಧೇಂ ಕಿಟತಕ, ತೈಯ್ಯಕ್ಕು ತೈದೈ – ತದ್ದಮ – ತಕದಿಮ – ದಿಂನ್ನಕ ತಕದಿನ ತೋಂ, ತದೀಂ ದಿಮತ ಈ ಮಾದರಿಯ ದಸ್ತುಗಳ ಬಳಕೆ ಉತ್ತರಕನ್ನಡದಲ್ಲಿ ವಿಶೇಷವಾಗಿದ್ದವು. ತಾದೀ ತಾತಾ ತಾಧೀ, ತೈಯ್ಯತೋಚದಿಂನ್ನಾ ದಿಂನ್ನಾ ದಿಂನತ್ರೈ ತಾರ್‌ಹ್ ತರಕಡ್ ಕಡ್ತಕದಿಂನ್ನ, ತಾತಾ ದಿಮತರಿ ಕಿಟತಕ ದಿಂನ್ನತ್ತೈ ತರ್‌ದಿನ್ನತ್ತೈ ಮುಂತಾದ ಮಾದರಿಯ ಬಿಡಿತೆಗಳು ಉತ್ತರಕನ್ನಡದ ಪರಂಪರೆಯವಾಗಿದ್ದವು.

ಚುರುಕು ತ್ರಿವಡೆಯ ತಾತಾಧೇಂತಾಸ್ತ, ದಿದ್ದಿ ತೋಂ ದಿಮಕಿಟತಕ ಈ ನುಡಿಕೆಗಳಲ್ಲಿ ವೀರರಸವನ್ನು ವಿಲಂಬದಲ್ಲಿ ಪ್ರಕಟಿಸುವ ಕ್ರಮವಿತ್ತು.

---

೫. ಯಕ್ಷಗಾನ ವನವಿಹಾರ– ಮಂಜುನಾಥ ಭಾಗವತರು – ಪುಟ ೨೮

೬. ಕ್ಷೇತ್ರಕಾರ್ಯ – ಹೊಸ್ತೋಟ ಮಂಜುನಾಥ ಭಾಗವತರ ಸಂದರ್ಶನ – ನೋ. ಅನುಬಂಧ

ಕೋೕರೆ ತಾಳದ ತಾದೇಂನ್ನಕ ತದ್ದಿನ್ನಕ ತಾಕಡ್ತಕದಿಂನ್ನಾ ಕಡ್ತಕ್ ಇವುಗಳ ಅಲಂಕಾರಿಕಗತ್ತಿನ ನಡೆ ಕೂಡಾ ಉತ್ತರಕನ್ನಡದ ಪರಂಪರೆಯ ವೈಶಿಷ್ಟವಾಗಿದೆ. ಹಾರಿಕೆ ತಾಳದ ವೈಯ್ಯಾರದಗತ್ತಿನ ತತ್ತದಿಂತ್ತತ್ತ, ಕಡ್ತಂಗ್ ದಿನ್ನ ದಿಂತತ್ತದಂತ ಬಿಡ್ತಿಗೆಗಳು ರೂಢಿಯಲ್ಲಿದ್ದವು."

೪. ಲಾಲಿ ಕುಣಿತ : ಉತ್ತರ ಕನ್ನಡ ಶೈಲಿಯ ವಿಶಿಷ್ಟ ಪರಂಪರೆಯ ಶೈಲಿ ಲಾಲಿ ಕುಣಿತವಾಗಿದೆ. ಪಗಡೆ ವೇಷದವರು "ಧಂ ಧಂ ಧೇಂ ಧಂ" ಎಂಬ ಮದ್ದಳೆ ನುಡಿಗೆ ಒಪ್ಪುವ ವೈವಿಧ್ಯಮಯ ಕುಣಿತ ಮೋಹಕವಾಗಿರುತ್ತಿತ್ತು.

೫. ತೆರೆಕುಣಿತ :– ಉತ್ತರ ಕನ್ನಡ ಶೈಲಿಯ ಪರಿಣಾಮಕಾರಿ ಕುಣಿತವೆಂದರೆ ತೆರೆಕುಣಿತ, ಕುಣಿತ ಒಂದೆ ಆಗಿದ್ದರೂ ರಾಮ, ಕೃಷ್ಣ, ಧರ್ಮರಾಯ ಪಾತ್ರಗಳಿಗೆ ಹೇಳುವ ಪದ್ಯಗಳು ಬೇರೆ ಬೇರೆಯಾಗಿದ್ದವು. ಹನುಮಂತನ ವೇಷಕ್ಕೂ ತೆರೆ ಕುಣಿತವಿತ್ತು.

"ಇಂದು ಹಳೆಯ ಶೈಲಿಯಲ್ಲಿ ತೆರೆ ಕುಣಿತದ ಪೆಟ್ಟುಗಳನ್ನು ಲಾಲಿಕುಣಿತದ ನುಡಿತಗಳನ್ನು ಬಣ್ಣದ ವೇಷದ ಪ್ರತ್ಯೇಕ ತೆರೆ ಬಿಡ್ತಿಗೆಗಳನ್ನು ಪೀಠಿಕೆ ವೇಷದ ನಯನಾಜುಕುಗಳ ಪೆಟ್ಟುಗಳನ್ನು ಅರಿತ ಒಬ್ಬರೆ ಒಬ್ಬ ಮದ್ದಳೆವಾದಕರೆಂದರೆ ಶ್ರೀಯುತ ಧರ್ಮಶಾಲಾ ಮಹಾಬಲೇಶ್ವರ ಭಟ್ಟರು, ಎಂಬುದನ್ನ ಧೈರ್ಯವಾಗಿ ಹೇಳಬಲ್ಲೆ ಎಂದು ನಾರಾಯಣ ಹಾಸ್ಯಗಾರರು ಉಲ್ಲೇಖಿಸಿದ್ದಾರೆ.

೬. ಅಭಿನಯಕ್ಕೆ ವಿಲಂಬಲಯ, ಪೋಷಕವೆಂದು; ನಾಟ್ಯಕ್ಕೆ ಮಧ್ಯಲಯ ಅನುಕೂಲ. ತ್ವರಿತಲಯದಲ್ಲಿ ಬಹಳ ಕುಣಿಯದೆ ಮುಕ್ತಾಯವಾದಾಗ ಪ್ರದರ್ಶನದಲ್ಲಿ ನೈಜತೆ ಇರುತ್ತಿದ್ದುದು ಉತ್ತರಕನ್ನಡದ ಪ್ರಾಚೀನ ಪರಂರೆಯಲ್ಲಿ ಕಾಣಬಹುದಿತ್ತು.[೭]

೭. ಯಕ್ಷಗಾನ ಕವಿಗಳ ಪದ್ಯರಚನೆಯು ಹವ್ಯಕ ಹಾಡುಗಳ ಧಾಟಿಯನ್ನು ಹೋಲುತ್ತದೆ. ಶೋಭಾನೆ ಪದ ಜೋಗುಳ ಪದ, ಆರತಿ ಪದಗಳ ಧಾಟಿಯಲ್ಲಿ ಯಕ್ಷಗಾನದ ಹಾಡುಗಳು ರಚಿತಗೊಂಡಿವೆ. ಈ ರಚನೆಗಳು ಅಭಿನಯಕ್ಕೆ ಪೂರಕವಾದವು "ಅಭಿನಯ ಪ್ರಧಾನವಾದ ಯಕ್ಷಗಾನ ರಂಗನಿರ್ದೇಶನ ತಂತ್ರವನ್ನು ಉತ್ತರ ಕನ್ನಡದ ಕವಿಗಳ ಪದ್ಯಗಳಲ್ಲಿ ಗುರುತಿಸಬಹುದು." ಊರುಕೇರಿ ವಿಷ್ಣು ಭಾಗವತರ ಈ ಪದ್ಯ ಗಮನಿಸಿ –

"ಬಾಲಕರ ಕರಂಗಳ ಬಿಗಿದು, ಸುಣ್ಣವ ಬರೆದು
ದೂರಿ ನಿಮ್ಮಯಗೆಂದೆನುತರಲಿ ನೂಕಲ್ಕೆ
ಭೂರಿತಾಪದಿ ಬಂದು ಕರವ ಜೋಡಿಸಿ
ನಿಂತು ತರತರನೆ ನಡುಗಿ ಬಳಿಕ ॥

ಈ ವಾರ್ಧಿಕಾರ್ಧದಲ್ಲಿ ರಂಗದಲ್ಲಿ, ಕವಿ ಪಾತ್ರಧಾರಿ ವರ್ತಿಸಬೇಕಾದ ವಿಧಾನಗಳನ್ನು ಕವಿ ನಿಖರವಾಗಿ ಸೂಚಿಸಿದ್ದಾರೆ."[೮]

---

೭ ಕ್ಷೇತ್ರಕಾರ್ಯ – ನಾರಾಯಣ ಹಾಸ್ಯಗಾರರ ಸಂದರ್ಶನ

೮. ಸತ್ಯಲೋಕ ಉತ್ತರಕನ್ನಡದ ವೈಶಿಷ್ಯಗಳು ಹೊಸ್ತೋಟ ಮಂಜುನಾಥ ಭಾಗವತ – ಪು ೧೩೫

ಉತ್ತರಕನ್ನಡದಲ್ಲಿ ಬಳಸುತ್ತಿದ್ದ ವೇಷಭೂಷಣಗಳು ಸೂಕ್ಷ್ಮವಾಗಿದ್ದವು. ವೀರಗಾಸೆ ಸೊಂಟದ ಒಡ್ಯಾಣ, ರಕ್ಕಸವೇಷಕ್ಕೆ ತಗಡಿನ ಹಲ್ಲುಗಳು, ಪುರುಷವೇಷದಲ್ಲಿ ಸಾದಾಭುಜಕೀರ್ತಿ, ವರ್ತುಲಾಕಾರದ ಎದೆಹಾರ ಕತ್ತರಿಹಾರಗಳಿದ್ದವು. ವೇಷಭೂಷಣಗಳು ಕೂಡಾ ಅಭಿನಯಕ್ಕೆ ಅನುಕೂಲವಾಗಿ ಇತ್ತು.

೩.೨. ಭಾಗವತರು

ಉತ್ತರ ಕನ್ನಡ ಜಿಲ್ಲೆಯ ಹವ್ಯಕರಲ್ಲಿ ಭಾಗವತ ಎಂಬ ಮನೆತನಗಳಿವೆ. ಯಲ್ಲಾಪುರ, ಹೊನ್ನಾವರ, ಕುಮಟಾ ತಾಲ್ಲೂಕುಗಳಲ್ಲಿ ಇರುವ ಭಾಗವತ ಮನೆತನದವರು ಹಿಂದೆ ಯಕ್ಷಗಾನದ ಭಾಗವತರಾಗಿ ಸೇವೆ ಸಲ್ಲಿಸುತ್ತಿದ್ದರು. ಯಕ್ಷಗಾನ ಕಲಾಸೇವೆಯಿಂದ ಈ ಹೆಸರು ಹವ್ಯಕರಿಗೆ ಬಂದಿರುವುದೆ ಹೌದು. ಕಾರಣ ಮೂಲಗಳಲ್ಲಿ ಹವ್ಯಕರ ಸಪ್ತ ಸಂಕೇತ ನಾಮಗಳಲ್ಲಿ ಕದಂಬರು ಭಾಗವತ ಎಂಬ ನಾಮವನ್ನು ಹವ್ಯಕರಿಗೆ ನೀಡಿಲ್ಲ.

ಭಾಗವತ ಎಂದರೆ "ಭಗವಂತನನ್ನು ಅಥವಾ ಭಗವತಿಯನ್ನು ಸದಾ ದೇವತೆಯನ್ನಾಗಿ ಪೂಜಿಸುವ ಭಕ್ತೋತ್ತಮನಿಗೆ "ಭಾಗವತ" ಎಂದು ಹೆಸರು ಭಗವಂತನಿಗೆ ಅಥವಾ ಭಗವತಿಗೆ ಸಂಬಂಧಪಟ್ಟ ಗ್ರಂಥ ವಿಶೇಷವೂ ಭಾಗವತ ಎನಿಸುತ್ತದೆ. ಹವ್ಯಕರು ಸ್ಮಾರ್ತ ಸಂಪ್ರದಾಯದವರಾಗಿದ್ದು, ಭಾಗವತ ಸಂಪ್ರದಾಯದ ಆಚರಣೆಯನ್ನು ಕೆಲವೊಮ್ಮೆ ಕಾಣಬಹುದು. ದೇವಿ ಭಾಗವತ ಪಾರಾಯಣ ಹವ್ಯಕರಲ್ಲಿ ಮೊದಲಿನಿಂದಲೂ ರೂಢಿಯಲ್ಲಿದೆ. ಇದರಿಂದ ಹವ್ಯಕರೂ "ಭಾಗವತರೆನಿಸಿದ್ದು" ಯಕ್ಷಗಾನ ಭಾಗವತಕೆಯಿಂದಲೆ, ಇಂತಹ ಮನೆತನ ಉತ್ತರಕನ್ನಡದಲ್ಲಿ ಕಂಡುಬರುತ್ತದೆ.[೯]

ಉತ್ತರಕನ್ನಡದ ಪಾತ್ರಃಸ್ಮರಣೀಯರು ಎಂದು ಗುರುತಿಸಲಾದ ಭಾಗವತರು ದಿವಂಗತ ಚರು ಭಾಗವತರು, ಚಿತ್ರಗಿ ರಾಮಭಾಗವತರು, ಕಡತೋಕಾ ಶಂಭು ಭಾಗವತರು, ಹಂದಿಮನೆ ಭಾಗವತರು, ಕರ್ಕಿ ಸುಬ್ರಾಯ ಭಾಗವತರು, ಶಿರಸಿ ದೇವಗುಡಿ ಭಾಗವತರು, ಬಾಳಹದ್ದ ಕೃಷ್ಣ ಹೆಗಡೆ, ಹೊಸತೋಟ ಮಂಜುನಾಥ ಭಟ್ಟ, ಕಪ್ಪೆಕೆರೆ ಸುಬ್ರಾಯ ಭಾಗವತರು, ಕೃಷ್ಣ ಭಾಗವತರು, ಮಕ್ಕಿ ಮಹಾಬಲೇಶ್ವರ ಹೆಗಡೆಯವರು ಪ್ರಸಿದ್ಧರಾದ ಭಾಗವತರುಗಳಾಗಿದ್ದರು.[೧೦]

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾಂಬಾಡಿ ಪದ್ಯಾಣ, ಮನೆತನಗಳಲ್ಲಿ ಅನೇಕ ತಲೆಮಾರು ಭಾಗವತಿಕೆ ಮಾಡಿದರೂ ಭಾಗವತರು ಎಂಬ ಹೆಸರು ಈ ಮನೆತನಕ್ಕೆ ಇಲ್ಲ. ದಕ್ಷಿಣಕನ್ನಡ ಜಿಲ್ಲೆಯ ಹವ್ಯಕರಲ್ಲಿ ಭಾಗವತ ಎಂಬ ಹೆಸರನ್ನು ಭಾಗವತಿಕೆ ಮಾಡಿದ ಮನೆತನಗಳು ಪಡೆದಿಲ್ಲ.

ಉತ್ತರಕನ್ನಡದಲ್ಲಿ ಮಾತ್ರ ಈ ಹೆಸರು ಬರಲು ಈ ಮನೆತನಗಳ ಪ್ರಾಚೀನ ಪರಂಪರೆಯೇ ಕಾರಣವಿರಬೇಕು. ಅನೇಕ ತಲೆಮಾರುಗಳ ಯಕ್ಷಗಾನ ಸೇವೆಯಿಂದ ಮನೆತನಕ್ಕೆ ಅದೇ ಹೆಸರಿನಿಂದ ಗುರುತಿಸಿರಬೇಕು. ಭಾಗವತರು ನಿರ್ದೇಶಿಸಿದ ಯಕ್ಷಗಾನಕ್ಕೆ ಭಾಗವತ ರಾಟ ಎಂದೆ ಕರೆದಿರುವುದು ಕೂಡ ಅಷ್ಟೇ ಮಹತ್ವವಾಗಿದೆ. ಉತ್ತರಕನ್ನಡದ ಭಾಗವತರ ಮನೆತನಗಳ ಇತಿಹಾಸ ಪ್ರಾಚೀನವಾದುದು.

---

೯. ಯಕ್ಷಗಾನ ವರ್ಣ ವೈಭವ – ಡಾ॥ ಗೋಪಾಲ ಕೃಷ್ಣ ಹೆಗಡೆ. ಪು. ೬೪

೧೦. ಯಕ್ಷಗಾನ ಹಾಡುಗಾರಿಕೆ – ಕಡತೋಕಾ ಮಂಜುನಾಥ ಭಾಗವತ. ಪು ೧೭

ಭಾಗವತರಾಗಿ ಹಿಂದಿನಿಂದಲೂ ಹವ್ಯಕರು. ಸೇವೆಸಲ್ಲಿಸಿದ್ದಕ್ಕೆ ಉತ್ತರ ಕನ್ನಡದ ಹಳೆಯ ಮೇಳಗಳು ಸಾಕ್ಷಿಗಳಾಗಿವೆ. ಹಲವು ತಲೆಮಾರುಗಳ ಇತಿಹಾಸವಿರುವ ಕರ್ಕಿ ಮೇಳ, ಮೂಡ್ಕಣಿ ಮೇಳ, ಹೆಗಡೆ ಮೇಳ, ಬಾಡದ ಮೇಳ, ಹೊನ್ನಗದ್ದೆ ಮೇಳ, ಅಣಲಗಾರ ಮುಂತಾದ ಮೇಳಗಳಲ್ಲಿ ಕರ್ಕಿ ಮೇಳವು ಅತ್ಯಂತ ಹಳೇಯ ಮೇಳ. ಈ ಎಲ್ಲಾ ಮೇಳಗಳಲ್ಲೂ ಭಾಗವತರಾಗಿ ಸೇವೆ ಸಲ್ಲಿಸಿದ ಕುಟುಂಬಗಳಲ್ಲಿ

ಕೆಲವು ಮನೆತನಕ್ಕೆ ಪರಂಪರೆ ಹಾಗೆಯೇ ಮುಂದುವರಿದಿದೆ. ಅಂತಹ ಮನೆತನಗಳು 'ಭಾಗವತ' ಎಂದು ಹೆಸರಾಗಿದೆ. ಈ ಕುಟುಂಬ ಮೂಲದಲ್ಲಿ ಯಾವಹೆಸರಿದ್ದರೂ ಕಲೆಯ ಆರಾಧನೆಯಿಂದ ಭಾಗವತರೆಂದು ಪ್ರಸಿದ್ಧರಾಗಿದ್ದಾರೆ. ಇದರಿಂದ ಭಾಗವತರ ಕುಟುಂಬಗಳು ಕುಮಟಾ, ಹೊನ್ನಾವರ, ಯಲ್ಲಾಪುರ, ಸಿದ್ದಾಪುರ ತಾಲೂಕಿನಲ್ಲೆ ಇವೆ. ಈ ಕುಟುಂಬಗಳಲ್ಲಿ ಯಕ್ಷಗಾನ ಪರಂಪರೆ ಇಂದಿಗೂ ಮುಂದುವರಿದಿದ್ದು ಕಂಡುಬರುತ್ತದೆ.

ಯಕ್ಷಗಾನ ಭಾಗವತರಾಗಿದ್ದ ಹವ್ಯಕರನ್ನು ಪಟ್ಟಿ ಮಾಡಿದರೆ ಪ್ರಸಿದ್ಧರೇ ನೂರಾರು ಸಂಖ್ಯೆಯಲ್ಲಿದ್ದಾರೆ. ಇನ್ನು ಹವ್ಯಕ ಹವ್ಯಾಸಿ ಭಾಗವತರು ವಿಫುಲವಾಗಿದ್ದಾರೆ.

ವಿಶೇಷವಾಗಿ ಯಲ್ಲಾಪುರ ತಾಲೂಕಿನ ನಂದೊಳ್ಳಿ, ಕವಾಳೆ, ಚಂದಗುಳಿ ಮಳಲ್‌ಗಾಂವ್ ಮೊದಲಾದ ಊರುಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಭಾಗವತರ ಮನೆಗಳಿವೆ. ಸಂಗೀತ, ಗಮಕ, ಗಾಯನ, ಕ್ಷೇತ್ರದ ಪ್ರಸಿದ್ಧರು ಈ ಮನೆಗಳಲ್ಲಿ ಇದ್ದಾರೆ.

ಘಟ್ಟದ ಕೆಳಗಿನ ಪ್ರದೇಶದಲ್ಲಿ ಕರ್ಕಿ, ಕುಮಟಾ, ಚಿತ್ರಗಿ, ಹಲಸ್‌ಮಾವು, ಹೆಗಡೆ, ಕಡತೋಕಾ, ಹಂದಿಗೋಣ, ಉಂಚಗೇರಿ, ನೀಲಕೋಡ ಮುಂತಾದ ಊರುಗಳಲ್ಲಿ ಭಾಗವತ ಹೆಸರಿನ ಮನೆತನಗಳಿವೆ. ಇಷ್ಟು ಸಂಖ್ಯೆಯ ಭಾಗವತ ಹೆಸರಿನ ಮನೆತನಗಳು ಹವ್ಯಕರಲ್ಲಿ ಮಾತ್ರ ಇತ್ತು ಎನ್ನುವುದಕ್ಕೆ ಈ ಮನೆತನ ಪರಂಪರೆಯೂ ಸಾಕ್ಷಿಯಾಗಿದೆ.

"ಕರ್ಕಿ ಮೇಳದಲ್ಲಿ ಕಿಣಿ ಕಿಣಿ ಭಾಗವತರು, ಕಡತೋಕಾ ಶಂಭು ಭಾಗವತರು, ಕಡತೋಕಾ ಸುಬ್ರಾಯ ಭಾಗವತರು, ಮಕ್ಕಿ ಮಹಾಬಲೇಶ್ವರ ಹೆಗಡೆ, ಲಕ್ಷ್ಮಿನಾರಾಯಣ ಭಾಗವತರು, ಕಡತೋಕಾ ಮಂಜುನಾಥ ಭಾಗವತರು, ಕೃಷ್ಣ ಭಾಗವತರು ಇವರೆಲ್ಲ ಮೇಳದ ಪರಂಪರೆಯನ್ನು ಚೆನ್ನಾಗಿ ತಿಳಿದಿದ್ದ ಹಾಗೂ ಅದನ್ನು ನಡೆಸಿಕೊಂಡು ಬಂದ ಭಾಗವತರಾಗಿದ್ದರು. ಊರಕೇರಿ ಸುಬ್ರಾಯ ಭಾಗವತರು ಕೂಜಳ್ಳಿ ಲಕ್ಷ್ಮಿ ನಾರಾಯಣ ಭಾಗವತರು, ಸೆಳ್ಳೆವಾರು ಭಾಗವತರು, ಬಾಳ್ಗಾರು ಭಾಗವತರು, ಬಾಳೆಹದ್ದ ಭಾಗವತರು, ಕಂಚಿಕೈ ಲಂಬೋಧರ ಹೆಗಡೆ ಈ ಮುಂತಾದವರು ಕೂಡ ಈ ಮೇಳದಲ್ಲಿ ಭಾಗವತರಾಗಿ ಹೆಸರು ಮಾಡಿದ್ದಾರೆ."[೧೧]

೩.೨.೧. ಕಡತೋಕಾ ಭಾಗವತ ಮನೆತನ

ಪರಂಪರೆಯ ಶೈಲಿ ಕರ್ಕಿ ಮೇಳದಲ್ಲಿ ಭಾಗವತರಾಗಿದ್ದ ಕಡತೋಕಾ ಶಂಭು ಭಾಗವತರು ಜೋಗಿ ಮನೆ ಕೃಷ್ಣ ಭಾಗವತರ ಮನೆತನದಲ್ಲಿ ಹಿಂದಿನ ತಲೆಮಾರಿನಿಂದಲೂ ಪರಂಪರೆಯ ಶೈಲಿ

೧೧. ಯಕ್ಷಗಾನ ವರ್ಣವೈಭವ – ಡಾ॥ ಗೋಪಾಲಕೃಷ್ಣ ಹೆಗಡೆ – ಪು. ೨೩

ಎಂದು ಕರೆಯಲಾದ ಸಭಾಹಿತ ಮಟ್ಟಿನ ಹಾಡುಗಾರಿಕೆ ಇಂದು ಕೂಡ ಬಳಕೆಯಲ್ಲಿದೆ. ವರ್ತಮಾನದಲ್ಲಿ ಜೋಗಿಮನೆ ಕೃಷ್ಣ ಭಾಗವತರ ಮನೆತನದ ಶ್ರೀ ಗೋಪಾಲಕೃಷ್ಣ ಭಟ್ಟ ಜೋಗಿಮನೆ ಭಾಗವತರಾಗಿದ್ದಾರೆ.

ಕಡತೋಕಾ ಶಂಭು ಭಾಗವತರು ಪರಮಯ್ಯ ಹಾಸ್ಯಗಾರರ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕರ್ಕಿ ಮೇಳಕ್ಕೆ ಸಮರ್ಥ ಹಿಮ್ಮೇಳವಾಗಿದ್ದರು. ಕಡತೋಕಾ ಶಂಭು ಭಾಗವತರ ನಾಲ್ಕು ಜನ ಮಕ್ಕಳಲ್ಲಿ ಸುಬ್ರಾಯ ಶಂಭು ಭಾಗವತ, ಶ್ರೀ ಮಂಜುನಾಥ ಶಂಭು ಭಾಗವತ, ತೆಂಕು ತಿಟ್ಟು, ಬೆಡಗು ಗಳೆರಡರಲ್ಲಿ ಪ್ರಸಿದ್ಧರು. ಇವರು ಮೂಲತಃ ಕರ್ಕಿ ಮೇಳದ ಭಾಗವತರೆ ಆಗಿದ್ದರು. ಮನೆತನದಲ್ಲಿ ಎಲ್ಲಾ ಭಾಗವತರುಗಳು ಸವ್ಯಸಾಚಿಗಳಾಗಿದ್ದರು. "ಶ್ರೀ ಕಡತೋಕಾ ಮಂಜುನಾಥ ಭಾಗವತರ ಅಣ್ಣ ಲಕ್ಷ್ಮಿನಾರಾಯಣ ಭಾಗವತ ದಿ। ಕೃಷ್ಣ ಭಾಗವತರ ಒಡನಾಟದಿಂದ ಮಂದಗತಿಯಿಂದ ಆದಿಯಾಗಿ ಪದ್ಯ ಹೇಳುವ ನಮ್ಮ ಉತ್ತರ ಕನ್ನಡ ರೀತಿಯ ಹಾಡುಗಾರಿಕೆಯ ಪದ್ಧತಿ ತೆಂಕು ತಿಟ್ಟಿಗೂ ಪ್ರಚಾರವಾಯಿತು."[೧೨] ಯಕ್ಷಗಾನದ ಉತ್ತರ ಕನ್ನಡದ ಮಟ್ಟು ಎಲ್ಲೆಡೆ ಪ್ರಭಾವ ಬೀರಲು ಈ ಭಾಗವತ ಮನೆತನಗಳು ಕಾರಣವಾಗಿದೆ.

ದಿ। ಕೃಷ್ಣ ಭಾಗವತ ಜೋಗಿಮನೆ ಕಡತೋಕಾ ಇವರನ್ನು ಹಿರಿಯ ಪರಮಯ್ಯ ಹಾಸ್ಯಗಾರರು ಕರ್ಕಿ ಮೇಳಕ್ಕೆ ಕರೆತಂದರು. ಉತ್ತರ ಕನ್ನಡದ ಶೈಲಿಯ ವಿಶಿಷ್ಟತೆಯನ್ನು ಮೈಗೂಡಿಸಿಕೊಂಡು ತೆಂಕು ಬಡಗು ತಿಟ್ಟು ಗಳೆರಡರಲ್ಲೂ ಅತ್ಯಂತ ಪ್ರಸಿದ್ಧಿಯನ್ನು ಸಾಧಿಸಿದ್ದರು. ಕರ್ಕಿಮೇಳದಲ್ಲಿ ಕಂಚಿನ ಕಂಠದ ಹಾಡುಗಾರಿಕೆ ಶೈಲಿ ಕಲಾವಿದರಿಗೆ ಅಭಿನಯಿಸಲು ಸಮರ್ಥ ಹಿಮ್ಮೇಳವನ್ನು ಒದಗಿಸಿತ್ತು. ಇವರ ಅಣ್ಣನ ಮಗನಾದ ಶ್ರೀಗೋಪಾಲ ಕೃಷ್ಣ ಭಟ್ಟ ಜೋಗಿ ಮನೆ ಪ್ರಸ್ತುತ ಕರ್ಕಿ ಮೇಳದ ಭಾಗವತರಾಗಿದ್ದಾರೆ.

೩.೨.೨. ಹವ್ಯಕ ಭಾಗವತರ ಇತರ ಮನೆತನಗಳು

ಹವ್ಯಕರಲ್ಲಿ ಭಾಗವತಿಕೆ ಮನೆತನಗಳು ಸಾಕಷ್ಟಿವೆ. ಅಂತಹ ಮನೆತನಗಳು ಮನೆತನದ ವಿಶಿಷ್ಟ ಶೈಲಿಗೆ ಹೆಸರಾಗಿದೆ. ಉತ್ತರ ಕನ್ನಡದಲ್ಲಿಯ ಊರುಕೇರಿ ವಿಷ್ಣು ಭಾಗವತರು, ಸುಬ್ರಾಯ ಭಾಗವತರು, ಲಕ್ಕಣ್ಣ ಭಾಗವತರು ಪರಂಪರೆಯ ಮನೆತನವೇ ಆಗಿದೆ. ಯಲ್ಲಾಪುರದ ಹಂಡ್ರಮನೆ, ಬಾಳೆಹದ್ದ, ಕವಾಳೆ ಮನೆತನಗಳಲ್ಲೂ ಮನೆತನದ ಶೈಲಿ ಬೆಳೆದುಬಂದಿದೆ. ದಕ್ಷಿಣ ಕನ್ನಡದ ಪದ್ಯಾಣ, ಮಾಂಬಾಡಿ, ಮನೆತನಗಳು ಹವ್ಯಕರದ್ದಾಗಿದೆ. ಈ ಮನೆತನಗಳಲ್ಲಿ ಪ್ರಸಿದ್ಧರಾದ ಭಾಗವತರ ಶೈಲಿಯನ್ನು ಪರಂಪರೆಯಾಗಿ ರೂಪಿಸಿದ್ದು ಕಂಡುಬರುತ್ತದೆ.

೩.೩. ಹಾಸ್ಯಗಾರ ಮನೆತನ

ಉತ್ತರಕನ್ನಡ ಜಿಲ್ಲೆಯ ಕರ್ಕಿ ಮನೆತನದ್ದು ಹಾಸ್ಯಗಾರರಿಂದ ಹಾಸ್ಯಗಾರ ಎಂಬುದು ಯಕ್ಷಗಾನದಲ್ಲಿ ಹಾಸ್ಯ ಪಾತ್ರದ ಕಲಾವಿದರು. ಇವರ ಮನೆತನ ಪರಂಪರೆ ಯಕ್ಷಗಾನ ಇತಿಹಾಸದೊಂದಿಗೆ ಬೆಸೆದುಕೊಂಡಿದೆ. ಉತ್ತರಕನ್ನಡದ ಹಳೆಯ ಮೇಳವನ್ನು ಸಂಘಟಿಸಿದ ಹಾಸ್ಯಗಾರ ಮನೆತನದ

೧೨. ಹವ್ಯಕ ಸಂದೇಶ – ಕರ್ಕಿ ಮನೆತನ ಪುಟ್ಟು ಹಾಸ್ಯಗಾರರು ಪು. ೭

ಹಿರಿಯರು ಯಕ್ಷಗಾನವನ್ನು ವಿವಿಧ ರಾಜ್ಯಗಳಿಗೆ ಪರಿಚಯಿಸಿ "ಹಾಸ್ಯಗಾರ ಮೇಳ" ಎಂದು ಪ್ರಸಿದ್ಧಿ ಪಡೆಯುವಂತಾಯಿತು. ಇಡೀ ಕುಟುಂಬವೇ ಯಕ್ಷಗಾನಕ್ಕೆ ಪೂರಕವಾಗಿ ಮೇಳ ವ್ಯವಸ್ಥೆಯಲ್ಲಿತ್ತು. "ಹಾಸ್ಯಗಾರರು ಮೂಲತಹ ಹೆಗಡೆಗಳು ಮೇಳಯಜಮಾನಿಕೆಯಿಂದ ಎರಡನೇ ವರದ ಹೆಗಡೆ ಹಾಸ್ಯಗಾರರಾದರು. ರಾಜನ ಆಸ್ಥಾನದಲ್ಲಿ ಆಟವಾಡುವ ಕಾಲಕ್ಕೆ ರಾಜರೇ ನೀಡಿದ ಬಿರುದು ಇದು. ಯಾವ ಅರಸರು ನೀಡಿದ್ದು ಎಂದು ತಿಳಿದು ಬಂದಿಲ್ಲ. ದೊಡ್ಡ ಪರಂಪರೆಯ ಹಾಸ್ಯಗಾರರು ಈ ಮೇಳವನ್ನು ಪುನಃ ಸಂಘಟಿಸಿ ಕೀರ್ತಿಶಾಲಿಗಳಾದರು. ಹೀಗೆ ಒಂಬತ್ತು ತಲೆಮಾರುಗಳುದ್ದಕ್ಕೂ ನಿರಂತರವಾಗಿ ಯಕ್ಷಗಾನ ಒಂದು ಮನೆತನದ ಆಸ್ತಿಯಾಗಿ ಹಾಗೇ ಉಳಿದುಕೊಂಡಿದ್ದು ಯಕ್ಷಗಾನ ಪರಂಪರೆಯ ವಿಶಿಷ್ಟತೆಯನ್ನು ಎತ್ತಿ ಸಾರುತ್ತದೆ.[೧೩]

ಇಷ್ಟೊಂದು ದೀರ್ಘ ಪರಂಪರೆ ಮತ್ತು ಇತಿಹಾಸವಿರುವ ಹವ್ಯಕರ ಕುಟುಂಬ ಯಕ್ಷಗಾನ ಇತಿಹಾಸದಲ್ಲಿ ಇದೊಂದೆ ಆಗಿದೆ.

ಹಾಸ್ಯಗಾರರ ವಂಶಾವಳಿಯಲ್ಲಿ ವರದ ಹೆಗಡೆಯಿಂದ ಆರಂಭಿಸಿ, ಎರಡನೇ ವರದ ಹೆಗಡೆಯ ಕಾಲದಲ್ಲಿ ಯಕ್ಷಗಾನ ಮೇಳ ಆರಂಭವಾಗಿತ್ತು. ಸುಮಾರು ನಾಲ್ಕುನೂರು ವರ್ಷಗಳ ಹಿಂದೆಯೆ ಈ ಕಲಾವಿದರು ಯಕ್ಷಗಾನ ಸೇವೆಯಲ್ಲಿ ತೊಡಗಿದ್ದಾರೆ. ಅಂದಿನಿಂದ ಇಂದಿನವರೆಗೆ ತಲೆಮಾರಿನ ಒಬ್ಬೊಬ್ಬರೂ ಯಕ್ಷಗಾನ ರಂಗದ ವಿಶಿಷ್ಟ ಪ್ರತಿಭೆಗಳೆ ಆಗಿರುತ್ತಾರೆ.

೧೩. ಯಕ್ಷಗಾನ ವರ್ಣ ವೈಭವ – ಡಾ. ಗೋಪಾಲ ಕೃಷ್ಣ ಹೆಗಡೆ ಪು. ೨೧

೩.೩.೧. ಹಾಸ್ಯಗಾರ ಮನೆಯ ವಂಶಾವಳಿ[೧೪]

ವರದ ಹೆಗಡೆ
ಗಣೇಶ ಹೆಗಡೆ
ವರದ ಹಾಸ್ಯಗಾರ
ತಿಮ್ಮಣ್ಣ ಹೆಗಡೆ
ಪತ್ನಿ ಕಾವೇರಿ

ವರದ ಹಾಸ್ಯಗಾರ
ಪತ್ನಿ – ತಿಮ್ಮಿ

೧ ಭಾಗೀರಥಿ
೨ ಕಾವೇರಿ
೩ ಮಣಿಯಮ್ಮ
೪ ಭವಾನಿ

೧ ಪರಮಯ್ಯ ಹಾಸ್ಯಗಾರ
ಪತ್ನಿ ಭವಾನಿ

೨ ಗಣೇಶ
(ಸಂಗೀತಗಾರ)

೩ ತಿಮ್ಮ ಚಂದ್ರ ಶೇಖರ
ಪತ್ನಿ ಲಕ್ಷ್ಮಿ

೪ ಪರಮೇಶ್ವರಿ

ವರದ ಹಾಸ್ಯಗಾರ
ಶಾ. ಶ. ೧೮೩೦

ಮಹಾಬಲ
ಬಿ.ಎ. ೨೫ವರ್ಷ
ಮೃತನಾದ

ಪುಟ್ಟು ಹಾಸ್ಯಗಾರ
(ಗಣಪತಿ)

ವಿಷ್ಣು
ಹಾಸ್ಯಗಾರ

ಕೃಷ್ಣ
ಹಾಸ್ಯಗರ
ಸುಶೀಲೆ

ನಾರಯಣ
ಹಾಸ್ಯಗರ
ಲಲಿತಾ

ಪರಮಯ್ಯ
ಹಾಸ್ಯಗಾರ
(ಪಿ. ವಿ. ಹಾಸ್ಯಗಾರ)

ಸತ್ಯ ಹಾಸ್ಯಗಾರ

ಶಂಕರ
ರಾಮ
ಕೃಷ್ಣ ಮೂರ್ತಿ

ಗೌರಿ
ಸುಶೀಲೆ

ವಿಶ್ವನಾಥ
ಗಜಾನನ
ಉಮೇಶ
ಸತೀಶ
ಲಲಿತ

ರಮೇಶ ಪುಟ್ಟು ಶ್ರೀ

ಪರಮಾನಂದ ಜಯ ಲಕ್ಷ್ಮಿ

ವರದ
ಲಕ್ಷ್ಮೀಶ

ಭವಾನಿ
ಶೈಲ

೧೪. ನಾರಾಯಣ ಹಾಸ್ಯಗಾರರ ಸಂದರ್ಶನದಿಂದ

ಹಾಸ್ಯಗಾರ ವಂಶಾವಳಿಯಲ್ಲಿ ವರದ, ತಿಮ್ಮ ಪರಮ ಹೆಸರುಗಳ ಪ್ರತಿ ತಲೆಮಾರಿನಲ್ಲಿ ಕಾಣುತ್ತೇವೆ.

"ತಿಮ್ಮ ಹಾಸ್ಯಗಾರರ ಮಗ ವರದ ಹಾಸ್ಯಗಾರವರೆಗಿನ ಇತಿಹಾಸ ನಮ್ಮ ಕಾಲಕ್ಕೆ ಸ್ಪಷ್ಟವಿದೆ. ಇವರು ಜೋಡು ಕುದುರೆಗಳನ್ನು ಸಾಕಿದ್ದರು. ದೂರದೂರ ಹೊಗುವ ಕಾಲಕ್ಕೆ ಇದು ಅನುಕೂಲವಗುತ್ತಿತ್ತು. ಸಶಕ್ತ ಸುಂದರ ಆಳ್ತನ ಭಾಗವತಿಕೆ, ನೃತ್ಯ ಬಣ್ಣಗಾರಿಕೆಯನ್ನು ಬಲ್ಲ ಸಮರ್ಥರು ಶಿಲ್ಪ ಸಂಗೀತದಲ್ಲಿ ಹೆಸರು ಮಾಡಿದ್ದರು. ಕೊಳಲುವಾದಕರಾಗಿದ್ದರು. ಹಾಸ್ಯ ಪಾತ್ರಗಳಿಗೆ ಬೇಕಾದ ಸಲಕರಣೆಗಳ ಚೀಲವೊಂದು ಸದಾ ಇವರೊಟ್ಟಿಗೆ ಇರುತ್ತಿತ್ತು. ಯಾವ ಮೇಳಕ್ಕೆ ಹೋದರೂ ಇವರಿಗೆ ಸ್ವಾಗತವಿತ್ತು. ರಂಗದಲ್ಲಿ ಮುಕ್ತ ಸ್ವಾತಂತ್ರ್ಯವಿತ್ತು. ಆಕಸ್ಮಿಕವಾಗಿ ಹೋದಾಗಲೂ ಇವರಿಗೆ ಪಾತ್ರ ನೀಡಿ ಗೌರವಿಸುತ್ತಿದ್ದರು. ಪುರುಷಾಮೃಗ, ನೃಸಿಂಹ, ಮಂಥರೆ, ಗುಹ, ಶಬರ, ಕೀಚಕ, ಮೈರಾವಣ ಹೀಗೆ ಎಲ್ಲ ಬಗೆಯ ಪಾತ್ರಗಳಿಂದ ಕೀರ್ತಿ ಪಡೆದಿದ್ದರು. ಇವರು ಕೂಡಾ ತಮ್ಮ ತಂದೆ ತಿಮ್ಮ ಹಾಸ್ಯಗಾರರಿಂದ ಈ ಬಳುವಳಿಯನ್ನು ಪಡೆದಿದ್ದರೆಂದು ತಿಳಿದುಬರುತ್ತದೆ. ಇವರ ಮನೆತನದ ಮತ್ತೊಂದು ಕವಲಿನವರಾದ ಹುಲಿಮಕ್ಕಿ ರಾಮಕೃಷ್ಣ ಹೆಗಡೆ ಇವರ ಪಕ್ಕದ ಮನೆಯವರೇ ಆದ ಗುಬ್ಬಿಅಜ್ಜ, ಅಷ್ಟೇ ಪ್ರಸಿದ್ಧ ಪಾತ್ರಧಾರಿಗಳು. ಈ ಮೂವರು ಸೇರಿದರೆ ಜನಕ್ಕೆ ರಸದೂತಣವೇ ಸರಿ, ವರದ ಹಾಸ್ಯಗಾರರ ಹಾಸ್ಯ, ರಾಮಕೃಷ್ಣ ಹೆಗಡೆಯವರ ಕಣ್ಣು, ಗುಬ್ಬಿ ಅಜ್ಜನ ಕಂಠ ಆಕಾಲದ ಪ್ರಸಿದ್ಧ ಆಕರ್ಷಣೆಗಳು. ವರದ ಹಾಸ್ಯಗಾರರು ಇವರನ್ನೆಲ್ಲ ಸೇರಿಕೊಂಡು ದಕ್ಷಿಣ ಕನ್ನಡ, ಬೊಂಬಾಯಿ, ಸಾಂಗ್ಲಿ ಮುಂತಾದ ಕಡೆ ಯಕ್ಷಗಾನವನ್ನು ಕೊಂಡುಹೋಗಿದ್ದರು. ದೂರ ಪ್ರಯಾಣದಲ್ಲಿ ಮಧ್ಯ ಮಧ್ಯೆ ದೇವಾಲಯಗಳಲ್ಲಿ ತಾಳಮದ್ದಳೆಯ ಸೇವೆಯನ್ನು ಮಾಡಿಕೊಂಡು ಪ್ರಯಾಣವನ್ನು ಮುಂದುವರಿಸುತ್ತಿದ್ದರು".[೧೫]

ಯಕ್ಷಗಾನ ಮೇಳವಾಗಿ ಕರ್ಕಿ ಮನೆತನ ಯಕ್ಷಗಾನಕ್ಕೆ ಅಪಾರ ಕೊಡುಗೆ ನೀಡಿದೆ. ಪರಂಪರೆ ಮತ್ತು ಸಂಪ್ರದಾಯವನ್ನು ಉಳಿಸಿ, ಕಲೆಯ ಪಾವಿತ್ರ್ಯವನ್ನು ಕಾಪಾಡುವುದು ಈ ಮೇಳದ ಕಲಾವಿದರ ಏಕಾಭಿಪ್ರಾಯವಾಗಿತ್ತು. ಅಭಿನಯ ಮಾತುಗಾರಿಕೆ, ಕುಣಿತಗಳಲ್ಲಿ ವಿಶಿಷ್ಟ ನಡೆ ಶೈಲಿ ಕರ್ಕಿಯವರದ್ದು. ಒಡ್ಡೋಲಗ, ತೆರೆಕುಣಿತ, ಲಾಲಿಕುಣಿತಗಳು ಕಣ್ಮರೆಯಾಗಿ ಹೋದ ಈ ಕಾಲದಲ್ಲಿ ಹಾಸ್ಯಗಾರ ಮನೆತನದ ಕಲಾವಿದರು ಇಂದಿಗೂ ಇದನ್ನು ತಮ್ಮ ಪ್ರಯೋಗದಲ್ಲಿ ಬಳಸುತ್ತಿದ್ದಾರೆ. ರಾಕ್ಷಸ ವೇಷದ

ಒಡ್ಡೋಲಗ ಕೃಷ್ಣ, ಧರ್ಮರಾಯನ ಒಡ್ಡೋಲಗ, ಪ್ರಯಾಣ ಕುಣಿತ, ಜಲಕೇಳಿ, ಬೇಟೆ, ಯುದ್ಧ, ಇಂತಹ ಅನೇಕ ಬಗೆಯ ನೃತ್ಯ ವೈವಿಧ್ಯಗಳನ್ನು ಸಮರ್ಥವಾಗಿ ಶುದ್ಧವಾಗಿ ಅಭಿನಯಿಸುವ ಸಾಮರ್ಥ್ಯ ಈ ಮನೆತನದ ಕಲಾವಿದರಿಗಿದೆ. ಕರ್ಕಿ ಹಾಸ್ಯಗಾರ ಮನೆತನ ಕೇವಲ ಯಕ್ಷಗಾನಕ್ಕಷ್ಟೆ ಸೀಮಿತವಾಗಿರದೆ ಗಣಪತಿಮೂರ್ತಿ ತಯಾರಿಸುವಲ್ಲಿ ಬಣ್ಣಗಾರಿಕೆ, ಶಿಲ್ಪಕಲೆ, ಕುಶಲಕಲೆಯಲ್ಲಿ ಅಷ್ಟೇ ಪ್ರವೀಣರು. ಎಲ್ಲ ಬಗೆಯ ಕಲಾವಿದರು ಈ ಮನೆತನದಲ್ಲಿರುವುದು ವಿಶೇಷ.

---

೧೫. ಯಕ್ಷಗಾನ ವರ್ಣ ವೈಭವ – ಡಾ. ಗೋಪಾಲಕೃಷ್ಣ ಹೆಗಡೆ ಪು. ೨೧.

ಬಣ್ಣಗಾರಿಕೆ, ವೇಷಗಾರಿಕೆಯಲ್ಲಿ ನಿಸ್ಸೀಮರಾದ ಇವರುಗಳು ಸಂಕೀರ್ಣ ವೇಷಗಳ ಮೂಲಕ ಜನಪ್ರಿಯತೆಗಳಿಸಿದರು. ನರಸಿಂಹ, ಶಬರ, ಪುರುಷಮೃಗ, ಕಿಮ್ಮೀರ ಮುಂತಾದ ಪಾತ್ರಗಳು ಕಲೆಗಾರಿಕೆಯಿಂದ ಅತ್ಯಂತ ಆಕರ್ಷಕವಾಗಿ ಕಾಣುವಂತೆ ವೇಷ ಮಾಡುವ ಮೂಲಕ ಜೀವಂತಿಕೆ ತುಂಬುತ್ತಿದ್ದರು. ಇಂತಹ ಮಹಾನ್ ಕಲಾವಿದರನ್ನು ಇವರ ವಂಶಾವಳಿಯಲ್ಲಿ ಕಾಣುತ್ತೇವೆ. ಯಕ್ಷಗಾನ ಕಲೆಯ ಆರಾಧನೆಯಾಗಿ ಕಂಡ ಕುಟುಂಬ ಹಾಸ್ಯಗಾರದ್ದಾಗಿದೆ. ಶುಚಿತ್ವ ದೈವನಿಷ್ಠೆ, ಅನುಷ್ಠಾನ ಸದಾಚಾರಗಳಿಂದ ವೇಷವನ್ನ ಮಾಡಿದ ಮೇಳ ಎಂದು ಕರೆಯುತ್ತಿದ್ದರು. ಕರ್ಕಿ ಮೇಳದಲ್ಲಿ ಅತಿಥಿ ಕಲಾವಿದರಾದ ಕೊಳ್ಳೂರು ರಾಮಚಂದ್ರರಾವ್ "ಕರ್ಕಿ ಮೇಳದ ಚೌಕಿಗೆ ಪ್ರವೇಶಿಸುವಾಗ ಕಾಲ್ತೊಳೆದು ಕೊಳ್ಳಬೇಕು. ಚೌಕಿಯಲ್ಲಿ ಬೀಡಿ, ಸಿಗರೇಟು ಇತ್ಯಾದಿಗಳನ್ನು ಸೇದುವಂತಿಲ್ಲ. ವೀಳ್ಯಹಾಕಿ ಉಗಿಯುವ ಅಭ್ಯಾಸ ಇಲ್ಲ. ಪಾದುಕೆಗಳನ್ನು ಧರಿಸಿ ಪ್ರವೇಶಿಸಬಾರದು. ಮಧ್ಯಪಾನ ಮಾಡುವವರಿಗೆ ಅವಕಾಶವಿಲ್ಲ. ಬೇರೆ ಮೇಳಗಳಲ್ಲಿ ತುಟಿಗೆ ಹಚ್ಚುವ ಬಣ್ಣಗಳನ್ನು ಒಂದೇ ತಟ್ಟೆಯಲ್ಲಿ ಕಲಸಿಟ್ಟರೆ ಈ ಮೇಳದಲ್ಲಿ ಅವರವರೇ ಕಲಸ ಬೇಕಾಗಿತ್ತು. ಈ ಮನೆಯ ಎಲ್ಲ ಕಲಾವಿದರು ದುಶ್ಚಟ ದುರಭ್ಯಾಸಗಳಿಂದ ಬಹಳಷ್ಟು ದೂರವಾಗಿರುವ ಮಡಿವಂತರಾಗಿದ್ದರು.

ಚೌಕಿಯಲ್ಲಿ ಗಣಪತಿ ಪೂಜೆ ಸಂದರ್ಭದಲ್ಲಿ ಎಲ್ಲರೂ ಎದ್ದುನಿಂತು ಭಾಗವತರೊಂದಿಗೆ ಹಾಡುವುದು ಹಿಂದಿನಿಂದ ನಡೆದು ಬಂದ ಸಂಪ್ರದಾಯವಾಗಿದೆ. ಈ ಸ್ತುತಿಯ ಸ್ಫೂರ್ತಿಯಿಂದಲೇ ಮುಂದಿನ ಆಟದ ಏರುಪೇರುಗಳನ್ನು ನಿರ್ಣಹಿಸಬಹುದೆಂದು ಈ ಕಲಾವಿದರ ಸ್ವಾನುಭವದ ಮಾತು."[೧೬]

'ಕರ್ಕಿ ಮನೆತನದ ಶೈಲಿ' ಎಂದು ಗುರುತಿಸಲಾದ ಶೈಲಿಯು ಉತ್ತರಕನ್ನಡದ ಪ್ರಾಚೀನ ಪರಂಪರೆಯೇ ಆಗಿದೆ. ನಿಧಾನಗತಿಯ ನಡೆಗೆ ಅನುಗುಣವಾಗಿ ಇಲ್ಲಿನ ಹಿಮ್ಮೇಳ ಮತ್ತು ಭಾಗವತಿಕೆ ಇದೆ. ಮಾಧುರ್ಯ ಪ್ರಧಾನ ಮತ್ತು ಮುಮ್ಮೇಳದ ಕಲಾವಿದರ ಅಭಿನಯಕ್ಕೆ ಪೂರಕವಾದ ಹಿಮ್ಮೇಳ ಇರುವುದು. ಕರ್ಕಿ ಮೇಳದ ಈಗಿನ ಭಾಗವತರಾದ ಗೋಪಾಲಕೃಷ್ಣ ಭಟ್ಟ ಜೋಗಿಮನೆ "ತಮ್ಮ ಹಿಮ್ಮೇಳದಲ್ಲಿ ವಿಲಂಬಿತ ರೀತಿಯ ಎತ್ತುಗಡೆ, ಪುನರಾವರ್ತನೆ ಕಡಿಮೆ, ಯಾವುದೇ ರೀತಿಯ ಹಿಮ್ಮೇಳದ ಸರ್ಕಸ್ ಇಲ್ಲವೇಇಲ್ಲ. ಆದಿ ಪ್ರಧಾನ ಮತ್ತು ಅಭಿನಯಕ್ಕೆ ಪೂರಕವಾದ ಶಿಸ್ತು ಬದ್ಧ ಹಾಡುಗಾರಿಕೆ ಇದೆ" ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.[೧೭]

ಯಕ್ಷಗಾನದ ಸಂಪ್ರದಾಯ ಮತ್ತು ಪರಂಪರೆಯನ್ನು ಯಾವುದೇ ಆಮಿಷಕ್ಕೊಳಗಾಗದೇ ಉಳಿಸಿಕೊಂಡು ಬರಲು ಈ ಮನೆತನ ಸಾಕಷ್ಟು ಶ್ರಮಿಸಿದೆ. ಉತ್ತರಕನ್ನಡ ಶೈಲಿಯ ವಿಶಿಷ್ಟತೆಯನ್ನು ಕಾಯ್ದುಕೊಂಡಿರುವ ಕರ್ಕಿ ಮನೆತನದಲ್ಲಿ ಹವ್ಯಾಸಿಗಳಾಗಿ ಶ್ರೀ ನಾರಾಯಣ ಹಾಸ್ಯಗಾರರು, ಶ್ರೀ ಕೆ.ಪಿ. ಹಾಸ್ಯಗಾರರು, ಸತ್ಯ ಹಾಸಗಾರರು, ತಮ್ಮ ಇಳಿವಯಸ್ಸಿನಲ್ಲೂ ಪಾತ್ರನಿರ್ವಹಿಸುತ್ತಿದ್ದಾರೆ. ಹಲವಾರು ತಲೆಮಾರುಗಳ ಇತಿಹಾಸವಿರುವ ಕುಟುಂಬವೊಂದು ಕಲೆಗಾಗಿ ಮೀಸಲಿಟ್ಟು ತಮ್ಮ ಶ್ರದ್ಧೆಯನ್ನು ಕಾಪಾಡಿಕೊಂಡು ಬಂದಿದ್ದು ದಾಖಲೆಯೇ ಸರಿ!

---

೧೬. ಪರಂಪರೆ ರೂಪಿಸಿದ ಕರ್ಕಿ ಮೇಳ – ಡಾ॥ ಎಚ್.ಎಸ್. ಮೋಹನ್ – ಪುಟ ೮

೧೭. ಕ್ಷೇತ್ರಕಾರ್ಯ – ಗೋಪಾಲಕೃಷ್ಣ ಜೋಗಿಮನೆ ಸಂದರ್ಶನ.

ಕರ್ಕಿ ಹಾಸ್ಯಗಾರರ ಮೇಳವು ೧೮೪೧-೪೨ರಲ್ಲಿ ಈಗಿನ ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ರಾಜರಾದ ಅಪ್ಪಾಸಾಹೇಬ ಪಟವರ್ಧನರ ಸಮ್ಮುಖದಲ್ಲಿ ಯಕ್ಷಗಾನ ಪ್ರದರ್ಶನ ನೀಡಿದರು. ಅಂದಿನ ಅವರ ಮಂತ್ರಿಗಳಾದ ವಿಷ್ಣುದಾಸ ಭಾವೆಯವರಿಗೆ ಯಕ್ಷಗಾನವನ್ನು ನೋಡಿದರಾಜರು ನಾಟಕ ರಚಿಸುವಂತೆ ತಿಳಿಸಿದರು. ಮರಾಠಿ ರಂಗಭೂಮಿಗೆ ಕರ್ಕಿ ಮೇಳದ ಕೊಡುಗೆ ಪ್ರೇರಣೆಯಾಯಿತು. ಎಂಬುದು ರೋಚಕ ಇತಿಹಾಸವಾಗಿದೆ.

ಭಾರಿ ವೇಷಭೂಷಣ, ಅಬ್ಬರದಪದ, ರಾಗ, ಅಭಿನಯ ದಿಗಿಣ, ಆವೇಷಭರಿತ ಕಾಳಗ, ಕಂಚಿನ ಕಂಠದ ಭಾಗವತಿಕೆ ಚಂಡೆಯ ತಾರಕ ಧ್ವನಿಯನ್ನೆಲ್ಲ ಕ್ರಮ ಬದ್ಧವಾಗಿ ಮೇಳೈಸಿದ ಮೇಳ ಅನ್ಯಭಾಷಿಕ ಸಂಸ್ಕೃತಿಯ ಕಲೆಗೆ ಪ್ರೇರಣೆಯಾಗಿದ್ದು ಚರಿತ್ರೆಯಾಗಿದೆ.

೩.೩.೨ ಯಕ್ಷಗಾನ ಸೀಮೋಲ್ಲಂಘನ ಮಾಡಿದ ಪ್ರಥಮ ಮನೆತನ

ಬಡೋದೆಯ ರಾಜರು ಈ ಮನೆತನದ ಹಾಸ್ಯಗಾರರ ಮೋಡಿಗೊಳಗಾಗಿ ಹಾಸ್ಯಗಾರರೆಂದು ಬಿರುದು ನೀಡಿದರು. ಇದರಿಂದ ಈ ಮನೆತನಕ್ಕೆ ಅದೆ ಹೆಸರು ಅನ್ವರ್ಥಕವಾಯಿತು. ಮಹಾರಾಜರು ಬಹುಮಾನವಾಗಿ ಕೊಟ್ಟ ಬೆಳ್ಳಿಯ ಕೃಷ್ಣನ ವಿಗ್ರಹ ಇಂದಿಗೂ ಇವರ ಮನೆತನದಲ್ಲಿದೆ. ೧೯೫೪ ರಲ್ಲಿ ದೆಹಲಿಯಲ್ಲಿ ನಡೆದ ಕನ್ನಡದ ಸಾಂಸ್ಕೃತಿಕ ಉತ್ಸವದಲ್ಲಿ ಪ್ರದರ್ಶನ ನೀಡಿ ಆಗಿನ ಪ್ರಧಾನಿ ಜವಾಹರಲಾಲ ನೆಹರು, ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದರು ಮೆಚ್ಚುಗೆ ಸೂಚಿಸಿದರು.

೧೯೫೫ ರಲ್ಲಿ ಮುಂಬೈನಲ್ಲಿ ನಡೆದ ನಾಟ್ಯೋತ್ಸವ ಸ್ಪರ್ಧೆಯಲ್ಲಿ ಪರಮಯ್ಯ ಹಾಸ್ಯಗಾರರ ನೇತೃತ್ವದಲ್ಲಿ ಮೇಳ ಪಾಲ್ಗೊಂಡಿತ್ತು. ಬೆಳ್ಳಿಯ ಡಾಲರನ್ನು ಬಹುಮಾನವಾಗಿ ಪಡೆಯಿತು.

೧೯೬೧ ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ೧೯೭೧ ರಲ್ಲಿ ನಾಗಮಂಡಲದ ಜನಪದ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಯಕ್ಷಗಾನ ಪ್ರಾತ್ಯಕ್ಷಿಕೆಗಳು ನಡೆದು, ಹಾಸ್ಯಗಾರ ಮನೆತನ ದೇಶದ ಅಂದಿನ ಪ್ರಮುಖ ಪತ್ರಿಕೆಗಳಲ್ಲಿ ಸುದ್ದಿಮಾಡಿತು. ೧೯೫೬ ರಲ್ಲಿ ತೀರ್ಥಹಳ್ಳಿ ಕರ್ಕಿಮೇಳದ ಆಟವನ್ನು ನೋಡಿದ ಯು.ಎಸ್.ಎ. ದ ಎಡ್ವರ್ಡ ಬಿ, ಹಾರ್ಪರ್ ಇದೊಂದು ಅವಿಸ್ಮರಣೀಯ ನೆನಪು ಎಂದು ಕೊಂಡಾಡಿದ್ದರು. ೧೯೭೪ ರಲ್ಲಿ ಮೇಲುಕೋಟೆಯಲ್ಲಿ ಕರ್ಕಿ ಮೇಳದ ಆಟವನ್ನು ಚಿತ್ರೀಕರಿಸಿದ ಬಿ.ಬಿ.ಸಿ. ಟಿವಿ ಯುನಿಟ್ ಅಧಿಕಾರಿ ಟೋನಿಮೇಯರ್ ಇದೊಂದು ಅದ್ಭುತ ವೇಷಭೂಷಣಗಳ ಪ್ರದರ್ಶನ ಎಂದು ಹೊಗಳಿದ್ದಾನೆ.

೩.೩.೩. ಮನೆತನದ ಕಲೆಯ ಮೊದಲ ಮಾದರಿ

ಕರ್ಕಿ ಹಾಸ್ಯಗಾರರ ಮನೆತನದಲ್ಲಿ ಬಹುತೇಕರು ಶಿಕ್ಷಕವೃತ್ತಿಯಲ್ಲಿ ತೊಡಗಿಕೊಂಡವರು. ಕಲಾಶಿಕ್ಷಣವನ್ನು ಮನೆತನದ ಮಕ್ಕಳು ಮೊಮ್ಮಕ್ಕಳಿಗೂ ಕಲಿಸಿ ಕರ್ಕಿ ಪರಂಪರೆಯನ್ನು ಮನೆತನದ ಕಲೆಯಾಗಿಸಿದವರು. ಯಕ್ಷಗಾನವನ್ನು ದೈವೀಆರಾಧನೆಯನ್ನು ಸಮತೂಕವಾಗಿಸಿ "ಮಡಿಯಮೇಳ" ಎಂಬಷ್ಟು ಶುಚಿತ್ವವನ್ನು ಕಲೆಯಲ್ಲಿ ರೂಢಿಸಿಕೊಂಡವರಾಗಿದ್ದರು. "ಮಕ್ಕಳು ಮೊಮ್ಮಕ್ಕಳ ಮೇಳ' ಎಂದು ಕರೆಸಿಕೊಂಡ ಕರ್ಕಿ ಹಾಸ್ಯಗಾರರ ಮನೆತನ ಯಕ್ಷಗಾನ ಪರಂಪರೆಯಲ್ಲಿ ಮೊದಲ ಮಾದರಿಯು

ಹೌದು. ಯಕ್ಷಗಾನದಲ್ಲಿ "ಮನೆತನ"ಗಳ ಇತಿಹಾಸ ಪ್ರಾಚೀನತೆಯನ್ನು ಮೊದಲು ಸೃಷ್ಟಿಸಿಕೊಂಡ ಕೀರ್ತಿ ಹಾಸ್ಯಗಾರರಿಗೆ ಸಲ್ಲಬೇಕು.

೩.೩.೪. ಕರ್ಕಿ ಮನೆತನ ಕಲಾಪರಂಪರೆಯ ಶ್ರೇಷ್ಠರು

ಉತ್ತರಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕರ್ಕಿ ಪ್ರಸಿದ್ಧವಾದುದು ಹಾಸ್ಯಗಾರರಿಂದಲೇ ಆಗಿದೆ. ಹವ್ಯಕರಲ್ಲಿ 'ಹಾಸ್ಯಗಾರರು' ಎಂದರೆ ಕರ್ಕಿ ನೆನಪಿಗೆ ಬರುವಷ್ಟು ಆ ಮನೆತನ ಪ್ರಸಿದ್ಧವಾಗಿರುವುದು. ಯಕ್ಷಗಾನ ಕಲೆಯಿಂದ, ಸುದೀರ್ಘವಾದ ಇತಿಹಾಸ, ಒಂಬತ್ತು ತಲೆಮಾರುಗಳಲ್ಲಿ ಯಕ್ಷಗಾನ ಕಲಾರಾಧನೆ ಕಂಡ 'ಹಾಸ್ಯಗಾರರು' ಯಕ್ಷಗಾನದಿಂದ ಪಡೆದುದಕ್ಕಿಂತ ಯಕ್ಷಗಾನಕ್ಕೆ ಕೊಟ್ಟಿದ್ದು ಹೆಚ್ಚು ಎನ್ನುವ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಮಾತು ಅಕ್ಷರಶಃ ಸತ್ಯ. 'ಸಭಾಹಿತ ಮಟ್ಟಿನ' ಪರಂಪರೆಯ ಮೇಳ ಎಂದು ಪ್ರತೀತಿ ಪಡೆದಿರುವ ಕರ್ಕಿ ಮೇಳದ ಕಲಾವಿದರು ಎಲ್ಲರೂ ಅಗ್ರಗಣ್ಯರೇ.

ಕರ್ಕಿಹಾಸ್ಯಗಾರ ಮನೆತನ ಆರಂಭದ ಕಲಾವಿದರೆಂದು ಗೋಚರಿಸುವವರು ತಿಮ್ಮ ಹಾಸ್ಯಗಾರರು. ಈ ಮನೆತನದಲ್ಲಿ ವರದ, ಪರಮ ಹೆಸರುಗಳು ಪ್ರತಿ ತಲೆಮಾರಿನಲ್ಲೂ ಕಂಡುಬರುತ್ತದೆ. ಮನೆತನದ ಹಿರಿಯ ತಲೆಮಾರಿನ ತಿಮ್ಮ ಹಾಸ್ಯಗಾರರು ಕಲಾವಿದರಾಗಿದ್ದರು. ಅವರ ಮಗ "ವರದ ಹಾಸ್ಯಗಾರರು ಭಾಗವತಿಗೆ, ನೃತ್ಯ ಬಣ್ಣಗಾರಿಕೆಯಲ್ಲೂ ಸಿದ್ಧಹಸ್ತರಾಗಿದ್ದರು"

೩.೩.೫ ಶ್ರೇಷ್ಠ ಕಲಾವಿದ ಪರಮಯ್ಯ ಹಾಸ್ಯಗಾರ (೧೮೮೪–೧೯೭೧)

"ಸುಮಾರು ಒಂಬತ್ತು ತಲೆಮಾರುಗಳ ಕರ್ಕಿಮೇಳವನ್ನು ನವೀಕರಿಸಿ ಪುನಃ ಸಂಘಟಿಸಿದ ಕೀರ್ತಿ ಹಾಸ್ಯಗಾರರಿಗೆ ಸಲ್ಲುತ್ತದೆ". ಪರಮಯ್ಯ ಹಾಸ್ಯಗಾರರು ಸಭಾಹಿತ ಮಟ್ಟಿನ 'ನಿಘಂಟು' ಎಂದೇ ಹೆಸರಾಗಿದ್ದರು. ಪಟ್ಟಾಭಿಷೇಕದ ದಶರಥ, ಶಬರಾರ್ಜುನದ ಶಬರ, ಸುಧನ್ವಾರ್ಜುನದ ಸುಧನ್ವ, ಸುಭದ್ರಾ ಕಲ್ಯಾಣದ ಬಲರಾಮ, ಕಂಸವಧೆಯ ಅಕ್ರೂರ ಮುಂತಾದ ಪಾತ್ರಗಳನ್ನು ಅಭಿನಯಿಸಿ ಹೊಸ ಆಯಾಮವನ್ನು ಪಾತ್ರಗಳಿಗೆ ನೀಡಿದರು.

೩.೩.೬. ಪುಟ್ಟ ಹಾಸ್ಯಗಾರರು

ಪ್ರಾಥಮಿಕ ಶಾಲಾಶಿಕ್ಷಕರಾದ ಇವರು ೧೯೩೬–೪೨ರ ಕಾಲದಲ್ಲಿ ಕರ್ಕಿ ಯುವಕ ಸಂಘವನ್ನು ಸ್ಥಾಪಿಸಿಕೊಂಡು ಕವಿರತ್ನ ಕಾಳಿದಾಸ, ವೀರ ಅಭಿಮನ್ಯು, ಅಭೀರ ಮುಂತಾದ ಸಂಗೀತನಾಟಕಗಳನ್ನು ಕಲಿತು ಆಡುತ್ತಿದ್ದರು. ಕರ್ಕಿಮೇಳದಲ್ಲಿ ಸ್ತ್ರೀ ಪಾತ್ರದ ಕಲಾವಿದರ ಕೊರತೆ ಇರುವಾಗ ಸ್ತ್ರೀ ವೇಷ ನಿರ್ವಹಣೆಯನ್ನು ಮಾಡಿ ಕರ್ಕಿಮೇಳದ ಚಿರಕನ್ಯೆ ಎಂಬ ಅಭಿದಾನಕ್ಕೆ ಪಾತ್ರವಾದರು. ಇವರ ಸೀತೆ, ಮಾಯಾಶೂರ್ಪನಖಿ, ಸುರುಚಿ, ಹಿಡಂಬಿ, ಸೈರಂಧ್ರೀ, ಮೋಹಿನಿ, ಪ್ರಭಾವತಿ, ಕನಕಾಂಗಿ ಕಲ್ಯಾಣದ ಸುಭದ್ರೆ, ಊರ್ವಶಿ ಮೊದಲಾದ ಪಾತ್ರಗಳು ಅತ್ಯಂತ ಮನಮೋಹಕವಾಗಿದ್ದವು.

ಸ್ತ್ರೀ ಸಹಜವಾದ ಬೆಡಗು ಭಿನ್ನಾಣಗಳನ್ನು ಸಹಜವಾಗಿಯೇ ಅಭಿನಯಿಸುತ್ತಿದ್ದ ಪುಟ್ಟಹಾಸ್ಯಗಾರರ ಅಭಿನಯಕ್ಕೆ ಅನೇಕ ಯಕ್ಷಗಾನ ಕಲಾವಿದರೆ ಮನಸೋತಿದ್ದರು.

೩.೩.೭. ದಿ॥ ಪಿ. ವಿ ಹಾಸ್ಯಗಾರ (೧೯೩೧-೧೯೯೨)

ಕರ್ಕಿಮೇಳದ "ಧ್ರುವತಾರೆ" ಎಂದೆ ಖ್ಯಾತರಾದ ಪಿ.ವಿ. ಹಾಸ್ಯಗಾರರು ಯಕ್ಷಗಾನ ಪರಂಪರೆಯು ಕಂಡ ಅಸಾಧಾರಣ ಕಲಾವಿದರು. ಕರ್ಕಿಪರಂಪರೆಯ ವೈಭವವು ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಪ್ರೇಕ್ಷಕರು ಅಪಾರ ಆಕಾಂಕ್ಷೆಗಳನ್ನು ಹೊಂದಿದ್ದ ಕಾಲದಲ್ಲಿ ಪಿ.ವಿ. ಹಾಸ್ಯಗಾರರು ಅಕಾಲ ಮೃತ್ಯುಗೀಡಾಗಿದ್ದು ಮನೆತನದ ಉಳಿದ ಕಲಾವಿದರೆಲ್ಲ ನಿರುತ್ಸಾಹಿಗಳಾಗಿ ನೇಪಥ್ಯ ಸೇರುವಂತಾಯಿತು.

ಲವಕುಶ ಕಾಳಗದ ಕುಶ, ಶಬರ, ಮಾಗಧ ಹೀಗೆ ಭಿನ್ನ ರೀತಿಯ ಪಾತ್ರಗಳಲ್ಲಿ ಅಭಿನಯಿಸಿದ ಪಿ.ವಿ. ಹಾಸ್ಯಗಾರರಿಂದ ತೆರವಾದ ಸ್ಥಾನವನ್ನು ತುಂಬಲು ಬದಲಿ ಕಲಾವಿದರಿಲ್ಲ.

೩.೩.೮. ಕೃಷ್ಣ ಹಾಸ್ಯಗಾರರು

ಯಕ್ಷಗಾನ ಕಲಾಪರಂಪರೆಯಲ್ಲಿ 'ಸಿಂಹನೃತ್ಯ', 'ಪ್ರೇತನೃತ್ಯ' ಬಣ್ಣದ ವೇಷದಲ್ಲಿ ಜೀವಂತಿಗೆ ತುಂಬಿದ ಮಹಾನ್ ಕಲಾವಿದ ಕೃಷ್ಣ ಹಾಸ್ಯಗಾರರು. ಇವರ ಗದಾಯುದ್ಧ ಪ್ರಸಂಗದ ಪ್ರೇತ ಪಾತ್ರ ಸರರಚನೆ ಹಾಗೂ ಬಣ್ಣಗಾರಿಕೆ ಕೌಶಲ್ಯದಿಂದ ಅಭಿನಯದಿಂದ ಎಂಥವರನ್ನು ನಿಬ್ಬೆರಗಾಗಿಸಿದ 'ಭೀಭತ್ಸತೆ' ಅಸಾಧಾರಣವಾದುದು. ಕೆ.ಪಿ. ಹಾಸ್ಯಗಾರರ ಸಿಂಹನೃತ್ಯವನ್ನು ಆಗಿನ ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಒಡೆಯರು "ಮೈಸೂರು ಮೃಗಾಲಯದ ಸಿಂಹವೇ ಇಲ್ಲಿಗೆ ಬಂದಂತೆ ಭಾಸವಾಯಿತು" ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.[೧೮]

ಕೃಷ್ಣ ಹಾಸ್ಯಗಾರರ ಪ್ರೇತ, ಬೇತಾಳ, ಸಿಂಹ ಪಾತ್ರಗಳ ಬಣ್ಣಗಾರಿಕೆಯು ಅವರಿಗೆ ಮಾತ್ರ ಸಿದ್ಧಿಸಿದ್ದು ಎಂದರೆ ತಪ್ಪಿಲ್ಲ. ಶಬರ, ಕಿರಾತ ವೇಷದ ಅಭಿನಯ ಕಣ್ಣಿನ ಚಲನೆ ಅಪ್ರತಿಮ ಕಲಾಗಾರಿಕೆಯಿಂದ ಕೂಡಿದ್ದಾಗಿದೆ.

ವಿದೇಶದ ವಿದ್ವಾಂಸರೊಬ್ಬರು ಸಿಂಹನೃತ್ಯದ ನಂತರ ಚೌಕಿ ಮನೆಗೆ ಬಂದು ಜೀವಂತ ಸಿಂಹವೇ ಎಂದು ಪರೀಕ್ಷಿಸಿದ್ದರು ಎಂದು ಅವರ ರೋಚಕ ಅನುಭವದಲ್ಲಿ ದಾಖಲಾಗಿದೆ. ಕರ್ನಾಟಕದ ಮೂಲೆ ಮೂಲೆಯಲ್ಲಿ ಜಗತ್ತಿನ ವಿವಿಧ ದೇಶಗಳಲ್ಲಿ ಸಿಂಹನೃತ್ಯ ಪ್ರದರ್ಶನಗೊಂಡಿದೆ. ಟಿ.ವಿ. ಮಾಧ್ಯಮದಲ್ಲಿ ಸಿನೆಮಾಗಳಲ್ಲಿ ಸಿಂಹನೃತ್ಯ ಪ್ರದರ್ಶನಗೊಂಡಿದೆ. ಯಕ್ಷಗಾನ ಪರಂಪರೆಯಲ್ಲಿ ವಿಶಿಷ್ಟವಾದ ಈ ಪ್ರಯೋಗದ ಮೂಲಕ ಕರ್ಕಿ ಹಾಸ್ಯಗಾರರು ತೋರಿದ ಕಲೆ ಮನೆತನದ ಕಲೆಗೆ ಮುಕುಟವನ್ನಿರಿಸಿದೆ. ಯಕ್ಷಗಾನರಂಗದಲ್ಲಿ ಅನನ್ಯವಾದ ದಾಖಲೆಯನ್ನು ನಿರ್ಮಿಸಿದೆ.

೩.೩.೯. ನಾರಾಯಣ ಹಾಸ್ಯಗಾರರು

ಉತ್ತರಕನ್ನಡದ ಸಭಾಹಿತ ಮಟ್ಟಿನ ವಿಶಿಷ್ಟತೆಯಾದ ಲಾಲಿಕುಣಿತದ ಸಮರ್ಥ ಕಲಾವಿದರು ನಾರಾಯಣ ಹಾಸ್ಯಗಾರರು. ಇಂದು ರಂಗಭೂಮಿಯಿಂದ ಮರೆಯಾದ ಈ ಬಗೆಯ ಕುಣಿತವನ್ನು ಕರಗತ ಮಾಡಿಕೊಂಡ ಸಮರ್ಥಕಲಾವಿದರು ಇವರಾಗಿದ್ದರು.

---

೧೮. ನಾರಾಯಣ ಹಾಸ್ಯಗಾರರ ಸಂದರ್ಶನ

ಕೃಷ್ಣನ ಅಭಿನಯಕ್ಕೆ ಹೆಸರಾದ ಇವರು ಕರ್ಕಿಶೈಲಿಯ ವಿಲಂಬಲಯದ ನೃತ್ಯದಿಂದ ಪ್ರಸಿದ್ಧರಾಗಿದ್ದರು. ಬಡಗು-ತೆಂಕು ತಿಟ್ಟುಗಳ ಮೇಳದಲ್ಲೂ ಪಾತ್ರ ನಿರ್ವಹಣೆ ಮಾಡಿ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಖ್ಯಾತರಾಗಿದ್ದವರು ಇಂದಿಗೂ ಸಹೋದರರೊಡಗೂಡಿ ಪಾತ್ರ ನಿರ್ವಹಿಸುತ್ತಲೆ ಇದ್ದಾರೆ. ಪಾಶ್ಚಾತ್ಯ, ಪೌರಾತ್ಯ ರಾಷ್ಟ್ರಗಳಲ್ಲೂ ಪ್ರದರ್ಶನ ನೀಡಿ, ವಿವಿಧ ಪಾತ್ರಗಳನ್ನು ನಿರ್ವಹಿಸಿ ಕರ್ಕಿಮನೆತನದ ಅಪರೂಪದ ಕಲಾವಿದರಾಗಿ ಜನರ ಪ್ರೀತಿಗಳಿಸಿದ್ದಾರೆ.

೩.೩.೧೦. ಸತ್ಯ ಹಾಸ್ಯಗಾರರು

ಸವ್ಯಸಾಚಿಕಲಾವಿದರೆಂದೆ ಗುರುತಿಸಲ್ಪಟ್ಟ ಸತ್ಯಹಾಸ್ಯಗಾರ ಎಲ್ಲಾ ಪಾತ್ರಗಳಲ್ಲೂ ಮಿಂಚಿ ಮೆರೆದವರು. ವೇಷಧಾರಿಗಳು, ಮೃದಂಗಕಾರರು, ಚಂಡೆವಾದಕರು, ಭಾಗವತರು ಆಗಿ ರಂಗ ನಿರ್ವಹಣೆ ಮಾಡಬಲ್ಲ ಸಮರ್ಥರಾಗಿದ್ದರು. ಸತ್ಯ ಹಾಸ್ಯಗಾರರ ರಂಗಚಲನೆ, ವಿಭಿನ್ನ ಪಾತ್ರಾಭಿವ್ಯಕ್ತಿ ನಾಟ್ಯೀಕರಣ ಸಾಮರ್ಥ್ಯದಿಂದ ಅಪ್ರತಿಮ ಕಲಾವಿದರೆನಿಸಿದ್ದಾರೆ. ಇವರ ವೃಷಕೇತು, ಈಶ್ವರ, ಕೃಷ್ಣ, ಶಿಶುಪಾಲ, ಆಂಜನೇಯ, ಅರ್ಜುನ, ಕಿಮ್ಮೀರ ಮುಂತಾದ ಪಾತ್ರಗಳ ಅಭಿನಯ ಅಪಾರ ಜನಮೆಚ್ಚುಗೆ ಗಳಿಸಿದೆ.

ಕರ್ಕಿ ಹಾಸ್ಯಗಾರರ ಮನೆತನದ ಬಗ್ಗೆ ಸಾಕಷ್ಟು ಅಧ್ಯಯನಗಳು, ಪ್ರಾತ್ಯಕ್ಷಿಕೆಗಳು, ಲೇಖನಗಳು ಪ್ರಕಟಗೊಂಡಿವೆ.

ಡಾ. ಗೋಪಾಲಕೃಷ್ಣ ಹೆಗಡೆಯವರು ಕರ್ಕಿಮೇಳದ ಪರಂಪರೆಯನ್ನು ದೃಕ್-ಶ್ರವಣ ಮಾಧ್ಯಮದಲ್ಲಿ ದಾಖಲಿಸಿ ಸಂಗ್ರಹಿಸಿದ್ದಾರೆ. "ಯಕ್ಷಗಾನ ವರ್ಣ ವೈಭವ" ದಲ್ಲಿ ಕರ್ಕಿ ಮನೆತನದ ಕುರಿತು ಅಧ್ಯಯನ ಪ್ರಬಂಧವನ್ನು ಮಂಡಿಸಿದ್ದಾರೆ. ಡಾ. ನಾರಾಯಣ ಮಧ್ಯಸ್ಥರು ಮುಂಬೈ ವಿಶ್ವವಿದ್ಯಾಲಯದಿಂದ ಕರ್ಕಿ ಹಾಸ್ಯಗಾರ ಮೇಳ ಸಂಪ್ರದಾಯ, ಪ್ರಯೋಗಶೀಲತೆ – ಒಂದು ಅಧ್ಯಯನ ಎಂಬ ವಿಷಯದ ಕುರಿತು ಪ್ರಬಂಧ ಮಂಡಿಸಿ ಪಿ.ಹೆಚ್.ಡಿ ಪಡೆದಿರುತ್ತಾರೆ. ಡಾ. ಎಚ್. ಎಸ್. ಮೋಹನರವರು ಪರಂಪರೆ ರೂಪಿಸಿದ ಕರ್ಕಿ ಯಕ್ಷಗಾನ ಮೇಳ ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ರಾಜ್ಯಪ್ರಶಸ್ತಿ ಹಾಗೂ ವಿವಿಧ ಪ್ರಶಸ್ತಿಗಳನ್ನು ಪಡೆದ ಈ ಮನೆತನದ ಕಲಾವಿದರ ಅರ್ಹತೆ ರಾಷ್ಟ್ರಪ್ರಶಸ್ತಿಗೇನೂ ಕಡಿಮೆಯಿಲ್ಲ. ಇಡಿ ಮನೆತನವು ಯಕ್ಷಗಾನ ಪರಂಪರೆಗೆ ಒಂದು ಸಮಷ್ಟಿಯಾದ ಕೊಡುಗೆಯಾಗಿ ನೋಡಿದರೆ ಇದೊಂದು 'ವಿಶಿಷ್ಟ ಪರಂಪರೆಯ' ಯಕ್ಷಗಾನದ ಮೂಲದ್ರವ್ಯದ ಪ್ರತಿಭೆಯಾಗಿ ನಿರೂಪಿತವಾಗಿದೆ.

೩.೪ ಶೈಲಿಪ್ರವರ್ತಕ ಮೇಳಗಳು

ಮರಾಠಿ ರುಗಭೂಮಿಗೆ ಜನಕ ಸ್ಥಾನದಲ್ಲಿರುವ ಹಾಸ್ಯಗಾರಮೇಳ (ದುರ್ಗಾಂಬಾ ಪ್ರಾಸಾದಿತ ಯಕ್ಷಗಾನ ಮಂಡಳಿ ಕರ್ಕಿ) ಮೂಲತಃ ಹವ್ಯಕ ಮನೆತನವೊಂದರ ಯಕ್ಷಗಾನ ಮೇಳಗಳ ಇತಿಹಾಸದಲ್ಲಿ ಈ ಮೇಳವೇ ಅತ್ಯಂತ ಹಳೆಯದು. ಉತ್ತರಕನ್ನಡ ಯಕ್ಷಗಾನ ಪರಂಪರೆ ಎಂದು ಹೇಳುವವರೆಲ್ಲ ಇವರ ಯಕ್ಷಗಾನ ಪದ್ಧತಿಗೆ ಮೊದಲ ಮನ್ನಣೆ ನೀಡಿರುತ್ತಾರೆ. ಬಯಲಾಟಗಳ ಮೇಳಗಳಲ್ಲಿ ಈ ಪರಂಪರೆಯ ಕಲಾವಿದರು ಇನ್ನೂ ಇದ್ದಾರೆ.

ಉತ್ತರಕನ್ನಡದ ಹವ್ಯಕರ ಹಳೆಯಮೇಳವಾದ ಕರ್ಕಿ ಹಾಸ್ಯಗಾರರ ಮೇಳವು ಇಂದಿಗೂ ಪರಂಪರೆಯ ಕಲೆಯನ್ನು ರಕ್ಷಿಸಿಕೊಂಡೆಬಂದಿದೆ. ಪರಂಪರೆಯ ಯಕ್ಷಗಾನ ಎಂದು ಪ್ರದರ್ಶನ ನಡೆಸಿದ್ದರೆ ಅದು ಕರ್ಕಿ ಕಲಾವಿದರದ್ದೇ ಆಗಿದೆ. ಕಾರಣ ಉತ್ತರಕನ್ನಡ ಶೈಲಿಯ ಮಟ್ಟುಗಳ ಅಭ್ಯಾಸವಿರುವ ಹಿಮ್ಮೇಳ ಪರಂಪರೆಯ ಮತ್ತು ಕಲಾವಿದರನ್ನು ಮೇಳ ಹೊಂದಿದೆ.

ಯಕ್ಷಗಾನ ಬಯಲಾಟವಾಗಿ, ಟೆಂಟಿನ ಮೇಳ, ಡೇರೆ ಮೇಳ, ಹರಕೆ ಮೇಳದ ರೂಪದಲ್ಲಿದ್ದು ಮೇಳಗಳ ಸಂಖ್ಯೆ ಸುಮಾರು ಮೂರುನೂರರಷ್ಟು. ಈ ಮೇಳದಲ್ಲಿ ಕಾಲ ಕಾಲಕ್ಕೆ ಕೆಲವು ಉದಯಿಸಿ ಪರ್ಯವಸಾನಗೊಂಡಿದೆ. ಆದರೆ ಕರ್ಕಿ ಮೇಳವು ಒಂಬತ್ತು ತಲೆಮಾರಿನ ಸುದೀರ್ಘವಾದ ಚರಿತ್ರೆಯನ್ನು ಹೊಂದಿದೆ.

ಪ್ರಸ್ತುತ ಮೇಳಗಳು ಬದಲಾವಣೆಗೊಂಡು ಹೊಸ ಹೊಸ ರೂಪವನ್ನು ತಾಳುತ್ತಿದ್ದರೂ ಪರಂಪರೆಯನ್ನು ಉಳಿಸಿಕೊಂಡು ಬಂದ ಪ್ರಶಸ್ತಿ ಈ ಮೇಳಕ್ಕೆ ಸಲ್ಲಬೇಕು.

ಹೀಗೆ ಹವ್ಯಕರು ಮನೆತನವಾಗಿಬೆಳೆದು ಅನೇಕ ದಶಕ ಯಕ್ಷಗಾನ ರಂಗದಲ್ಲಿ ಹೆಸರು ಮಾಡಿದ ಕೆರೆಮನೆ ಮೇಳವುಕೂಡ ಶೈಲಿ ಪ್ರವರ್ತಕ ಮೇಳವಾಗಿದೆ. ಕೆರೆಮನೆ ಶಿವರಾಮ ಹೆಗಡೆಯವರಿಂದ ೧೯೩೪ ರಲ್ಲಿ ಸ್ಥಾಪಿತಗೊಂಡ ಈ ಮೇಳ ಇಂದಿಗೂ ಅಸ್ತಿತ್ವದಲ್ಲಿದೆ. ಈ ಮೇಳದಲ್ಲಿ ಮೇರುನಟರಾಗಿ ಕೆರೆಮನೆ ಶಿವರಾಮ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಂಭುಹೆಗಡೆಯವರು ರಾಷ್ಟ್ರ ಪ್ರಶಸ್ತಿ ಪಡೆದವರಾಗಿದ್ದಾರೆ. ಅಪಾರ ಜನಮೆಚ್ಚುಗೆ ಹೊಂದಿದೆ. ಕೆರೆಮನೆ ಮೇಳ ಬಹುಕಾಲ ರಂಗದಲ್ಲಿ ಕಲೆಯನ್ನು ಮರೆಸಿದೆ.

ಸಾಗರ ತಾಲೂಕಿನ ಬೆಳೆಯೂರು ಮೇಳಕ್ಕೆ ನೂರೈವತ್ತು ವರ್ಷದ ಇತಿಹಾಸವಿದೆ. ಈ ಮೇಳದ ಕಲಾವಿದರೆಲ್ಲ ಹವ್ಯಕರೇ ಆಗಿದ್ದಾರೆ. ಮೇಳದ ಭಾಗವತರು ಕಲಾವಿದರು, ಹಿಮ್ಮೇಳ, ಚಿನ್ನದಪೆಟ್ಟಿಗೆ ತಯಾರಕರೆಲ್ಲ ಒಟ್ಟಾಗಿ ಈ ಊರಿನಲ್ಲಿಯೇ ವಾಸಿಸುತ್ತಾರೆ.ಮಹಾಗಣಪತಿ ಯಕ್ಷಗಾನ ಮೇಳ ಬೆಳೆಯೂರು ಎಂಬ ಹೆಸರಿನಲ್ಲಿ ಈಗಲೂ ವರ್ಷದಲ್ಲಿ ಹತ್ತಾರು ಪ್ರದರ್ಶನವನ್ನು ನೀಡುತ್ತಾರೆ.

ಯಲ್ಲಾಪುರ ತಾಲ್ಲೂಕಿನ ಅಣಲಗಾರ ಮತ್ತು ಹೊನ್ನಗದ್ದೆ ಮೇಳಕ್ಕೆ ನೂರು ವರ್ಷಕ್ಕೂ ಮೀರಿದ ಇತಿಹಾಸವಿದೆ. ಈ ಮೇಳ ಈಗ ಸ್ಥಗಿತಗೊಂಡು ಯಲ್ಲಾಪುರ ನರಸಿಂಹ ಭಟ್ಟರು ಇದೇ ಹೆಸರಿನಲ್ಲಿ ಮಕ್ಕಳ ಮೇಳವನ್ನು ಆರಂಭಿಸಿದ್ದಾರೆ.

ದಕ್ಷಿಣಕನ್ನಡದ ಮಲ್ಲದುರ್ಗಾಪುರಮೇಶ್ವರಿ ಮೇಳ, ಎಡನೀರುಮೇಳ, ಕೂಡ್ಲು ಮೇಳ, ಮದೂರು ಮೇಳ, ಇಚ್ಚಲಂಪಾಡಿ ಮೇಳ, ಕೊರ್ಕೋಡು ಮೇಳ ಹವ್ಯಕರೇ ಮುನ್ನಡೆಸಿದ ಮೇಳವಾಗಿದೆ. ಕಾರ್ತಿಕೇಯ ಕಲಾನಿಕೇತನ ಕೂಟೂರು ಹವ್ಯಕರ ಮೇಳವಾಗಿದೆ. ಈ ಎಲ್ಲ ಮೇಳಗಳಿಗೂ ದೀರ್ಘ ಇತಿಹಾಸವಿದ್ದು ಮೇಳದ ಶೈಲಿಯನ್ನು ಮುಂದುವರಿಸಿಕೊಂಡು ಬಂದಿದೆ. ಈ ಮನೆತನದ ಕಲಾ ಪ್ರದರ್ಶನವನ್ನು ಮೆಚ್ಚಿ ಅನೇಕರು ಅಭಿಪ್ರಾಯ ದಾಖಲಿಸಿದ್ದಾರೆ. (ನೋ. ಅನುಬಂಧ)

೩.೫. ಉಪಸಂಹಾರ

ಹವ್ಯಕರು ಯಕ್ಷಗಾನವನ್ನು ಮನೆತನದ ಕಲೆಯಾಗಿ ಪೋಷಿಸಿದ್ದರೆ. ಯಕ್ಷಗಾನವನ್ನು ಆರಾಧಿಸಿದ ಮನೆತನಗಳಿಗೂ ಯಕ್ಷಗಾನ ಅನ್ವರ್ಥಕ ಹೆಸರಾಗಿಯೇ ಉಳಿದುಕೊಂಡಿದೆ.

ಉತ್ತರಕನ್ನಡದ ಪ್ರಾಚೀನ ಯಕ್ಷಗಾನ ಪರಂಪರೆಯ ಲಕ್ಷಣಗಳು ಸಭಾಹಿತ ಮಟ್ಟಿನಲ್ಲೆ ಇದ್ದವು ಈ ಹಿನ್ನೆಲೆಯಿಂದ ಯಕ್ಷಗಾನ ಪ್ರಸಂಗ ಪ್ರತೀಕಾರರಾದ ಸಭಾಹಿತರು, ಪ್ರತಿಮಾಡಿದ ಪ್ರಸಂಗಗಳು ಸಭಾಹಿತ ಪ್ರತಿಗಳು ಎನಿಸಿದ್ದವು. ಸಭಾಹಿತ ಪ್ರತಿಯನ್ನೇ ರಂಗದಲ್ಲಿ ಆಡುವುದು, ಹಾಡುವುದು ರೂಢಿಯಲ್ಲಿತ್ತು. ಇತರ ಸಾಮಾಜಿಕ ಧಾರ್ಮಿಕ ಹೊಣೆಹೊತ್ತ ಸಭಾಹಿತರು ಯಕ್ಷಗಾನ ಪ್ರದರ್ಶನ ಮೇಳವ್ಯವಸ್ಥೆಯನ್ನು ನೋಡಿಕೊಂಡು ಬಂದರು.

ಸಭಾಹಿತ ಮಟ್ಟಿನ ವೈಶಿಷ್ಟ್ಯತೆಯನ್ನು ರಂಗದಲ್ಲಿ ಪ್ರಸ್ತುತಗೊಳಿಸಿದ ಕೀರ್ತಿ ಕಡತೋಕಾ ಭಾಗವತ ಮನೆತನಗಳಿಗೆ ಸಲ್ಲುತ್ತದೆ. ಕಡತೋಕಾ ಜೋಗಿಮನೆ ಭಾಗವತರು ಕಡತೋಕಾಶಂಭು ಭಾಗವತರ ಮನೆತನದ ಇತರರು ಬಹುಕಾಲ ಈ ಪರಂಪರಯಲ್ಲೇ ಹಾಡಿ ಪ್ರಸಿದ್ಧರಾದರು. ಯಕ್ಷಗಾನವನ್ನು ಆರಾಧಿಸಿದ ಭಾಗವತ ಮನೆತನಗಳು ಅನೇಕವಿದೆ. ಈ ಮನೆತನಗಳಲ್ಲಿ ಯಕ್ಷಗಾನ ಪರಂಪರೆಯಾಗಿ ಬೆಳೆದುಬಂದಿದೆ. ದಕ್ಷಿಣೋತ್ತರ ಕನ್ನಡದಲ್ಲಿ ಭಾಗವತಿಗೆಗೆ ಅನೇಕ ಕುಟುಂಬಗಳು ಹೆಸರಾಗಿದ್ದರು. "ಭಾಗವತ" ಎಂಬ ಮನೆತನವಿರುವದು ಉತ್ತರಕನ್ನಡದಲ್ಲಿ ಮಾತ್ರ. ಭಾಗವತ ಎಂಬ ಹೆಸರಿನ ಮನೆತನದ ಹೆಸರು ಯಕ್ಷಗಾನದಿಂದಲೇ ಬಂದಿದೆ ಎಂಬುದು ಸತ್ಯ.

ಉತ್ತರಕನ್ನಡ ಕರ್ಕಿ ಹಾಸ್ಯಗಾರ ಮೇಳ ಹಾಸ್ಯಗಾರ ಮನೆತನದ ಮೇಳವಾಗಿದೆ. ೧೮೪೧ ರಲ್ಲಿ ಯಕ್ಷಗಾನವನ್ನು ಮಹಾರಾಷ್ಟ್ರದ ಸಾಂಗ್ಲಿಗೆ ಕೊಂಡೊಯ್ದು ಪ್ರದರ್ಶಿಸಿದ್ದು ಈ ಮೇಳದ ಸಾಧನೆಯಾಗಿದೆ. ಸುಮಾರು ನಾಲ್ಕುನೂರು ವರ್ಷಗಳ ಪ್ರಾಚೀನತೆ ಒಂಭತ್ತು ತಲೆಮಾರುಗಳ ಹಿನ್ನೆಲೆಯಿರುವ ಈ ಮನೆತನ ಅತ್ಯಂತ ಹಳೆಯ ಮೇಳವಾಗಿದೆ. ಹವ್ಯಕರು ಯಕ್ಷಗಾನದ ಪರಂಪರೆಯನ್ನು ಎಷ್ಟೋವರ್ಷ ಹಿಂದಿನಿಂದಲೂ ಆರಾಧಿಸಿಕೊಂಡು ಬಂದಿದ್ದಕ್ಕೆ ಈ ಮೇಳದ ಪರಂಪರೆ ಸಾಕ್ಷಿಯಾಗಿದೆ.

ಯಕ್ಷಗಾನವನ್ನು ಮನೆತನಗಳ ಕಲೆಯಾಗಿ ಉಳಿಸಿಕೊಂಡು ಬಂದ ಇನ್ನು ಅನೇಕ ಮನೆತನಗಳು ಹವ್ಯಕರಲ್ಲಿದೆ. ಒಂದೇ ಕುಟುಂಬದ ಹಲವು ತಲೆಮಾರು ಈ ಕಲೆಯಲ್ಲಿ ತೊಡಗಿಕೊಂಡಿದ್ದು, ಮನೆತನದ ಪರಂಪರೆಯನ್ನೇ ಸೃಷ್ಟಿಸಿದೆ. "ಹವ್ಯಕರಿಗೆ ಯಕ್ಷಗಾನವು ಸಂಪ್ರದಾಯವಾಗಿ ಬಂದಿದೆ. ಎಂಬ ವಿ.ಜೆ. ನಾಯಕರ ಮಾತು ಈ ದೃಷ್ಟಿಯಿಂದ ಅರ್ಥವತ್ತಾಗಿದೆ."[೧೯]

---

೧೯. ಯಕ್ಷಗಾನದ ಲೇಖನ ವಿ.ಜಿ. ನಾಯಕ, ರಾಘವೇಂದ್ರ ಪ್ರಕಾಶನ, ಅಂಕೋಲ, ವೈಜಯಂತಿ –ಪುಟ ೬೫






ಅಧ್ಯಾಯ – ೪

ಹವ್ಯಕರು ಮತ್ತು ಯಕ್ಷಗಾನ ವಾಙ್ಮಯ

ಕಲೆಯ ಸಂವಹನ ಮಾಧ್ಯಮವಾಗಿರುವ ಭಾಷೆ ಕಲೆಯಲ್ಲಿ ಸಾಂಕೇತಿಕ ಕಲಾತ್ಮಕ, ಲಿಖಿತ ಹಾಗೂ ವಾಚ್ಯ ಸ್ವರೂಪದಲ್ಲಿ ಅಭಿವ್ಯಕ್ತಿಗೊಳ್ಳುತ್ತದೆ. ಯಕ್ಷಗಾನ ಬಯಲಾಟದ ರಂಗಸಜ್ಜಿಕೆ ವಿಶಿಷ್ಟ ಭಾಷಾ ಪ್ರಯೋಗದ ವೇದಿಕೆಯಾಗಿದೆ. ಗಾನ ಕುಣಿತ ಅಭಿನಯ ಮಾತುಗಾರಿಕೆಯ ಅಂಗಗಳು, ಆಹಾರ್ಯ ಹಿಮ್ಮೇಳವಾದನಗಳ ಸಂಮಿಲಿತಗೊಂಡು ಆದ್ಯಂತಿಕವಾಗಿ ಎಲ್ಲ ಅಂಗಗಳೂ ಅರ್ಥಧ್ವನಿಯನ್ನು ಪ್ರತಿಪಾದಿಸುವ ಶಾಬ್ಧಿಕ ಅಭಿವ್ಯಕ್ತಿಯಲ್ಲಿ ಪರ್ಯಾಯವರಣಗೊಳ್ಳುತ್ತದೆ. ಪ್ರಾತದ ಅಂತರಂಗವನ್ನು ಬಹಿರಂಗಗೊಳಿಸುವ ಎಲ್ಲ ಪ್ರಯತ್ನವೂ ಪ್ರೇಕ್ಷಕನಲ್ಲಿ ಅಂತರಿಂದ್ರಿಯ ಮತ್ತು ಬಹಿರಿಂದ್ರಿಯಗಳಿಗೆ ಅನುಭೂತಿಯನ್ನುಂಟುಮಾಡುವ ಶಾಬ್ಧಿಕ ಸಂವಹನವೆ ಆಗಿ ಪರಿಣಮಿಸುತ್ತದೆ. ಕಲ್ಮಾತಕ ಅಭಿವ್ಯಕ್ತಿ ಧ್ವನಿಯಾಗಿ ಸಂಕೇತಿಕತೆ ಅನುಭೂತಿಯಾಗಿ ವಾಚ್ಯಾರ್ಥದಲ್ಲಿ ಮಿಳಿತಗೊಂಡು, ಪಾತ್ರ ಪ್ರೇಕ್ಷಕನೆದುರು ತೆರೆದುಕೊಳ್ಳುತ್ತದೆ.

ಯಕ್ಷಗಾನ ಬಯಲಾಟದ ಭಾಷಾ ಪ್ರಯೋಗದ ಅಂಗಳವಾದ ರಂಗಸಜ್ಜಿಕೆಯ ವ್ಯವಹಾರಗಳು ಸಾಂಕೇತಿಕ ಅರ್ಥ ಪರಂಪರೆಯ ಭೌತಿಕ ಪರಿಸರಗಳನ್ನು ನಿರ್ಮಿಸುತ್ತವೆ. ಇದರಲ್ಲಿ ಕಲಾ ಸಮೂಹವೊಂದು ತೊಡಗಿಕೊಂಡು, ವೇದಿಕೆ, ರಂಗಪರಿಕರಗಳೊಂದಿಗೆ ಸಮನ್ವಯಗೊಂಡು ಪ್ರದರ್ಶನ ಏರ್ಪಡುತ್ತದೆ. ತಾಳಮದ್ದಳೆ ಆಶುಮಾತಿನ ರಂಗವಾದರೆ ಬಯಲಾಟ ಆಹಾರ್ಯ ಆಂಗಿಕ ವಾಚಿಕಾಭಿಯನಯಗಳನ್ನು ಸಮಷ್ಟಿಯಾಗಿ ಪ್ರತಿನಿಧಿಸುತ್ತದೆ. ಇದನ್ನು ಯಕ್ಷಗಾನದ "ಕೂಟ ಅಥವಾ ಮೇಳ ಪರಿಕಲ್ಪನೆಗಳು ಉಳಿದ ಕಲಾ ಮಾಧ್ಯಮಗಳಿಗಿಂತ ಯಕ್ಷಗಾನ ಹೇಗೆ ಭಿನ್ನ ಎಂಬುದನ್ನು ವ್ಯಕ್ತಪಡಿಸುವ ಪ್ರಕ್ರಿಯೆಗೆ ಯಕ್ಷಗಾನ ರಂಗಭಾಷೆ ಎಂಬ ಹೆಸರನ್ನು ನೀಡಬಹುದು".[೧] ಇದಕ್ಕೆ ಯಕ್ಷಗಾನ ರಂಗಸ್ಥಳವು ಭೌತಿಕವಾಗಿ ಅಕ್ಷರಾಭಿವ್ಯಕ್ತಿಯನ್ನು ಸೂಚಿಸುವ ಭಾಷಾ ಕಮ್ಮಟವಾಗಿದೆ. ಎಲ್ಲ ಇತರ ಕಲಾಮಾಧ್ಯಮಗಳ ರಂಗ ತಂತ್ರಗಳ ಬಳಕೆ ರಂಗ ಪರಿಕರಗಳ ಬಳಕೆ ಅರ್ಥಸ್ಪುರಣಕ್ಕೆ ಕಾರಣವಾಗುವದೋ ಹಾಗೆ ಯಕ್ಷಗಾನ ಬಯಲಾಟವು ರಂಗಸಜ್ಜಿಕೆಯ ಭಾಷಾಭಿವ್ಯಕ್ತಿಯ ಆವರಣವನ್ನು ಸೂಚಿಸುತ್ತದೆ.

049469

೧. ಉದ್ಯಾವರ ಮಾಧವ ಆಚಾರ್ಯ – ಯಕಗಾನ ರಂಗಭಾಷೆ – ಸಂಕಲನ ಸಂಸ್ಮರಣ – ಪುಟ ೫

ಯಕ್ಷಗಾನ ಬಯಲಾಟದ ರಂಗಸ್ಥಳಕ್ಕೆ ಒಪ್ಪುವ ಪ್ರಸಂಗಕ್ಕೆ ಅರ್ಥಗಾರಿಕೆ ವಾಚ್ಯವಾಗಿ ಅಭಿವ್ಯಕ್ತಿಸುವ ಭಾಷಾಭಿವ್ಯಕ್ತಿಯ ಸ್ವರೂಪ, ಅರ್ಥಗಾರಿಕೆಯಲ್ಲಿ ಅನಾವರಣಗೊಳ್ಳುತ್ತದೆ. "ಪ್ರಸಂಗ ಯಕ್ಷಭಾಷೆಯ ತಿರುಳು[1] ಪೌರಾಣಿಕತೆ ಅಥವಾ ಅಲೌಕಿಕತೆಯ ಪ್ರವಾಹವೆ ಪ್ರಸಂಗ. ಇದು ಲಿಖಿತರೂಪದಲ್ಲಿದ್ದು ವಾಚ್ಯವಾಗುವ ಪಾತ್ರದ ಎಲ್ಲ ಅಭಿವ್ಯಕ್ತಿಗೆ ಮೂಲ ಆಕರವಾದ ಭಾಷಾಭಿವ್ಯಕ್ತಿಗೂ ಪ್ರೇರಕ". ಯಕ್ಷಗಾನ ರಂಗ ಭಾಷೆಯ ಒಟ್ಟು ಸ್ವರೂಪವನ್ನು ನಿಶ್ಚಯಿಸುವುದೇ ಅರ್ಥಪೂರ್ಣ ಕಾವ್ಯವಲ್ಲದ ಇತ್ತ ಶಿಷ್ಟರಂಗ ಕೃತಿಯಲ್ಲದ ವಿಶಿಷ್ಟ ರಂಗಗಮಕವನ್ನು ಪಡೆದಿರುವ ಪ್ರಸಂಗ ಯಾ ಯಕ್ಷಗಾನದೊಳ "ಪೆಳ್ವೆ" ಎಂಬ ಅಭಿನಯ ಕಾವ್ಯ.[೨]

ಯಕ್ಷಗಾನ ವಾಚಕದ ಆಡೊಂಬಲ ಅರ್ಥಗಾರಿಕೆಯಾಗಿದೆ. ಪಾತ್ರದ ವಾಚ್ಯವಾಗುವ ಅರ್ಥ ಮಾತಿನ ಮೂಲಕ ಮೂರ್ತಗೊಳ್ಳುತ್ತದೆ. ಇದು ಆಶುಗದ್ಯ, ಭಾಷೆ ಶೈಲಿಕೃತವಾಗಿ ಪಡಿಮೂಡುವ ಅರ್ಥಗಾರಿಕೆ ತಾಳಮದ್ದಳೆ ಕೂಟ. ರಂಗಪರಿಕರ, ರಂಗಸ್ಥಳ, ಅಹಾರ್ಯಗಳ ಹಂಗಿಲ್ಲದೆ ಹರಿದ ವಾಕ್‌ಪ್ರವಾಹ ಆಶುಮಾತಿನ ಸಹಜಾಭಿವ್ಯಕ್ತಿಯವರೆಗೆ ಭಾಷ ವಿವಿಧ ಸ್ವರೂಪದಲ್ಲಿ ರಂಗಭಾಷೆಯಾಗಿ ವ್ಯಕ್ತಗೊಳ್ಳುತ್ತದೆ.

ರಂಗಭಾಷೆ, ಸಾಹಿತ್ಯ, ಕಲಾವಿದರ ಕುರಿತಾದ ಅಕ್ಷರಾಭಿವ್ಯಕ್ತಿಗಳು. ವಿಚಾರ, ವಿಮರ್ಶೆ, ಆತ್ಮಕಥನ, ಆತ್ಮಚರಿತ್ರೆ, ಅಭಿನಂದನ, ಸ್ಮರಣಸಂಚಿಕೆ, ಹತ್ತು ಹಲವು ಪ್ರಕಾರದ ಕೃತಿಗಳಲ್ಲಿ ವಿಫುಲವಾಗಿ ದಾಖಲಾಗಿದೆ. ಒಟ್ಟರ್ಥದಲ್ಲಿ ಯಕ್ಷಗಾನ ಬಯಲಾಟ, ತಾಳಮದ್ದಳೆಯ ಕುರಿತಾದ ಎಲ್ಲ ಅಕ್ಷರಾಭಿವ್ಯಕ್ತಿಗಳನ್ನು ಒಟ್ಟಾಗಿ ಯಕ್ಷಗಾನ ವಾಙ್ಮಯ ಎಂದು ಹೆಸರಿಸಲಾಗಿದೆ.

ಯಕ್ಷಗಾನ ವಾಙ್ಮಯ ವಿಫುಲವಾಗಿ ಬೆಳೆದಿದೆ. ಇದೊಂದು ವಿಶಿಷ್ಟ ಭಾಷಾವಿಲಾಸ. ಪ್ರಸಂಗ ಪದ್ಯವಾಗಿ ಉಳಿದೆಲ್ಲ ವಾಚಕವೂ ಗದ್ಯವಾಗಿ, ಒಟ್ಟು ಕೃತಿಗಳನ್ನು ಗದ್ಯಪದ್ಯಗಳೆಂದು ವಿಭಾಗಿಸಬಹುದಾಗಿದೆ. ಭಾಷೆ, ಛಂದಸ್ಸು, ಕಾವ್ಯಲಕ್ಷಣ, ರಾಗ, ತಾಳ, ಲಯಗಳನ್ನು ಒಳಗೊಂಡ ವಿಶಿಷ್ಟ ರಚನೆಗಳು ಪ್ರಸಂಗಗಳಾಗಿ ಸ್ವರ ಭಾರಯುಕ್ತ ಮಾತಿನ ಭಾವಾಭಿವ್ಯಕ್ತಿ ಪದಗಳ ಅರ್ಥವ್ಯಾಪ್ತಿಯನ್ನು ವಿಸ್ತರಿಸುವ ಅರ್ಥಗಾರಿಕೆ ಕಥನ ಶೈಲಿಯ ವಾಗ್‌ವೈಖರಿಯ ವಾಚಕಗಳು ಚರಿತ್ರಾಂಶವಾದುದನ್ನು ದಾಖಲಿಸುವ ಜೀವನ ಚರಿತ್ರೆ ಕಥನ, ವಿಚಾರ ವಿಮರ್ಶೆ ಸಂಶೋಧನಾತ್ಮಕ ಗದ್ಯ ಸಾಹಿತ್ಯವನ್ನೊಳಗೊಂಡ, ಸಮೃದ್ಧ ವಾಙ್ಮಯವನ್ನು ಯಕ್ಷಗಾನ ಕಲೆ ಬೆಳೆಸಿಕೊಂಡು ಬಂದಿದೆ.

ಕಲಾವಿದ ಮತ್ತು ರಂಗ ಸ್ಥಳಗಳು ಯಕ್ಷಗಾನ ಭಾಷಾ ಪ್ರಯೋಗದ ವ್ಯಕ್ತ ವೇದಿಕೆಯಾದರೆ ಚರಿತ್ರೆ ವಿಮರ್ಶೆಗಳೆಲ್ಲ ಯಕ್ಷಗಾನ ಪ್ರಭಾವ ವಲಯದ ಸೃಜನಶೀಲತೆಯಾಗಿದೆ. ಎಲ್ಲ ಅಭಿವ್ಯಕ್ತಿಗಳು ಸ್ವತಂತ್ರವಾದ, ಸ್ವಯಂಕೃತವಾದ ನವನವೋನ್ಮೇಷಶಾಲಿಯಾದ ಪ್ರತಿಭಾ ಪ್ರಯೋಗಗಳಾಗಿವೆ, ಪ್ರಸಂಗ ಪದ್ಯವೂ ಪ್ರತಿಭಾಸಂಪನ್ನಭಾಗವತರ ಕಂಠಸಿರಿಯಿಂದಾಗಿ ನಿತ್ಯ ನೂತನವಾಗಿಯೇ ಉಳಿದುಕೊಂಡಿದೆ.

---

೧. ಉದ್ಯಾವರ ಮಾಧವ ಆಚಾರ್ಯ – ಯಕಗಾನ ರಂಗಭಾಷೆ – ಸಂಕಲನ ಸಂಸ್ಮರಣ – ಪುಟ ೫

೨. ಅದೇ ಪುಟ

ಯಕ್ಷಗಾನದ ಪ್ರಸಂಗ ಸಾಹಿತ್ಯವಿರಲಿ, ಮಾತುಗಾರಿಕೆಯಿರಲಿ ಹಾಡುಗಾರಿಕೆಯಿರಲ್ಲಿರುವ ಭಾಷಾ ಪ್ರಯೋಗ ವಿಶಿಷ್ಟವಾದುದಾಗಿದೆ. ಕನ್ನಡಭಾಷೆಯೇ ಆದರೂ ಪ್ರಾದೇಶಿಕವಾದ ಭಿನ್ನತೆ ಪ್ರಾದೇಶಿಕ ಸಂಸ್ಕೃತಿಯ ಪ್ರತೀಕವಾಗಿ ವ್ಯಕ್ತಗೊಂಡಿದೆ. ಕನ್ನಡನಾಡಿನ ಭಿನ್ನಭಿನ್ನ ಪ್ರದೇಶಗಳಲ್ಲಿ ಭಿನ್ನಭಿನ್ನಕಲೆಗಳಿವೆ. ಆ ಪ್ರದೇಶದಲ್ಲಿ ಬಳಕೆಯಲ್ಲಿರುವ ಭಾಷಾಶೈಲಿಯೇ ಕಲಾಭಾಷೆಯಾಗಿರುತ್ತದೆ. ಕಲಾತ್ಮಕ ಭಾಷೆಗೂ ವ್ಯವಹಾರಿಕ ಭಾಷೆಗೂ ಇರುವ ಅಂತರವೇ ಕಲೆಯನ್ನು ಆಕರ್ಷಣೀಯಗೊಳಿಸುತ್ತದೆ. ಸಹಜಮಾತಿನ ಸಂಭಾಷಣೆಯಿದ್ದರೂ ರಂಗದಲ್ಲಿನ ಪರಿಸರ ಶೈಲಿಕೃತವಾಗಿ ಮಾತನಾಡುವ ಭಾಷೆಗೆ ಸಾಂಸ್ಕೃತಿಕ, ಭೌದ್ಧಿಕ ನೆಲೆಯನ್ನು ಕಲ್ಪಿಸುತ್ತದೆ. ಪ್ರಾದೇಶಿಕತೆ ವ್ಯವಹಾರಿಕೆಯನ್ನು ಮೀರಿ ವ್ಯಕ್ತಗೊಳ್ಳುವ ರಂಗಭಾಷೆಯ ಸಂರಚನೆ ಸಾಮಾಜಿಕ ನೆಲೆಯನ್ನು ಆಧರಿಸಿರುತ್ತದೆ. ಪ್ರಾದೇಶಿಕಭಾಷೆ ವ್ಯಕ್ತಿಭಾಷೆಯೇ ಆಗಿರುವುದರಿಂದ ಜನಸಮುದಾಯದ ಅಭಿವ್ಯಕ್ತಿಯ ಪ್ರಭಾವ ಕಲೆಯಲ್ಲಿ ಕಾಣಲುಸಾಧ್ಯವಾಗುತ್ತದೆ.

ಯಕ್ಷಗಾನದ ರಂಗಭಾಷೆ, ಅರ್ಥಗಾರಿಕೆ ವಿಶಿಷ್ಟವಾದುದು. ಉತ್ತರಕನ್ನಡದಲ್ಲಿ ಶ್ರುತಿ ಶುದ್ಧವಾಗಿ ಮಾತನಾಡುವುದಕ್ಕೆ ಮನ್ನಣೆಯಿದೆ. ಧ್ವನಿಯ ಏರಿಳಿತ ಭಾವ ಪ್ರಕಟಣೆ, ಲಯಗಾರಿಕೆ ಮಾತಿನ ವೈಖರಿಯಾಗಿದೆ.

ಯಕ್ಷಗಾನದ ಭಾಷೆ, ಪ್ರಸಂಗಕೃತಿ ರಂಗಕೃತಿಗಳೆರಡರಲ್ಲೂ ಗ್ರಾಮ್ಯವಲ್ಲದ ಪೂರ್ಣಶಿಷ್ಟವೂ ಅಲ್ಲದ ಪದಪ್ರಯೋಗಗಳಿಂದ ವಿಶಿಷ್ಟತೆಯನ್ನು ಹೊಂದಿದೆ. ಇದಕ್ಕೆ ಯಕ್ಷಗಾನದ ಪೌರಾಣಿಕತೆಯ ವಸ್ತು ಮತ್ತು ಸಾಮಾಜಿಕ ಪ್ರಜ್ಞೆಗಳೆರಡೂ ಕಾರಣವಾಗಿದೆ.

"ಯಕ್ಷಗಾನ ಕಲಾವಿದರು ಕೂಡ ಸಮಾಜವೊಂದರ ಸದಸ್ಯರಾಗಿ ಭಾಷಾ ಸಮುದಾಯದಲ್ಲಿ ತಮ್ಮನ್ನು ಗುರುತಿಸಿಕೊಂಡವರಾಗಿರುತ್ತಾರೆ. ಅವರು ವಯಕ್ತಿಕವಾಗಿ ಸಮುದಾಯದಲ್ಲಾಡುವ ಭಾಷೆಗೂ ಯಕ್ಷಗಾನದಲ್ಲಿ ಮಾತನಾಡುವ ಶೈಲೀಕೃತ ಭಾಷೆಗೂ ಮೇಲ್ನೋಟಕ್ಕೆ ಭಿನ್ನತೆ ಗೋಚರಿಸಬಹುದು. ಆದರೆ ಯಕ್ಷಗಾನದ ಮಾತುಗಾರಿಕೆಯ ಪ್ರತಿಯೊಂದು ಪದಗಳು, ಭಾಷೆಯ ಏರಿಳಿತಗಳು ಇವನ್ನೆಲ್ಲ ನಿಯಂತ್ರಿಸುವುದು ಆಯಾಕಲಾವಿದರು ಬದುಕುವ ಸಮುದಾಯದ ಭಾಷಾ ಪ್ರೌಢಿಮೆಯೇ ಹೊರತು ಅನ್ಯವಲ್ಲ".[೪]

ಈ ನೆಲೆಯಲ್ಲಿ ಯಕ್ಷಗಾನ ಭಾಷೆಯನ್ನು ಯಕ್ಷಗಾನ ಬಯಲಾಟ ತಾಳಮದ್ದಳೆಗಳ ಪ್ರಸಂಗ ಕೃತಿ ಮತ್ತು ರಂಗ ಕೃತಿಯಲ್ಲಿ ಪ್ರಾದೇಶಿಕ ಸಂಸ್ಕೃತಿಯ ನಲೆಯಲ್ಲಿ ವಿವೇಚಿಸಬೇಕಾಗುತ್ತದೆ.

ಪ್ರಸಂಗ ಕೃತಿಗಳು ಮತ್ತು ರಂಗ ಕೃತಿಗಳ ವಾಚಿಕಾಧ್ಯಯನದ ಕುರಿತು ಅನೇಕ ಅಧ್ಯಯನಗಳು ನಡೆದಿದೆ. ಯಕ್ಷಗಾನ ಛಂದಸ್ಸಿನ ಕುರಿತಾಗಿ ಡಾ॥ ಕಬ್ಬಿನಾಲೆ ವಸಂತ ಭಾರದ್ವಾಜ, ವಾಚಿಕಾಧ್ಯಯನದ ಕುರಿತು ಡಾ. ಮೋಹನ ಕುಂಟಾರ್, ತಾಳಮದ್ದಳೆಯ ಕುರಿತು ಡಾ. ಮಾಧವ ಪೆರಾಜೆ ಡಾ. ಎಂ. ಪ್ರಭಾಕರಜೋಶಿ, ಡಾ. ಆನಂದರಾಮ ಉಪಾಧ್ಯರ ರಾಮಾಯಣ, ಮಹಾಭಾರತ ಪ್ರಸಂಗಗಳ ಕುರಿತು ಅಧ್ಯಯನ ನಡೆಸಿದ್ದಾರೆ.

೪. ಡಾ. ಮೋಹನಕುಂಟಾರ–ಭಾಷಾ ಮತ್ತು ಸಾಮಾಜಿಕತೆ–ಯಕ್ಷಗಾನ ವಾಚಿಕಾಧ್ಯಯನ – ಪು. ೧೫೯

ಯಕ್ಷಗಾನ ಪ್ರಸಂಗಗಳ ಮತ್ತು ಅರ್ಥಗಾರಿಕೆಯ ಕ್ಷೇತ್ರ ಬಹು ವಿಶಾಲವಾದುದು. ಅನೇಕ ಕವಿಗಳು, ಕಲಾವಿದರು ಮಹತ್ತರ ಕೊಡುಗೆಗಳನ್ನು ಈ ಕ್ಷೇತ್ರಕ್ಕೆ ನೀಡಿದ್ದಾರೆ. ಎಲ್ಲ ಕವಿಗಳ ಕೃತಿಗಳು ಮತ್ತು ಕಲಾವಿದರ ಅರ್ಥಗಾರಿಕೆಗೆ ಸಂಬಧಿಸಿದ ವಿಮರ್ಶಾ ಕೃತಿಗಳು ಸಾಕಷ್ಟು ಪ್ರಕಟಗೊಂಡಿವೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯಲ್ಲಿ ಹವ್ಯಕರ ಕೃತಿಗಳನ್ನು ಮಾತ್ರ ಅವಲೋಕಿಸುವುದಕ್ಕೆ ಸಾಧ್ಯವಿದೆ. ಹವ್ಯಕ ಭಾಷೆಯೂ ಪ್ರಸಂಗ ಭಾಷೆಯ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ಇದೇ ಪ್ರತ್ಯೇಕ ಅಧ್ಯಯನಕ್ಕೆ ವಿಷಯವಾಗುತ್ತದೆ.

ಪ್ರಸಂಗಕೃತಿಗಳ ರಚನೆ ಮತ್ತು ತಾಳಮದ್ದಳೆ ಅರ್ಥಗಾರಿಕೆ ಹಾಗೂ ಯಕ್ಷಗಾನ ಕುರಿತಾಗಿ ಪ್ರಕಟಗೊಂಡ ಹವ್ಯಕರ ಕೊಡುಗೆಗಳನ್ನು ಸಂಗ್ರಾಹ್ಯವಾಗಿ ನೀಡುವುದುದು ಉದ್ದೇಶವಾಗಿದೆ. ಕಲೆ ಮತ್ತು ಸಾಮಾಜಿಕ ಸಂಬಧದ ನೆಲೆಯಲ್ಲಿ ಜನ ಸಮೂದಾಯವಾಗಿ ಹವ್ಯಕರು ನೀಡಿದ ಕೊಡುಗೆಗಳನ್ನು ಇಲ್ಲಿ ವಿವೇಚಿಸಲಾಗಿದೆ. ಸಂಖ್ಯಾದೃಷ್ಟಿ ಹಾಗೂ ಸತ್ವದೃಷ್ಟಿಯಿಂದ ವಿಫುಲವಾದ ಕೊಡುಗೆಗಳನ್ನು ಹವ್ಯಕ ಜನಾಂಗ ನೀಡಿದೆ.

ಯಕ್ಷಗಾನ ಬಯಲಾಟ ಮತ್ತು ತಾಳಮದ್ದಳೆ ರಂಗ ಕೃತಿಗಳಿಗೆ ಪ್ರಸಂಗಗಳೇ ಆಧಾರ. ಯಕ್ಷಗಾನ ತಾಳಮದ್ದಳೆಯನ್ನು 'ಪ್ರಸಂಗ' ಎಂದು ಕರೆಯುವ ವಾಡಿಕೆಯಿದೆ. ಪ್ರಸಂಗಗಳು ಕಥನ ಶೈಲಿಯ ಪದ್ಯ ಪ್ರಬಂಧಗಳು, ಕನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರವೆಂದು ಪರಿಗಣಿಸಲ್ಪಡುವ ಪ್ರಸಂಗದ ಸಾಹಿತ್ಯದ ರಚನಾಕ್ರಮ, ಶೈಲಿ, ಛಂದಸ್ಸು, ರಾಗ, ತಾಳಬದ್ಧ, ಲಯಬದ್ಧ ರಚನೆ ಸಾಹಿತ್ಯದ ಉಳಿದೆಲ್ಲ ಪ್ರಕಾರಗಳಿಗಿಂತ ಭಿನ್ನವಾದುದಾಗಿದೆ. ಪ್ರಸಂಗಗಳು ಕುಣಿತಾಭಿನಯಕ್ಕೆ ಅನುಕೂಲಕರವಾದ ರಚನೆಗಳಾಗಿವೆ. ಇದನ್ನು ಹಾಡಿದಾಗ ಉಂಟಾಗುವ ಸಂವೇದನೆಗಳಿಗೆ, ಅರ್ಥವಿಸ್ತಾರಕ್ಕೆ, ಅಭಿನಯಕ್ಕೆ ರಚನಕಾರನ ರಂಗಪ್ರಜ್ಞೆಯನ್ನು, ರಾಗತಾಳ ಜ್ಞಾನವನ್ನು ರಾಮಯಣ, ಮಹಾಭಾರತ, ಭಾಗವತಗಳ ಆಖ್ಯಾನವನ್ನು ಪ್ರಸಂಗ ರಚನೆ ಮಾಡುವುದಕ್ಕೆ ಅವುಗಳ ಜ್ಞಾನವನ್ನು ಹೊಂದಿರಬೇಕಾಗುತ್ತದೆ.

ಯಕ್ಷಗಾನ ಪ್ರಸಂಗ ಸಾಹಿತ್ಯವು ಜನರ ಹಾಡು, ಅಭಿನಯಕ್ಕೆ ಪೂರಕವಾಗಿಯೆ ರಚನೆಗೊಂಡಿದೆ. ಇವು ಒಂದು ರೀತಿ ಹಾಡುಹಬ್ಬಗಳೇ ಆಗಿವೆ. ಸಹಜವಾಚನಕ್ಕಿಂತ ಅವುಗಳನ್ನು ರಾಗ, ತಾಳಯುಕ್ತವಾಗಿ ಹಾಡಿದಾಗ ಉಂಟಾಗುವ ಪರಿಣಾಮ ಕುಣಿತಾಭಿನಯವನ್ನು ಸಹಜವಾಗಿ ವ್ಯಕ್ತಗೊಳಿಸುತ್ತದೆ. ಇಂತಹ ಹಾಡುಗಳ ರಚನೆ, ಹಾಡುತ್ತ ಕುಣಿಯುವ ಭಜನೆ ಕುಣಿತ ಸಾಕಷ್ಟು ಯಕ್ಷಗಾನ ಬಯಲಾಟವಿರುವ ಪ್ರದೇಶಗಳಲ್ಲಿ ರೂಢಿಯಲ್ಲಿದ್ದವು. ಹವ್ಯಕರ ಮನೆಗಳಲ್ಲಿ ಇಂದಿಗೂ ಮದುವೆ. ಚೌಲೋಪನಯನ, ದೀಪಾವಳಿ ಮೊದಲಾದ ಹಬ್ಬಹರಿದಿನಗಳಲ್ಲಿ ಹಾಡು ಹೇಳುವ ಸಂಸ್ಕೃತಿಯಿದೆ. ಮಹಿಳೆಯರು ಹಾಡು-ಶೇಡಿಗಳಲ್ಲಿ ಕುಶಲರಾಗಿದ್ದರೆಂದು ಇಂದಿಗೂ ರೂಢಿಯಿಲಿರುವ ಸಂಸ್ಕೃತಿಯಿಂದ ತಿಳಿದುಬರುತ್ತದೆ. ಹಾಡುಗಳು ಆಡುಭಾಷೆಯಾಗಿರದೆ ಶಿಷ್ಟಪದಗಳಿಂದೊಡಗೂಡಿದ ರಚನೆಗಳಾಗಿರುತ್ತಿದ್ದವು. ಇಂತಹ ಹಾಡುಗಳಿಗೂ, ಯಕ್ಷಗಾನಪದ್ಯಗಳಿಗೂ ಸಾಮ್ಯತೆಗಳಿವೆ.

ಯಕ್ಷಗಾನ ಪ್ರಸಂಗವೆನ್ನುವುದು ಒಂದು ಪದ್ಯರೂಪವನ್ನು ಆಧರಿಸುತ್ತದೆ. ಈ ಪದ್ಯಹಿಂದೆ ತಾಳೆಗರಿಯಲ್ಲಿತ್ತು. ನಂತರ ಪುಸ್ತಕ ರೂಪದಲ್ಲಿ ಪ್ರಕಟಣೆಗೊಂಡಿತು. ಅದಕ್ಕೂ ಹಿಂದೆ ಅದೊಂದು

ತೋಂಡಿ ಸಂಪ್ರದಾಯದಲ್ಲಿತ್ತೆಂದು ಊಹಿಸಲಾಗಿದೆ. ಅಷ್ಟೇ ಅಲ್ಲ ಅದು ಹಾಡಿನ ರೂಪದಲ್ಲಿಯೆ ಇತ್ತು. ಈ ಹಾಡಿಗೆ ಒಂದು ಜವಾಬ್ದಾರಿಯೂ ಇದೆ. ಅದೆಂದರೆ ಒರ್ವ ಸಂಗೀತಗಾರನ ಹಾಗೆ ಹಾಡಿ ಮುಗಿಸುವದಲ್ಲದೆ ಆ ಹಾಡಿನ ಉದ್ದೇಶ ಮುರಿಯದೆ, ಆ ಹಾಡಿಗೆ ಅಭಿನಯಿಸುವ ಕುಣಿಯುವ ವ್ಯಾಖ್ಯಾನಿಸುವ ಕ್ರಿಯೆಗೂ ಅದು ಪೋಷಕವಾಗಿ ಇರಬೇಕಾದ ಅಗತ್ಯವನ್ನು ನಾವು ಮನಗಾಣಬಹುದು. ಈ ಕಾರಣದಿಂದಲೇ ಅದು ಉಳಿದ ಸಾಹಿತ್ಯ ಕೃತಿಗಳಿಗಿಂತ ಭಿನ್ನವಾದುದು.

ಹಾಡುಗಳನ್ನು, ಭಜನೆಗಳನ್ನು ಹಾಡುತ್ತ ಕುಣಿಯುವ ವಿಶೇಷ ಹೆಜ್ಜೆಗಾರಿಕೆಯ ಸಂಪ್ರದಾಯ ಇಂದಿಗೂ ಉತ್ತರಕನ್ನಡ, ದಕ್ಷಿಣಕನ್ನಡದ ದೇವಾಲಯಗಳಲ್ಲಿವೆ.[೫] ಹವ್ಯಕರ ಹೆಂಗಸರ ಹಾಡುಗಳು ಮತ್ತು ದೇವಾಲಯದಲ್ಲಿ ಭಜನೆ ಕುಣಿತಗಳನ್ನು ಗಮನಿಸಿದಾಗ, ಅವುಗಳ ರಚನೆ ಧಾಟಿ, ಮಟ್ಟುಗಳನ್ನು ಪರಿಶೀಲಿಸಿದಾಗ ಹಾಡುಗಬ್ಬಗಳು ಯಕ್ಷಗಾನ ಪ್ರಸಂಗದ ಹಾಡುಗಳ ರಚನೆಗೆ ಪ್ರೇರಣೆಯಾಗಿರಬೇಕೆಂದು ಊಹಿಸಲು ಸಾಧ್ಯವಿದೆ.

"ಹವ್ಯಕ ಹೆಂಗಸರ ಮದುವೆ, ಸೀಮಂತ, ನಾಮಕರಣ, ಚೌಲ, ಉಪನಯನ, ದೇವತಾಕಾರ್ಯ, ಗೋಪೂಜೆ, ಬಲೀಂದ್ರ ಪೂಜೆ ಇತ್ಯಾದಿಗಳ ಅಂಗವಾಗಿ ಹಾಡು ಹೇಳುತ್ತಾ ಬಂದಿದ್ದಾರೆ. ಶೃತಿಗಳ ಹಾಗಿ ಕಿವಿಯಿಂದ ಕಿವಿಗೆ ಹರಿದು ಬಂದ ಈ ಹಾಡುಗಳಿಗೆ ಒಂದು ಪರಂಪರೆ ಇದೆ. ಹಾಡು ಹಳಿಗಳನ್ನು ತಿಳಿದ ಜಾಣೆಗೆ ಈ ಸಮಾಜಲ್ಲಿ ಮಹತ್ವದ ಗೌರವವಿದೆ. ಹಬ್ಬಹರಿದಿನಗಳಲ್ಲಿ ಹಾಡಿನ ಪ್ಯಪೋಟಿಗಳು ನಡೆಯುತ್ತವೆ. ಸಂವಾದಗಳು ಪ್ರಶ್ನೋತ್ತರಗಳು ಕಥಾನಿರೂಪಣೆಗಳ ಮೂಲಕ ಹಾಡುಗಳು ಬೆಳೆದು ಬಂದಿದೆ."[೬] ಹಾಡುವ ಕಸುಬುಗಾರಿಕೆ ಹೆಂಗಸರ, ಗಂಡಸರ ಬೇಧವಿಲ್ಲದೆ ಬೆಳೆದುಬಂದಿದೆ. ಹಳೆಯಕಾಲದ ಹೆಂಗಸರ ಹಾಡುವ ಧಾಟಿಗೂ ಯಕ್ಷಗಾನದ ಹಾಡುಗಳ ಧಾಟಿಗೂ ಸಾಮ್ಯತೆ ಇದೆ. ಇಂತಹ ಧಾಟಿಯನ್ನು ಹವ್ಯಕರ ಶೋಭಾನೆ ಪದಗಳಲ್ಲಿ ಗುರುತಿಸಲಾಗಿದೆ.

೪.೧.೧. ಹವ್ಯಕರ ಶೋಭಾನೆಗಳು

ಹವ್ಯಕ ಹೆಂಗಸರ ವಿವಿಧ ಮಂಗಲಕಾರ್ಯಗಳಲ್ಲಿ ಹಾಡುವ ವಿಶಿಷ್ಟ ಗೇಯ ಪದಗಳನ್ನು ಶೋಭಾನೆಗಳು ಎಂದು ಗುರುತಿಸಲಾಗಿದೆ. "ಶೋಭಾನೆ"ಗಳು ಎಂದರೆ ಮಂಗಳ ಗೀತೆಗಾನ, ಆರತಿಪದಗಳು, ಹೆಂಗಸರು ಪ್ರಾತಃಕಾಲ, ಸಂಧ್ಯಾಕಾಲ ವಿಶೇಷವಾಗೆ ಹಬ್ಬಹರಿದಿನ ಇತ್ಯಾದಿ ಸಂದರ್ಭಗಳಲ್ಲಿ ಈ ಹಾಡುಗಳನ್ನು ಹಾಡುವ ಸಂಪ್ರದಾಯ ತೀರ ಹಿಂದಿನಿಂದ ಬೆಳುದುಬಂದಿದೆ.

ಪ್ರೊ। ಟಿ. ಕೇಶವಭಟ್ಟರು ಇಂತಹ ಶೋಭಾನೆಗಳನ್ನು ಐದು ಅಧ್ಯಾಯಗಳಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಸಂಗ್ರಹದಲ್ಲಿ ೨೮೦ ಹಾಡುಗಳಿವೆ. ಮದುವೆಯ ಹಾಡು ಚತುರ್ಥಿಯಹಾಡು, ಗೃಹಪ್ರವೇಶದ ಹಾಡುಗಳು ಗೃಹಿಣಿಯ ದಿನಚರಿ, ಜನ್ಮದಿನ, ಸೀಮಂತ, ಜನ್ಮೋತ್ಸವ, ಉಪನಯನ ಪುಣ್ಯಕಥಾತ್ಮಕಗಳೆಂಬ ಐದು ಅಧ್ಯಾಯಗಳಿವೆ. ಶೋಭಾನೆ ಹಾಡುಗಳಲ್ಲಿನ ಛಂದಸ್ಸು, ಧಾಟಿ, ಮಟ್ಟುಗಳು ಯಕ್ಷಗಾನ ಪ್ರಸಂಗ ಹಾಡುಗಳ ರಚನಾಕ್ರಮದಲ್ಲಿರುವ ಸಾಮ್ಯಾಂಶಗಳನ್ನು ಸವಿವರವಾಗಿ ಚರ್ಚಿಸಿದ್ದಾರೆ.

೫. ಉತ್ತರ ಕನ್ನಡದ ಕರ್ಕಿ ಮತ್ತು ಮೂರೂರಿನ ದೇವಾಲಯಗಳಲ್ಲಿ ಗಮನಿಸಲಾಗಿದೆ.

೬. ಡಾ. ಗೋಪಾಲಕೃಷ್ಣ ಹೆಗಡೆ – ಯಕ್ಷಗಾನ ವರ್ಣವೈಭವ – ಪು. ೨೫

ಶೋಭಾನೆಗಳು ಮಹಿಳೆಯರ ಆಶುರಚನೆಗಳಾಗಿ ಜನಪದೀಯವಾಗಿ ಹುಟ್ಟಿ ಕಿವಿಯಿಂದ ಕಿವಿಗೆ ಹಾಡು ಹಾಡುತ್ತ, ಕೇಳುತ್ತ, ಕಂಠಸ್ಥವಾಗಿ ಉಳಿದುಕೊಂಡು ಬಂದಿದೆ. ಹಾಡುವುದಕ್ಕೆ ಮಧುರಕಂಠವುಳ್ಳ ಧಾಟಿಗೊತ್ತಿರುವ ಮಹಿಳೆಯವರಿಂದ ಹಾಡಿಸಿ ಒಬ್ಬರಿಂದ ಒಬ್ಬರು ಅನುಕರಿಸಿ ಕಲಿಯುತ್ತಾರೆ. ವಿಶೇಷ ದಿನಗಳಲ್ಲಿ ಹಾಡು ಹೇಳುವುದಕ್ಕೆ ಹಾಡುಗಾರ್ತಿಯರನ್ನು ಕರೆಸುವುದು ರೂಢಿಯಲ್ಲಿತ್ತು. ಮದುವೆ ಮನೆಯಲ್ಲಿ ಗಂಡಿನ ಕಡೆಯವರು ಹೆಣ್ಣಿನ ಕಡೆಯವರಿಂದ ಹಾಡಿನ ಪೈಪೋಟಿ ನಡೆದ ಉದಾಹರಣೆಗಳು ಇವೆ. "ಆರತಿ ಬೆಳಗುವ ಹಾಡು", ಮದುಮಕ್ಕಳಿಗೆ, ಮುಂಜಿಯವಟುವಿಗೆ, ಗೃಹಪ್ರವೇಶದಲ್ಲಿ ಯಜಮಾನನಿಗೆ, ಗರ್ಭಿಣಿಗೆ ಸೀಮಂತದಲ್ಲಿ, ಬಾಲೆಗೆ ಜನ್ಮದಿನದಲ್ಲಿ ಆರತಿ ಎತ್ತುವಾಗ ಹಾಡುವುದು ಸಾಮಾನ್ಯವಾಗಿತ್ತು. ಇಂತಹ ಆರತಿ ಪದಗಳಿಗೆ "ಧವಳಾರಗಳು" ಎಂದು ಕರೆಯಲಾಗಿದೆ. ಯಕ್ಷಗಾನ ಪ್ರಸಂಗಗಳಲ್ಲಿ ಆರತಿ ಬೆಳಗುವ ಹಾಡು (ಧವಳಾರ)ಗಳು ಮಂಗಳದಲ್ಲಿ ಹಾಡುವುದು ವಾಡಿಕೆಯಾಗಿದೆ. ಇಂತಹ ಶೋಭಾನೆಗಳ ಧಾಟಿಮಟ್ಟುಗಳು ಯಕ್ಷಗಾನ ಹಾಡಿನ ಮಟ್ಟಿಗೆ ಸಾಮ್ಯತೆ ಇರುವುದನ್ನು ಅನೇಕ ಶೋಭಾನೆಗಳನ್ನು ಉದಾಹರಿಸಿ ಶ್ರೀ.ಟಿ.ಕೇಶವಭಟ್ಟರು ವಿಶ್ಲೇಷಿಸಿದ್ದಾರೆ.

ಧವಳಾರದ ಹಾಡುಗಳು ನಾಲ್ಕು ಪದಗಳಿಂದ ಹದಿನೈದು ಪದಗಳವರೆಗೆ ಇರುವ ರಚನೆಗಳಾಗಿವೆ. ಆಂಶಗಣ ಮಾತ್ರಗಣ ಎಂಬ ಉಭಯಗಣಗಳೂ ಇವುಗಳಲ್ಲಿ ಬರುತ್ತವೆ. ಏಕತಾಳ, ಆದಿತಾಳ, ರೂಪಕತಾಳ, ತ್ರಿವುಡೆ ತಾಳ, ಗತಿಯಲ್ಲಿದ್ದು ಇದಕ್ಕೆ ಪ್ರತಿಯೊಂದು ಸೊಲ್ಲಿನಲ್ಲಿಯೂ ತಾಳ ಪರಿವರ್ತನೆಯಿದೆ.

ಶೋಭಾನೆಯ ಪ್ರಭೇಧವಾಗಿರುವ ಆರುಪಾದಗಳ ಒಂದು ಧವಳಾರವನ್ನು ಉದಾರಿಸಬಹುದು.

ಶೀಲವಂತೆಯರೆಲ್ಲ ಸುಳಿದು
ಚಾಲಮುತ್ತಿನ ಸೇಸೆ ತಳಿದು
ಮೇಲುದಿನಗ್ರವ ಕುಚವೆಡೆಗಳೆದು
ಕಾಲ ಹಿಂದುಗೆ ಗೆಜ್ಜೆ ಘಲಿರವನಲಿದು
ನೀಲಮಾಣಿಕದಿಂದ ರಚಿಸಿರ್ದವಿ
ಶಾಲದಾರಿತಿಯಾ.........ಬೆಳಗಿರೆ(ಶೋಭಾನೆ)

ಇದರಲ್ಲೊ ಮೊದಲೆರಡು ಸಾಲುಗಳಿಗೆ ವಿಲಂಬಗತಿಯ ಅನಂತರದ ಮೂರುಸಾಲುಗಳಿಗೆ ದ್ರುತಗತಿ, ಕೊನೆಯ ಸಾಲುತ್ರಿಪದಿ, ಮುಕುಟವಾಗಿದ್ದು ಪುನಃ ವಿಲಂಬಗತಿ ಇರುತ್ತದೆ. ನಾಲ್ಕನೇ ಸಾಲ್ಲನ್ನು ವಿಲಂಬಗತಿ ಒಪ್ಪುವಂತೆ ನಿಧಾನ ತ್ರಿವಡೆಯಲ್ಲಿ ಹಾಡುವ ಕ್ರಮ ಧವಳಾರಗಳಲ್ಲದೆ ಜೋಗುಳಹಾಡಿನಲ್ಲಿ ಹಾಗೂ ಪ್ರಸಂಗದಲ್ಲಿ ಬಂದಿರುತ್ತದೆ.[೭]

ಶೋಭಾನೆ ಪದಗಳು ಮತ್ತು ಯಕ್ಷಗಾನ ಪ್ರಸಂಗದ ಹಾಡುಗಳಲ್ಲಿ ಅನುಸರಿಸಿದ ರಚನಾ ಕ್ರಮಗಳು ಧಾಟಿ-ಮಟ್ಟು ದ್ವಿತಿಯಾಕ್ಷರದ ಪ್ರಾಸ ಸಂಧಿದೋಷ, ಮುಡಿ ಪದ್ಮಗಣ ಪ್ರಯೋಗ, ಪಲ್ಲವಿ

೭ ಡಾ. ಗೋಪಾಲಕೃಷ್ಣ ಹೆಗಡೆ - ಯಕ್ಷಗಾನ ವರ್ಣ ವೈಭವ - ಪುಟ ೨೬

ಅನುಪಲ್ಲವಿ-ವರುಣ, ಅತೀತಗೃಹ ಲಕ್ಷಣಗಳಿಂದ ಸಾಮ್ಯವಾಗಿರುವುದನ್ನು ಟಿ.ಕೇಶವಭಟ್ಟರು ಸೋದಾಹರಣವಾಗಿ ವಿವರಿಸಿದ್ದರೆ.[೮]

೪.೧.೨. ಯಕ್ಷಗಾನ ಬಯಲಾಟ ಸಭಾಲಕ್ಷಣ ಪದ್ಯ

ಯಕ್ಷಗಾನ ಬಯಲಾಟವಿರಲಿ ತಾಳಮದ್ದಳೆಯಿರಲಿ ಗಣಪತಿಸ್ತುತಿ ಸಭಾಲಕ್ಷಣದ ಪದ್ಯವಾಗಿ ನಿತ್ಯಹಾಡಲ್ಪಡುತ್ತದೆ. ಗಣಪತಿಗೆ "ಪ್ರಥಮವಂದ್ಯ" ಸ್ಥಾನವನ್ನು ಕಲ್ಪಿಸಲಾಗಿದೆ. ಯಕ್ಷಗಾನ ಕಲೆಯಲ್ಲಿ ಅಷ್ಟೇಅಲ್ಲ ಯಾವುದೇ ಕಾರ್ಯಗಳಲ್ಲೂ ಗಣಪತಿಯನ್ನು ಮೊದಲು ಆರಾಧಿಸಿ ವಿಘ್ನಭಯಗಳನ್ನು ನಿವಾರಿಸಿಕೊಳ್ಳುವ ಮನೋಸಂಕಲ್ಪ ಅನೂಚಾನಾನವಾಗಿ ನಡೆದು ಬಂದಿದೆ. ಯಕ್ಷಗಾನಕ್ಕೂ ಗಣಪತಿಗೂ ವಿಶೇಷ ಸಂಬಂಧವನ್ನು ರೂಢಮೂಲವಾಗಿ ಕಲ್ಪಿಸಿಕೊಂಡು ಬರಲಾಗಿದೆ.

ಯಕ್ಷಗಾನದ ಸಭಾಲಕ್ಷಣ ಪದ್ಯವಾದ "ಗಜಮುಖದವಗೆ ಗಣಪಗೆ" ಇದು ಶೋಭಾನೆ ಪದ್ಯವಾಗಿದೆ. ಹವ್ಯಕ ಹೆಂಗಳೆಯರು ಈ ಧವಳಾರವನ್ನು ಹಿಂದಿನಿಂದಲೂ ಹಾಡುತ್ತ ಬಂದಿರುತ್ತಾರೆ.

ಹವ್ಯಕರಲ್ಲಿ ಗಣಪತಿಯ ಪೂಜೆಗೆ ವಿಶೇಷವಾದ ಸ್ಥಾನವಿದೆ. ಪಂಚಾಯತನ ಪೂಜೆಯಲ್ಲಿ ಗಣಪತಿಗೆ ಆದ್ಯಸ್ಥಾನವಿದೆ. ಹೆಂಗಳೆಯರು ಚೌತಿಹಬ್ಬದಲ್ಲಿ ಮಣ್ಣಿನ ಗಣಪತಿಗೆ ಆರತಿ ಬೆಳಗಿ ಹಾಡು ಹೇಳುವ ಪದ್ಧತಿಯಲ್ಲಿ "ಗಜಮುಖದವಗೆ ಗಣಪಗೆ" ಧವಾಳರ ಬಳಕೆಯಲ್ಲಿದೆ. "ತ್ರಿಜಗ ವಂದಿತಗಾರತಿ ಎತ್ತಿರೆ" ಎಂದು ಪಲ್ಲವಿಯನ್ನು ಮುಕ್ತಾಯಗೊಳಿಸುತ್ತಾರೆ. "ಬೆಳ್ಳಿಯ ಹುರಿಗೆಜ್ಜಗಳ ಕಟ್ಟಿ ಕುಣಿವ ಕಿರುಡೊಳ್ಳಿನ ಗಣಪತಿಗಾರತಿ ಎತ್ತಿರೆ" ॥೧॥ ಇದು ನಾವು ಗಣಪತಿಯನ್ನು ಆರಾಧಿಸುವ ಕ್ರಮವನ್ನು ಹೇಳುತ್ತದೆ. ಇದನ್ನು ಕೆಲವರು ಪೂರ್ವಿರಾಗ ಎಂತಲು ಮತ್ತೆ ಕೆಲವರು ಸೌರಪ್ಟ್ರವೆಂತಲೂ, ತೋಡಿರಾಗ ಎಂತಲೂ ದಾಖಲಿಸಿದ್ದಾರೆ. ಘಂಟಾರವ ತ್ರಿವುಡೆ ತಾಳದಲ್ಲಿ ಹಾಡುವುದು ಉತ್ತರಕನ್ನಡ ಪದ್ಧತಿಯಾಗಿದೆ. ಘಂಟೆ ಭಾರಿಸುವುದು ಪೂಜೆಯಲ್ಲಿ ಪ್ರಥಮೋಪಚಾರ ಪದ್ಧತಿಯಾಗಿದೆ. ದಕ್ಷಿಣಕನ್ನಡದಲ್ಲೂ ನಾಲ್ಕು ಸೊಲ್ಲಿನ ಹಾಡನ್ನು ಮೂರುಸೊಲ್ಲಿನಲ್ಲಿ ಹಾಡುವ ಪದ್ಧತಿ ಇದೆ.[೯]

ಪ್ರಾದೇಶಿಕವಾಗಿ ಹಾಡುವ ಕ್ರಮದಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಇದು ಹವ್ಯಕರ ಶೋಭಾನೆ ಪದವಾಗಿದೆ ಎಂಬುದು ಗಮನಾರ್ಹವಾಗಿದೆ. ಹವ್ಯಕರ ಪ್ರಸಂಗಗಳಲ್ಲಿ ಇದೇ ರೀತಿಯ ಪದಗಳಬಳಕೆ, ರಚಾನಕ್ರಮಗಳನ್ನು ಅನುಸರಿಸಿದ್ದು, ಶೋಭಾನೆ ಮಟ್ಟಿನಲ್ಲಿ ಪದಗಳ ರಚನೆಯಾಗಿ ಹಾಡಲ್ಪಡುವ ಕುಣಿತಕ್ಕೆ ಪೂರಕವಾದ ತಾಳ ಬದ್ಧ ಧಾಟಿಯ ಪದ್ಯಗಳು ಪ್ರಸಂಗ ರಚನೆಗೆ ಪ್ರೇರಣೆಯಾಗಿರಬಹುದಿಂದು ಊಹಿಸಲು ಸಾಧ್ಯವಿದೆ.

ಪ್ರಸಂಗ ಸಾಹಿತ್ಯದ ಪದ್ಯಗಳ ರಚನಾಮಾರ್ಗ ಜಾನಪದದಿಂದ ಪ್ರಭಾವಿತಗೊಂಡ ಶಿಷ್ಟಸಾಹಿತ್ಯದ ಸ್ವರೂಪವಾಗಿದೆ. ಛಂದಸ್ಸು ಅಲಂಕಾರಗಳ ಬಳಕೆಯಿಂದ ಮಾರ್ಗ ಸಾಹಿತ್ಯದ ಗುಣವನ್ನು ಹೊಂದಿದೆ.

---

೮. ಡಾ. ಟಿ. ಕೇಶವ ಭಟ್ - ಹವ್ಯಕ ಸೋಭಾನೆಗಳು - ಪುಟ ೫೦೦

೯. ಡಾ. ಗೋಪಾಲಕೃಷ್ಣ ಹೆಗಡೆ - ಯಕ್ಷಗಾನ ವರ್ಣ ವೈಭವ - ಗಜಮುಖದವಗೆ ಗಣಪಗೆ - ಪು. ೨೭

"ಕಾವ್ಯರಚನಾ ಮಾರ್ಗದಿಂದಲೂ ಅದು ಶುದ್ಧ ಮಾರ್ಗ ಪರಂಪರೆಗೆ ಸೇರಿದೆ ಎಂಬುದರಲ್ಲಿ ಎರಡು ಮಾತಿಲ್ಲ" ಎಂದು ಛಂದಸ್ಸಿನ ಅಧ್ಯಯನದಿಂದ ಖಚಿತವಾಗಿ ಹೇಳಲಾಗಿದೆ.[೧೦]

೪.೨. ಪ್ರಸಂಗ ಸಾಹಿತ್ಯ ಕೃತಿಗಳು

ಯಕ್ಷಗಾನ ಪ್ರಸಂಗ ಸಾಹಿತ್ಯೋದಯದ ಕಾಲವು ಖಚಿತವಾಗಿ ನಿರ್ಣಯಿಸಲ್ಪಟ್ಟಿಲ್ಲ. ಡಾ. ಶಿವರಾಮಕಾರಂತರು "ಕ್ರಿ.ಶ. ೧೫೦೦ಕ್ಕಿಂತಲೂ ಮುಂಚಿತವಾಗಿ ಯಕ್ಷಗಾನ ಪ್ರಸಂಗ ಸಾಹಿತ್ಯ ನಮಗೆ ದೊರಕಿಲ್ಲ. ಅಂಥದಿದ್ದಲ್ಲಿ ಅವುಗಳ ಕಾಲ ನಿರ್ಣಯಕ್ಕೊದಗುವ ಸಾಕ್ಷಿಗಳು ದೊರೆತಿಲ್ಲ" ಎಂದು ಅಭಿಪ್ರಾಯಪಟ್ಟಿರುತ್ತಾರೆ.[೧೧]

ಯಕ್ಷಗಾನ ಪ್ರಸಂಗಗಳ ಕುರಿತಾದ ಅಧ್ಯಯನ ಇಂದಿಗೂ ನಡೆಯುತ್ತಲೆ ಇದೆ. ಯಕ್ಷಗಾನ ಪ್ರಸಂಗಗಳು ಹದಿನೆಂಟನೆ ಶತಮಾನದವರೆಗೂ ತಾಳೆಗರಿಗಳಲ್ಲಿ, ಹಸ್ತ ಪ್ರತಿಗಳಲ್ಲಿ ರಚನೆಗೊಂಡಿವೆ. ಧಾರ್ಮಿಕ ಕೇಂದ್ರಗಳಲ್ಲಿ, ಮಠಮಂದಿರಗಳಲ್ಲಿ ವಸ್ತು ಸಂಗ್ರಹಾಲಯಗಳಲ್ಲಿ ಸಂರಕ್ಷಿಸಲ್ಪಟ್ಟಿವೆ. ಹಿಂದೆ ಯಕ್ಷಗಾನದ ಕೇಂದ್ರವಾದ ದೇವಾಲಯಗಳು, ಭಾಗವತರು, ಕಲಾವಿದರು, ಪ್ರತಿಕಾರರ ಮನೆಗಳಲ್ಲಿ ತಲೆಮಾರಿನಿಂದ ಜತನವಾಗಿಟ್ಟವು ಇಂದು ಶೋಧನೆಗೆ ಲಭ್ಯವಾಗಿದೆ. ಅವುಗಳಲ್ಲಿ ಅನೇಕ ಕೃತಿಗಳು ಅಚ್ಚಾಗದೆ ಉಳಿದಿವೆ. ಇಂತಹ ತಾಳೆಗರಿಗಳನ್ನು ಕಾಲನಾಮಯಾದಿ ತಯಾರಿಸಿ ಪ್ರತಿಗಳ ಸೂಚಿ ತಯಾರಿಸಿ ಅವನ್ನೋದಿ ಪ್ರಸಂಗಗಳನ್ನು ಗುರುತಿಸಲಾಗಿದೆ. ಲಭ್ಯ ಯಕ್ಷಗಾನವೆಲ್ಲವೂ ರಂಗ ಪ್ರಯೋಗಕ್ಕೆ ಒಪ್ಪುವಂತಹದುಲ್ಲ. ಇಂತವುಗಳಲ್ಲಿ ಕೆಲವು ಕೃತಿಗಳು ಮಾತ್ರ ಪ್ರಯೋಗ ಯೋಗ್ಯವಾದುದು. ಇದರಿಂದ ಪುರಾಣಗಳನ್ನು ಸರಳಗನ್ನಡದಲ್ಲಿ ಓದುವ ಉದ್ದೇಶದಿಂದ ಪ್ರಸಂಗ ಸಾಹಿತ್ಯ ಮೊದಲು ರಚನೆಯಾಗಿದ್ದಿರಬೇಕು.[೧೨]

ಹೀಗೆ ರಚಿತವಾದ ಪ್ರಸಂಗ ಸಾಹಿತ್ಯವು ಕುಮಾರ ವ್ಯಾಸಭಾರತ, ಕೌಶಿಕ ರಾಮಾಯಣ, ಜೈಮಿನಿ ಭಾರತವೆ ಮೊದಲಾದ ನಡುಗನ್ನಡ ಕಾವ್ಯಗಳ ಪ್ರಭಾವದಿಂದ ಸರಳ ರಚನೆಗಳಲ್ಲಿ ರಾಮಾಯಣ, ಮಹಾಭಾರತ, ಪುರಾಣಗಳ ಆಖ್ಯಾನಗಳನ್ನು ಹಾಡುವ, ಆಡುವ ಹಾಡುಗಬ್ಬಗಳ ರಚನೆಯ ಮೂಲಕ ಪ್ರಸಂಗ ಸ್ವರೂಪಿ ರಾಗ ತಾಳ ಲಯಬದ್ಧ ರಚನೆಗಳು ಪ್ರಸಂಗಗಳಾಗಿ ರೂಪಗೊಂಡಿರಬೇಕು. ಇಂತಹ ರಚನೆಗಳು ಹನ್ನೆರಡು–ಹದಿಮೂರನೆ ಶತಮಾನದಿಂದಲೆ ಆರಂಭಿಕ ಪ್ರಯತ್ನಗಳಾಗಿ ವಿಕಾಸಗೊಂಡಿರಬೇಕು. ಯಕ್ಷಗಾನ ಕೃತಿಗಳ ರಚನೆಯ ನಂಟನ್ನು ತೆಲುಗು ಭಾಷಿಕ ಜನರ 'ಯಕ್ಷಗಾನ'ಗಳೊಂದಿಗೂ ಕೂಡ ಸಂಬಂಧ ಕಲ್ಪಿಸಿ ತೆಲುಗಿನ ಯಕ್ಷಗಾನ ಪರಂಪರೆ ಕನ್ನಡದ ಯಕ್ಷಗಾನದ ಮೂಲವಿರಬೇಕೆ? ಎಂಬ ಕುರಿತು ಜಿಜ್ಞಾಸೆ ನಡೆದಿದೆ. "ಯಕ್ಷಗಾನದ ವೇಷಭೂಷಣಗಳಲ್ಲಿ ತೆಲುಗು ಯಕ್ಷಗಾನದ ಪ್ರಭಾವವನ್ನು

---

೧೦. ಡಾ. ಕಬ್ಬಿನಾಲೆ ವಸಂತ ಭಾರದ್ವಾಜ – ಯಕ್ಷಗಾನ ಛಂದಸ್ಸು – ಪು. ೨೪೫

೧೧. ಡಾ. ಕೆ. ಶಿವರಾಮ ಕಾರಂತ, ಯಕ್ಷಗಾನ ಬಯಲಾಟ, ಕವಿ ಕಾವ್ಯ ಪರಿಚಯ – ಪು. ೨೦೩

೧೨. ಯಕ್ಷಗಾನದ ಹಸ್ತ ಪ್ರತಿಗಳು ಮಂಜುನಾಥ ಭಾಗ್ವತ ಹೊಸ್ತೋಟ ಪು. ೧೧೩.

ಹುಡುಕುವುದು ಸಮಂಜಸವಲ್ಲ"[೧೩]

ಕನ್ನಡದ ಆದಿಪರ್ವ ಕೃತಿಯ ರಚನಾ ಕಾಲವನ್ನು ಆಧಾರವಾಗಿಟ್ಟುಕೊಂಡಲ್ಲಿ ತೆಲುಗಿನ ಮೊದಲ ಯಕ್ಷಗಾನ ಕೃತಿ ರಚನೆ ಕ್ರಿ.ಶ. ೧೫೫೦ರಲ್ಲಿ (ಸುಗ್ರೀವ ವಿಜಯ-ಕುಂದುಕೂರಿ ರುದ್ರ) ರಚನೆಯಾಗಿದೆ "ಇದರಿಂದ ಯಕ್ಷಗಾನದ ಸಭಾ ಲಕ್ಷಣವಾಗಲಿ ಕೃತಿಗಳಾಗಲಿ ಇದಕ್ಕೂ ಪ್ರಾಚೀನವಾದುದು. ನರಹರಿ ತೀರ್ಥರು ಕೀರ್ತನೆಗಳನ್ನು ರಚಿಸಿದ ಸಂದರ್ಭದಲ್ಲೆ ಯಕ್ಷಗಾನ ಕಾವ್ಯ ಸಂಪ್ರದಾಯ ಸ್ಥಾಪನೆ ಆಗಿರಬೇಕೆಂದು ತರ್ಕಿಸಿದರೆ ಕನ್ನಡ ಯಕ್ಷಗಾನ ಕಾವ್ಯದ ಪ್ರಾಚೀನತೆ ಕ್ರಿ.ಶ. ೧೨೮೧ರಷ್ಟು ಹಿಂದಕ್ಕೆ ಹೋಗುತ್ತದೆ"[೧೪]

ಯಕ್ಷಗಾನ ಸಭಾಲಕ್ಷಣ ಪದ್ಯವು ಹೆಂಗಳೆಯರು ಆರತಿ ಎತ್ತುವಾಗ ಹಾಡುವ ಹಾಡಾಗಿದೆ. ಹವ್ಯಕ "ಶೋಭಾನೆ ಹಾಡುಗಳು ಮೊದಲ ಸೊಲ್ಲಿನಲ್ಲಿ ಗಜಮುಖನನ್ನು ಸ್ತುತಿಸುವುದು ಒಂದು ಸಾಮಾನ್ಯ ಸಂಪ್ರದಾಯ. ಶೋಭಾನೆಗಳ ಧಾಟಿ-ಮಟ್ಟು ಸಾಮ್ಯತೆ ಇರುವ "ಪ್ರತಿ ಸೊಲ್ಲಿನ ಕಡೆಯಲ್ಲಿ ಆರತಿಯತ್ತಿರೆ" ಎಂಬ ಆವೃತ್ತಿಯೊಂದಿಗಿನ ಸಂಗ್ರಹವಾಗದೆ ಇರುವ ಹಳೆಯ ಹಾಡುಗಳು ಇನ್ನೂ ಇವೆ. ಇಂತಹ ಶೋಭಾನೆ ಹಾಡುಗಳ ಮೊದಲ ಸೊಲ್ಲಿನಲ್ಲಿ ಗಜಮುಖನನ್ನು ಸ್ತುತಿಸುವುದು ಒಂದು ಸಾಮಾನ್ಯ ಸಂಪ್ರದಾಯ. ಈ ಬಗೆಯ ಹಾಡಿನ ಭಾಷಿಕ ಸ್ವರೂಪಗಳು ಕೂಡಾ ಹವ್ಯಕರದೇ ಎನ್ನುವುದು ಭಾಷಾ ತಜ್ಞರಿಗೆ ವೇದ್ಯವಾಗುವ ವಿಚಾರ."[೧೫]

ಯಕ್ಷಗಾನ ಪ್ರಸಂಗ ಕೃತಿಗಳು ಹವ್ಯಕರ ಹಾಡುಗಳ ಲಕ್ಷಣವನ್ನು ಹೊಂದಿರುವುದನ್ನು ಪ್ರಸಂಗಗಳ ಭಾಷೆ, ಶೈಲಿ, ಶಬ್ದಗಳ ಬಳಕೆಯಲ್ಲಿಯೂ ಭಾಷಾ ಶಾಸ್ತ್ರೀಯ ಹಿನ್ನೆಲೆಯಲ್ಲಿ ಗುರುತಿಸಲು ಸಾಧ್ಯ. ಇಲ್ಲಿನ ಕಥಾ ಸ್ವರೂಪವನ್ನು ಹೊಂದಿದ "ರೂಢಗೊಂಡ ಹಾಡುಗಬ್ಬಗಳು ವಿಭಿನ್ನ ಶೈಲಿಗಳನ್ನು ಬಿತ್ತಿದವು. ಕಲ್ಯಾಣದ ಹಾಡುಗಳಂತೂ ಕಥೆಗಳೇ - ಹಸೆಗೆ ಕರೆದ ಹಾಡುಗಳು - ಮಂಚಿಯ ಹಾಡುಗಳೂ - ಆರತಿಯ ಹಾಡುಗಳು - ಧವಳಾರತಿಯ ಮಟ್ಟಿನ ಹಾಡಿಕೆಯ ರೀತಿ - ಧವಳಾರ - ರಾಗವಾಗಿ ಮನ್ನಣೆ ಪಡೆದಿದೆ. ಉದಯರಾಗದ ಹಾಡುಗಳು ಪ್ರಖ್ಯಾತ ಗಜೇಂದ್ರಮೋಕ್ಷ - ಅಕ್ಷಯಾಂಬರ - ಅಜಾಮಿಳ ಚರಿತ್ರೆ - ಅನಸೂಯಾ ಚರಿತ್ರೆ - ಸತ್ಯವಾನ ಸಾವಿತ್ರಿ ಇಂತಹ ಕಥೆಗಳು ಪ್ರಹ್ಲಾದ ಚರಿತ್ರೆ - ಧ್ರುವ ಚರಿತ್ರೆಯಂತಹ ಪ್ರಸಿದ್ಧ ಕಥೆಗಳೂ ಉದಯರಾಗದ ಹಾಡಿನ ಮಾಲಿಕೆಯಲ್ಲಿ ಕಂಗೊಳಿಸಿವೆ."[೧೬]

ಇದರಿಂದ ಯಕ್ಷಗಾನ ಪ್ರಸಂಗಗಳು ಲಭ್ಯವಾದ ಪ್ರದೇಶಗಳಲ್ಲಿ ಸಾಂಸಾರಿಕ - ಸಾಂಸ್ಕೃತಿಕ ಅಭಿವ್ಯಕ್ತಿಗಳಾದ ಹಾಡಿನ ಧಾಟಿಯಿಂದ ವಿಕಾಸಗೊಂಡು ಛಂದೋಬದ್ಧ ರಚನೆಗಳಾಗಿ ಪ್ರಸಂಗ ಪದ್ಯರೂಪಿತವಾಗಿದೆ. ಇಂತಹ ಗೇಯ ಪ್ರಬಂಧಗಳು ಒಬ್ಬರಿಂದೊಬ್ಬರು ಹೇಳಿ ಕಲಿಯುವ, ಕೇಳಿ ಕಲಿಯುವ, ಓದಿಕೆ - ಕೇಳಿಕೆ - ಆಡಿಕೆಯ ಕ್ರಮದಿಂದ ಹಾಡು ಆಟವಾಗಿ ಪರಿಣಮಿಸಿದ್ದಿರಬೇಕು.

---

೧೩. ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಯಕ್ಷಗಾನ ಛಂದಸ್ಸು - ಪು. ೨೪೨.
೧೪. ಡಾ. ಕಬ್ಬಿನಾಲೆ ವಸಂತ ಭಾರದ್ವಾಜ - ಯಕ್ಷಗಾನ ಛಂದಸ್ಸು - ಪು. ೨೪೨.
೧೫. ಡಾ. ಗೋಪಾಲಕೃಷ್ಣ ಹೆಗಡೆ, ಯಕ್ಷಗಾನ ವರ್ಣ ವೈಭವ - ಪು. ೨೯.
೧೬. ಹೊಸ್ತೋಟ ಮಂಜುನಾಥ ಭಾಗವತ ಯಕ್ಷಗಾನ ಹಸ್ತ ಪ್ರತಿಗಳು - ಪು. ೧೧೧

ಇಂತಹ ರಚನೆಗಳು ತಾಡವಾಲೆಗಳಲ್ಲಿ, ಹಸ್ತ ಪ್ರತಿಗಳಲ್ಲಿ ಲಿಖಿತವಾದ ಮೇಲೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕೃತಿಗಳನ್ನು ಒಯ್ದು ದಶಾವತಾರ ಆಟ ನಡೆಸಿದ ಐತಿಹಾಸಿಕ ಉಲ್ಲೇಖಗಳೂ ಇವೆ. ಸೋಂದಾ ಅರಸರ ಕಾಲದಲ್ಲಿ ದಶಾವತಾರ ಆಟ ಆಡಿಸುತ್ತಿದ್ದರು ಎಂಬ ಬಗ್ಗೆ ಸದಾಶಿವನಾಯಕನ ಕಾಲದಲ್ಲಿ ಭಟ್ಕಳ ಸಂಗೀತ ಪುರದಿಂದ ೨೦ ಯಕ್ಷಗಾನ ಪ್ರಸಂಗಗಳನ್ನು ತರಿಸಿ ಒಂದು ದಿನ ಬಿಟ್ಟು ಒಂದು ದಿನ ೬೦ ದಿನಗಳ ಕಾಲ ಆಟ ಆಡಿಸಿದ ಬಯಲಿಗೆ ವಿಲಾಸಬ್ಯಾಣ ಎಂದು ಈಗಲೂ ಹೆಸರಿದೆ. ಹಾಡುವಳ್ಳಿಯಿಂದ ಯಕ್ಷಗಾನ ಹೊತ್ತಿಗೆಗಳನ್ನು ತರಿಸಿದ ಕುರಿತು ಐತಿಹ್ಯವಿದೆ.[೧೭]

ದಶಾವತಾರ ಮೇಳದ ಆಟಗಳಿಗೆ ೧೭ ರಿಂದ ೧೯ನೇ ಶತಮಾನದವರೆಗೆ ಮೈಸೂರು, ಕೆಳದಿ, ಕಾರ್ಕಳ ಬಲ್ಲಾಳ, ಬಿಳಗಿ ಅರಸರು, ಸೋಂದಾ ಅರಸರು, ಗೇರುಸೊಪ್ಪೆಯ ಮಾಂಡಲಿಕ ರಾಣಿ, ಅರಸರುಗಳು ರಾಜಾಶ್ರಯ ನೀಡಿದ ದಾಖಲೆಯಿದೆ.[೧೮]

ಈ ಕಾಲದಲ್ಲಿ ಪ್ರಸಂಗ ರಚನೆಗೆ ದೊರೆತ ಪ್ರೋತ್ಸಾಹದಿಂದ ಸಾಕಷ್ಟು ಕೃತಿಗಳು ರಚಿತಗೊಂಡಿರಬೇಕು. ರಾಜರ ಆಸ್ಥಾನದಲ್ಲಿ ಕಲಾಪ್ರದರ್ಶನದಿಂದ ದಶಾವತಾರ ಮೇಳ ಪ್ರಸಿದ್ಧರಾದುದಕ್ಕೆ ಕರ್ಕಿ ಮೇಳದ ಚರಿತ್ರೆಯೂ ಸಾಕ್ಷಿ ಒದಗಿಸುತ್ತದೆ. ಇಂತಹ ಕಲಾಸೇವೆಗಾಗಿಯೆ ಬ್ರಾಹ್ಮಣರಿಗೆ ಉಂಬಳಿಯಾಗಿ ಭೂಮಿಯನ್ನ ಕೊಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಇದರಿಂದ ಉತ್ತರಕನ್ನಡ, ದಕ್ಷಿಣಕನ್ನಡ, ಶಿವಮೊಗ್ಗ ಜಿಲ್ಲೆಯ ಈಗಿನ ಭೂಪ್ರದೇಶಗಳನ್ನು ಆಳ್ವಿಕೆ ನಡೆಸಿದ ಅಂದಿನ ಸಾಮಂತ ಅರಸರು, ನಾಯಕರು ಯಕ್ಷಗಾನ ದಶಾವತಾರಕ್ಕೆ ಪ್ರೋತ್ಸಾಹಿಸಿದರು ಎಂಬುದನ್ನು ಆಗ ಪುರಾಣ ಜ್ಞಾನವನ್ನು ಹೊಂದಿದ ಇಲ್ಲಿನ ಬ್ರಾಹ್ಮಣರು ವಿಶೇಷವಾಗಿ ಹವ್ಯಕರು ಬಾಯಿಯಿಂದ ಬಾಯಿಗೆ ಕಂಠಸ್ಥವಾದ ಪ್ರಸಂಗದ ಹಾಡುಗಳನ್ನು ಲಿಪಿಕಾರರಾಗಿ ಹಸ್ತಪ್ರತಿಗಳಲ್ಲಿ ಬರೆದಿಟ್ಟಿರಬಹುದೆಂಬುದನ್ನು ಊಹಿಸಲು ಸಾಧ್ಯವಿದೆ.

ಶಿಕ್ಷಣ ವ್ಯವಸ್ಥೆಯಲ್ಲಿಯೂ ಅಂದು ಐಗಳ ಮಠದಲ್ಲಿ ಯಕ್ಷಗಾನ ಪ್ರಸಂಗಗಳು ಪಠ್ಯಗಳಾಗಿದ್ದವು. ಪ್ರಸಂಗ ಪದ್ಯಗಳನ್ನು ಕಂಠಪಾಟ ಮಾಡುವ ಪದ್ಧತಿಯು ಇತ್ತು.[೧೯] ಭಾಗವತರಿಗೆ ಪ್ರಸಂಗ ಪದ್ಯಗಳು ಕಂಠಸ್ತವಾಗಿಯೆ ಇರುತ್ತಿದ್ದವು. ಕಡತೋಕ ಶಂಭು ಭಾಗವತರು "ಆಶುಕವಿತ್ವ"ದಿಂದ ರಂಗದಲ್ಲಿಯ ಪ್ರಸಂಗ ಪದ್ಯಗಳನ್ನು ಕಟ್ಟಿ ಹಾಡುತ್ತಿದ್ದರು. ಯಕ್ಷಗಾನ ಪ್ರಸಂಗ ಪದ್ಯಗಳು ಹೀಗೆ ಮೌಖಿಕ ಪರಂಪರೆಯ ರಚನೆಗಳಾಗಿದ್ದರಿಂದ ಸರಳ ಕನ್ನಡ, ಗೇಯ ಕಥನ ಶೈಲಿಯ ಆಡು ಮಾತಿನ ಲಯಗಾರಿಕೆ, ಕುಣಿತಾಭಿನಯಕ್ಕೆ ಪೂರಕವಾದ ತಾಳಬದ್ಧತೆಗೆ ಒಳಪಟ್ಟಿರಬೇಕು. ಇಂತಹ ಪ್ರಸಂಗಗಳ ಪ್ರತಿಕಾರರಿದ್ದರು ಎಂಬುದಕ್ಕೆ ಉತ್ತರ ಕನ್ನಡದ ಸಭಾಹಿತ ಮನೆತನದ ಇತಿಹಾಸವು ಸಾಕ್ಷಿಯಾಗಿದೆ. ಸಭಾಹಿತರು ಪ್ರತಿಕಾರರಾಗಿದ್ದರಿಂದ "ಸಭಾಹಿತ ಪ್ರತಿ" ಎಂದು ಪ್ರಸಂಗ ಪಠ್ಯಗಳಿಗೆ ಅನ್ವರ್ಥಕವಾಗಿ ಹೆಸರಿತ್ತು. ಸಭಾಹಿತ ಪ್ರತಿಯೆ 'ಮೂಲ ಪ್ರತಿ' ಎಂಬ ಗೌರವಕ್ಕೂ ಪಾತ್ರವಾಗಿತ್ತು. ಸಭಾಹಿತರು ರಾಗ, ತಾಳ,

೧೭. ಹೊಸ್ತೋಟ ಮಂಜುನಾಥ ಭಾಗವತ – ಯಕ್ಷಗಾನ ಹಸ್ತ ಪ್ರತಿಗಳು – ಪುಟ ೧೧೯.

೧೮. ಅದೇ ಪುಟ

೧೯. ಡಾ. ಜಿ.ಎಸ್. ಭಟ್ ಯಕ್ಷಗಾನ ಪರಿಶೀಲನಾ – ತಾಳಮದ್ದಲೆ – ಪು. ೯೪.

ಜ್ಞಾನದಿಂದ ಧಾಟಿಯನ್ನು ನಿಖರಗೊಳಿಸುತ್ತಿದ್ದರಿಂದ "ಸಭಾಹಿತ ಮಟ್ಟು" ಎಂದು ಕರೆಯಲಾಗುತ್ತಿತ್ತು.[೨೦] ಈ ದೃಷ್ಟಿಯಿಂದ ಯಕ್ಷಗಾನ ಪ್ರಸಂಗ ರಚನೆಯಲ್ಲಿ ಹವ್ಯಕರು ವಿಶೇಷವಾಗಿ ತೊಡಗಿಕೊಂಡಿದ್ದರು ಎಂಬುದು ಮನದಟ್ಟಾಗುತ್ತದೆ.

ಹವ್ಯಕರಲ್ಲಿ ಈವರೆಗಿನ ಲಭ್ಯ ದಾಖಲೆಗಳಿಂದ ೧೭೭ ಕವಿಗಳು ರಚಿಸಿದ ೧೨೧೬ ಪ್ರಸಂಗಗಳನ್ನು ದಾಖಲಿಸಲಾಗಿದೆ. ಇದರಲ್ಲಿ ೪೧೦ ಕೃತಿಗಳು ಮಾತ್ರ ಮುದ್ರಣ ಭಾಗ್ಯವನ್ನು ಕಂಡಿದೆ. ಉಳಿದ ೮೦೬ ಪ್ರಸಂಗಗಳು ಹಸ್ತಪ್ರತಿಯ ರೂಪದಲ್ಲಿವೆ. ಇದರಲ್ಲಿ ಕೀರ್ತಿ ಶೇಷರ ३೬೬ ಪ್ರಸಂಗಗಳು ಮತ್ತು ವರ್ತಮಾನದ ೪೪೦ ಕೃತಿಗಳು ಸೇರಿವೆ. ಒಟ್ಟು ಲಭ್ಯ ಪ್ರಸಂಗಗಳಲ್ಲಿ ಹವ್ಯಕರಿಂದ ರಚಿಸಲ್ಪಟ್ಟ ಪ್ರಸಂಗಗಳೇ ಹೆಚ್ಚು. ಇದರಿಂದ "ಬ್ರಾಹ್ಮಣರಲ್ಲಿ ಯಕ್ಷಗಾನಕ್ಕಿಳಿದವರಲ್ಲಿ ಹವ್ಯಕರೆ ಮೊದಲಿಗರೆಂಬುವುದರಲ್ಲಿ ಯಾವ ಸಂಶಯವಿಲ್ಲ" ಎಂಬ ಅಭಿಪ್ರಾಯಕ್ಕೆ ಪುಷ್ಟಿ ದೊರಕುತ್ತದೆ.[೨೧]

ಡಾ. ಕೆ. ಶಿವರಾಮಕಾರಂತರು ಯಕ್ಷಗಾನ ಪ್ರಸಂಗಗಳಲ್ಲಿ ವಿರಾಟಪರ್ವವೆ ಮೊದಲ ಪ್ರಸಂಗವೆಂದು ಇದರ ಕಾಲ ಕ್ರಿ.ಶ. ೧೫೦೦ ಕೃತಿಕಾರ ಅಜಪುರದ ವಿಷ್ಣು ಎಂಬುದನ್ನು ನಿರ್ಣಯಿಸಿದ್ದರು. ಕವಿಯ ಕೃತಿಯಲ್ಲಿ ತಾನು ಬ್ರಾಹ್ಮಣನೆಂದು ಅಜಪುರದ ಈಶ್ವರನನ್ನು ಸ್ತುತಿಸಿದ್ದಾರೆ. ದಕ್ಷಿಣ ಕನ್ನಡದ ಅಜಪುರದ ಸಮೀಪವಿರುವ ವಾರಂಬಳ್ಳಿಯ ಬ್ರಾಹ್ಮಣ ಮನೆತನವಿದ್ದ ಕಾರಣ ಇವನನ್ನು ವಾರಂಬಳ್ಳಿ ವಿಷ್ಣು ಎಂತಲೆ ಗುರುತಿಸಲಾಗಿತ್ತು. ಆದರೆ ಅಜಪುರ ಎಂಬುದು ಕುಮಟಾ ತಾಲ್ಲೂಕಿನ ಬ್ರಹ್ಮೂರು ಆಗಿರಬಹುದೆ? ಎಂಬ ಪ್ರಶ್ನೆಯಿದೆ. ಬ್ರಾಹ್ಮೂರಿನಲ್ಲಿ ಕದಂಬರಿಂದ ಪ್ರತಿಷ್ಠಾಪಿಸಲ್ಪಟ್ಟ ಹಿರೇಶ್ವರ ದೇವಾಲಯವಿದೆ. ಆದರೆ ಇದು ಖಚಿತವಾದ ಆಧಾರಗಳಿಂದ ಸಮರ್ಥಿಸಲ್ಪಟ್ಟಿಲ್ಲ. ಕೃತಿ ಪರಿಶೋಧನೆಯಿಂದ ಉತ್ತರಕನ್ನಡದ ಬ್ರಹ್ಮೂರು ವಿಷ್ಣುವಿನ ಜನ್ಮಸ್ಥಳ ಎಂಬುದನ್ನು ವಿದ್ವಾಂಸರು ಒಪ್ಪಿರುತ್ತಾರೆ. ಇದೆ ಕವಿಯು ಬಾಣಾಸುರ ಕಾಳಗ ಇಂದ್ರಕೀಲ ಮುಂತಾದ ಪ್ರಸಂಗ ರಚಿಸಿದ್ದಾನೆ. ವಿರಾಟಪರ್ವ ಎಲ್ಲಕ್ಕಿಂತಲೂ ಹೆಚ್ಚು ಪ್ರಸಿದ್ಧ ರಂಗಕೃತಿಯಾಗಿದೆ.

ಆದಿಪರ್ವ : ಸಿದ್ದಾಪುರ ತಾಲ್ಲೂಕಿನ ಹೇರೂರಿನ ಕಂಚಿ ಮನೆಯಲ್ಲಿ ದೊರೆತ ಆದಿಪರ್ವ ಪ್ರಸಂಗದ ತಾಳೆಗರಿ ಅತ್ಯಂತ ಪ್ರಾಚೀನವಾಗಿದ್ದು ಹೊಸ್ತೋಟ ಮಂಜುನಾಥ ಭಾಗವತರು ಅಭಿಪ್ರಾಯಪಡುತ್ತಾರೆ. ಈ ಕೃತಿಯನ್ನು ಪ್ರೊ. ಎಂ.ಎ. ಹೆಗಡೆ ಸಿದ್ದಾಪುರ ಇವರು ಸಂಪಾದಿಸಿರುತ್ತಾರೆ. ಈ ಪ್ರಸಂಗ ೧೯೮೩ರಲ್ಲಿ ಪ್ರಕಟಗೊಂಡಿದೆ. ಇದು ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲ್ಲೂಕಿನ ಹೇರೂರು ಕಂಚಿಮನೆ ಗಣೇಶ ಹೆಗಡೆಯವರ ಮನೆಯಲ್ಲಿದ್ದ ಏಕಮಾತ್ರ ತಾಳೆಗರಿಯ ಪ್ರತಿಯಾಗಿದೆ.

ಡಾ. ಎಂ. ಪ್ರಭಾಕರ ಜೋಶಿಯವರ ಪ್ರಸಂಗದ ಮೇಲೆ ಕುಮಾರ ವ್ಯಾಸನ ಪ್ರಭಾವವನ್ನು ಗುರುತಿಸಿ ಇದು ಅಷ್ಟು ಪ್ರಾಚೀನವಾದುದಲ್ಲ ಎಂದು ಅಭಿಪ್ರಾಯಪಟ್ಟಿರುತ್ತಾರೆ.[೨೨]

---

೨೦. ಕಡತೋಕ ಮಂಜುನಾಥ ಭಾಗವತ್ – ಯಕ್ಷಗಾನ ವನವಿಹಾರ – ಪ. ೨೮

೨೧. ನಾರಾಯಣ ಶಾನಭಾಗ್ – ಯಕ್ಷಗಾನ ಕವಿಕಾವ್ಯ ಸೂಚಿ – ಪು. 1

ಆದರೆ ಇದರ ವೈಶಿಷ್ಟ್ಯತೆಯಿಂದ ಇದರ ಕಾಲವನ್ನು ಊಹಿಸಿದ ಸಂಶೋಧಕರು ದಾಸಸಾಹಿತ್ಯದ ಯಾವುದೇ ಪ್ರಭಾವ ಇದರ ಮೇಲೆ ಇಲ್ಲ. ಪಲ್ಲವಿ-ಅನುಪಲ್ಲವಿಗಳ ವಿರಳಬಳಕೆ ಇಡಿ ಪ್ರಸಂಗದಲ್ಲಿ ವಚನ ಮತ್ತು ದ್ವಿಪದಿಗಳ ಅಧಿಕ್ಯವನ್ನು ಗಮನಿಸಬಹುದು. ಷಟ್ಪದಿ ಸಾಂಗತ್ಯಗಳ ಅಭಾವ ಇನ್ನೊಂದು ಲಕ್ಷಣವಾಗಿದೆ. ಸಾಂಗತ್ಯವೆಂಬ ತಲೆಪಟಟಿ ಇಲ್ಲದ ಸಾಂಗತ್ಯ ಛಂದಸ್ಸಿಗೆ ಒಪ್ಪು ಅನೇಕ ಪದ್ಯ ಬಂಧಗಳಿವೆ. ಪಂಚಕವೆಂಬ ವಿಶಿಷ್ಟ ಛಂದಸ್ಸು ಕಂಡುಬರುತ್ತದೆ. ರಾಗಗಳ ದೃಷ್ಟಿಯಿಂದಲೂ ಪ್ರಾಚೀನತೆ ವೇದ್ಯವಾಗುತ್ತದೆ. ಶಂಕರಾಭರಣ, ಭೈರವಿ, ಮಧುಮಾಧವಿ, ಕೇದಾರಗೌಳ, ಪಂತುರಾವಳಿ, ಅಹಿರಿ, ಪಾಡಿ ಮುಂತಾದ ಸುಮಾರು ಇಪ್ಪತ್ತು ಹಳೆಯ ರಾಗಗಳನ್ನು ಇಲ್ಲಿ ಕಾಣಬಹುದಾಗಿದೆ. ಪಂಚಕ ಎಂಬ ವಿಶಿಷ್ಟ ಛಂದಸ್ಸಿನ ಲಕ್ಷಣ ಕಂಡುಬಂದರೂ ಪದ್ಯ ಬಂದಗಳ ನೇಯ್ಗೆಯಲ್ಲಿ ಜಾನಪದ ಮಟ್ಟುಗಳ ಪ್ರೇರಣೆಯಿದೆ.[೨೩]

ಈ ಎಲ್ಲ ಅಂಶಗಳನ್ನು ಪರಿಗಣಿಸಿ ಆದಿ ಪರ್ವವನ್ನು ಅತ್ಯಂತ ಪ್ರಾಚೀನ ಪ್ರಸಂಗ ಕೃತಿಯೆಂದು ಸಂಶೋಧಕರು ಉಲ್ಲೇಖಿಸಿದ್ದಾರೆ. ಇದನ್ನು ರಚಿಸಿದ ಕವಿ ಕೂಡ ಹವ್ಯಕನೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಪ್ರಸಂಗಕರ್ತರೂ ಸಂಶೋಧಕರು ಆದ ಅತ್ತೀಮುರುಡು ವಿಶ್ವೇಶ್ವರ ಹೆಗಡೆಯವರು ಪ್ರಸಂಗದ ಪರಿಶೀಲನೆ ಮಾಡಿ ಕವಿಯ ಉತ್ತರಕನ್ನಡದ ವಡ್ಡಿ-ಸುಣ ಜೋಗನಕೇರಿ ಪ್ರದೇಶದವರು ಎನ್ನಲು ಅಭ್ಯಂತರವಿಲ್ಲ ಎಂದಿದ್ದಾರೆ. ಕೃತಿಯ ಹೆಚ್ಚಿನ ಪ್ರತಿಗಳು ಲಭ್ಯವಾದಾಗ ಇನ್ನಷ್ಟು ಮಾಹಿತಿಗಳು ದೊರಕುವ ನಿರೀಕ್ಷೆಯಿರುವುದರಿಂದ, ಚರಿತ್ರಾಕಾರರು ನೀಡಿದ ಮಾಹಿತಿಯ ಪ್ರಕಾರ ಹವ್ಯಕ ಕೃತಿಕಾರರೆಂದೆ ಪರಿಗಣಿಸಲಾಗಿದೆ.

ಹವ್ಯಕ ಪ್ರಸಂಗ ಕೃತಿಕಾರರ ಕಾಲವನ್ನು ರಚನೆಯಾದ ಸಂದರ್ಭದ ಆಧಾರದ ಮೇಲೆ ಆರಂಭದ ಕಾಲ ೧೩ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಮತ್ತು ನಂತರದ ಕಾಲವನ್ನು ೧೮ನೇ ಶತಮಾನದಿಂದ ಇಲ್ಲಿಯವರೆಗಿನ ಪ್ರಸಂಗ ಕೃತಿಗಳನ್ನು ಎರಡು ಕಾಲಘಟ್ಟವಾಗಿ ವಿಭಾಗಿಸಿ ಕೃತಿಕಾರರು ಮತ್ತು ಕೃತಿಗಳನ್ನು ಹವ್ಯಕ ಯಕ್ಷಗಾನ ಕವಿಕಾವ್ಯ ಸೂಚಿಯಲ್ಲಿ ವಿಭಾಗಿಸಲಾಗಿದೆ.

ಹವ್ಯಕರು ವಿವಿಧ ಕಾರಣಗಳಿಂದ ಘಟ್ಟದ ಕೆಳಗಿನ ಭಾಗದಿಂದ ಘಟ್ಟದ ಮೇಲಿನ ಪ್ರದೇಶಗಳಿಗೆ ವಲಸೆ ಹೋಗಿದ್ದನ್ನು ಹಿಂದಿನ ಕಲಾವಿದರ ಚರಿತ್ರೆಯಲ್ಲಿ ಕಾಣಬಹುದು. ಅನ್ಯ ಉದ್ದೇಶಗಳಿಗೆ ಹೀಗೆ ವಲಸೆ ಹೋಗಿದ್ದರೂ ಹೋದ ಭಾಗದಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆಯನ್ನು ಪ್ರತಿಭಾ ಪ್ರದರ್ಶನದ ಉದ್ದೇಶದಿಂದ, ಶೈಕ್ಷಣಿಕ ಉದ್ದೇಶದಿಂದ ಆರ್ಥಿಕ ಹಿನ್ನೆಲೆಯ ಕಾರಣದಿಂದ, ಧಾರ್ಮಿಕ ಕಾರಣದಿಂದ. ಯಕ್ಷಗಾನ ಗಾಯನ, ಅರ್ಥಗಾರಿಕೆ, ಬಯಲಾಟವನ್ನು ಉಪಾಸಿಸಿದ್ದಾರೆ. ಕಾಲಕ್ರಮೇಣ ಅಲ್ಲಿಯೆ ವಾಸ್ತವ್ಯ ಹೂಡಿದವರು ಆ ಪ್ರದೇಶದವರೆ ಆಗಿದ್ದಾರೆ. ಇದರಿಂದ ಪಡುವಣ ಕರಾವಳಿ ಉತ್ತರ ಕನ್ನಡದ ಭಾಗಗಳಿಂದ, ಕೇರಳದ ಕಡೆ, ಘಟ್ಟದ ಮೇಲಿನ ಪ್ರದೇಶಗಳಕಡೆ ವಲಸೆ ಹೋಗಿದ್ದು ಕೂಡ ಕಲೆಯ ಪ್ರಸಾರಕ್ಕೆ, ಪ್ರಸಂಗಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಒಯ್ಯುವುದಕ್ಕೆ ಕಾರಣವಾಯಿತು.

---

೨೨. ಡಾ. ಎಂ. ಪ್ರಭಾಕರ ಜೋಶಿ – ಯಕ್ಷಗಾನ ಆದಿಪರ್ವ – ಕವಿಕಾವ್ಯ ಸೂಚಿ – ಪು. ೧೧೩.

೨೩. ಕಬ್ಬಿನಾಲೆ ವಸಂತ ಭಾರಧ್ವಾಜ – ಪ್ರಾಚೀನಕಾವ್ಯ ಆದಿಪರ್ವ – ಕವಿಕಾವ್ಯ ಸೂಚಿ – ಪು. ೧೧೧.

ನವರಾತ್ರಿಪೂಜೆ, ಶ್ರಾವಣ ಮಾಸದ ಪೂಜೆಗಳಲ್ಲಿ ಜಾಗರವಾಗಿ ಕಲೆಯನ್ನು ಪ್ರಕಾಶಿಸಿದ್ದಿದೆ. ಇಂದಿಗೂ ನವರಾತ್ರಿಯಲ್ಲಿ ಶಾರದಾ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ತಾಳೆಗರಿಗಳ ಕಟ್ಟನ್ನು ಸ್ಥಾಪಿಸಿ ಪೂಜಿಸುವ ಪದ್ಧತಿ ಹವ್ಯಕರ ಮನೆಗಳಲ್ಲಿದೆ. ಸಭಾಹಿತ ಪ್ರತಿಗಳು ಘಟ್ಟದ ಮೇಲಿನ ಪ್ರದೇಶಗಳಲ್ಲೂ ಲಭ್ಯವಿದೆ.

ಬೇರೆ ಬೇರೆ ಪ್ರದೇಶಗಳಲ್ಲಿ ಪ್ರತಿಗಳು ಲಭ್ಯವಾಗಲು ಮೇಲಿನ ಎಲ್ಲಾ ಕಾರಣಗಳನ್ನು ವಿವೇಚಿಸಬಹುದು. ಆದರೆ ಹದಿನಾರು ಹದಿನೇಳನೆ ಶತಮಾನದಲ್ಲಿ ಇಂತಹ ಕೃತಿಗಳು ಸಾಕಷ್ಟು ರಚನೆಗೊಂಡಿರಬಹುದಾದ ಸಾಧ್ಯತೆಗಳಿದ್ದರೂ ಎಲ್ಲವೂ ಲಭ್ಯವಿಲ್ಲ. ಪ್ರಮುಖವಾಗಿ ಅಜಪುರದ ವಿಷ್ಣು ಬರೆದ ಇಂದ್ರಕೀಲಕ, ಬಾಣಾಸುರಕಾಳಗ, ವಿರಾಟಪರ್ವ, ಶ್ರೀಕೃಷ್ಣ ಬಾಲಲೀಲೆ ಪ್ರಸಂಗಗಳು ಮಾತ್ರ ಲಭ್ಯವಾಗಿದೆ.

ನಗರೆಯ ಸುಬ್ರಹ್ಮಣ್ಯ ಗೇರುಸೊಪ್ಪದ ಸಮೀಪದ ನಗರೆ ಊರಿನವನಾಗಿದ್ದನು. ನಗರೆಯ ವೆಂಕಟರಮಣ ದೇವರನ್ನು ಸ್ತುತಿಸುವ ಇವರು ರಾವಣೋದ್ಭವ, ಶಂಭರಾಸುರ ಕಾಳಗವನ್ನು ಬರೆದಿದ್ದಾರೆ.

ಹದಿನೇಳನೆ ಶತಮಾನದಲ್ಲಿ ತಿರುಮಲ ಕವಿ, ಪರಮೇಶ್ವರ ಭಟ್ಟ, ವಿಮಲಾನಂದ, ಎಬರಡ್ಕ ತಿಮ್ಮಪ್ಪಯ್ಯ, ಶಿವಪುರರಾಮ, ಹಳೆಮಕ್ಕಿ ರಾಮ ಪ್ರಮುಖ ಪ್ರಸಂಗಕರ್ತರಾಗಿದ್ದಾರೆ.

ತಿರುಮಲಕವಿ : ಕುಮಟಾ ತಾಲ್ಲೂಕಿನ ಉಪ್ಪಿನ ಪಟ್ಟಣದ ತಿರುಮಲ ಕವಿ ಕಾತವೀರ್ಯಾರ್ಜುನ ವಧೆ ಕೃತಿಯನ್ನು ರಚಿಸಿದ್ದು ಈ ಭಾಗದಲ್ಲಿ ಪ್ರಮುಖ ಆಖ್ಯಾನವಾಗಿ ಪ್ರಸಂಗವನ್ನು ಆಡುತ್ತಿದ್ದಾರೆ.

ಪರಮೇಶ್ವರ ಭಟ್ಟ ಇವರು ಬಕುಳಾದೇವಿಯನ್ನು ಸ್ತುತಿಸಿದ್ದಾನೆ. ಡಾ. ಕಾರಂತರು ಇವನು ಹರಿಹರಪುರದವನೆಂದು ಆಗುಂಬೆ ಇಪ್ಪತ್ತು ಮೈಲುದೂರದಲ್ಲಿ ಈ ಸ್ಥಳವಿದೆ ಎಂದು ತಿಳಿಸಿದ್ದಾರೆ. ಆದರೆ ಕುಮಟಾ ತಾಲ್ಲೂಕಿನಲ್ಲಿ ಹರೀತಕಿಪುರ ಅಥವಾ ಹರೀಟಿ ಎಂಬ ಸ್ಥಳವಿದೆ. ಇದೇ ಇವನ ಊರು ಎಂದು ಸಾಹಿತಿ ಜಿ.ಎಸ್. ಅವಧಾನಿಯವರು ದೃಢಪಡಿಸಿರುತ್ತಾರೆ. ಭಟ್ಟ ಎಂಬ ಅಡ್ಡ ಹೆಸರು ಸಾಮಾನ್ಯವಾಗಿ ಈ ಪ್ರದೇಶಗಳಲ್ಲಿಯೇ ಬಳಸುವುದರಿಂದ ಇವನು ಆಗುಂಬೆಯವನೆನ್ನುವುದಕ್ಕಿಂತ ಕುಮಟಾ ತಾಲೂಕಿನವನು ಎಂಬುದು ಸರಿಯಾದುದಾಗಿದೆ.[೨೪] ಅಭಿಮನ್ಯುಕಾಳಗ, ಕರ್ಣಪರ್ವ, ಕಾಲನೇಮಿ ಕಾಳಗ, ಪ್ರಭಾವತಿ ಕಲ್ಯಾಣವನ್ನು ರಚಿಸಿರುತ್ತಾರೆ.

ವಿಮಲಾನಂದ ಉತ್ತರ ಕನ್ನಡದ ಹೊನ್ನಾವರ ತಾಲ್ಲೂಕಿನ ಬೈಲೂರಿನವರು. ಕೃಷ್ಣಾರ್ಜುನ ಕಾಳಗ ಪ್ರಸಂಗ ರಚಿಸಿದ್ದರು ಇವರ ಕಾಲ ೧೬೮೫ ಎಂದು ತೀರ್ಮಾನಿಸಲಾಗಿದೆ.

ಉಬರಡ್ಕ ತಿಮ್ಮಪ್ಪಯ್ಯ ೧೮ನೇ ಶತಮಾನದಲ್ಲಿ ಜೀವಿಸಿದ್ದರು. ಶಿವಮೊಗ್ಗ ಜಿಲ್ಲೆಯಿಂದ ವಲಸೆ ಬಂದ ಇವರು ಕುಟುಂಬ ಉಬರಡ್ಕದಲ್ಲಿ ವಾಸವಾಗಿದೆ. ಇವರು ಬರೆದ ಇಂದ್ರವಿಜಯ

೨೪. ಜಿ.ಎಸ್. ಅವಧಾನಿ – ಹವ್ಯಕ ಕಲಾವಿದರು – ವೈಜಯಂತಿ – ಪು. ೨೧

ಪ್ರಸಂಗವು ನಷ್ಟವಾಗಿದೆ. ಡಾ. ಶಿವರಾಮಕಾರಂತರು ಈ ಕೃತಿಯ ಕುರಿತು ಉಲ್ಲೇಖಿಸಿರುತ್ತಾರೆ.

ಶಿವಪುರರಾಮ ಇವರು ಚಂದ್ರಮೌಳಿಯ ಮಗನೆಂದು ಹೇಳಿಕೊಂಡಿದ್ದಾರೆ. ಇವರ ಸ್ಥಳ ಉತ್ತರ ಕನ್ನಡ ಕಾರವಾರ ತಾಲ್ಲೂಕಿನ ಕದ್ರಾ ಬಳಿಯ ಶಿವಪುರ. ಇದು ಕಾಳಿ ನದಿಯ ದಡದಲ್ಲಿದೆ. ತಾಮ್ರಧ್ವಜ ಕಾಳಗ ಮತ್ತು ಮೂಲಕಾಸುರ ಕಾಳಗವೆಂಬ ಪ್ರಸಂಗವನ್ನು ರಚಿಸಿದ್ದರು.

ಹಳೆಮಕ್ಕಿ ರಾಮ ಇವರು ಶರಾವತಿ ನದಿಯ ತೀರದ ಭೀಮೇಶನ ಭಕ್ತನೆಂದು ಹೇಳಿಕೊಂಡಿದ್ದಾರೆ. ಇವರು ಕೃಷ್ಣಾರ್ಜುನ ಕಾಳಗ (ಕ್ರಿ.ಶ. ೧೬೯೭) ಮದಲಸಾ ಸ್ವಯಂವರ ಎಂಬ ಕೃತಿಗಳನ್ನು ರಚಿಸಿದ್ದರು.

ಹದಿನೆಂಟನೆಯ ಶತಮಾನದಲ್ಲಿ ಅಡುವಳ್ಳಿಯ ಸುಬ್ಬ, ಅಡುವಳ್ಳಿ ವೆಂಕಟ, ವಿಷ್ಣುಸಭಾಹಿತ ಅಗ್ರಹಾರ ತ್ಯಾರಗಲ್ ರಾಮಭಾಗವತರು ರಚಿಸಿದ ಕೃತಿಗಳು ಲಭ್ಯವಾಗಿದೆ. ಪಾರಿಜಾತ ಪ್ರಸಂಗ ಮತ್ತು ರುಕ್ಮಿಣಿ ಸ್ವಯಂವರವನ್ನು ಅಡುವಳ್ಳಿ ಸುಬ್ಬನೂ ಮೈರಾವಣ ಕಾಳಗವನ್ನು ಸುಬ್ಬನ ಮಗ ವೆಂಕಟನು ರಚಿಸಿದ್ದರು. ಈ ಶತಮಾನ ಪ್ರಮುಖ ಕವಿ ವಿಷ್ಣು ಸಭಾಹಿತರು ಏಕಾದಶಿ ಪ್ರಸಂಗ, ಚಂದ್ರಹಾಸ ಬಬ್ರುವಾಹನ ಕಾಳಗ, ಶತಾಸ್ಯರಾವಣ ಕಾಳಗ ಕೃತಿಗಳನ್ನು ರಚಿಸಿದ್ದಾರೆ. ಸಿದ್ದಾಪುರದ ತ್ಯಾರಗಲ್ ಭಾಗವತರು ಜಲಂಧರ ಕಾಳಗ, ಲಕ್ಷಣಾವತಿ ಕಲ್ಯಾಣವನ್ನು ರಚಿಸಿದ್ದರು.

ಹದಿನೆಂಟನೆಯ ಶತಮಾನ ಮತ್ತು ನಂತರ ವರ್ತಮಾನದವರೆಗೆ ಹವ್ಯಕ ಕೃತಿಕಾರರು ರಚಿಸಿದ ಕೃತಿಗಳು ಲಭ್ಯವಿದೆ. ಹಾಗೂ ವಿಫುಲ ಸಂಖ್ಯೆಯಲ್ಲಿ ರಚಿತವಾಗಿದೆ. ಈ ಕಾಲಘಟ್ಟದಲ್ಲಿ ೧೬೨ ಕೃತಿಕಾರರು ಒಂದು ಸಾವಿರಕ್ಕೂ ಹೆಚ್ಚು ಪ್ರಸಂಗಗಳನ್ನು ರಚಿಸಿದ್ದಾರೆ. ಈ ಕೃತಿಗಳಲ್ಲಿ ಲಭ್ಯವಿದ್ದ ಕೆಲವೆ ಕೃತಿಗಳು ಮುದ್ರಣಗೊಂಡಿದೆ. ಈ ಪ್ರಸಂಗ ಕರ್ತರಲ್ಲಿ ಅಂಬೆಮಾಲೆ ಗೋವಿಂದಭಟ್ಟ, ಮಳ್ಳೇರಿಯಾ (ಕಾಸರಗೋಡು) ಇವರು ಇಪ್ಪತ್ತೆಂಟು ಪ್ರಸಂಗಗಳನ್ನು ಕಲ್ಲೆಗುಂಡಿ ತಿಮ್ಮಣ್ಣಭಟ್ಟ ಕೋಳೂರು ಹದಿನಾಲ್ಕು ಕೃತಿಗಳನ್ನು, ಕೀರಿಕ್ಕಾಡು ಮಾಸ್ತರ ವಿಷ್ಣುಭಟ್ಟ ಕಾಸರಗೋಡು ೯೭ ಕೃತಿಗಳನ್ನು ರಚಿಸಿದ್ದಾರೆ. ಕೃಷ್ಣಪ್ರಕಾಶ ಬೆಳ್ಳಬಟ್ಟು ಹದಿಮೂರು ಪ್ರಸಂಗಗಳನ್ನು, ಕೇವಿ ಗೋವಿಂದ ಭಟ್ಟರು ಇಪ್ಪತ್ತೊಂದು ಪ್ರಸಂಗಗಳನ್ನು ರಚಿಸಿದ್ದಾರೆ. ಗುಂಡೂ ಸೀತಾರಾಮರಾವ್ ಸಾಗರ ಇವರು ನಲವತ್ತೊಂದು ಪ್ರಸಂಗಗಳನ್ನು ರಚಿಸಿದ್ದಾರೆ. ತಲೆಂಗಳ ರಾಮಕೃಷ್ಣ ಭಟ್ಟರು ಹದಿನೈದು ಪ್ರಸಂಗಗಳನ್ನು, ಎಂ.ಜಿ. ಬರವಣಿ ಗೋಕರ್ಣ ಐವತ್ತೆಂಟು ಪ್ರಸಂಗ ಕೃತಿಗಳನ್ನು ಹಟ್ಟಿಯಂಗಡಿ ರಾಮ ಭಟ್ಟರು ಹದಿನೇಳು ಪ್ರಸಂಗಗಳನ್ನು ರಚಿಸಿದ್ದಾರೆ. ಅತಿ ಹೆಚ್ಚು ಪ್ರಸಂಗವನ್ನು ರಚಿಸಿದವರು ಹೊಸ್ತೋಟ ಮಂಜುನಾಥಭಾಗವತರು ಇವರು ರಚಿಸಿದ ೧೬೧ ಪ್ರಸಂಗಗಳು ಲಭ್ಯವಿದೆ. ಇಪ್ಪತ್ತೂರು ಪ್ರಸಂಗಗಳನ್ನು ಸೂಕ್ತ ಬದಲಾವಣೆಯೊಂದಿಗೆ ಅರ್ಥ ಬರೆದಿರುತ್ತಾರೆ. ಯಕ್ಷಗಾನ ಪ್ರಸಂಗ ರಚನೆಯ ಚರಿತ್ರೆಯಲ್ಲಿಯೆ ಅತಿ ಹೆಚ್ಚು ಪ್ರಸಂಗ ಕೃತಿ ರಚಿಸಿದ ಹೆಗ್ಗಳಿಕೆ ಅವರದಾಗಿದೆ.

ಯಕ್ಷಗಾನ ಪ್ರಸಂಗ ಕೃತಿಗಳ ಮತ್ತು ಕೃತಿಕಾರರ ಜೀವನ ಕೃತಿಗಳ ವಿಮರ್ಶೆ ಮಾಡುವುದು ಈ ಅಧ್ಯಯನದಲ್ಲಿ ಅಸಾಧ್ಯವಾದುದಾಗಿದೆ. ಸಂಖ್ಯೆ ಹಾಗೂ ಸತ್ವದ ದೃಷ್ಟಿಯಿಂದಲೂ ಕೃತಿಗಳ

ಕುರಿತು ವಿಶ್ಲೇಷಿಸುವುದು ಪ್ರತ್ಯೇಕ ಅಧ್ಯಯನಕ್ಕೆ ವಸ್ತುವಾಗಿರುತ್ತದೆ. ಇಷ್ಟೊಂದು ಸಂಖ್ಯೆಯಲ್ಲಿ ಹೆಸರಿಸಿದ ಪ್ರಸಂಗಗಳಲ್ಲದೆ ಕಡಿಮೆ ಸಂಖ್ಯೆಯಲ್ಲಿ ಪ್ರಸಂಗ ರಚಿಸಿದ ಕವಿಗಳೂ ಅನೇಕರಿದ್ದಾರೆ. ಎಲ್ಲ ಪ್ರಸಂಗ ಕೃತಿಗಳು ಮತ್ತು ಕೃತಿಕಾರರ ಹೆಸರನ್ನು (ಅನುಬಂಧ ನೋ.) ದಾಖಲಿಸಲಾಗಿದೆ.

೪.೩. ರಂಗ ಪ್ರಯೋಗದ ಯಶಸ್ವೀ ಪ್ರಸಂಗಗಳು

ಯಕ್ಷಗಾನ ಪ್ರಸಂಗಗಳಲ್ಲಿ ಕಲಾದರಣೆಗೆ ಕಾರಣವಾಗುವ ಶಕ್ತಿ ಇದೆ. ಯಾವುದೇ ಪ್ರೇಕ್ಷಕ ಯಕ್ಷಗಾನ ಬಯಲಾಟಕ್ಕೆ ಹೋಗುವಾಗ ಆಕರ್ಷಣೆಗೊಳಗಾಗುವುದು ಮೊದಲು ಪ್ರಸಂಗವೆ, ಎರಡನೆಯದು ನಟ ಪ್ರಾಧಾನ್ಯತೆ, ಮೂರನೆಯದು ಯಾವ ಮೇಳದ ಬಯಲಾಟವೆಂದು ಅರಿತೆ ಯಕ್ಷಗಾನಕ್ಕೆ ತೆರಳವುದು ಸಾಮಾನ್ಯವಾಗಿದೆ. ಪ್ರಸಂಗವಧಾನತೆಯಿಂದ ನಟಪ್ರಧಾನ ವ್ಯವಸ್ಥೆಗೆ ಪ್ರೇಕ್ಷಕ ಟೆಂಟಿನ ಮೇಳದ ವ್ಯವಸ್ಥೆಯಿಂದಾರಂಭಿಸಿದಾಗಿನಿಂದ ಆಕರ್ಷಿತನಾದ, ಮೊದಲು ಪ್ರಸಂಗವೇ ಬಯಲಾಟದ ಪ್ರೇಕ್ಷಕರನ್ನು ಆಕರ್ಷಿಸುತ್ತಿತ್ತು. ಆಟದ ಗುತ್ತಿಗೆ ಆರಂಭವಾದಾಗ ಗುತ್ತಿಗೆದಾರ ಪ್ರಸಿದ್ದ ಕಲಾವಿದರನ್ನು ಅತಿಥಿಯಾಗಿ ಅಹ್ವಾನಿಸಿ, ಮೇಳದ ಪ್ರಮುಖ ಕಲಾವಿದನ ಪ್ರಚಾರದಿಂದ ಪ್ರೇಕ್ಷಕರನ್ನು ಆಕರ್ಷಿಸುವ ಪ್ರಯತ್ನಗಳು ಕ್ರಮೇಣ ಆರಂಭಗೊಂಡವು. ಆದರೂ ಕೆಲವು ಪ್ರಸಂಗಗಳು ಪ್ರೇಕ್ಷಕರನ್ನು ಆಕರ್ಷಿಸಿದೆ. ಯಕ್ಷಗಾನದ ಕೆಲವೇ ಪ್ರಸಿದ್ದ ನಟರಿಂದ ಒಂದೇ ಪ್ರಸಂಗ ಸಾವಿರಾರು ಪ್ರಯೋಗಗಳಳಾದ ಉಲ್ಲೇಖಗಳಿವೆ. ಇದಕ್ಕೆ ಆಖ್ಯಾನದ ಕಥಾಸಂವಿಧಾನ, ರಸೋತ್ಕರ್ಷಕ್ಕೆ ಕಾರಣವಾಗುವ ಸನ್ನಿವೇಶ, ಛಂದೋಬದ್ದವಾದ ಸುಂದರ ಹಾಡುಗಳು ಕೂಡ ಕಾರಣವಾಗುತ್ತದೆ.

ಯಕ್ಷಗಾನವನ್ನು ಅರ್ಥಿಕ ಲಾಭಕ್ಕಾಗಿ ಆಡಿಸುವವರು, ಪ್ರಸಂಗ ಅಯ್ಕೆಯಿಂದಲೆ ಪ್ರೇಕ್ಷಕರನ್ನು ಸೆಳೆಯುತ್ತಿದ್ದರು.ಇದರಿಂದ ಪ್ರಸಂಗ ಪ್ರಧಾನ ಬಯಲಾಟದ ಪ್ರದರ್ಶನ ಕಾಲದಲ್ಲಿ ಯಕ್ಷಗಾನ ಬಯಲಾಟದ ಜನಪ್ರಿಯತೆಗೆ ಪ್ರಸಂಗಗಳೆ ಕಾರಣವಾಗಿದ್ದವು.

೪.೩.೧ ವಿಷಯೆ ಕಲ್ಯಾಣ (ಚಂದ್ರಹಾಸೋಪಾಖ್ಯಾನ)

ಉತ್ತರಕನ್ನಡ ಜಿಲ್ಲೆಯ ಮಾಲೆಕೊಡಲು ಶಂಭುಗಣಪತಿಭಟ್ಟರು ಹಿಂದಿನ ಶತಮಾನದ ಪೂರ್ವಾರ್ಧದಲ್ಲಿ ಈ ಪ್ರಸಂಗ ರಚಿಸಿದರು. ಈ ಪ್ರಸಂಗ ೧೯೫೦ ರಲ್ಲಿ ಹುಬ್ಬಳಿಯ ರಾಯಲ್ ಪ್ರೆಸ್‌ನಿಂದ ಅಚ್ಚಾಗಿ ಪ್ರಕಟಗೊಂಡಿದೆ. ಇದಕ್ಕಿಂತ ಹಿಂದೆ ಇದ್ದ ಚಂದ್ರಹಾಸ ಚರಿತ್ರೆ ಹಲಸಿನಹಳ್ಳಿ ನರಸಿಂಹಶಾಸ್ತ್ರಿಗಳದ್ದಾಗಿದೆ. “ಕೆರೆಮನೆ ಶಿವರಾಮ ಹೆಗಡೆಯವರೆ ಈ ಪ್ರಸಂಗ ಕೃತಿಯನ್ನು ಮೊದಲಿಗೆ ರಂಗಕ್ಕೆ ತಂದರು”.[೨೫] ಶಿವರಾಮಹೆಗಡೆ ದುಷ್ಟಬುದ್ದಿ, ಮಾಳಕೋಡು ಗಣಪಹೆಗಡೆ **ಮದನ,** ಕೆರೆಮನೆ ಮಹಾಬಲಹೆಗಡೆ , ಚಂದ್ರಹಾಸ, ಪಾತ್ರ ನಿರ್ವಹಿಸುತ್ತಿದ್ದರು. ೧೯೬೯ರಲ್ಲಿ ಸಾಲಿಗ್ರಾಮಮೇಳದಲ್ಲಿ ಮಹಾಬಲಹೆಗಡೆಯವರು ದುಷ್ಟಬುದ್ದಿ ಪ್ರಾತ್ರವನ್ನು **ಸಿರಿಯಾರ ಮಂಜನಾಯಕ** ಚಂದ್ರಹಾಸ ಪ್ರಸಿದ್ದವಾಗಿದ್ದವು. ದುಷ್ಟಬುದ್ದಿಯಾಗಿ ದಿ.ಪಿ.ವಿ.ಹಾಸ್ಯಗಾರ, ದಿ.ಮೂರೂರುದೇವರು ಹೆಗಡೆ, ಶ್ರೀ ಚಿಟ್ಟಾಣಿರಾಮಚಂದ್ರ ಹೆಗಡೆಯವರು ಅಭಿನಯಿಸಿ ಪ್ರಸಿದ್ಧರಾದರು.

೨೫. ಡಾ. ಜಿ.ಎಸ್. ಭಟ್ ಇವರು ನೀಡಿದ ಮಾಹಿತಿ

೪.೩.೨ ಭೀಷ್ಮೋತ್ಪತ್ತಿ

ಭೀಷ್ಮೋತ್ಪತ್ತಿ, ಭೀಷ್ಮವಿಜಯ, ಭೀಷ್ಮಪ್ರಪಂಚ ಮೂರು ಪ್ರಸಂಗ ಕೃತಿಗಳು ರಂಗ ಕೃತಿಗಳಾಗಿ ಪ್ರಸಿದ್ದವಾಗಿದೆ.

ಭೀಷ್ಮೋತ್ಪತ್ತಿ, ಭೀಷ್ಮಾರ್ಜುನ ಕಾಳಗ, ಭೀಷ್ಮವಿಜಯ ಪ್ರಸಂಗ ಕೃತಿಗಳ ಕರ್ತೃ ಹಲಸಿನಹಳ್ಳಿ ನರಸಿಂಹಶಾಸ್ತ್ರಿ, ಭೀಷ್ಮಪ್ರಪಂಚ ಕೃತಿಯ ಕರ್ತೃ ಶಿವರಾಮಹೆಗಡೆ ಮಗೆಗಾರು. ಈ ಪ್ರಸಂಗಗಳು ತೆಂಕು-ಬಡಗು-ಬಡಾಬಡಗು ತಿಟ್ಟುಗಳಲ್ಲಿಯೂ ಅತ್ಯಂತ ಪ್ರಸಿದ್ದವಾಗಿದೆ.

ಬೀಷ್ಮೋತ್ಪತಿ ಪ್ರಸಂಗವು ಶಂತನು ಗಂಗೆಯ ಮೋಹಿಸಿ ಷರತ್ತಿನ ಮೇರೆಗೆ ವಿವಾಹವಾಗತ್ತಾನೆ. ಹುಟ್ಟಿದ ಏಳು ಮಕ್ಕಳನ್ನು ಗಂಗೆಯ ಕೈಯಿಂದ ಸಾವನ್ನಪ್ಪುತ್ತಾರೆ. ಎಂಟನೆಯವನು ದೇವವ್ರತನಾಗಿದ್ದು ಅವನನ್ನು ಪರಶುರಾಮನವರಲ್ಲಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಾನೆ. ಶಂತನು ಯೋಜನಾ ಗಂಧಿಯಲ್ಲಿ ಕಾಮ ಪೀಡಿತನಾಗಿ ಅವಳ ತಂದೆ ಕಂದರನ ಶರತ್ತನ್ನು ಒಪ್ಪಲಾಗದೆ ವಿಮುಖನಾಗುತ್ತಾನೆ.

ದೇವವ್ರತ ತಂದೆಯ ಪರಿಸ್ಥಿತಯನ್ನರಿತು ಭೀಷ್ಮ ಪ್ರತಿಜ್ಞೆಯೊಂದಿಗೆ ಶಂತನು-ಸತ್ಯವತಿಯವರ ವಿವಾಹಕ್ಕೆ ಕಾರಣನಾಗುತ್ತಾನೆ. ಅವರ ಮಕ್ಕಳಾದ ಚತ್ರವೀರ್ಯ,ವಿಚಿತ್ರವೀರ್ಯರು ದಿಗ್ವಿಜಯಕ್ಕೆ ತೆರಳಿದಾಗ ಚಿತ್ರವೀರ್ಯನು ಮಡಿದು ವಿಚತ್ರವೀರ್ಯನಿಗೆ ಪಟ್ಟ ಕಟ್ಟುತ್ತಾನೆ.

"೨೦ನೇ ಶತಮಾನದಲ್ಲಿ ರಚಿತವಾದ ಈ ಕೃತಿ ಪ್ರಯೋಗಕ್ಕೆ ಅನುಕೂಲವಾಗುವಂತೆ ಬದಲಾವಣೆ ಮಾಡಿಕೊಳ್ಳಲಾಗಿದೆ".[೨೬] ಈ ಪ್ರಸಂಗ ಅತಿಹೆಚ್ಚು ಪ್ರದರ್ಶನಗೊಂಡು ಯಕ್ಷಗಾನದಲ್ಲಿ ಪ್ರಸಿದ್ದವಾಗಿದೆ.

೪.೩.೩. ಭೀಷ್ಮ ವಿಜಯ-ಹಲಸಿನಹಳ್ಳಿ ನರಸಿಂಹಶಾಸ್ತ್ರಿ

ಯಕ್ಷಗಾನ ಬಯಲಾಟ ಪರಂಪರೆಯಲ್ಲಿ ಭೀಷ್ಮವಿಜಯ ಬಹು ಪ್ರದರ್ಶಿತ ಪ್ರಸಂಗವಾಗಿದೆ. ಕೆರೆಮನೆ ಮಹಾಬಲಹೆಗಡೆ ಭೀಷ್ಮನ ಪಾತ್ರಕ್ಕೆ ಹೆಸರಾಗಿದ್ದರು. ಮುಂದೆ ಕೃಷ್ಣಯಾಜಿಯವರು ಭೀಷ್ಮನ ಪಾತ್ರದಲ್ಲಿ ಮೆರೆದರು. ಕೆರೆಮನೆ ಶಿವರಾಮಹೆಗಡೆ ಸಾಲ್ವನಾಗಿ ಛಾಪು ಮೂಡಿಸಿದರು. ಕೆರೆಮನೆ ಶಂಭುಹೆಗಡೆಯವರು ೧೯೮೯ರವರೆಗೂ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸಾಲ್ವನ ಪಾತ್ರವನ್ನು ನಿರ್ವಹಿಸಿದ್ದಾರೆ. ಚಿಟ್ಟಾಣಿರಾಮಚಂದ್ರ ಹೆಗಡೆಯವರೂ ಸಾಲ್ವನ ಪಾತ್ರಕ್ಕೆ ಪ್ರಸಿದ್ದರೇ ಆಗಿದ್ದರು. ಮಹಾಗಣಪತಿ ಯಕ್ಕಷಗಾನ ಮಂಡಳಿ ಬಚ್ಚಗಾರುಮೇಳ, ಸಾಲಿಗ್ರಾಮ ಮೇಳಗಳಲ್ಲಿ ಈ ಪ್ರಸಂಗ ವಿಶೇಷವಾಗಿ ಪ್ರದರ್ಶನಗೊಂಡಿದೆ. ದಿ. ಕೆರೆಮನೆ ಗಜಾನನ ಹೆಗಡೆಯವರ ಅಂಬೆ ಪಾತ್ರದಿಂದ ಅವರಿಗೆ ಅತ್ಯಂತ ಪ್ರಸಿದ್ಧಿಯನ್ನು ತಂದುಕೊಟ್ಟಿತ್ತು.

"ಅಂಬೆಯಂಥ ದುಡುಕು ಸ್ವಭಾವದ ಹೆಣ್ಣೊಬ್ಬಳ ದುರಂತ ಮತ್ತು ಭೀಷ್ಮನಂಥ ಪ್ರಬಲ ಶಕ್ತಿಯ ಎದುರು ಹೋರಾಡಲಾರದ ಅಂಥ ಹೆಣ್ಣಿನನೋವಿನ ಕಥಾವಸ್ತುವನ್ನು ಹೊಂದಿದ ಭೀಷ್ಮವಿಜಯದ ಪದ್ಯಗಳು ಮನೋಜ್ಞ ಅಭಿನಯಕ್ಕೆ ಪೂರಕವಾಗಿದೆ. ಯಕ್ಷಗಾನ ಇತಿಹಾಸದಲ್ಲಿ ಈ ಪ್ರಸಂಗ ಸಾವಿರಾರು

೨೬. ಡಾ॥ ಆನಂದರಾಮ ಉಪಾಧ್ಯಾಯ, ಯಕ್ಷಗಾನ ಮಹಾಭಾರತ ಪ್ರಸಂಗ- ಪುಟ -೪೨.

ಪ್ರಯೋಗಗಳನ್ನು ಕಂಡಿದೆ. ತಾಳಮದ್ದಳೆ ರಂಗದಲ್ಲೂ ಶೇಣಿಗೋಪಾಲಕೃಷ್ಣಭಟ್ಟರ 'ಭೀಷ್ಮ' ಅತ್ಯಂತ ಕಲಾತ್ಮಕ ಅಭಿವ್ಯಕ್ತಿಯಾಗಿದೆ.

೪.೩.೪. ಭೀಷ್ಮ ಪ್ರಪಂಚ

ವಿಚಿತ್ರವೀರ್ಯನ ಸಾವಿನಿಂದ ದಾರಿಕಾಣದೆ ಸತ್ಯವತಿ ಭೀಷ್ಮನೆದುರು ಗೋಳಿಡುತ್ತಾಳೆ. ವ್ಯಾಸರಿಂದ ಸತ್ಯವತಿಯ ಸಮಾಧಾನ, ದೃತರಾಷ್ಟ್ರ, ಪಾಂಡು, ವಿದುರರ ಜನ್ಮ, ಪಾಂಡುವಿನ ವಿವಾಹ ಪಾಂಡುರಾಜನಿಗೆ ಋಷಿದಂಪತಿಗಳ ಶಾಪ, ವ್ಯಾಸಮಂತ್ರೋಪದೇಶ, ಪಾಂಡವರ ಜನನ, ಕೌರವ ಪಾಂಡವರ ವಿದ್ಯಾಭ್ಯಾಸ, ದ್ರುಪದನ ಗರ್ವಭಂಗದ ಸನ್ನಿವೇಶಗಳನ್ನು ಅಖ್ಯಾನವು ಹೊಂದಿದೆ.

"ಕೃತಿಕಾರ ತುರಂಗ ಭಾರತದ ಪ್ರೇರಣೆ ಹೊಂದಿರುವುದು ಕಂಡುಬರುತ್ತದೆ. ಗಾಂಧಾರಿಯ ಜಾತಕದ ದೋಷದಿಂದ ಅವಳನ್ನು ಮೊದಲು ಹೋತದೊಂದಿಗೆ ವಿವಾಹಮಾಡಿ ಅದನ್ನು ಕೊಂದು ದೃತರಾಷ್ಟ್ರನೊಂದಿಗೆ ವಿವಾಹ ಮಾಡುವ ಅಂಶವು ತುರಂಗ ಭಾರತದಲ್ಲಿ ಬಂದದ್ದಾಗಿದೆ".[೨೭] ಈ ಪ್ರಸಂಗ ಉತ್ತರಕನ್ನಡದಲ್ಲಿ ಹೆಚ್ಚು ಪ್ರಚಲಿತವಾಗಿತ್ತು.

೪.೩.೫. ಸತ್ಯ ಹರಿಶ್ಚಂದ್ರ ಕಥೆ

ಸಿದ್ದಾಪುರದ ಜಾನಕೈ ತಿಮಪ್ಪಹೆಗಡೆ ಸತ್ಯಹರಿಶ್ಚಂದ್ರ ಪ್ರಸಂಗದ ಕರ್ತೃ ಕರುಣರಸ ಪ್ರತಿಪಾದನೆಯಿಂದ ಪ್ರೇಕ್ಷಕರನ್ನು ಯಕ್ಷಗಾನಕ್ಕೆ ಬಹುಪಾಲು ಅಕರ್ಷಿಸಿದ ಕೃತಿ. ಮೌಲ್ಯ ಪ್ರತಿಪಾದನೆ, ಕಲಾತ್ಮಕತೆ ಎರಕ್ಕೂ ಅವಕಾಶವಿರುವ ಕೃತಿಯ ಪದ್ಯಗಳು ಮನೋಜ್ಞವಾದುದು.

ಹೆಸರಾಂತ ನಟ ಕೆರೆಮನೆ ಶಿವರಾಮಹೆಗಡೆ, ತೆಂಕುತಿಟ್ಟಿನಲ್ಲಿ ಶೇಣಿಗೋಪಾಲಕೃಷ್ಣಭಟ್ಟರು, ಮುಲ್ಪೆಶಂಕರನಾರಾಯಣಸಾಮಗರು, ಸೂರ್ವೆಗೋವಿಂದನಾಯಕರು, ಬಾಸಗೋಡ ಸಣ್ಣಮೋನಪ್ಪನಾಯಕರು, ಕರ್ಕಿಪಿ.ವಿ. ಹಾಸ್ಯಗಾರ, ಚಿಟ್ಟಾಣಿ ರಾಮಚಂದ್ರಹೆಗಡೆ, ಕೆರೆಮನೆ ಮಹಾಬಲಹೆಗಡೆ, ಕರೆಮನೆಶಂಭುಹೆಗಡೆ ಇವರೆಲ್ಲ ಈ ಆಖ್ಯಾನದಲ್ಲಿ ಅಭಿನಯಿಸಿ ಕೀರ್ತಿಗಳಿಸಿದ್ದಾರೆ.

ಕೃತಿಯಲ್ಲಿ ವೀರಬಾಹುಕನ ಪಾತ್ರ, ರಾಜಹರಿಶ್ವಂದ್ರ, ವಿಶ್ವಾಮಿತ್ರ ಪಾತ್ರಗಳ ಪದ್ಯ ದೃವ್ಯದಾನ, ಸನ್ನಿವೇಶ, ಲೋಹಿತಾಶ್ವನ ಶವವನ್ನು ಕಂ ಹರಿಶ್ಚಂದ್ರನ ಭಾವ ಪ್ರಕಟೆಯ ಸಂದರ್ಭ ಕರುಣರಸೋತ್ಕಟತೆಯನ್ನು ಬಿಂಬಿಸವಂತಹದು, "ಇನ್ನು ಮುನಿಪನಋಣವತಿರ್ಚಲೆರಡೇ ದಿನ.." "ವೀರಬಾಹುಕ ಲಾಲಿಸಯ್ಯ... ಇಷ್ಟುಪಕಾರವ ಮಾಡಿ ಇಂತಹ ಪದ್ಯಗಳ ಭಾವಪ್ರಧಾನವಾದುದು.

ಕೆರೆಮನೆ ಶಂಭುಹೆಗಡೆಯವರ ಸಂಘಟನೆಯ ಕೆರೆಮನೆ ಮಹಾಗಣಪತಿ ಯಕ್ಷಗಾನ ವಂಡಳಿ. ಈ ಪ್ರಸಂಗವನ್ನು ದಾಖಲೆಯ ಪ್ರದರ್ಶನನೀಡಿದೆ. "ಸಣ್ಣಹಳ್ಳಿಯಲ್ಲಿ ಪ್ರದರ್ಶನಗೊಂಡರು ಗಲ್ಲಾಪಟ್ಟಿಗೆ ತುಂಬಿದೆ.ಟಿಕೆಟ್ ಕಾಳಸಂತೆಯಲ್ಲಿ ಮಾರಾಟವಾದ್ದದಿದೆ. ಆಟವಹಿಸಿಕೊಂಡವರು ಇನ್ನೂರೈವತ್ತರಿಂದ ಏಳುನುರಾಐವತ್ತು ರೂಪಾಯಿಗಳವರೆಗೆ ಹಚ್ಚುವರಿಯಾಗಿ ಸಂತೋಷದಿಂದ ಕೊಟ್ಟಿದ್ದಿದೆ. ಎಲ್ಲ ವರ್ಗದ

೨೭. ಡಾ. ಆನಂದರಾವ್ ಉಪಾಧ್ಯಾಯ - ಮಹಾಭಾರತ ಪ್ರಸಂಗಗಳು - ಪು. ೫೨

ಪ್ರೇಕ್ಷಕರನ್ನು ಸೆರೆ ಹಿಡಿದಿದೆ".[೨೮]

ಕೆರೆಮನೆ ಮೇಳ ಸಂಕಷ್ಟದಲ್ಲಿದ್ದಾಗಲೂ ಹೆಗಡೆಯವರು ಶೋಕಾಭಿನಯ, ಪಾತ್ರದ ಉದಾತ್ತೀಕರಣದಿಂದ ಮೇಳವನ್ನು ಇನ್ನಷ್ಟು ಮೆರೆಸಿದರು. ಇವರು ಐದುನೂರಕ್ಕೂ ಹೆಚ್ಚು ಸಲ ಹರಿಶ್ಚಂದ್ರನ ಪಾತ್ರ ನಿರ್ವಹಿಸಿದರು. ಪ್ರಸಂಗ ಯಕ್ಷಗಾನಾಭಿಮಾನಿಗಳ ವಿಶೇಷ ಆಕರ್ಷಣೆಯಾಯಿತು.

೪.೩.೬. ಬ್ರಹ್ಮಕಪಾಲ

ಕನ್ಯಾನ ವೆಂಕಟರಮಣಭಟ್ಟರು ರಚಿಸಿದ ಬ್ರಹ್ಮಕಪಾಲ ತೆಂಕು–ಬಡಗುಗಳೆರಡರಲ್ಲೂ ಅತ್ಯಂತ ಯಶಸ್ವಿ ರಂಗಪ್ರಯೋಗವಾಗಿದೆ. ತೆಂಕಿನಲ್ಲಿ ಕುರಿಯ ವಿಠಲಶಾಸ್ತ್ರಿಗಳು, ಈಶ್ವರನ ಪಾತ್ರಮಾಡಲು ಅತ್ಯಂತ ಪ್ರಸಿದ್ಧರು. "ವಿಶಿಷ್ಟ ನೃತ್ಯತಂತ್ರದಿಂದ ತೆಂಕಿನ ಯಕ್ಷಗಾನ ಕ್ಷೇತ್ರದಲ್ಲಿ ಹೆಸರು ಮಾಡಿದ ಕುರಿಯವಿಠಲಶಾಸ್ತ್ರೀಯಗಳಿಗೂ ಧರ್ಮಸ್ಥಳಮೇಳಕ್ಕೂ ಕೀರ್ತಿತಂದು ಕೊಟ್ಟ ಪಾತ್ರವಿದು".[೨೯]

ಬ್ರಹ್ಮಕಪಾಲದ ಈಶ್ವರನ ಪಾತ್ರವನ್ನು ಕುರಿಯ ವಿಠಲಶಾಸ್ತ್ರಿಗಳು ೧೯೧೨–೧೯೭೨ರವರೆಗೆ ನಿರ್ವಹಿಸಿದರು. ಈ ಪಾತ್ರಕ್ಕೆ ಅಡಿಗಲ್ಲನ್ನು ಹಾಕಿದರು. ಇವರು ಹೃದಯಾಘಾತಕ್ಕೆ ಒಳಗಾಗಿದ್ದು ಈ ಪಾತ್ರ ನಿರ್ವಹಿಸುತ್ತಿರುವಾಗಲೆ ಆಗಿದೆ. ಬಡಗಿನಲ್ಲಿ ಶಂಭುಹೆಗಡೆಯವರು ಈ ಪಾತ್ರವನ್ನು ನಿರ್ವಹಿಸಿ ಅಖ್ಯಾನವನ್ನು ತೆಂಕಿನಷ್ಟೇ ಅಪ್ಯಾಯಮಾನಗೊಳಿಸಿದರು.

ಶಂಭುಹೆಗಡೆಯವರು ಬ್ರಹ್ಮಶಾರದೆಯರ ಸಂದರ್ಭಕ್ಕೆ ಹೆಚ್ಚು ಅವಕಾಶ ನೀಡಿ, ಕಪಾಲಗ್ರಸ್ತ ಶಿವನ ಪಾತ್ರ ಅನುಭವಿಸುವ ಕಷ್ಟ ಕೋಟಲೆಗಳನ್ನು ಅಭಿನಯಿಸುತ್ತಿದ್ದರು.

೪.೩.೭. ಶರಸೇತು ಬಂಧನ

ಉತ್ತರಕನ್ನಡ, ಮಲೆನಾಡು, ದಕ್ಷಿಣಕನ್ನಡದ ಮೇಳಗಳಿಗೂ ಶರಸೇತು ಬಂಧನ ಅಖ್ಯಾನವನ್ನು ಬಯಲಾಟವಾಗಿ ಕೂಟವಾಗಿ ಆಡಿ ಪ್ರಸಿದ್ದಗೊಳಿಸಿದ್ದಾರೆ.

ಅರ್ಜುನನ ತೀರ್ಥಯಾತ್ರೆಯ ಮಾರ್ಗ ಮಧ್ಯದಲ್ಲಿ ಹನುಮಂತನ ಭೇಟಿಯಾಗುತ್ತದೆ. ರಾಮನು ಕಟ್ಟಿದ ಸೇತುವೆಯನ್ನು ಬೀಳುಗೊಡದ ಅರ್ಜುನ ಬಾಣದಿಂದಲೆ ಸೇತುವೆ ಕಟ್ಟುವುದಾಗಿ ಹೇಳಿಕೊಳ್ಳುತ್ತಾನೆ. ಆಗ ಹನುಮಂತ ತಾನು ಅದನ್ನು ಮುರಿಯುವದಾಗಿ ಹೇಳುತ್ತಾನೆ. ಮೂರುಬಾರಿ ಸೇತುವೆಯನ್ನು ಮರಿದರೆ ಪ್ರಾಯೋಪವೇಶ ಮಾಡಿಕೊಳ್ಳುವುದಾಗಿ ಅರ್ಜುನ ಪ್ರತಿಜ್ಞೆ ಮಾಡುತ್ತಾನೆ. ಅರ್ಜುನನೆ ಸೋತು ಹೋಗಿ ಅಗ್ನಿಪ್ರವೇಶ ಮಾಡಬೇಕಾಗಿ ಬಂದಾಗ ಕೃಷ್ಣ ಬ್ರಾಹ್ಮಣನ ವೇಷದಲ್ಲಿ ಪ್ರತ್ಯಕ್ಷನಾಗಿ ತಡೆದು, ಕೂರ್ಮವತಾರ ತಾಳಿ ಸೇತುವೆಯನ್ನು ರಕ್ಷಿಸುತ್ತಾನೆ. ಸೇತುವೆಯು ಭಂಗವಾಗದಿದ್ದಾಗ ಖಿನ್ನನಾದ ಹನುಮಂತನಿಗೆ ಕೃಷ್ಣ ತಾನೆ ರಾಮನೆಂದು ದೃಢಪಡಿಸಿ ಹನುಮಂತನ್ನು ಅರ್ಜುನನ ಧ್ವಜದಲ್ಲಿ ಪ್ರತಿಷ್ಠಾಪಿಸುವ ಸಂಗತಿಗಳನ್ನು ಅಖ್ಯಾನವು ಹೊಂದಿದೆ.

ಈ ಭಾಗವು ಪರಮದೇವ ರಚಿಸಿದ ತುರಂಗ ಭಾರತದ ಕಥೆಯನ್ನಾಧರಿಸಿದೆ. ತಾಳಮದ್ದಳೆಗೆ

೨೮. ಡಾ. ಜಿ.ಎಸ್. ಭಟ್ಟ – ಕೆರೆಮನೆ ಶಂಭುಹೆಗಡೆ ಅಧ್ಯಯನ – ಪುಟ ನಂ ೨೧೧.

೨೯. ಡಾ. ಜಿ.ಎಸ್. ಭಟ್ಟ, – ಕೆರೆಮನೆ ಶಂಭುಹೆಗಡೆ ಅಧ್ಯಯನ – ಪುಟ ನಂ ೨೬೦.

ಹೆಸರಾದ ಈ ಪ್ರಸಂಗವು ಬಯಲಾಟದಲ್ಲಿ ಪ್ರಸಿದ್ಧವಾಗಿದೆ. ದಿ.ಪಿ.ವಿ. ಹಾಸ್ಯಗಾರ ಕೊಂಡದಕುಳಿ ರಾಮಹೆಗಡೆ, ಲಕ್ಷ್ಮಣಹೆಗಡೆ, ಕುಮಟಾ ಗೋವಿಂದನಾಯಕ್, ಚಿಟ್ಟಾಣಿ ರಾಮಚಂದ್ರಹೆಗಡೆ, ಶಂಭುಹೆಗಡೆ ಕೆರೆಮನೆ, ಹಡಿನಬಾಳು ಶ್ರೀಪಾದಹೆಗಡೆ ಇವರೆಲ್ಲ ಈ ಪ್ರಸಂಗದಲ್ಲಿ ಮನೋಜ್ಞ ಅಭಿನಯ ನೀಡಿದ್ದಾರೆ.

೪.೩.೮. ಸುಭದ್ರಾ ಕಲ್ಯಾಣ

ಈ ಪ್ರಸಂಗ ಕೃತಿಯ ಕರ್ತೃ ಹಟ್ಟಿಯಂಗಡಿ ರಾಮಭಟ್ಟರು ಈ ಪ್ರಸಂಗವು ಬಡಗುತಿಟ್ಟಿನ ಅತ್ಯಂತ ಪ್ರಸಿದ್ಧ ರಂಗ ಪ್ರಯೋಗ ಕೃತಿಯಾಗಿದೆ.

ತೀರ್ಥಯಾತ್ರೆಗೆ ತೆರಳಿದ ಅರ್ಜುನ ದ್ವಾರಕೆಯಲ್ಲಿ ಋಷಿವೇಷದಲ್ಲಿ ಇದ್ದು ಕಾಲಕಳೆಯುವಂತೆ ಕೃಷ್ಣ ಸೂಚಿಸುತ್ತಾನೆ. ವಿಷಯತಿಳಿದ ಬಲರಾಮ ಋಷಿಯ ಬರುವಿಕೆಗೆ ಸಂತೋಷಗೊಂಡು ಸುಭದ್ರೆಯನ್ನು ಸೇವೆಗಾಗಿ ನೇಮಿಸುತ್ತಾನೆ. ಸುಯೋಧನನಿಗೆ ಸುಭದ್ರೆಯನ್ನು ಕೊಟ್ಟು ವಿವಾಹ ಮಾಡುವುದಾಗಿ ಬಲರಾಮ ನಿಶ್ಚಯಿಸುತ್ತಾನೆ. ಸುಭದ್ರೆ ಅರ್ಜುನನಲ್ಲಿ ಮೋಹಿತಳಾಗುತ್ತಾಳೆ. ಸುಯೋಧನ ಮಾಗದನೊಂದಿಗೆ ಆಗಮಿಸುತ್ತಾನೆ. ಅರ್ಜುನ ಸುಭದ್ರೆಯನ್ನು ವರಿಸಿ ವಿವಾಹವಾಗಿ ಹನುಮಂತನ ಸಹಾಯದಿಂದ ಹೊರಟುಹೋಗುತ್ತಾನೆ. ಕೃಷ್ಣ, ಬಲರಾಮ, ಪಾರ್ಥನ ನಡುವೆ ಸಂಧಿಯಾಗುತ್ತದೆ. ಮಾಗಧ ಕೃಷ್ಣನ ಮೇಲೆ ವಾಯುವ್ಯಾಸ್ತ್ರ ಪ್ರಯೋಗಿಸುತ್ತಾನೆ. ಮುಂದೆ ಸುಭದ್ರ ಕಲ್ಯಾಣ ನಡೆಯುತ್ತದೆ.

ಈ ಕೃತಿ ಬಡಗು-ತೆಂಕು ತಿಟ್ಟುಗಳಲ್ಲಿ ಪ್ರಸಿದ್ಧವಾಗಿದೆ. ಬಡಗಿನಲ್ಲಿ ದಿ.ಕೆರೆಮನೆ ಮಹಾಬಲ ಹೆಗಡೆಯವರ ಬಲರಾಮ ದಿ. ಕೆರೆಮನೆ ಶಂಭುಹೆಗಡೆಯವರ ಕೃಷ್ಣ ಪ್ರಸಿದ್ಧ ಜೋಡಿ ಪಾತ್ರವಾಗಿದೆ. ಧ್ವನಿಮುದ್ರಿಕೆಗಳಲ್ಲೂ ಈ ಪ್ರಸಂಗ ಅಪಾರ ಜನಮೆಚ್ಚುಗೆ ಗಳಿಸಿದೆ.

ಈ ಕೃತಿಯು ಮೇಳದ ಕಲಾವಿದರಿಂದ ಇಂದಿಗೂ ರಂಗವಲ್ಲಿ ಅಭಿನಯಿಸಲ್ಪಡುತ್ತದೆ. "ಮುನ್ನೂರು ವರ್ಷಗಳ ಹಿಂದೆ ರಚಿತವಾಗಿದ್ದರೂ ಈ ಪ್ರಸಂಗ ಇಂದಿಗೂ ಪ್ರದರ್ಶನಗೊಳ್ಳುತ್ತದೆ. ಇದಕ್ಕೆ ಕವಿಯ ಪ್ರಸಂಗ ರಚನಾ ಶಕ್ತಿಯು ಕಾರಣವಾಗಿದೆ. ಮೂಲಕ್ಕಿಂತ ಹಾಗೂ ಕರ್ನಾಟಕ ಭಾರತ ಕಥಾ ಮಂಜರಿಗಿಂತ ಭಿನ್ನವಾಗಿ ಬಂದಿರುವುದು ಇಲ್ಲಿನ ಕಥೆ ಪ್ರಸಂಗದ ಯಶಸ್ಸಿಗೆ ಕಾರಣವಾಗುವ ಅಂಶಗಳೆನ್ನೆಲ್ಲ ಒಳಗೊಂಡಿದೆ. ಕೌರವನ ದಿಬ್ಬಣ ಅದರೊಂದಿಗೆ ಬರುವ ಹನುಮಂತ ಈ ಎಲ್ಲ ಸೇರ್ಪಡೆಗಳು ಪ್ರದರ್ಶನವನ್ನು ರಂಜನೀಯಗೊಳಿಸಿವೆ."[೩೦]

೪.೩.೯. ಭಸ್ಮಾಸುರ ಮೋಹಿನಿ

ಯಕ್ಷಗಾನ ಬಯಲಾಟಗಳಲ್ಲಿ ಅಸಂಖ್ಯ ಪ್ರದರ್ಶನ ನೀಡಿದ ದಾಖಲೆ ಭಸ್ಮಾಸುರ ಮೋಹಿನಿ ಪ್ರಸಂಗಕ್ಕೆ ಇದೆ. ನಿರ್ದಿಷ್ಟ ಸಂಖ್ಯೆಯಲ್ಲಿ ಇದನ್ನು ಇಡಲಾಗದು, ಏಕೆಂದರೆ ಬೇರೆ ಬೇರೆ ಮೇಳಗಳು ವಿವಿಧ ಕಾಲಘಟ್ಟದಲ್ಲಿ ಈ ಪ್ರಸಂಗ ಕೃತಿಯನ್ನು ರಂಗಕ್ಕೆ ತಂದಿವೆ. ಈ ಪ್ರಸಂಗ ಕೃತಿಯನ್ನು ಕನ್ಯಾನ ವೆಂಕಟರಮಣ ಭಟ್ಟರು, ಎಂ.ಜಿ. ಬರವಣಿ, ಶೇಣಿ ಗೋಪಾಲಕೃಷ್ಣ ಭಟ್ಟರು, ಹೊಸ್ತೋಟ ಮಂಜುನಾಥ

೩೦. ಡಾ. ಆನಂದರಾವ್ ಉಪಾಧ್ಯ ಯಕ್ಷಗಾನ ಮಹಾಭಾರತ ಪ್ರಸಂಗಳು

ಭಾಗವತರು ರಚಿಸಿರುತ್ತಾರೆ.

ಕರ್ಕಿಪರಮಯ್ಯ ಹಾಸ್ಯಗಾರರು, ಕೆರೆಮನೆ ಶಿವರಾಮಹೆಗಡೆ, ಚಿಟ್ಟಾಣಿ ರಾಮಚಂದ್ರಹೆಗಡೆ, ಕೆರೆಮನೆಶಂಭುಹೆಗಡೆಯವರು ಬಡಗು ತಿಟ್ಟಿನಲ್ಲಿ ವಿಶಿಷ್ಟತೆ ಮೆರೆದಿದ್ದಾರೆ. ತೆಂಕುತಿಟ್ಟಿನಲ್ಲಿ ಕುರಿಯ ವಿಠಲಶಾಸ್ತ್ರಿಗಳು ಸಂಪ್ರದಾಯ ನಿರ್ಮಾಪಕರುಹೌದು. ತೆಂಕು-ಬಡಗುಗಳೆರಡೂ ತಿಟ್ಟಿನಲ್ಲಿ ಅಸಂಖ್ಯ ಪ್ರದರ್ಶನ ನೀಡಿದ ಪ್ರಸಂಗ ಕೃತಿಯ ಪದ್ಯಗಳು ಅತ್ಯಂತ ಮನೋಜ್ಞ ಭಾವಭಿನಯಕ್ಕೆ ಪೂರಕವಾಗಿದೆ.

ಚಿಟ್ಟಾಣಿಯವರ ಅಮೃತೇಶ್ವರಿ ಮೇಳದ ಕಲಾವಿದರಾಗಿದ್ದ ಕಾಲದಲ್ಲಿ ಈ ಪ್ರಸಂಗ ಮೇಳದ ಅತ್ಯಾಕರ್ಷಣೆಯ ಪ್ರಸಂಗವಾಗಿತ್ತು. ಚಿಟ್ಟಾಣಿಯವರ ಪ್ರವೇಶ, "ಸದ್ದಿಲ್ಲದೆ ಮದ್ದರೆವೆ-"ಎಂಬ ಪದ್ಯದ ಅಭಿನಯ ಪ್ರಸಿದ್ಧವಾದುದು. ಕೆರೆಮನೆ ಶಿವರಾಮಹೆಗಡೆಯವರು ಅಷ್ಟೆ ಪರಿಣಾಮಕಾರಿಯಾಗಿ ಚಿತ್ರಿಸಿದ್ದರು. ಕರ್ಕಿ ಪರಮಯ್ಯ ಹಾಸ್ಯಗಾರರು ಬಡಗಿನ ಭಸ್ಮಾಸುರನ ಪಾತ್ರಕ್ಕೆ ಮಾದರಿಯಾಗಿದ್ದಾರೆಂಬ ಪ್ರತೀತಿ ಇದೆ.

ಚಿಟ್ಟಾಣಿ ರಾಮಚಂದ್ರಹೆಗಡೆಯವರ ಭಸ್ಮಾಸುರ ಅತ್ಯಂತ ಪ್ರಸಿದ್ಧವಾದದು. ಸಾವಿರಕ್ಕೂ ಹೆಚ್ಚು ಪ್ರದರ್ಶನ ನೀಡಿದ ದಾಖಲೆ ಅವರಿಗಿದೆ. ಇವರು ಬಚ್ಚಗಾರು ಮೇಳದಲ್ಲಿ ಮಂಟಪ ಪ್ರಭಾಕರ ಉಪಾಧ್ಯಾಯರ ಮೋಹಿನಿಯೊಂದಿಗೆ ಗಳಿಸಿದ ಪ್ರಚಾರ, ಕೀರ್ತಿ ಅಪಾರವಾದುದು.

ದಿ. ಕೆರೆಮನೆ ಶಂಭುಹೆಗಡೆಯವರ ಈ ಪಾತ್ರವನ್ನು ನಿರ್ವಹಿಸಿದ್ದಾರೆ. ಇವರು ಪಾತ್ರದ ಮಾರ್ಪಾಡಿನೊಂದಿಗೆ ಪ್ರಸಂಗವನ್ನು ರಂಗಕ್ಕೆ ಅಳವಡಿಸಿದರು.

ಪ್ರಸಂಗ ಕೃತಿಯಲ್ಲಿ ಭಸ್ಮಾಸುರನ ಜನ್ಮ, ಶಿವಪಾರ್ವತಿಯವರಿಂದ ವರಪ್ರಧಾನ, ದೇವತೆಗಳನ್ನು ಇಂದ್ರನನ್ನೇ ದಹಿಸುವ ಪ್ರಯತ್ನ, ವಿಷ್ಣುವಿನಲ್ಲಿ ದೇವತೆಗಳ ಮೊರೆ, ವಿಷ್ಣು ಮೋಹಿನಿ ರೂಪದಲ್ಲಿ ಭಸ್ಮಾಸುರನನ್ನು ಭಸ್ಮ ಮಾಡಿದ ಸನ್ನಿವೇಶಗಳನ್ನು ಆಖ್ಯಾನ ಹೊಂದಿದೆ. ಪ್ರಸಂಗ ಪದ್ಯಗಳು ಭಾವಾಭಿನಯಕ್ಕೆ, ರಸೋತ್ಕರ್ಷಕ್ಕೆ ಕಾರಣವಾಗುವಂತಹದಾಗಿದೆ. ಅತ್ಯಂತ ಹೆಚ್ಚು ಪದರ್ಶನಕ್ಕೆ ಕೃತಿಯ ರಸೊತ್ಕರ್ಷತೆಯು ಕಾರಣವಾಗಿದೆ.

೪.೩.೧೦. ಚಿತ್ರಾಕ್ಷಿ ಕಲ್ಯಾಣ

ಹಿತ್ಲಳ್ಳಿ ಅನಂತಭಟ್ಟರು ಈ ಕೃತಿಯ ಕರ್ತೃ, ಬಡಗುತಿಟ್ಟಿನಲ್ಲಿ "ರಾಜಾರುದ್ರಕೋಪ" ಎಂಬ ಹೆಸರಿನಿಂದ ಪ್ರಸಿದ್ಧವಾದುದು. ಕೊಳಗಿಬೀಸ್ ಮೇಳದಲ್ಲಿ ಇದು ಪ್ರಥಮ ಪ್ರಯೋಗ ಕಂಡಿತು. ಚಿಟ್ಟಾಣಿ ರಾಮಚಂದ್ರಹೆಗಡೆಯವರ ರುದ್ರಕೋಪ, ಗಜಾನನ ಭಂಡಾರಿಯವರ ಚಿತ್ರಾಕ್ಷಿ, ಜಲವಳ್ಳಿ ವೆಂಕಟೇಶರಾವ್ ರಕ್ತಜಂಗ, ಎಕ್ಟರ್‌ಜೋಶಿಯವರ ವ್ಯಾಸ, ಈ ಮೇಳದ ಆಟದಿಂದ ದುಡ್ಡಿನ ಹೊಳೆಯೇ ಗುತ್ತಿಗೆದಾರರಿಗೆ ಹರಿದು ಬಂತು. ಚಿಟ್ಟಾಣಿಯವರು ಲೆಕ್ಕವಿಲ್ಲದಷ್ಟು ರುದ್ರಕೋಪನನ್ನು ಅಭಿನಯಿಸಿದ್ದಾರೆ.

ರುದ್ರಕೋಪನ ಜನ್ಮ, ರಕ್ತಜಂಗವಧೆ, ಚಿತ್ರಾಕ್ಷಿ ಮತ್ತು ರುದ್ರಕೋಪನ ನಡುವಿನ ಪ್ರೇಮಾಂಕುರ, ಚಿತ್ರಾಕ್ಷಿಯವಿವಾಹ, ಅಪಹರಣ ಪ್ರಕರಣ ಇತ್ಯಾದಿ ಘಟನೆಗಳುಳ್ಳ ಅಖ್ಯಾನ ಶೃಂಗಾರವೀರ, ಕರುಣರಸದಿಂದ ಕೂಡಿದ ಪದ್ಯಗಳನ್ನು ಹೊಂದಿದೆ.

ಉತ್ತರಕನ್ನಡದಲ್ಲಿ ಇಂದಿಗೂ ಕೃಷ್ಣಯಾಜಿ, ಕಣ್ಣಿಗಣಪತಿಭಟ್, ಮುಂತಾದ ಕಲಾವಿದರ ಈ ಪಾತ್ರವನ್ನು ನಿರ್ವಹಿಸುತ್ತಾರೆ. ಇಂದಿಗೂ ಈ ಪ್ರಸಂಗ ಜನಪ್ರಿಯತೆ ಕಳೆದುಕೊಂಡಿಲ್ಲ.

೪.೩.೧೧. ಭೋಜಕಾಳಿದಾಸ

ಈ ಪ್ರಸಂಗ ಕೃತಿಯನ್ನು ಕಡತೋಕಾ ಮಂಜುನಾಥ ಭಾಗವತ ರಚಿಸಿದ್ದರು. ಈ ಕೃತಿ ರಂಗ ಪ್ರಯೋಗ ಮೂರೂರು ಮೇಳದಲ್ಲಾಯಿತು. ಮೇಳದಲ್ಲಿ ಏಕ್ಟರ್‌ಜೋಶಿ ಕಾಳಿದಾಸನ ಪಾತ್ರದಲ್ಲಿ ಅಭಿನಯಿಸಿದರು. ದಕ್ಷಿಣೋತ್ತರ ಕನ್ನಡಜಿಲ್ಲೆಯಲ್ಲಿ ಹೆಸರುವಾಸಿಯಾಯಿತು. ಪ್ರಸಂಗದಲ್ಲಿ ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಕಲಾಧರನ ಪಾತ್ರ ಅವರ ಅತ್ಯಂತ ಪ್ರಸಿದ್ಧಿಗೆ ಕೊಂಡೊಯ್ದ ಪಾತ್ರ, "ಕಂಡ ಕಲಾಧರನು" ಎಂಬ ಪದ್ಯಕ್ಕೆ ಚಿಟ್ಟಾಣಿಯವರ ಅಭಿನಯ ಅದ್ಭುತವಾಗಿತ್ತು. ಅವರಿಗೆ "ಕಲಾಧರಹೆಗಡೆ" ಎಂಬ ಹೆಸರನ್ನೇ ತಂದುಕೊಟ್ಟಿತು. ಈ ಪ್ರಸಂಗ ರಂಗದಲ್ಲಿ ಯಶಸ್ಸು ಗಳಿಸಿ ಪ್ರಸಿದ್ಧಿ ಪಡೆಯಿತು.

೪.೩.೧೨. ರಾಮ ನಿರ್ಯಾಣ

ಹೊಸ್ತೋಟ ಮಂಜುನಾಥ ಭಾಗವತರು ರಚಿಸಿದ "ಶ್ರೀ ರಾಮ ನಿರ್ಯಾಣ" ಶ್ರೇಷ್ಠವಾದ ಪ್ರಸಂಗವಾಗಿದೆ. "ಈ ಪ್ರಸಂಗ ಕೃತಿ, ರಚನಾಕ್ರಮ, ಬಂಧ, ಪಾತ್ರ ರಚನೆ, ಛಂದಸ್ಸಿನ ಬಳಕೆ, ರಂಗಗುಣದ ದೃಷ್ಟಿಯಿಂದ ನಿಜಕ್ಕೂ ವಿನೂತನ ಕೃತಿ"[೩೧]

ಕೆರೆಮನೆ ಶಂಭುಹೆಗಡೆಯವರ ಬಣ್ಣದ ಬದುಕಿಗೆ ಮೆರಗು ನೀಡಿದ ಪ್ರಸಂಗವಿದು. ವ್ಯಕ್ತಿ ಧರ್ಮ ಮತ್ತು ರಾಜಧರ್ಮದ ನಡುವಿನ ಸೂಕ್ಷ್ಮ ಸಂಘರ್ಷವನ್ನು ಅಭಿನಯ ಮತ್ತು ಮಾತಿನ ಮೂಲಕ ಪಾತ್ರವನ್ನು ಚಿತ್ರಿಸಿ ಇಡಿ ಪ್ರಸಂಗವು ಆಕರ್ಷಣೀಯವಾಗುವಂತೆ ಮಾಡಿದರು. ರಾಮನ ಪಾತ್ರದಲ್ಲಿ ಲೀನರಾಗಿ ರಾಮನ ಆದರ್ಶವನ್ನು ಚಿತ್ರಿಸುವಲ್ಲಿ ಯಶಸ್ವಿಯಾದರು. ಕೆರೆಮನೆ ಶಂಭು ಹೆಗಡೆಯವರು ತಮ್ಮ ಕೊನೆಯ ರಾಮನ ಪಾತ್ರದ ಅಭಿನಯದಲ್ಲಿ ಇಡಗುಂಜಿಯಲ್ಲಿ ತಮ್ಮ ಇಹಯಾತ್ರೆಯನ್ನು ಪೂರೈಸಿದರು. ನಿರ್ಯಾಣದ ರಾಮನಾಗಿಯೇ ಶಾಶ್ವತವಾದರು. ರಂಗ ಜೀವನದಲ್ಲಿ ನೂರಾರು ರಾಮನ ಪ್ರದರ್ಶನ ನೀಡಿದ ಶಂಭುಹೆಗಡೆ ಹೆಸರು ಪ್ರಸಂಗದೊಂದಿಗೆ ಚಿರಸ್ಥಾಯಿಯಾಯಿತು.

4.3.13. ದೇವಿಮಹಾತ್ಮೆ

ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಹರಕೆ ಮೇಳಗಳು ದೇವಿಮಹಾತ್ಮೆ ಪ್ರಸಂಗವನ್ನು ನಿರಂತರವಾಗಿ ಆಡುತ್ತಾ ಬಂದಿವೆ. ಧರ್ಮಸ್ಥಳ, ಕಟೀಲು, ಕೊರ್ಕೋಡಮೇಳ, ಮಂದರ್ತಿ ಮೇಳಗಳು ಇವುಗಳಲ್ಲಿ ಪ್ರಮುಖವಾಗಿವೆ. ಜತ್ತಿ ಈಶ್ವರಭಟ್ಟರು ಈ ಪ್ರಸಂಗವನ್ನು ರಚಿಸಿದ್ದಾರೆ. ಕೊರ್ಕೋಡು ಮೇಳದಲ್ಲಿ "ದೇವಿಮಹಾತ್ಮೆ" ಪ್ರಥಮ ಪ್ರಯೋಗವಾಯಿತು. ರಂಗಕೃತಿಯಾಗಿ ದಾಖಲೆ ನಿರ್ಮಿಸುವಷ್ಟು ಪ್ರದರ್ಶನಗಳನ್ನು ಪ್ರಸಂಗ ಕೃತಿ ಕಂಡಿದೆ.

---

೩೧. ಡಾ. ಜಿ. ಎಸ್.ಭಟ್ – ಶಂಭು ಹೆಗಡೆ ಅಧ್ಯಯನ – ಪು–೩೪೭

ತೆಂಕುತಿಟ್ಟಿನಲ್ಲಿ ಅಗ್ರಪೂಜೆ, ಅಂಗದಸಂಧಾನ, ಅತಿಕಾಯವಧೆ, ಮೈರಾವಣಕಾಳಗ, ಇಂದ್ರಜಿತುಕಾಳಗ, ಕಾವು ಕ್ಷೇತ್ರಮಹಾತ್ಮೆ, ಕೊಲ್ಲೂರುಕ್ಷೇತ್ರಮಹಾತ್ಮೆ, ಕುಂಭಕರ್ಣಕಾಳಗ, ಕೃಷ್ಣಾರ್ಜುನ ಕಾಳಗ, ದ್ರೋಣವಧೆ, ಪಟ್ಟಾಭಿಷೇಕ, ಮಹಾಸತಿಮಂಡೋದರಿ ಯೋಗಿನಿಕಲ್ಯಾಣ ರಾವಣವಧೆ, ಸಹಸ್ರನೀಕ, ರಾಮಶ್ವಮೇಧ, ಸಮಗ್ರಕಂಸ ಮೊದಲಾದ ಪ್ರಸಂಗಗಳು ಹವ್ಯಕರೆ ರಚಿಸಿದ್ದು ರಂಗ ಯಶಸ್ವಿ ಪ್ರಯೋಗಗಳಾಗಿ ಪ್ರಸಿದ್ಧಗೊಂಡಿದೆ.

ಪ್ರಸಂಗದ ಸಂಖ್ಯಾಬಾಹುಳ್ಯ ದೃಷ್ಟಿಯಿಂದ ಪ್ರಸಿದ್ಧ ಪ್ರಸಂಗಗಳನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ. ದಾಖಲೆಯ ಪ್ರದರ್ಶನ ನೀಡಿದ ಪ್ರಸಂಗಗಳನ್ನು ಮಾತ್ರ ಕಲಾವಿದರು ಮತ್ತು ಸಾಧನೆ ಸಹಿತ ವಿವರಿಸಲಾಗಿದೆ.

ಯಕ್ಷಗಾನ ಪ್ರಸಂಗಗಳಲ್ಲಿ ಒಂದೇ ಹೆಸರಿನ ಪ್ರಸಂಗಗಳು ನಾಲ್ಕುಜನರಿಂದ ರಚಿತವಾದದ್ದಿದೆ. ಆದರೆ ಯಾವ ಕೃತಿ ರಂಗಕೃತಿಯಾಗಿತ್ತು ಎಂಬುದು ಖಚಿತವಾಗಿ ವಿವರ ದೊರೆಯುವುದಿಲ್ಲ. ಆದ್ದರಿಂದ ರಂಗ ನಿಷ್ಠ ಪ್ರಸಿದ್ಧ ಪ್ರಸಂಗಗಳನ್ನು ಮಾತ್ರ ವಿವೇಚಿಸಲಾಗಿದೆ.

ಹೊಸ್ತೋಟ ಮಂಜುನಾಥ ಭಾಗವತರು ಬರೆದ ಬಸವೇಶ್ವರ ಚರಿತ್ರೆ ಚರಿತಾರ್ಹ ಪ್ರಸಂಗವಾಗಿದೆ. ವಿದ್ವಾನ್‌ದತ್ತ ಮೂರ್ತಿಭಟ್ಟರು ಈ ಪ್ರಸಂಗವನ್ನು ಕನ್ನಡ ನಾಡಿನ ಅನೇಕ ಸ್ಥಳಗಳಲ್ಲಿ ಪ್ರಯೋಗಿಸಿ ನೂರಕ್ಕೂ ಹೆಚ್ಚು ಪ್ರದರ್ಶನ ನೀಡಿರುವುದು ದಾಖಲೆಯಾಗಿದೆ. ಅಡ್ಕಗೋಪಾಲಕೃಷ್ಣಭಟ್ಟರು ಮಲೆಯಾಳ ಭಾಷೆಯಲ್ಲಿ ಮಹಿಷಾಸುರ ಪ್ರಸಂಗವನ್ನು ಜನಪ್ರಿಯಗೊಳಿಸಿದರು. ಸುಮಾರು ಮುರೂನೂರು ಮಹಿಷಾಸುರ ಪಾತ್ರಗಳಲ್ಲಿ ಅವರು ಅಭಿನಯಿಸಿರುತ್ತಾರೆ.

ರಾಮಯಣ, ಮಹಾಭಾರತ, ಪುರಾಣ ಇತಿಹಾಸ, ಭಾಗವತಗಳ ಅಖ್ಯಾನಗಳನ್ನು ಪ್ರಸಂಗಗಳಾಗಿ ರಚಿಸಿ ಜನರನ್ನು ಯಕ್ಷಗಾನದತ್ತ ಆಕರ್ಷಿಸಿದ ಕೀರ್ತಿ ಈ ಎಲ್ಲ ಪ್ರಸಂಗ ಕರ್ತರಿಗೆ ಸಲ್ಲುತ್ತದೆ. ಹವ್ಯಕ ಪ್ರಸಂಗ ಕರ್ತರು ರಂಗ ವೈಭವವನ್ನು ಮೆರೆಯುವ ಪ್ರಸಂಗಗಳನ್ನು ರಚಿಸಿ ಕಲೆಯನ್ನು ಕಾಲ ಕಾಲಕ್ಕೆ ಜನಪ್ರಿಯಗೊಳಿಸುತ್ತಾ ಬಂದಿದ್ದಾರೆ. ರಂಗ ಕೃತಿಯೊಂದು ಅಪ್ಯಾಯಮಾನವಾಗಲು ಕಾರಣವಾದ ಪ್ರಸಂಗ ಕೃತಿಯನ್ನು ರಚಿಸಿದ ಹವ್ಯಕ ಕವಿಗಳ ಕೊಡುಗೆ ಯಕ್ಷಗಾನಕ್ಕೆ ಗಣನೀಯವಾದುದಾಗಿದೆ.

೪.೪. ಯಕ್ಷಗಾನ ಗ್ರಂಥ ಸಾಹಿತ್ಯ

ಯಕ್ಷಗಾನ ವಾಙ್ಮಯದಲ್ಲಿ ಅನೇಕ ಪ್ರಕಾರದ ಕೃತಿ ಪರಂಪರೆಯನ್ನು ಗುರುತಿಸಲು ಸಾಧ್ಯ. ಪ್ರಸಂಗ ಕೃತಿಗಳು ರಂಗಕ್ಕೆ ಪಠ್ಯವಾದಂತೆ, ಯಕ್ಷಗಾನದ ಕುರಿತಾದ ಸಾಹಿತ್ಯ ಕೃತಿಗಳು ಕಲೆ ಕಲಾವಿದರ ಕುರಿತು ವಿವರವನ್ನು ಒದಗಿಸುತ್ತದೆ. ಯಕ್ಷಗಾನ ರಂಗಕ್ರಿಯೆಯನ್ನು ಅರ್ಥೈಸುವುದಕ್ಕೆ ಸಾಕ್ಷಿಯಾಗಿ ಪ್ರಸಂಗ ಮತ್ತು ರಂಗಕ್ಕೆ ಸಂಬಂಧಿಸಿದ ಕೃತಿಗಳು ಸಲ್ಲುತ್ತದೆ. "ಪ್ರಸಂಗಪಟ್ಟಿ" ಎಂದು ಕರೆಯುವ ಕೃತಿಗಳು ಪದ್ಯ ಸಂಗ್ರಹಗಳಾದರೆ, ಅರ್ಥಗಾರಿಕೆಯ ಆಶುಕೃತಿಗಳು ಗದ್ಯ ಸಾಹಿತ್ಯವನ್ನು ಸೃಷ್ಟಿಸುತ್ತದೆ. ರಂಗಕೃತಿ ಮತ್ತು ಅರ್ಥಗಾರಿಕೆಯ ವಿಚಾರ ವಿಮರ್ಶೆ, ಕಲಾವಿದನ ಚರಿತ್ರೆ, ಸಂಶೋಧನೆಗಳೆಲ್ಲವೂ ಗ್ರಂಥ ರೂಪದ ಸಾಹಿತ್ಯವಾಗಿ ಪ್ರಕಟಗೊಂಡಿವೆ. ಯಕ್ಷಗಾನದ ಗ್ರಂಥ ಸಾಹಿತ್ಯದ ವ್ಯಾಪ್ತಿ ವಿಶಾಲವಾಗಿದೆ.

ಹತ್ತು ಹಲವು ಸ್ವರೂಪಗಳನ್ನು ಒಳಗೊಂಡಿದೆ. ಸಾಹಿತ್ಯ ಕೃತಿಗಳಲ್ಲಿ ವಿಭಿನ್ನವಾದ ಆತ್ಮಕಥನ, ಜೀವನ ಚರಿತ್ರೆ, ಸಂಶೋಧನೆ, ವಿಚಾರವಿಮರ್ಶೆ, ಅಭಿನಂದನ, ಸ್ಮರಣ ಸಂಚಿಕೆ ಮೊದಲಾದ ಪ್ರಕಾರಗಳು ಬೆಳೆಯುತ್ತಿದೆ. ಭಾಷೆಯ ಅಭಿವ್ಯಕ್ತಿಯ ಗ್ರಾಂಥಿಕ ಸ್ವರೂಪ ವಿಸ್ತಾರಗೊಳ್ಳುತ್ತಾ ಸಾಗುತ್ತಿದೆ. ಹೊಸ ಹೊಸ ಪ್ರಕಾರದ ಸಾಹಿತ್ಯ ಸೃಷ್ಟಿಗೆ ಯಕ್ಷಗಾನ ಕಲಾ ಮಾಧ್ಯಮದಲ್ಲಿ ಸಾಧ್ಯತೆಗಳಿವೆ.

"ಹವ್ಯಕರು ಮತ್ತು ಯಕ್ಷಗಾನ ವಾಙ್ಮಯ"ವು ಯಕ್ಷಗಾನದ ಪ್ರಸಂಗ ಕೃತಿಗಳಷ್ಟೆ ಗ್ರಂಥ ಸಾಹಿತ್ಯದ ಕೊಡುಗೆಯನ್ನು ಒಳಗೊಳ್ಳುತ್ತದೆ. ಯಕ್ಷಗಾನ ಗ್ರಂಥ ಸಾಹಿತ್ಯದಲ್ಲಿ ಹವ್ಯಕರು ತೊಡಗಿಕೊಂಡಿದ್ದು ೧೯೨೫ ರಿಂದಲೇ ಎಂಬುವುದು ವೇದ್ಯತವಾಗುತ್ತದೆ. ಅಲ್ಲಿಂದ ವರ್ತಮಾನದವರೆಗೂ ಒಂದಿಲ್ಲೊಂದು ಪ್ರಕಾರಗಳು ಸೃಷ್ಟಿಗೊಳ್ಳುತ್ತಿದೆ. ಅಧ್ಯಯನದ ವ್ಯಾಪ್ತಿಯ ದೃಷ್ಟಿಯಿಂದ ಈ ಪ್ರಕಾರಗಳ ಸ್ಥೂಲ ವಿವರಣೆಯೊಂದಿಗೆ ಕೃತಿಯನ್ನು ಪರಿಚಯಿಸಲಾಗುತ್ತದೆ.

೪.೪.೧. ಸಂಶೋಧನಾ ಪ್ರಬಂಧಗಳು ಮತ್ತು ಗ್ರಂಥಗಳು

ಯಕ್ಷಗಾನ ಕ್ಷೇತ್ರದಲ್ಲಿ ಸಂಶೋಧನೆಗಿರುವ ವಿಫುಲ ಅವಕಾಶಗಳನ್ನು, ಸಾಧ್ಯತೆಗಳನ್ನು, ಬಳಸಿಕೊಂಡು ಸಂಶೋಧಕರು ಸಂಶೋಧನ ಪ್ರಬಂಧಗಳನ್ನು ಮಂಡಿಸಿರುತ್ತಾರೆ. ಇಂತಹ ಸಂಶೋಧನ ಪ್ರಬಂಧಗಳನ್ನು ಮೊದಲ ಅಧ್ಯಾಯದಲ್ಲಿ ವಿವೇಚಿಸಲಾಗಿದೆ. ಸಂಶೋಧನ ಪ್ರಬಂಧಗಳ ಹೊರತಾಗಿ ಸಂಶೋಧನ ಗ್ರಂಥಗಳು ಯಕ್ಷಗಾನಕ್ಕೆ ಸಂಬಂಧಿಸಿ ಪ್ರಕಟಗೊಂಡಿವೆ. ಯಕ್ಷಗಾನ ಕಲೆ, ಮುಖವರ್ಣಿಕೆ, ಅಭಿನಯ, ಮೂಲ ಸ್ವರೂಪದ ಕುರಿತು ಪ್ರಕಟಿತ ವಿಚಾರಗಳನ್ನು ವಿಮರ್ಶಿಸಿ ಹೊಸ ನೆಲೆಯಲ್ಲಿ ಅರ್ಥೈಸುವ, ಪರಿಕಲ್ಪಿಸಿ ಆಧಾರಗಳ ಸಹಿತ ನಿರೂಪಿಸುವ ಗ್ರಂಥಗಳನ್ನು ಸಂಶೋಧನಾ ಗ್ರಂಥಗಳೆಂದು ಪರಿಗಣಿಸಿ ಪರಾಂಬರಿಸಲಾಗಿದೆ.

೪.೪.೨ ಯಕ್ಷಗಾನ ವರ್ಣವೈಭವ

ಯಕ್ಷಗಾನ ವರ್ಣವೈಭವ ಕೃತಿ ಕ್ರಿ.ಶ ೧೯೯೯ರಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪ್ರಕಟಗೊಂಡಿದೆ. ಡಾ. ಗೋಪಾಲ ಕೃಷ್ಣ ಹೆಗಡೆಯವರು ಈ ಗ್ರಂಥವನ್ನು ರಚಿಸಿರುತ್ತಾರೆ.

ಗ್ರಂಥದಲ್ಲಿ ಯಕ್ಷಗಾನ ಪೀಠಿಕೆ, ವರ್ಣ ವೈಭವಗಳೆಂಬ ಎರಡು ಭಾಗಗಳಿವೆ. ಆಧಾರ ಗ್ರಂಥಗಳು ಮತ್ತು ಅಡಿಟಿಪ್ಪಣಿಗಳ ಸಹಿತ ಗ್ರಂಥವು ಸಂಶೋಧನ ಗ್ರಂಥವಾಗಿ ರೂಪಿಸಲ್ಪಟ್ಟಿದೆ.

ಯಕ್ಷಗಾನ ಪೀಠಿಕೆಯಲ್ಲಿ ಕರಾವಳಿಯ ಸಾಂಸ್ಕೃತಿಕ ಹಿನ್ನಲೆ ಆರಾಧನಾ ಸ್ವರೂಪದ ಆಚರಣೆಗಳ ಸತ್ವವನ್ನು ಹೊಂದಿರುವ ಕುರಿತು ವಿಶ್ಲೇಷಿಸಿದೆ. ಯಕ್ಷಗಾನ ಆಲಯದಿಂದ ಬಯಲಿಗೆ ಬಂದ ಆರಾಧನ ಕಲೆ ಹೇಗೆ ಎಂಬುವುದನ್ನು ಚೌಕಿ ಹರಕೆ, ಗಣಪತಿ ಕಿರೀಟ, ಯಕ್ಷಗಣಪತಿ ಆರಾಧನೆ ದೇವದಾಸಿನೃತ್ಯ, ಯಮಾಷ್ಟಕ ಸೇವೆ ಹಗಣಗಳ ಹಿನ್ನೆಲೆಯನ್ನು ಅವು ಸಂಕೇತಿಸುವ ಅರ್ಥವನ್ನು ವಿವೇಚಿಸಿ ಹವ್ಯಕರು ಯಕ್ಷಗಾನಕ್ಕೆ ನೀಡಿದ ಕೊಡುಗೆಗಳನ್ನು ವಿಶ್ಲೇಷಿಸಿದ್ದಾರೆ. ಯಕ್ಷಗಾನದ ಮೂಲದ ಕುರಿತು ಇರುವ ಎಲ್ಲಾ ಹೇಳಿಕೆಗಳನ್ನು ವಾಸ್ತವಿಕವಾಗಿ ಪ್ರಾಯೋಗಿಕತೆಯ ನೆಲೆಯಲ್ಲಿಟ್ಟು ತೂಗಿ ನೋಡಿರುತ್ತಾರೆ. ಪರಂಪರೆಯ ಪ್ರಾಚೀನ ಮೇಳವಾದ ಕರ್ಕಿಮೇಳದ ಹಾಸ್ಯಗಾರರ ವಂಶಾವಳಿ ಹಾಗೂ ಮೇಳದ

ಇತಿಹಾಸ ಸಾಧನೆಗಳನ್ನು ಅಧ್ಯಯನಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

ಯಕ್ಷಗಾನ ಪ್ರಸಂಗ ಸಾಹಿತ್ಯದ ಮೂಲವನ್ನು "ಕಲ್ಯಾಣದಿಂದ ಕಾಳಗಕ್ಕೆ" ಎಂಬ ಶಿರೋನಾಮೆಯ ಲೇಖನದಲ್ಲಿ ಸಭಾಲಕ್ಷಣದ ಪದ್ಯ ಮತ್ತು ಹವ್ಯಕ ಸೋಭಾನೆಗಳ ನಡುವಿನ ಸಂಬಂಧವನ್ನು ಉದಾಹರಿಸಿ ಪ್ರಸಂಗ ಸಾಹಿತ್ಯದ ಮೂಲವನ್ನು ಶೋಧಿಸಿದ್ದಾರೆ. ಯಕ್ಷಗಾನ ಎಲ್ಲಿಂದ ಎಲ್ಲಿಗೆ ಪ್ರಸಾರಗೊಂಡಿದೆ. ಎಂಬುದನ್ನು ಸಾಧಾರವಾಗಿ ಚರ್ಚಿಸಿದ್ದಾರೆ. ಯಕ್ಷಗಾನದ ಆಹಾರ್ಯಗಳ ತಾತ್ವಿಕ ಚಿಂತನೆ ನಡೆಸಿ ವೇಷಗಳು ಮತ್ತು ಬಣ್ಣಗಾರಿಕೆಯ ಹಿನ್ನೆಯನ್ನು ವಿಶ್ಲೇಷಿಸಿದ್ದಾರೆ.

ಈ ಕೃತಿ ಯಕ್ಷಗಾನದ ಸಮಾಜ ಶಾಸ್ತ್ರಿಯ ಚಿಂತನೆಯ ಶೋಧನೆಯಾಗಿದೆ. ಯಕ್ಷಗಾನದ ಹಲವು ಶೋಧನೆಗೆ ದಾರಿದೀಪವಾಗಿದೆ.

೪.೪.೩. ಯಕ್ಷಗಾನ ಇತಿಹಾಸ, ವಿಚಾರ ವಿಮರ್ಶೆ

ಯಕ್ಷಗಾನ ಬಯಲಾಟ ಮೂಲದ ಕುರಿತು ಜಿಜ್ಞಾಸೆ ಮುಂದುವರೆಯುತ್ತದೆ. ವಿಚಾರ ವಿಮರ್ಶೆಯ ಸಂದರ್ಭದಲ್ಲಿ ದೊರೆಯುವ ಆಧಾರಗಳ ಮೇಲೆ ಯಕ್ಷಗಾನ ಮೂಲದ ಊಹಾತ್ಮಕ ವಿಚಾರಗಳು ಅಲ್ಲಲ್ಲಿ ಕಲೆಯ ಸ್ವರೂಪವನ್ನು ಕುರಿತು ಬೆಳಕು ಚಲ್ಲುತ್ತದೆ. ಯಕ್ಷಗಾನ ಎಂದರೇನು? ಇದರ ಮೂಲವೆಲ್ಲಿ? ಯಕ್ಷಗಾನ ಬಯಲಾಟದ ಲಕ್ಷಣಗಳೇನು? ಎಂಬ ವಿಷಯವನ್ನಾಧರಿಸಿ ಅನೇಕ ಲೇಖನಗಳು, ಗ್ರಂಥಗಳು ಪ್ರಕಟಗೊಂಡಿದೆ. ಇವುಗಳನ್ನು ಸಂಗ್ರಹಿತವಾಗಿ ಪರಾಂಬರಿಸುವುದು ಇಲ್ಲಿನ ಉದ್ದೇಶವಾಗಿದೆ.

೪.೪.೪. ಯಕ್ಷಗಾನ ಪೂರ್ವಕಥಾ ಪೀಠಿಕಾ ಸಂಗ್ರಹ

ಈ ಗ್ರಂಥವನ್ನು ಬರೆದವರು ವೇ.ರಾಮಕೃಷ್ಣ ಶಂಭುಭಟ್ಟರು ಕರುಣಾಕರ್ಯ ಇವರು ಧಾರೇಶ್ವರದವರು. ಗ್ರಂಥವು ಅಚ್ಚಾದ ಶಕೆ ೧೮೪೭ ಅಂದರೆ ಕ್ರಿ.ಶ. ೧೯೨೫. ಪುಟಗಳ ಒಟ್ಟು ೭೭

ಈ ಗ್ರಂಥದಲ್ಲಿ ಯಕ್ಷಗಾನದಲ್ಲಿ ಬರುವ ರಾಜಪರಂಪರೆ,ರಾಮಯಣ ಮಹಾಭಾರತ ಗ್ರಂಥಾವಾಲೋಕನದಿಂದ ಸಂಗ್ರಹಿಸಿದ್ದಾರೆ. ಇದರಲ್ಲಿ ಸೂರ್ಯವಂಶ ಚಂದ್ರವಂಶ ಯದುವಂಶಗಳ ಪರಂಪರೆಯ ಪಾತ್ರಗಳ ಚಿತ್ರಣವಿದೆ. ಪಾಂಡವರು, ಕೌರವರು, ಶ್ರೀರಾಮ, ಕೃಷ್ಣ ಇವರ ಪೀಠಿಕಾ ಲಕ್ಷಣಗಳಿವೆ. ಯಕ್ಷಗಾನದ ಪಾತ್ರಗಳ ಸಭಾ ಪ್ರವೇಶ ಪೀಠಿಕೆ, ಪಾತ್ರ ನಿರ್ವಹಣೆಯ ಕುರಿತು ಚರ್ಚಿಸಲಾಗಿದೆ. ಹೊಸದಾಗಿ ರಂಗಪ್ರವೇಶ ಮಾಡುವ ಕಲಾವಿದರಿಗೆ ಅತ್ಯುಪಯುಕ್ತ ಕೃತಿ ಇದಾಗಿದೆ.[೨]

೪.೪.೫. ಯಕ್ಷಗಾನ ವಿವೇಚನೆ

ಈ ಗ್ರಂಥವನ್ನು ದೇರಾಜೆ ಸೀತಾರಾಮಯ್ಯನವರು ಬರೆದಿದ್ದಾರೆ. (೧೯೫೭) ಈ ಗ್ರಂಥದಲ್ಲಿ ಪ್ರಸಂಗ ಭಾಗವತರ, ಹಿಮ್ಮೇಳ, ತಾಳಮದ್ದಳೆ, ಯಕ್ಷಗಾನ ಸುಧಾರಣೆಯ ಇತ್ಯಾದಿಗಳನ್ನು ವಿವರಿಸಿದ್ದಾರೆ. ಸಂಗೀತದ ರಾಗಗಳನು ಯಕ್ಷಗಾನಕ್ಕೆ ಅಳವಡಿಸಿ ಯಕ್ಷಗಾನ ಧಾಟಿಯಲ್ಲಿ ಹಾಡುವುದು ಯುಕ್ತವೆಂಬುದು

೩೨. ವಿ.ಎಸ್. ಭಟ್ – ಯಕ್ಷಗಾನ ವಿಚಾರ ವಿಮರ್ಶೆಗಳ ಸಮೀಕ್ಷೆ – ವೈಜಯಂತಿ – ಪು. ೫೧

ಶ್ರೀಮಂತರು ಅಭಿಪ್ರಾಯ ಪಟ್ಟಿದ್ದಾರೆ. ಪಾತ್ರಪ್ರವೇಶ, ರಸಪುಷ್ಟೀಕರಣ ವಿವೇಚನೆ ಯಕ್ಷಗಾನ ಕಲಾವಿದರಿಗೆ ಮಾರ್ಗದರ್ಶಿಯಾಗಿದೆ. (ಪು.೫೧)

೪.೪.೬. ಯಕ್ಷ ನಾಟಕಗಳು

ವಿದ್ವಾನ್ ರಾಮಚಂದ್ರಭಟ್ಟಹಾಸಣಗಿಯವರು ಈ ಕೃತಿಯ ಕರ್ತೃ. ಇವರು ಯಲ್ಲಾಪುರ (ಉತ್ತರಕನ್ನಡ) ತಾಲ್ಲೂಕಿನವರು. ಯಕ್ಷನಾಟಕಗಳು ಕೃತಿ ಪರ್ಣಕುಟಿ ಗ್ರಂಥಮಾಲೆ ಧಾರವಾಡದಿಂದ ಕ್ರಿ.ಶ.೧೯೫೨ರಲ್ಲಿ ಪ್ರಕಟಗೊಂಡಿದೆ.

ಕೃತಿಯಲ್ಲಿ ಭಾಗವತರಾಟವೆಂದು ಯಕ್ಷಗಾನಕ್ಕೆ ಏಕೆ ಹೆಸರು ಬಂದಿದೆ? ಎಂದು ವಿಮರ್ಶಿಸುತ್ತಾ, ಭಾಗವತದ ಕಥಾನಕಗಳನ್ನು ಭಕ್ತಿ ಸಂಪ್ರದಾಯದವರು ಆಡಿಸುತ್ತಿದ್ದ ಆಟ ಎಂದು ವಿಶ್ಲೇಷಿಸಿದ್ದಾರೆ. ಬಯಲಾಟವೆಂದು ಕರೆದಿರುವ ಔಚಿತ್ಯವನ್ನು ತರ್ಕಿಸಲಾಗಿದೆ. ನಾಟಕೀಯ ಲಕ್ಷಣಗಳಿಂದ ಯಕ್ಷಗಾನವು ನಾಟಕವೆ ಆಗಿದೆ ಎಂದಿದ್ದಾರೆ. ಆದರೆ ಹಾಸಣಗಿಯವರ ಈ ತರ್ಕವನ್ನು ಯಾವ ವಿಧ್ವಾಂಸರು ಒಪ್ಪಲಾರರು. ನೃತ್ಯ, ನೃತ್ತ, ಸಂಗೀತವಾದ್ಯಗಳೆಂಬ ಪಂಚಾಮೃತ ರಸಪಾಕವಾದ ಯಕ್ಷಗಾನ ಶಿಖಾಂತಗಾನದೇಹಿಯವಾದುದು. ಯಕ್ಷ ಮತ್ತು ನಾಟಕ ಪದಗಳ ಔಚಿತ್ಯವನ್ನು **ಪರಾವರ್ಶಿಸಿದ್ದಾರೆ.** ಸಂಸ್ಕೃತ ನಾಟಕಗಳು ಯಕ್ಷಗಾನದ ಹುಟ್ಟಿಗೆ ಕಾರಣವೆ? ಎಂಬ ಊಹೆಯನ್ನು ವಿವಿಧ ಲಕ್ಷಣಗಳ ಆಧಾರದ ಮೇಲೆ ಚರ್ಚಿಸಿದ್ದಾರೆ.[೩೩]

ಗ್ರಂಥದಲ್ಲಿ ಗ್ರಂಥಸ್ಮರಣೆ, ತೆಂಕು, ಬಡಗುತಿಟ್ಟುಗಳು,ಸಭಾಹಿತ ಪ್ರತಿಗಳೆಂಬ ಬೇಧಗಳನ್ನು ವಿವೇಚಿಸಿದ್ದಾರೆ. ಉತ್ತರಕನ್ನಡದ ಯಕ್ಷಗಾನದ ಚರಿತ್ರೆಯನ್ನು ಚೆನ್ನಾಗಿ ವಿಶ್ಲೇಷಿಸಿದ ಕೃತಿ ಇದಾಗಿದೆ.

೪.೪.೭. ಕುಂಬಳೆ ಪಾರ್ತಿಸುಬ್ಬ ಕವಿಯ ಕಾಲ ಮತ್ತು ಕರ್ತೃತ್ವದ ನಿರ್ಣಯ

ಕುಕ್ಕಿಲಕೃಷ್ಣಭಟ್ಟರು ಈ ಗ್ರಂಥವನ್ನು (೧೯೬೧)ರಲ್ಲಿ ದಿ।ಮುಳಿಯ ತಿಮ್ಮಪ್ಪಯ್ಯನವರ ಸಂಶೋಧನೆಯನ್ನು ಮುಂದುವರಿಸಿ ಆಧಾರ ಸಹಿತವಾಗಿ ಪಾರ್ತಿಸುಬ್ಬಕುಂಬಳೆಯರೆಂದು. ಸಭಾಲಕ್ಷಣ, ರಾಮಾಯಣ ಪ್ರಸಂಗಗಳ ಕರ್ತೃವೆಂದೂ ಚರ್ಚಿಸಿದ್ದಾರೆ. ರಾಮನಾಟಕದಲ್ಲಿ ಬರುವ ೮ ಸಂಧಿಗಳನ್ನು ಮಲೆಯಾಳವನ್ನರಿತ ಪಾರ್ತಿಸುಬ್ಬರು ೮ ಪ್ರಸಂಗಳನ್ನಾಗಿ ಬರೆದರೆಂಬುದನ್ನು ವಿವರಿಸಿದ್ದಾರೆ.

೪.೪.೮. ಯಕ್ಷಗಾನ ಪರಿಶೀಲನೆ

ಡಾ.ಜಿ.ಎಸ್.ಭಟ್ಟ.ಸಾಗರ ಇವರು ಈ ಗ್ರಂಥವನ್ನು ರಚಿಸಿದ್ದಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಈ ಕೃತಿಯನ್ನು ೧೯೯೫ ರಲ್ಲಿ ಪ್ರಕಟಿಸಿದೆ. ಈ ಕೃತಿಯನ್ನು ಲೇಖಕರು ಚಿಟ್ಟಾಣಿರಾಮಚಂದ್ರಹೆಗಡೆಯವರಿಗೆ ಅರ್ಪಿಸಿರುತ್ತಾರೆ.

ಗ್ರಂಥದಲ್ಲಿ ಕಲೆ ಮತ್ತು ಪ್ರದರ್ಶನಕಲೆ ಗೊಂಬೆಯಾಟಗಳು, ಯಕ್ಷಗಾನ ವೇಷಭೂಷಣಗಳು, ಉತ್ತರಕನ್ನಡದ ಯಕ್ಷಗಾನ ಪರಂಪರೆ, ತಾಳಮದ್ದಳೆ, ಯಕ್ಷಗಾನದಲ್ಲಿ ಹನುಮಂತ, ಗುಂಡಬಾಳಾಮೇಳದ

೩೩. ಶ್ರೀ ವಿ.ಎನ್. ಭಟ್ - ಯಕ್ಷಗಾನ ವಿಚಾರ ವಿಮರ್ಶೆ - ವೈಜಯಂತಿ - ಪು. ೪೮

ಕಲಾಸೇವೆ, ಹಾಸ್ಯಗಾರ ಮೇಳ, ಕೆರೆಮನೆ ಶಿವರಾಮಹೆಗಡೆ, ಮೂಡಲಪಾಯ ಯಕ್ಷಗಾನಕ್ಕೆ ಜೀ.ಶಂ.ಪ. ಕೊಡುಗೆ ಬಿಡಿ ಲೇಖನಗಳನ್ನು ಸಂಗ್ರಹಿಸಿದ್ದಾರೆ.

ಲೇಖಕರು ಪ್ರದರ್ಶಕ ಕಲೆಗಳಲ್ಲಿ ಯಕ್ಷಗಾನದ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ. ಗೊಂಬೆಯಾಟದ ಕುರಿತು ಸ್ಪಷ್ಟವಾದ ಚಿತ್ರಣಕೊಡುವದರೊಂದಿಗೆ ಯಕ್ಷಗಾನ ಗೊಂಬೆಯಾಟದ ಸಂಘಟನೆಗಳನ್ನು ವಿಶ್ಲೇಷಿಸಿದ್ದಾರೆ. ಉತ್ತರಕನ್ನಡದ ಯಕ್ಷಗಾನ ಪರಂಪರೆ ಮತ್ತು ಪ್ರಸಿದ್ಧ ಕಲಾವಿದರ ಕುರಿತಾದ ವಿವರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಯಕ್ಷಗಾನದ ಸಮಗ್ರ ಚಿತ್ರಣವನ್ನುಅರಿಯಲು ಈ ಗ್ರಂಥ ಸಹಕಾರಿಯಾಗಿದೆ.

೪.೪.೯. ಯಕ್ಷಲೋಕದರ್ಶನ

ಶ್ರೀ. ಎಂ. ದೇವಾನಂದಭಟ್ಟರು ಈ ಕೃತಿಯನ್ನು ರಚಿಸಿದ್ದಾರೆ. ಈ ಕಿರುಹೊತ್ತಿಗೆಯನ್ನು ಯಕ್ಷದೇವ ಮಿತ್ರಮಂಡಳಿ ಬೆಳುವಾಯಿ ಮಂಗಳೂರು ಸಂಘಟನೆಯ ಪ್ರಕಟಿಸಿದೆ. ಈ ಹೊತ್ತಿಗೆ ಯಕ್ಷಗಾನದ ವೇಷಗಳ ವರ್ಣರಂಜಿತ ಪೋಟೋಗಳಿಂದ ಆಕರ್ಷಕವಾಗಿದೆ. ಯಕ್ಷಗಾನ ಬೆಳೆದು ಬಂದದಾರಿ, ರಂಗಕಲಾವಿನ್ಯಾಸ, ಯಕ್ಷಗಾನ ದಾರ್ಶನಿಕತೆ, ಹಿಮ್ಮೇಳ, ಮುಮ್ಮೇಳ, ಪಾತ್ರಚಿತ್ರಣ, ಅರ್ಥಗಾರಿಕೆ ರಂಗನಿರ್ದೇಶನ ಮುಂತಾದ ಹತ್ತು ಲೇಖನಗಳ ಸಂಗ್ರಹವಿದಾಗಿದೆ. ಯಕ್ಷಗಾನದ ಕಲಾಸ್ವರೂಪವನ್ನು ಬಿಂಬಿಸುವ ಪರಂಪರೆ ಮತ್ತು ಕಲೆಯನ್ನು ಪ್ರತಿಭಾನ್ವಿತ ಕಲಾವಿದ ಅನುವಂಶಿಕ ಮತ್ತು ಸಂವಾದಿತ ಗುಣಗಳಿಂದ ಕಲೆಯನ್ನು ಸಂಪನ್ನಗೊಳಿಸಲು ಈ ಕೃತಿ ಪೇರಕ. ಆಕರ್ಷಕ ಭಂಗಿಯ ಯಕ್ಷಗಾನ ಪೋಟೋಗಳು ಗಮನ ಸೆಳೆಯುವಂತಹದು.

೪.೫. ಆತ್ಮಕಥನ

ವಾಙ್ಮಯ ಪರಂಪರೆಯಲ್ಲಿ 'ಆತ್ಮಕಥನ' ಒಂದು ವಿಶಿಷ್ಟ ಪ್ರಕಾರದ ಸಾಹಿತ್ಯ ಕೃತಿ. ಬೇರ ಬೇರೆ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಯನ್ನು ಯಥಾರ್ಥದಲ್ಲಿ ಹೇಳುವ ಪ್ರಯತ್ನಗಳು ನಡೆದಿದೆ. ಲೇಖಕನು ಸ್ವತಃ ತಾನೆ ತನ್ನ ಬದುಕಿನ ಅನುಭವವನ್ನು ತೆರೆದಿಟ್ಟ ಉದಾಹರಣೆಗಳಿವೆ. ಆದರೆ ಯಕ್ಷಗಾನ ಬಯಲಾಟದ ಕಲಾವಿದರು ಕಲಾರಂಗದಲ್ಲಿ ಕಂಡುಂಡ ಅನುಭವಗಳನ್ನು ದಾಖಲಿಸವುದು ಸುಲಭದ ಮಾತಲ್ಲ. ಅಭಿನಯ, ಕುಣಿತ, ಅಭಿವ್ಯಕ್ತಿಗಳನ್ನು ಕಲಾತ್ಮಕವಾಗಿ ಹೇಳುವ ಸಂವಹನ ಸಾಧ್ಯತೆಗಳು ಸವಾಲಾಗಿರುತ್ತದೆ. ಯಕ್ಷಗಾನದಲ್ಲಿ "ಆತ್ಮಕಥನ" ದಾಖಲಿಕರಣ ಪರಂಪರೆ ಡಾ.ಜಿ.ಎಸ್.ಭಟ್ ಸಾಗರ ಇವರ "ನೆನಪಿನರಂಗಸ್ಥಳ" ಕೃತಿಯಿಂದ ಆರಂಭಗೊಳ್ಳುತ್ತದೆ. ಕಲಾವಿದನ ಕಲಾಬದುಕಿನ ಕ್ಷಣಗಳನ್ನು ತನ್ನದೆ ಭಾಷೆಯಲ್ಲಿ ನಿವೇದಿಸುವ ಮತ್ತು ಅವರ ಮಾತಿನ ಆಧಾರದ ಮೇಲೆ ಕಥನರೂಪದ ವ್ಯಕ್ತಿಯ ಚರಿತ್ರೆ ದಾಖಲಿಸುವ ಪ್ರಯತ್ನವೇ ಆತ್ಮಕಥನ. ಆತ್ಮಕಥನಗಳು ಈವರೆಗೆ ಯಕ್ಷಗಾನ ಸಾಹಿತ್ಯ ಪ್ರಕಾರದಲ್ಲಿ ದಾಖಲಾದವು ಒಟ್ಟು ಒಂಬತ್ತು. ಇವೆಲ್ಲವೂ ಹವ್ಯಕ ಕಲಾವಿದರ ಆತ್ಮಕಥನವೆ ಆಗಿದೆ ಎಂಬುದು ವಿಶೇಷವಾಗಿದೆ. ಕಥನ ಸ್ವರೂಪದ ಅಭಿವ್ಯಕ್ತಿಯ ದಾಖಲೀಕರಣ ಸಾಹಿತ್ಯದಲ್ಲಿ ಹೊಸ ಮಾರ್ಗವನ್ನು ಸೃಷ್ಟಿಸುವಂತಹ ಪ್ರಯತ್ನ ಈ ಕೃತಿಗಳಲ್ಲಿದೆ.

೪.೫.೧. ನೆನಪಿನ ರಂಗಸ್ಥಳ

ಕೆರೆಮನೆ ಶಿವರಾಮ ಹೆಗಡೆಯವರ ಆತ್ಮಕಥನ "ನೆನಪಿನರಂಗ ಸ್ಥಳ"ವನ್ನು ಡಾ.ಜಿ.ಎಸ್. ಭಟ್ಟ ಸಾಗರ ಇವರು ದಾಖಲಿಸಿದ್ದಾರೆ. ಅಕ್ಷರ ಪ್ರಕಾಶನ ಹೆಗ್ಗೋಡು ಕೃತಿಯನ್ನು ೧೯೮೫ರಲ್ಲಿ

ಪ್ರಕಟಿಸಿದೆ. ಯಕ್ಷಗಾನ ಕಲಾವಿದರ ಆತ್ಮಕಥನ ಪರಂಪರೆಯಲ್ಲಿ ಇದು ಮೊದಲ ಪ್ರಯತ್ನ. "ಕಥನಕಾರಣ"ದಲ್ಲಿ ಲೇಖಕರು ಕ್ಯಾಸೆಟ್‌ಗಳ ಧ್ವನಿ ಮುದ್ರಿಕೆಯಲ್ಲಿ ಕಲಾವಿದನ ಮಾತುಗಳನ್ನು ದಾಖಲಿಸಿ ಲಿಖಿತ ರೂಪಕ್ಕಿಳಿಸಿದ್ದಾರೆ.

ಗ್ರಂಥದಲ್ಲಿ "ನೆನಪಿನಚಪ್ಪರ" ಉದ್ಯೋಗದ ಹುಡುಗಾಟದಲ್ಲಿ, ಸ್ವಂತಮೇಳ, ಡೇರೆಮೇಳ, ಪ್ರಶಸ್ತಿ ಪುರಸ್ಕಾರಗಳು, ಕುಟುಂಬ ಪರಿಸರದಲ್ಲಿ, ಒಲಿದುಬಂದವಳು, ಶಿಷ್ಯರ ಬಳಗ, ಮುಂದಿನವರ ಬಗ್ಗೆ ಎಂಬ ಮಾತಿನ ಸಂಗ್ರಹಗಳಿವೆ. ಶಿವರಾಮ ಹೆಗಡೆಯವರು ತಮ್ಮ ಬಾಲ್ಯ ಯಕ್ಷಗಾನಕ್ಕೆ ಆಕರ್ಷಣೆಗೊಂಡ ಬಗೆ, ರಂಗಸ್ಥಳದಲ್ಲಿನ ನೆನಪುಗಳು, ಮೇಳದ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಶಿವರಾಮಹೆಗಡೆಯವರ ಬದುಕಿನ ಅನುಭವವನ್ನು ಕ್ರಮಬದ್ದವಾಗಿ ದಾಖಲಿಸಿ ಸಂಗ್ರಹಿಸಿದ್ದಲ್ಲದೆ, ನಿರೂಪಣೆಯ ಕ್ರಮವನ್ನು ಅನುಸರಿಸಿದ ವಿಧಾನ ಓದುಗರನ್ನು ಆಕರ್ಷಿಸುವಂತಿದೆ. ಯಕ್ಷಗಾನ ಸಾಹಿತ್ಯದಲ್ಲಿ ಈ ಕೊಡುಗೆ ಮೌಲಿಕವಾದುದಾಗಿದೆ.

೪.೫.೨. ಯಕ್ಷಗಾನ ಮತ್ತು ನಾನು

ಶೇಣಿಗೋಪಾಲಕೃಷ್ಣ ಭಟ್ಟರು ಆತ್ಮಕಥನ. ಯಕ್ಷಗಾನ ಮತ್ತು ನಾನು. ಯಕ್ಷಗಾನ ಸಾಹಿತ್ಯದಲ್ಲಿ ಮೌಲಿಕ ಕೃತಿ ಶೇಣಿ ಅರ್ಥಗಾರಿಕೆಯ ಶಿಖರ ಪ್ರಾಯ ಕಲಾವಿದರು. ಅವರ ಮಾತಿನ ವೈಖರಿಗೆ ತಲೆದೂಗದವರಿಲ್ಲ. ಹರಿದಾಸನಾಗಿ ಶಿಕ್ಷಕರಾಗಿದ್ದ ಶೇಣಿ ಯಕ್ಷರಂಗಕ್ಕೆ ಪ್ರವೇಶಿಸಿದ್ದು "ಹೊಸ ಬಯಕೆಯ ಒಕ್ಕಲು"ಎಂಬ ಲೇಖನದಲ್ಲಿ ಪ್ರಸ್ತುತ ಪಡಿಸಿದ್ದಾರೆ. ರಂಗನಟನಾಗಿ ಶೇಣಿ ಖಳಪಾತ್ರದಲ್ಲಿ ವಿಜೃಂಭಿಸಿದರು. ಪಾತ್ರಾಭಿವ್ಯಕ್ತಿಯಲ್ಲಿ ಶೇಣಿ ಪಾತ್ರದ ಅಂತರಂಗವನ್ನು ತೆರೆದಿಟ್ಟ ಕ್ಷಣಗಳನ್ನು ನಟನಾಗಿ ತೆರೆದಿಟ್ಟಿದ್ದಾರೆ. ಸಂಚಾಲಕರಾಗಿ "ಕೂಡ್ಲುಮೇಳ"ವನ್ನು ನಡೆಸಿದ ಪ್ರಯತ್ನಗಳನ್ನು ನಿವೇದಿಸಿದ್ದಾರೆ. ಅರ್ಥಧಾರಿಯಾಗಿ ಇದಿರು ಪಾತ್ರವನ್ನು ಸ್ವೀಕರಿಸಿದ ರೀತಿಗಳನ್ನು ಪ್ರಸ್ತುತ ಪಡಿಸಿದ್ದಾರೆ. ಶೇಣಿಯವರು ಕೃತಿಕಾರರಾಗಿ ರಂಗನಿರ್ದೇಶಕರಾಗಿ, ಪಾತ್ರದ ಉದಾತ್ತೀಕರಣಕ್ಕಾಗಿ ಶ್ರಮಿಸಿದ್ದು ಅವರ ಸೃಜನಶೀಲತೆ ಅನಾವರಣಗೊಂಡಿದ್ದು ಅವರ ಆತ್ಮಕಥನದಲ್ಲಿ ದಾಖಲಾಗಿದೆ.

ಶೇಣಿಯವರು ಮತ್ತು ಯಕ್ಷಗಾನ ಶೇಣಿಯವರ ಸೃಜನಶೀಲ ಬದುಕಿನ ಅಯಾಮಗಳಾಗಿವೆ. ಅವರ ಭಾಷ ಸಂಪತ್ತು, ಕಥನ ವಿಧಾನವನ್ನು ಆತ್ಮಕಥನದಲ್ಲೂ ಕಾಣಬಹುದು. ಘನೀಕೃತ ಅನುಭವವದ ಸಾರವೆ ತೆರೆದಿಟ್ಟ ಕೃತಿಯಿದಾಗಿದೆ.

ಓದುಗರನ್ನು ಶೇಣಿಮಾತಿನ ಮೋಡಿಗೆ ಒಳಗಾಗುವಂತೆ ಮಾತು ವಿಜೃಂಭಿಸುತ್ತದೆ. ವಾಚನದಲ್ಲೂ, ಕಥನದಲ್ಲೂ, ಶೇಣಿಮಾತಾಡಿದಂತೆ ಭಾಸವಾಗುವ ಮಾತಿನ ಲಿಖಿತ ರೂಪ ಆತ್ಮಕಥನದ ವಿಶಿಷ್ಟ ಅಭಿವ್ಯಕ್ತಿಯ ಕೃತಿಯಾಗಿದೆ.

೪.೫.೩. ನಿಮ್ಮ ಚಿಟ್ಟಾಣಿ

ಯಕ್ಷಗಾನ ಕಲಾವಿದ ಚಿಟ್ಟಾಣಿರಾಮಚಂದ್ರ ಹೆಗಡೆಯವರ ಆತ್ಮಕಥನವಾಗಿದೆ. ಇದನ್ನು ನಿರೂಪಿಸಿದವರು ಡಾ..ಜಿ.ಎಲ್.ಹೆಗಡೆಯವರು. ಯಲ್ಲಾಪುರ ಪ್ರಕಾಶನ ಈ ಕೃತಿಯನ್ನು ೨೦೦೪ ರಲ್ಲಿ ಪ್ರಕಟಿಸಿದೆ.

"ನನ್ನದು ಬರೆಯುವ ಕಥೆಯಲ್ಲ, ಒರೆಯುವ ಕಥೆ" ಎಂದು ಆತ್ಮಕಥನದ ಆರಂಭದಲ್ಲಿಯೆ ಓದುಗನನ್ನು ಸೆರೆಹಿಡಿಯುವ ಶೈಲಿಯಲ್ಲಿ ಕಥನ ಮುಂದುವರಿಯುತ್ತದೆ. ಚಿಟ್ಟಾಣಿಯ ಬಾಲ್ಯ, ಯಕ್ಷಗಾನದ ಸೆಳೆತ, ಪ್ರಥಮ ಪಾತ್ರದ ಪರೀಕ್ಷೆ, ವಿವಿಧಮೇಳಗಳಲ್ಲಿ ಪಾತ್ರನಿರ್ವಹಣೆ, ಸಂಘಟಕರು ಅಭಿಮಾನಿಗಳೊಂದಿಗಿನ ಸಂಬಂಧ, ವಿವಿಧ ನಟರೊಂದಿಗೆ ಒಡನಾಟ, ಕೌಟುಂಬಿಕ ಬದುಕಿನ ವಾಸ್ತವಗಳನ್ನು ಈ ಕಥನ ಬರೆಯುತ್ತದೆ.

ಹವ್ಯಕ ಆಡುಭಾಷೆಯಲ್ಲಿ ಚಿಟ್ಟಾಣಿಯವರ ವಾಕ್ಯ ಪ್ರಯೋಗವನ್ನೆ ಬಳಸಿ ಸಂಯೋಜಿಸಿದ್ದು ಕೃತಿಯ ವಿಶೇಷವಾಗಿದೆ. ಕೃತಿಯ ತುಂಬೆಲ್ಲ ನೈಜಾಭಿವ್ಯಕ್ತಿ ಅಂತರಂಗವನ್ನು ತೆರೆದಿಟ್ಟ ಬಗ್ಗೆ ಮನೋಜ್ಞವಾಗಿ ನಿರೂಪಿಸಲ್ಪಟ್ಟಿದೆ. ಚಿಟ್ಟಾಣಿಯ ಅಂತರಂಗವನ್ನು ಓದುವ ಓದುಗರಿಗೆ ಅಲ್ಲಲ್ಲಿ ಅವರ ಪಾತ್ರಕಲ್ಪನೆ ಮಾಡಿದಂತೆ ಅವರ ವೇಷದ ಭಂಗಿಗಳ ಆಕರ್ಷಕ ಚಿತ್ರವಿದೆ. "ನಿಮ್ಮ ಚಿಟ್ಟಾಣಿ" ತಲೆಬರಹವೆ ಆತ್ಮಕಥನದ ಅಭಿವ್ಯಕ್ತಿಗೆ ಮಾದರಿಯಾಗಿದೆ. ಕಲಾವಿದನ ಅಂತರಂಗವನ್ನು ಶೋಧಿಸಿದ ಈ ಕೃತಿ ಅಪರೂಪದ ಅಭಿವ್ಯಕ್ತಿ ಶ್ಯಲಿಯ ಕೃತಿಯಾಗಿದೆ.

೪.೫.೪. ಯಕ್ಷ ವನವಿಹಾರ

ಕಡತೋಕಾ ಮಂಜುನಾಥ ಭಾಗವತರ ಆತ್ಮಕಥನ ಯಕ್ಷವನ ವಿಹಾರವನ್ನು ನಿರೂಪಿಸಿದವರು ಕಡತೋಕಾ ಗೋಪಾಲಕೃಷ್ಣ ಭಾಗವತರು "ಯಕ್ಷರಂಗ " ಹಳದಿಪುರ ಈ ಕೃತಿಯನ್ನು ಪ್ರಕಟಿಸಿದೆ. 2009ರಲ್ಲಿ ಯಕ್ಷವನವಿಹಾರ ಪ್ರಕಟಗೊಂಡಿದೆ.

ಕಂಚಿನ ಕಂಠದ ಭಾಗವತರೆಂದು ಪ್ರಸಿದ್ಧರಾದ ಕಡಾತೋಕಾಮಂಜುನಾಥಭಾಗವತರು ಭಾಗವತಿಕೆಯನ್ನು ವಂಶಪಾರಂಪರ್ಯವಾಗಿ ಮುನ್ನಡೆಸಿದವರು. "ತಂದೆನಡೆದ ದಾರಿಯಲ್ಲಿ" "ಕಲಿಸುವ ಕಾಯಕ" ಪರಮಯ್ಯ ಹಾಸ್ಯಗಾರರ ಗರಡಿಯಲ್ಲಿ, ಕನ್ನಡಜಾಣನ ಇನ್ನೊಂದು ಸಾಹಸ, ಮೂರೂರು ಮೇಳದಲ್ಲಿ ಜನ್ಮತಳೆದ ಕಾಳಿದಾಸ, ತೆಂಕುತಿಟ್ಟಿನ ಹಾದಿಯಲ್ಲಿ ,ಮಂಜುನಾಥನ ಸೇವೆಯಲ್ಲಿ, ಮಳೆಗಾಲದ ನೆನಪುಗಳು, ನಾನು ಮತ್ತು ನನ್ನವರು ಅಂತಿಮ ಅವಲೋಕನ, ಇವು ಅವರ ಅನುಭವದ ನೆನಪಿನ ಕಥನವಾಗಿದೆ.

ತನ್ನ ಬಾಲ್ಯದಿಂದ ಆರಂಭಿಸಿ ವೃದ್ಯಾಪದವರೆಗೆ ಯಕ್ಷಗಾನ ರಂಗದ ಆಗುಹೋಗುಗಳನ್ನು ದಾಖಲಿಸುತ್ತ ತನ್ನ ಬದುಕಿನ ಅಪರೂಪದ ಕ್ಷಣಗಳನ್ನು ಅನಾವರಣಗೊಳಿಸಿದ್ದಾರೆ. ಯಕ್ಷಗಾನ ಇತಿಹಾಸ ಮತ್ತು ಕಲೆಯ ವಿಕಾಸದ ಹಾದಿಯಲ್ಲೂ ಬೆಳಕು ಚೆಲ್ಲುವ ಕೃತಿ ಇದಾಗಿದೆ.

೪.೫.೫. ನೆಬ್ಬೂರು ನಿನಾದ

ನೆಬ್ಬೂರು ನಾರಾಯಣ ಭಾಗವತರು ಬಡಗು ತಿಟ್ಟಿನ ಪ್ರಸಿದ್ದ ಭಾಗವತರು. ಅವರ ಕಲಾಜೀವನದ ಅನುಭವಗಳು ಯಕ್ಷಗಾನದ ಕಲಾತ್ಮಕ ವಿಕಾಸದ ಗುರುತುಗಳು ಹೌದು. ನೆಬ್ಬೂರು ನಿನಾದ ದಿನಾಂಕ 3–12–2007ರಂದು ಶಿರಸಿಯಲ್ಲಿ ಲೋಕಾರ್ಪಣಗೊಂಡಿತು. ಡಾ.ಜಿ.ಎಸ್‌ಭಟ್ ಸಾಗರ ಇವರು ನೆಬ್ಬೂರು ನಾರಾಯಣ ಭಾಗವತರ ಆತ್ಮಕಥನವನ್ನು ದಾಖಲಿಸಿರುತ್ತಾರೆ. ಲೇಖಕರು "ನಿರೂಪಣೆಯ ನಿನಾದ" ಬರಹದಲ್ಲಿ "ಅಸ್ತಿತ್ವದ ಹೋರಾಟ, ಪ್ರತಿಭೆ ಮತ್ತು ದಾರಿದ್ರ್ಯದ ಸಂಘರ್ಷ,ಹುಟ್ಟಿನ ಜಾತಿಯ,

ಬಡತನ ಅಪಮಾನಗಳು ಮುಂತಾದ ವಿಷಯಗಳು ಕೇಂದ್ರಗಳುಳ್ಳ ಆತ್ಮಚರಿತ್ರೆಗಳಿವೆ. ಆದರೆ ನೆಬ್ಬೂರರ ಆತ್ಮಚರಿತ್ರೆಯೆಂದರೆ ಸರಳ ಸಜ್ಜನಿಕೆಯ ವ್ಯಕ್ತಿಯ ವ್ಯಕ್ತಿತ್ವದ ಕಥನವಾಗಿದೆ ಎಂದಿದ್ದಾರೆ. ನೆಬ್ಬೂರು ಭಾಗವತರ ಕೆರೆಮನೆ ಮೇಳದ ಅಧಿಕೃತ ಭಾಗವತರು. ಇಂದಿಗೂ ಅವರ ಅದೇ ಮೇಳದ ಭಾಗವತರೆ ಆಗಿರುತ್ತಾರೆ. ದೀರ್ಘಕಾಲದ ಕಲಾಜೀವನವನ್ನು ಒಂದು ಮೇಳದೊಂದಿಗೆ ನಿರ್ವಹಿಸಿದ ನೆಬ್ಬೂರು "ನಾನೊಬ್ಬ ಮನುಷ್ಯ ಅಂತ ಕಂಡುದಕ್ಕೆ ಕೆರೆಮನೆಯೆ ಕಾರಣ" ಎಂದು ಕೆರೆಮನೆಯ ಕುಂಟುಂಬವನ್ನು ಸ್ಮರಿಸಿದ್ದಾರೆ. ಭಾಗವತಿಕೆಯ ಅನುಭವಗಳು ಹಾಗೂ ಸಂಘಟಣೆಯ ಪ್ರವಾಸದ ಅನುಭವಗಳನ್ನು ಪ್ರಾಮಾಣಿಕವಾಗಿ ದಾಖಲಿಸಿದ್ದಾರೆ. "ನೆಬ್ಬೂರು ನಿನಾದ"ದ ಪ್ರವಾಸದ ಪ್ರಸಂಗ ಯಕ್ಷವಲಯದ ಅಭಿಮಾನಿಗಳಿಂದ ತೀವ್ರ ಚರ್ಚೆಗೂ ಎಡೆಮಾಡಿಕೊಟ್ಟಿತು. ಈ ಕೃತಿ ಕಲಾವಿದನೊಬ್ಬನ ಜೀವನವನ್ನು ಯಶಸ್ವಿಯಾಗಿ ಅನಾವರಣಗೊಳಿಸಿದೆ.

೪.೫.೬. ಗೋಡೆ ಚಿತ್ತಾರ

ಗೋಡೆ ನಾರಾಯಣ ಹೆಗಡೆಯವರ ಆತ್ಮಕಥನವನ್ನು ಶ್ರೀ.ಎಂ.ಕೆ. ಭಾಸ್ಕರ್‌ರಾವ್ ನಿರೂಪಿಸಿರುತ್ತಾರೆ. ಪ್ರಮಾ ಪ್ರಕಶಾನ ಬೆಂಗಳೂರು ಕೃತಿಯನ್ನು ಪ್ರಕಟಗೊಳಿಸಿದೆ.

ಗೋಡೆನಾರಾಯಣ ಹಗಡೆಯವರ ಬಾಲ್ಯ, ನಾಟಕದ ನಟನಾಗಿ ರಂಗಪ್ರವೇಶಿಸಿದ್ದು, ಸ್ತ್ರೀವೇಷಧಾರಿಯಾಗಿ. ಗೋಡೆನಾರಾಯಣ ಹಗಡೆ ಯಕ್ಷಗಾನರಂಗಕ್ಕೆ ಕಾಲಿಟ್ಟರು. ಬದುಕಿನ ಹೋರಾಟದಲ್ಲಿ ಅಂಗಡಿಕಾರ, ಕೃಷಿಕ, ಹೋಟೇಲ್ ಮಾಲಿಕನಾಗಿ ಏಳುಬೀಳುಗಳನ್ನು ಕಂಡವರು. ನಟನಾಗಿಮೇಳದ ಪ್ರಮುಖ ವೇಷಧಾರಿಯಾಗಿ ಯಕ್ಷಗಾನದಲ್ಲಿ ಮಿನಿಗುತ್ತಿರುವ ಗೋಡೆಯವರ ಬಣ್ಣದ ಬದುಕಿನ ಅನುಭವವಗಳ ಕಥನವನ್ನು ದಾಖಲಿಸಲಾಗಿದೆ.

ತಮ್ಮ ವೃತ್ತಿ ಬದುಕಿನಲ್ಲಿ ಗೋಡೆನಾರಾಯಣ ಹಗಡೆ ಯಕ್ಷಗಾನದ ದಿಗ್ಗಜರೊಂದಿಗೆ ಪಾತ್ರಮಾಡಿದರು. ಅವರ ಕೌರವ, ಋತುಪರ್ಣ ಬ್ರಹ್ಮ, ವಿಶ್ವಾಮಿತ್ರ, ಸಹಸ್ರಾನೀಕ ಮುಂತಾದ ಪಾತ್ರಗಳು ಪ್ರಸಿದ್ಧಿಯನ್ನು ತಂದುಕೊಟ್ಟಿದೆ.

ಗೋಡೆಯವರ ಆತ್ಮಕಥನದಲ್ಲಿ ಕಲಾವಿದನ ಬದುಕಿನ ಅನುಭವಗಳನ್ನು ಅಲ್ಲದೆ ಸಮಕಾಲೀನ ಯಕ್ಷಗಾನ ರಂಗಭೂಮಿಯ ತಲ್ಲಣಗಳನ್ನು ತೆರೆದಿಟ್ಟಿದ್ದಾರೆ. ಇವರು ೯೦ಕ್ಕೂ ಹೆಚ್ಚು ಗದಾಯುದ್ಧ ಪ್ರಸಂಗದ ಆಟ ನಡೆದಿದ್ದನ್ನು ನೆನಪಿಸುತ್ತಾರೆ. ಜೀವಿತಾವಧಿಯಲ್ಲಿ ೫೦೦ ಕ್ಕೂ ಹೆಚ್ಚು ಸಲ ಕೌರವನ ವೇಷಮಾಡಿದ್ದು ದಾಖಲಾರ್ಹವಾಗಿದೆ.

೪.೫.೭. ಕುರಿಯ ವಿಠಲ್‌ಶಾಸ್ತ್ರೀ

ಪಿ.ಗೋಪಾಲಭಟ್ಟ್ ಎಡನೀರು ಕುರಿಯವಿಠಲ್‌ಶಾಸ್ತ್ರೀಯವರ ಆತ್ಮಚರಿತ್ರೆಯನ್ನು ದಾಖಲಿಸಿದ್ದಾರೆ. ತೆಂಕುತಿಟ್ಟಿನ ಯಕ್ಷಗಾನದ ವೇರುನಟ ಕುರಿಯವಿಠಲ್‌ಶಾಸ್ತ್ರೀಯವರು ಬಡಗುಟತಿಟ್ಟಿನಲ್ಲೂ ತಮ್ಮ ಪ್ರಭಾವವನ್ನು ಬೀರಿದ್ದರು. ಇವರ ಭಸ್ಮಾಸುರ, ಈಶ್ವರ, ಮುಂತಾದ ಪಾತ್ರಗಳಿಗೆ ಅವರದ್ದೆ ಆದ ಪಾತ್ರಸತ್ವವನ್ನು ನೀಡಿದರು. ಅಭಿನಯಕ್ಕೆ ಕುರಿಯವಿಠಲ್‌ಶಾಸ್ತ್ರೀಗಳು ಹೆಸರಾಗಿದ್ದರು. ನಾಟಕೀಯ ಅಭಿನಯಗಳ ಮೂಲಕ ಪಾತ್ರವನ್ನು ಜೀವಂತಗೊಳಿಸುವ ಪ್ರತಿಭೆ ಅವರಲ್ಲಿತ್ತು. ಧರ್ಮಸ್ಥಳ ಮೇಳದ

ಸಂಚಾಲಕನಾಗಿ ದೀರ್ಘಕಾಲದ ಯಕ್ಷಗಾನ ಸೇವೆಯಲ್ಲಿ ತೊಡಗಿದ ಅನುಭವನ್ನು ಆತ್ಮಕಥನದಲ್ಲಿ ಬಿಂಬಿಸಿದ್ದಾರೆ.

೪.೫.೮. ಹಾಸ್ಯಗಾರ ಅಂತರಂಗ

ಪೆರವೋಡಿ ನಾರಾಯಣ ಭಟ್ಟರು ತೆಂಕುತಿಟ್ಟಿನ ಪ್ರಸಿದ್ಧ ಹಾಸ್ಯಕಲಾವಿದರು. ಬಾಲ್ಯದಲ್ಲಿಯೇ ಯಕ್ಷಗಾನದ ಗೀಳಿನಿಂದ ಸೆಳೆಯಲ್ಪಟ್ಟು ಹಾಸ್ಯಗಾರನಾಗಿ ತೆಂಕುತಿಟ್ಟಿನ ಮೇಳದಲ್ಲಿ ಪಾಲ್ಗೊಂಡು ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲೂ ಹೆಸರು ಮಾಡಿದರು. ಮೇಳಧ ಸಂಘಟಕರಾಗಿಯೂ ಮೇಳವನ್ನು ನಡೆಸಿದರು. ಸಹಜಾಭಿನಯನದ ಇವರ ಹಾಸ್ಯ ಮಾರ್ಮಿಕವಾದ ಪಾತ್ರಪೋಷಣೆ ಪ್ರೇಕ್ಷಕರನ್ನು ಆಕರ್ಷಿಸಿತ್ತು. ಇವರ ಕಲಾಜೀವನದ ಅನುಭವವನ್ನು ಅಂತರಂಗದಲ್ಲಿನ ಅನಿಸಿಕೆಗಳನ್ನು ತೆರೆದಿಟ್ಟ ಆತ್ಮಕಥನ ಕೂಡ ಮಾರ್ಮಿಕವಾಗಿದೆ.

೪.೫.೯. ಯಕ್ಷೋಪಾಸನೆ

ಕೆ. ಗೋವಿಂದಭಟ್ಟರು ತೆಂಕುತಿಟ್ಟಿನ ಯಕ್ಷಗಾನದ ಪ್ರಸಿದ್ಧ ಕಲಾವಿದರು. ವಿಶಿಷ್ಟ ನೃತ್ಯ, ಮಾತುಗಾರಿಕೆಯಿಂದ ಪಾತ್ರವನ್ನು ನಿರ್ವಹಿಸಿ ಅಪಾರ ಜನಮೆಚ್ಚುಗೆಗಳಿಸಿದವರು. ವೇಷಗಾರಿಕೆ, ಅರ್ಥಗಾರಿಕೆ ಎರಡರಲ್ಲೂ ಅತಿಪ್ರಸಿದ್ಧರು ಇವರು ನಿರ್ವಹಿಸಿದ ಮಾಗಧ, ವಾಲಿ, ಇಂದ್ರ, ಹಿಡಿಂಬ, ಜಾಂಬವಂತ, ಋತುಪರ್ಣ ಪಾತ್ರಾಭಿನಯದ ವಿಶಿಷ್ಟ ಸಾಧನೆಗಳನ್ನು ದಾಖಲಿಸಿದೆ. ಯಕ್ಷೋಪಾಸನೆ ತೆಂಕುತಿಟ್ಟಿನ ವಿಶಿಷ್ಟತೆಯನ್ನು ಮೈಗೂಡಿಸಿಕೊಂಡ ಪ್ರಮುಖ ಕೃತಿಯಾಗಿದೆ.

೪.೬. ಸಂಸ್ಮರಣ ಗ್ರಂಥಗಳು

"ಸಂಸ್ಮರಣೆ" ಕಲಾವಿದನ, ಸಂಘಟಕನ, ಸಂಘಟನೆಯ ಚರಿತ್ರೆಯನ್ನು ದಾಖಲಿಸುವ ಮತ್ತು ತತ್ಕಾಲೀನ ಸಮಾಜಕ್ಕೆ ಪ್ರಭಾವ ಬೀರಿದ ಅಂಶಗಳನ್ನು ದಾಖಲಿಸುವ ಕೃತಿಯಾಗಿದೆ. ಯಕ್ಷಗಾನ ಕಲಾವಿದರ ಕಲಾಸೇವೆಯ "ನೆನಪಿನಲ್ಲಿ" ಸಂಸ್ಮರಣೆಯ ಕೃತಿಗಳು ಕೇವಲ ಕಲಾವಿದರ ಚರಿತ್ರೆಯಾಗಿರದೆ ಕಲಾವಿದನ ಕೊಡುಗೆಗಳ ವಿವಿಧ ಮುಖವನ್ನು ಪರಿಚಯಿಸುವ ಕೃತಿಯಾಗಿರುತ್ತದೆ. ಇದು ಕೂಡ ಒಂದು ವಿಭಿನ್ನ ಪ್ರಕಾರದ ಸಾಹಿತ್ಯ ಕೃತಿಯೆ ಆಗಿದೆ.

ಯಕ್ಷಗಾನ ಕಲಾವಿದರ ಸಂಸ್ಮರಣ ಕೃತಿಗಳಲ್ಲಿ ಯಕ್ಷಗಾನದ ವಿವೇಚನೆ ರೂಢಿಗತವಾಗಿ ಬಂದಿದೆ. ಇದರಿಂದ ಕಲಾವಿದನ ಸಮಕಾಲೀನ ಬದುಕಿನ ಕಲಾ ಪೋಷಣೆ, ಇತರ ಕಲಾವಿದರ ಕೊಡುಗೆ, ಕಲೆಯ ವಿಕಾಸದಲ್ಲಿ ಕಲಾವಿದನ ವೈಯಕ್ತಿಕ ಕಾಳಜಿಗಳು ಭಿನ್ನಭಿನ್ನ ಅಭಿವ್ಯಕ್ತಿಗಳಲ್ಲಿ ವ್ಯಕ್ತಗೊಳ್ಳುತ್ತದೆ. ಕಲಾವಿದನೊಬ್ಬನ ಕೊಡುಗೆಗಳ ವಿಮರ್ಶೆ ಕಲೆಯ ವಿಮರ್ಶೆಯೂ ಆಗಿರುವುದರಿಂದ ಈ ಕೃತಿಗಳಿಗೆ ಶೈಕ್ಷಣಿಕ ಮೌಲ್ಯ ಕಲಾಮೌಲ್ಯಗಳಿರುತ್ತದೆ.

ದೇವ-ರಂಗ : ಶ್ರೀದೇವರು ಹೆಗಡೆ ಸ್ಮಾರಕ ಪ್ರತಿಷ್ಠಾನ, ಮೂರೂರು ಕುಮಟಾ ಇವರು ಯಕ್ಷಗಾನದ ಪ್ರಸಿದ್ಧ ನಟ ದೇವರು ಹೆಗಡೆಯವರ ಜೀವನ ಸಾಧನೆಗಳನ್ನು ದೇವ-ರಂಗದಲ್ಲಿ ಕ್ರೋಢೀಕರಿಸಿದ್ದಾರೆ.

ದಿ। ಪಿ.ವಿ. ಹಾಸ್ಯಗಾರರು ಈ ಕೃತಿಯ ಗೌರವ ಸಂಪಾದಕರು. ಶ್ರೀ ಮಹೇಶ ಅಡಕೋಳಿ ಕೃತಿಯ ಸಂಪಾದಕರಾಗಿದ್ದಾರೆ.

ದೇವ-ರಂಗದಲ್ಲಿ ದೇವರು ಹೆಗಡೆಯವರ ವಂಶವೃಕ್ಷ, ಜೀವನ ಪರಿಚಯ, ಕೃತಿ ಪರಿಚಯ, ಅವರ ಪಾತ್ರಾಭಿನಯಗಳನ್ನು ಪರಿಚಯಿಸಲಾಗಿದೆ. ದೇವರು ಹೆಗಡೆ ರಂಗದಲ್ಲಿ ಆದರ್ಶ ಕಲಾವಿದರಾಗಿದ್ದಂತೆ ಜೀವನ ರಂಗದಲ್ಲೂ ಆದರ್ಶವೆ ಆಗಿದ್ದರೆಂಬುದನ್ನು ಕೃತಿಯಲ್ಲಿ ಚಿತ್ರಿಸಲಾಗಿದೆ.

ಕೃತಿಯಲ್ಲಿ ಕಡತೋಕಾ ಮಂಜುನಾಥ ಭಾಗವತ, ಬಲಿಪ ನಾರಾಯಣ ಭಾಗವತ; ಕೃಷ್ಣಯಾಜಿ ಇಡಗುಂಜಿ, ಡಾ. ಎಲ್.ಆರ್. ಹೆಗಡೆ, ಟಿ.ಎಂ. ಸುಬ್ಬರಾಯರ ಲೇಖನಗಳಿವೆ.

ದೇವರು ಹೆಗಡೆ ಪ್ರಬುದ್ಧ ಕಲಾವಿದರು. ತಮ್ಮ ಪ್ರಬುದ್ಧ ಅಭಿನಯದಿಂದ ಜನರನ್ನು ಸೆಳೆದರು. ಅವರ ಪಾತ್ರಾವೇಷವೆ ಪಾತ್ರಾಭಿನಯದ ಯಶಸ್ಸಿನಗುಟ್ಟು, ಶರೀರ, ಶಾರೀರಗಳೆರಡು ಅಭಿನಯಕ್ಕೆ ಪೂರಕವಾಗಿದ್ದವು. ದುಷ್ಟಬುದ್ಧಿ, ಕಂಸ, ಹಿರಣ್ಯಕಶ್ಯಪು ಮುಂತಾದ ಪಾತ್ರಗಳ ಮುಖದ ಅಭಿನಯವನ್ನು ಕಂಡವರು ಅವರ ಕಲಾಭಿಜ್ಞತೆಯನ್ನು ಕೊಂಡಾಡಿದ್ದಾರೆ.

ಪಾತ್ರದಲ್ಲಿ ಲೀನವಾಗಿ ಪಾತ್ರಪ್ರವೇಶ ಮಾಡುವ ಅವರ ಆವೇಶ ಇಡಿ ರಂಗವನ್ನೆ ಆವರಿಸುತ್ತಿತ್ತು. ಅವರ ನಟನೆ ಕೆಲವೊಮ್ಮೆ ನೈಜವೂ ಆಗಿದ್ದಿದೆ. ಉತ್ತಮ ಮಾತುಗಾರರೂ ಆಗಿದ್ದರು. ಕೆರೆಮನೆ ಶಿವರಾಮ ಹೆಗಡೆ ಮತ್ತು ದೇವರು ಹೆಗಡೆಯವರ ಜೋಡಿ ಪಾತ್ರ ಪ್ರೇಕ್ಷಕರಿಗೆ ರಸದೌತಣವಾಗಿತ್ತು.

ಸಂಘಟಕರಾಗಿ ಮೇಳವನ್ನು ಕಟ್ಟಿದರು. ಪ್ರಸಂಗಕರ್ತರಾದರು. ತಾವೆ ಯಕ್ಷಗಾನ ಶಾಲೆಯನ್ನು ತೆರೆದರು. ಅವರ ಕಲಾಕೊಡುಗೆ ಅಪಾರವಾದುದು. ಯಕ್ಷಗಾನರಂಗದ ಅಪರೂಪದ ಕಲಾವಿದ ದೇವರು ಹೆಗಡೆಯನ್ನು ಸ್ಮರಿಸುತ್ತಾ ಕೃತಿಯಲ್ಲಿ ಸಮಕಾಲೀನ ಕಲಾವಿದರ ರಂಗನಿರ್ವಹಣೆಯನ್ನೂ ನೀಡಲಾಗಿದೆ. ಇದರಿಂದ ಈ ಕೃತಿ ಮಹತ್ವದ್ದಾಗಿದೆ.

೪.೬.೧. ಸ್ವರ್ಣಕಮಲ : ಮುಳಿಯ ಮಹಾಬಲಭಟ್ಟರು ಸಂಪಾದಕರಾಗಿ ಪ್ರೊ. ಎಂ.ಆರ್. ಶಾಸ್ತ್ರಿಯವರ ಗೌರವ ಸಂಪಾದಕರಾಗಿ ಅರ್ಕುಳ ಸುಬ್ರಾಯಾಚಾರ್ಯರ ಸಂಸ್ಮರಣ ಗ್ರಂಥವನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ತಾಳಮದ್ದಳೆ ವಿವೇಚನೆಗೆ ಸಂಬಂಧಿಸಿದ ಲೇಖನಗಳು ಅಧ್ಯಯನಕ್ಕೆ ಆಕರ ಗ್ರಂಥವಾಗಿದೆ. ಜೀವನಸಾಧನೆ, ತಾಳಮದ್ದಳೆಯ ಇತಿಹಾಸ ಸ್ವರೂಪ ಎಂಬ ಎರಡು ಭಾಗದಲ್ಲಿ ಕಲಾಕೊಡುಗೆಗಳನ್ನು ಕುರಿತು ವಿವೇಚಿಸಲಾಗಿದೆ.

೪.೬.೨. ಅನಂತ ಸ್ಮೃತಿ : ಕೊಳಗಿ ಅನಂತ ಹೆಗಡೆ ಬಡಗುತಿಟ್ಟಿನ ಪ್ರಮುಖ ಕಲಾವಿದರಾಗಿದ್ದರು. ಅವರ ಕಲಾಬದುಕಿನ ಸಾಧನೆಗಳನ್ನು ನೆನಪಿಸುವ ಪ್ರಯತ್ನ ಮಾಡಿದ ಮಹಾಗಣಪತಿ ಯಕ್ಷಗಾನ ಮಂಡಳಿ ಬೆಳೆಯೂರು ಈ ಕೃತಿಯನ್ನು ಹೊರತಂದಿದೆ.

ಕೊಳಗಿ ಅನಂತ ಹೆಗಡೆ ೧೯೩೭ರಲ್ಲಿ ಸಿದ್ಧಾಪುರ ತಾಲ್ಲೂಕಿನ ಕೊಳಗಿಯಲ್ಲಿ ಜನಿಸಿದರು. ಬಾಲ್ಯದಲ್ಲಿ ಕೌಟುಂಬಿಕ ಸಮಸ್ಯೆಗಳಿಂದ ಕೂಡಿದ ಬಡತನವನ್ನು ಅನುಭವಿಸಿದರು. ಭಾಗವತಿಕೆ

ಅಭ್ಯಾಸವನ್ನು ಮಾಡಿದರು. ಸಿದ್ಧಿವಿನಾಯಕ ಯಕ್ಷಗಾನ ಸಂಘ ಎಂಬ ಸಂಸ್ಥೆಯನ್ನು ೧೯೫೪ರಲ್ಲಿ ಕಟ್ಟಿದರು. ಅಮೃತೇಶ್ವರಿ, ಸಾಲಿಗ್ರಾಮ, ಪಂಚಲಿಂಗೇಶ್ವರ ಬಚ್ಚಗಾರು ಮೇಳಗಳಲ್ಲಿ ದುಡಿದರು. ಪಟ್ಟಾಭಿಷೇಕದ ದಶರಥನಾಗಿ ಮನೋಜ್ಞ ಅಭಿನಯದಿಂದ ಇಡಿ ಪ್ರೇಕ್ಷಕ ಸಮೂಹವನ್ನೆ ದುಃಖದ ಮಡುವಿನಲ್ಲಿ ತೇಲಿಸುವಷ್ಟು ಮನೋಜ್ಞ ಅಭಿನಯ, ಮಾತು ಕೊಳಗಿಯವರಿಗೆ ಸಿದ್ಧಿಸಿತ್ತು.

ಪ್ರಾಮಾಣಿಕ, ಸಜ್ಜನಶೀಲ ಕಲಾವಿದನಾಗಿ ರಂಗದಲ್ಲೂ ನೇಪಥ್ಯದಲ್ಲೂ ಹೆಸರಾದ ಕೊಳಗಿಯವರ ಸ್ಮರಣೆ ಅರ್ಥಪೂರ್ಣವಾದುದಾಗಿದೆ.

೪.೬.೩. ಯಕ್ಷಭೀಮನ ನೂರು ಹೆಜ್ಜೆಗಳು : ಮಾಣಂಗಾಯಿ ಕೃಷ್ಣಭಟ್ಟರ ವೇಷಗಾರಿಕೆಯ ಕಲಾ ಕೊಡುಗೆಗಳನ್ನು ಆಧರಿಸಿ ಸಂಸ್ಮರಣ ಗ್ರಂಥವನ್ನು ಡಾ. ಕೃಷ್ಣಮೂರ್ತಿ, ಪಂಜ, ಸೂಳ್ಯ ಇವರು ಪ್ರಕಟಿಸಿದ್ದಾರೆ. ಶ್ರೀಪಾದೇಕಲ್ಲು ವಿಷ್ಣುಭಟ್ಟರು ಮತ್ತು ರಾಜಗೋಪಾಲ ಕನ್ಯಾನ ಕೃತಿಯನ್ನು ಸಂಪಾದಿಸಿದ್ದಾರೆ.

೪.೬.೪. ಕೃಷ್ಣ ಸ್ಮರಣ : ದಿ| ಕೆರೆಕೈ ಕೃಷ್ಣಭಟ್ಟರ ಸಂಸ್ಮರಣ ಗ್ರಂಥವನ್ನು ಶ್ರೀ ಎಸ್.ಪಿ. ಶೆಟ್ಟಿಯವರು ಸಂಪಾದಿಸಿದ್ದಾರೆ. ಈ ಕೃತಿ ಯಕ್ಷಗಾನದ ಅರ್ಥಗಾರಿಕೆಯ ಕುರಿತಾದ ಮೌಲಿಕ ಲೇಖನಗಳನ್ನು ಒಳಗೊಂಡಿದೆ. ಕೂರ್ಗವೆಂಕಟೇಶ ಉಪಾಧ್ಯ, ಕಬ್ಬಿನಾಲೆ ವಸಂತ ಭಾರದ್ವಾಜ, ಕೆ.ಎಂ. ರಾಘವ ನಂಬಿಯಾರ್, ಲಕ್ಷ್ಮೀಶ ತೋಳ್ಪಾಡಿ, ಎಂ. ಪ್ರಭಾಕರ ಜೋಶಿ, ಕಾಶ್ಯಪರ್ಣಕುಟಿ, ದಿ| ತೆಕ್ಕಟ್ಟೆ ಆನಂದ ಮಾಸ್ತರ, ದಿ| ಕೃಷ್ಣ ಗಣಪತಿ ಭಟ್ಟ ಇವರೆಲ್ಲರ ಲೇಖನಗಳಲ್ಲಿ ತಾಳಮದ್ದಲೆಯ ಕುರಿತು ಮಹತ್ವದ ವಿಷಯ ಚರ್ಚಿತವಾಗಿದೆ. ಕೆರೆಕೈ ಕೃಷ್ಣಭಟ್ಟರ ಕುರಿತು ಅನೇಕರು ಅವರ ಮಾತುಗಾರಿಕೆಯ ವಿಧಾನವನ್ನು ವಿಶ್ಲೇಷಿಸಿದ್ದಾರೆ. ಇಡೀ ಪುಸ್ತಕವೇ ತಾಳಮದ್ದಳೆ ಆಸಕ್ತರಿಗೆ ಪ್ರೇರಣಾದಾಯಕವಾಗಿದೆ. ಇದೊಂದು ಮೌಲಿಕ ಕೃತಿ.

೪.೬.೫. ಯಕ್ಷಗಾನ ಅನುಭವಬಿಂದು : ಶ್ರೀ ಅಮಚಿ ಸುಬ್ರಾಯರು ದೊಡ್ಡಬಾಳೆ ಇವರು ಶ್ರೀ ಕೆ.ಕೆ. ಮಧ್ಯಸ್ಥರ ಸಹಕಾರದೊಂದಿಗೆ ಈ ಕೃತಿಯನ್ನು ಸಾಗರದ ಮಹಾಗಣಪತಿ ಯಕ್ಷಗಾನ ಕಲಾಸಂಘ ದೊಡ್ಡಬಾಳೆ ಈ ಸಂಘಟನೆಯ ಬೆಳ್ಳಿಹಬ್ಬದ ಸ್ಮರಣ ಸಂಚಿಕೆಯಾಗಿ ಹೊರತಂದಿದ್ದಾರೆ. ಕೃತಿಯಲ್ಲಿ ಸಂಘಟಣೆಯೊಂದು ನಡೆದು ಬಂದ ದಾರಿಯನ್ನು ಗುರುತಿಸಿದ್ದಾರೆ. ಯಕ್ಷಗಾನದ ಸ್ವರೂಪ ಧಾರ್ಮಿಕ ಹಿನ್ನೆಲೆ, ತಾಳಮದ್ದಳೆಯ ಕುರಿತು ಕೃತಿಯಲ್ಲಿ ವಿವೇಚಿಸಿದ್ದಾರೆ. ಪುಸ್ತಕದಲ್ಲಿ ತಾಳಮದ್ದಲೆಯಲ್ಲಿ ಶ್ರೇಷ್ಠ ಕಲಾವಿದರು ಆಡಿದ ಮಾತನ್ನು ದಾಖಲಿಸಿದ್ದಾರೆ.

೪.೭. ಅಭಿನಂದನಾ ಗ್ರಂಥಗಳು :

ಯಕ್ಷಗಾನ ಸಾಹಿತ್ಯದಲ್ಲಿ ಅಭಿನಂದನಾ ಗ್ರಂಥಗಳು ಕಲಾವಿದನ ಕಲಾಸೇವೆಯನ್ನು ಮನ್ನಿಸಿ ವಿವಿಧ ವ್ಯಕ್ತಿಗಳು ಕಲಾವಿದನ ಕುರಿತು ವಿವರಿಸಿದ ವಿಚಾರಗಳನ್ನು ದಾಖಲಿಸಿ ಕಲಾವಿದನ ಕಲಾ ಜೀವನವನ್ನು ಕುರಿತು ಕೃತಜ್ಞತೆಯನ್ನು ಸೂಚಿಸುವ ಕೃತಿಗಳಾಗಿವೆ. ಅಭಿನಂದನ ಗ್ರಂಥಗಳು ಸಾಮಾನ್ಯವಾಗಿ ಕಲಾಜೀವನದ ಸಾರ್ಥಕ ಕ್ಷಣಗಳಲ್ಲಿ ಕಲಾವಿದನ ಬದುಕಿನ ಪ್ರಮುಖ ಜೀವನಘಟ್ಟದಲ್ಲಿ ಸಮರ್ಪಿತಗೊಂಡಿವೆ. ಇವು ಕಲೆಯ ಸ್ವರೂಪ, ಸಾಧ್ಯತೆಗಳನ್ನು ಕುರಿತು ಜಿಜ್ಞಾಸೆ ನಡೆಸುವ ಲೇಖನಗಳನ್ನು ಹೊಂದಿರುವುದು ಸಾಮಾನ್ಯವಾಗಿದೆ. ಅಭಿವ್ಯಕ್ತಿಯ ದೃಷ್ಟಿಯಿಂದ ಕಲಾವಿದನ ಚರಿತ್ರೆ ದೃಷ್ಟಿಯಿಂದ ಪ್ರಮುಖ ಆಕರಗಳಾಗಿರುತ್ತದೆ.

೪.೭.೧ ಬಲ್ಲಿರೇನೈ ಭಾಗವತ : ಯಕ್ಷಗಾನ ಬಯಲಾಟದ ಹಿಮ್ಮೇಳದ ಭಾಗವತದಾದ ಶ್ರೀ ಕೃಷ್ಣ ಭಾಗವತ ಬಾಳೆಹದ್ದ ಇವರ ಜೀವನ-ಸಾಧನೆ ಮತ್ತು ಯಕ್ಷಗಾನ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯನ್ನು ಅಮೂಲಾಗ್ರವಾಗಿ ದಾಖಲಿಸಿದ್ದಾರೆ. ಶ್ರೀ ಜಿ.ಟಿ. ಭಟ್ಟ ಬೊಮ್ಮನಳ್ಳಿ ಇವರು ಈ ಕೃತಿಯನ್ನು ಸಂಪಾದಿಸಿದ್ದಾರೆ.

ಈ ಕೃತಿ ಯಕ್ಷಗಾನ ಹಿಮ್ಮೇಳ ಪರಂಪರೆಯಲ್ಲಿ ಒಂದು ವಿಶಿಷ್ಟ ಮಾಹಿತಿಗಳನ್ನು ಒಳಗೊಂಡ ಕೃತಿಯಾಗಿದೆ. ಬಾಳೆಹದ್ದ ಕೃಷ್ಣ ಭಾಗವತರು ಆವಿಷ್ಕರಿಸಿದ ರಾಗಮಾಲಿಕೆಯನ್ನು ಇಲ್ಲಿ ಸಾಧಾರವಾಗಿ ವಿವರಿಸಲಾಗಿದೆ. ಎಪ್ಪತ್ತಾರು ರಾಗಗಳ ರಾಗಲಕ್ಷಣ ಮತ್ತು ಯಕ್ಷಗಾನ ಪದ್ಯಗಳನ್ನು ರಾಗಕ್ಕೆ ಅಳವಡಿಸುವ ಕ್ರಮದ ಕುರಿತು ಸಂಗೀತ ಸ್ವರ ಪುಸ್ತಕ ಹಾಗೂ ಅರೋಹ, ಅವರೋಹ ಸಹಿತ ಪದ್ಯವನ್ನು ವಿಶ್ಲೇಷಿಸಲಾಗಿದೆ. ಯಕ್ಷಗಾನ ಪದ್ಯಗಳನ್ನು ಸಂಗೀತದ ರಾಗಗಳ ಸಂಯೋಜನೆಯಿಂದ ಪ್ರಭಾವಶಾಲಿಯಾಗಿ ಹೇಗೆ ಹಾಡಬಹುದೆಂಬುದಕ್ಕೆ ಈ ಕೃತಿ ಕೈಗನ್ನಡಿಯಾಗಿದೆ. ಭಾಗವತಿಕೆಯಲ್ಲಿ ರಾಗ ಹಾಗೂ ತಾಳ ಜ್ಞಾನದಲ್ಲಿ ಅಪಾರ ಅನುಭವ ಮತ್ತು ಪ್ರಯೋಗಶೀಲತೆಯಿರುವ ಬಾಳೆಹದ್ದರ ಅನುಭವ ವಿವಿಧ ಕಲಾವಿದರ, ಅಭಿಮಾನಿಗಳ ಲೇಖನಗಳು ಹಿಮ್ಮೇಳದ ಭಾಗವತರಿಗೆ ಮಾರ್ಗದರ್ಶಿಯಾಗುವಂತಿದೆ. ಯಕ್ಷಗಾನ ಹಿಮ್ಮೇಳಕ್ಕೆ ಈ ಕೃತಿ ಸಂಪನ್ಮೂಲ ಕೈಪಿಡಿಯಾಗಿದೆ.

೪.೭.೨. ಯಕ್ಷಶಾಂತಲಾ : ಪಾತಾಳ ವೆಂಕಟರಮಣ ಭಟ್ಟರು ತೆಂಕುತಿಟ್ಟಿನ ಪ್ರಸಿದ್ಧ ಸ್ತ್ರಿ ವೇಷಧಾರಿ. ಇವರ ಪರಿಕಲ್ಪನೆಯ ಸ್ತ್ರೀವೇಷ ಮಾದರಿಯಾಗಿ ಸಲ್ಲುತ್ತದೆ. ಯಕ್ಷಗಾನ ರಂಗದಲ್ಲಿ ಅವಿರತವಾಗಿ ಸ್ತ್ರೀ ವೇಷ ನಿರ್ವಹಿಸಿ ಪಾತ್ರಕ್ಕೆ ಚೌಕಟ್ಟು ನೀಡುವ ಪ್ರಯತ್ನ ಮಾಡಿದರು. ಹೊಸತನವನ್ನು ಓದು, ಕಲ್ಪನೆ, ಪರಿಷ್ಕರಣದ ಮೂಲಕ ಸ್ವೀಕರಿಸಿ ರಂಗದಲ್ಲಿ ಸ್ತ್ರೀವೇಷಕ್ಕೆ ಅಳವಡಿಸಿಕೊಂಡವರು. "ಪಾತಾಳದ ಆಳ" ಎನ್ನುವ ಲೇಖನದಲ್ಲಿ ಪೆರವೋಡಿ ನಾರಾಯಣಭಟ್ಟರು "ರಂಗ ಮಂಚದಲ್ಲಿ ಅವರು ನಿಲ್ಲುವ ಭಂಗಿಗಳೆ ವಿಶೇಷ, ಅದು ಅವರ ನಾಟ್ಯದಲ್ಲಿದ್ದ ಕೊರತೆಯೆಲ್ಲವನ್ನೂ ಅಡಗಿಸಿ ವೇಷಕ್ಕೆ ಜೀವ ತುಂಬುತ್ತಿತ್ತು" ಎಂದಿದ್ದಾರೆ.[೩೪]

ಈ ಅಭಿನಂದನ ಕೃತಿಯನ್ನು ಮುಳಿಯ ಶಂಕರಭಟ್ಟರು ಸಂಪಾದಿಸಿದ್ದಾರೆ. ಕೃತಿಯಲ್ಲಿ ಪಾತಾಳರ ಜೀವನ ಸಾಧನೆಯೊಂದಿಗೆ ಯಕ್ಷಗಾನ ಕಲೆಯ ಕುರಿತಾದ ಅನೇಕ ಉತ್ತಮ ಲೇಖನಗಳಿವೆ. ಈ ದೃಷ್ಟಿಯಿಂದ ಕೃತಿ ಅತಿಮುಖ್ಯವಾದ ಆಧಾರ ಕೃತಿಯಾಗಿ ಯಕ್ಷಗಾನ ಸಾಹಿತ್ಯಕ್ಕೆ ಸಲ್ಲುತ್ತದೆ.

೪.೭.೩. ಉದ್ದಾಮ : ಯಕ್ಷಗಾನದ ಪ್ರಸಿದ್ಧ ಅರ್ಥಧಾರಿ ಶೇಣಿಗೋಪಾಲ ಕೃಷ್ಣ ಭಟ್ಟರ ಅಭಿನಂದನಾ ಗ್ರಂಥ "ಉದ್ದಾಮ"ವನ್ನು ಬರೆಕೇಶವ ಭಟ್ಟರು ಸಂಪಾದಿಸಿದ್ದಾರೆ. ಶೇಣಿ ಗೋಪಾಲಭಟ್ಟರು ಮಾತಿನಲೋಕದ ಮಹಾಕವಿ. ತಾಳಮದ್ದಳೆಯ ಅರ್ಥಗಾರಿಕೆ ವೈಭವದಿಂದ ತಾಳಮದ್ದಳೆಯನ್ನು ಜನಾಕರ್ಷಣೆಯ ಹಂತಕ್ಕೇರಿಸಿದರು. ಇವರೊಂದಿಗೆ ತಾಳಮದ್ದಳೆಯಲ್ಲಿ ಪಾಲ್ಗೊಂಡು ಪಾತ್ರನಿರ್ವಹಿಸಿದ ಕಲಾವಿದರ ಅನುಭವಗಳನ್ನು ಸಂಪಾದಿಸಿ ಶೇಣಿಯವರಿಗೆ ಗೌರವ ಸಲ್ಲಿಸಲಾಗಿದೆ. ಶೇಣಿಯವರ ಅರ್ಥಗಾರಿಕೆಯಲ್ಲಿ ಎಲ್ಲ ವಿಷಯಗಳು ಚರ್ಚಿಸಲ್ಪಡುವುದರಿಂದ ಈ ಗ್ರಂಥದ ಪರಿಚಯವನ್ನಷ್ಟೆ ನೀಡಲಾಗಿದೆ. ತಾಳಮದ್ದಳೆ ಅರ್ಥಧಾರಿಗಳಿಗೆ ಈ ಕೃತಿ ಪ್ರೇರಣಾದಾಯಕವಾಗಿದೆ.

---

೩೪. ಪೆರವೋಡಿ ನಾರಾಯಣಭಟ್ಟ -ಯಕ್ಷಶಾಂತಲಾ -ಪು. 62

೪.೭.೪.ಯಕ್ಷಗಾನ ಮಕರಂದ : ಪ್ರಸಿದ್ಧ ಅರ್ಥಧಾರಿ ಪೊಳಲಿ ಶಂಕರನಾರಾಯಣ ಶಾಸ್ತ್ರಿ (೧೮೯೭-೧೯೨೧) ಯಕ್ಷಗಾನ ಕ್ಷೇತ್ರದಲ್ಲಿ ಅರ್ಥಗಾರಿಕೆಯ ಮೂಲಕ ಪ್ರಸಿದ್ಧರು. ಇವರ ಅರ್ಥಗಾರಿಕೆಯ ಅನುಭವ ಸಂಗ್ರಹ ಹಾಗೂ ಕಲಾವಿದರ ದೃಷ್ಟಿಕೋನಗಳನ್ನು ವಿವೇಚಿಸುವ ಈ ಗ್ರಂಥ ಯಕ್ಷಗಾನ ಕ್ಷೇತ್ರದಲ್ಲಿ ಬೃಹತ್ ಗ್ರಂಥವೆಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

೪.೭.೫. ರಂಗಸ್ಥಳ : ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳ ಅರ್ಥಗಾರಿಕೆಯ ವಿವಿಧ ಪಾತ್ರಚಿತ್ರಣವನ್ನು ಹಾಗೂ ಪೊಳಲಿಯವರು ಸೃಷ್ಟಿಸಿದ ಕಲಾತ್ಮಕ ವಾಗ್‌ವೈಖರಿಗಳನ್ನು ಅನುಭವಿಸಿದ ಕಲಾವಿದರ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ. ಮುಳಿಯ ಮಹಾಬಲೇಶ್ವರ ಭಟ್ಟರು ಈ ಕೃತಿಯ ಸಂಪಾದಕರಾಗಿರುತ್ತಾರೆ.

೪.೭.೬. ರಸಸೃಷ್ಟಿ : ದೇರಾಜೆ ಸೀತಾರಾಮಯ್ಯನವರು ತಾಳಮದ್ದಳೆಯ ಅರ್ಥಧಾರಿ ಯಕ್ಷಗಾನ ತಾಳಮದ್ದಳೆಯ ಹೊಸ ಆಯಾಮಗಳನ್ನು ಪಾತ್ರವಿಶ್ಲೇಷಣೆಯ ಮೂಲಕ ಚಿತ್ರಿಸಿದವರು. ಇವರ ಅರ್ಥಗಾರಿಕೆಯ ಚಿತ್ರಣವನ್ನು ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರು ಸಂಪಾದಿಸಿ ಪ್ರಕಟಿಸಿದ್ದಾರೆ. 'ರಸಸೃಷ್ಟಿ' ಒಂದು ಆಕರ ಕೃತಿಯೂ ಆಗಿದೆ.

೪.೭.೭. ಸಹಸ್ರಚಂದ್ರ : ಹಿರಣ್ಯ ವೆಂಕಟೇಶ್ವರ ಭಟ್ಟರು ಶೇಣಿಯವರ ಕಲಾಕೊಡುಗೆ, ಜೀವನ ವೃತ್ತಾಂತ, ಕೃತಿಗಳ ಕುರಿತು ಲೇಖನಗಳನ್ನು ಸಂಗ್ರಹಿಸಿ ಸಂಪಾದಿಸಿದ್ದಾರೆ. ಶೇಣಿಯವರ ಬದುಕಿನೊಂದಿಗೆ ಕಲೆಯ ವಿಕಾಸದ ಹೆಜ್ಜೆಗಳನ್ನು ಈ ಕೃತಿಯಲ್ಲಿ ಗುರುತಿಸಲಾಗಿದೆ.

೪.೭.೮. ರಂಗವೈಖರಿ : ಶ್ರೀಮಾಂಬಾಡಿ ನಾರಾಯಣ ಭಾಗವತರು ಬಡಗುತಿಟ್ಟಿನ ಪ್ರಸಿದ್ಧ ಭಾಗವತರು. ಮಾಂಬಾಡಿ ಮನೆತನದ ಅನುವಂಶೀಯವಾಗಿ ಭಾಗವತಿಗೆಯಲ್ಲಿ ಹೆಸರು ಮಾಡಿದೆ. ವಿಶಿಷ್ಟ ಶೈಲಿಯ ಭಾಗವತಿಕೆಯ ಮೂಲಕ ಪ್ರಸಿದ್ಧರಾದ ಮಾಂಬಾಡಿಯವರ ಕುರಿತಾದ ಲೇಖನಗಳನ್ನು ಕ್ರಿ.ಶ. ೧೯೮೧ರಲ್ಲಿ ಪಾದೇಕಲ್ಲು ನರಸಿಂಹಭಟ್ಟರು ಸಂಪಾದಿಸಿ ಶ್ರೀ ಮಾಂಬಾಡಿ ನಾರಾಯಣ ಭಾಗವತ ಸನ್ಮಾನ ಸಮಿತಿ ಮಿತ್ತನಡ್ಕ, (ದಕ್ಷಿಣಕನ್ನಡ) ಪ್ರಕಟಿಸಿದ್ದಾರೆ.

೪.೮. ಜೀವನಕೃತಿ -ವಿಮರ್ಶೆ :

ಯಕ್ಷಗಾನ ವಾಙ್ಮಯ ವಿಶಿಷ್ಟ ಪ್ರಕಾರದ ಕೃತಿಗಳನ್ನೊಳಗೊಂಡ ಸಾಹಿತ್ಯವಾಗಿದೆ. ಯಕ್ಷಗಾನ ಕವಿಗಳು, ಲೇಖಕರು, ಸಂಶೋಧಕರು ಹೊಸ ಪ್ರಕಾರದ ಕೃತಿಗಳನ್ನು ನೀಡಿದ್ದಾರೆ. ಕಲಾವಿದನ ಜೀವನ ಸಾಧನೆ ಒಂದು ಬಗೆಯ ಕೃತಿಯಾದರೆ ಜೀವನ-ಕೃತಿಯನ್ನು ಸಮಗ್ರವಾಗಿ ವಿಮರ್ಶಿಸುವ ಪ್ರಯತ್ನವಾಗಿ ಜೀವನ-ಕೃತಿ-ವಿಮರ್ಶೆ ಪ್ರತ್ಯೇಕವಾಗಿಯೆ ರಚನೆಯಾಗಿದೆ. ಯಕ್ಷಗಾನ ಲೇಖಕರು ರಚಿಸಿದ ಕೃತಿಗಳ ಸಮಗ್ರ ನೋಟವೆ ಜೀವನ-ಕೃತಿ-ವಿಮರ್ಶೆ ಬರಹಗಾರ ಕಲಾವಿದನಾಗಿಯೂ ಇರುವುದರಿಂದ ಜೀವನ ಕೃತಿಗಳೆರಡು ಪರಸ್ಪರಾಶ್ರಿತವಾಗಿದೆ. ಇಂತಹ ಕೃತಿ ಶ್ರೇಣಿಗಳಿಂದ ಬದುಕು ಬರಹಗಳು ಪ್ರಕಾಶಿಸಲ್ಪಡುತ್ತವೆ.

೪.೮.೧. ಯಕ್ಷನಟ ಸಾರ್ವಭೌಮ : ಪ್ರಸಿದ್ಧ ರಂಗನಟ ಕುರಿಯ ವಿಠಲ್‌ಶಾಸ್ತ್ರಿ ಕೇವಲ ನಟರಲ್ಲ. ಸಂಘಟಕರೂ ಹೌದು. ಯಕ್ಷಕರ್ದಮ ಸಂಸ್ಥೆಯ ಕೆ.ಪಿ. ರಾಜಗೋಪಾಲ ಕನ್ಯಾನರು ಕುರಿಯ

ವಿಠಲಶಾಸ್ತ್ರಿಯವರ ಕುರಿತಾದ ಲೇಖನಗಳನ್ನು ಕಲಾ ಬದುಕಿನ ಆಯಾಮಗಳನ್ನು ಸಂಗ್ರಹಿತವಾಗಿ ಪ್ರಕಟಿಸಿದ್ದಾರೆ. ಕಲಾವಿದನ ವ್ಯಕ್ತಿ ಚಿತ್ರಣ ನೀಡುವ "ಬರಹಗಳ ಆಕೃತಿ"ಯನ್ನು ನೀಡಿದ್ದಾರೆ. ಬದುಕು-ಬರಹಗಳ ಕುರಿತಾದ ಕೃತಿ ಸಂಗ್ರಹ ಯೋಗ್ಯವಾಗಿದೆ.

೪.೮.೨. ಪಷ್ಟ್ಯಬ್ಧಿ : ಹೊಸ್ತೋಟ ಮಂಜುನಾಥ ಭಾಗವತರು ಜೀವನವನ್ನು ಯಕ್ಷಗಾನಕ್ಕಾಗಿ ಮುಡುಪಿಟ್ಟವರು. ಅವರನ್ನು ಯಕ್ಷಯುಷಿ ಎಂದು ಕರೆಯುತ್ತಾರೆ. "ಬದುಕೆ ಯಕ್ಷಗಾನ, ಯಕ್ಷಗಾನವೆ ಬದುಕು" ಎಂದು ಸ್ವೀಕರಿಸಿದ ಸಾಧಕನ ಜೀವನ ಮತ್ತು ಕೃತಿಗಳನ್ನು ಕೆ.ಜಿ. ನಾರಾಯಣ್‌ರವರು ಸಂಪಾದಿಸಿದ್ದಾರೆ. ಸಾಕೇತ ಟ್ರಸ್ಟ್ ಕೆಳಮನೆ ಈ ಕೃತಿಯನ್ನು ಪ್ರಕಟಿಸಿದೆ. ಹೊಸ್ತೋಟ ಮಂಜುನಾಥ ಭಾಗವತರ "ಯಕ್ಷಗಾನ ಲಕ್ಷಣ" ಕೃತಿಯನ್ನು ಡಾ. ವಸಂತ ಬಾರಧ್ವಾಜರವರು ಪರಾಮರ್ಶಿಸಿದ್ದಾರೆ. ರಾಮಾಯಣ-ಭಾರತ ಪ್ರಸಂಗಗಳನ್ನು ಪ್ರೊ. ಎಂ.ಎ. ಹೆಗಡೆಯವರು ವಿವೇಚಿಸಿದ್ದಾರೆ. ಹೊಸ್ತೋಟರ ರಂಗನಿರ್ದೇಶನ, ಪ್ರಯೋಗಶೀಲತೆಯನ್ನು ಕುರಿತು ಸ್ಥೂಲವಾಗಿ ವಿವೇಚಿಸಲಾಗಿದೆ. ಡಾ. ಎಂ. ಪ್ರಭಾಕರ ಜೋಶಿ, ಎಂ.ಆರ್. ಲಕ್ಷ್ಮೀನಾರಾಯಣರವರು ಉದಾತ್ತ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಹೊಸ್ತೋಟ ಭಾಗವತರು ತನ್ನ ಬದುಕನ್ನು ತೆರೆದಿಟ್ಟಿದ್ದಾರೆ. ಈ ಕೃತಿ ಯಕ್ಷಗಾನದ ಕುರಿತು ಅಧ್ಯಯನಕ್ಕೆ ಪೂರಕವಾಗಿದೆ.

೪.೯. ಜೀವನ ಚರಿತ್ರೆ :

ಜೀವನ ಚರಿತ್ರೆಗಳು ವ್ಯಕ್ತಿಯೊಬ್ಬನ ಜೀವನದ ಚರಿತ್ರಾರ್ಹ ಘಟನೆಗಳ ಆಧಾರದ ಮೇಲೆ ಜೀವನವನ್ನ ನಿರೂಪಿಸುವುದಾಗಿದೆ. ಆತ್ಮಕಥನಕ್ಕೂ ಜೀವನ ಚರಿತ್ರೆಗೂ ವ್ಯತ್ಯಾಸವಿದೆ. ಆತ್ಮಕಥನವನ್ನು ವ್ಯಕ್ತಿ ತಾನೆ ಹೇಳಿಕೊಳ್ಳುವುದರಿಂದ 'ನಾನು' ಎಂದೇ ಹೇಳಿಕೊಳ್ಳಬೇಕಾಗುತ್ತದೆ. ಜೀವನಚರಿತ್ರೆಯಲ್ಲಿ ಲೇಖಕರು ಸಂಬಂಧಿಸಿದ ವ್ಯಕ್ತಿಯ ಜೀವನದ ಘಟನೆಗಳನ್ನು ಉತ್ತಮ ಪುರುಷದಲ್ಲಿ ದಾಖಲಿಸುತ್ತಾರೆ. ಲೇಖಕರು ಓರ್ವ ಕಲಾವಿದನ ಜೀವನ ಮತ್ತು ಕಲಾಸೇವೆಯ ಅನುಭವಗಳನ್ನು ಚರಿತ್ರೆಯ ರೂಪದಲ್ಲಿ ದಾಖಲಿಸುವುದು ಇಲ್ಲಿನ ವಿಶೇಷ. ಯಕ್ಷಗಾನ ವಾಙ್ಞಯದಲ್ಲಿ "ಜೀವನ ಚರಿತ್ರೆಗಳು" ಅಪರೂಪವಾದರೂ ಒಂದು ವಿಶಿಷ್ಟಪ್ರಕಾರವಾಗಿ ಸ್ಥಾನಪಡೆದಿದೆ.

೪.೯.೧ ಯಕ್ಷಗಾನ ಯುಗಪುರುಷ ಕೆರೆಮನೆ ಶಿವರಾಮ ಹೆಗಡೆ: ಡಾ. ಜಿ.ಎಸ್. ಭಟ್ಟರು ಕೆರೆಮನೆ ಶಿವರಾಮ ಹೆಗಡೆಯವರ ಜೀವನವನ್ನು ಕಲಾ ಕೊಡುಗೆಗಳೊಂದಿಗೆ ದಾಖಲಿಸಿ ಅವರ ಸಾಧನೆಯನ್ನು ಭಿನ್ನಭಿನ್ನವಾದ ಸನ್ನಿವೇಶಗಳಲ್ಲಿ ಪಾತ್ರಗಳಲ್ಲಿ ಪರಿಶೀಲಿಸಿ, ಪ್ರತಿಭೆ, ಶ್ರಮ ಮತ್ತು ಸಾಧನೆಯ ಆಧಾರದ ಮೇಲೆ ಕೃತಿ ನಿರೂಪಿಸಿದ್ದಾರೆ. ಉತ್ತಮ ನಿರೂಪಣೆಯೊಂದಿಗೆ ಸ್ವಾರಸ್ಯಕರ ಘಟನೆಗಳನ್ನು ದಾಖಲಿಸಿದ ಈ ಕೃತಿ ಜೀವನ ಚರಿತ್ರೆಯ ಪರಂಪರೆಗೆ ಮಾದರಿಯಾದ ಕೃತಿಯಾಗಿದೆ.

೪.೯.೨. ಅಭಿಜಾತ ಕಲಾವಿದ ಚಿಟ್ಟಾಣಿ : ಈ ಕೃತಿಯನ್ನು ಜಿ.ಎಸ್. ಮೈಸೂರು ಇವರು ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಕೊಡುಗೆಗಳನ್ನು ಆಧರಿಸಿ ಅಭಿಜಾತ ಕಲಾವಿದರಾಗಿ ಚಿಟ್ಟಾಣಿ ಪಾತ್ರವನ್ನು ನಿರ್ವಹಿಸುವ ಅವರ ಪ್ರತಿಭೆಯನ್ನು ದಾಖಲಿಸಿದ್ದಾರೆ.

೪.೯.೩. ಯಕ್ಷಗಾನ ಮಹಾಬಲ : ಶ್ರೀ ಎಲ್.ಎಸ್. ಶಾಸ್ತ್ರಿ ನಾಜಗಾರರವರು ಕೆರೆಮನೆ ಮಹಾಬಲ ಹೆಗಡೆಯವರ ಜೀವನ ಚರಿತ್ರೆಯನ್ನು ದಾಖಲಿಸಿದ್ದಾರೆ. ಈ ಕೃತಿಯನ್ನು ನಾರಾಯಣ ಮಾಳ್ಕೋಡ್

ಇವರು ಪ್ರಕಟಿಸಿದ್ದಾರೆ. ಕೃತಿಯಲ್ಲಿ "ಅಶ್ವತ್ಥಮಾಧ್ಯಾಯ"ದಲ್ಲಿ ಕೆರೆಮನೆ ಮಹಾಬಲ ಹೆಗಡೆಯವರ ಪಾತ್ರಪ್ರವೇಶದ ಆವೇಶವನ್ನು ಚಿತ್ರಿಸುತ್ತಾರೆ. ಅಶ್ವತ್ಥಾಮನ ಬಾಲ್ಯವೂ ಕಡುಬಡತನದ್ದೆಂದು ಪಾತ್ರಾರೋಪಣೆ ಮಾಡಿ ಮಹಾಬಲ ಹೆಗಡೆಯವರ ಜೀವನವನ್ನು ಹೋಲಿಸುತ್ತಾರೆ. ಕೃತಿಯಲ್ಲಿ ಮಹಾಬಲ ಹೆಗಡೆ ಇಂದಿನ ಯಕ್ಷಗಾನದ ಸ್ಥಿತಿಗತಿಗಳ ಕುರಿತು ಹೊಂದಿರುವ ಧೋರಣೆಯನ್ನು ಚಿತ್ರಿಸಲಾಗಿದೆ. ಕೃತಿಯ ತುಂಬ ಮಹಾಬಲ ಹೆಗಡೆಯವರ ಕಲೆ ಮತ್ತು ಜೀವನದ ನಡುವೆ ಸಂಬಂಧವನ್ನು ಚಿತ್ರಿಸಲಾಗಿದೆ.

೪.೧೦. ವ್ಯಕ್ತಿ ಪರಿಚಯ ಕೃತಿಗಳು :

ಯಕ್ಷಗಾನದಲ್ಲಿ ವ್ಯಕ್ತಿ ಪರಿಚಯ ಕೃತಿಗಳು ಅನೇಕ ಪ್ರಕಟವಾಗಿದೆ. ಈ ಕೃತಿಗಳಲ್ಲಿ ವಿವಿಧ ಕಲಾವಿದರ ಜೀವನ ಮತ್ತು ಕಲೆಯ ಕುರಿತಾದ ಲೇಖನಗಳಿವೆ. ಕೆರೆಮನೆ ಶಂಭುಹೆಗಡೆ, ಶಿವರಾಮ ಹೆಗಡೆ ಕೆರೆಮನೆ ಯಲ್ಲಾಪುರ ನರಸಿಂಹ ಭಟ್ಟರ ಕುರಿತು ಬಂದ ಕೃತಿಗಳು ಪ್ರಮುಖವಾಗಿದೆ.

೪.೧೧. ವೈಚಾರಿಕ ಕೃತಿಗಳು :

ಯಕ್ಷಗಾನ ಕಲೆಯ ಸಂಪ್ರದಾಯ, ಪ್ರದರ್ಶನ ಮೇಳ ವ್ಯವಸ್ಥೆ, ಅಭಿನಯ ಹಿಮ್ಮೇಳ ಮುಮ್ಮೇಳ ಪ್ರಸಂಗಗಳ ಕುರಿತು ವೈಚಾರಿಕವಾದ ಆತಂಕವನ್ನು, ಜಿಜ್ಞಾಸೆಯನ್ನೋ ಸ್ವರೂಪವನ್ನೊ ಕುರಿತು ವೈಚಾರಿಕ ಲೇಖನಗಳು ಆಗಾಗ ಪ್ರಕಟಗೊಳ್ಳುತ್ತಿದೆ. ಯಕ್ಷಗಾನದ ಈ ವೈಚಾರಿಕ ಲೇಖನಗಳು ಮೂಲ ಕಲೆಯ ಕುರಿತು ಮತ್ತು ಬದಲಾದ ಸನ್ನಿವೇಶದ ಕುರಿತು ಹಾಗೂ ಶೈಲಿಯ ಕುರಿತು ಬಹುಪಾಲು ಪ್ರಕಟಗೊಂಡಿದೆ. "ಸುಧೋರಣೆಯ ಸುಧಾರಣೆ" ಎಂಬ ನಿಲುವಿನಿಂದ ಹೊಸ ಹೊಸ ವಿಚಾರಗಳು ಪ್ರಕಟಗೊಳ್ಳುತ್ತಿದೆ.

೪.೧೧.೧. ವೈಚಾರಿಕ ಆತಂಕದ ವ್ಯವಸ್ಥಿತ ಅಭಿವ್ಯಕ್ತಿ : "ಸೊರಗುತ್ತಿರುವ ಸಾಂಪ್ರದಾಯಿಕ ಯಕ್ಷಗಾನ" ಯಕ್ಷಗಾನದ ಸಾಂಪ್ರದಾಯಿಕತೆಯು ಮರೆಯಾಗುತ್ತಿರುವುದನ್ನು ಗ.ಮ. ಚಿತ್ರಗಿಮಠ ಇವರು ವೈಚಾರಿಕವಾಗಿ ವಿಮರ್ಶಿಸಿದ್ದಾರೆ. ಈ ಕೃತಿಯಲ್ಲಿ ಮೂರು ದಶಕಗಳಿಂದೀಚೆಗೆ ಜಾನಪದ ಮತ್ತು ಶಾಸ್ತ್ರೀಯ ಕಲೆಯಲ್ಲಿ ತಲೆದೋರಿರುವ ಹೊಸತನ ಬದ್ಧವೆ? ನಿಷಿದ್ಧವೆ? ಎಂಬ ಚರ್ಚೆಯಿದೆ. ಹೊಸತಲೆಮಾರಿನ ಕಲಾವಿದರ ಮತ್ತು ಹಳೆತಲೆಮಾರಿನ ಕಲಾವಿದರ ನಡುವಿನ ಕಲಾತ್ಮಕ ಪ್ರದರ್ಶನದ ಕುರಿತಾದ ನಿಲುವಿನ ಬದಲಾವಣೆಯನ್ನು ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ. ಈ ಅವಾಂತರಗಳನ್ನು ದುಗುಡವಾಗಿ ಬಿಂಬಿಸಿರುತ್ತಾರೆ.

೪.೧೨. ಆಕರ ಗ್ರಂಥಗಳು :

ಯಕ್ಷಗಾನ ಬಯಲಾಟ ಮತ್ತು ತಾಳಮದ್ದಳೆ ಅರ್ಥಗಾರಿಕೆಯಲ್ಲಿ ಪದ್ಯವಾಗಿ ಪ್ರಸಂಗಗಳು ಗದ್ಯವಾಗಿ ಮಾತುಗಾರಿಕೆ ರಂಗಾಭಿವ್ಯಕ್ತಿಯಾಗಿ ಪ್ರಕಟಗೊಳ್ಳುತ್ತದೆ. ಪಾತ್ರಾಭಿವ್ಯಕ್ತಿಯಲ್ಲಿ ಕುಣಿತಾಭಿನಯಗಳಷ್ಟೆ ವಾಚಿಕಾಭಿನಯವೂ ಮಹತ್ವವನ್ನು ಪಡೆಯುತ್ತದೆ. ಯಕ್ಷಗಾನ ರಂಗಕಲಾವಿದರು ಪುರಾಣೇತಿಹಾಸಗಳನ್ನು ಕೇಳಿ ಅಥವಾ ಓದಿ ಕಲಿಯುವ ಮೂಲಕ ಮಾತುಗಾರಿಕೆಯಲ್ಲಿ ತೊಡಗಿಕೊಂಡವರು. ಆದರೆ ತಾಳಮದ್ದಳೆಯಲ್ಲಿ ನಿಶ್ಚಿತವಾದ ಮಾತುಗಾರಿಕೆಗೆ ಅಧ್ಯಯನದ ಅಗತ್ಯತೆ ಇದ್ದೆ ಇದೆ. ರಾಮಾಯಣ ಮಹಾಭಾರತದ ಕಥೆಗಳಿದ್ದರೂ ಪುರಾಣ, ವೇದೋಪನಿಷತ್ತಿನ ಆಧಾರದ ಮೇಲೆ ಸತ್ಯಾನ್ವೇಷಣೆ ನಡೆಯುತ್ತದೆ.

ಪ್ರಸಂಗಗಳಿಗೆ ಕೌಶಿಕ ರಾಮಾಯಣ, ತುರಂಗ ಭಾರತ, ಕುಮಾರವ್ಯಾಸ ಭಾರತ ಮೊದಲಾದ ಕೃತಿಗಳೆ ಆಕರಗಳಾಗಿವೆ. ಅಂತೆಯೇ ಮಾತುಗಾರಿಕೆಗೆ ಕೂಡ ಆಕರ ಗ್ರಂಥಗಳು ಹೂರಣವನ್ನು ಒದಗಿಸಬಲ್ಲವು. ವಾಚಿಕದ ಪರಮಾರ್ಥವನ್ನು ಅಂತರಾರ್ಥವನ್ನು ಅರ್ಥೈಸಿಕೊಳ್ಳುವಲ್ಲಿ ಆಕರ ಗ್ರಂಥಗಳ ಪಾತ್ರಹಿರಿದಾಗಿದೆ. ಯಕ್ಷಗಾನ ವಾಚಿಕಾಭಿನಯಕ್ಕೆ ರಾಮಾಯಣ ಮಹಾಭಾರತ ಕೃತಿಗಳ ಪ್ರಸಂಗದ ಅರ್ಥಗಾರಿಕೆಯು ಆಕರ ಗ್ರಂಥಗಳಾಗಿ "ದೇರಾಜೆ ರಾಮಾಯಣ", "ದೇರಾಜೆ ಮಹಾಭಾರತ" ಕಥಾಮೃತಗಳ ಅಧ್ಯಯನದ ಅಂತಸತ್ವವನ್ನು ಹೆಚ್ಚಿಸುವ ಕೃತಿಗಳಾಗಿವೆ.

೪.೧೨.೧. ದೇರಾಜೆ ರಾಮಾಯಣ : ದೇರಾಜೆ ಸೀತಾರಾಮಯ್ಯನವರು (೧೯೧೪-೧೯೮೪) ಬಾಲ್ಯದಲ್ಲಿಯೆ ಯಕ್ಷಗಾನಾಸಕ್ತ ಪರಿಸರದಲ್ಲಿ ಬೆಳೆದವರು. ಅರ್ಥಧಾರಿಯಾಗಿ ಪ್ರಸಿದ್ಧರೊಂದಿಗೆ ಕೂಟದಲ್ಲಿ ಭಾಗವಹಿಸಿ ಅಪಾರ ಅನುಭವಗಳಿಸಿದವರು. "ಸೀತಾರಾಮಯ್ಯನವರ ಅರ್ಥಗಾರಿಕೆಯು ತಾಳಮದ್ದಳೆ ಅರ್ಥಗಾರಿಕೆಯ ಆದರ್ಶ ಮಾದರಿಯಾಗಿದೆ. ಭಾಷೆ, ಭಾವ, ಕಲ್ಪನಾಶಕ್ತಿ, ಅಭಿವ್ಯಕ್ತಿ ಸ್ವರದ ಬಳಕೆ, ನಾವೀನ್ಯತೆ ತರ್ಕ, ಕಾವ್ಯಾತ್ಮಕತೆ ಇವರೆಲ್ಲ ಗುಣಗಳಿಂದ ಹದವಾಗಿಬೆರೆತಿತ್ತು".[೩೫] ಇಂತಹ ಮಾತುಗಾರಿಕೆಗೆ ಅವರ ರಾಮಾಯಣ ಮಹಾಭಾರತದ ಆಳವಾದ ಜ್ಞಾನವೇ ಕಾರಣವಾಗಿತ್ತು. ಅರ್ಥಗಾರಿಕೆಗೆ ಅಗತ್ಯವಾದ ಪುರಾಣೇತಿಹಾಸ ಕಾವ್ಯಗಳ ಸಾರವನ್ನು ಕಥಾನಕದಲ್ಲಿ ಬರೆದು ಮುಂದಿನ ತಲೆಮಾರಿಗೆ ಉದ್ಗ್ರಂಥಗಳನ್ನು ಪರಿಚಯಿಸಿದರು.

ದೇರಾಜೆ ರಾಮಾಯಣವನ್ನು "ರಾಮಚರಿತಾಮೃತಂ" ಎಂದು ಕರೆದಿದ್ದಾರೆ. ರಾಮಾಯಣ ಕಥಾನಕವನ್ನು ಒಂಬತ್ತು ಕಾಂಡಗಳಾಗಿ ಆಯಾ ಕಾಂಡಗಳಲ್ಲಿ ಆಖ್ಯಾನವನ್ನು ಕಥನವಾಗಿಸಿ ಇಡಿ ರಾಮಾಯಣವನ್ನು ಕಥನದ ಆಖ್ಯಾನಗಳಾಗಿಯೆ ಸೆರೆ ಹಿಡಿದರು. ಆರಂಭದಿಂದ ಕೊನೆಯ ತನಕದ ಭಾಷೆಯ ಓಘ ಅದ್ಭುತವಾದುದು. ದೇರಾಜೆಯವರಿಗೆ ಮಾತುಗಾರಿಕೆ ಸಿದ್ಧಿಸಿದ ಹಾಗೆ ಕಥನ ಶೈಲಿಯು ಸಿದ್ಧಿಸಿದೆ. ಅವರ ಕಥಾಪ್ರವೇಶ, ಪಾತ್ರಚಿತ್ರಣ, ಪಾತ್ರದ ಅಂತರಂಗ ದೇರಾಜೆ ರಾಮಾಯಣದಲ್ಲಿ ಪಾತ್ರಗಳು ತಾವೆ ಅನಾವರಣಗೊಂಡಂತೆ ವಾಕ್‌ಪ್ರವಾಹದಲ್ಲಿ ಪಾತ್ರಲೀನವಾಗುತ್ತದೆ. ಇಡೀ ರಾಮಾಯಣದ ಪಾತ್ರಗಳು ಓದುಗನಲ್ಲಿ ಮೈವೊಡೆದು ನಿತ್ತಂತೆ ನೆನಪಿನಲ್ಲುಳಿಯುವ ಕ್ರಮಬದ್ಧವಾದ ನಿರೂಪಣೆ ಅತ್ಯಂತ ಆಕರ್ಷಣೀಯವಾಗಿದೆ. ಪಾತ್ರಗಳ ಗುಣಗಳನ್ನು ಮಾತುಗಳಲ್ಲೆ ಬಿಂಬಿಸುವ ಹಾಗೆ ಸಂಭಾಷಣೆಯ ಮೂಲಕ ಚಿತ್ರಿಸಿದ್ದಾರೆ. ಇಡೀ ಕೃತಿ ಕಥಾಪ್ರವಾಹವಾಗಿ ಹರಿಯುತ್ತದೆ.

ಮಾತುಗಾರಿಕೆಯ ಸಿದ್ಧಿಗೆ, ಪದಪ್ರಯೋಗಗಳ ಔಚಿತ್ಯಕ್ಕೆ, ಅರ್ಥಗಾರಿಕೆಯ ಧ್ವನಿಯುಕ್ತ ಮಾತಿನ ಬಳಕೆ, ಭಾವವ್ಯಂಜನಕ್ಕೆ ದೇರಾಜೆಯವರ ರಾಮಾಯಣ ಕೈಗನ್ನಡಿಯಿದ್ದಂತೆ!

ಡಾ. ಎಂ. ಪ್ರಭಾಕರ ಜೋಶಿಯವರು ದೇರಾಜೆಯವರ ರಾಮಾಯಣದ ಕುರಿತು ದೇರಾಜೆ ವಿರಚಿತ ಶ್ರೀರಾಮಚರಿತಾಮೃತಂ ರಾಮಾಯಣದ ಒಂದು ಬಗೆಯ ಪುನಃಕಥನ. ಅದಕ್ಕೆ ವಾಲ್ಮೀಕಿ ರಾಮಾಯಣವೆ ಮುಖ್ಯ ಆಧಾರ. ಆದರೆ ಅದು ವಾಲ್ಮೀಕಿ ರಾಮಾಯಣದ ಅನುವಾದದಲ್ಲಿ ಕೆಲವು ವಿನೂತನ ಪರಿಕಲ್ಪನೆಗಳೂ ಇವೆ. ಕಥನದಲ್ಲಿ ವ್ಯವಸ್ಥೆಯಿದೆ. ಅರ್ಥಧಾರಿ ದೇರಾಜೆಯವರ ಪ್ರಭಾವ

೩೫. ಡಾ. ಎಂ. ಪ್ರಭಾಕರ ಜೋಶಿ – ದೇರಾಜೆ ರಾಮಾಯಣ – ಪು. ೧೬

ಇಲ್ಲಿ ಲೇಖಕ ದೇರಾಜೆ ಅವರಲ್ಲಿ ಸ್ಪಷ್ಟವಾಗಿ ಕಾಣಿಸಿಕೊಂಡಿದೆ. ಪಾತ್ರಗಳ ಅಂತರಂಗದ ವಿಶ್ಲೇಷಣೆ ಚಿತ್ರಣದ ಪ್ರಯತ್ನಗಳೂ ಇಲ್ಲಿವೆ.

ಈ ಕೃತಿ ಯಕ್ಷಗಾನ ವಾಙ್ಮಯದಲ್ಲೆ ಅಪರೂಪದ ಕೃತಿಯಾಗಿದೆ.

೪.೧೨.೨. ಶ್ರೀಮನ್ಮಹಾಭಾರತ ಕಥಾಮೃತಂ : ಈ ಗ್ರಂಥದ ಕರ್ತೃ ದೇರಾಜೆಸೀತಾರಾಮಯ್ಯನವರು. ಮಹಾಭಾರತ ಮಹಾಕಾವ್ಯವನ್ನು 'ಕಥಾಮೃತ'ವಾಗಿ ಬರೆದ ದೇರಾಜೆ ಮಹಾನ್ ದಾರ್ಶನಿಕರು. ಅವರು ಹದಿನೆಂಟು ಪರ್ವಗಳಲ್ಲಿ ಮಹಾಭಾರತ ಕಥೆಯನ್ನು ಅರುಹಿದ್ದಾರೆ. ಮಹಾಭಾರತಕಥೆ ಅಗಾಧವಾದುದು ಅಸಂಖ್ಯ ಕಥಾನಕಗಳನ್ನು ಒಂದರೊಳಗೊಂದಾಗಿ ಹೆಣೆದು ಕಥೆ ರೂಪಿತವಾಗಿದೆ. ಮಹಾಭಾರತವನ್ನು ಕಥಾನುಕ್ರಮದಲ್ಲಿ ಅತ್ಯಂತ ಸುಲಭವಾಗಿ ಗ್ರಹಿಸುವಂತೆ ದೇರಾಜೆಯವರು ಪರ್ವಗಳಲ್ಲಿ ಕಥೆಗಳನ್ನು ಹೆಣೆದಿದ್ದಾರೆ.

ದೇರಾಜೆಯವರು ಮೂಲಭಾರತದ ಕಥೆಯೊಂದಿಗೆ ಪಾತ್ರಗಳನ್ನು ವಿಶ್ಲೇಷಿಸಿ ಅಂತರಾರ್ಥವನ್ನು ಹೊರಗೆಡಹಿದ್ದಾರೆ.

ಈ ಗ್ರಂಥ ಭಾರತದ ಕಥೆಯನ್ನು ಓದಲಿಚ್ಛಿಸುವವರಿಗೆ ಸರಳವಾದ ಕಥೆಗಳಾಗಿ ನಿರೂಪಿತವಾಗಿದೆ. ಅರ್ಥವ್ಯಾಖ್ಯಾನ ಮಾಡುವವರಿಗೆ ಪಾತ್ರಾಂರ್ಗತ ಮರ್ಮವನ್ನು ಅರಿಯಲು ಸಾಧ್ಯವಾಗಿದೆ. ಕನ್ನಡದ ಮಹಾಭಾರತಗಳಲ್ಲಿ ದೇರಾಜೆಯವರ ಭಾರತವೇ ವೈಶಿಷ್ಟ್ಯಪೂರ್ಣವಾದುದು. ಯಕ್ಷಗಾನದ ವಾಚಿಕಾಭಿನಯಕ್ಕೆ ಈ ಕೃತಿಯ ಅಧ್ಯಯನ ಅತ್ಯವಶ್ಯಕವಾದುದು. ಬೃಹತ್ ಭಾರತವನ್ನು ಕಥನ ಶೈಲಿಯಲ್ಲಿ ರೂಪಿಸಿದ ಈ ಗ್ರಂಥ ವಾಙ್ಮಯದಲ್ಲಿ ಅಪರೂಪದ ಕೊಡುಗೆಯಾಗಿದೆ.

೪.೧೩. ಪ್ರಸಂಗದರ್ಶನ :

೪.೧೩.೧. ಶೇಣಿ ರಾಮಾಯಣ : ಪ್ರಸಂಗವೆಂದರೆ ಆಖ್ಯಾನವೆಂಬ ಅರ್ಥಪ್ರಕಟವಾದರೂ ಸಂದರ್ಭ ಸನ್ನಿವೇಶಗಳನ್ನು ಪ್ರಸಂಗವೆಂದು ಕರೆಯುವ ಅರ್ಥವೂ ಇದೆ. ಆದರೆ ಉತ್ತರಕನ್ನಡ, ದಕ್ಷಿಣಕನ್ನಡ, ಮಲೆನಾಡು ಭಾಗದಲ್ಲಿ ತಾಳಮದ್ದಳೆ, ಬೈಠಕ್, ಜಾಗರಗಳನ್ನು ಪ್ರಸಂಗವೆಂದೆ ಕರೆಯುತ್ತಾರೆ. ಪ್ರಸಂಗಪಟ್ಟಿ ಯಕ್ಷಗಾನ ಪದ್ಯ ಸಂಗ್ರಹವಾಗಿದೆ. ಪ್ರಸಂಗ ಪದ್ಯಗಳಿಗೆ ಅರ್ಥಗಾರಿಕೆಯ ವಾಚಿಕಾಭಿವ್ಯಕ್ತಿ ಆಶುಗದ್ಯವಾಗಿದೆ. ತಾಳಮದ್ದಳೆ ಅರ್ಥಗಾರಿಕೆಯಲ್ಲಿ ಕಲಾವಿದರು ಪದ್ಯಗಳಿಗೆ ಪಾತ್ರಾಭಿವ್ಯಕ್ತಿಯಾಗಿ ಶೈಲಿಕೃತ ಭಾಷೆಯಲ್ಲಿ ಅರ್ಥಹೇಳುವುದು ಕ್ರಮ. ಇಂತಹ ಅರ್ಥಗಾರಿಕೆಯಲ್ಲಿ ತರ್ಕಬದ್ಧವಾಗಿ ಪದ್ಯದ ವಾಚ್ಯಾರ್ಥವನ್ನು, ಧ್ವನ್ಯಾರ್ಥವನ್ನು ಧ್ವನಿಸಿ ಕೇಳುಗರಿಗೆ ಪಾತ್ರದ ಮೌಲ್ಯವನ್ನು ನಿವೇದಿಸುವ ಸಮರ್ಥ ಅರ್ಥದಾರಿಯ ಆಶುಕಥನ ರಂಜನೆಯೊಂದಿಗೆ ಬುದ್ಧಿಗೆ ಹೃದಯಕ್ಕೆ ಸಂಸ್ಕಾರ ನೀಡುವ ಭಾಷಿಕ ಅಭಿವ್ಯಕ್ತಿಯೂ ಆಗಿರುತ್ತದೆ. ಶೇಣಿ ಗೋಪಾಲಕೃಷ್ಣ ಭಟ್ಟರ "ಅರ್ಥಗಾರಿಕೆ ಎಂದರೆ ಅದು ಸರಸ್ವತಿಯ ತೀರ್ಥಾವತಾರ, ಅದು ಕನ್ನಡಾಂಬೆಯ ವಿಜಯ ಯಾತ್ರೆಯ ಅವಿನಾಶಿಧ್ವಜ" ಎಂದರೆ ಅತಿಶಯೋಕ್ತಿಯಲ್ಲ.

ಶೇಣಿಯವರ ಕಂಠದಲ್ಲಿ, ಭಾವದಲ್ಲಿ ಅವರ ಸೂಕ್ಷ್ಮ ಪ್ರಜ್ಞೆಯಲ್ಲಿ ಪ್ರತಿಭೆಯ ಮೂಸೆಯಲ್ಲಿ ಕರಗಿದ ಅರ್ಥವತ್ತಾದ ಮಾತ್ರಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪುರಾಣ ಪಾತ್ರಗಳ ಕುರಿತು ಮಾಡಿದ ಹೊಸ ವ್ಯಾಖ್ಯಾನವಾಗಿದೆ.

ಶೇಣಿಯವರು ನಿರ್ವಹಿಸಿದ ರಾಮಾಯಣದ ಇಪ್ಪತ್ತೆರಡು ಪಾತ್ರಗಳನ್ನು ಆಯಾ ಪ್ರಸಂಗದಲ್ಲಿ ಉದಾತ್ತೀಕರಿಸಿ ಪಾತ್ರದ ಮನೋವಿಶ್ಲೇಷಣೆ ನಡೆಸಿ ತಾನೆ ಪಾತ್ರವಾಗಿ ಮಾತನಾಡಿದ ಅವರದ್ದೆ ಭಾಷೆಯಲ್ಲಿ ವ್ಯಕ್ತವಾದ ಮಾತುಗಳನ್ನು ತದ್ವತ್ತಾಗಿ ಸೆರೆಹಿಡಿದು ದಾಖಲಿಸಿದ ಕೃತಿ "ಶೇಣಿ ರಾಮಾಯಣ" ಪ್ರಸಂಗದರ್ಶನ.

ಪ್ರಸಂಗದರ್ಶನ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟ ಕೃತಿ. ವಾಚಿಕಾಭಿವ್ಯಕ್ತಿಯ ಈ ಗ್ರಂಥವನ್ನು ಡಾ. ಗೋಪಾಲಕೃಷ್ಣ ಹೆಗಡೆಯವರು ದಾಖಲಿಸಿದ್ದಾರೆ. ಬೇರೆ ಬೇರೆ ಕಾಲದಲ್ಲಿ ಶೇಣಿಯವರು ತಾಳಮದ್ದಳೆಯಲ್ಲಿ ಹೇಳಿದ ಅರ್ಥವನ್ನು ಸಂಗ್ರಹಿಸಿ ದಾಖಲಿಸಿದ ಈ ಕೃತಿ ರಾಮಾಯಣ ಪಾತ್ರಗಳ ಪುನರ್ ಸೃಷ್ಟಿಯಾಗಿದೆ. ಯಕ್ಷಗಾನಾಸಕ್ತರಿಗೆ ಈ ಕೃತಿ ಅರ್ಥಪೂರ್ಣ ಅಧ್ಯಯನವನ್ನು ಒದಗಿಸುತ್ತದೆ.

೪.೧೩.೨. ಶೇಣಿಭಾರತ – ಪ್ರಸಂಗದರ್ಶನ : ಅರ್ಥಧಾರಿಯಾಗಿ ಶೇಣಿಯವರು ಮಹಾಭಾರತದ ಪಾತ್ರಗಳನ್ನು ರಂಗದಲ್ಲಿ ಮಾತಿನ ಮೂಲಕ ಪುನರ್ ಸೃಷ್ಟಿಸಿದ್ದಾರೆ. ಅವರು ನಿರ್ವಹಿಸಿದ ಪಾತ್ರಗಳನ್ನು ಅವರ ಮಾತಿನಲ್ಲೆ ದಾಖಲಿಸಿದ್ದು ಶೇಣಿಭಾರತ, ಮಹಾಭಾರತ ಪ್ರಸಂಗದರ್ಶನ.

ಶೇಣಿಯವರು ಈ ಕೃತಿಯಲ್ಲಿ ಶಂತನು, ಸಾಲ್ವ, ಭೀಷ್ಮ, ದ್ರುಪದ, ಭೀಮ, ಧರ್ಮರಾಯ ಜರಾಸಂಧ, ಶಿಶುಪಾಲ, ಅರ್ಜುನ, ಕೃಷ್ಣ ಕೌರವ ಕರ್ಣ, ಮುಂತಾದ ಪಾತ್ರಗಳಿಗೆ ಹೇಳಿದ ಅರ್ಥವನ್ನು ದಾಖಲಿಸಲಾಗಿದೆ. ಇಲ್ಲಿ ಪಾತ್ರಗಳ ಮಾತುಗಳು ವಾಚ್ಯದಲ್ಲಿ ಕಥೆಯನ್ನು ಮುಂದುವರಿಸುಕೊಂಡು ಹೋಗುವ ಶಕ್ತಿಯನ್ನು ಹೊಂದಿದೆ. ಶೇಣಿಯವರು ಅರ್ಥಗಾರಿಕೆಯಲ್ಲಿ ವಿಶಿಷ್ಟ ಭಾಷೆಯನ್ನು ಬಳಸುತ್ತಾರೆ. ಅದು ಅವರ ಮಾತಿನ ಓಘವನ್ನು ಅಭಿವ್ಯಕ್ತಿಗೆ ಭಾವನೆಯನ್ನು ತಂದುಕೊಡುತ್ತದೆ. ಇಂತಹ ರಸಭಾವ ಪುಷ್ಟಿಗೆ ಕಾರಣವಾದ ಶೇಣಿ ಮಾತುಗಾರಿಕೆ ಆಶುಕಾವ್ಯವೆ ಆಗಿದೆ. ಇದನ್ನು ದಾಖಲಿಸಿದ ಗ್ರಂಥದಲ್ಲಿ ಮಾತು ಅಕ್ಷರವಾಗಿ ಪಡಿಮಾಡಿದೆ. "ಸೃಷ್ಟಿ ಪುನರ್ ಕಥನ ಪರಂಪರೆ ಕನ್ನಡದಲ್ಲಿದೆ. ಶೇಣಿಯವರು ತಮ್ಮ ಅರ್ಥಗಾರಿಕೆಯ ಮೂಲಕ ಇಲ್ಲಿ ಶೇಣಿ ಭಾರತವನ್ನು ಪುನಃ ನಿರೂಪಿಸಿದ್ದಾರೆ. ಈ ನಿರೂಪಣೆಯಲ್ಲಿ ಅವರ ವ್ಯಕ್ತಿತ್ವ ವಿಶಿಷ್ಟ ಮುದ್ರೆ ಎದ್ದು ಕಾಣುತ್ತದೆ. ಆದರೆ ಇದು ಮೌಖಿಕ ಪರಂಪರೆಯದು. ಇವನ್ನೆಲ್ಲ ಅಕ್ಷರರೂಪಕ್ಕೆ ತಂದು ಒಂದರ ವ್ಯವಸ್ಥೆಯಲ್ಲಿ ಜೋಡಿಸಿದ್ದು ಒಂದು ಸಾಹಸವೇ ಆಗಿದೆ. ಈ ಕೆಲಸವನ್ನು ಹೊಣೆಗಾರಿಕೆಯನ್ನು ನಿರ್ವಹಿಸಿದ ಡಾ. ಜಿ.ಎಲ್. ಹೆಗಡೆ ಅಭಿನಂದನಾರ್ಹರು."[೩೬]

ಈ ಕೃತಿ ವಿಶಿಷ್ಟವಾದುದು. ಇದೊಂದು ವಾಚಿಕಾಭಿವ್ಯಕ್ತಿಯ ಲಿಖಿತ ರೂಪದ ಗ್ರಂಥ. ಮಹಾಭಾರತವನ್ನು ಪಾತ್ರಗಳ ಮಾತು ಧ್ವನಿಯಲ್ಲಿ ಅಭಿವ್ಯಕ್ತಿಗೊಳಿಸಿದ್ದನ್ನು ಡಾ. ಜಿ.ಎಲ್. ಹೆಗಡೆಯವರು ಲಿಖಿತರೂಪಕ್ಕೆ ತಂದರು. ಶೇಣಿಯವರ ಪಾತ್ರ ಚಿತ್ರಣ ಶೈಲಿ ಕಲಾಸಕ್ತರಿಗೆ ಮಾದರಿಯಾಗಿದೆ.

೪.೧೪. ಯಕ್ಷಗಾನ ಆಶುವಾಙ್ಮಯ

ಯಕ್ಷಗಾನ ಬಯಲಾಟ ಮತ್ತು ತಾಳಮದ್ದಳೆಗಳಿಗೆ ಪ್ರಸಂಗ ಪದ್ಯವೇ ಆಧಾರ. ಪ್ರಸಂಗವನ್ನಾಧರಿಸಿದ ಅಭಿವ್ಯಕ್ತಿಯಲ್ಲಿ ಆಂಗಿಕ ವಾಚಿಕ, ಅಹಾರ್ಯ ಸಾತ್ವಿಕಾಭಿನಯಗಳು

೩೬. ಕೆರೆಮನೆ ಶಂಭು ಹೆಗಡೆ – ಅಧ್ಯಕ್ಷರ ಮಾತು – ಶೇಣಿಭಾರತ – ಪು. ೪

ಅಭಿನಯಾಂಗಳಾಗಿ ವೇದ್ಯವಾಗುತ್ತದೆ. ಡಾ. ಎಂ ಪ್ರಭಾಕರಜೋಶಿಯವರ "ಪ್ರಸಂಗಪಠ್ಯ" "ಸಂಗೀತಪಠ್ಯ" "ಶಾಬ್ದಿಕಪಠ್ಯ" ವೆಂದು ತಾಳಮದ್ದಳೆಯ ಪಠ್ಯವನ್ನು ಗೃಹಿಸಿದ್ದಾರೆ.[೩೭] "ಶಾಬ್ದಿಕಪಠ್ಯ" ಇದು ಅರ್ಥಧಾರಿಗಳ ಪರಸ್ಪರ ಸಂವಾದದ ಮೂಲಕ ನಾಟಕೀಯತೆಯನ್ನು ರೂಪಿಸುತ್ತಾರೆ. "ಶಾಬ್ದಿಕಪಠ್ಯ" ಚಲನಶೀಲವಾದದು.[೩೭] ಕಲಾವಿದನ ಭಾಷಪ್ರೌಢಿಮೆ, ಪುರಾಣಜ್ಞಾನ, ವಿಚಾರಗಳನ್ನು ಸಮಕಾಲೀನಗೊಳಿಸುವ ಕೌಶಲ್ಯವನ್ನು ಇದು ಆಧರಿಸುತ್ತದೆ.

ಯಕ್ಷಗಾನದ "ಶಾಬ್ದಿಕಪಠ್ಯವು ಆಶುಕಥನ, ಆಶುವಚನವಾಗಿರುತ್ತದೆ.[೩೮] ಇದನ್ನು ಅರ್ಥಗಾರಿಕೆ, ಎಂದೂ ಅರ್ಥಹೇಳುವದೆಂತಲೂ ಅರ್ಥೈಸುತ್ತಾರೆ. ಯಕ್ಷಗಾನದ ಬಯಲಾಟದ ಅರ್ಥಗಾರಿಕೆಯನ್ನು ಒಳಗೊಂಡು ತಾಳಮದ್ದಳೆಯಲ್ಲಿ ಪ್ರಯೋಗವಾಗುವ ಮಾತುಗಾರಿಕೆಯನ್ನು ಆಶುವಾಙ್ಞಯವೆಂದು ಇಲ್ಲಿ ಪರಿಗಣಿಸಲಾಗಿದೆ. ರಂಗದಲ್ಲಿ ಕಲಾವಿದನ ವಾಚಿಕಾಭಿವ್ಯಕ್ತಿಯ ಒಟ್ಟು ಸ್ವರೂಪವನ್ನು ಪ್ರತಿನಿಧಿಸುತ್ತದೆ.

ವಾಚಿಕ:-ಯಕ್ಷಗಾನ ಬಯಲಾಟದ ಅರ್ಥಗಾರಿಕಯನ್ನು 'ವಾಚಿಕ' ಎಂದು "ಭರತನಾಟ್ಯ ಶಾಸ್ತ್ರದಲ್ಲಿ ಹೇಳಿದಂತೆ ನಾಲ್ಕು ಅಭಿನಯಾಂಗಗಳಲ್ಲಿ ಒಂದಾದ ವಾಚಿಕಾಬಿಯನಕ್ಕೆ ಸಂಬಧಿಸಿದ್ದು, ಮಾತಿನ ಮೂಲಕವೆ ರಂಗಭೂಮಿಯ ಅವರಣವನ್ನು ನಿರ್ಮಿಸಿ ಕೊಡುವ ಮಾತಿನ ಕಲೆ ಇದು ಮಾತುಕೇವಲ ಸನ್ನಿವೇಶದ ಸಂವಹನಕ್ಕೆ ಬೇಕಾದ ಪದ ಜೋಡಣೆಗಳಿಂದ ಅಭಿನಯ ಪೂರ್ವಕ ಮಾತನಾಡುವುದು ಅರ್ಥಗಾರಿಕೆ ಅಥವಾ ವಾಚಿಕಾಭಿನಯ"[೩೯]

"ವಾಚಿಕ"ವು ಮಾತನಾಡುವ ಭಾಷೆಯ ಆಗಿದ್ದರೂ ಸಂದರ್ಭ ಸನ್ನಿವೇಶಗಳಲ್ಲಿ ಬಳಸಲ್ಪಡುವ ಭಾಷೆ ಆಡುಭಾಷೆಯಾಗಿರದೆ, ಗಾಂಥಿಕ ಭಾಷೆಯೂ ಆಗಿರದೆ ಭಿನ್ನವಾದ ಶೈಲಿಯನ್ನು ಅನುಸರಿಸರುವ ಶೈಲಿಕೃತ ಭಾಷೆಯನ್ನು ಬಳಸುವುದು ರೂಢಿಯಾಗಿದೆ. ಅರ್ಥಗಾರಿಕೆ ಪ್ರಸಂಗಪಠ್ಯದ ಸರಳನುವಾದ, ಭಾವಾನುವಾದ, ಹಾಗೂ ಸಾಂದರ್ಭಿಕವಾಗಿ ಸಮಕಾಲೀನ ಸಂಸ್ಕೃತಿಯ ಅಭಿವ್ಯಕ್ತಿಗಳನ್ನು ಒಳಗೊಂಡು ಪುರಾಣಪಾತ್ರಗಳ ಮೂಲಕ ವರ್ತಮಾನದ ಧ್ವನಿಯಾಗಿಯೂ ವ್ಯಕ್ತಗೊಳ್ಳುತ್ತದೆ. ವಾಚಿಕದ ಅಭಿವ್ಯಕ್ತಿಯ ಸಮಷ್ಟಿಯ ವಾಙ್ಞಯವಾಗಿ ರೂಪುಗೊಳ್ಳುತ್ತದೆ.

೪.೧೫. ಆಶುವಾಙ್ಮಯದ ಸ್ವರೂಪ

ಬಯಲಾಟವಿರಲಿ, ತಾಳಮದ್ದಳೆಯಿರಲಿ ಪ್ರಸಂಗ ಪಠ್ಯ ಪದ್ಯದ ಹಾಡುಗಾರಿಕೆ; ವಾಚಿಕಾಭಿನಯಕ್ಕೆ ಮೊದಲು ಅವರಣ ಚೌಕಟ್ಟನ್ನು ನಿರ್ಮಿಸುತ್ತದೆ. ಭಾಗವತರು ಪ್ರಸಂಗಪದ್ಯದ ಚೌಕಟ್ಟಿನಲ್ಲಿ ಅರ್ಥಧಾರಿಯ ಅರ್ಥವನ್ನು ಹೇಳುವುದು. ಕಥಾವಸ್ತುವನ್ನು ಮುಂದುವರಿಸುವ ಪಾತ್ರದ ಪರಿಚಯವನ್ನು ಪೀಠಿಕೆಯ ಮೂಲಕ ಪಾತ್ರದ ಅಂತರಂಗವನ್ನು ಸ್ವಗತದ ಮೂಲಕ, ಸಂಭಾಷಣೆಯನ್ನು ಬಹಿಂಗವಾಗಿ ಪ್ರಶ್ನಿಸುವ, ಉತ್ತರಿಸುವ ಮೂಲಕ ವಾದವಿವಾದಗಳನ್ನು ಸನ್ನೀವೇಶವನ್ನು ಅರ್ಥೈಸುವ ಮೂಲಕ ಮಾತು ಪ್ರಯೋಗವಾಗುತ್ತದೆ. "ತಾನು ಯಾರು" ಉದ್ದೇಶವೇನು? ಪಾತ್ರದ ಧೋರಣೆಗಳೇನು? ಮುಂದೇನನ್ನು ಮಾಡಲಿದ್ದೇನೆ? ಸನ್ನಿವೇಶದ ಸಂದರ್ಭದ ಔಚಿತ್ಯವೇನು ಎಂಬುದನ್ನು ರಸವತ್ತಾಗಿ, ಶೈಲಿಕನ ಭಾಷೆಯಲ್ಲಿ ಅಭಿವ್ಯಕ್ತಿಗೊಳಿಸುವಾಗ ಭಾಷೆ ಅರ್ಥಗಾರಿಕೆಯಾಗಿ ಪರಿಣಮಿಸುತ್ತದೆ.

೩೭. ಡಾ. ಎಂ. ಪ್ರಭಾಕರಜೋಶಿ talamaddale: text, context and performance(1990) ಪಾಠಾಂತರ ಪು. ಕರ್ನಾಟಕ ಭಾರತ ಕಥಾಮಂಜರಿ ಪು ೧೧ **ಪುಟ** ೧೦೫

೩೮. ಡಾ.ಮಾಧವಪೇರಾಜೆ. ಮಿಮರ್ಶಾತ್ಮಕ ಸಮೀಕ್ಷೆ ಪು೭೫ (ಯಕ್ಷಗಾನ ತಾಳಮದ್ದಳೆ ರಂಗ ಸಂಕಥನ

೩೯. ಅದೇ

ತಾಳಮದ್ದಳೆಗೆ ರಾಮಯಾಣ ಮಹಾಭಾರತ ಭಾಗವತದ ಕೆಲವು ಪ್ರಸಂಗಗಳು ಮಾತ್ರ ಸೂಕ್ತವಾದುದು. ಪ್ರಸಂಗಗಳನ್ನು ಆಯ್ದುಕೊಳ್ಳವಾಗಲೆ ವಾಚಿಕಾಭಿವ್ಯಕ್ತಿಯ ಪ್ರಧಾನ ಪ್ರಸಂಗಗಳನ್ನು ಆಯ್ದುಕೊಳ್ಳಲಾಗುತ್ತದೆ. ಪಟ್ಟಾಭಿಷೇಕ, ಪಂಚವಟಿ, ಪಾದುಕಾಪ್ರಧಾನ, ವಾಲಿಮೋಕ್ಷ, ಸೀತಾಪರಿತ್ಯಾಗ, ರಾಮನಿರ್ಯಾಣ ಏಕಾದಶಿಪ್ರಸಂಗ, ಕರ್ಣಾರ್ಜುನ, ಭೀಷ್ಮವಿಜಯ, ಭೀಷ್ಮಪರ್ವ, ಮಾಗಧವದೆ, ಅಂಗದ ಸಂಧಾನ ರಾವಣನವಧೆ, ಸೀತಾಪರಿತ್ಯಾಗ, ಗೀತೋಪದೇಶ, ಮುಂತಾದ ಪ್ರಸಂಗಗಳು ಹಿಂದಿನಿಂದಲೂ ಪ್ರಸಿದ್ದವಾಗಿತ್ತು. ಬಯಲಾಟದ ಎಲ್ಲ ಪ್ರಸಂಗಗಳು ತಾಳಮದ್ದಳೆಗೆ ಆಯ್ದುಕೊಳ್ಳಲಾಗುವುದು. ಇದರಲ್ಲಿ ರಂಗದಲ್ಲಿ ಯಶಸ್ವಿಯಾಗುವ ಪ್ರಸಂಗಗಳು ತಾಳಮದ್ದಳೆಯಲ್ಲಿ ಕಳೆಕಟ್ಟಲಾರವು. ತಾಳಮದ್ದಳೆ, ಒಂದು ಮೌಖಿದ ಸಂಭಾಷಣೆ, ಧರ್ಮಜಿಜ್ಞಾಸೆ, ಮೌಲ್ಯನಿಷ್ಕರ್ಷವಿರುವ ಪ್ರಸಂಗಗಳನ್ನು ಆಯ್ದುಕೊಳ್ಳುವುದು ಸಾಮಾನ್ಯ. ಹಿಂದೆ ಈ ಹಿನ್ನಲೆಯಲ್ಲಿ ತಾಳಮದ್ದಳೆಯು ದೇವಾಲಯಗಳಲ್ಲಿ, ಮನೆಗಳಲ್ಲಿ, ಪ್ರಸಂಗಪದ್ಯ ಗಾನಾಸ್ವಾದ ಮತ್ತು ಮಾತಿನ ಮೂಲಕ ಮೌಲ್ಯ ಸಂಘರ್ಷವನ್ನು ತೆರೆದಿಡುವ ಕಾರಣದಿಂದಲೆ ಆಕರ್ಷಣಿಯ ವೇದಿಕೆಯಾಗಿತ್ತು.

ಅರ್ಥಗಾರಿಕೆಯು ಕೂಡ ಒಂದು ವ್ಯವಸ್ಥಿತವಾದ, ಶಿಸ್ತನ್ನು ಹೊಂದಿದ ಅಭಿವ್ಯಕ್ತಿಯಾಗಿದೆ. ಹಿಮ್ಮೇಳನದ ಹಾಡುಗಾರಿಕೆ ಕಾವ್ಯಮಯ ಅವರಣವನ್ನು ನಿರ್ಮಿಸುತ್ತದೆ. ಕಾವ್ಯದ ಅರ್ಥ ಆಶುಗದ್ಯವಾಗಿ ರೂಪಿಸಲ್ಪಡುತ್ತದೆ. ಪ್ರಸಂಗದ ಪಾತ್ರವನ್ನು ಗದ್ಯದ ಶಿಸ್ತಿನಲ್ಲಿ ಅಭಿವ್ಯಕ್ತಿಮಾಡುವ ಮಾತು ಒಂದು ಪ್ರಬಂಧ, ಕಥನವಾಗಿ ರೂಪಿಸಲ್ಪಡುತ್ತದೆ. ಈ ವಾಚಿಕ ಕ್ರಿಯೆಗೆ ಅದರದ್ದೇ ಆದ ಲಕ್ಷಣವಿದೆ. ಅದನ್ನು "ಪೀಠಿಕೆ, ಪಾತ್ರಚಿತ್ರಣ, ಸಂಭಾಷಣೆ, ವಾದ ಪ್ರತಿವಾದ ಭಾಷೆ, ಶೈಲಿ, ಶಬ್ಧಪ್ರಯೋಗ, ಲೋಕೋಕ್ತಿಗಳೆಂಬ ಅಷ್ಟಾಂಗಳಿರಬೇಕೆಂಬ ಲಕ್ಷಣವನ್ನು ಗುರುತ್ತಿಸಲಾಗಿದೆ".[೪೦]

ಅರ್ಥಧಾರಿ ತಾನು ತೊಡಗಿಕೊಳ್ಳುವಾಗ ಪೀಠಿಕಾರೂಪದಲ್ಲಿ ಪಾತ್ರ ಸನ್ನಿವೇಶವನ್ನು ಪರಿಚಯಯಿಸಿ ಪೀಠಿಕೆಯಲ್ಲಿ ಇಡಿ ಕಥೆಯ ಬೀಜರೂಪದಿಂದ 'ಉಪಬ್ರಹ್ಮಣ'ಗೊಂಡಿರುತ್ತದೆ. ಪದ್ಯದಲ್ಲಿನ ಸನ್ನಿವೇಶವನ್ನು ಮಾತಿನರೂಪದಲ್ಲಿಳಿಸುವಾಗ ಪಾತ್ರದ ನಡೆಯಂತೆ ಸಂಭಾಷಣೆಗೆ ತೊಡಗಿಕೊಳ್ಳಬೇಕು, ಮಾತು, ಸಂಭಾಷಣೆಯಾಗಿ, ಸಂವಾದವಾಗಿ ಅರ್ಥದ ಬಗೆಗಳಾದ ವಾಚ್ಯ, ವ್ಯಂಗ, ದ್ವನಿಗಳು ಮಾತಿನ ಪ್ರಯೋಗಿಸಲ್ಪಟ್ಟು ರಸಾತ್ಮಕತೆಯ ಭಾವಾನುಭಾವ, ವಿಭಾವ ಸಂಚಾರಿ ಭಾವಗಳು ಕೇಳುಗನಲ್ಲಿ ಉದ್ಯುಕ್ತಗೊಳ್ಳಲು ಸಹಕಾರಿಯಾಗಬೇಕು.

ಪಾತ್ರಚಿತ್ರಣವು ಅಹಾರ್ಯ ಅಂಗಿಕಗಳ ಹಂಗಿಲ್ಲದೆ ಪದ್ಯವಾಗುವ ಗದ್ಯದಿಂದಲೆ ಶೋತೃವಿನ ಮನಸ್ಸಿಗೆ ಪುರಾಣ ಪಾತ್ರವೊಂದು ಧ್ವನಿಸುವುದಕ್ಕೆ ಅರ್ಥಧಾರಿಯಾದವನಿಗೆ ಭಾಷೆ, ಪುರಾಣಪಾತ್ರಗಳ, ವಾಕ್‌ಸಾಮರ್ಥ್ಯ, ಪ್ರತಿಭೇ, ಮಧುರಗಂಭೀರ ದ್ವನಿ, ಅನಭವ, ಸಾಧನೆಗಳಲ್ಲಿ ಸಿದ್ದಿಸಿರಬೇಕು. ಅದ್ದರಿಂದ 'ಅರ್ಥಗಾರಿಕೆ' ಸಹಜ ಮಾತಿಗಿಂತ ಭಿನ್ನವಾದದ್ದು, ಪದ ಪ್ರಯೋಗ ಶೈಲಿ, ಪದ್ಯದ ಎತ್ತುಗಡೆಗೆ ಪೂರಕವಾದ ಶೃತಿಬದ್ಧತೆ, ಲಯಲಾಸ್ಯತೆಗಳು ಮಾತಿನಲ್ಲಿದ್ದಾಗ 'ಶ್ರವ್ಯ'ವಾಗುವ ಮಾತು ಗದ್ಯವಾಗಿ ಮಾರ್ಪಡುತ್ತವೆ.[೪೧]

---

೪೦. ಡಾ. ಮೋಹನಕುಂಟಾರ್–ಯಕ್ಷಗಾನ ವಾಚಿಕಾಧ್ಯಯನ ಕನ್ನಡವಿಶ್ವವಿದ್ಯಾಲಯ ಹಂಪಿ. ಅರ್ಥಗಾರಿಕೆ ಪು ೨೦
೪೧. ಕೃಷ್ಣಭಟ್ ಪೆರ್ಲ – ವಾಚಿಕ ತಾಳಮದ್ದಲೆಯಲ್ಲಿ ಅರ್ಥಗಾರಿಕೆ – ಪು. ೬೫

ಸಹಜ ಮಾತಿನ ಸಂಭಾಷಣೆಯಲ್ಲಿ ಅಭಿವ್ಯಕ್ತಿ ಮಾನಸಿಕ ಪಠ್ಯವಾಗಿ ಮನಸ್ಸಿನಲ್ಲಿ ಮೂಡಿದರೂ ಅದನ್ನು ಶೈಲಿಕೃತಮಾತನ್ನಾಗಿ ಪರಿವರ್ತಸಿ ಮಾತನಾಡುವ ಭಾಷೆಯಪದ ಮಾತನ್ನು ಸಾಹಿತ್ಯವಾಗಿಸುತ್ತದೆ.

ತಾಳಮದ್ದಳೆಯ ಭಾಷೆಗೆ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಲಾಗಿದೆ. ಅರ್ಥಗಾರಿಕೆ ಎಂಬುದು ಪುರಾಣದ ಕಥನದ ಹಿನ್ನಲೆಯಲ್ಲಿ ನಿರ್ದಿಷ್ಟ ಸಮುದಾಯದ ಕಲಾವಿದರು್ಲ ನಿರ್ದಿಷ್ಟ ಸಾಂಸ್ಕೃತಿಕ ವಲಯವೊಂದರಲ್ಲಿ ಒಳಸಿಪಡಿಸಿಕೊಳ್ಳುವ ಪ್ರಕ್ರಿಯೆಯಾಗಿದೆ."[೪೨] ಇದರಿಂದ ಪುರಾಣ ಜ್ಞಾನದ ಅನುಭವಕ್ಕೆ ಪೂರಕವಾದ ಶೈಲಿಯನ್ನು ಮಾತಿಗೆ ರೂಡಿಸಿಕೊಳ್ಳಬೇಕಾದ ಅಗತ್ಯ ಅರ್ಥಧಾರಿಕೆ ಇದೆ. ಇದು ಪರಂಪರೆಯ ಚೌಕಟ್ಟು ಕೂಡ ಹೌದು. ಆದರೆ ಯಕ್ಷಗಾನದ ವಾಚಿಕಕ್ಕೆ ವರ್ತಮಾನವನ್ನು ಧ್ವನಿಸುವ ಸಾಮರ್ಥ್ಯವಿದೆ. ಇದು "ಚರಾಂಶ"ವಿದ್ದಂತೆ, ಪ್ರಸಂಗ ಪದ್ಯಗಾನ ಯಕ್ಷಗಾನ ಪಠ್ಯದ ಸ್ಥಿರಾಂಶದಂತೆ.[೪೩] ಇವರೆಡೂ ರಂಗದಲ್ಲಿ ಸ್ವತಂತ್ರ ಅಶು ಅಭಿವ್ಯಕ್ತಿಯಾದರೂ ಪ್ರಸಂಗದ ಚೌಕಟ್ಟು, ವ್ಯಕ್ತಿಯು ಬದುಕುವ ಸಮಾಜದ ಸಮಾಜಿಕ ಚೌಕಟ್ಟು, ಮತ್ತು ಪರಂಪರೆಯ ಅಭಿವ್ಯಕ್ತಿಯ ಕ್ರಮವನ್ನು ಮೀರುವಂತಿಲ್ಲ. ಕೇಳುಗನಿಗೆ ಶ್ರಾವ್ಯಾನುಭವವೇ ಹಿತವಾಗಿದ್ದು ಹೇಳುವವನಿಗೆ ಪರಂಪರೆಯ ಹಿನ್ನಲೆಯಲ್ಲಿ ಸಮಾಜಿಕ ಸಮಕಾಲೀನ ಅಂಶವನ್ನು ಧ್ವನಿ, ವ್ಯಂಗ್ಯಗಳಲ್ಲಿ ಧ್ವನಿಸುವುದೇ ತುಡಿತವಾಗಿರುತ್ತದೆ. ಇದು ಅಶುಮಾತಿನ ಅಭಿವ್ಯಕ್ತಿಯನ್ನು ಪರಿಣಾಮಕಾರಿಗೊಳಿಸುತ್ತದೆ.

ತಾಳಮದ್ದಳೆ ಭಾಷ ಪ್ರಯೋಗದ ಈ ಹಿನ್ನಲೆ ಪುರಾಣಜ್ಞಾನದ ಅನುಭವ ಸ್ವಂತವಾಗಿಸಿಕೊಂಡ ಸಮುದಾಯದವರಿಗೆ ಹತ್ತಿರವಾದುದು. ಇದರಿಂದ ಭಾಷ ಪ್ರಯೋಗದಲ್ಲಿ ಶೈಲಿಕೃತ ಸಿದ್ಧವಾದ ಮಾದರಿಯನ್ನು ಪರಂಪರೆ ಇನ್ನು ಉಳಿಸಿಕೊಂಡಿದೆ.

೪.೧೫.೧ ವಾಚಿಕದ ಭಾಷೆ

ಬಯಲಾಟ ಮತ್ತು ತಾಳಮದ್ದಳೆಯಲ್ಲಿ ಪ್ರಯೋಗವಾಗುವ ಭಾಷೆ ಇತರ ರಂಗಭೂಮಿ ಭಾಷೆಗಳಿಗಿಂತಲೂ ಭಿನ್ನವಾದುದು.

"The YAKSHAGANA is a unity of music and words, song and mimic dance and costumes.It is – as a whole – an autonomous language arti culated in the medium of space and time. The pure language of theater in the western dance the test the spoken word is absolutely predominant. All other article means are subordinate or exact in a saperate form of their own music in open dance in Batlet.[೪೪]

ಪಾಶ್ಚಾತ್ಯ ರಂಗಭೂಮಿಯ ವಾಚಿಕ ಪ್ರಧಾನ ಕಲೆಗಳಿಗಿಂತ ವಾಚಿಕವೇ ಉಳಿದೆಲ್ಲವನ್ನು ಗೌಣವಾಗಿಸುವ ತಾಳಮದ್ದಳೆ ಅರ್ಥಗಾರಿಕೆ ವಿಶಿಷ್ಟವಾದುದು. ಬಯಲಾಟದಲ್ಲಿ ಮಾತು ಕಥೆಯ

೪೨. ಡಾ. ಕೆ.ಎಂ. ರಾಘವನಂಬಿಯಾರ್. ಅರ್ಥಗಾರಿಕೆ ಒಂದು ಸಂಈಕ್ಷೆ ಲೇಖನ–ವಾಚಿಕ– **ಪು ೬**

೪೩. ಡಾ. ಮೋಹನ್‌ಕುಂಟಾರ್– ವಾಚಿಕದ ಹಿನ್ನೆಲೆ–ಯಕ್ಷಗಾನ ವಾಚಿಕಾಧ್ಯಯನ – ಪು. ೪೩

೪೪. Prof. walterpfaff- A Pure Language of Theater, **ಸ್ವರ್ಣ ಕಮಲ–ಪು. 353**

ಮುಂದುವರಿಕೆಗೆ ಕುಣಿತಾಭಿನಯಗಳಿಗೆ ಅವಕಾಶವಿಟ್ಟುಕೊಂಡು ಅಭಿವ್ಯಕ್ತವಾಗುತ್ತದೆ. ಎಷ್ಟೋಸಲ ಮಾತಿಗೆ ಕಡಿವಾಣಹಾಕಿ ಅಭಿನಯದ ಮೂಲಕ ಉತ್ತರಿಸುವ ಸಂದರ್ಭಗಳು ಇವೆ. ಆದರೆ ತಾಳಮದ್ದಳೆಯ ಪ್ರೇಕ್ಷಕ ಪದ್ಯ ಮುಗಿದಾಗ ಕುಣಿತಾಭಿನಯಗಳನ್ನು ಕಲ್ಪಿಸದೆ ಮಾತಿನ ಅರ್ಥದ ಪ್ರವಾಹದಲ್ಲಿ ಎಲ್ಲವನ್ನು ಸಾಕ್ಷಾತ್ಕರಿಸಿಕೊಳ್ಳುವ ಅನುಭವಕ್ಕೆ ಒಳಗಾಗುತ್ತಾನೆ.

ಯಕ್ಷಗಾನದ ವಾಚಿಕಕ್ಕೆ ಪ್ರಾದೇಶಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಕಲ್ಪನೆ ಇದೆ. ಇಲ್ಲಿ ಪ್ರಯೋಗವಾಗುವ ಭಾಷೆ, ಕನ್ನಡದ ಉಪಭಾಷೆಯ ಪ್ರಭಾವಕ್ಕೊಳಗಾಗಿದೆ. ತಾಳಮದ್ದಳೆ ಅರ್ಥಗಾರಿಕೆಯಲ್ಲಿ ಪ್ರಮುಖವಾಗಿ ತೊಡಗಿಕೊಂಡವರು ಹವ್ಯಕರೇ ಆಗಿದ್ದಾರೆ. ಹವ್ಯಕ ಭಾಷೆಯ ಹಿಡುನುಡಿ, ವಾಕ್ಯಪ್ರಯೋಗ, ಭಾಷಾ ಸಂರಚನೆ ಸ್ಪಷ್ಟವಾಗಿ ಗುರುತಿಸಲ್ಪಡುತ್ತದೆ.

ಕನ್ನಡದ ಅಪೂರ್ವ ಸಂಕಥನ[೪೫] ಸ್ವರೂಪವಾಗಿ ತಾಳಮದ್ದಳೆಯ ಲಕ್ಷಣವನ್ನು ಕೃತಿ ವಾಚನವಾಗುವ ನೆಲಗಟ್ಟು ಮೂರು ಹಂತಗಳಲ್ಲಿರುತ್ತದೆ.

೧. ಸಂರಚನವಾದವು ವಾಚಿಕನ ಮೂಲಕ ಕೃತಿಯು ಸಂವೇದನೆಗೆ ಒಳಗಾಗುತ್ತದೆ ಎಂಬುದನ್ನು ಪ್ರತಿಪಾದಿಸುವುದು.
೨. ಅಂತರ್ ಪಾಠೀಯತೆಯ ಪ್ರತಿಪಾದನೆ.
೩. ಆ ಮೂಲಕ ಕೃತಿ ಮತ್ತು ಸಂಸ್ಕೃತಿಯ ಸಂಬಂಧವನ್ನು ಪ್ರತಿಪಾದಿಸಿದುದು.

ನವ್ಯೋತ್ತರ ಸಂಕಥನವಾದ ಪ್ರತಿಪಾದಕರು ಗುರುತಿಸಿದ ಸೈದ್ಧಾಂತಿಕ ನೆಲೆಯಲ್ಲಿ ಅರ್ಥಗಾರಿಕೆಯ ಭಾಷೆ ಪ್ರಯೋಗವಾದುದನ್ನು ಗುರುತಿಸಬಹುದಾಗಿದೆ. ಮೊದಲ ಹಂತದಲ್ಲಿ "ಪದ್ಯಕ್ಕೆ ಅರ್ಥಹೇಳುವ" ಕ್ರಮದಲ್ಲಿ ಆಡುಭಾಷೆಯಆಧಿಕ್ಯದಿಂದ ಕೂಡಿದ ಮಾತುಗಳು ರೂಢಿಯಲ್ಲಿದ್ದವು. ಎರಡನೆ ಹಂತದ ವಿವಿಧ ಮೂಲಗಳನ್ನು ಬಳಸಿ ಮಾತಿನ ಪಠ್ಯವನ್ನು ವೈಶಿಷ್ಟ್ಯಪೂರ್ಣವಾಗಿಸುವ ಪ್ರಯತ್ನ ನಡೆಯಿತು,

ಮೂರನೆ ಹಂತದಲ್ಲಿ ವಿವಿಧ ಸಾಂಸ್ಕೃತಿಕ ಅಯಾಮವುಗಳು ಸಾಮಾಜಿಕ ಸ್ಥಿತ್ಯಂತರಗಳು ಮತ್ತು ಪ್ರತಿಭೆಯ ಪ್ರವೇಶದಿಂದ ಕೃತಿ ಸಂಸ್ಕೃತಿಯ ಸೈದ್ಧಾಂತಿಕ ನೆಲೆಯಲ್ಲಿ ಭಾಷೆ ಪ್ರಭಾವಿ ಮಾಧ್ಯಮವಾಗಿ ಬೆಳೆಯಿತು.

ಯಕ್ಷಗಾನದ ಅರ್ಥಗಾರಿಕೆಯ ಭಾಷೆ ವ್ಯಾವಹಾರಿಕ ನೆಲೆಯಿಂದ ಸಾಂಸ್ಕೃತಿಕ ನೆಲೆಗೆ ಬದಲಾದದ್ದು. ಹವ್ಯಕರ ಭಾಷಿಕನೆಲೆಯಲ್ಲೂ ಗುರುತಿಸಬಹುದಾಗಿದೆ. ಉತ್ತರಕನ್ನಡ, ದಕ್ಷಿಣಕನ್ನಡ, ಮಲೆನಾಡಿನ ಘಟ್ಟ ಸೀಮೆಯಲ್ಲಿ ವಾಸವಾಗಿದ್ದ ಹವ್ಯಕರು ಪ್ರಾದೇಶಿಕ ನೆಲೆಯಲ್ಲಿ ಪ್ರತ್ಯೇಕ ಭಾಷಾಭಿವ್ಯಕ್ತಿಯನ್ನು ರೂಢಿಸಿಕೊಂಡವರು. ಘಟ್ಟದ ಮೇಲಿನ ಹವಿಗನ್ನಡಕ್ಕೂ, ಕರಾವಳಿಯ ಹವಿಕನ್ನಡಕ್ಕೂ ಪ್ರತ್ಯೇಕತೆಯಿದೆ. ದಕ್ಷಿಣಕನ್ನಡದ ಪ್ರಾದೇಶಿಕ ಹವಿಕನ್ನಡ ಭಾಷೆ ಹೆಚ್ಚು ಗ್ರಾಂಥಿಕಕ್ಕೆ ಸಮೀಪವಾಗಿ ಉಚ್ಚರಿಸಲ್ಪಡುತ್ತದೆ. ಇದರಿಂದ ದಕ್ಷಿಣಕನ್ನಡದ ಅರ್ಥಗಾರಿಕೆಯ ಭಾಷೆ ಉಳಿದ ಪ್ರದೇಶಗಳ ಮೇಲೆ ಹೆಚ್ಚು ಪ್ರಭಾವ ಬೀರಿತು. ಆಡು ನುಡಿಯ ಬಳಕೆಯ ಉತ್ತರಕನ್ನಡ ಮತ್ತು ಘಟ್ಟದ ಮೇಲಿನ

೪೫. ಡಾ.ಮಾಧವಪರಾಜೆ ಯಕ್ಷಗಾನ ತಾಳಮದ್ದಳೆ– ನವೋತ್ತರ ಸಂಕಥನ, ಕನ್ನಡ ಅಪೂರ್ವ ಸಂಕಥನ, ಅರ್ಥಗಾರಿಕೆ ಪು. ೨೩೭

ಪ್ರದೇಶಗಳಿಗೆ ದಕ್ಷಿಣಕನ್ನಡದ ಅರ್ಥಧಾರಿಗಳ ಮಾತು, ನಿರರ್ಗಳತೆ, ಆಕರ್ಷಕವಾಯಿತು. ಪುರಾಣ ಕಾವ್ಯಗಳ ಭಾವ್ಯಂಜನೆ, ತರ್ಕಬದ್ಧವಾದ ಸರಣಿಗೆ, ಪೂರಕವಾಗಿದ್ದ ಅರ್ಥವಿಸ್ತಾರವನ್ನು ಧ್ವನಿಯನ್ನು ಹೆಚ್ಚು ಇಂಗಿತವಾಗಿಸಿಕೊಂಡ ಪದ ಪ್ರಯೋಗಗಳನ್ನು ಒಳಗೊಂಡ, ಭಾಷೆ ಸರ್ವರ ಆದರಕ್ಕೊಳಗಾಯಿತು. ಈಗಲೂ ಅರ್ಥಗಾರಿಕೆಯ ಭಾಷೆ ಗ್ರಾಂಥಿಕ ಭಾಷೆಗೆ ಸಮೀಪದಲ್ಲೇಉಳಿದುಕೊಂಡಿದೆ.

ಮಾಗಧನಾಗಿ ಶೇಣಿಯವರು "ನಿಮಗಾರು ಹೇಳುವವರು ಕೇಳುವವರು ಇಲ್ಲವೊ ಮಕ್ಕಳೇ? ಯಾರೂ ಉಪದೇಶ ಮಾಡುವರು ಇಲ್ವೊ? ಆದಕಾರಣ ಇವನ ನೇತ್ರತ್ವದಲ್ಲಿ ಇವನಹಿಂದೆ, ಅದುಕೂಡ ಅಯೋऽ ಕೊಳಕು ವೇಷ ಕಟ್ಟಿಕೊಂಡು ಎಲ್ಲೆಲ್ಲಿ ಧರೆಹಾರಿ ಇವಹೇಳಿದ ಹಾಗೆ ಮಾಡಿಕೊಂಡು ಬಂದು, ನಾಳೆ ಪ್ರಪ್ರಂಚದ ಮುಂದೆ ಬಂದು ಮುಖ ತೋರಿಸಬೇಡ್ವೋ? ನಿಮಗೆ ದೇವರು ಆಯುಷ್ಯ ಕೊಟ್ಟಿದ್ರೆ ಇನ್ನು ಬ್ರಹ್ಮ ನಿಮ್ಮ ತಲೆಯಲ್ಲಿ ಚೆನ್ನಾಗಿ ಬರೆದಿದ್ರೆ ನೀವೂ ಒಂದು ಕಾಲದಲ್ಲಿ ಸಿಂಹಸನಾರೂಢರಾಗಿ ಈ ಮನೆತನದ ಹೆಸರನ್ನು ಉಳಿಸಬೇಡ್ವೊ? ಅಯ್ಯೋ! ನಿಮ್ಮ ಬಾಳ್ವೆ ಹೇಗೆ ಕೆಟ್ಟು ಹೋಯ್ತಲ್ಲ. ನಿಮ್ಮ ಮುಖ ಹೀಗೆ ಸುಟ್ಟು ಹೊಯ್ತಲ್ಲ! ಗಂಡಸುತನವನ್ನು ತೋರಿಸಲ್ಲಿಕ್ಕೆ ಬಂದಿದ್ದೀರಿ ಇವನ ಸಂಗಡ!!

ಶೇಣಿಯವರ ಅರ್ಥಗಾರಿಕೆಯಲ್ಲಿನ ಪದ ಪ್ರಯೋಗ ಕ್ರಿಯಾಪದವನ್ನು ಬಳಸುವ ರೀತಿ, ವಾಡಿಕೆಯ ಪದಗಳ ಬಳಕೆ ಅವರ ವ್ಯಾವಹಾರಿಕ ಬದುಕಿನ ವಾಡಿಕೆಯ ಮಾತಿನ ಪ್ರಭಾವವನ್ನು ಚಿತ್ರಿಸುತ್ತದೆ.

ಉತ್ತರಕನ್ನಡದ ಹಳೆಯ ತಲೆಮಾರಿನ ಮೂಡ್ಕಣಿ ನಾರಾಯಣಹೆಗಡೆ, ಕೊಂಡದಕುಳಿರಾಮಹೆಗಡೆ, ಕೆರೆಮನೆ ಶಿವರಾಮಹೆಗಡೆಯವರ ಅರ್ಥಗಾರಿಕೆಯಲ್ಲಿಯೂ ಆಡುಮಾತಿನ ಪದ ಬಳಕೆಯೇ ಪ್ರಧಾನವಾಗಿತ್ತು ಎಂದು ಅಭಿಪ್ರಾಯ ಪಡುತ್ತಾರೆ. ಅಂದು ಸಾಮಾಜಿಕವಾಗಿ ಮೇಲುಸ್ತರದಲ್ಲಿದ್ದ ಹವ್ಯಕರು ಪ್ರಯೋಗಿಸಿರುವ ರಂಗಭಾಷೆ ಉಳಿದವರನ್ನು ಆಕರ್ಷಿಸುತ್ತಿತ್ತು. ಕಾರಣ ಭಾಷೆ ಎಲ್ಲ ವರ್ಗದವರ ಪರಸ್ಪರ ಸಂವಹನವನ್ನು ನಿರಂತರವಾಗಿ ಇಟ್ಟುಕೊಂಡಿದ್ದರೂ ಪ್ರತ್ಯೇಕ ಜನ ಸಮುದಾಯಕ್ಕೆ ಪ್ರತ್ಯೇಕವಾದ ಭಾಷೆಯೇ ಇತ್ತು. ಹಾಲಕ್ಕಿ ಜನಾಂಗದ ಭಾಷೆ, ಮುಕ್ರಿಜನಾಂಗದ ಭಾಷೆ, ನಾಡವರಭಾಷೆ, ಗೊಂಡಜನಾಂಗದಭಾಷೆ, ಕೊಂಕಣಿಗರು ಆಡುವ ಕನ್ನಡಭಾಷೆ, ತುಳುಭಾಷಿಗರ ಕನ್ನಡಭಾಷೆ ಇವೆಲ್ಲವೂ ಭಿನ್ನಭಿನ್ನವಾಗಿಯೇ ಇತ್ತು. ಈ ಭಾಷಿಕ ಸಮುದಾಯಗಳನ್ನು ಕಲೆ ಒಗ್ಗೂಡಿಸಿತ್ತು. ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಆಡುನುಡಿಯನ್ನು ಗ್ರಾಂಥಿಕ ವಾಗಿ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವಾಗ ಪ್ರಕಟವಾಗುವ "ಕಲಾಭಾಷೆ" ಹವ್ಯಕರು ರಂಗದಲ್ಲಿ ಪರಂಪರೆಯನ್ನಾಗಿಸಿದರು.

ರಂಗದಲ್ಲಿ ಸಮರ್ಥವಾಗಿ ಭಾಷೆ ಪ್ರಯೋಗಿಸಿದ ಜನಾಂಗದ ಕಲಾವಿದರಿಂದ ಬಂದು ಕಲಾಭಾಷೆಯ ಪರಂಪರೆ ಬೆಳದುಬಂದಿತು. ಎಲ್ಲಾ ವರ್ಗಗಳಿಂದಲೂ ಅದಕ್ಕೆ ಮಾನ್ಯತೆಯಿತ್ತು. ಕನ್ನಡದ ಇತರ ಉಪಭಾಷೆಯಾದ ಹಾಲಕ್ಕಿ ಭಾಷೆಯಾಗಲಿ, ಹಳ್ಳೇರು, ಮಕ್ರಿಯವರು ಆಡುವ ಭಾಷೆಗಳಾಗಲಿ ಸಾರ್ವತ್ರಿಕವಾಗಿ ರಂಗಭಾಷೆಗೆ ಒಪ್ಪಿತವಾಗಿಲ್ಲ. ಹವ್ಯಕ ಭಾಷೆಯ ಪ್ರಭಾವವು ಅಧಿಕ್ಯಗೊಳ್ಳಲು ಹವ್ಯಕ ಕಲಾವಿದರೆ ಕಾರಣರು. ಇತರ ಜನಾಂಗದವರ ರಂಗಭಾಷೆಯನ್ನು ಭಾಷೆಯನ್ನು ಅನುಸರಿಸಿ ರಂಗದಲ್ಲಿ ಭಾಷಾಪ್ರಯೋಗಕ್ಕಿಳಿದದ್ದು ಕಂಡುಬರುತ್ತದೆ.

ಪುರಾಣಕಥನ, ಪುರಾಣಶ್ರವಣ, ಸತ್ಯನಾರಾಯಣ ಕಥೆ, ಧಾರ್ಮಿಕ ಪ್ರಯೋಗಗಳಲ್ಲಿ ವೈದಿಕರು ಬಳಸುವ ಭಾಷೆಗೂ ಯಕ್ಷಗಾನದ ರಂಗಭಾಷೆಗೆ ಹತ್ತಿರವಾಗೆ ಇತ್ತು. ಆರಂಭದಲ್ಲಿ ಇಂತಹ ಕಥನಗಾರಿಕೆ ಪೂಜೆ ವ್ರತ್ತಗಳಲ್ಲಿ ಸಾಮೂಹಿಕವಾಗಿ ನಡೆದದ್ದು, ದೇವಸ್ಥಾನದ ಸಾಮೂಹಿಕ ಪೂಜೆಗಳಲ್ಲಿ ಪಾರುಪತ್ಯದವರು, ಮೊಕ್ತೇಸರರು ಭಕ್ತಾದಿಗಳಿಗೆ ನೀಡುವ ವಿವರಣೆಗಳೂ ಕೂಡ ಇಂದಿಗೂ ರಂಗಭಾಷೆಯ ಸ್ವರೂಪದಲ್ಲೆ ಈ ಪ್ರದೇಶಗಳಲ್ಲಿ ರೂಢಿಗತವಾಗಿ ಪ್ರಯೋಗಿಸಲ್ಪಡುತ್ತಿದೆ.

ಯಕ್ಷಗಾನದ ರಂಗಪ್ರಯೋಗದ ಭಾಷೆಯಿರಲಿ,ತಾಳಮದ್ದಳೆಯ ಭಾಷೆಯಿರಲಿ, ವಾಕ್ಯಪ್ರಯೋಗದಲ್ಲಿ ತಾರ್ಕಿಕತೆಯಿರಲ್ಲಿ, ಧ್ವನ್ಯಾರ್ಥಗಳ ಬಳಕೆಯಲ್ಲಿ ಶಿಷ್ಟತೆಯನ್ನು ಹೊಂದಿದ್ದರೂ ಪದಪ್ರಯೋಗ ನಿತ್ಯಜೀವನದ ಆಡುನುಡಿಯನ್ನು ಸಮರ್ಥವಾಗಿ ಬಳಸುತ್ತಿದೆ.ಅಂತಹ ಪದಗಳ ಉಚ್ಚಾರವು ಹವ್ಯಕ ಭಾಷೆಯಿಂದಲೇ ಪ್ರಭಾವಿತಗೊಂಡಿರುತ್ತದೆ. ಪುರಾಣಕಥನದ ಕಥನ ಸಂಸ್ಕೃತಿಯ ಪ್ರಭಾವಕ್ಕೊಳಪಟ್ಟ ವಿವಿಧ ಸಮುದಾಯಗಳು ಈ ಭಾಷೆಯನ್ನು ಪುರಾಣದ ನೆಲೆಯಲ್ಲಿಯೇ ವ್ಯಕ್ತವಾಗುವ ಯಕ್ಷಗಾನದ ಭಾಷೆಗೂ ಅನ್ವಯಿಸಿ ಆಸ್ವಾದಿಸುವ ಪರಂಪರೆಯನ್ನು ರೂಢಿಸಿಕೊಂಡಿದ್ದರಿಂದ ಈ ವಿಶಿಷ್ಟ ಭಾಷಾಶೈಲಿ ಸರ್ವರಿಂದ ಸ್ವೀಕೃತಗೊಂಡಿದೆ. ಬಯಲಾಟ, ತಾಳಮದ್ದಳೆಯಲ್ಲಿ ಇತರ ಸಾಮಾಜಿಕ ವರ್ಗದ ಪಾತ್ರಗಳು ಇಂದಿಗೂ ಅದೇ ವರ್ಗದ ಭಾಷೆಯನ್ನು ಬಳಸಿರುವ ಕ್ರಮ, ಶಿಷ್ಟ ಶೈಲಿಕೃತಭಾಷೆ ಮತ್ತು ವ್ಯವಹಾರಿಕ ಇತರ ವರ್ಗದ ಬಾಷೆಯ ಸ್ಪಷ್ಟ ವ್ಯತ್ಯಾಸವನ್ನು ಗುರುತಿಸುತ್ತದೆ. ಚಾರರು,ಬ್ರಾಹ್ಮಣವೇಷ,ರಜಕ,ಧೂತ,ಬೇಡ ಮುಂತಾದ ಪಾತ್ರಗಳು ಅಭಿವ್ಯಕ್ತಿಸುವ ಭಾಷೆ ವ್ಯವಹಾರಿಕ ಆಡುನುಡಿಯು ಆಗಿರುತ್ತದೆ. ಇದು ಶಿಷ್ಟಶೈಲಿಕೃತ ಭಾಷೆಗೆ ಇದಿರಾಗಿ ಬಳಸಿದಾಗ ರಂಜನೆಗೂ, ಹಾಸ್ಯಕ್ಕೂ ಎಡೆಮಾಡಿಕೊಡುತ್ತದೆ.

ಯಕ್ಷಗಾನ ಬಯಲಾಟ ಮತ್ತು ತಾಳಮದ್ದಳೆಯ ರಂಗದ ಭಾಷೆ ಆಶುವಾಙ್ಞಯವಾಗಿದ್ದರಿಂದ ಭಾಷಾಪ್ರಯೋಗ ಸೃಜನಶೀಲವಾದುದು, ಸ್ವಂತಿಕೆಯಿಂದ ಕೂಡಿದ್ದು ಆಗಿದೆ. ಇದು ಕಾವ್ಯದ ಸರಳಾನುವಾದ, ಭಾವನುವಾದ, ವಿವರಣೆ ವ್ಯಾಖ್ಯಾನಗಳನ್ನೊಳಗೊಂಡು ಅಭಿವ್ಯಕ್ತಗೊಳ್ಳುತ್ತದೆ. ಶಾಬ್ದಿಕಪಠ್ಯ, ವಾಚಿಕವೆಂದು ಗುರುತಿಸಲ್ಪಟ್ಟ ಈ ಅಭಿವ್ಯಕ್ತಿಗಳು ಸಾಹಿತ್ಯದ ಎಲ್ಲಾ ಲಕ್ಷಣಗಳಿಂದ ಹೃದ್ಯವಾಗುವುದರಿಂದ ಶೋತೃ ರಸಾನಂದದಲ್ಲಿ, ಅರ್ಥಾನುಭವದಲ್ಲಿ, ತಾರ್ಕಿಕತೆಯಲ್ಲಿ, ಸಂವಾದ ರೂಪದಲ್ಲಿ ಕಥೆಯನ್ನು ಕಥಾನಕದ ಗದ್ಯವನ್ನು ಮೌಖಿಕವಾಗಿ ಕೇಳಿ ಭಾವವ್ಯಂಜಕ ಗುಣಗಳನ್ನು ಅಸ್ವಾದಿಸಿ ಪಾತ್ರದ ಕಲ್ಪನೆಯನ್ನು ಸೃಷ್ಟಿಸಿಕೊಳ್ಳುತ್ತಾನೆ. ಪಾತ್ರ ಸೃಷ್ಟಿಯ ಈ ಸಾಹಿತ್ಯದ ಧೋರಣೆಯು ಆಗಿರುತ್ತದೆ. ಸಾಹಿತ್ಯವು ಲಿಖಿತ ರೂಪದಲ್ಲಿ ವಾಚಕನ ಮನಸ್ಸಿನಲ್ಲಿ ಪಾತ್ರವನ್ನು ಸೃಷ್ಟಿಸುತ್ತದೆ.

ಹವ್ಯಕ ಕಲಾವಿದರು ಯಕ್ಷಗಾನ ಬಯಲಾಟ ತಾಳಮದ್ದಳೆ ಕೂಟದಲ್ಲಿ ಪ್ರತಿನಿಧಿಸಿದ ಭಾಷಿಕ ಅಭಿವ್ಯಕ್ತಿ ಜನ ಸಮುದಾಯ ಮತ್ತು ಸಂಸ್ಕೃತಿಯ ಪ್ರಭಾವಕ್ಕೊಳಾಗಾಗಿದ್ದು ಸ್ಪಷ್ಟವಾಗಿ ಗೋಚರಿಸುತ್ತದೆ.

೪.೧೬. ಹವ್ಯಕ ಆಶುವಾಙ್ಮಯಕಾರರು

ಅರ್ಥಗಾರಿಕೆಯ ಆರಂಭದ ಕಾಲದಲ್ಲಿ ಪದ್ಯಗಳಿಗಷ್ಟೆ ಸರಳಾನುವಾದ ಹೇಳುವ ಕ್ರಮ ರೂಢಿಯಲ್ಲಿರಬೇಕು. ಆ ಕಾಲದಲ್ಲಿ ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧ ಬಯಲಾಟದ ವೇಷಧಾರಿಗಳು ಇದ್ದರು ಎಂಬುದು ಅರಿವಿಗೆ ಬರುತ್ತದೆ. ಆದರೆ ವೇಷಧಾರಿಗಳಿಗೆ ಮಾತಿನಕಲೆ ಇಂದಿನ ತಾಳಮದ್ದಳೆಯ

ಕಲಾವಿದರಷ್ಟು ಸಿದ್ಧಿಸಿರಲಿಲ್ಲ ಎಂದು ತಿಳಿದುಬರುತ್ತದೆ. ಸಂಸ್ಕೃತವನ್ನು ಅಭ್ಯಾಸ ಮಾಡಿದ ವೈದಿಕರು ಸಾಭಿನಯ ಪೂರ್ವಕ ಅರ್ಥಗಾರಿಕೆಯನ್ನು ರೂಢಿಸಿಕೊಂಡಿದ್ದರು. ಪೂಜಾವಿಧಾನದಲ್ಲಿನ 'ಅವಧಾನ' ಪದ್ಧತಿಯಂತೆ ವಾಕ್ಯಾರ್ಥಗೋಷ್ಠಿಗಳಂತೆ ಇತರ ವಾಚಿಕಾಭಿವ್ಯಕ್ತಿಯ ಗೋಷ್ಠಿಗಳಾಗಿ ನಡೆದು ಬಂದಿರಬೇಕು. "ಈ ಶತಮಾನದ ಮೊದಲ ಎರಡು-ಮೂರು ದಶಕಗಳಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ವಿಲಕ್ಷಣ ಪರಿಸ್ಥಿತಿ ಇತ್ತು. ಬಯಲಾಟದ ಮೇಳಗಳಲ್ಲಿ ಅದ್ಭುತ "ವೇಷಧಾರಿ"ಗಳಿದ್ದರು. ವೇಷಗಾರಿಕೆ, ಕುಣಿತ, ಅಭಿನಯಗಳಲ್ಲಿ ಅಪಾರವಾದ ಕಲಾಸೌಂದರ್ಯ ಪ್ರಕಟವಾಗುತ್ತಿತ್ತು. ಆದರೆ ಶಿಕ್ಷಣ-ಸಂಸ್ಕಾರಗಳ ಕೊರತೆಯಿಂದಾಗಿ ಮಾತುಗಾರಿಕೆ ತೀರಾ ಗ್ರಾಮ್ಯವಾಗಿತ್ತು. ತಾಳಮದ್ದಳೆಯ ಮಾತುಗಾರಿಕೆಯಾದರೂ ಅಷ್ಟೆ.[೪೬] ಕಾರಣವಿಷ್ಟೆ ತಾಳಮದ್ದಳೆಯು ಬಯಲಾಟದಿಂದಲೆ ಸ್ಫೂರ್ತಿ ಪಡೆದ ಒಂದು ಕಲಾಪ್ರಕಾರ. ಆದ್ದರಿಂದಲೆ ಬಯಲಾಟದ ಕಲಾವಿದರು ವೇಷಧಾರಿಗಳೆನಿಸಿದ್ದಾರೆ. ತಾಳಮದ್ದಳೆ ಕಲಾವಿದರು ಅರ್ಥಧಾರಿಗಳೆನಿಸಿದರು. ಈ ಕಾಲ ತಾಳಮದ್ದಳೆಯ ಆಶುವಾಙ್ಮಯ ಆರಂಭದ ಕಾಲವೆ ಆಗಿದೆ.

ಕ್ರಮೇಣ ಶಿಕ್ಷಣ ಕೇಂದ್ರಗಳಾಗಿದ್ದ "ಐಗಳಮಠ"ದಲ್ಲಿ ಯಕ್ಷಗಾನ ಪ್ರಸಂಗ ಪಠ್ಯಗಳು, ಮುಂದಿನ ಶಿಕ್ಷಣ ಕ್ರಮದಲ್ಲೂ ಪ್ರಸಂಗ ಪಠ್ಯಗಳು ಪಠ್ಯಗಳಾಗಿದ್ದರಿಂದ ಅರ್ಥಗಾರಿಕೆಗೆ ಶಿಕ್ಷಿತ ವರ್ಗದವರು ತೊಡಗಿಕೊಂಡರು. ವಸಾಹತುಷಾಹಿ ಪ್ರಜ್ಞೆಯ ವಿರುದ್ಧ ಮೂಲ ಸಂಸ್ಕೃತಿಯನ್ನು ಉಜ್ಜೀವನಗೊಳಿಸುವ ಪ್ರಯತ್ನಗಳು ಪುರಾಣ ಪ್ರಜ್ಞೆಯನ್ನು ಜಾಗೃತಗೊಳಿಸಿದವು. ಶಿಷ್ಟ ಸಮಾಜಕ್ಕೆ ಸೇರಿದವರು ಕಲಾತ್ಮಕ ಅಭಿವ್ಯಕ್ತಿಯತ್ತ ಹೆಚ್ಚೆಚ್ಚು ಆಕರ್ಷಿತರಾಗಿ ಕಲೆಯಲ್ಲಿ ಭಾಷಾಭಿವ್ಯಕ್ತಿಯನ್ನು ಪರಿಣಾಮಕಾರಿಗೊಳಿಸಿದರು. ಕಾವ್ಯಗಳ ವಾಚನ, ಪುರಾಣ ಕಥನದತ್ತ ಶಿಕ್ಷಿತರು ಆಕರ್ಷಣೆಗೊಂಡು ತಾಳಮದ್ದಳೆಯಲ್ಲಿ ಭಾಗವಹಿಸಿ ಅರ್ಥಗಾರಿಕೆಗೆ ಹೊಸ ಆಯಾಮವನ್ನು ನೀಡಿದರು. ಈ ಕಾಲವನ್ನು ಆಶುವಾಙ್ಮಯದ ನವೋದಯ ಕಾಲ ಎಂದು ಕರೆಯಬಹುದಾಗಿದೆ.

ತಾಳಮದ್ದಳೆಯ ಕ್ಷೇತ್ರಕ್ಕೆ ಹರಿದಾಸರು, ಗಮಕಿಗಳು, ಪಂಡಿತರು ಪ್ರವೇಶಿಸಿದ ಕಾಲದಲ್ಲಿ ತಾಳಮದ್ದಳೆ ಪಾಂಡಿತ್ಯಪೂರ್ವ ಗೋಷ್ಠಿಯಾಗಿ ಮಾರ್ಪಟ್ಟಿತು. ಈ ಕಾಲದಲ್ಲಿ ಮೇಲ್ವರ್ಗದ ಬ್ರಾಹ್ಮಣರು ಬಹುಸಂಖ್ಯೆಯಲ್ಲಿ ತೊಡಗಿಕೊಂಡರು. ಪಾತ್ರವಿಶ್ಲೇಷಣೆ ಮನಶಾಸ್ತ್ರೀಯ, ಸಮಾಜಶಾಸ್ತ್ರೀಯ, ತಾತ್ವಿಕ ದೃಷ್ಟಿಕೋನಗಳು ಸ್ವಯಮಾಭಿವ್ಯಕ್ತಿಯ ನೆಲೆಯಲ್ಲಿ ರೂಪಗೊಂಡವು. ಅರ್ಥಧಾರಿಗಳು ಹೊಸಹೊಸ ಚಿಂತನೆಗಳಿಂದ ಪ್ರೇರಿತರಾಗಿ ವೈಚಾರಿಕತೆಯನ್ನು ಅರ್ಥಗಾರಿಕೆಯಲ್ಲಿ ತೆರೆದಿಟ್ಟರು. ಇದು ಅರ್ಥಗಾರಿಕೆಯ ನವ್ಯಯುಗವಾಗಿ ಬೆಳೆಯಿತು. ಅರ್ಥಗಾರಿಕೆಯು ಸರಳ ಪ್ರಸಂಗ ಪದ್ಯದ ಅರ್ಥದಿಂದ ಪಾತ್ರ ವ್ಯಾಖ್ಯಾನಿಸುವ ಹಂತದವರೆಗೆ ವಿಕಾಸಗೊಂಡು ವಾಚಿಕಾಭಿವ್ಯಕ್ತಿಯ ಸಾಹಿತ್ಯ ಪರಿಪುಷ್ಟವಾಗಿ ಬೆಳೆಯಿತು. ಸಮಕಾಲೀನವಾಗಿ ಅರ್ಥಗಾರಿಕೆ ಮೌಖಿಕ ಸಂಭಾಷಣೆಯ ಸಂವಾದದ ಮೂಲಕ ಪುರಾಣ ಪಾತ್ರಗಳ ಮೌಲ್ಯವನ್ನು ಸಮಕಾಲೀನಗೊಳಿಸುವ ನವ್ಯೋತ್ತರ ಸಂಕಥನವಾಗಿ ರೂಪಗೊಂಡಿದೆ. ಯಕ್ಷಗಾನ ಆಶುವಾಙ್ಮಯವು ವಿಕಾಸಕ್ಕೆ ಕಾರಣವಾದ ವಾಙ್ಮಯಕಾರರು ಭಾಷಾಸಂಪತ್ತು, ಆಳವಾದ ಪುರಾಣ ಜ್ಞಾನ, ತಾರ್ಕಿಕತೆ ವಿಚಾರ ಮಂಡನ ಕ್ರಮಗಳನ್ನು ಕರಗತಗೊಳಿಸಿಕೊಂಡು ಅರ್ಥಗಾರಿಕೆಯನ್ನು ಶ್ರೀಮಂತಗೊಳಿಸಿದ್ದಾರೆ.

---

೪೬. ಕೆ. ಪುರುಷೋತ್ತಮ ಭಟ್ಟ - ತಾಳಮದ್ದಳೆಯ ಬೆಳವಣಿಗೆಯಲ್ಲೊಂದು ಮೈಲಿಗಲ್ಲು-ಸ್ವರ್ಣಕಮಲ-ಪು ೯೩.

ದಿನವೂ ಹೊಸ ಭಾಷಾಪ್ರಯೋಗಗಳೊಂದಿಗೆ ನಿತ್ಯನೂತನವಾಗಿ ಪಾತ್ರವನ್ನು ಪೋಷಿಸುವ ಪರಿಶ್ರಮದಿಂದ ಪ್ರೇಕ್ಷಕ ಮೌಲ್ಯಗಳನ್ನು, ಚಿಂತನೆಗಳನ್ನು ಸಮಕಾಲೀನ ಸನ್ನಿವೇಶಕ್ಕೆ ಅನ್ವಯಗೊಳಿಸಿಕೊಳ್ಳುವುದರೊಂದಿಗೆ ಕಲೆಯನ್ನು ಆಸ್ವಾದಿಸುತ್ತಾನೆ.

ಯಕ್ಷಗಾನ ಆಶುವಾಙ್ಮಯಕಾರರನ್ನು ಮೂರು ವಿಧದಲ್ಲಿ ವಿಂಗಡಿಸಬಹುದು.

೧) ವೇಷಧಾರಿಗಳೂ ಅರ್ಥಧಾರಿಗಳೂ ಆಗಿ ಪ್ರಸಿದ್ಧರು.

೨) ವೇಷಧಾರಿಗಳಾಗಿ ಮಾತ್ರ ಅರ್ಥಗಾರಿಕೆಯಲ್ಲಿ ತೊಡಗಿಕೊಂಡವರು.

೩) ತಾಳಮದ್ದಳೆ ಅರ್ಥಧಾರಿಗಳಾಗಿಯೆ ಪ್ರಸಿದ್ಧರಾದವರು.

ಹವ್ಯಕ ಆಶುವಾಙ್ಮಯಕಾರರು ಅನೇಕರಿದ್ದಾರೆ. ಕರಾವಳಿ ಮಲೆನಾಡಿನುದ್ದಕ್ಕೂ ಹವ್ಯಕರೆ ಸಂಘಟಿಸಿದ ತಾಳಮದ್ದಳೆ ಕೂಟಗಳು ನೂರೈವತ್ತರಷ್ಟಿವೆ. ಕೆಲವು ವರ್ಷಕ್ಕೆ ಕೆಲವೆ ಪ್ರದರ್ಶನಗಳನ್ನು ನೀಡುತ್ತಾ ನಾಮಾವಶೇಷವಾಗಿ ಉಳಿದು ಕೊಂಡಿದೆ. ಕಲೆಯ ಚರಿತ್ರೆಯಲ್ಲಿ ಅಪಾರ ಕೀರ್ತಿಯನ್ನು ಗಳಿಸಿ ಹೆಸರಾದವರು ಹಲವರಿದ್ದಾರೆ. ವ್ಯಕ್ತಿ ಚರಿತ್ರೆಯು ದಾಖಲಾಗಿದೆ. ಕೆಲವು ವ್ಯಕ್ತಿಗಳ ಹೆಸರು ಸಾಧನೆಗಳಷ್ಟೆ ನೆನಪಾಗಿ ಉಳಿದುಕೊಂಡಿದೆ. ಹಲವು ಅರ್ಥಧಾರಿಗಳ ಅರ್ಥಗಾರಿಕೆಯ ಕುರಿತು ಮೌಖಿಕ ದಾಖಲೆಗಳಿದ್ದರೂ ಅವರ ಅರ್ಥಗಾರಿಕೆಯ ವೈಶಿಷ್ಟ್ಯವೇನೆಂಬುದು ದಾಖಲಾಗಿಲ್ಲ. ಅಂತಹ ಅರ್ಥಧಾರಿಗಳ ಹೆಸರನ್ನು ಈ ಅಧ್ಯಯನದಲ್ಲಿ ದಾಖಲಿಸಿದೆ. ಭಾಷೆಯ ಮೂಲಕ ತಾಳಮದ್ದಳೆಯನ್ನು ಜನಪ್ರಿಯಗೊಳಿಸಿದ ಪ್ರಸಿದ್ಧರನ್ನು ಆಶುವಾಙ್ಣಯಕಾರರೆಂದು ಅವರ ಅರ್ಥಗಾರಿಕೆಯ ಕ್ರಮವನ್ನು ವಿಶ್ಲೇಷಿಸಲಾಗಿದೆ.

೪.೧೬.೧. ಶೇಣಿ ಗೋಪಾಲಕೃಷ್ಣ ಭಟ್ಟರು : ಯಕ್ಷಗಾನ ಬಯಲಾಟವಿರಲಿ, ತಾಳಮದ್ದಳೆಯಿರಲಿ ಶೇಣಿಯವರು ಆಡಿದ ಮಾತುಗಳೆಲ್ಲ ರಸಾತ್ಮಕ ಸೃಷ್ಟಿ. ಅದು ಕಾವ್ಯದಷ್ಟೆ ರಸೋತ್ಕರ್ಷಕ್ಕೆ ಕಾರಣವಾಗಿದೆ. ಶೇಣಿಯವರ ಮಾತುಗಾರಿಕೆ ಯಕ್ಷಗಾನ ಆಶುವಾಙ್ಮಯಕ್ಕೆ ಹೊಸದಿಕ್ಕನ್ನು ತೋರಿತು. ಶೇಣಿಯವರ ಅಗಾಧವಾದ ಪುರಾಣಜ್ಞಾನ, ಭಾಷಾಪ್ರಭುತ್ವ, ತಾರ್ಕಿಕ ಶಕ್ತಿ, ಹೊಸ ಚಿಂತನೆಯ ಕ್ರಮಗಳಿಂದ ಅರ್ಥಗಾರಿಕೆಯಲ್ಲಿ ಹೊಸ ಮಾರ್ಗವನ್ನು ಸೃಷ್ಟಿಸಿದರು. ಶೇಣಿಯವರ ಮಾತುಗಳಲ್ಲಿ ವ್ಯಕ್ತಗೊಂಡ ವಿಚಾರಗಳು ಸಂಸ್ಕೃತಿಯ ಆಳ ಚಿಂತನೆಗೆ ಎಡೆಮಾಡಿಕೊಡುತ್ತದೆ.

ಗುರುಕಾರುಣ್ಯ ಪ್ರಸಂಗದಲ್ಲಿ ವಿಶ್ವಾಮಿತ್ರ ಪಾತ್ರದಲ್ಲಿ ಶೇಣಿಯವರು ರಾಮನಿಗೆ ಹೇಳುವ ಮಾತು "ರಾಮಾನಾಡಿನ ಬೇರಿರುವುದು ಕಾಡಿನಲ್ಲಿ. ನಮ್ಮ ದೇಶದ ಸಂಸ್ಕೃತಿಯೆ ಹಾಗೆ. ಎಲ್ಲ ಉಪದೇಶಗಳೂ ನಮಗೆ ಸಿಕ್ಕಿರುವುದು ಅರಣ್ಯಕಗಳಾಗಿ, ಕಾಡಿನಲ್ಲಿ ಬಾಳಿದ ಪರಿಸರ ಪ್ರೇಮಿಗಳು ಆ ಪ್ರಕೃತಿಗೆ ಅತೀತವಾದಂತಹ ಯಾವುದೋ ಒಂದು ರಹಸ್ಯ ಇದೆ. ಅಂತ ಗುರುತಿಸುವುದಕ್ಕೆ ಮಾರ್ಗವನ್ನು ಕಂಡದ್ದು ಕಾಡಿನಲ್ಲಿ ಆದರೆ ಈ ಕಾಡನ್ನು ಸೂಕ್ಷ್ಮವಾಗಿ ಒಮ್ಮೆ ಅವಲೋಕಿಸು ರಾಮಭದ್ರಾ."

ಸಂಸ್ಕೃತಿಯ ಮೂಲವನ್ನು ಶೋಧಿಸುವ ಚಿಂತನೆಯನ್ನು ಶೇಣಿ ಪ್ರಸಂಗ ಪದ್ಯದ ಸಂದರ್ಭವನ್ನು ಸರಿಯಾಗಿ ಬಳಸಿ ಪ್ರತ್ಯುತ್ಪನ್ನಮತಿಯಾಗಿ ನಾಡಿನಲ್ಲಿ ವಿಕಾಸಗೊಂಡ ಸಂಸ್ಕೃತಿಯ ಬೇರುಗಳನ್ನು

ಶೋಧಿಸುತ್ತಾರೆ.

ಶೇಣಿಯವರು ಯಾವುದೇ ಸನ್ನಿವೇಶವನ್ನು ಏಕಮುಖವಾಗಿ ಚಿಂತಿಸುವುದಿಲ್ಲ. ಅವರು ಎಲ್ಲಾ ಶಾಸ್ತ್ರಗಳನ್ನು ಅನ್ವಯಿಸಿ ಪುರಾಣ ಪಾತ್ರವನ್ನು ವಿಶ್ಲೇಷಿಸುವ ಮೂಲಕ ಸಮಕಾಲೀನಗೊಳಿಸುತ್ತಿದ್ದರು.

"ಇದು ರಾವಣನ ಬದುಕು ಸಾವಿನ ಪ್ರಶ್ನೆಯಾಗಿದೆ: ಈ ಇವಳು (ಶೂರ್ಪನಖಿ) ಕೊಟ್ಟ ವರದಿಯಲ್ಲಿ ಸತ್ಯ ಎಷ್ಟು? ಸುಳ್ಳೆಷ್ಟು? ರಾಮ ಕೈ ಮಾಡಿದ! ಏನೋ ಒಂದು ರಾಜಕೀಯ ಉಂಟು ಇದರಲ್ಲಿ : ರಾಜಕೀಯ ಉಂಟು. ಇದು ನನಗೊಂದು ಪಂಥಾಹ್ವಾನವೂ ಹೌದು. ಯಾವ ಗಂಡನೆ ಆಗ್ಲಿ ತನ್ನ ಹೆಂಡತಿಯ ಮೇಲೆ ಗಂಡೋ ಹೆಣ್ಣೋ ಕೈ ಮಾಡುವಾಗ ಅದು ಲೆಕ್ಕಾಚಾರವಾಗಿ ಕಿವಿಯ ಮೇಲೆ ಮೂಗಿನ ಮೇಲೆ ಕತ್ತಿ ತಿರುಗಿಸ್ತಾರೋ? ಪ್ರಪಂಚದಲ್ಲಿ ಸಾಮಾಜಿಕ ನೀತಿ ಆ ಮೇಲೆ ಕೋವಿದ ನೀತಿ, ಇಬ್ಬಗೆಯದು. ಘನವಿದ್ವಾಂಸರದ್ದಾದ ನೀತಿಯೇನು? ನೇತಿ.... "ಸರ್ವಂ ಖಲ್ವಿದಂ ಬ್ರಹ್ಮ" ಇದೆಲ್ಲ ಮಿಥ್ಯೆಹೆ... ಇದನ್ನೆಲ್ಲಾ ಆಧರಿಸಿಕೊಂಡ್ರೆ ಪ್ರಪಂಚದಲ್ಲಿ ಬದುಕಿಗೆ ಅರ್ಥ ಕಲ್ಪಿಸಲು ಬಂದೀತೆ?"...

ರಾವಣನಾಗಿ ಶೂರ್ಪನಖಿಯ ಮೂಗು ಕತ್ತರಿಸಿದ್ದನ್ನು ವಿಶ್ಲೇಷಿಸುವಾಗ ರಾಮನ ಕೃತ್ಯವನ್ನು ವಿವಿಧ ನೀತಿಯ ನೆಲೆಯಲ್ಲಿ ವಿಡಂಬಿಸುವ ತಾರ್ಕಿಕತೆ ಶೇಣಿಯವರದ್ದು. ಆ ರೀತಿಯಲ್ಲಿ ಸನ್ನಿವೇಶವನ್ನು ವ್ಯಾಖ್ಯಾನಿಸುವ ಶೈಲಿ ಶೇಣಿಯವರಿಗೆ ಸಿದ್ಧಿಸಿತ್ತು.

ಶೇಣಿಯವರ ವಿಶೇಷತೆ ಎಂದರೆ ಅವರು ಆಖ್ಯಾನವನ್ನು ವ್ಯಾಖ್ಯಾನಿಸುತ್ತಿದ್ದರು. ಅವರು ಎಂದಿಗೂ ಪಾತ್ರದಲ್ಲಿಯೆ ಲೀನವಾಗಿ ಮಾತನಾಡುತ್ತಿರಲಿಲ್ಲ. ಪಾತ್ರದ ವ್ಯಾಖ್ಯಾನ ಮಾಡುವಾಗ ಪಾತ್ರವನ್ನು ಧರಿಸಿಯಾ ಪಾತ್ರವೇ ಆಗದೆ ವಿಶ್ಲೇಷಿಸುವ ಶೈಲಿ ಅವರ ಪಾತ್ರ ಪ್ರಭುತ್ವಕ್ಕೆ ಸಾಕ್ಷಿಯಾಗಿತ್ತು.

ಶೇಣಿ ರಾವಣ ಸನ್ಯಾಸಿಯಾಗಿ "ಸೀತೆಯಲ್ಲಿ" "ಅಮ್ಮಾ ನಿಮ್ಮ ಮಾವ ಹೇಳಿದ್ರು ಅಂತ ಹೇಳಿದ್ರಲ್ಲ ಯಾರೋ ದೊಡ್ಡವರೆ ಇರಬೇಕು ಇಲ್ಲದಿದ್ದರೆ ಸನ್ಯಾಸಿಗಳಲ್ಲಿ ಎಷ್ಟು ವಿಧ? ಕುಟೀಚಕರ ಆಚಾರ ಏನು? ಬಹೂಧಕರ ಕ್ರಮ ಹೇಗೆ? ಹಂಸ, ಪರಮಹಂಸ ಅಂದ್ರೆಲ್ಲಾ ಏನು? ಎಂಬುದು ಹೇಗೆ ತಿಳಿಯಬೇಕು ನಿಮಗೆ."

ಶೇಣಿಯವರ ಆಳವಾದ ಜ್ಞಾನ, ಬಳಸುವ ಪ್ರತಿಪದ ನಿಷ್ಪತ್ತಿ, ಪ್ರಕಾರ, ತರತಮ ಕಲ್ಪನೆ, ಪಾತ್ರ ವಿವೇಚನೆ ಇದಿರು ಪಾತ್ರಧಾರಿಯನ್ನು ನಿಬ್ಬೆರಗುಗೊಳಿಸುತ್ತಿತ್ತು. ಪ್ರೇಕ್ಷಕರನ್ನು ಚಕಿತರಾಗುವಂತಹದಾಗಿತ್ತು.

ಶೇಣಿಯವರು ಸಾಮಾಜಿಕತೆಯ ಪ್ರಜ್ಞೆಯನ್ನು ಅರ್ಥಗಾರಿಕೆಯಲ್ಲಿ ಸಹಜವಾಗಿ ಅಭಿವ್ಯಕ್ತಿಸುತ್ತಿದ್ದ ರೀತಿ ಅದ್ಭುತವಾದದ್ದು.

(ರಾವಣ ಸನ್ಯಾಸಿಯಾಗಿ ಸೀತೆಗೆ) "ಮೊದಲು ಜಾತಿ ಕೇಳಿದ್ರೆ ಬಾಯಾರಿಕೆಗೆ ನೀರು ಸಿಕ್ಕುವುದು ಕಷ್ಟವಾದೀತು ನೀರು ಕುಡಿದ ಮೇಲೆ ಜಾತಿ ಕೇಳುವ ಅಗತ್ಯವೂ ಇಲ್ಲ ಅಂತ ಒಂದು ಮಾತು."

ಶೇಣಿಯವರ ಮಾತಿನ ಮಧ್ಯ ಸಹಜವಾಗಿಯೆ ಲೋಕೋಕ್ತಿಗಳು ಉದ್ಧರಿಸಲ್ಪಡುತ್ತಿದ್ದವು.

ಅಂತಹ ಲೋಕೋಕ್ತಿಗಳು ಅಸಾಧಾರಣವಾದವೋ, ಗ್ರಾಮ್ಯವಾದವೋ ಆಗಿದ್ದರೂ ಶೇಣಿಯವರ ವಾಕ್‌ಪ್ರವಾಹದಲ್ಲಿ ಶೋಭೆಯನ್ನು ಉಂಟು ಮಾಡುತ್ತಿದ್ದವು.

"ಮಜ್ಜಿಗೆಗೆ ಬಂದವನಿಗೆ ಎಮ್ಮೆಯ ದರ ಯಾಕೆ?" ಹೀಗೆ ಮಾತಿನ ಮಧ್ಯದಲ್ಲಿ ಪ್ರಯೋಗಿಸಿ ಇಡಿ ಮಾತಿನ ಹಂದರವನ್ನೆ ಒಂದು ಸರಳ ದೃಷ್ಟಾಂತದ ಮೂಲಕ, ಅಲಂಕಾರಿಕಗೊಳಿಸುವುದು ಅವರ ಆಶುಮಾತಿನ ವೈಖರಿಯಾಗಿತ್ತು.

ಶೇಣಿಯವರು ಎಂದಿಗೂ ಪರಂಪರೆಯನ್ನು ಹಳಿದವರಲ್ಲ. ಅವರು ಸತ್ಯದ ಶೋಧಕರು. ಎಂತಹ ಸಂಪ್ರದಾಯವೆ ಇರಲಿ ಅದರಲ್ಲಿ ಹೊಸತನವನ್ನೆ ಎಳೆಯಾಗಿಸಿ ಅದಕ್ಕೆ ತಾತ್ವಿಕ ನಿಲುವು ಕೊಡುವ ಅವರ ಮಾತು ವರ್ತಮಾನದಲ್ಲಿ ಭೂತವನ್ನಿಟ್ಟು ವಿಮರ್ಶಿಸಿ ಭವಿಷ್ಯಕ್ಕೆ ಅದರ ತಥ್ಯವನ್ನು ಸ್ಥಾಪಿಸುವ ಉದ್ದೇಶದಿಂದ ಕೂಡಿದ ಚಮತ್ಕಾರಿಕ ಅಭಿವ್ಯಕ್ತಿ ಅವರದಾಗಿತ್ತು.

ಗೀತೋಪದೇಶದ ಕೃಷ್ಣನಾಗಿ "ಕೌರವ ಓದಿ ಕಲ್ತದ್ದು ಅವಪೂರ್ತಿ ಪಾಠ ಆದವ ಅಲ್ಲ. ಕೇವಲ ಅರ್ಥಶಾಸ್ತ್ರ ಮಾತ್ರ. ಆ ಅರ್ಥಶಾಸ್ತ್ರವನ್ನು ಹೇಗೆ ಉಪಯೋಗಿಸಬೇಕು ಎಂಬ ಧರ್ಮಶಾಸ್ತ್ರದ ಪುಟ ಹರಿದು ಹೋಗಿದೆ."

ಶೇಣಿಯವರ ಮಾತುಗಾರಿಕೆಯಲ್ಲಿ ವ್ಯಂಗ್ಯ, ಧ್ವನಿ, ಕಟಕಿ, ಲೀಲಾಜಾಲವಾಗಿ ಸ್ಫುರಣಗೊಳ್ಳುತ್ತದೆ. ಆಖ್ಯಾನದ ಪೂರ್ವ ವೃತ್ತಾಂತವನ್ನೆಲ್ಲ ಒಂದೆ ವಾಕ್ಯದಲ್ಲಿ ಪ್ರಯೋಗಿಸಿ ಮುಂದಾಗುವುದನ್ನು ಧ್ವನಿಸಿ "ಪಾತ್ರವನ್ನು ಹೀಗೆ" ಎಂದು ವ್ಯಾಖ್ಯಾನಿಸುವ ಅರ್ಥ ಸ್ಪಷ್ಟತೆ, ನಿಖರತೆ ಅವರು ಬಳಸುವ ಪದದ ಅಂತಃಶಕ್ತಿಯಾಗಿದೆ. ಇದಿರು ಪಾತ್ರದ ಭೂತ, ಭವಿಷ್ಯವನ್ನು ಸಾಂದರ್ಭಿಕವಾಗಿ ಮಾತಿನಲ್ಲಿ ಧ್ವನಿಸುವುದು ಅವರ ಅರ್ಥಗಾರಿಕೆಯ ತಂತ್ರ. ಶೇಣಿ ಪಾತ್ರಕ್ಕೆ ಹೊಸ ಭಾಷ್ಯವನ್ನು ಬರೆಯಬಲ್ಲ ಸಾಮರ್ಥ್ಯವನ್ನು ಹೊಂದಿದ್ದರು.

ಶೇಣಿಯವರ ಅರ್ಥಗಾರಿಕೆಯ ಭಾಷೆ ವಿಶಿಷ್ಟವಾದುದು. ಅವರ ಶಬ್ದ ಪ್ರಯೋಗಕ್ಕೆ ಲಾಲಿತ್ಯವಿದೆ. ಓಘವಿದೆ. ಸರಳ ಮಾತನ್ನು ತಾತ್ವಿಕವಾಗಿ ರೂಪಿಸುವ ಪದಸಂಪತ್ತು ಅವರಲ್ಲಿದೆ. ವಾಕ್ಯದಲ್ಲಿನ ಪದಗಳು ಆಡುಭಾಷೆಯೇ ಆಗಿರುತ್ತದೆ. ಆದರೂ ಅದಕ್ಕೆ ಗ್ರಾಂಥಿಕಕ್ಕಿಂತ ಧ್ವನಿಹೊಮ್ಮಿಸುವ ಗುಣವಿದೆ. ಶೇಣಿಯವರ ಪೀಠಿಕೆ ನಿರರ್ಗಗಳವಾದುದು. ಅವರ ಸಂಭಾಷಣೆ ವ್ಯಾಖ್ಯಾನರೂಪದ್ದು. ಅವರು ಮಾತನಾಡುವ ಶೈಲಿ, ದೈವದತ್ತವಾದ ಧ್ವನಿ ಶ್ರೋತೃಗಳನ್ನು ಹಲವು ಕಾಲ ರಂಜಿಸಿತು. ಈಗಲೂ ಅವರ ಅರ್ಥಗಾರಿಕೆಯ ಧ್ವನಿಮುದ್ರಿಕೆಗಳು ಪುರಾಣದ ಪುನರ್ ವ್ಯಾಖ್ಯಾನವಾಗಿಯೆ ಸಲ್ಲುತ್ತಿವೆ.

೪.೧೬.೨. ದಿ| ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು : ಯಕ್ಷಗಾನ ತಾಳಮದ್ದಳೆಯ ನವೋದಯ ಕಾಲವೆಂದು ಗುರುತಿಸಬಹುದಾದ ಕಾಲದಲ್ಲಿ ಪುರಾಣ ಪ್ರವಚನಕಾರರು ತಾಳಮದ್ದಳೆ ಕ್ಷೇತ್ರದತ್ತ ಆಕರ್ಷಿತರಾದರು. ತಾಳಮದ್ದಳೆಯ ಅರ್ಥಧಾರಿಯಾಗಿ ಚಿರಸ್ಮರಣೀಯರು. ದಕ್ಷಿಣಕನ್ನಡದಲ್ಲಿ ಅರ್ಕುಳ ಸುಬ್ರಾಯಚಾರ್ಯರು, ಕೆ.ಪಿ. ವೆಂಕಪ್ಪ ಶೆಟ್ಟರು, ನಾರಾಯಣ ಕಿಲ್ಲೆಯವರು ಶ್ರೇಷ್ಠ ಅರ್ಥಗಾರಿಕೆಯಿಂದ ತಾಳಮದ್ದಳೆ ಕ್ಷೇತ್ರವು ಬಹುಜನಾಕರ್ಷಿತವಾಯಿತು. ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳಿಗೆ "ಗಹನವಾದ ವಿಷಯವನ್ನು ಅತಿ ಸುಲಭವಾಗಿ ವಿವರಿಸಿ, ಹಾಸ್ಯಭಕ್ತಿ ವೀರ ರಸಗಳ ಪುಷ್ಟಿಯನ್ನು

ಸಾಧಿಸುವ ಆಕರ್ಷಕ ಅರ್ಥಗಾರಿಕೆ ಪೊಳಲಿಯವರದಾಗಿತ್ತು." ಶಲ್ಯ, ಕೃಷ್ಣ, ಪ್ರಹಸ್ತ ಸುಗ್ರೀವ ಅತ್ಯಂತ ಪ್ರಸಿದ್ಧ ಪಾತ್ರಗಳಾಗಿದ್ದವು. ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು "ಪ್ರಹಸ್ತನ" ಪಾತ್ರದಲ್ಲಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತಿದ್ದರು. ಅವರ ವಾಗ್ವಾದ ಶೈಲಿ, ಚರ್ಚೆ ಎಂದಿಗೂ ಎಲ್ಲೆ ಮೀರುತ್ತಿರಲಿಲ್ಲ. ಕರ್ಣನನ್ನು "ಕಾಕಪೌರುಷ" ಎಂದು ಶಾಸ್ತ್ರಿಗಳು ವರ್ಣಿಸಿ ಹಾಸ್ಯ ಮಾಡುತ್ತಿದ್ದರು. ವಿದ್ವತ್‌ಪೂರ್ಣ ಭಾಷಾ ಪ್ರಯೋಗ, ಹಾಸ್ಯಭರಿತ ಮಾತುಗಳಿಂದ ಪೊಳಲಿಯವರ ಅರ್ಥಗಾರಿಕೆ ಶೈಲಿ ಅದ್ಭುತವಾಗಿತ್ತು. ಮಂಗಳೂರಿನ ಯಯ್ಯಾಡಿಯಲ್ಲಿ ಅವರ ಸ್ಮಾರಕವಿದೆ. ಯಕ್ಷಗಾನ ಮಕರಂದ ಸಂಸ್ಮರಣ ಗ್ರಂಥ ಕಲಾ ಸೇವೆಯನ್ನು ದಾಖಲಿಸಿದೆ.

೪.೧೬.೩. ದೇರಾಜೆ ಸೀತಾರಾಮಯ್ಯ (೧೯೧೪-೧೯೮೪) : ಯಕ್ಷಗಾನ ವಾಙ್ಮಯಕ್ಕೆ ರಾಮಾಯಣ, ಮಹಾಭಾರತ ಗದ್ಯ ಕಥಾನಕವನ್ನು ಬರೆದ ದೇರಾಜೆಯವರು ಪ್ರಸಿದ್ಧ ಅರ್ಥಧಾರಿಗಳಾಗಿದ್ದರು.

"ದೇರಾಜೆಯವರು ತಾಳಮದ್ದಳೆ ಅರ್ಥಗಾರಿಕೆ ಆದರ್ಶ ಮಾದರಿಯಾಗಿತ್ತು. ಭಾಷೆ ಭಾವ ಕಲ್ಪನಾಶಕ್ತಿ, ಅಭಿವ್ಯಕ್ತಿ ಕ್ರಮ, ಸ್ವರದ ಬಳಕೆ ಪ್ರತಿಪಾದನೆಯ ನಾವೀನ್ಯ ತರ್ಕ, ಕಾವ್ಯಾತ್ಮಕತೆ ಇದೆಲ್ಲವೂ ಹದವಾಗಿ ಬೆರೆತಿದ್ದ ಮಾತು ಅರ್ಥದ ಅಂಗೋಪಾಂಗಗಳ ಅಸಾಧಾರಣವಾದ ಅನ್ಯತ್ವ ದುರ್ಲಭವೆಂಬಷ್ಟು ಸುಂದರವಾದ ಸಮನ್ವಯ ವಿಧಾನವಾಗಿತ್ತು."[೪೭]

ದೇರಾಜೆಯವರು ಅನಾವಶ್ಯಕವಾಗಿಯೂ ಒಂದು ಪದ ಬಳಸುತ್ತಿರಲಿಲ್ಲ. ಧ್ವನಿಯ ಏರಿಳಿತ ಸಹಜ ವಾಗ್ವಿಲಾಸ ಅವರ ಶೈಲಿಯಾಗಿತ್ತು. ಹೊಸ ವಿಚಾರಗಳನ್ನು ಬೆಸೆಯುತ್ತಾ ಪಾತ್ರ ರಚನೆ ಮಾಡುತ್ತಿದ್ದರು. ಚುಟುಕು ಮಾತು, ಹಾಸ್ಯ ರಸಪುಷ್ಟಿ ಪ್ರೇಕ್ಷಕರಿಗೆ ವಿಶಿಷ್ಟ ಅನುಭವ ನೀಡುತ್ತಿತ್ತು. ಹೊಸ ವಿಷಯವನ್ನು ಪುರಾಣದೊಂದಿಗೆ ಸೇರಿಸಿ ಮಾತನಾಡುತ್ತಿದ್ದರು. ಪ್ರೇಕ್ಷಕರು ಸದಾ ಅವರ ಹೊಸ ವಿಚಾರಧಾರೆಗೆ ಕಾಯುವಂತೆ ಅರ್ಥಗಾರಿಕೆಯಲ್ಲಿ ಸದಾ ಕೌತುಕ ಮೂಡಿಸುತ್ತಿದ್ದರು. ಅರ್ಥಗಾರಿಕೆಯಲ್ಲಿ ದೃಷ್ಟಾಂತಗಳ ಬಳಕೆ ಮೋಹಕ ಮಾತು, ಅನಿರೀಕ್ಷಿತವಾಗಿ ಮಾಡುವ ವೈಚಾರಿಕತೆ ಆಕರ್ಷಣೀಯವಾಗಿತ್ತು.

ದೇರಾಜೆ ಸೀತಾರಾಮಯ್ಯನವರ ಕರ್ಣ, ಭೀಷ್ಮ, ಹಂಸಧ್ವಜ, ಸುಗ್ರೀವ, ಕೌರವ ಶೂರ್ಪನಖಿ, ಭರತ, ಕುಂಭಕರ್ಣ, ಸುಧಾಮ, ವಿಜಯವಿದುರ ಇವರ ಅರ್ಥಗಾರಿಕೆಯಲ್ಲಿ ಅರಳಿದ ಪಾತ್ರಗಳೇ ಆಗಿದ್ದವು. ಶೇಣಿ-ದೇರಾಜೆ, ದೇರಾಜೆ-ಪೆರ್ಲಕೃಷ್ಣಭಟ್ಟರು, ದೇರಾಜೆ-ಶಂಕರನಾರಾಯಣ ಸಾಮಗರು ಪ್ರಸಿದ್ಧ ಜೋಡಿಗಳಾಗಿದ್ದವು.

ಶೇಣಿಯವರ ವಾಗ್‌ವೈಭವದ ಜೊತೆ ದೇರಾಜೆಯವರು ವಿನೂತನವಾಗಿಯೆ ಸ್ಪಂದಿಸುತ್ತಿದ್ದರು. ಶೇಣಿ-ದೇರಾಜೆಯವರ ವಾಗ್ವಾದ ಪ್ರೇಕ್ಷಕರಿಗೆ ವಿಸ್ಮಯಗೊಳಿಸುತ್ತಿತ್ತು. ಹಾಸ್ಯರಸದಲ್ಲಿ ವಿಶೇಷ ಸಿದ್ಧಿಯನ್ನು ದೇರಾಜೆಯವರು ಹೊಂದಿದ್ದರು. ದೇರಾಜೆಯವರು ಭಾಷಾ ಪ್ರಭುತ್ವದ ಮೂಲಕ ಪ್ರೇಕ್ಷಕರನ್ನು ರಂಜಿಸಿದವರು. ಯಕ್ಷಗಾನ ಮಾತುಗಾರಿಕೆ ಆಕರ್ಷಣೀಯವಾಗಲು ದೇರಾಜೆಯವರ ಕೊಡುಗೆ ಅಪಾರವಿದೆ.

---

೪೭. ಡಾ. ಎಂ. ಪ್ರಭಾಕರ ಜೋಶಿ - ವಿಶಿಷ್ಟವಾಗ್ವಿಲಾಸದ ದೇರಾಜೆ ಸೀತಾರಾಮಯ್ಯ - ದೇರಾಜೆ ರಾಮಾಯಣ - ಪು. ೧೫.

೪.೧೬.೪.ಕೀರಿಕ್ಕಾಡು ವಿಷ್ಣುಮಾಸ್ತರ್ (೧೯೧೩-೧೯೮೬) : ಕೀರಿಕ್ಕಾಡು ವಿಷ್ಣು ಮಾಸ್ತರರು ಪ್ರಸಂಗ ಕವಿಗಳು ಹೌದು. ತೊಂಭತ್ತೇಳು ಪ್ರಸಂಗವನ್ನು ರಚಿಸಿರುತ್ತಾರೆ. ಯಕ್ಷಗಾನ ಕಲಾವಿದರು, ಸಾಹಿತಿಗಳು, ಸಂಘಟಕರೂ ಆಗಿದ್ದರು. ಶೇಣಿಯವರ ಮಾರ್ಗದರ್ಶಕರೂ ಆಗಿದ್ದರು. ಇವರು ದೇದಾಚೆ ಸೀತಾರಾಮಯ್ಯ, ಶಂಕರನಾರಾಯಣ ಸಾಮಗ ಪೆರ್ಲಕೃಷ್ಣ ಭಟ್ಟರು, ಮುಳಿಯ ಮಹಾಬಲ ಭಟ್ಟರು, ತಾಳಮದ್ದಳೆಯ ಅರ್ಥಧಾರಿಗಳ ಕೂಟದ ಸದಸ್ಯರಾಗಿದ್ದರು. ಕವಿ, ಸಾಹಿತಿಗಳೂ ಆದ ಕೀರಿಕ್ಕಾಡು ವಿಷ್ಣು ಮಾಸ್ತರರು ಉತ್ತಮ ಅರ್ಥಧಾರಿಗಳು ಆಗಿದ್ದರು. ಕೃಷ್ಣ, ಭೀಮ, ಮಾಗಧ ಮುಂತಾದ ಅನೇಕ ಪಾತ್ರಗಳನ್ನು ನಿರ್ವಹಿಸಿದ್ದರು. ಇವರ ಭಾಷೆ, ತಾರ್ಕಿಕತೆ, ವೈಚಾರಿಕತೆ ಮಾತುಗಾರಿಕೆಯನ್ನು ಪ್ರಭಾವಶಾಲಿಯಾಗಲು ಸಹಕಾರಿಯಾಗಿದ್ದವು. ಕೀರಿಕ್ಕಾಡು ಮಾಸ್ತರರ ಅರ್ಥಗಾರಿಕೆ ಭಾವಪೂರ್ಣವಾಗಿತ್ತು.

೪.೧೬.೫.ಸರ್ಪಂಗಳ ಈಶ್ವರ ಭಟ್ಟರು (೫-೮-೧೯೫೪ ಜನನ) : ಯಕ್ಷಗಾನದ ಬಯಲಾಟ, ತಾಳಮದ್ದಳೆಯಲ್ಲಿ ಅರ್ಥಗಾರಿಕೆಯಿಂದ ಪ್ರಸಿದ್ಧರು. ನಿಶಿತವಾದ ತರ್ಕ, ಭಾಷಾಪ್ರೌಢಿಮೆ, ಸಾಹಿತ್ಯ ಪರಿಜ್ಞಾನದ ಮಾತುಗಾರಿಕೆ ಇವರ ವೈಶಿಷ್ಟ್ಯಗಳು. ವಾದವನ್ನು ತರ್ಕಬದ್ಧವಾಗಿ ಮಂಡಿಸಬಲ್ಲರು. ಪಾತ್ರದ ಔಚಿತ್ಯವನ್ನು ಮೀರದೆ ಅರ್ಥ ಹೇಳುವ ಇವರ ಅರ್ಥಗಾರಿಕೆಯ ಕ್ರಮ ಆಕರ್ಷಕವಾದುದು. ಇವರ ಮಾತುಗಾರಿಕೆ ಧ್ವನಿಮುದ್ರಿಕೆಗಳು ದೃಶ್ಯ ಮುದ್ರಿಕೆಗಳಲ್ಲಿ ದಾಖಲಾಗಿದೆ.

೪.೧೬.೬.ಸೇರಾಜೆ ಸೀತಾರಾಮ ಭಟ್ಟರು : ಸೇರಾಜೆ ಸೀತಾರಾಮ ಭಟ್ಟರು ಕುರಿಯ ವಿಠಲ್ ಇಸ್ತಿಗಳ ಆತ್ಮೀಯ ವಿದ್ಯಾರ್ಥಿಗಳು ಆಗಿದ್ದರು. ಸೇರಾಜೆಯವರ ಭಾವಪೂರ್ಣ ಮಾತುಗಾರಿಕೆ, ಅರ್ಥವನ್ನು ಸಂಭಾಷಣೆಯ ಮೂಲಕ ಅಭಿವ್ಯಕ್ತಿಸುತ್ತಾ ಅತ್ಯಂತ ಸುಂದರವಾಗಿ ಪಾತ್ರವನ್ನು ನಿರ್ವಹಿಸಿದ್ದರು. ಇವರು ಪ್ರವಚನಕಾರರೂ ಹೌದು.

೪.೧೬.೭.ಕೆರೆಮನೆ ಶಂಭು ಹೆಗಡೆ- ಅರ್ಥಗಾರಿಕೆ : ದಿ। ಕೆರೆಮನೆ ಶಂಭುಹೆಗಡೆ ಯಕ್ಷಗಾನದ ಪ್ರತಿಭಾನ್ವಿತ ಅರ್ಥಧಾರಿಗಳಾಗಿದ್ದರು. ಇವರ ಮಾತಿನ ಮೋಡಿ ಆಕರ್ಷಕವಾದುದು. ಉತ್ತರಕನ್ನಡ ಶೈಲಿಯ ಮಾತುಗಾರಿಕೆ ಭಾವ ಪ್ರಧಾನವಾದುದು. ಭಾವಪ್ರಧಾನ ಪಾತ್ರಗಳ ನಿರ್ವಹಣೆಗೆ ಶಂಭುಹೆಗಡೆ ಸಿದ್ಧಹಸ್ತರು. ಶಂಭುಹೆಗಡೆಯವರದು ಶೈಲಿಕೃತ ಭಾಷೆ. ಗದ್ಯದ ಗ್ರಾಂಥಿಕ ಪದಗಳನ್ನು ಬಳಸಿ ಮಾತನಾಡುವ ಅವರ ಮಾತು ಆಪ್ಯಾಯಮಾನವಾಗಿತ್ತು. ಸಾಹಿತ್ಯವನ್ನು ಅಧ್ಯಯನ ಮಾಡಿದ ಅವರ ಅನುಭವವನ್ನು ಅರ್ಥಗಾರಿಕೆಗೆ ಸಮರ್ಥವಾಗಿ ಬಳಸುತ್ತಿದ್ದರು. ರಾಮನಿರ್ಮಾಣದ ರಾಮ, ಸತ್ಯಹರಿಶ್ಚಂದ್ರ, ಹರಿಶ್ಚಂದ್ರ ಕರ್ಣಪರ್ವದ ಕರ್ಣನ ಪಾತ್ರಕ್ಕೆ ಅವರು ಹೇಳುವ ಅರ್ಥ ಹೃದ್ಯವಾದುದು. ಕರುಣರಸವನ್ನು ಸಮರ್ಥವಾಗಿ ಭಾಷೆಯಲ್ಲಿ ಚಿತ್ರಿಸುವ ಧ್ವನಿಯ ಏರಿಳಿತ, ಶೃತಿ ಬದ್ಧ ಮಾತುಗಾರಿಕೆ ಅವರ ಶೈಲಿಯಾಗಿತ್ತು. ಅವರ ಮಾತು ಪ್ರೇಕ್ಷಕನನ್ನು ಭಾವಸ್ಪಂದನೆಗೊಳಪಡಿಸುವುದು ಪಾತ್ರಾನುಭವವನ್ನು ಸೃಷ್ಟಿ ಮಾಡುವ ಸಾಹಿತ್ಯದ ಮೂಲಕವೆ ಸಾಧ್ಯವಾಗಿಸುತ್ತಿದ್ದರು.

(ಕರ್ಣನಾಗಿ ಶಲ್ಯನೊಡನೆ) ಪ್ರಪಂಚವೇ ಅವಹೇಳನ ಗೈಯುತ್ತಿರುವ ಈ ಕರ್ಣನ ಬದುಕಿನ ಒಳಪದರುಗಳನ್ನು ತೆರೆದು ನೋಡುವ ಸಾಹಸವನ್ನು ಯಾರೂ ಮಾಡಲಿಲ್ಲ. ಅದಕ್ಕಾಗಿ ವಿಶ್ವಾಸ ಘಾತಕಿ ಇತ್ಯಾದಿ ಇತ್ಯಾದಿಯಾಗಿ ಕೇವಲ ಭರ್ತ್ಸನೆಯ ಮಾತುಗಳಿಂದ ನೋವನ್ನನುಭವಿಸುವುದು

ಮಾತ್ರ ನನ್ನ ಪ್ರಾರಬ್ಧ. ನೀನೆಂದ ಹಾಗೆ ನೆಲ ನನ್ನನ್ನು ಹೊರಲಾರದು ಶಲ್ಯ.[೪೮]

ಪ್ರತ್ಯಕ್ಷ ಹೆತ್ತ ತಾಯಿಯೆ ಒಂದು ಕಾಲದಲ್ಲಿ ನನ್ನನ್ನು ಹೊರದೆ ನದಿಗೆ ಬೀಸಾಡಿದ ಮಗು ನಾನು. ಅಂದಾಗ ಈ ನೆಲ ನನ್ನನ್ನು ಯಾಕ್ ಹೊತ್ತೀತು! ಆದರೆ ವಿಶ್ವಾಸ ಘಾತಕಿ ಎಂದು ಹೇಳಿದ ನಿನ್ನ ಮಾತನ್ನು ಕೇಳಿದಾಗ ಜೀವನದುದ್ದಕ್ಕೂ ವಿಶ್ವಾಸ ಘಾತಕಿ ಆಗದೆ ಬದುಕಬೇಕೆಂದು ಭಾವಿಸಿದ ನನ್ನ ಬದುಕಿನ ಬಹು ಮೂಲ್ಯವಾದಂತಹ ಅನೇಕ ಸಂಗತಿಗಳನ್ನು ದಂಡವಾಗಿ ತೆತ್ತಂತಹ ನನ್ನ ಜೀವನದಲ್ಲಿ ಸಾವು ಸನ್ನಿಹಿತವಾದಂತಹ ಈ ಕ್ಷಣ ಅವಿಶ್ವಾಸ ಘಾತಕಿ ಎಂಬ ಮಾತನ್ನು ಕೇಳುವ ಕ್ಷಣವಾಯಿತು ಅವೇ ವ್ಯಥೆ.........

ಶಂಭುಹೆಗಡೆಯವರು ಸಾಂಪ್ರದಾಯಿಕ ಮತ್ತು ಪೌರಾಣಿಕ ಆವರಣದ ವ್ಯಾಪ್ತಿಯಲ್ಲಿ ಪಾತ್ರ ಚಿತ್ರಣ ಮಾಡುವುದಕ್ಕಾಗಿ ಭಾಷೆಯನ್ನು ಬಳಸಿದವರು. ಅವರು ಪಾತ್ರವನ್ನು ಉದಾತ್ತಗೊಳಿಸಿ ವಿಧಿಯಿಂದ ನಿಯಂತ್ರಿಸಲ್ಪಡುವ ವ್ಯಕ್ತಿಯೊಬ್ಬನ ಬದುಕಿನ ಸವಾಲುಗಳನ್ನು ತೆರೆದಿಡುತ್ತಾ ಕಾರ್ಯಕಾರಣ ಸಂಬಂಧವನ್ನು ವಿಶ್ಲೇಷಿಸಿ ಭಾವಗಮ್ಯವಾಗುವಂತೆ ಪಾತ್ರವನ್ನು ಬಿಂಬಿಸುತ್ತಾರೆ.

ಶಂಭು ಹೆಗಡೆಯವರು ಬಳಸುವ ಭಾಷೆಯೆ ಸಾಹಿತ್ಯಾತ್ಮಕವಾದುದು. ಅವರು ಪಾತ್ರ ಪ್ರಭಾವವನ್ನು ಗುರಿಯಾಗಿಟ್ಟು ಅರ್ಥ ಹೇಳುವವರು, ರಾಮ ನಿರ್ಯಾಣದ ರಾಮನಿರಲಿ, ಸತ್ಯಹರಿಶ್ಚಂದ್ರನಿರಲಿ "ಮೌಲ್ಯವನ್ನೆ" ಎತ್ತಿ ಹಿಡಿದು ಪ್ರೇಕ್ಷಕರಲ್ಲಿ ಪುರಾಣ ಚೌಕಟ್ಟಿನಲ್ಲಿಯೆ ಅರ್ಥೈಸಿ ಪಾತ್ರ ಪೋಷಣೆ ಮಾಡುತ್ತಾರೆ. ಅವರ ಅರ್ಥಗಾರಿಕೆ ಭಾವಜನ್ಯವಾದುದು. ಶೋತೃವಿನಲ್ಲಿ ಪಾತ್ರಾನುಭವ ಸೃಷ್ಟಿಸುವುದೆ ಉದ್ದೇಶವಾಗಿದೆ.

೪.೧೬.೮. ಮಹಾಬಲ ಹೆಗಡೆ ಕೆರೆಮನೆ : ಮಹಾಬಲ ಹೆಗಡೆಯವರು ಬಡಗು ತೆಂಕುಗಳೆರಡರಲ್ಲಿ ತಾಳಮದ್ದಳೆಯ ಅರ್ಥಹೇಳಿದವರು. ಇವರ ಅರ್ಥಗಾರಿಕೆ ಸಮಕಾಲೀನ ಸಂವೇದನೆಯನ್ನು ರೂಪಿಸುವಂತಹದು. ಸಂಧಾನದ ಕೌರವ, ಸುಭದ್ರಾ ಕಲ್ಯಾಣದ ಬಲರಾಮ, ಪಟ್ಟಾಭಿಷೇಕದ ದಶರಥ, ಸುಧನ್ವಾರ್ಜುನದ ಅರ್ಜುನ ಇತ್ಯಾದಿ ಪಾತ್ರಗಳ ಅರ್ಥಗಾರಿಕೆಯಲ್ಲಿ ಪ್ರಸಿದ್ಧರು.

ಪಾತ್ರದ ಒಳಹೊಕ್ಕ ಪಾತ್ರವೇ ತಾನಾಗಿ ಪಾತ್ರವನ್ನು ಚಿತ್ರಿಸುವುದು ಅವರ ಶೈಲಿ. ಪ್ರಬುದ್ಧ ತಾರ್ಕಿಕ ಭಾಷೆ, ಸಾಂದರ್ಭಿಕವಾಗಿ ವ್ಯವಹಾರಿಕ ಗಾದೆ, ನುಡಿಗಟ್ಟು, ಲೋಕೋಕ್ತಿಗಳ ಬಳಕೆ ಧ್ವನಿಯುಕ್ತ ಮಾತು, ವೈಚಾರಿಕತೆ ಅವರು ಪಾತ್ರದಲ್ಲಿ ಬಿಂಬಿಸುವ ಅಂಶಗಳು.

ಪಾತ್ರತಲ್ಲೀನತೆ ಮಹಾಬಲ ಹೆಗಡೆಯವರ ವೈಶಿಷ್ಟ್ಯ. ಸುಭದ್ರಾ ಕಲ್ಯಾಣದ ಅರ್ಜುನನಾಗಿ ಅವರು ನಡೆಸುವ ಸಂಭಾಷಣೆ ಔಚಿತ್ಯಪೂರ್ಣವಾಗಿದ್ದು, ತನ್ನದೆ ಆದ ಶೈಲಿಯನ್ನು ರೂಢಿಸಿಕೊಂಡಿದ್ದರು. ಇವರು ಅರ್ಥಗಾರಿಕೆಯ ಮೂಲಕ ಪೌರಾಣಿಕ ಪಾತ್ರಗಳನ್ನು ಸಮಕಾಲೀನಗೊಳಿಸುತ್ತಿದ್ದರು.

---

೪೮. ಡಾ. ಮೋಹನ ಕುಂಟಾರ – ವಾಚಿಕಾಧ್ಯಯನ – ಪು ೮೯

೪.೧೬.೯. ಕೆರೆಮನೆ ವೆಂಕಟಾಚಲ ಭಟ್ಟರು : ಕೆರೆಮನೆ ವೆಂಕಟಾಚಲ ಭಟ್ಟರು ವಿಶಿಷ್ಟ ಶೈಲಿಯ ಅರ್ಥವಾದಿಗಳಾಗಿದ್ದರು. ಇವರು ನಿರ್ವಹಿಸಿದ 'ಶೂರ್ಪನಖಾ ಮಾನಭಂಗ'ದ ಶೂರ್ಪನಖಿ ಅತ್ಯಂತ ಪ್ರಸಿದ್ಧವಾಗಿದೆ. ಪುರಾಣ ಚೌಕಟ್ಟಿನಲ್ಲಿ ಪಾತ್ರಗಳನ್ನು ಬಿಂಬಿಸುವ ಮೂಲಕ ಪಾತ್ರದ ಅಂತರಂಗವನ್ನು ವಿಶ್ಲೇಷಿಸುವ ಸಾಮರ್ಥ್ಯ ಅವರಿಗೆ ಸಿದ್ಧಿಸಿತ್ತು. ಸಾಭಿನಯಪೂರ್ವಕವಾಗಿ ಅರ್ಥ ಹೇಳುತ್ತಿದ್ದ ಇವರ ಅರ್ಥಗಾರಿಕೆ ರಂಜನೀಯವಾಗಿತ್ತು. ನಿರರ್ಗಳವಾದ ಮಾತುಗಾರಿಕೆ, ಮಾತಿನಲ್ಲಿ ರೂಪಕಗಳ ಬಳಕೆ ಆಕರ್ಷಣೀಯವಾಗಿತ್ತು. ವಕ್ರೋಕ್ತಿ, ವ್ಯಂಗೋಕ್ತಿಗಳ ಸುರಿಮಳೆಯಂತೆ ಬಳಸುತ್ತಿದ್ದರು. ಒಂದೊಂದು ಮಾತೂ ಹತ್ತಾರು ಅರ್ಥಹುಟ್ಟಿಸುವಂತೆ ಅರ್ಥಹೇಳುವ ಅವರ ಮಾತೆ ಸಾಹಿತ್ಯವಾಗಿತ್ತು.

೪.೧೬.೧೦. ಕೆರೆಕೈ ಕೃಷ್ಣ ಭಟ್ಟರು : ಕೆರೆಕೈ ಕೃಷ್ಣ ಭಟ್ಟರು ಉತ್ತರಕನ್ನಡದ ಹಿರಿಯ ತಲೆಮಾರಿನ ಉದ್ಧಾಮ ಅರ್ಥಧಾರಿಗಳು. ಇವರು ವೇದ, ಉಪನಿಷತ್, ಆಗಮಗಳನ್ನೆಲ್ಲ ಅಧ್ಯಯನ ಮಾಡಿಕೊಂಡವರು. ಪಾತ್ರವನ್ನು ವ್ಯಾಖ್ಯಾನಿಸುವುದರಲ್ಲಿ ನಿಸ್ಸೀಮರಾಗಿದ್ದರು. ಶೇಣಿಯವರೊಂದಿಗೆ ವಾದಕ್ಕೆ ಇಳಿದು ಪ್ರಸಂಗವೆ ಇವರ ವಾದ ವಿವಾದದಲ್ಲಿ ಅಪೂರ್ಣಗೊಂಡಿದ್ದನ್ನು ಜನರು ಸ್ಮರಿಸುತ್ತಾರೆ. ಕೃಷ್ಣಭಟ್ಟರು ಪಾತ್ರನಿರ್ವಹಣೆಯ ಚೌಕಟ್ಟಿನಲ್ಲಿ ಪಾತ್ರವನ್ನು ಬಿಂಬಿಸುವ ಅರ್ಥಗಾರಿಕೆಯಾಗಿತ್ತು. ಪ್ರತಿಯೊಂದು ಮಾತಿಗೂ ಆಧಾರಪೂರ್ವಕವಾಗಿ ಸಮರ್ಥಿಸಬಲ್ಲವರಾಗಿದ್ದರು. ಇವರ ಅರ್ಥಗಾರಿಕೆ ಒಂದು ವಿಶಿಷ್ಟ ಭಾಷಾ ಪ್ರಯೋಗದ ಚಿತ್ರಣವಾಗಿರುತ್ತಿತ್ತು.

೪.೧೬.೧೧. ಕೆರೆಕೈ ಸುಬ್ರಾಯ ಭಟ್ಟರು : ಸುಬ್ರಾಯ ಭಟ್ಟರು ಕೆರೆಕೈ ಕೃಷ್ಣ ಭಟ್ಟರ ಸಮಕಾಲೀನರು. ಎದುರಾಳಿಯ ಮಾತನ್ನು ಸೂಕ್ಷ್ಮವಾಗಿ ಗ್ರಹಿಸಿ ಇದಿರೇಟು ಕೊಡುವದಲ್ಲಿ ನಿಸ್ಸೀಮರಾಗಿದ್ದರು. ಸಾಹಿತ್ಯಿಕ ಶಬ್ಧಗಳನ್ನು ಬಳಸಿ ಮಾತಿನಲ್ಲಿ ಭಾವ-ವಿಚಾರಗಳೆರಡನ್ನು ಪ್ರಕಟಿಸುತ್ತಿದ್ದರು. ಅವರ ಏಕಲವ್ಯನ ಅರ್ಥಗಾರಿಕೆಯ ವಿನೂತನ ಗುಣವು ಅವರ ಮಾತಿನ ಶೈಲಿಯನ್ನು ಬಿಂಬಿಸುತ್ತದೆ.

ಏಕಲವ್ಯನಾಗಿ ಭೀಷ್ಮನಲ್ಲಿಗೆ ಬಂದಾಗ ದ್ವಾರಪಾಲಕರು ತಡೆಯೊಡ್ಡುತ್ತಾರೆ. ಆಗ ನೀನು ಯಾರು? ಎಂದು ಕೇಳಿದಾಗ ದ್ವಾರಪಾಲಕ "ನಾನು ಬಾಗಿಲು ಕಾಯುವವನು" ಎನ್ನುತ್ತಾನೆ. "ಇಷ್ಟು ಚಂದದ ಬಾಗಿಲು ಮಾಡಿಸಿದ ಮೇಲೆ ಕಾಯುವವ ನಿರಲೆಬೇಕು" ಎಂದು ಹೇಳುತ್ತಿದ್ದರು. ಸಹಜವಾಗಿ ಪ್ರಯೋಗಿಸುವ ಮಾತು ಏನೆಲ್ಲ ಅರ್ಥವನ್ನು ಅನಾವರಣಗೊಳಿಸುತ್ತದೆ.

೪.೧೬.೧೨. ವಿ.ಟಿ. ಹೆಗಡೆ ಶೀಗೆಹಳ್ಳಿ : ಇವರು ಸಾಹಿತ್ಯ ಪ್ರೇಮಿಗಳಾಗಿದದು ಪುಂಖಾನುಪುಂಖವಾಗಿ ಮಾತನಾಡುವ ಮೂಲಕ ಪಾತ್ರವನ್ನು ಚಿತ್ರಿಸುತ್ತಿದ್ದರು. ಪಾತ್ರ ಚಿತ್ರಣದಲ್ಲಿ ಅಸಾಧಾರಣ ಪ್ರತಿಭೆಯಿತ್ತು. ಮಾತನಾಡುವಾಗುವಾಗ ಭಾವಗಳು ಒಂದಾದ ಮೇಲೆ ಒಂದರಂತೆ ನೂಕು ನುಗ್ಗಲಾಗಿ ಬರುತ್ತಿದ್ದವು. ಒಂದು ತೆರನಾದ ಅವಸರ - ಸಡಗರಗಳನ್ನು ಅವರ ಮಾತಿನಲ್ಲಿ ಕಾಣಬಹುದಾಗಿತ್ತು. ಕರ್ಣನ ಪಾತ್ರ ತುಂಬಾ ಪ್ರಸಿದ್ಧ ಪಾತ್ರವಾಗಿತ್ತು.

೪.೧೬.೧೩. ಕೆ.ಎಸ್. ಹೆಗಡೆ ಚಂದು : ಒಳ್ಳೆಯ ಅರ್ಥಧಾರಿಕೆಗೆ ಬೇಕಾದ ಶಾರೀರಿಕ ಅರ್ಹತೆಗಳೆಲ್ಲವೂ ಇದ್ದವು. ಸ್ವರಗಾಂಭಿರ್ಯ ಉತ್ತಮವಾಗಿತ್ತು. ಅಧ್ಯಯನ ಶೀಲರೂ ಆಗಿದ್ದರು. ಅವರ ಅರ್ಥಗಾರಿಕೆ ಶೈಲಿ ಭಾಷಾ ಪ್ರಯೋಗ ಆಕರ್ಷಣೀಯವಾಗಿತ್ತು. ಶೂರ್ಪನಖಿಯಂತ ಪಾತ್ರಗಳಲ್ಲೂ ಪ್ರಸಿದ್ಧರಾದರು.

೪.೧೬.೧೪. ಬುಳ್ಳಿ ಮಹಾಬಲೇಶ್ವರ ಹೆಗಡೆ : ಭಾವಪ್ರಧಾನ ಮಾತುಗಾರಿಕೆಗೆ ಪ್ರಸಿದ್ಧರು. ಭಾವ ತಲ್ಲೀನರಾಗಿ ಕರ್ಣನನ್ನು ಚಿತ್ರಿಸುತ್ತಿದ್ದರು. ಇಡಿ ಸಭೆಯೆ ಕಣ್ಣೀರು ಹಾಕುವಷ್ಟು ಪ್ರಭಾವಶಾಲಿ ಮಾತುಗಾರರಾಗಿದ್ದರು. ಇವರು ವಾದಸರಣಿಗೊಗ್ಗದೆ ಭಾವತನ್ಮಯತೆಯ ಶೈಲಿಯ ಅರ್ಥಧಾರಿಗಳಾಗಿದ್ದರು. ಜೀವನಾನುಭವ ಪಕ್ವತೆಯಿಂದ ಮಾತನಾಡುವುದು ಆಡುಮಾತಿಗೆ ಅನುಭವವನ್ನು ಆರೋಪಿಸಿಕೊಳ್ಳುವುದು ವೈಶಿಷ್ಟ್ಯಪೂರ್ಣವಾಗಿತ್ತು.

೪.೧೬.೧೫. ರಾಜಾರಾಮ ಮಾಸ್ತರರು ಗೋಕರ್ಣ : ಗೋಕರ್ಣದವರಾದ ಇವರು ಸಂಸ್ಕೃತ ವಿದ್ವಾಂಸರು. ಸಾಹಿತ್ಯ ಕ್ಷೇತ್ರದಲ್ಲಿ ಪರಿಣಿತರೂ ಆಗಿದ್ದರು. ಸಾಹಿತ್ಯವನ್ನು ಚೆನ್ನಾಗಿ ಓದಿದವರಾಗಿದ್ದರು. ಕೆರೆಕೈ ಕೃಷ್ಣಭಟ್ಟರ ಮೇಲೆ ಪ್ರಭಾವ ಬೀರಿದವರೂ ಆಗಿದ್ದರು.

೪.೧೬.೧೬. ಬೈಲಕೇರಿ ಪರಮೇಶ್ವರ ಪುರಾಣಿಕರು : ಗೋಕರ್ಣದವರಾದ ಇವರು ಅಪಾರವಾದ ಪಾಂಡಿತ್ಯವನ್ನು ಹೊಂದಿದವರಾಗಿದ್ದರು. ಘಟ್ಟದಮೇಲಿನ ಭಾಗಗಳಿಗೆ ಪುರಾಣ ಪ್ರವಚನಕ್ಕೆ ತೆರಳುತ್ತಿದ್ದ ಇವರು ಆ ಭಾಗದಲ್ಲಿ ಅತ್ಯಂತ ಪ್ರಸಿದ್ಧರಾಗಿದ್ದರು. ಇವರು ಪಾಂಡಿತ್ಯ ಹೊಂದಿದ್ದರೂ ಸರಳ ಮಾತಿನಲ್ಲಿ ಅರ್ಥಹೇಳುವ ಚಾಕಚಕ್ಯತೆ ಹೊಂದಿದ್ದರು. ಹವ್ಯಕ ಭಾಷೆಯ ಆಡುಮಾತಿನ ಬಳಕೆ ಅರ್ಥಗಾರಿಕೆಯಲ್ಲಿ ಎದ್ದು ಕಾಣುತ್ತಿತ್ತು. ಶ್ರೋತೃಗಳ ಅಂತರಂಗವನ್ನು ಪ್ರವೇಶಿಸುವ ಮಾತುಗಾರಿಕೆ ಅವರದಾಗಿತ್ತು.

೪.೧೬.೧೭. ಮಹಾಬಲೇಶ್ವರ ಪುರಾಣಿಕ : ಯಲ್ಲಾಪುರ ತಾಲ್ಲೂಕಿನ ಹಳ್ಳಿಗಳಲ್ಲಿ ಪ್ರಸಿದ್ಧರಾಗಿದ್ದರು. ಇವರು ಸಾತ್ವಿಕ ಪಾತ್ರಗಳ ಅರ್ಥ ಹೇಳಿದ್ದು ಹೆಚ್ಚು. ಅತ್ಯಂತ ಕಡಿಮೆ ಶಬ್ಧಗಳಲ್ಲಿ ಹೆಚ್ಚು ಅರ್ಥವತ್ತಾಗಿ ಧ್ವನಿಸುವ ಮಾತುಗಾರಿಕೆಯನ್ನು ರೂಢಿಸಿಕೊಂಡಿದ್ದರು.

೪.೧೬.೧೮. ಬೆಳಸಲಿಗೆ ಗಣಪತಿ ಹೆಗಡೆ : ಬಹುಮುಖ ಪ್ರತಿಭೆಯ ಕಲಾವಿದ. ವೇಷಧಾರಿ ಪ್ರಸಂಗಕರ್ತರೂ, ಕವಿ, ವಾಗ್ಮಿಗಳಾದ ಇವರಿಗೆ ಅರ್ಥಗಾರಿಕೆ ಸಿದ್ಧಿಸಿತ್ತು. ಸ್ವರ, ಶೃತಿ, ಸಾಹಿತ್ಯಗಳ ಹದವಾಗಿ ಬೆರೆತ ಮಾತುಗಾರಿಕೆ ಆಕರ್ಷಕವಾಗಿತ್ತು. ಪದ್ಯದಿಂದ ಪದ್ಯಕ್ಕೆ ಜಾರುವಾಗ ನೀಡುತ್ತಿದ್ದ ನಿದರ್ಶನ ಅದ್ಭುತವಾಗಿತ್ತು.

೪.೧೬.೧೯. ಬಾಲಿಗೆದ್ದೆ ತಿಮ್ಮಣ್ಣ ಭಟ್ಟರು : ವೈದಿಕರಾಗಿದ್ದ ತಿಮ್ಮಣ್ಣಭಟ್ಟರು ಶುದ್ಧವಾದ ಭಾಷಾ ಪ್ರಯೋಗಕ್ಕೆ ಹೆಸರಾದವರು. ಮಾಧುರ್ಯದಿಂದ ಕೂಡಿದ ಅರ್ಥಗಾರಿಕೆ ಸಂಗೀತದಂತೆ ರಂಜಿಸುತ್ತಿತ್ತು. ಉತ್ತರ ಕನ್ನಡ ಹಿರಿಯ ತಲೆಮಾರಿನ ಅತ್ಯುತ್ತಮ ಅರ್ಥಧಾರಿಗಳ ಸಾಲಿಗೆ ಸೇರಬೇಕಾದವರಾಗಿದ್ದರು.

೪.೧೬.೨೦. ತುಡುಗುಣಿ ಮಂಜುನಾಥ ಭಟ್ಟರು : ಪ್ರಸಿದ್ಧ ಅರ್ಥಧಾರಿಗಳಾಗಿದ್ದರು. ಚಿಕ್ಕ ಚಿಕ್ಕ ಮಾತಿನ ಬಳಕೆಯ ಮೂಲಕ ಜನರನ್ನು ನಗೆಗಡಲಲ್ಲಿ ತೇಲಿಸುತ್ತಿದ್ದರು. ಕೌಶಲ್ಯ ಪೂರ್ಣವಾದ ಮಾತುಗಾರಿಕೆಗೆ ಪ್ರಸಿದ್ಧರಾಗಿದ್ದರು.

೪.೧೬.೨೧. ಮುತ್ತುಮುರ್ಡು ಸುಬ್ರಾಯ ಹೆಗಡೆ : ವಿಶಿಷ್ಟ ಶೈಲಿಯ ಅರ್ಥಧಾರಿಗಳು. ಘಟ್ಟದ ಮೇಲಿನ ಪ್ರದೇಶದಲ್ಲಿ ಪ್ರಸಿದ್ಧರಾಗಿದ್ದರು. ಪದಪ್ರಯೋಗ, ವಾಕ್ಯ ಪ್ರಯೋಗದಲ್ಲಿ ನೈಪುಣ್ಯತೆ ಅವರ ವೈಶಿಷ್ಟ್ಯವಾಗಿತ್ತು.

೪.೧೬.೨೨. ಡಾ॥ ಪದ್ಮನಾಭಯ್ಯ ಹೈಗುಂದ : ಅದ್ಭುತವಾದ ಕಲ್ಪನಾಶಕ್ತಿ ಪಾತ್ರದ ಅಂತರಂಗವನ್ನು ತೆರೆದು ತೋರುವಲ್ಲಿ ಅವರಿಗೆ ಅಸಾಧಾರಣ ಕೌಶಲ್ಯವಿತ್ತು. ಕನ್ನಡ ಭಾಷೆಯನ್ನು ದುಡಿಸಿಕೊಳ್ಳುವ ರೀತಿ ಅದ್ಭುತವಾಗಿತ್ತು. ಅವರು ಭಾವ ಪ್ರತಿಪಾದನೆಗೆ ತೊಡಗಿದವರೆಂದರೆ ವಿನೂತನ ಲೋಕವೊಂದರ ಸೃಷ್ಟಿಯಾಗುತ್ತಿತ್ತು.

೪.೧೬.೨೩. ಹಸರಗೋಡು ಲಕ್ಷ್ಮೀನಾರಾಯಣ : ಆಳವಾದ ಅಧ್ಯಯನಶೀಲರು. ಕನ್ನಡ ನವೋದಯ ಕಾಲದ ಪ್ರಮುಖ ಕವಿಗಳ ಕಾವ್ಯವನ್ನು ಅಭ್ಯಾಸ ಮಾಡಿ ಭಾಷೆಯನ್ನು ಪಳಗಿಸಿಕೊಂಡವರು. ಪಂಪ, ಕುಮಾರ, ವ್ಯಾಸ, ಲಕ್ಷ್ಮೀಶ, ಮುದ್ದಣ ಕವಿಗಳ ಕಾವ್ಯವನ್ನು ಅರಗಿಸಿಕೊಂಡವರಾಗಿದ್ದರು. ಪಾತ್ರದ ಶೀಲ ಸ್ವಭಾವವನ್ನು ಚಿತ್ರಿಸುವಲ್ಲಿ ನೈಪುಣ್ಯತೆ ಹೊಂದಿದ್ದರು. ಚುಟುಕಾಗಿ ಚುರುಕಾಗಿ ಉತ್ತರಿಸುವ ಸಂಭಾಷಣೆಯ ಮೂಲಕ ಪಾತ್ರವನ್ನು ಸಮಕಾಲೀನಗೊಳಿಸುವ ಕ್ರಮ ವಿಶಿಷ್ಟವಾಗಿತ್ತು.

೪.೧೬.೨೪. ದಂಟಗಲ್ ಗಣಪತಿ ಹೆಗಡೆ : ದಂಟಕಲ್ ಗಣಪತಿ ಹೆಗಡೆ, ಕೆರೆಮನೆ ವೆಂಕಟಾಚಲ ಭಟ್ಟರು, ಶಿಂಗನಳ್ಳಿ ಪರಮೇಶ್ವರ ಹೆಗಡೆಯವರು "ವೆಂಕಟಾಚಲ ಮಿತ್ರಮಂಡಳಿ" ಎಂಬ ಕೂಟವನ್ನು ರಚಿಸಿ ತಾಳಮದ್ದಳೆ ಅರ್ಥಗಾರಿಕೆಯನ್ನು ನಡೆಸಿದರು. ಇವರ ಪ್ರಸಿದ್ಧ ಪಾತ್ರಗಳು ಅನೇಕವಿದ್ದವು. ರಂಗನಟರೂ ಆಗಿದ್ದ ಇವರು ಇಡಗುಂಜಿ, ಬಚ್ಚಗಾರು ಮೇಳದಲ್ಲಿ ಕಲಾವಿದರೂ ಆಗಿದ್ದರು. ಕೃಷ್ಣಸಂಧಾನದ ಭೀಮ, ಭೀಷ್ಮ ವಿಜಯದ ಏಕಲವ್ಯ ಅತ್ಯಂತ ಪ್ರಸಿದ್ಧವಾಗಿತ್ತು. ಸಭೆಯನ್ನು ಮಂತ್ರ ಮುಗ್ಧಗೊಳಿಸಬಲ್ಲ ಮಾತುಗಾರರಾಗಿದ್ದರು.

೪.೧೬.೨೫. ಶೀಗೆಮನೆ ನಾರಾಯಣ ಹೆಗಡೆ : ಸಾಹಿತ್ಯ ಪ್ರಿಯರಾದ ಇವರು, ಶೃತಿಗೆ ಒಗ್ಗುವ ಕಂಠ, ಸಾಹಿತ್ಯ ಸಮೃದ್ಧ ಭಾಷೆ, ಉದಾತ್ತವಾದ ಭಾವ, ರಸದೃಷ್ಟಿಗಳಿಂದ ಉತ್ತಮ ಅರ್ಥಧಾರಿಯೆನಿಸಿದ್ದರು.

೪.೧೬.೨೬. ದೊಡ್ಮನೆ ಮಹಾದೇವ ಹೆಗಡೆ : ಮಹಾದೇವ ಹೆಗಡೆಯವರ ಅರ್ಥಗಾರಿಕೆ ಚಿಂತನ ಶೀಲವಾದುದು. ಚುರುಕು ಸಂಭಾಷಣೆಯಿಂದ ಪ್ರಭಾವಶಾಲಿ ಅರ್ಥಧಾರಿಗಳಾಗಿದ್ದರು.

೪.೧೬.೨೭. ತುಡುಗುಣಿ ಗೋಪಾಲಭಟ್ಟ : ಪಾರಂಪರಿಕ ಚೌಕಟ್ಟನ್ನು ಮೀರಿ ಹೊಸ ಬದುಕಿನ ಆಯಾಮಗಳೊಂದಿಗೆ ಪುರಾಣ ಪಾತ್ರಗಳನ್ನು ಹೋಲಿಸಿ ಮಾತನಾಡುವ ಸಾಮರ್ಥ್ಯ ಗೋಪಾಲಭಟ್ಟರಿಗೆ ಸಿದ್ಧಿಸಿತ್ತು.

೪.೧೬.೨೮. ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ : ಶಿಕ್ಷಕರಾದ ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿಗಳು ನಾಲ್ಕು ದಶಕಗಳಿಂದ ತಾಳಮದ್ದಳೆಯಲ್ಲಿ ದುಡಿಯುತ್ತಿರುವವರು. ಶೇಣಿ, ಸಾಮಗ ಮುಂತಾದವರ ಜೊತೆ ಅರ್ಥ ಹೇಳಿ ಖ್ಯಾತರು. ಇವರ ಕರ್ಣ, ಸೀತೆ, ತಾರೆ, ದ್ರೌಪದಿ, ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದವರು. ಇವರ ಮಾತುಗಾರಿಕೆ ಮೊನಚು, ಚುಟುಕಾಗಿದ್ದರು ಪರಿಣಾಮಕಾರಿಯಾದುದು.

೪.೧೬.೨೯. ವಿದ್ವಾನ್ ಅನಂತ ಶರ್ಮ ಭುವನಗಿರಿ : ಸಂಸ್ಕೃತ – ಕನ್ನಡ ಭಾಷೆಗಳೆರಡರಲ್ಲೂ ಪಾಂಡಿತ್ಯವನ್ನು ಹೊಂದಿದ್ದ ಅನಂತ ಶರ್ಮರ ಅರ್ಥಧಾರಿಕೆ ವಿದ್ವತ್ತು ರಸಿಕತೆಗಳ ಹದವಾಗಿ ಬೆರೆತು

ಪ್ರಸಂಗದ ಪದ್ಯಗಳಿಗೆ ಸುಶ್ರಾವ್ಯವಾದ ಅರ್ಥವನ್ನು ಹೇಳಿ ಪ್ರಸಿದ್ಧರಾದವರಾಗಿದ್ದಾರೆ.

೪.೧೬.೩೦ ಕೊಳಗಿ ಅನಂತ ಹೆಗಡೆ (೧೯೩೮-೨೦೦೫) : ಕೊಳಗಿ ಅನಂತ ಹೆಗಡೆಯವರು ಪ್ರಸಿದ್ಧ ರಂಗನಟರು ಆಗಿದ್ದರು. ಕೆರೆಮನೆ ಮೇಳದಲ್ಲಿ ಅವರು ದೀರ್ಘಕಾಲ ಸೇವೆಸಲ್ಲಿಸಿದವರಾಗಿದ್ದರು. ಇವರು ರಂಗನಟನಾಗಿ ಪಟ್ಟಾಭಿಷೇಕದ ದಶರಥ, ಕರ್ಣಪರ್ವದ ಶಲ್ಯ, ಪರ್ವದ ಭೀಷ್ಮ ಅತ್ಯಂತ ಪ್ರಸಿದ್ಧ ಪಾತ್ರವೆ ಅಗಿದೆ. ಅರ್ಥಗಾರಿಕೆಯಲ್ಲಿ ವಿಶಿಷ್ಟತೆಯನ್ನು ರೂಢಿಸಿಕೊಂಡಿದ್ದರು. "ಯಾವುದೇ ಶೃತಿಯಲ್ಲಿಯೂ ತಾರಕ ಸ್ಥಾಯಿಯ ತಲುಪುವ ಸ್ವರ ಕೇಳುಗನನ್ನು ಸೆರೆಹಿಡಿಯುತ್ತಿತ್ತು. ತಾಳಮದ್ದಳೆಯಲ್ಲಿ ಶೃತಿಬದ್ಧ ಪದ್ಯಲಯವನ್ನು ಪ್ರತಿನಿಧಿಸುವ ಒತ್ತುಗತ್ತುಗಳು ಅವಿಸ್ಮರಣೀಯ. ಎದುರಾಳಿಯನ್ನು ಸರಿದಾರಿಯಲ್ಲಿ ಕೊಂಡೊಯ್ದು ಪ್ರೇಕ್ಷಕನಿಗೆ ರಸಾಭಾಸ ಉಂಟಾಗದಂತೆ ಪಾತ್ರ ಪೋಷಣೆ ಮಾಡುವ ತಂತ್ರಗಾರಿಕೆ ಅವರಲ್ಲಿತ್ತು.

೪.೧೬.೩೧. ವಿ.ಜಿ. ಹೆಗಡೆ ಹುಣ್ಸೆಮಕ್ಕಿ : "ಹುಣ್ಸೆ ಮಕ್ಕಿ ಮಾಸ್ತರು" ಎಂದೆ ಪ್ರಸಿದ್ಧರಾದ ವಿ.ಜಿ. ಹೆಗಡೆಯವರಿಗೆ ಕುಮಾರವ್ಯಾಸ ಭಾರತದ ಆಳವಾದ ಅಧ್ಯಯನವಿತ್ತು. ಕನ್ನಡ ಭಾಷೆಯ ಅರ್ಥದ ಹರವನ್ನು ಚೆನ್ನಾಗಿ ಬಳಸಿ ಭಾವ ವ್ಯಂಜನೆಗೊಳಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಕೆರೆಮನೆ ಮಹಾಬಲ ಹೆಗಡೆ, ಕೆರೆಮನೆ ಶಿವರಾಮ ಹೆಗಡೆಯವರೊಂದಿಗೆ ಅರ್ಥಗಾರಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ವಾದವಿವಾದಗಳಲ್ಲಿ ಪ್ರತ್ಯುತ್ಪನ್ನ ಮತಿತ್ವದಿಂದ ಉತ್ತರಿಸುವ ಅವರ ಪಾಂಡಿತ್ಯ ಪ್ರಭಾವಶಾಲಿಯಾಗಿತ್ತು.

೪.೧೬.೩೨. ಕೋಟಿಸರ ಮಂಜುನಾಥ ಹೆಗಡೆ : ವಿಶಿಷ್ಟ ನಾಟಕೀಯ ಶೈಲಿಯಿಂದ, ಸಾಹಿತ್ಯ ಸಮೃದ್ಧವಾದ ಭಾಷೆಯಿಂದ ಭಾವ-ಮಧುರತೆಯಿಂದ ಉತ್ತಮ ಅರ್ಥಧಾರಿಗಳೆನಿಸಿದ್ದರು.

೪.೧೬.೩೩. ವಿದ್ವಾನ್ ಕೆರೆಕೈ ಉಮಾಕಾಂತ ಭಟ್ಟರು : ವರ್ತಮಾನದ ಪ್ರಸಿದ್ಧ ಅರ್ಥಧಾರಿಗಳು. ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಪ್ರತಿಭಾನ್ವಿತ ಅರ್ಥಧಾರಿಗಳೊಂದಿಗೆ ಕೂಟದಲ್ಲಿ ಭಾಗವಹಿಸುವವರಾಗಿದ್ದಾರೆ. ಪುರಾಣದ ಆಳ ಜ್ಞಾನ, ಸಂಸ್ಕೃತ ಸಾಹಿತ್ಯದ ಪಾಂಡಿತ್ಯ, ಕನ್ನಡ ಸಾಹಿತ್ಯ ಜ್ಞಾನದಿಂದ ಪಾತ್ರವನ್ನು ಚಿತ್ರಿಸಿ, ಪಾತ್ರ ಪರಂಪರೆಯಲ್ಲಿ ಸಮಕಾಲೀನ ಸ್ಥಿತ್ಯಂತರಗಳನ್ನು ಚಿತ್ರಿಸುತ್ತಾ ಅರ್ಥ ಹೇಳುವ ಇವರ ಅರ್ಥಗಾರಿಕೆ ವಿಶಿಷ್ಟವಾಗಿದ್ದು ವರ್ತಮಾನದಲ್ಲಿ ಪ್ರಸಿದ್ಧವೂ ಆಗಿದೆ.

೪.೧೬.೩೪. ಡಾ. ಗೋಪಾಲಕೃಷ್ಣ ಹೆಗಡೆ : ಶೇಣಿ ಗೋಪಾಲಕೃಷ್ಣ ಭಟ್ಟರೊಂದಿಗೆ ಅರ್ಥಗಾರಿಕೆಯಲ್ಲಿ ಪ್ರಸಿದ್ಧರಾಗಿ ಅನೇಕ ಧ್ವನಿ ಮುದ್ರಣಗಳಲ್ಲಿ ಇವರ ಅರ್ಥಗಾರಿಕೆ ದಾಖಲಾಗಿದೆ. ಕನ್ನಡ ಭಾಷೆಯ ಸಾಹಿತ್ಯದ ಆಳವಾದ ಜ್ಞಾನದಿಂದ ಪಾತ್ರವನ್ನು ಚಿತ್ರಿಸುವ ಸಾಮರ್ಥ್ಯ ಇವರ ಅರ್ಥಗಾರಿಕೆಯಲ್ಲಿದೆ. ಧ್ವನಿಪೂರ್ಣ ಮಾತುಗಳಿಂದ ಪಾತ್ರದ ಅಂತರಂಗವನ್ನು ಶೋಧಿಸುವ ಶೈಲಿಕೃತ ಭಾಷೆ ಇವರದ್ದಾಗಿದೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಹೆಸರಾದ ಅರ್ಥಧಾರಿಗಳಾಗಿದ್ದಾರೆ.

೪.೧೬.೩೫. ಎಂ.ಎ. ಹೆಗಡೆ ಸಿದ್ಧಾಪುರ : ಯಕ್ಷಗಾನ ಪ್ರಸಂಗರಚನಾಕಾರರು, ಕವಿಗಳು ಅರ್ಥಧಾರಿಗಳೂ ಆದ ಎಂ.ಎ. ಹೆಗಡೆ ಅರ್ಥಗಾರಿಕೆಯಲ್ಲಿ ಸದಾ ಸಿದ್ಧರು. ಹಳೆಯ ಮತ್ತು ಹೊಸ ತಲೆಮಾರಿನ ಎಲ್ಲ ಅರ್ಥಧಾರಿಗಳೊಂದಿಗೆ ಮುಖಾಮುಖಿಯಾಗಿ ಅರ್ಥವನ್ನು ಹೇಳಿದವರು. ಆಳವಾದ

ಚಿಂತನೆ ವಿಶಿಷ್ಟವಾದ ಲಯಬದ್ಧ ಮಾತುಗಾರಿಕೆ ಪುರಾಣದ ಚೌಕಟ್ಟಿನೊಳಗೆ ಪಾತ್ರವನ್ನು ಬಿಂಬಿಸುವ ವಿಶಿಷ್ಟ ಅರ್ಥಧಾರಿಗಳಾಗಿದ್ದಾರೆ.

೪.೧೬.೩೬. ಕೆ. ಗೋವಿಂದ ಭಟ್ಟರು : ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರಾದ ಕೆ. ಗೋವಿಂದ ಭಟ್ಟರು ಮಾತುಗಾರಿಕೆಯಲ್ಲಿ ಪ್ರಸಿದ್ಧರು. ಕೆ. ಗೋವಿಂದ ಭಟ್ಟರ ಅರ್ಥಗಾರಿಕೆ ವೈಭವಪೂರ್ಣವಾದುದು. ಅವರಿಗೆ ಅರ್ಥಗಾರಿಕೆ ಬೇಕಾದ ಧ್ವನಿ ಪ್ರಾಕೃತಿಕವಾಗಿ ಸಹಜವಾಗಿ ಸಿದ್ಧಿಸಿದೆ. ಚಿಂತನೆ ಅಧ್ಯಯನದಿಂದ ಫಲಿಸಿದೆ. ಸಮಕಾಲೀನ ರಂಗದ ಎಲ್ಲ ಮಹಾನ್ ಅರ್ಥಧಾರಿಗಳೆದುರು ಅರ್ಥ ಹೇಳಿದ ಗೋವಿಂದ ಭಟ್ಟರ ಅನುಭವ ಸುದೀರ್ಘವಾದದ್ದಾಗಿದೆ. ಅವರ ಭಾಷೆ ಮಿಂಚಿನಂತೆ ವ್ಯಕ್ತಗೊಳ್ಳುತ್ತದೆ. ರಸಕಾವ್ಯವಾಗಿ ವಾಕ್ಯ ಪ್ರಯೋಗಗೊಳ್ಳುತ್ತದೆ. ಭಾವನಾತ್ಮಕತೆಯೊಂದಿಗೆ ವೈಚಾರಿಕತೆಯನ್ನು ಸಮಕಾಲೀನ ಪ್ರಜ್ಞೆಯನ್ನು ಮೇಳೈಸಿ ಮಾತನಾಡುವ ಶಕ್ತಿ ಅವರಿಗಿದೆ. ಅವರ ಋತುಪರ್ಣ, ಕೌಶಿಕ, ಮಾಗಧ, ಕೌರವ, ಕರ್ಣ ಮೊದಲಾದ ಪಾತ್ರಗಳು ಅವರದ್ದೆ ಶೈಲಯಲ್ಲಿ ಪ್ರಸಿದ್ಧಗೊಂಡಿದೆ. ಅರ್ಥಗಾರಿಕೆಯಲ್ಲಿ ಪಾತ್ರದ ಮರ್ಮವನ್ನು ಅರಿತು ಮಾತನಾಡುವ ಸಾಮರ್ಥ್ಯ ಅವರದ್ದಾಗಿದೆ. ಭಾಷೆಯ ಬಳಕೆ ಆಪ್ಯಾಯಮಾನವಾದುದಾಗಿದೆ. ಅವರ ರಂಗದಲ್ಲಿನ ಅರ್ಥ, ತಾಳಮದ್ದಳೆ ಅರ್ಥಗಳೆಲ್ಲವೂ ಪ್ರೇಕ್ಷಕರನ್ನು ಸೆರೆಹಿಡಿದು ನಿಲ್ಲಿಸುವ ಶಕ್ತಿಯನ್ನು ಹೊಂದಿದೆ. ವಿಶಿಷ್ಟ ಸ್ವಂತ ಶೈಲಿಯ ಅರ್ಥಗಾರಿಕೆಗೆ ಗೋವಿಂದಭಟ್ಟರು ಪ್ರಸಿದ್ಧರಾಗಿದ್ದಾರೆ.

೪.೧೬.೩೭. ಮೋಹನ ಭಾಸ್ಕರ ಹೆಗಡೆ ಕುಮಟಾ : ಹೊಸತಲೆಮಾರಿನ ಅರ್ಥಧಾರಿಗಳಾದ ಇವರು ಭಾವಪೂರ್ಣ ಮಾತುಗಾರರು. ಇವರ ಮಾತುಗಾರಿಕೆ ಶೃತಿಬದ್ಧತೆ, ಲಯಬದ್ಧತೆಯ ಗುಣಗಳಿಂದ ಆಪ್ಯಾಯಮಾನವಾದುದು. ಸಂಧಾನದ ಕೃಷ್ಣ, ಗದಾಪರ್ವದ ಕೃಷ್ಣ ವಿಶೇಷವಾದ ಅರ್ಥಗಾರಿಕೆಗೆ ಒಲಿದ ಪಾತ್ರಗಳಾಗಿವೆ.

ಆಶುವಾಙ್ಮಯಕಾರರೆಂದು ಗುರುತಿಸಲಾದ ಅರ್ಥಧಾರಿಗಳು ಕೇವಲ ಪ್ರಾತಿನಿಧಿಕ ಪ್ರತಿಭೆಗಳಾಗಿದ್ದಾರೆ. ಕರಾವಳಿ ಮಲೆನಾಡಿನಲ್ಲಿ ಅದೆಷ್ಟೋ ಅರ್ಥಧಾರಿಗಳು ಈ ಪರಂಪರೆಯಲ್ಲಿ ಸಂದು ಹೋಗಿದ್ದಾರೆ. ಅಂಥವರ ಅರ್ಥಗಾರಿಕೆಯ ವೈಶಿಷ್ಟ್ಯತೆಯನ್ನು ದಾಖಲಿಸುವ ಸಾಕ್ಷ್ಯಾಧಾರಗಳು ಕೇವಲ ಜನರ ಸ್ಮರಣೆಯಲ್ಲಿವೆಯಷ್ಟೇ. ಆದರೂ ಭಾಷಾಪ್ರಯೋಗ ಶೈಲಿ, ಸಮಕಾಲೀನ ಪ್ರಜ್ಞೆಯಿಂದ ಅರ್ಥಹೇಳುವ ಅರ್ಥಧಾರಿಗಳನ್ನು ಗುರುತಿಸಲಾಗಿದೆ. ಎಲ್ಲ ಕಲಾವಿದರ ಕೊಡುಗೆಯಿಂದ ಯಕ್ಷಗಾನದ ಆಶುವಾಙ್ಮಯ ಸಾಕಷ್ಟು ಬೆಳೆದು ಬಂದಿದೆ.

೪.೧೬.೩೮. ಶ್ರೀ ಅಮಚಿ ಸುಬ್ರಾಯರು ದೊಡ್ಡಬಾಳೆ : ಇವರು ಸಾಗರ ತಾಲ್ಲೂಕಿನ ಪಡವಗೋಡು ಸಮೀಪದ ಅವುಚಿಯುವರು. ದೊಡ್ಡಬಾಳೆ ಎಂಬ ಊರಿನಲ್ಲಿ ವಾಸವಾಗಿದ್ದರು. ಶಾಸ್ತ್ರ ಪುರಾಣಾಭ್ಯಾಸಗಳನ್ನು ಮಾಡಿಕೊಂಡವರು. ತಾಳಮದ್ದಳೆಯ ಶ್ರೇಷ್ಠ ಅರ್ಥಧಾರಿಗಳು. ಜಾಂಬವಂತ, ಅರ್ಜುನ, ರಾವಣ, ಭೀಷ್ಮ, ಪರಶುರಾಮ, ಶುಕ್ರಾಚಾರ್ಯ ಮೊದಲಾದ ಪಾತ್ರಗಳು ಜನಮನ್ನಣೆಗೆ ಪಾತ್ರವಾಗಿದೆ. ತಾಳಮದ್ದಳೆ ಸಂಘವನ್ನು ಮುನ್ನಡೆಸುತ್ತಿದ್ದಾರೆ.

೪.೧೬.೩೯. ಶ್ರೀ ಎಂ.ಕೆ. ನಾರಾಯಣಪ್ಪನವರು ಮೇಲಿನಮನೆ : ಮನೋಜ್ಞವಾಗಿ ಪಾತ್ರನಿರ್ವಹಿಸುವ

ಕಲಾವಿದರಾಗಿದ್ದಾರೆ. ತಾಳಮದ್ದಳೆಯ ವಿಮರ್ಶಕರೂ ಆಗಿರುವ ಇವರು ಅಪಾರ ಜ್ಞಾನವನ್ನು ಹೊಂದಿದವರು. ನಾರದ, ವಿಧುರ, ಶ್ರೀರಾಮ, ಧರ್ಮರಾಯ, ಸುಗರ್ಭೆ, ಸೀತೆ ಮೊದಲಾದ ಪಾತ್ರಗಳಲ್ಲಿ ಅರ್ಥಹೇಳಿ ಪ್ರಸಿದ್ಧರಾದವರು.

೪.೧೬.೪೦. ಕೆ. ಕೃಷ್ಣ ಮಧ್ಯಸ್ಥ ಗೊರಮನೆ : ನಿವೃತ್ತ ಶಿಕ್ಷಕರಾದ ಇವರು ಕವಿ, ಪ್ರಸಂಗಕರ್ತ, ವಾಗ್ಮಿ, ವೇಷಧಾರಿ, ಅರ್ಥಧಾರಿ, ನಾಟಕಕಾರರೂ ಆಗಿದ್ದಾರೆ. ಕೃಷ್ಣ, ದ್ರೌಪದಿ, ಪ್ರಭಾವತಿ, ಸುಭದ್ರೆ, ಮಂಥರೆ, ಅಂಬೆ, ಭರತ, ವಾಲಿ, ಶೂರ್ಪನಖಿ ಮೊದಲಾದ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸುವವರಾಗಿದ್ದಾರೆ.

೪.೧೬.೪೧. ಶ್ರೀ ಎಂ.ಎಸ್. ಮಂಜಪ್ಪ ಹಳೆಗೊರಮನೆ : ಸಾಗರ ತಾಲ್ಲೂಕಿನ ಆವಿನಹಳ್ಳಿಯ ಹಳೆಗೊರಮನೆ ಇವರ ಮೂಲಸ್ಥಳ. ಶ್ರದ್ಧೆಯಿಂದ ಅರ್ಥಗಾರಿಕೆಯನ್ನು ಬೆಳೆಸಲು ಪ್ರಯತ್ನಿಸಿದವರು. ಇವರು ಹಂಸಧ್ವಜ, ಸುಲೋಚನ, ಕೌರವ, ಅರ್ಜುನ, ಸುಗ್ರೀವ, ಇಂದ್ರ ಮೊದಲಾದ ಪಾತ್ರಗಳನ್ನು ಸಮರ್ಥವಾಗಿ ಬಿಂಬಿಸಬಲ್ಲವರಾಗಿದ್ದಾರೆ.

೪.೧೬.೪೨. ಶ್ರೀ ಹೆಚ್.ಡಿ. ಗುರುಮೂರ್ತಿ, ಗೊರಮನೆ : ಸಾಗರ ತಾಲ್ಲೂಕಿನ ಗೊರಮನೆಯವರಾದ ಗುರುಮೂರ್ತಿ ಉತ್ತಮ ಅರ್ಥಧಾರಿಗಳು, ನಾರದ, ರುಕ್ಮಿಣಿ, ಹನುಮಂತ, ಸರ್ಪಾಸ್ತ್ರ, ವನಪಾಲಕ, ದಾರುಕ ಮೊದಲ ಪಾತ್ರಗಳಿಗೆ ಜೀವಂತಿಗೆ ತುಂಬಬಲ್ಲ ಕಲಾವಿದರಾಗಿದ್ದಾರೆ.

೪.೧೬.೪೩. ಶ್ರೀ ಎಂ.ಆರ್. ಲಕ್ಷ್ಮೀನಾರಾಯಣ, ಸಾಗರ : ಎಂ.ಆರ್. ಲಕ್ಷ್ಮೀನಾರಾಯಣ ಪ್ರಸಿದ್ಧ ಅರ್ಥಧಾರಿಗಳು. ಇವರ ತಂದೆ ಮುಂಡಿಗೆಸರ ರಾಮಕೃಷ್ಣಪ್ಪನವರಿಂದ ಮಾರ್ಗದರ್ಶನ ದೊರೆತು ಪ್ರಸಿದ್ಧ ಅರ್ಥಧಾರಿಗಳಾಗಿ ಬೆಳೆದರು. ಇವರ ವಾಕ್‌ಪ್ರೌಢಿಮೆ, ತರ್ಕಸರಣಿ ಧ್ವನಿಯುಕ್ತ ಮಾತುಗಳು ತಾಳಮದ್ದಳೆಯನ್ನು ಪರಿಣಾಮಕಾರಿಗೊಳಿಸುತ್ತವೆ. ವಾಲಿ, ಮಾಗಧ, ಅತಿಕಾಯ, ಕರ್ಣ, ಅಂಚೆ ಕಲಾವತಿ, ದ್ರೌಪದಿ ಪಾತ್ರಗಳನ್ನು ಧ್ವನಿಪೂರ್ಣವಾಗಿ ಚಿತ್ರಿಸಿ ಪ್ರಸಿದ್ಧರಾಗಿದ್ದಾರೆ.

೪.೧೭. ಧ್ವನಿ ಮುದ್ರಿಕೆಗಳು :

ತಂತ್ರಜ್ಞಾನ ಕ್ಷೇತ್ರದ ವಿಕಾಸದ ಹಾದಿಯಲ್ಲಿ ಆಶುವಾಙ್ಮಯವನ್ನು ದಾಖಲಿಸುವ ವಿಧಾನವಾಗಿ ಧ್ವನಿಮುದ್ರಿಕೆಗಳು ಆವಿಷ್ಕರಣಗೊಂಡಿದ್ದರಿಂದ ಸಾಕಷ್ಟು ವಿವರಗಳು ದೊರೆಯುತ್ತವೆ. ಇದಕ್ಕೂ ಹಿಂದಿನ ಆಶುವಾಙ್ಮಯಕಾರರ ಅರ್ಥಗಾರಿಕೆಯನ್ನು ಕಲಾವಿದರ ಕುರಿತಾದ ಗ್ರಂಥಗಳ ಉಲ್ಲೇಖದಲ್ಲಿ, ಸಂಸ್ಮರಣ ಸಂಚಿಕೆಗಳಲ್ಲಿ ಒಂದೆರಡು ಸಾಲಿನಲ್ಲಿ ಲಭ್ಯವಾಗುತ್ತದೆ. ಅರ್ಥಗಾರಿಕೆಯು ಎಷ್ಟೇ ದೀರ್ಘವಾಗಿದ್ದರೂ ಅದರ ಲಕ್ಷಣವನ್ನು ಲಿಖಿತಗೊಳಿಸಲು ದೊರೆಯುವ ಆಧಾರಗಳು ಅಲ್ಪವೇ. ಭಾಷೆ, ಶೈಲಿ, ಸಂರಚನೆಗಳು, ಅಭಿವ್ಯಕ್ತಿಯನ್ನು ಗುರುತಿಸಿ ವೈಯಕ್ತಿಕ ಭಿನ್ನತೆಗಳನ್ನು ದಾಖಲಿಸಲು ಸಾಧ್ಯವಿದೆ. ಈ ಕೊರತೆಯನ್ನು ನೀಗಿಸುವಲ್ಲಿ ಧ್ವನಿಮುದ್ರಿಕೆಗಳು ಸಹಕಾರಿಯಾಗಿವೆ. ಇಂದು ಯಕ್ಷಗಾನ ಪ್ರಚಲಿತವಿರುವ ಭಾಗದಲ್ಲಿ ಸಾಕಷ್ಟು ಧ್ವನಿಮುದ್ರಿಕೆಗಳು ಪ್ರಕಟಗೊಂಡಿವೆ. ದೃಶ್ಯ, ಶ್ರವ್ಯ ಧ್ವನಿಮುದ್ರಿಕೆಗಳು ಯಕ್ಷಗಾನವನ್ನು ಸೆರೆಹಿಡಿದಿವೆ.

ಶೇಣಿಯವರ ಅರ್ಥ ವೈಭವವನ್ನು ಗ್ರಂಥಗಳಲ್ಲಿ ದಾಖಲಿಸಿರುವುದು ಅಧ್ಯಯನಕ್ಕೆ ಉಪಯುಕ್ತವಾಗಿದೆ. ಇದನ್ನು ಹೊರತಾಗಿಸಿ ಉಳಿದೆಲ್ಲ ಅರ್ಥಧಾರಿಗಳ ವಾಚಿಕವನ್ನು ಧ್ವನಿಮುದ್ರಿಕೆಗಳಿಂದಲೆ ಕೇಳಬೇಕಾಗಿದೆ. ಆದರೂ ವಿಫುಲ ಸಂಖ್ಯೆಯಲ್ಲಿ ಹವ್ಯಕ ಕಲಾವಿದರ ವಾಚಿಕ ವಾಙ್ಞಯವನ್ನು ದಾಖಲಿಸಿದ್ದು ಕೂಡ ಗಮನಾರ್ಹವಾಗಿದೆ.

ಯಕ್ಷಗಾನ ತಾಳಮದ್ದಳೆಯಲ್ಲಿ ಕೇವಲ ಗ್ರಾಂಥಿಕ ಕನ್ನಡದಲ್ಲಲ್ಲದೆ ಹವ್ಯಕರು ಹವಿಗನ್ನಡದಲ್ಲೂ ತಾಳಮದ್ದಳೆ ನಡೆಸಿದ್ದಾರೆ. "ಶಾಲಿನಿ ಮದ್ವೆ" ಹವಿಗನ್ನಡದಲ್ಲಿ ದಾಖಲಾದ ಮೊದಲ ಧ್ವನಿಮುದ್ರಿಕೆಯಾಗಿದೆ. ಟಿ.ಎಂ. ಶೇಷಗಿರಿಯುವರು ಈ ಪ್ರಸಂಗವನ್ನು ರಚಿಸಿದ್ದಾರೆ.[೪೯] ಇತ್ತೀಚೆಗೆ ಹೆಸರಾಂತ ಕಲಾವಿದರಿಂದೊಡಗೂಡಿ ಹವ್ಯಕ ಭಾಷೆಯಲ್ಲಿಯ ತಾಳಮದ್ದಳೆ ಧ್ವನಿಮುದ್ರಿಕೆಯೂ ಬಿಡುಗಡೆಯಾಗಿದೆ. ದಕ್ಷಾಧ್ವರ, ಪರಶುರಾಮ ಮಹಾತ್ಮೆ, ತಾಟಕಾಮೋಕ್ಷ ತಾಳಮದ್ದಳೆಯ ಪ್ರಸಂಗಗಳನ್ನು ಹವ್ಯಕ ಭಾಷೆಯಲ್ಲಿ ಹೆಸರಾಂತ ಕಲಾವಿದರು ಅರ್ಥಹೇಳಿದ್ದನ್ನು ದಾಖಲಿಸಿದ ಧ್ವನಿಮುದ್ರಿಕೆಯು ಬಿಡುಗಡೆಯಾಗಿದೆ. ಈ ಪ್ರಸಂಗಗಳಲ್ಲಿ ಶೇಣಿಗೋಪಾಲಕೃಷ್ಣ ಭಟ್ಟ, ಕೆ. ಗೋವಿಂದ ಭಟ್ಟ, ಅಡಕ ಗೋಪಾಲಕೃಷ್ಣ ಭಟ್ಟ, ಉಡುಪಮಾಲೆ ಗೋವಿಂದ ಭಟ್ಟ, ನಯನ ಕುಮಾರರು ಅರ್ಥಗಾರರಾಗಿದ್ದಾರೆ.[೫೦] ಯಕ್ಷಗಾನ ಆಶುವಾಙ್ಞಯ ಭಾಷೆ, ಸಾಹಿತ್ಯ ಪರಂಪರೆ, ವರ್ತಮಾನದ ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವ ಪ್ರಭಾವಶಾಲಿಯಾದ ಮೌಖಿಕ ಚರ್ಚೆಯಾಗಿದೆ. ಇದೊಂದು ಭಾಷಿಕ ಅಭಿವ್ಯಕ್ತಿಯಾಗಿ ಜನರಲ್ಲಿ ಭಾಷೆಯ ಜ್ಞಾನ, ಸಂರಚನೆಗಳು ಪ್ರಭಾವಗೊಂಡು ಭಾಷಾವಿಕಾಸಕ್ಕೂ ಈ ಕಲೆ ಪ್ರೇರಣೆಯಾಗಿದೆ.

ಅರ್ಥಗಾರಿಕೆಯ "ವಾಙ್ಞಯ ಸ್ವರೂಪದ" ಚಿಂತನೆ : ಅರ್ಥಗಾರಿಕೆಯು ಮೊದಲ ಹಂತದ ಕಾಲಘಟ್ಟದಲ್ಲಿ ಪದ್ಯಾನುವಾದವಾಗಿತ್ತು.

"ಅರ್ಥಧಾರಿಗಳಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆ. ಓದುವದಕ್ಕೆ ಅನುಕೂಲತೆಯೂ ಇರಲಿಲ್ಲ. ಹಾಗಾಗಿ ಅರ್ಥವನ್ನು ವಿಸ್ತರಿಸುವುದರ ಸಂಖ್ಯೆ ತೀರ ಕಡಿಮೆ. ಅದು ಮಾತುಗಾರಿಕೆಯ ಮಾಧ್ಯಮವೆಂಬ ದೃಷ್ಟಿಯಂತೂ ಇರಲೆ ಇಲ್ಲ. ಪ್ರಸಂಗದ ಪುಸ್ತಕದಲ್ಲಿ ಹೇಳಿದ್ದನ್ನು ಸರಳಾನುವಾದ ಮಾಡಿದರೆ ತೀರಿತು ಎನ್ನುವಂತೆ ಅರ್ಥ ಕವಿಯ ಪದ್ಯಗಳ ಸಾರಾಂಶವನ್ನು ಭಾಗವತರು ಹೇಳುವುದು ಕೂಡಾ ಇತ್ತು.[೫೧] ಉದಾ.

ರಾಗ ಸೌರಾಷ್ಟ್ರ ತ್ರಿವುಡೆ

ಅರಸ ಕೇಳಿತ್ತಲು ಸುಯೋಧನ । ಕರೆಸಿ ಗುರುಗಾಂಗೇಯ
ಕೃಪರೊಳ। ಗಿರದ ಮನದಾಲೋಚನೆಯ ತಾ ನೊರೆದನಾಗ॥

ಅರ್ಥ

೪೯. ಯಕ್ಷರಂಗ – ಜುಲೈ ೨೦೦೮ – ಪುಟ–೧೯

೫೦. ಕಣಿಪುರ–ಹವ್ಯಕ ಭಾಷೆಯ ಭಾಷಿಕ ಸೊಗಡಿನಲ್ಲಿ ಯಕ್ಷಗಾನ

೫೧. ಎಂ.ಎ. ಹೆಗಡೆ – ಹಿರಿಯರು ಮತ್ತು ಸಮಕಾಲೀನರು – ಕೃಷ್ಣಸ್ಮರಣ – ಪು. ೭೦.

ಇತ್ತಲಾಗಿ ಕೌರವನು ತನ್ನ ಆಪ್ತರಾದ ದ್ರೋಣ, ಭೀಷ್ಮ
ಕೃಪ, ಕರ್ಣ ಮೊದಲಾದವರನ್ನು ಕೂಡಿಕೊಂಡು
ಏನ್ ಹೇಳ್ತಾ ನಂದ್ರೆ.....

ಭಾಗವತನು ಹೀಗೆ ಸಂದರ್ಭವನ್ನು ಸೂಚಿಸುವ ಕ್ರಮವನ್ನು ಅಡಕಳ್ಳಿ ಸುಬ್ರಾಯ ಭಾಗವತರಂಥವರು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರೆಂದು ಹೇಳುತ್ತಾರೆ. ಮುಂದೆ ಈ ಕ್ರಮವು ಲುಪ್ತವಾಯಿತು ಎಂದು ತೋರುತ್ತದೆ.

ಅರ್ಥಗಾರಿಕೆಯ ಮಾದರಿ ಹೀಗೆ.....
ನೀತಿಯೇ ಕರುಣಾಳು ನಿನಗೆ ವಿ। ಘಾತವೆಣಿಸಿದ
ದುಷ್ಟನೊಳು ಸಂ। ಪ್ರೀತಿಯೇ ಸಂಧಾನ ಕನುವಾಗುವರೆ ಹೇಳೆನಲು॥

ಅರ್ಥ : ಕೇಲಿದೇನಯ್ಯಾ ಧರ್ಮರಾಯ; ನಿನಗೆ ವಿಘಾತ
ವೆಣಿಸಿದ ದುಷ್ಟ ಮನುಷ್ಯರಲ್ಲ ನಿನಗೆ
ಸಮ್ಮಿಳಿತವೆ? ಅದು ಹೊರ್ತು ನಮ್ಮ
ಮಾತುಕೇಳಿ ಸಂಧಿಗೆ ಒಪ್ಯಾನೋ?

ಹೀಗೆ ಪ್ರಸಂಗದ ಪದ್ಯಕ್ಕೆ ಭಾಗವತರು ಸಂದರ್ಭ ಸೂಚಿಸಿ ಅರ್ಥಧಾರಿ ಮುಂದಿನ ಪದ್ಯಕ್ಕೆ ಪದ್ಯದ ಸರಳಾರ್ಥವನ್ನು ಹೇಳಿ ಕಥೆಯನ್ನು ಮುಂದುವರಿಸುವ ಕ್ರಮ ಹಿಂದೆ ನಡೆದುಕೊಂಡು ಬಂದಿತ್ತು. ಈ ಅರ್ಥಗಾರಿಕೆಯು ವೈಚಾರಿಕತೆಯ ನೆಲೆಯಲ್ಲಿ ಬಹುಶ್ರುತರ ಪ್ರವೇಶದಿಂದಾಗಿ "ಸನ್ನಿವೇಶವನ್ನು ಭಾಷೆಯಲ್ಲಿ ತೊಡಗಿಸಿಕೊಂಡು ಬಂದು ಪದದ ಧ್ವನಿಯನ್ನು ವ್ಯಕ್ತಪಡಿಸುತ್ತಾ ಈ ಮಾತಿನ ಮರ್ಮವೇನು ಎಂಬುದನ್ನು ವಿವಿಧ ಶಾಸ್ತ್ರಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುವ ವಿಧಾನ ರೂಢಿಯಾಯಿತು. ಈ ಕ್ರಮದಲ್ಲಿ ಮಾತನ್ನು ಸಮರ್ಥಿಸುವ, ಅಂತರಾರ್ಥವನ್ನು ವಿಶ್ಲೇಷಿಸುವ ಮಾತುಗಾರ ವಿವಿಧ ಸಾಂದರ್ಭಿಕ ಉದಾಹರಣೆಯೊಂದಿಗೆ ಸಮಕಾಲೀನಗೊಳಿಸಿ ಮಾತನಾಡುವ ಕ್ರಮ ಭಾಷೆಯ ಅರ್ಥವಿಸ್ತರಣೆಗೆ ಸಂವಾದ, ಚರ್ಚೆ, ಸಂಭಾಷಣೆಯ ಮೂಲಕ ಎಡೆ ಮಾಡಿಕೊಟ್ಟಿತು. ಈ ಮೌಖಿಕವಾದ ವಿವಾದಗಳು ಭಾಷಾ ಪ್ರಯೋಗ ಮತ್ತು ಅರ್ಥಗಾರಿಕೆಯ ನೆಲೆಯನ್ನು ಖಚಿತಗೊಳಿಸಿತು. ಮಾನವಶಾಸ್ತ್ರ, ಭಾಷಾಶಾಸ್ತ್ರ, ಮನಶಾಸ್ತ್ರ, ಸಮಾಜಶಾಸ್ತ್ರ, ಅರ್ಥನೀತಿ, ರಾಜಕೀಯ ನೀತಿಗಳೆಲ್ಲ ಮಾತಿನ ಮರ್ಮವನ್ನು ನಿಶಿತಗೊಳಿಸಲು ಪ್ರಯೋಗಿಸಲ್ಪಟ್ಟಿತು. ಈ ತೆರನಾದ ಮೌಖಿಕ ಅಭಿವ್ಯಕ್ತಿ ಕಾವ್ಯ ಸಾಹಿತ್ಯ ಪದಸ್ಫುರಣೆಯ ಸೃಜನಶೀಲತೆಯನ್ನು ದೀಪ್ತಗೊಳಿಸಿತು. ವಾಕ್ಪಟುತ್ವವು ಅರ್ಥದ ಅರ್ಥವನ್ನು ವ್ಯಾಪ್ತಿಯನ್ನು ಹೆಚ್ಚಿಸಿತು. ಕ್ರಮೇಣ ಸಾಹಿತ್ಯದ ಗುಣಲಕ್ಷಣಗಳನ್ನೆಲ್ಲ ಒಳಗೊಂಡ ವಾಚಿಕವು ಸಿದ್ಧ ಶೈಲಿಯಲ್ಲಿ ಆಶುಮಾತಿನ ಮೂಲಕ ಪ್ರಯೋಗಿಸಲ್ಪಟ್ಟಿತು. ಇದಕ್ಕೆ ಸಮಾಜದ ಸುಶಿಕ್ಷಿತರಾದ ಮೇಲ್ವರ್ಗದವರು ಕಾರಣರಾದರು. ವಿವಿಧ ಮೌಖಿಕ ಕಲಾಕ್ಷೇತ್ರಗಳಾದ ಗಮಕ, ಪ್ರವಚನ ಹರಿಕಥೆಗಳಲ್ಲಿ ತೊಡಗಿಕೊಂಡ ಪಂಡಿತರುಗಳ ಪ್ರವೇಶವಾಯಿತು. ಹಲವು ಗ್ರಂಥಗಳಲ್ಲಿನ ಸತ್ವಗಳನ್ನು ಪದ್ಯದ ಅರ್ಥಕ್ಕೆ ಅನ್ವಯಿಸಿ ಪ್ರಕಟಿಸುವ ಸೃಜನಶೀಲತೆಗೆ ತಾಳಮದ್ದಳೆ ಸಾಕ್ಷಿಯಾಯಿತು. ತಾಳಮದ್ದಳೆಯ ಅರ್ಥಗಾರಿಕೆ, ಭಾಷಾಪ್ರಯೋಗದ

ವೇದಿಕೆಯಾಗಿ ಮಾರ್ಪಟ್ಟಿತು. ಆಶು ಅಭಿವ್ಯಕ್ತಿಯಲ್ಲಿ ಸಾಹಿತ್ಯ ವಿಜೃಂಭಿಸಿತು. ಪ್ರತಿಭಾವಂತ ಹವ್ಯಕರು "ಆಶು ವಾಙ್ಮಯಕಾರರಾಗಿ" ಅರ್ಥಗಾರಿಕೆಗೆ ವಿಶಿಷ್ಟ ಕೊಡುಗೆ ನೀಡುವುದಕ್ಕೆ ಸಾಧ್ಯವಾಯಿತು.

೪.೧೮. ಉಪಸಂಹಾರ

ಯಕ್ಷಗಾನ ವಾಙ್ಮಯ ಕಲೆಯ ಭಾಷಿಕ ಅಭಿವ್ಯಕ್ತಿಯಾಗಿದೆ. ಯಕ್ಷಗಾನದ ಆಶುವಾಙ್ಮಯ ಒಂದು ವಿಶಿಷ್ಯ ಅಭಿವ್ಯಕ್ತಿಯ ಸಾಹಿತ್ಯ ಸ್ವರೂಪವಾಗಿದೆ. ಮೌಖಿಕ ಸಂಭಾಷಣೆಯಿಂದ ಭಾಷಿಕ ಅಭಿವ್ಯಕ್ತಿ ನಿರಂತರವಾಗಿ ನಾವೀನ್ಯತೆಯನ್ನು ಹೊಂದಲು ಸಾಧ್ಯ. ಯಕ್ಷಗಾನ ಕನ್ನಡ ಭಾಷೆಯ ಬೆಳವಣಿಗೆಗೆ ಈ ನೆಲೆಯಲ್ಲಿ ನೀಡಿದ ಕೊಡುಗೆಗಳು ಅತ್ಯಂತ ಮಹತ್ವದ್ದಾಗಿದೆ. ಸಂಶೋಧನೆ, ವಿಮರ್ಶಾ ಅಭಿನಂದನ ಗ್ರಂಥ ಸ್ಮರಣ ಸಂಚಿಕೆ, ಆತ್ಮಕಥನ, ಪ್ರಸಂಗ, ಕೃತಿಪರಿಚಯ. ಪ್ರಸಂಗದರ್ಶನ ಮುಂತಾದ ಪ್ರಕಾರಗಳು ಗ್ರಂಥ ಸಾಹಿತ್ಯದಲ್ಲಿ ನಾವೀನ್ಯತೆಯಿಂದ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಗಳನ್ನು ನೀಡಿದೆ. ಹವ್ಯಕರು ವಾಙ್ಮಯಕಾರರಾಗಿ ಯಕ್ಷಗಾನಕ್ಕೆ ನೀಡಿದ ಕೊಡುಗೆಗಳು ಗಣನೀಯವಾದುದು.

ಅಧ್ಯಾಯ - ೫

ಹವ್ಯಕರು ಮತ್ತು ಯಕ್ಷಗಾನ ಸಂಘಟನೆಗಳು

ಯಕ್ಷಗಾನ ಕಲೆ ಮೇಳಕಲೆಯಾಗಿದೆ, ಹಿಮ್ಮೇಳ, ಮುಮ್ಮೇಳಗಳ ಮೇಳೈಸುವಿಕೆಯಿಂದಲೆ ಪ್ರದರ್ಶನ ಸಿದ್ಧಗೊಳ್ಳುತ್ತದೆ. ಪ್ರದರ್ಶನಕ್ಕೆ ಸಂಘಟನೆ ಅವಶ್ಯಕವಾಗಿದೆ. ಕಲಾವಿದರು ರಂಗಮಂದಿರಗಳು, ಅಸನ ವ್ಯವಸ್ಥೆ, ಸಾಮಗ್ರಿ ಸಲಕರಣೆಗಳ ವ್ಯವಸ್ಥೆಗೆ ಸಂಘಟನೆಗಳು ಅನಿವಾರ್ಯವಾಗಿದೆ, ಕಲಾಂಗಗಳ ಹೊಂದಾಣಿಕೆಯನ್ನು ಮಾಡುವ ಸಮಗ್ರ ಪ್ರಯತ್ನವನ್ನು ಮೇಳ ಎಂದು ಕರೆದರೆ 'ಸಂಘಟನೆ' ಪಾತ್ರಾಂತರ್ಗತ, ಪ್ರದರ್ಶನಾಂತರ್ಗತ ವ್ಯವಸ್ಥೆಯನ್ನು ಒಳಗೊಂಡು ಮೇಳವನ್ನು ಮುನ್ನಡೆಸುವ ಹೊಣೆಗಾರಿಕೆಯಾಗಿರುತ್ತದೆ, ಕಲೆಯ ಉಳಿವಿಗೆ ಬೆಳವಣಿಗೆ ಪ್ರಸಾರಕ್ಕೆ ಸಂಘಟನೆಯು ಅತ್ಯಂತ ಅಗತ್ಯವಾಗಿರುತ್ತದೆ, ಯಕ್ಷಗಾನದ ಈ ಸಂಘಟಿತ ಪ್ರಯತ್ನದಿಂದ ಕಲೆಯ ಪೂರ್ಣಪ್ರಮಾಣದ ಮನರಂಜನೆಯನ್ನು ಹೊಂದಿದ ಪ್ರಬೋಧಕ ಕಲೆಯಾಗಿ ಬೆಳೆಯಿತು, ಸಮಾಜಿಕ, ಆರ್ಥಿಕ, ಧಾರ್ಮಿಕ ಹಿನ್ನಲೆಯ ಸಮಷ್ಟಿ ಪ್ರಜ್ಞೆಯ ಪ್ರತೀಕವಾಗೆ ಉಳಿಯಿತು. ಕಲಾವಿದ, ಸಂಘಟಿಕ, ಪ್ರೇಕ್ಷಕರೆಲ್ಲರೂ ವ್ಯವಸ್ಥಿವಾಗಿ ವ್ಯವಹರಿಸುವುದಕ್ಕೆ ಕಾರಣವಾಯಿತು. ದಕ್ಷಿಣಕನ್ನಡದಲ್ಲಿ ಪ್ರಚಲಿತವಿರುವ ಹರಕೆಯಾಟಗಳಿಗೆ ದೇವಾಲಯಗಳ ಆಶ್ರಯವು ದೊರೆತಂತೆ ಉತ್ತರಕನ್ನಡದ ಮೇಳಗಳಿಗೆ ಆಶ್ರಯ ದೊರೆಯದ ಕಾರಣ ಕಲಾವಿದನೇ ಸಂಘಟಕನಾಗಿ ಮೇಳದ ಯಜಮಾನನಾಗಿಯೂ ಪ್ರಧಾನ ಪಾತ್ರಧಾರಿಯಾಗಿಯೂ ಪಾತ್ರನಿರ್ವಹಿಸಿರುವುದು ಗೋಚರವಾಗುತ್ತದೆ. ಆರ್ಥಿಕವಾಗಿ ಮೇಳದ ಸಂಘಟನೆ ಲಾಭ-ನಷ್ಟದ ಫಲಾಫಲಗಳನ್ನು ಸ್ವೀಕರಿಸುವ ದಿಸೆಯಲ್ಲಿ ಪ್ರಯೋಗಶೀಲತೆಯ ಪ್ರಧಾನ ಆಕರ್ಷಣೆಯಾಗಿ ಸಂಘಟನಾ ಕೌಶಲ್ಯವನ್ನು ಒರೆಹಚ್ಚಿವೆ. ಈಹಿನ್ನಲೆಯಿಂದ ಸಂಘಟನೆಯ ಪ್ರಯತ್ನಗಳು ಯಕ್ಷಗಾನಕಲಾ ವಿಕಾಸಕ್ಕೆ ಮಹತ್ತರ ಕೊಡುಗೆ ನೀಡಿದೆ.

ಯಕ್ಷಗಾನ ಮೇಳಗಳ ಸಂಘಟನೆಯು ಚರಿತ್ರೆಯಲ್ಲಿ, ಬಯಲಾಟ, ಹವ್ಯಾಸಿ ಮೇಳ, ಮೊಕ್ಕಾಂಪದ್ದತಿಯ ಡೇರೆಮೇಳ, ಡೇರೆಮೇಳ ವೃತ್ತಿಮೇಳ, (ಟೆಂಟನ ಮೇಳ)ಗಳು ಕಾಲದಿಂದ ಕಾಲಕ್ಕೆ ಮಾರ್ಪಾಡಾದ ಮೇಳ ಸ್ವರೂಪಗಳಾಗಿವೆ. ವಿಜ್ಞಾನ, ತಂತ್ರಜ್ಞಾನ ಕ್ಷೇತ್ರ ಬೆಳವಣಿಗೆ ತಕ್ಕಂತೆ ಪ್ರದರ್ಶನಗಳು ಹೆಚ್ಚೆಚ್ಚು ಪ್ರಸಾರಗೊಂಡತೆ ಮೇಳಸ್ವರೂಪವು ಹೊಸಹೊಸ ಆಯಾಮಗಳಾಗಿ ಪರಿವರ್ತನೆಗೊಂಡಿವೆ. ಉತ್ತರ ಕನ್ನಡ, ದಕ್ಷಿಣ ಕನ್ನಡ ಮಲೆನಾಡಿನ ಭಾಗಗಳಲ್ಲಿ ಇಂತಹ ಸಂಘಟನೆಯ

ಜವಬ್ದಾರಿಯನ್ನು ಹೊತ್ತ ಕಲಾವಿದರ ಮನೆತನಗಳು, ವ್ಯಕ್ತಿಗಳ ತ್ಯಾಗ ಕಲೆಯನ್ನು ಈ ಮಟ್ಟಕ್ಕೆ ಬೆಳೆಸಿದೆ. ಬಯಲಾಟದ ಸ್ವರೂಪದಲ್ಲಿದ್ದ ಮೇಳವನ್ನು ವ್ಯವಸಾಯ ಮೇಳವಾಗಿ ವಾಣಿಜ್ಯೀಕರಣದ ವೃತ್ತಿಯಾಗಿ ಉದ್ಯಮವಾಗಿ ಬೆಳೆಸಿದ್ದರಿಂದಲೆ ಯಕ್ಷಗಾನ ಕೇವಲ "ಹರಕೆ"ಯಾಗಿ ಉಳಿಯದೆ ಜೀವಂತ ಪರಂಪರೆಯಾಗಿ ಬೆಳೆಯಲು ಕಾರಣವಾಯಿತು. ಈ ವ್ಯವಹಾರಿಕ ಪ್ರಜ್ಞೆಯಿಂದ ಯಕ್ಷಗಾನ ಉಳಿದುಕೊಂಡಿವೆ.

ಯಕ್ಷಾಗಾನ ಮೇಳ ಸಂಘಟನೆಯಲ್ಲಿ ಸಮಕಾಲೀನ ಪ್ರಸಿದ್ದ ನಟನೊಬ್ಬ ಸಂಘಟಕನಾಗಿರುವುದು. ಪ್ರದರ್ಶನದ ಮೇಲ್ಪಂಕ್ತಿಯಿಂದ ಮೇಳವನ್ನು ಸಂಘಟಕನಾಗಿ ನಡೆಸುವುದು ಎರಡೂ ಬಗೆಯ ಪ್ರಯತ್ನಗಳು ಸಂಘಟಣೆಯ ಇತಿಹಾಸದಲ್ಲಿ ದಾಖಲಾಗಿದೆ. ಸಂಪ್ರದಾಯ ಪರಂಪರೆಯ ನಲೆಯಲ್ಲಿರುವ ಸಂಘಟನೆಯೂ ಒಂದು ಪ್ರತ್ಯೇಕ ಮೌಲ್ಯದ ಮೂಲಕ ಕಲಾ ಪ್ರಸರಣಕ್ಕೆ ಕಾರಣವಾಗಿದೆ. ಸಂಘಟಣೆ ಯಶಸ್ಸು, ಅಪಯಶಸ್ಸುಗಳ ಲಾಭ–ನಷ್ಟಗಳ, ಸೋಲುಗೆಲುವುಗಳ ಪರಿಣಾಮ ಕತೆಯಿಂದಲೇ, ಪ್ರದರ್ಶನ, ಪರಂಪರೆ ಜೀವಂತವಾಗಿ ಉಳಿದುಕೊಂಡಿದೆ.

ಬಯಲಾಟದ ಮೇಳ ವ್ಯವಸ್ಥೆಯ ಹವ್ಯಾಸಿ ಕಲಾವಿದರ ಮೇಳಗಳು ಸ್ವತಂತ್ರವಾಗಿ ತಿರುಗಾಟದ ವೃತ್ತಿ ಮೇಳಗಳಾಗಿ ಪರಿವರ್ತನೆಗೊಳ್ಳುವ ಕಾಲಘಟ್ಟದಲ್ಲಿನ ಬದಲಾವಣೆಗಳು ಸಂಘಟನಾತ್ಮಕ ಬದಲಾವಣೆಯನ್ನು ಒಳಗೊಂಡಿರುತ್ತದೆ. ಬಯಲಾಟದಲ್ಲಿ ಯಕ್ಷಗಾನವನ್ನು ಪುಕ್ಕಟೆಯಾಗಿ ನೋಡುವ ಪ್ರೇಕ್ಷಕ ದುಡ್ಡುತೆತ್ತು ಆಟ ನೋಡುವ ವ್ಯವಸ್ಥೆಗೆ ಹೊಂದಿಕೊಳ್ಳ ಬೇಕಾದರೆ ಪ್ರದರ್ಶನ ಪರಿಣಾಮ, ಕಲಾವಿದನ ಪರಿಶ್ರಮ ಪ್ರಸಿದ್ದ ಯಕ್ಷಾಗಾನ ಆಕರ್ಷಣೀಯತೆಗಳನ್ನು ಬೆಳೆಸಿದ ಸಂಘಟನತ್ಮಾಕ ಕೌಶಲ್ಯಗಳ ಪ್ರಭಾವವನ್ನು ಸಾರುತ್ತವೆ. "ಉತ್ತರಕನ್ನಡ ಹವ್ಯಕ ಕಲಾವಿದರ ಈ ಸಾಧನೆಗೆ ಇಲ್ಲಿನ ಯಕ್ಷಗಾನ ಇತಿಹಾಸ ಸಾಕ್ಷಿಯಾಗಿದೆ. ಅದಕ್ಕೆ ನಿದರ್ಶನಗಳು ಇದೆ. ಉತ್ತರಕನ್ನಡದಲ್ಲಿ ನಲುವತ್ತಾರರಷ್ಟು ಮೇಳಗಳಿದ್ದರೂ ತಿರುಗಾಟ ಮಾಡುವವು. ಅಲ್ಲಿ ಪ್ರೇಕ್ಷಕರು ಉಚಿತ ಪ್ರವೇಶವುಳ್ಳ ಬಯಲಾಟ ನೋಡಲು ಗುಂಡಬಾಳಕ್ಕೇ ಹೋಗಬೇಕು ಇಡೀ ಜಿಲ್ಲೆಯಲ್ಲಿ ಇಡಗುಂಜಿ(ಕೆರೆಮನೆ) ಪೂರ್ವದಲ್ಲಿದ್ದ ಅನೇಕ ಬಲಿಷ್ಟ ಮೇಳಗಳು ತಮ್ಮ ಅಸ್ತಿತ್ವ ಕಳೆದುಕೊಂಡಿದೆ. ಬದುಕುಳಿದ ಹಳೆಯ ಮೇಳಗಳಾಗಲಿ, ಹೊಸಮೇಳಗಳಾಗಲಿ ಕನಿಷ್ಟ ಮಿತಿಯ ಪ್ರದರ್ಶನಾವಕಾಶವನ್ನು ಪಡೆಯುತ್ತಿಲ್ಲ. ಮೇಳವೊಂದರ ಅಸ್ತಿತ್ವವೆಂದರೆ ಡೇರೆಯ ವ್ಯವಸ್ಥೆ ಮತ್ತು ತಿರುಗಾಟ ಎಂಬಷ್ಟರ ಮಟ್ಟಿಗೆ ತಿಳುವಳಿಕೆ ಬೆಳದು ನಿಂತಿದೆ".[೧]

ಈ ಅಂಶಗಳನ್ನು ಗಮನಿಸಿದಾಗ ಯಕ್ಷಗಾನದ ಉಳಿವಿಗೆ ವೃತ್ತಿ ಸಂಘಟನೆಯು ಅನಿವಾರ್ಯತೆ ಮನದಟ್ಟಾಗುತ್ತದೆ. ಯಕ್ಷಗಾನ ಇತಿಹಾಸದಲ್ಲಿ ದೀರ್ಘಕಾಲದ ಸಂಘಟನೆಯ ಪರಿಶ್ರಮನ್ನು ಹೊಂದಿದ ಕೆರೆಮನೆ ಮೇಳದ ಪ್ರಯತ್ನಗಳು ಯಕ್ಷಗಾನವನ್ನು ಪ್ರದರ್ಶನಾವಕಾಶದಿಂದ ವಂಚಿತಗೊಳಿಸದೆ ಉಳಿಸಿದ್ದು ತಿಳಿದು ಬರುತ್ತದೆ.

ಅತಿ ಪ್ರಾಚೀನ ಮೇಳಗಳೆಂದು ಗುರುತಿಸಲಾದ ಹೆಗಡೆ ಮೇಳ, ಹೆಬ್ಬಯಲು ಮೇಳ,

೧. ಡಾ। ಜಿ.ಎಸ್. ಭಟ್, ಕರೆಮನೆಶಂಭುಹಗಡೆ ಅಧ್ಯಯನವು ಪುಟ–೩೬೫–೬೯

ಮಾವಿನಕುರ್ವೆ ಮೇಳಗಳು ಪ್ರಮುಖವಾಗಿದ್ದು ಹೆಗಡೆ ಮೇಳ ಮತ್ತು ಹೆಬ್ಬಯಲು ಮೇಳಗಳು ಹವ್ಯಕ ಕಲಾವಿದರಿಂದಲೆ ಪೋಷಿತವಾಗಿತ್ತು. ಹಿಲಾಲು ಹಿನ್ನಲೆಯ ಸಾಗರದ ಬೆಳೆಯೂರು ಮೇಳ, ಒಂದುವರೆ ಶತಮಾನದ ಇತಿಹಾಸವಿರುವ ಯಲ್ಲಾಪುರದ ಹೊನ್ನಗದ್ದೆ, ಮೇಳಗಳೂ ಕೂಡ ತಮ್ಮ ಪ್ರಾಚೀನತೆಯ ಇತಿಹಾಸವನ್ನು ದಾಖಲಿಸಿದೆ. ಈ ಎರಡು ಮೇಳಗಳು ಹವ್ಯಕ ಕಲಾವಿದರಿಂದಲೇ ಮುನ್ನಡೆಸಲ್ಲಟ್ಟ ಮೇಳಗಳಾಗಿವೆ.

ಯಕ್ಷಗಾನದ ಸೀಮೋಲಂಘನಕ್ಕೆ ಹೆಸರಾದ ಕರ್ಕಿ ಹಾಸ್ಯಗಾರರ ಮೇಳ, ಮಹಾಗಣಪತಿ ಯಕ್ಷಗಾನ ಮಂಡಳಿ ಕರೆಮನೆ, ಮೂಡ್ಕಣಿ, ಮೂರೂರು ದೇವರು ಹೆಗಡೆಯವರಿಂದ ಸಂಘಟಿಸಲ್ಪಟ್ಟ ಶ್ರೀ ಮಹಾವಿಷ್ಣು ಪ್ರಸಾದಿತ ಯಕ್ಷಗಾನ ಕಲಾಸಂಘ ಮೂರೂರು, ಕೆರೆಮನೆ ಶಿವರಾಮ್ ಹೆಗಡೆಯವರ ಸಂಘಟಿಸಿದ ಕೆರೆಮನೆ ಮೇಳ (೧೯೩೪).

ಹೊಸತೋಟದ ಶ್ಯಾಮಭಟ್ಟರ ಓಣಿ ವಿಘ್ನೇಶ್ವರ ದೇವರ ಕೃಪಾಪೋಷಿತ ಮೇಳ, ವೆಂಕಟ್ರಮಣ ಹೆಗಡೆ, ಹೊಸಹಳ್ಳಿ ಸಣ್ಣ ಹೆಗಡೆಯವರ ಮೇಳ, ನೀರನ ಹಳ್ಳಿ ನಾರಾಯಣ ಹೆಗಡೆ ಮೇಳ,, ಅರಸಾಪುರ ಸುಬ್ರಾಯ ಹೆಗಡೆ ಮೇಳ, ಯಲ್ಲಾಪುರ ಸಣ್ಣಣ್ಣ ಭಾಗವತರ ಮೇಳ, ಶಿಂಗನಹಳ್ಳಿ ಹೆಗಡೆಯವರ ಶಿಂಗಿನಹಳ್ಳಿಮೇಳಗಳು ಹವ್ಯಕರಿಂದಲೇ ಸಂಘಟಿಸಲ್ಪಟ್ಟ ಕೆಲವು ಉದಾಹರಣೆಗಳಾಗಿವೆ.

ದಕ್ಷಿಣಕನ್ನಡ ಜಿಲ್ಲೆಯಲ್ಲಿಯೂ, ಶೇಣಿ ಗೋಪಾಲಕೃಷ್ಣಭಟ್ಟರು, ಕೂಡ್ಲು ಮೇಳ ನಾಲ್ಕು ವರ್ಷಗಳ ಕಾಲ ಸಂಘಟಿಸಿದ್ದಾರೆ. ಕುರಿಯ ವಿಠಲ್‌ಶಾಸ್ತ್ರಿ, ಪೆರೆವೋಡಿ ನಾರಾಯಣ ಭಟ್ಟರು, ಪಾತಾಳವೆಂಕಟ್ರಮಣಭಟ್ಟರು, ಧರ್ಮಸ್ಥಳ ಮೇಳದ ಯಜಮಾನಿಕೆಯನ್ನು ನಿರ್ವಹಿಸಿದ್ದಾರೆ. ಕೆರೆಮನೆ ಶಂಭುಹೆಗಡೆ ದೀರ್ಘಕಾಲದ ಮೇಳ ಸಂಘಟಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಕೊಂಡದಕುಳಿ ಸಹೋದರರಾದ ರಾಮಹೆಗಡೆ ಲಕ್ಷ್ಮಣಹೆಗಡೆಯಿಂದಾರಂಭದ ಈಗಿನ ತಲೆಮಾರಿನ ರಾಮಚಂದ್ರಹಗಡೆ ಕೊಂಡದ ಕುಳಿಯವರವರಗೂ ಮೇಳದ ಸಂಘಟನೆ ಬೆಳದುಬಂದಿದೆ. ಚಿಟ್ಟಾಣಿ ರಾಮಚಂದ್ರ ಹೆಗಡೆಯವರೂ ಮೇಳವನ್ನು ನಿರ್ವಹಿಸುತ್ತಾರೆ. ಕೃಸ್ಣಯಾಜಿ ಬಳ್ಕೂರುರವರು ಯಾಜಿಮಿತ್ರ ಮಂಡಳಿಯೆಂಬ ಕಾಲಮಿತಿ ಯಕ್ಷಗಾನ ಮಂಡಳಿಯನ್ನು ನಡೆಸುತ್ತಿದ್ದಾರೆ. ಗುಂಡಬಾಳ ಮೇಳವನ್ನು ಗುಂಡಿಬೈಲು ನಾರಾಯಣಭಟ್ಟರು ದೀರ್ಘಕಾಲ ಸಂಘಟಿಸಿದ್ದಾರೆ. ದಕ್ಷಿಣೋತ್ತರ ಮಲೆನಾಡು ಸೀಮೆಗಳಲ್ಲಿ ಹವ್ಯಕರು ಸಂಘಟಿಸಿದ ಮೇಳಗಳನ್ನು ಒಂದೊಂದಾಗಿ ಚರ್ಚಿಸಿದರೆ ಕಿರುಹೊತ್ತಿಗೆಯಾಗುವಷ್ಟು ಮೇಳಗಳಿವೆ. ಈ ಭಾಗದಲ್ಲಿ ಹವ್ಯಕೇತರ ಜನಾಂಗಗಳೂ ಕೂಡ ಮೇಳ ಸಘಟಣೆಯಲ್ಲಿ ಹಿಂದೆ ಬಿದ್ದಿಲ್ಲ, ಆದರೆ ಸಂಖ್ಯಾಬಲ ಮತ್ತು ಸಂಪ್ರದಾಯ, ಪರಂಪರೆ ಪ್ರಯೋಗಶೀಲತೆಯ ದೃಷ್ಟಿಯಿಂದ ಆಯಾಕಾಲದ ಪ್ರೇಕ್ಷಕ ವರ್ಗವನ್ನು ಯಕ್ಷಗಾನದತ್ತ ಆಕರ್ಷಿಸಿದ ಹವ್ಯಕ ಕಲಾವಿದರ ಸಂಘಟಣಾ ಕೌಶಲ್ಯವನ್ನು ಅನನ್ಯತೆ, ತ್ಯಾಗ, ಪ್ರಯತ್ನಗಳು ಮಾತ್ರ ಮೌಲಿಕವಾದುದಾಗಿದೆ.

೫.೧. ಕೆರೆಮನೆ ಮೇಳ

ಯಕ್ಷಗಾನ ಸಂಘಟಣೆಯ ಪ್ರಯತ್ನ ಆಯಾ ಪ್ರಾದೇಶಿಕ ಪರಿಸರ ಮತ್ತು ಜನ ಸಮೂದಾಯದ ಧೋರಣೆಯನ್ನು ಅವಲಂಬಿಸಿದ್ದನ್ನು ಕಾಣಬಹುದಾಗಿದೆ. ದಕ್ಷಿಣಕನ್ನಡ ಮತ್ತು ಉತ್ತರಕನ್ನಡ ಮಲೆನಾಡಿನ

ಭಾಗಗಳ ಯಕ್ಷಗಾನ ಸಂಘಟಣೆಯ ಪ್ರಯತ್ನ ವಿಭಿನ್ನವಾದುದಾಗಿದೆ. "ವೃತ್ತಿ" ಸಂಘಟಣೆಯ ಅನಿವಾರ್ಯತೆ ವಿಷಯದಲ್ಲಿ ದಕ್ಷಿಣಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಭಿನ್ನ ವಾತವರಣವೇ ಗೋಚರವಾಗುತ್ತದೆ. ದಕ್ಷಿಣ ಕನ್ನಡದಲ್ಲಿ ಕಲಾವಿದನ ಪ್ರದರ್ಶನಕ್ಕಾಗಲಿ, ಪ್ರೇಕ್ಷಕನ ನೋಡುವ ಅವಕಾಶಕ್ಕಾಗಲಿ, ಡೇರೆಮೇಳದ ಹೊರತಾಗಿಯೂ ಈ ಜಿಲ್ಲೆಯಲ್ಲಿ ಯಕ್ಷಗಾನ ರಂಗಸಂಪ್ರದಾಯದ ಬದುಕಿ ಬೆಳೆಯಬಹುದಾಗಿತ್ತು. ಆದರೆ ಉತ್ತರಕನ್ನಡದಲ್ಲಿ ಯಕ್ಷಗಾನ ರಂಗ ಭೂಮಿಯ ಅಸ್ತಿತ್ವಕ್ಕೆ ವೃತಿಸ್ವರೂಪ ಅನಿವಾರ್ಯವಾಗಿತ್ತು.[೨]

೫.೧.೧. ಕೆರೆಮನೆ ಶಿವರಾಮಹೆಗಡೆ

ಶ್ರೀ ಶಿವರಾಮ ಹಗಡೆಯವರು ೧೯೩೪ರಿಂದ ಮೊಕ್ಕಾಂ ಪದ್ದತಿಯ ಡೇರೆಮೇಳವನ್ನು ಸ್ಥಾಪಿಸಿದರು. ಈ ಮೇಳವು ೧೯೪೫ ರವರೆಗೆ ಗುಂಡಬಾಳದಲ್ಲಿ ಬಯಲಾಟದ ಪ್ರದರ್ಶನವನ್ನು ಇಡುಗುಂಜಿ ಮೇಳ ಹೆಸರಿನಲ್ಲಿಯೇ ನಡೆಸಿತ್ತು. ೧೯೪೫ ರಿಂದ ೧೯೫೫ರವರೆಗೆ ಮೇಳ ಸ್ಥಗಿತಗೊಂಡಿತ್ತು. ೧೯೫೫ರಲ್ಲಿ ಶಿವರಾಮಹೆಗಡೆಯವರು ಡೇರೆಮೇಳವನ್ನು ಆರಂಭಿಸಿದರು. ಉತ್ತರಕನ್ನಡದಲ್ಲಿ ಡೇರೆಮೇಳ ಸಂಘಟನೆ ಮಾಡಿದರಲ್ಲಿ ಇವರೆ ಮೊದಲಿಗರಾಗಿದ್ದಾರೆ. ೧೯೫೮ ರಲ್ಲಿ ಡೇರೆಮೇಳವು ಸ್ಥಗಿತಗೊಂಡಿತ್ತು. ಹೀಗೆ ಹನ್ನೊಂದು ವರ್ಷಗಳ ಕಾಲ ಮೊಕ್ಕಾಂ ಪದ್ದತಿಯ ಡೇರೆಮೇಳವನ್ನು ಮತ್ತು ಮೂರು ವರ್ಷ ಡೇರೆಮೇಳವನ್ನು ಶಿವರಾಮಹೆಗಡೆಯವರು ಸಂಘಟಿಸಿದರು.

ಕೆರೆಮನೆ ಶಿವರಾಮ ಹೆಗಡೆಯವರು ಯಕ್ಷಗಾನ ಪ್ರದರ್ಶನದ ತಾಂತ್ರಿಕತೆ ಮತ್ತು ಕಲಾತ್ಮಕ ಅಭಿವ್ಯಕ್ತಿಗೆ ಸಂಬಂಧಿದ ಅನೇಕ ಹೊಸತನಗಳನ್ನು ಪ್ರಯೋಗಿಸಿದರು. ೧೯೩೭ರಲ್ಲಿ ಮೊದಲು ಪೆಟ್ರೋಮ್ಯಾಕ್ಸ್ ದೀಪದ ಬಳಕೆಯನ್ನು ತಂದರು. ಬಟ್ಟೆಯ ಟೆಂಟಿನ ವ್ಯವಸ್ಥೆಯನ್ನು ಮಾಡಿದರು. ದೂರದ ಊರುಗಳ ಸಂಚಾರಕ್ಕಾಗಿ ವಾಹನ ವ್ಯವಸ್ಥೆಯನ್ನು ತಿರುಗಾಟಕ್ಕಾಗಿಯೇ ಮಾಡಿದರು. ಇವರ ಈ ಹೊಸತನದ ಆಟವಾಡುಸುವಿಕೆಯಿಂದ ಸಂಚಾರ ಸೌಲಭ್ಯವಿಲ್ಲದ, ದೀಪದ ವ್ಯವಸ್ಥೆಯಿಲ್ಲದ ಪ್ರದರ್ಶನದ ಕೊರತೆ ನೀಗಿತು. ಸಂಘಟಣೆಯ ಹೊಣೆಯೊಂದಿಗೆ ಪ್ರಧಾನ ಆಕರ್ಷಣೆಯ ಕಲಾವಿದನಾಗಿಯೂ ಪಾತ್ರ ನಿರ್ವಹಣೆ ಮಾಡಿ ಮೇಳದ ಜನಪ್ರಿಯತೆ ವ್ಯಾಪಕವಾಗಿ ಪಸರಿಸಲು ಕಾರಣವಾಯಿತು.ಯಕ್ಷಗಾನ ಮೇಳ ಸಂಘಟನೆಯ ಸವಾಲುಗಳು ಅನೇಕ: ಬಯಲಾಟ ಮೇಳದ ವ್ಯವಸ್ಥೆಯಲ್ಲಿ ವರ್ಷಕ್ಕೆ ಬೆರಳಣಿಕೆಯಷ್ಟು ಪ್ರದರ್ಶನ ನಡೆಯುತ್ತಿದ್ದು ಡೇರೆಮೇಳದ ವ್ಯವಸ್ಥೆಯಲ್ಲಿ ವರ್ಷಕ್ಕೆ ೩೦-೪೦ ಪ್ರದರ್ಶನಕ್ಕೆ ಹೆಚ್ಚಿತು. ಇಂತಹ ಪ್ರದರ್ಶನಗಳು ಆರ್ಥಿಕವಾಗಿ ಲಾಭದಾಯಕವಾಗಿರಲ್ಲಿಲ್ಲ. ಕ್ರಮೇಣ ವೃತ್ತಿ ಮೇಳಗಳು ಪ್ರದರ್ಶನ ಸಂಪೂರ್ಣ ಹೆಚ್ಚುವಂತಹ ವ್ಯವಸ್ಥಯನ್ನು ಕಲ್ಪಸಿಕೊಂಡಾಗ ನಿತ್ಯ ಪ್ರದರ್ಶನಕ್ಕೆ ಮೈದಾನ ವ್ಯವಸ್ಥೆ, ಕಲಾವಿದರ ಸಮಸ್ಯೆ, ಬೆಳಕಿನ ವ್ಯವಸ್ಥೆ, ಕಲಾವಿದರ ಅಹಂಭಾವನೆ, ಪ್ರಚಾರ ಅನಾರೋಗ್ಯಕರ ಸ್ಪರ್ದೆಪ್ರಸಂಗ ಆಯ್ದು ಸಮಸ್ಯೆಗಳು ಸಂಘಟನ ಕೌಶಲ್ಯವನ್ನು ಒರೆಗೆ ಹಚ್ಚುತ್ತವೆ. ಈ ಎಲ್ಲ ಸಮಸ್ಯೆ ಹೊರತಾಗಿಯೂ ಕಲಾವಿದನ ವಯಕ್ತಿಕ ಜೀವನದ ಸಮಸ್ಯೆಗಳು ಕೂಡ ಮೇಳಕ್ಕೆ ವಿಘ್ನಕಾರವಾಗಿರುತ್ತದೆ.

೨. ಡಾ. ಜಿ.ಎಸ್. ಭಟ್-ಕೆರೆಮನೆ ಶಂಭುಹೆಗಡೆ ಅಧ್ಯಯನವು ೩೬೯

ಮೇಳ ಸಂಘಟನೆಯ ಕಂಟ್ರಾಕ್ಟ್ ಪದ್ದತಿಯಲ್ಲಿ ಗುತಿಗೆದಾರರು ಯಕ್ಷಗಾನ ಅಭಿಮಾನದಿಂದ ಗುತ್ತಿಗೆ ಹಿಡಿದು ಕೈ ಸೋತಿದ್ದಾರೆ. ಸಾಲಮಾಡಿ ಪ್ರಾಣತೆತ್ತವರ ಉದಾಹರಣೆಗಳಿವೆ. ದಿವಾಳಿಯಾದವರ ಸಂಖ್ಯೆಯು ಹೇರಳವಾಗಿದೆ. ಸಂತೆಗುಳಿ ನಾರಾಯಣಭಟ್, ಸೀತಾರಾಮ ಹೆಗಡೆ, ಶುಂಠಿ ಸತ್ಯನಾರಾಯಣ ಭಟ್ಟ್ ರಾಮಚಂದ್ರಹೆಗಡೆ ಮುರಲೆ ಇವರೆಲ್ಲ ಯಕ್ಷಗಾನ ಗುತ್ತಿಗೆ ಮೇಳದ ಯಜಮಾನಿಕೆಯಿಂದ ನಷ್ಟ ಅನುಭವಿಸಿದವರೇ ಆಗಿದ್ದಾರೆ.

ಉತ್ತರಕನ್ನಡದ ಯಕ್ಷಗಾನ ಮೇಳದ ಸಂಘಟಕರಾದ ಸಂತೆಗುಳಿ ನಾರಾಯಣ ಭಟ್ಟರು ಅನುಭವಿಸಿದ ನಷ್ಟವನ್ನು ಖ್ಯಾತ ಕಲಾವಿದ ಚಿಟ್ಟಾಣಿಯವರು ತಮ್ಮ ಆತ್ಮ ಚರಿತ್ರೆಯಲ್ಲಿ ದಾಖಲಿಸಿದ್ದಾರೆ. "೭೫ ತೊಲಾಚಿನ್ನ ಎರಡುಎಕರೆ ತೆಂಗಿನ ಭಾಗಯ್ತು ಇವನೆಲ್ಲ ಕಳೆದುಕೊಂಡು ಕೊಡಬೇಕಾದವರಿಗೆಲ್ಲ ಕೊಟ್ಟು ಕೈ ತೊಳೆದು ಕೊಂಡರು". ಇಷ್ಟೊಂದು ಮೌಲ್ಯದ ಸಂಪತ್ತನ್ನು ಕಲೆಯ ಸಂಘಟನೆಗಾಗಿ ಕಳೆದುಕೊಂಡಿದ್ದು ದಾಖಲಾರ್ಹ ಸಂಗತಿಯಾಗಿದೆ. ಯಕ್ಷಗಾನ ಕಲೆಯು ಚರಿತ್ರೆಯಲ್ಲಿ ಅನೇಕ ಹವ್ಯಕ ಕಲಾವಿದರು ಕಲೆಗಾಗಿ ಶಿಕ್ಷಣವನ್ನು, ಸಂಘಟಕರು ಕಲೆಗಾಗಿ ಸಂಪತ್ತು ಮನೆ ಮಾರನ್ನು, ಅಭಿಮಾನಿಗಳ ಕಲೆ, ಕಲಾವಿದನ ಅಭಿಮಾನಕ್ಕಾಗಿ ಜೀವನವನ್ನೆ ಮುಡಿಪಿಟ್ಟಿದ್ದು ಯಕ್ಷಗಾನ ಚರಿತ್ರೆಯಲ್ಲಿ ಮಾತ್ರ ಕಾಣಬಹುದೇನೋ ಎಂದರೆ ಅತಿಶಯೋಕ್ತಿಯವಲ್ಲ.

ಡೇರೆ ಮೇಳಗಳಲ್ಲಿ ವೃತ್ತಿ ಮೇಳಗಳಲ್ಲಿ ಹತ್ತಾರು ವರ್ಷ ಪಾತ್ರ ಮಾಡಿದ ಕಲಾವಿದರ ಕುಟಂಬದಿಂದ ದೂರವೇ ಉಳಿದು ಜೀವನ ಸಾಗಿಸುವುದು ಸಮಾನ್ಯವಾಗಿತ್ತು. ಸಂಚಾರಸಂಪರ್ಕಗಳಿಲ್ಲದ ಕಾಲದಲ್ಲಿ ಕುಟುಂಬದ ಆಗು ಹೋಗುಗಳನ್ನು ಲೆಕ್ಕಿಸದೆ ಕಲೆಗಾಗಿ ಜೀವಿಸಬೇಕಾದ ಆನಿವಾರ್ಯತೆ ಇತ್ತು.

ಯಕ್ಷಗಾನ ಸಂಘಟನೆ ಬೆಳದಂತೆ ಕಲಾವಿದರ ಸಿದ್ಧಿ ಪ್ರಸಿದ್ಧಿಗಳು ಬೆಳೆದಂತೆ ಪ್ರದರ್ಶನಗಳ ಸಂಖ್ಯೆಯು ಹೆಚ್ಚಿತ್ತು. ನಿರಂತರ ಪ್ರದರ್ಶನದಿಂದ ಪ್ರೇಕ್ಷಕರನ್ನು ಕಾದಿಡುವ ಕಲಾತ್ಮಕತೆಯ ಪರಿಷ್ಕರಣೆ, ಸುಧೋರಣೆಯ ಸುಧಾರಣೆ ಕೂಡ ಅತ್ಯಂತ ಅಗತ್ಯವಗಿತ್ತು.

ಇಂತಹ ಅನೇಕ ಸಂದಿಗ್ಧಳ ನಡುವೆ ಯಕ್ಷಗಾನ ಸಂಘಟನೆ ನಿರಂತರ ಪ್ರದರ್ಶನವನ್ನು ಪ್ರೇಕ್ಷಕರ ಆಶಯದಂತೆ ಏರ್ಪಡಿಸಿ ಯಕ್ಷಗಾನದ ಕಲೆಯ ಪಾವಿತ್ರ್ಯವನ್ನು ಕಾಪಾಡುವ ಸೃಜನಶೀಲ ಸಂಘಟಕನ ಅನಿವಾರ್ಯತೆ ಯಕ್ಷಗಾನ ಕ್ಷೇತ್ರಕ್ಕೆ ಇತ್ತು. ಈ ಕೊರತೆಯನ್ನು ಉತ್ತರಕನ್ನಡದಲ್ಲಿನ ಕೆರೆಮನೆ ಮೇಳದ ಸಂಘಟಕ ಶಂಭುಹೆಗಡೆಯವರ ಪ್ರಯೋಗಶೀಲತೆ ನೀಗಿಸಿತು.

೫.೧.೨. ಕೆರೆಮನೆ ಶಂಭು ಹೆಗಡೆ

ಮಹಾಗಣಪತಿ ಪ್ರಸಾದಿತ ಯಕ್ಷಗಾನ ಮಂಡಳಿ ಕೆರೆಮನೆ ಮೇಳವನ್ನು ಶಂಭುಹೆಗಡೆಯವರು ೧೯೭೩ ರಲ್ಲಿ ಸಂಘಟಿಸಿದರು. ೧೯೮೪ರ ವರೆಗೆ ಹನ್ನೊಂದು ವರ್ಷಗಳ ಕಾಲ ಮೇಳವನ್ನು ಮುನ್ನಡೆಸಿದರು.

೧೯೭೩ರಿಂದ ೧೯೮೮ರ ವರೆಗಿನ ಕಾಲದಲ್ಲಿ ಕೆರೆಮನೆ ಮೇಳದ ಜನಪ್ರಿಯತೆ ಯಕ್ಷಗಾನದ ಪ್ರಚಾರವಿರುವ ಪ್ರದೇಶಗಳನೆಲ್ಲ ವ್ಯಾಪಿಸಿತ್ತು. ದೇಶ ವಿದೇಶಗಳಲ್ಲೂ ಸಾಕಷ್ಟು ಪ್ರದರ್ಶನಗಳೇರ್ಪಟ್ಟು ಕಲೆಯ ಪ್ರಸಾರ, ಪ್ರಚಾರ ಯಕ್ಷಗಾನದಲ್ಲಿ ಉತ್ತರಕನ್ನಡ ಅನನ್ಯ ಶೈಲಿಯು ಪರಿಚಿತಗೊಂಡಿತು. ಶಂಭುಹೆಗಡೆಯವರು ಯಾವುದೆ ಪ್ರಾದೇಶಿಕ ಮಿತಿಗೊಳಪಡದೆ ಎಲ್ಲ ವಿಭಿನ್ನತೆಗಳನ್ನೂ ಮೀರಿ ಬೆಳೆದರು. "ಯಕ್ಷಗಾನ ಸಂಪ್ರದಾಯ ಹಾಗೂ ವ್ಯವಸಾಯ ಎರಡೂ ಸಮತೋಲನಗೊಳ್ಳಬೇಕು. ಒಂದು ಇನ್ನೊಂದಕ್ಕಾಗಿ ಬಲಿಯಾಗಬಾರದೆಂಬ"[೩] ಪ್ರಯತ್ನ. ಯಕ್ಷಗಾನವನ್ನು, ವ್ಯವಸಾಯವನ್ನು ಮೌಲಿಕವಾಗಿ ಬೆಳೆಸಿತು.

ಶಂಭುಹೆಗಡೆಯವರು ತಮ್ಮ ಸಂಘಟನೆಯಲ್ಲಿ ರಂಗಸ್ಥಳದ ಅರ್ಧಚಂದ್ರಾಕೃತಿಯ ರಂಗಸಜ್ಜಿಕೆ ನಿರ್ಮಾಣ, ಆಸನ ವ್ಯವಸ್ಥೆಯ ಕ್ರಮಬದ್ಧತೆ, ಕಂಟ್ರಾಕ್ಟ್‌ಪದ್ದತಿ, ನವೀನ ತಂತ್ರಜ್ಞಾನದ ಜನರೇಟರ್ ಬಳಕೆಯ ಪ್ರಯೋಗಶೀಲತೆ ಅವರ ಸ್ವತಂತ್ರ, ಸೃಜನಶೀಲ, ಅಧ್ಯಯನಾತ್ಮಕ ಕೊಡುಗೆಯಾಗಿದೆ.

ಯಕ್ಷಗಾನ ಮೇಳಗಳ ಪೈಪೋಟಿ, ಬದಲಾದ ಸಮಾಜಿಕ ಜೀವನ ವ್ಯವಸ್ಥಗಳನುಗುಣವಾಗಿ ಕಲೆಯ ಪರಿವರ್ತನೆಯನ್ನು ಪ್ರಾಯೋಗಿಕ ರಂಗಭೂಮಿಗಳ ಆವಿಷ್ಕಾರದ ಸಮಯಮಿತಿ ಪ್ರದರ್ಶನ ಮೊಕ್ಕಾಂ ಪದ್ದತಿಯ ಪುನರುಜ್ಜೀವನದಂತಹ ಸುಧಾರಣೆಗಳನ್ನು ಜಾರಿಗೆ ತಂದರು. *ಈ ಸುಧಾರಣೆಗಳನ್ನು ಬಹುಕಾಲದವರೆಗೆ ಯಕ್ಷಗಾನವನ್ನು ಸಾಮಾಜಿಕ ಜೀವನ ಸ್ಥಿತ್ಯಂತರಗಳ ನಡುವೆಯೂ ಆಸ್ವಾದಿಸುವ*

ಸಾಧ್ಯತೆಯನ್ನು ಸಾಧ್ಯವಾಗಿಸಿದರು. ರಂಗ ಪ್ರಯೋಗದ ಶಿಸ್ತು ರಂಗ ಸಜ್ಜಿಕೆಯ ವ್ಯವಸ್ಥೆ, ಕೆರೆಮನೆ ಮೇಳದ ಆಕರ್ಷಣೆಯು ಆಗಿತ್ತು. ಇಂತಹ ಸಂಘಟಣಾ ಚಾತುರ್ಯ ಪ್ರೇಕ್ಷಕರನ್ನು ಯಕ್ಷಗಾನದತ್ತ ಒಲೈಸಿತ್ತು. ಶಂಭುಹೆಗಡೆಯವರು ಅಭಿಮಾನಿಗಳ ಒಂದು ತಲೆಮಾರನ್ನು ಸೃಷ್ಟಿಸಿದರು.

೫.೨. ಕರ್ಕಿಮೇಳ

ಉತ್ತರ ಕನ್ನಡ "ಕರ್ಕಿಮನೆತನದ ಮೇಳ"ದ ಸಂಘಟನೆಯು ಐತಿಹಾಸಿಕವಾದುದು. ಈ ಮನೆತನದ ವರದ ಹೆಗಡೆ ಯಕ್ಷಗಾನವನ್ನು ರಾಜರ ಆಸ್ಥಾನದಲ್ಲಿ ಪ್ರದರ್ಶಿಸಿ "ಹಾಸ್ಯಗಾರ" ಎಂಬ ಬಿರುದು ಪಡೆದರು. "ಹಾಸ್ಯಗಾರ ಮೇಳ" ಎಂದು ಹೆಸರಾದ ಶ್ರೀ ದುರ್ಗಾಂಬ ಪ್ರಸಾದಿತ ಯಕ್ಷಗಾನ ಮಂಡಳಿ ಕರ್ಕಿಮೇಳಕ್ಕೆ ಮಕ್ಕಳ ಮೊಮ್ಮಕ್ಕಳ ಮೇಳ ಎಂದು ಹೆಸರಾಗಿತ್ತು. ಈ ಮೇಳದ ಸಂಘಟನೆಯು ಜಿಲ್ಲೆಯಲ್ಲಿ ವ್ಯವಸ್ಥಿತವಾಗಿ ಪ್ರದರ್ಶನ ನೀಡುತ್ತಿದ್ದ ಎರಡುನೂರು ವರ್ಷಗಳ ವರ್ಷಗಳ ಇತಿಹಾಸವನ್ನು ಹೊಂದಿದ ಮೇಳವೆಂದು ಗುರುತಿಸಲ್ಪಟ್ಟಿದೆ.

"ಉತ್ತರ ಕನ್ನಡ ತಿಟ್ಟಿನ ಯಕ್ಷಗಾನ ಬಯಲಾಟದ ಪರಂಪರೆ ಸುಮಾರು ಹದಿನಾರನೆ ಶತಮಾನದಿಂದಲೆ ಸುವ್ಯವಸ್ಥಿತವಾದ ಮೇಳದ ಸಂಘಟಣೆ ಇದ್ದುದು ಕಂಡುಬರುತ್ತದೆ. ಇದರಲ್ಲಿ ದಾಖಲೆ ಸಿಗುವುದು ಕರ್ಕಿಮೇಳ ಮಾತ್ರ. ಎಂದು ಸಂಶೋಧಕರು ದಾಖಲಿಸಿದ್ದಾರೆ. ಹದಿನಾರನೆ

೩. ಡಾ. ಜಿ.ಎಸ್. ಭಟ್- ಕೆರೆಮನೆ ಶಂಭುಹೆಗಡೆ ಅಧ್ಯಯನ - ಪುಟ ನಂ ೩೯೦

ಶತಮಾನದಿಂದ ಯಕ್ಷಗಾನ ಪರಂಪರೆ ಇದ್ದ ಬಗ್ಗೆ ಸಾಕಷ್ಟು ಐತಿಹಾಸಿಕ ಆಧಾರಗಳು ಲಭ್ಯವಿದೆ. ಈ ಕಾಲದಲ್ಲಿ ಹಳ್ಳಿಹಳ್ಳಿಗಳಲ್ಲಿ ಹವ್ಯಾಸಿಗಳಿದ್ದರು. ಆದರೆ ಹವ್ಯಕರಲ್ಲಿ ಯಕ್ಷಗಾನ ಕಲಾಪೋಷಣೆಯಷ್ಟು ಒಲವು ಕಲಾವಿದರ ಬಗ್ಗೆ ಇರಲ್ಲಿಲ್ಲ. ಕಲಾವಿದರಿಗೆ ಸಮಾಜ ಮನ್ನಣೆ ಇರಲ್ಲಿಲ್ಲ. ಇದಕ್ಕೆ ಹವ್ಯಕ ಸಮಾಜದ ರೀತಿನೀತಿಗಳು ಬದ್ದತೆಗಳು ಪೂರಕವಾಗಿರಲ್ಲಿಲ್ಲ. ಮಠಮಾನ್ಯಗಳ ಶುದ್ದ ರಾಯಸಯಗಳು ಕೂಡ ಯಕ್ಷಗಾನಕ್ಕೆ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಕಲೆಯನ್ನು ಪೋಷಿಸಲು ಕಲಾಭಿಮಾನಿ ಮನೆತನಗಳು ಮನೆ ಮಕ್ಕಳನ್ನು ಯಕ್ಷಗಾನ ಶಿಕ್ಷಣದ ಮೂಲಕ ಕಲಾವಿದರನ್ನಾಗಿಸಿದ್ದು ಒಂದು ಸಾಧನೆಯಾಗಿದೆ. ವರದ ಹಾಸ್ಯಗಾರರಿಂದ ಮೇಳ ಸಂಘಟಿತವಾಗಿ ಮಹಾರಾಷ್ಟ್ರದ ಸಾಂಗ್ಲಿ, ಬಡೋದೆಯವರೆಗೆ ಕಲಾಪ್ರಸಾರ ಕೈಗೊಂಡಿತು. ಯಕ್ಷಗಾನಕ್ಕೆ ರಾಜ ಮನ್ನಣೆ ದೊರೆಯುವ ಮೂಲಕ ಸಮಾಜದಲ್ಲಿ ಯಕ್ಷಗಾನದ ಬಗ್ಗೆ, ಕರ್ಕಿಮನೆತನದ ಬಗ್ಗೆ ಆಪಾರ ಗೌರವವನ್ನು ಬೆಳೆಸಿಕೊಳ್ಳಲು ಸಾಧ್ಯವಾಯಿರು. ೧೮೮೪–೧೯೪೨ರವರೆಗೆ ಮೇಳ ಜಿಲ್ಲೆಯಲ್ಲಿ ಪ್ರದರ್ಶನ ನೀಡುತ್ತಾ ಹವ್ಯಾಸಿ ಮೇಳವಾಗಿ ಉಳಿದುಕೊಂಡಿತು.[೪]

೧೯೪೨ರಲ್ಲಿ ಪರಮಯ್ಯ ಹಾಸ್ಯಗಾರರು ಮೇಳವನ್ನು ಪುನಃ ಸಂಘಟಿಸಿದರು. "೧೯೪೨–೪೯೫೪ ರವರೆಗಿನ ಅವಧಿಯಲ್ಲಿ ಕರ್ಕಿಹಾಸ್ಯಗಾರ ಮೇಳ ಉತ್ತರಕನ್ನಡ, ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಆಟ ಕುಣಿಯುತ್ತಿತ್ತು.

೧೯೫೪ರಲ್ಲಿ ದೆಹಲಿಯಲ್ಲಿ ಕನ್ನಡ ಸಾಂಸ್ಕøತಿಕ ಉತ್ಸವ, ೧೯೫೫ರಲ್ಲಿ ಹುಬ್ಬಳಿಯ ಪ್ರಾದೇಶಿಕ ನಾಟ್ಯ ಮಹೋತ್ಸವ, ೧೯೫೬ ಮುಂಬೈ ರಾಜ್ಯ ಮಟ್ಟದ ದ್ವಿತೀಯ ನಾಟ್ಯೋತ್ಸವವನ್ನು ಪಾಲ್ಗೊಂಡು ಪ್ರಶಸ್ತಿಗೆ ಪಾತ್ರವಾಯಿತು. ೧೯೫೮ ಬೆಂಗಳೂರು ಆಕಶವಾಣಿಯ ಆಶ್ರಯದಲ್ಲಿ ಪ್ರದರ್ಶನ. ೧೯೬೧ ಅಖಿಲಭಾರತ ಕಾಂಗ್ರೆಸ್ ಅಧೀವೇಶನದಲ್ಲಿ ಪ್ರದರ್ಶನ. ಹೀಗೆ ರಾಜ್ಯ ರಾಷ್ಟ್ರದ ಕೇಂದ್ರಗಳಲ್ಲಿ ಪ್ರದರ್ಶನ ನೀಡಿ ಯಕ್ಷಗಾನವನ್ನು ಪ್ರಕಾಶಿಸಿದರು.

ಈ ಮೇಳದ ಪ್ರಸಿದ್ದ ಕಲಾವಿದರಾದ ಪಿ.ವಿ. ಹಾಸ್ಯಗಾರರು "ನಾವು ಕುಣಿಯುವುದು ವರ್ಷಕ್ಕೆ ಕಲವೇ ಆಟಗಳು. ವ್ಯಾಪರಿ ದೃಷ್ಟಿಯಿಮದ ನಾವು ಕೆಲಸ ಮಾಡುತ್ತಿಲ್ಲ. ಈ ಕಲೆ ಪರಂಪರೆಯ ಸತ್ವ ಪರಿಶುದ್ದವಾಗಿ ಉಳಿಯಬೇಕು. ಪರಿಷ್ಕೃತವಾಗಿ ಬೆಳೆಯಬೇಂದು ನಮ್ಮಯ ಇಚ್ಚೆ. ಅದನ್ನು ಕಂಡು ಜನ ಆನಂದಿಸಬೇಕೆಂದು ಆಸೆಯು ಉಂಟು. ಕಲವೇ ಸಹೃದಯಿಗಳು ಅದನ್ನು ಕಂಡು ಗುರುತಿಸಿದರೂ ನಮಗೆ ಹೆಮ್ಮೆ".[೫] ಯಕ್ಷಗಾನದ ಶೈಲಿ ಸಂಪ್ರಾದಯಗಳ ಉಳಿವಿನ ಕಳಕಳಿಯನ್ನು ಹೊಂದಿದ ಕರ್ಕಿಮೇಳ ಕಡಿಮೆ ಪ್ರದರ್ಶನ ನೀಡಿದರೂ ಹೆಚ್ಚು ಖ್ಯಾತಿಗಳಿಸಿತು.

ನಲವತ್ತರ ದಶಕದಿಂದ ಅರವತ್ತರ ದಶಕದ ವರೆಗೆ ಕರ್ಕಿಮೇಳವನ್ನು ನಾರಾಯಣ ಹಾಸ್ಯಗಾರರು ಮುನ್ನಡೆಸಿದರು. ಈಕಾಲದಲ್ಲಿ, ದೂರದರ್ಶನ ಆಕಾಶವಾಣಿ, ದೇಶದ ವಿವಿಧ ಸಭೆ ಸಮಾರಂಭಗಳಲ್ಲೂ ಕರ್ಕಿಮೇಳ ಪ್ರದರ್ಶನ ನೀಡಿತ್ತು.

೪. ರಾಮಕೃಷ್ಣ ಜೋಶಿ – ಕೆರೆಮನೆ ಮೇಳದ ಕೊಡುಗೆ ೧೯೯೮ – ಪುಟ ನಂ. ೩೦.
೫. ಡಾ. ನಾರಾಯಣ ಮಧ್ಯಸ್ಥ – ಕರ್ಕಿಹಾಸ್ಯಗಾರ ಮೇಳ – ಪು. ೩೨

೫.೩. ಗುಂಡಬಾಳ ಮೇಳ

ಯಕ್ಷಗಾನ ಮುಕ್ತವಿಶ್ವವಿದ್ಯಾಲಯ ಎಂದೇ ಹೆಸರಾದ ಗುಂಡಬಾಳ ವರ್ಷದ ಆರು ತಿಂಗಳು ನಿರಂತರವಾಗಿ ಯಕ್ಷಗಾನ ಪ್ರದರ್ಶನ ದಿನನಿತ್ಯ ಹರಕೆಯಾಗಿ ಅರ್ಪಿತವಾಗುತ್ತಿದೆ. ಉತ್ತರಕನ್ನಡದ ಬಹುತೇಕ ಕಲಾವಿದರು ಈ ದೇವಾಲಯದ ಮೇಳದಲ್ಲಿ ತರಭೇತಿ ಪಡೆದವರು. ವಿವಿಧ ಇಷ್ಟಾರ್ಥ ಸಿದ್ಧಿಗಾಗಿ, ರಾಜ್ಯ, ಹೊರರಾಜ್ಯದ ಭಕ್ತರು ಇಲ್ಲಿ ಹರಕೆ ಹೊತ್ತಿರುತ್ತಾರೆ. ಈ ದೇವಾಲಯದ ಆಡಳಿತ ಗೌಡಸಾರಸ್ವತ ಸಮಾಜದವರಿಂದ ನಡೆಯುತ್ತಿದ್ದರೂ, ಯಕ್ಷಗಾನ ಮೇಳದ ಯಜಮಾನಿಕೆ, ಸಂಘಟನೆ ಹವ್ಯಕರಿಂದ ನಿರಂತರವಾಗಿ ನಡೆದುಕೊಂಡು ಬಂದಿದೆ. ಮೇಳದ ಸಂಘಟನೆಯ ಇತಿಹಾಸ ಪ್ರಾಚೀನವಾಗಿದ್ದರೂ, ೧೯೫೫ರಿಂದ ಈ ವರೆಗೆ ಅನೇಕ ಹವ್ಯಕ ಸಂಘಟಕರು ಸಂಘಟಣೆಗಾಗಿ ದುಡಿದ್ದಾರೆ. ಅಲ್ಲದೆ ಮೇಳದಲ್ಲಿ ಪಾಲ್ಗೊಂಡ ಕಲಾವಿದರು ಬಹುತೇಕ ಹವ್ಯಕರೇ. ಇಲ್ಲಿ ಹವ್ಯಕರ ಹಚ್ಚುಗಾರಿಕೆ ಇರುವುದು ಅವರ ಯಕ್ಷಗಾನಸಕ್ತಿಯಲ್ಲಿ. ಬದುಕುವ ಅನ್ಯಮಾರ್ಗವಿದ್ದರೂ, ಶಿಕ್ಷಣದ ಅವಕಾಶವಿದ್ದರೂ, ಯಕ್ಷಗಾನದ ಗೀಳು ಹಲವರನ್ನು ಗುಂಡಬಾಳೆಗೆ ಕರೆತಂದು ಕಲಾವಿದರನ್ನಾಗಿಸಿದೆ. ಕಲಾವಿದರು ಪ್ರಸಿದ್ಧರಾದ ಮೇಲೂ ಇಲ್ಲಿ ಒಂದುದಿನ ಸೇವೆ ವರ್ಷದಲ್ಲಿ ನೀಡುವುದು ವಾಡಿಕೆಯಾಗಿದೆ. "ಯಕ್ಷಗಾನ ಮುಕ್ತ ವಿಶ್ವವಿದ್ಯಾಲಯ"[೬].ವೆಂದು ಡಾ|. ರಾವಕೃಷ್ಣಜೋಶಿಯವರು ಉಲ್ಲೇಖಿಸಿರುವುದು ಈ ಮೇಳದ ಶೈಕ್ಷಣಿಕ ವ್ಯವಸ್ಥೆಯಿಂದ. ಇಲ್ಲಿನ ಸಂಘಟಕ ಕಲಾವಿದನೆ ಆಗಿರುತ್ತಿದ್ದು ಯಕ್ಷಗಾನ ಗುರುವೂ ಆಗಿರುತ್ತಿದ್ದ.

ಗುಂಡುಬಾಳ ಮೇಳವನ್ನು ಸಂಘಟಿಸಿದ ಕಲಾವಿದರ ಮನೆತನದಲ್ಲಿ ಮೇಳ ಸಂಘಟಣೆಯ ಪರಂಪರೆಯಲ್ಲಿದೆ. ಗುಂಡಿಬೈಲು ನಾರಾಯಣಭಟ್ಟರು ಮೊಮ್ಮಗನಾದ ಗಣೇಶಭಟ್ಟರು, ಪ್ರಸಿದ್ಧ ಬಣ್ಣದ ವೇಷದಾರಿಗಳು. ಇವರು ೧೯೫೫ರಿಂದ ೧೯೫೮ರವರೆಗೆ ಗುಂಡಬಾಳ ಮೇಳವನ್ನು ಸಂಘಟಿಸಿದರು. ಇವರ ಮಗ ಗುಂಡಿಬೈಲು ವಿಷ್ಣುಭಟ್ಟು ೧೯೬೯ರಿಮದ ೧೯೭೦ ಹಾಗೂ ೧೯೭೩-೧೯೭೪ರಲ್ಲಿ ಮೇಳದ ಸಂಘಟಣೆಯನ್ನು ಮನ್ನಡೆಸಿದರು. ಗುಂಡಿಬೈಲು ವಿಷ್ಣುಭಟ್ಟರ ಮಗ ಗುಂಡಿಬೈಲು ನಾರಾಯಣಭಟ್ಟರು ೧೯೮೬ರಿಂದ ೨೦೦೪ರವರೆಗೆ ನಿರಂತರ ೧೭ ವರ್ಷ ಗುಂಡಬಾಳ ಮೇಳದ ಸಂಘಟಕರಾಗಿ ದುಡಿದಿದ್ದಾರೆ. ಈ ಮನೆತನದ ಸುಮಾರು ೨೫ ವರ್ಷಗಳ ಕಾಲ ಮೇಳವನ್ನು ಸಂಘಟಿಸಿದರು. ಹವ್ಯಕರೇ ಆದ ತಿಮ್ಮಣಯಾಜಿಯವರು ೧೪ವರ್ಷ ಹಡಿನಬಾಳು ಸತ್ಯಹೆಗಡೆಯವರು ೧೮ವಷ, ಗುಂಡಿಬೈಲು ಸುಬ್ರಾಯಭಟ್ಟು ೨ ವರ್ಷ, ವರ್ತಮಾನದ ಸಂಘಟಕರಾದ ಶ್ರೀ ಪ್ರಭಾಕರ ಚಿಟ್ಟಾಣಿಯವರು ೨೦೦೪ರಿಂದ ಈ ವರೆಗೆ ಮೇಳದ ಸಂಘಟನೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈಮೇಳವನ್ನು ಹವ್ಯಕರು ಸುಮಾರು ೬೦ ವರ್ಷಗಳಿಂದ ನಿರಂತರವಾಗಿ ಸಂಘಟಕರಾಗಿ, ಮೇಳದ ಪ್ರಮುಖ ಕಲಾವಿದನೂ ಆಗಿ ಮೇಳ ನಡೆಸುತ್ತಾ ಬಂದಿರುವುದು ಚರಿತ್ರಾರ್ಹವಾಗಿದೆ.

೫.೪. ಗುಂಡಿಬೈಲು ಮೇಳ

ಹೊನ್ನಾವರ ತಾಲ್ಲೂಕಿನ ಗುಂಡಿಬೈಲು ಹಳ್ಳಿಯಲ್ಲಿ ಮಹಾಗಣಪತಿ ಯಕ್ಷಗಾನ ಮೇಳ

೬. ಡಾ. ರಾಮಕೃಷ್ಣಜೋಶಿ ಕೆರೆಮನೆ ಮೇಳ ಪು. ೨೬

ಗುಂಡಿಬೈಲು ಎಲೆಮರೆಕಾಯಿಯಂತೆ ಯಕ್ಷಗಾನ ಕಲೆಯನ್ನು ಪಸರಿಸಿ ಸಂಘಟನೆಯಲ್ಲಿ ಪ್ರದರ್ಶನ ವ್ಯವಸ್ಥೆಗೆ ನಾವಿನ್ಯತೆಯನ್ನು ಆ ಕಾಲದಲ್ಲಿ ನೀಡಿದೆ. ೧೯೫೮ರಲ್ಲಿ ಗುಂಡಿಬೈಲು ಗಣೇಶಭಟ್ಟರು ಈಮೇಳವನ್ನು ಆರಂಭಿಸಿದರು. ಪ್ರಾರಂಭದಲ್ಲಿ ಸೋಗೆ, ಬಿದಿರು, ಮುಂತಾದ ಥಡಕೆಯಿಂದ ಥಿಯೇಟರ್ ನಿರ್ಮಿಸಿ ಡೇರೆ ಮೇಳೆ ಆರಂಭಿಸಲಾಯಿತು. ಬಿದಿರಿನ ಗಳಗಳಿಗೆ ಗೋಣಿಚೀಲವನ್ನು ಕಟ್ಟಿ ಆಸನ ವ್ಯವಸ್ಥೆ ಮಾಡಲಾಗುತ್ತಿತ್ತು. ಪ್ರಚಾರಕ್ಕೆ ತುತ್ತೂರಿಯನ್ನು ಬಳಸಲಾಗಿತ್ತು. ಗ್ರಾಮ್‌ಪೋನ್ ಮತ್ತು ಮೈಕ್ ಬಳಕೆಯನ್ನು ಈ ಮೇಳದಲ್ಲಿ ಆರಂಭಿಸಲಾಯಿತು. ೧೯೬೪ರಲ್ಲಿ ಟೆಂಟ್‌ಮೇಳವಾಗಿ ಪರಿವರ್ತನೆಗೊಂಡಿತು. ಮೊದಲು ಗ್ಯಾಸ್‌ಲೈಟ್‌ನಲ್ಲಿ ಆರಂಭಗೊಂಡ ಮೇಳದಲ್ಲಿ ಕ್ರಮೇಣ ತೂಗುದೀಪಗಳ ಬಳಕೆಯನ್ನು ಮಾಡಲಾಯಿತು. ಗುಂಡಿಬೈಲು ಸುಬ್ರಾಯಭಟ್ಟರು ಈ ಮೇಳದ ಕುರಿತು ಕ್ಷೇತ್ರ ಅಧ್ಯಯನದಲ್ಲಿ ಮಾಹಿತಿ ನೀಡಿರುತ್ತಾರೆ. ಗುಂಡ ಬಾಳ ಮೇಳದೊಂದಿಗೆ ವಿಲೀನಗೊಂಡ ಈ ಮೇಳದ ಕಿರೀಟವು ಇಂದಿಗೂ ಗುಂಡಿಬೈಲು ನಾರಾಯಣ ಭಟ್ಟರು ಮನೆಯ ಪೂಜಾಗೃಹದಲ್ಲಿ ಪೂಜೆಗೊಳ್ಳುತ್ತದೆ. ಈ ಕಿರೀಟಕ್ಕೆ ಸುಮಾರು ನಾಲ್ಕು ಶತಮಾನಗಳ ಇತಿಹಾಸವಿದೆ ಎಂದು ಹೆಬ್ಬೈಲು ಮೇಳದ ಸಂಘಟಕ ಕುಶಾಲ ಹೆಗಡೆಯವರಿಂದ ಗುಂಡಿಬೈಲು ನಾರಾಯಣ ಹೆಗಡೆಯವರವರೆಗೆ ಬಳುವಳಿಯಾಗಿ ಈ ಕಿರೀಟ ಧರಿಸಲ್ಪಟ್ಟಿದೆ. ಈ ಸಂಗತಿಯಿಂದ ಸಂಘಟಣೆ ಪರಂಪರೆಯನ್ನು ವಿವಿಧ ತಲೆಮಾರಿನಿಂದ ತಲೆಮಾರಿಗೆ ವರ್ಗಾಯಿಸಿದ್ದನ್ನು ದಾಖಲಿಸಬಹುದಾಗಿದೆ.

೫.೫. ಕೂಡ್ಲು ಮೇಳದ ಸಂಚಾಲಕರಾಗಿ ಶೇಣಿ ಗೋಪಾಲಕೃಷ್ಣ ಭಟ್ಟರು

ಯಕ್ಷಗಾನ ಸಂಘಟಣೆ, ಮೇಳದ ಸಂಚಾಲಕತ್ವ ಇವೆರಡೂ ಜವಬ್ದಾರಿಗಳು ಕೇವಲ ಪ್ರದರ್ಶನ ವ್ಯವಸ್ಥೆಯ ಹೊಣೆಗಾರಿಕೆಯಷ್ಟೇ ಆದರೆ ಪ್ರದರ್ಶನದ ತಾಂತ್ರಿಕ ಸೌಲಭ್ಯಗಳ ಮೂಲಕ ಕಲೆಯನ್ನು ಆರಾಧಿಸುವ ಪ್ರೇಕ್ಷಕರಿಗೆ ನ್ಯಾಯ ಒದಗಿಸಲಾಗದು. ಜೊತೆಗೆ ಇಡಿ ಪ್ರದರ್ಶನವನ್ನು ತಾತ್ವಿಕವಾಗಿ ಕಲಾತ್ಮಕತೆ ಪರಿಧಿಯೊಳಗೆ ಪರಿಣಾಮಕಾರಿ ಅಭಿವ್ಯಕ್ತಿಗೆ ಪೂರಕವಾದ ರಂಗತಂತ್ರ, ಪಾತ್ರಭಿನಯ ಮತ್ತು ಕಲಾತ್ಮಕ ಅಭಿವ್ಯಕ್ತಿಗೆ ಪೂರಕವಾದ ನಿರ್ದೇಶನದ ಜ್ಞಾನವು ಇದ್ದಾಗ ಪ್ರದರ್ಶನವು ಯಶಸ್ವಿಯಾಗಲು ಸಾಧ್ಯ. ಸಂಚಾಲಕ ಪ್ರದರ್ಶನದ ಪರಿಣಾಮವನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಸಂಗ, ವಿವೇಚನೆಯನ್ನು ಮಾಡಿ ಪಾತ್ರ ಹಂಚಿಕೆಮಾಡುವ ಚಾಣಕ್ಷತೆಯನ್ನು ಹೊಂದಿರಬೇಕಾಗುತ್ತದೆ. ಸೃಜನಶೀಲತೆಯ ಪ್ರದರ್ಶನದ ದೃಷ್ಟಿಕೋನವನ್ನು, ಪ್ರೇಕ್ಷಕನ ನಿರೀಕ್ಷೆಯನ್ನು ಅರ್ಥೈಸಿ ಕಲಾತ್ಮಕತೆಯ ಸಾಂಪ್ರದಾಯಿಕತೆಯ ಮಿತಿಯನ್ನು ಮೀರದೆ ಪ್ರದರ್ಶನವನ್ನು ಏರ್ಪಡಿಸುವ ಹೊಣೆಗಾರಿಕೆಯೂ ಮುಖ್ಯವೆನಿಸುತ್ತದೆ. ಒಂದು ಮೇಳದ ಸಂಘಟಣೆ ಕೇವಲ ಮನರಂಜನೆ ನೀತಿಬೋಧೆಯಾಗಿರದೆ ಭಾಷೆ, ಸಂಸ್ಕೃತಿ ಪ್ರಾದೇಶಿಕ ಪ್ರಜ್ಞೆಯ ಹಿನ್ನಲೆಯಲ್ಲೂ ಯಕ್ಷಗಾನದ ಉದಯಕ್ಕೆ ಕಾಸರಗೋಡಿನ "ಕೂಡ್ಲುಮೇಳ" ಸಾಕ್ಷಿಯಾಗಿದೆ.

"ಭಾಷಾವಾರು ಪ್ರಾಂತ್ಯ ರಚನೆಯಾಗುವಾಗ ಕರ್ನಾಟಕದಿಂದ ಕಳಚಿಹೋದ ಕಾಸರಗೋಡು ಕೇರಳಾಂತರ್ಗತಗಳನ್ನು ಉಳಿಸಿಕೊಳ್ಳಬೇಕೆಂಬ ಛಲವು ಬಲಿಯಿತು. ಆಸಂದರ್ಭದಲ್ಲಿ ಕಾಸರಗೋಡಿನ ಎರಡು ಶತಮಾನಗಳ ಇತಿಹಾಸವಿರುವ ಏಕಮಾತ್ರ ಯಕ್ಷಗಾನ ಸಂಸ್ಥೆಯಾದ ಕೂಡ್ಲುಮೇಳವನ್ನು ಬೆಳೆಸಿ, ಕನಾಟಕದ ಎಲ್ಲಾ ಭಾಗಗಳಲ್ಲಿ ಸಂಚರಿಸುವ ಮೂಲಕ ಕಾಸರಗೋಡಿನ ಕಣ್ಣೀರ ಕಥೆಯನ್ನು

ಈ ಕಲಾ ಮಾಧ್ಯಮವನ್ನು ಜನರ ಮುಂದಿರಿಸಲು ಉತ್ಸಾಹ ಹೆಚ್ಚಿತು[೭]. ಮೇಳ ಸಂಘಟನೆಯ ಇಂತಹ ಉದಾತ್ತ ವಿಚಾರಗಳನ್ನು ಧ್ಯೇಯವಾಗಿಟ್ಟುಕೊಂಡು ಶ್ರೀಶೇಣಿ ಗೋಪಾಲಕೃಷ್ಣಭಟ್ಟರು ನಿರ್ವಹಿಸಿದರು. ಮೇಳದ ಸಂಚಾಲಕರಾಗಿ ಶೇಣಿ ಪಾತ್ರಾಭಿನಯದ ಒಳಮರ್ಮವನ್ನು ಅರಿತು ಪ್ರಸಂಗದ ಪಾತ್ರಗಳ ವೇಷ ವಿಧಾನದ ಪ್ರಯೋಗಶೀಲತೆಯನ್ನು ಅಳವಡಿಸಿದರು. ಕೆಲವೊಮ್ಮೆ "ಪ್ರೇಕ್ಷಕವರ್ಗದಿಂದ ವಿರೋಧ ಪ್ರಕ್ರಿಯೆಯನ್ನು ಎದುರಿಸಲಿಕಾಗದೆ ಸಂಚಾಲಕನ ನೆಲೆಯಲ್ಲಿ ನಾನು ಕ್ಷಮೆಯನ್ನು ಯಾಚಿಸಬೇಕಾಗಿ ಬಂದುದು ಮರೆಯುವಂತಿಲ್ಲ. ಹತ್ತು ಜನರಮುಂದೆ ನಾನು ಇಷ್ಟು ದೀನನಾಗಬೇಕಾಗಿ ಬಂದ ಇನ್ನಾವ ಸಂದರ್ಭವೂ ನನ್ನ ನೆನಪಿನಲ್ಲಿಲ್ಲ."[೮].

ಸಂಚಾಲಕ ಅಥವಾ ಯಜಮಾನ ಪ್ರದರ್ಶನದ ಸಫಲತೆಗೆ ಸವಾಲನ್ನು ಎದುರಿಸಬೇಕಾದ ಸಂದರ್ಭದಲ್ಲೂ ಸಂಘಟನೆಯಲ್ಲಿನ ವೈರುದ್ಧ್ಯವನ್ನು ಕಲೆಯ ನೆಲೆಯಲ್ಲಿ ಉದಾರತೆಯಿಂದ ಸ್ವೀಕರಿಸಬೇಕು. ಈ ವಿಶಾಲ ಮನೋಭಾವದದ ಸಂಚಾಲಕರಿಂದ ಕಲೆ ಪ್ರೇಕ್ಷಕನಿಗೆ ಹೊಸತನ ನೀಡಲು ಸಾಧ್ಯವಾಗುತ್ತದೆ. ಶೇಣಿ ಗೋಪಾಲ ಕೃಷ್ಣಭಟ್ಟರು ಯಕ್ಷಗಾನ ರಂಗದಲ್ಲಿ ಪಾತ್ರಗಳ ಹೊಸ ಹೊಳಪುಗಳನ್ನು ಚೆನ್ನಾಗಿ ಅರಿತವರು. ಅನೇಕ ವೇಷದಾರಿಗಳನ್ನು ಸಿದ್ಧಗೊಳಿಸಿದರು. ಬಣ್ಣದ ವೇಷದಾರಿಗಳ ಕೊರತೆ ಇದ್ದ ಸಂದರ್ಭದಲ್ಲಿ "ಪಕಳ ಕುಂಞ ಕೃಷ್ಣನಾಯಕ್ ಬಣ್ಣದ ವೇಷಗಾರಿಕೆಯಲ್ಲಿ ತಯಾರಾಗಬೇಕೆಂದು ನಾನು ಒತ್ತಾಯಿಸಿದ್ದರಿಂದ ಆತನು ಆರು ತಿಂಗಳ ಆಟದ ತಿರುಗಾಟದ ಅವಧಿಯಲ್ಲಿ ಬಣ್ಣದ ವೇಷದ ಮರ್ಮವನ್ನು ತಿಳಿದುಕೊಂಡು ಕ್ರಮೇಣ ಮುಂದಿನ ವರ್ಷಗಳಲ್ಲಿಯೂ ಪ್ರಯತ್ನ ಮಾಡುತ್ತಾ ಬಂದಿದ್ದರಿಂದ ಹೊಸ ಪೀಳಿಗೆಯಲ್ಲಿ ಒಬ್ಬ ಬಣ್ಣದ ವೇಷಧಾರಿಯಾಗಿ ತೆಂಕುತಿಟ್ಟಿಗೆ ದೊರಕಿದು ನನಗೆ ಸಂತೋಷವನ್ನು ತಂದಿದೆ"[೯]. ಎಂದಿರುವುದು. ಅವರು ಸಂಚಾಲಕರಾಗಿ ವೇಷಗಾರರ ಕೊರತೆಯನ್ನು ನೀಗಿಸಿದ ವೈಶಾಲ್ಯವೂ ಗೋಚರಿಸುತ್ತದೆ.

ಯಕ್ಷಗಾನ ಪ್ರಯೋಗ ಮತ್ತು ಪ್ರದರ್ಶನದ ಹೊಸತನದ ಅಳವಡಿಕೆಯತ್ತ ತುಡಿತವಿರುವುದರಿಂದ ಯಕ್ಷಗಾನ ಕಾಲಕಾಲಕ್ಕೆ ಹೊಸತನವನ್ನು ಅಳವಡಿಸಿಕೊಂಡು ಜನಾದರಣೆಗೆ ಕಾರಣವಾಗಿದೆ. ಯಜಮಾನನಾದವನು ಹೊಸತನದ ಅಪೇಕ್ಷೆಯನ್ನು ಸವಲಾಗಿ ಸ್ವೀಕರಿಸುವ ಜೊತೆಗೆ ಸಂಪ್ರದಾಯದ ಪರಂಪರೆಯ ಪ್ರಜ್ಞೆಯನ್ನು ಉಳಿಸಿಕೊಳ್ಳಬೇಕೆಂಬ ದೃಡಮನಸ್ಕತೆಯೂ ಅಗತ್ಯವಾಗಿದೆ. "ತಾನು ಎಷ್ಟು ನಷ್ಟವನ್ನಾದರೂ ಸಹಿಸಲು ಸಿದ್ದನೆಂದು ಕಲಾವಿದರು ಹೊಸತನವನ್ನು ತೋರಬೇಕಾಗಿಲ್ಲವೆಂದು ಯಜಮಾನರು ಹೇಳುವುದು ಒಂದು ರೀತಿಯ ಪಲಾಯನ ಸೂತ್ರವೆಂದೆ ನನಗೆ ಅನಿಸಿದೆ"[೧೦]. ಸವಾಲನ್ನು ಎದುರಿಸಿ ಹೊಸತನಕ್ಕೆ ಅವಕಾಶವೀಯುವುದು ಪ್ರತಿಭೆಗೆ ಅವಕಾಶಮಾಡಿ ಕೊಟ್ಟಂತೆ ಎಂಬ ಭಾವನೆ ಸೃಜನಶೀಲ ಸಂಚಾಲಕನಿಗೆ ಮಾತ್ರ ಸಾಧ್ಯವೆನಿಸುತ್ತದೆ.

೭. ಶೇಣಿ ಗೋಪಾಲಕೃಷ್ಣ ಭಟ್ಟ – ಯಕ್ಷಗಾನ ಮತ್ತು ನಾನು – ಯಕ್ಷರಂಗ ಪು. ನಂ. ೩೨ ಏಪ್ರಿಲ್ ೨೦೦೭
೮. ಶೇಣಿ ಗೋಪಾಲಕೃಷ್ಣ ಭಟ್ಟ ಯಕ್ಷರಂಗ – ಯಕ್ಷಗಾನ ಮತ್ತು ನಾನು–ಏಪ್ರಿಲ್ ೦೭, ಪುಟ ನಂ. ೩೧.
೯. ಶೇಣಿ ಗೋಪಾಲಕೃಷ್ಣಭಟ್ಟರು – ಯಕ್ಷಗಾನ ಮತ್ತು ನಾನು – ಪು. ನಂ. ೧೮.
೧೦. ಶೇಣಿ ಗೋಪಾಲಕೃಷ್ಣಭಟ್ಟರು – ಯಕ್ಷಗಾನ ಮತ್ತು ನಾನು – ಪು. ನಂ. ೨೮.

ಓರ್ವ ಮಹಾನ್ ಕಲಾವಿದರಾಗಿ ಶೇಣಿ ಯಕ್ಷಗಾನ ಪಸರಿಸಿದ ಪ್ರದೇಶಗಳಲೆಲ್ಲಾ ಖ್ಯಾತಿ ಗಳಿಸಿದರು. ಆದರೂ ಮೇಳದ ಸಂಚಾಲಕತ್ವದ ಹೊಣೆ ಅವರನ್ನು ವಿಚಲಿತನ್ನಾಗಿಸಿತ್ತು. "ಮೇಳದ ಸಂಚಾಲಕತ್ವದ ಜವಾಬ್ದಾರಿಯೇ ಸಾಕಷ್ಟು ಬಳಲಿಕೆಯನ್ನು ನೀಡುತ್ತಿದ್ದರಿಂದ ನನಗೆ ವೇಷಗಾರಿಕೆಯಲ್ಲಿ ಉತ್ಸಾಹ ಕುಂಠಿತವಾಗತೊಡಗಿತ್ತು."[೧೧]

ಶೇಣಿ ಸಂಚಾಲಕರಾಗಿಯು ಕಲಾಮೌಲ್ಯವನ್ನು ಕಾಪಾಡಿಕೊಂಡು ಕಲಾವಿದರಾಗಿ ಯಕ್ಷಗಾನ ಚಿಂತನೆಯನ್ನು ರೂಢಿಸಿಕೊಂಡು ತಾವು ಬೆಳೆದು ಕಲೆಯನ್ನು ಪೋಷಿಸಿದರು.

ತೆಂಕುತಿಟ್ಟನಲ್ಲಿ ಕುರಿಯ ವಿಠಲ್‌ಶಾಸ್ತ್ರಿಗಳು ಧರ್ಮಸ್ಥಳ ಮೇಳದ ಸಂಘಟಕರಾಗಿ ದೀರ್ಘ ಕಾಲದ ವರೆಗೆ ಮೇಳವನ್ನು ಮುನ್ನಡೆಸಿದ್ದಾರೆ. ಅವರು ವೇಷಗಾರಿಕೆಯಲ್ಲಿ ಹೊಸತನವನ್ನು ರೂಢಿಸಿ ಮೇಳದ ಖ್ಯಾತಿಗೆ ಕಾರಣರಾದರು. ಕೆ.ಗೋವಿಂದ ಭಟ್ಟರು ಸಂಚಾಲಕರಾಗಿ ಧರ್ಮಸ್ಥಳ ಮೇಳವನ್ನು ಮುನ್ನಡೆಸಿದ್ದಾರೆ. ಅವರ ಅಭಿನಯ ಮಾತುಗಾರಿಕೆ ಮೇಳದ ಆಕರ್ಷಣೆಗೆ ಕಾರಣವಾಯಿತು. ಪೆರವೋಡಿ ನಾರಾಯಣ ಭಟ್ಟರು ಮಹಾಲಿಂಗೇಶ್ವರ ಕೃಪಾಪೋಷಿತ ದಶಾವತಾರ ಮೇಳ ಬಂಟ್ವಾಳದ ಸಂಘಟಕರಾಗಿದ್ದರು. ಈ ಸಂದರ್ಭದಲ್ಲಿ ಸಂಘಟನೆಯಲ್ಲಿ ನಷ್ಟ ಅನುಭವಿಸಯು ಯಕ್ಷಗಾನ ಕಲಾಸೇವೆಯನ್ನು ಮುಂದುವರಿಸಿದರು.

ಮೂಲ್ಕಿ ಮೇಳದಲ್ಲಿ ಪಿ.ಕೃಷ್ಣಭಟ್ಟರು, ಮಜಿ ತಿಮ್ಮಣ್ಣ ಭಟ್ಟರು ಸಂಚಾಲಕರಾಗಿ ನಿರ್ವಹಿಸಿರುತ್ತಾರೆ. ಅಡ್ಕ ಗೋಪಾಲ ಕೃಷ್ಣ ಭಟ್ಟರು ಗೋಪಾಲಕೃಷ್ಣ ಯಕ್ಷಗಾನ ಸಂಘ ಅಡಕ ಮೇಳವನ್ನು ಅನೇಕ ವರ್ಷ ಸಂಘಟಿಸಿದರು.

೫.೬. ಬೆಳೆಯೂರು ಮೇಳ

ಸಾಗರ ತಾಲ್ಲೂಕಿನ ಬೆಳೆಯೂರು ಯಕ್ಷಗಾನ ಗ್ರಾಮವಿದ್ದಂತೆ ಯಕ್ಷಗಾನ ಪರಸ್ಪರಾಶ್ರಿತವಾಗಿ ಜನರಲ್ಲಿ ನೆಲೆ ನಿಂತಿದೆ. ಸುಮಾರು ಇನ್ನೂರು ವರ್ಷಕ್ಕೂ ಹಿಂದಿನ ಪರಂಪರೆ ಇಂದಿಗೂ ಹವ್ಯಾಸಿ ಮೇಳವಾಗಿ ಮುಂದುವರಿದುಕೊಂಡು ಬಂದಿದೆ. ಹಿಂದೆ ಯಕ್ಷಗಾನದ ಗೊಂಬೆಯಾಟದ ಮೇಳವೊಂದು ಈ ಊರಿನಲ್ಲಿತ್ತು. ೧೮೫೦ ರ ಸುಮಾರಿಗೆ ಅಗ್ನಿ ಅಕಸ್ಮಿಕಕ್ಕೊಳಗಾಗಿ. ಸುಟ್ಟು ಹೋಗಿದೆ. ಕಾಶ್ಯೆನ ಹೆಗಡೆ ಮತ್ತು ಕೊಲ್ಲೂರಯ್ಯ ಊರಿನ ಸಾಂಸ್ಕೃತಿಕ ಪುನರುಜ್ಜೀವನದ ನೆಲೆಯಲ್ಲಿ ಯಕ್ಷಗಾನ ಮೇಳವನ್ನು ಸಂಘಟಿಸಿದರು. ಇವರು ಕರ್ಕಿ ವರದ ಹಾಸ್ಯಗಾರರ ಸಮಕಾಲೀನರಾಗಿದ್ದರು. ಈಗಲೂ ಊರ್ಜಿತಾವಸ್ಥೆಯಲ್ಲಿಯು ಮೇಳದ ಯಜಮಾನಿಕೆಯನ್ನು ಶ್ರೀ ರಂಗನಾಥ ಎಂಬುವರು ಮುನ್ನಡೆಸುತ್ತಿದ್ದಾರೆ. ಇವರ ಮನೆಯಲ್ಲಿ ಕಿರೀಟ, ಚಕ್ರ ಪೂಜೆಗೊಳ್ಳುತ್ತಿದೆ. ಈ ಭಾಗದಲ್ಲಿ ಅತಿಪ್ರಾಚೀನವಾದ ಮೇಳ ಇದಾಗಿತ್ತು. ಮೇಳಕ್ಕೆ ಹಿಲಾಲು ಹಿನ್ನಲೆಯ ಮೇಳವೆಂದೇ ಕರೆಯುತ್ತಾರೆ. ಈ ಊರಿನ ಮನೆ ಮನೆಗಳಲ್ಲಿ ಯಕ್ಷಗಾನದ ಪ್ರಭಾವಕ್ಕೊಳಪಟ್ಟ ಕಲಾರಸಿಕರು ಇಂದಿಗೂ ಯಕ್ಷಗಾನಾರಾಧಾಕರೇ ಆಗಿರುತ್ತಾರೆ.[೧೨]

೧೧. ಶೇಣಿ ಗೋಪಾಲಕೃಷ್ಣಭಟ್ಟರು – ಯಕ್ಷಗಾನ ಮತ್ತು ನಾನು – ಪು. ನಂ. ೩೨.

೧೨. ಬೆಳೆಯೂರು ದೇವೇಂದ್ರರವರ ಜೊತೆ ಸಂದರ್ಶನ – ಕ್ಷೇತ್ರಕಾರ್ಯ

೫.೭. ಯಕ್ಷಗಾನ ಬಯಲಾಟದ ಮೇಳ ಸಂಘಟನೆಗಳು

ಹವ್ಯಕರಿಗೆ ಯಕ್ಷಗಾನವು ಹವ್ಯಾಸಿ ಕಲೆಯಾಗಿ ಬೆಳೆದು ಬಂದಿದೆ. ಬಹುತೇಕ ಕೃಷಿಕರಾದ ಹವ್ಯಕರು ಹಿಂದೆ ಮನರಂಜನೆಯ ಮಾಧ್ಯಮವಾಗಿ ಯಕ್ಷಗಾನವನ್ನೆ ನೆಚ್ಚಿಕೊಂಡಿದ್ದರು. ಬಿಡುವಿನ ವೇಳೆಯಲ್ಲಿ ಪ್ರಸಂಗ ಪದ್ಯಗಳನ್ನು ಅಭ್ಯಾಸ ಮಾಡಿ ಊರಿನ ಧಾರ್ಮಿಕ ಕಾರ್ಯಗಳಲ್ಲಿ "ಆಟ ಕುಣಿಯುವ" ಪದ್ಧತಿಯನ್ನು ಆಳವಡಿಸಿಕೊಂಡಿದ್ದರು. ಹೊಸ್ತೋಟ ಮಂಜುನಾಥ ಭಾಗವತರು ಹೇಳಿದಂತೆ "ಶ್ರೀಮಂತರ ಮನೆಯ ಮದುವೆ, ಮುಂಜಿ, ಗೃಹಪ್ರವೇಶಗಳಲ್ಲಿ ಯಕ್ಷಗಾನ ಆಡಿಸುವುದು ರೂಢಿಯಾಗಿತ್ತು". ಇಂತಹ ಸಂದರ್ಭದಲ್ಲಿ ಸ್ಥಳೀಯ ಕಲಾವಿದರು ಹವ್ಯಾಸಿಗಳು ಪ್ರದರ್ಶನ ಏರ್ಪಡಿಸುತ್ತಿದ್ದರು. ವಿಶೇಷವಾಗಿ ಊರಿನ ಹಬ್ಬ ಹರಿದಿನ, ಜಾತ್ರೆಗಳ ಸಂದರ್ಭದಲ್ಲಿ ಹವ್ಯಾಸಿಗಳ ಯಕ್ಷಗಾನ ಪ್ರದರ್ಶನವು ಗ್ರಾಮದ ಆಕರ್ಷಣೆಯಾಗಿತ್ತು.

೫.೭.೧. ಕೊಳಗಿ ಅನಂತ ಹೆಗಡೆ : ಕೊಳಗಿ ಅನಂತ ಹೆಗಡೆಯವರು ಯಕ್ಷಗಾನ ರಂಗಭೂಮಿಯ ಪ್ರಸಿದ್ಧ ನಟರು. ಇವರು ಸಂಘಟಕರಾಗಿ "ಶ್ರೀ ಸಿದ್ಧಿವಿನಾಯಕ ಯಕ್ಷಗಾನ ಸಂಘ ಕೊಳಗಿ" ಮೇಳವನ್ನು ೧೯೫೮ರಲ್ಲಿ ಕಟ್ಟಿದರು. ಗೋಡೆನಾರಾಯಣ ಹೆಗಡೆ ಗೋಪಾಲಭಟ್ಟ ಶಿರಳಗಿ, ರಾಮಕೃಷ್ಣ ಭಟ್ಟ ಕೊಳಗಿ ಮುಂತಾದ ಕಲಾವಿದರು ಈ ಮೇಳದಲ್ಲಿದ್ದರು. ಮೇಳವು ಆಗಿನ ಸಂದರ್ಭದಲ್ಲಿ ಮೈಸೂರು, ಬೆಂಗಳೂರು, ಶಿವಮೊಗ್ಗ ಗೋವಾ ಮುಂತಾದ ಕಡೆ ಕಲಾಪ್ರದರ್ಶನ ನೀಡಿತು. ಕಾರಣಾಂತರಗಳಿಂದ ಮೇಳ ಕೆಲವೆ ವರ್ಷಗಳಲ್ಲಿ ಸ್ಥಗಿತಗೊಂಡಿತು.

೫.೭.೨. ಸಾಕೇತ ಕಲಾವಿದರು ಆದರ್ಶ ಹವ್ಯಾಸಿ ಕೂಟ : ಸಾಗರ ತಾಲ್ಲೂಕು ಹೆಗ್ಗೋಡಿನ ಪುರಪ್ಪೇಮನೆ ಒಂದು ಮಜಿರೆ ಗ್ರಾಮ. ಈ ಊರಿನಲ್ಲಿ ಯಕ್ಷಗಾನ ಸಂಘಟನೆಯೊಂದು "ಹವ್ಯಾಸಿ ಕಲಾವಿದರು" ಅದರಲ್ಲೂ ವಿಶೇಷವೆಂದರೆ ಮನೆತನದ ಕಲಾವಿದರೆ ಒಗ್ಗೂಡಿ ಸಂಘಟಿಸಿದ ಹವ್ಯಾಸಿ ಬಯಲಾಟದ ಕೂಟವಿದೆ. ಈ ಸಂಘಟನೆಯ ಹಿಂದೆ ಒಂದು ಇತಿಹಾಸವೆ ಇದೆ. ಈ ಮೇಳದ ಮೂಲಪುರುಷ ದಿ। ಗಣೇಶರಾಯರು ಶರಾವತಿ ಹಿನ್ನೀರಿನ ಪ್ರದೇಶದವರು. ಶರಾವತಿ ನದಿಗೆ ಅಣೆಕಟ್ಟು ನಿರ್ಮಾಣಗೊಂಡಾಗ ಈ ಭಾಗವೆಲ್ಲ ಮುಳುಗಿಹೋಯಿತು. ಮುಳುಗಿ ಹೋದ ಪ್ರದೇಶದ ಸಾಂಸ್ಕೃತಿಕ ಕೊಂಡಿಯಾಗಿ ಈ ಮನೆತನ ಸಾಗರದ ಹೆಗ್ಗೋಡಿನಲ್ಲಿ ನೆಲೆಸಿತು. ಇವರು ತ್ಯಜಿಸಿ ಬಂದ ಊರು ಕೆಳಮನೆಯ ನೆನಪಿನಲ್ಲಿ "ಪುರಪ್ಪೇಮನೆ"ಯಲ್ಲಿ ಕೆಳಮನೆಯ ಯಕ್ಷಗಾನ ಪರಂಪರೆಯನ್ನು ಮತ್ತೆ ಉಜ್ಜೀವನಗೊಳಿಸಿದರು. ಪರಿಣಾಮವಾಗಿ ೧೯೮೮ರಲ್ಲಿ ಸಾಕೇತ ಟ್ರಸ್ಟ್ ನೋಂದಾಯಿಸಲ್ಪಟ್ಟಿತು. ಕೆರೆಮನೆ ಶಂಭುಹೆಗಡೆಯವರು ಮೇಳದ ಪ್ರದರ್ಶನವನ್ನು ಉದ್ಘಾಟಿಸಿದರು. ವರ್ಷಕ್ಕೆ ಮೂವತ್ತು ನಲವತ್ತು ಪ್ರದರ್ಶನವನ್ನು ಈ ಮೇಳ ಏರ್ಪಡಿಸುತ್ತಾ ಬಂದಿದೆ. ಈ ಮೇಳದಲ್ಲಿ ಕೆ.ಜಿ. ನಾಗೇಶರಾವ್, ಕೆ.ಜಿ. ರಾಮರಾವ್, ಕೆ.ಜಿ. ನಾರಾಯಣ, ಕೆ.ಜಿ. ಕೃಷ್ಣಮೂರ್ತಿ, ಕೆ.ಜಿ. ಪ್ರಕಾಶ್, ಕೆ.ಜಿ. ರವೀಂದ್ರ, ಕೆ.ಜಿ. ಮಂಜುನಾಥ ಮುಂತಾದವರಿದ್ದಾರೆ. ಇವರಲ್ಲದೆ ಕೆ. ಶಂಕರ್‌ಭಟ್ ಎ.ಆರ್. ಗಣಪತಿ, ಶ್ರೀಪತಿ, ಮನೋಹರ ಮುಂತಾದವರು ಈ ಸಂಘಟನೆಯಲ್ಲಿದ್ದಾರೆ. ೧೯೯೮ರಲ್ಲಿ ಈ ಕೂಟ ಶತಮಾನೋತ್ಸವವನ್ನು ಆಚರಿಸಿಕೊಂಡಿತು.

೫.೭.೩. ನಾಟ್ಯಶ್ರೀ ಯಕ್ಷಕಲಾ ತಂಡ ಶಿವಮೊಗ್ಗ : ಶ್ರೀ ದತ್ತಮೂರ್ತಿ ಭಟ್ಟರು ಶಿವಮೊಗ್ಗದಲ್ಲಿ ನಾಟ್ಯಶ್ರೀ ಕಲಾತಂಡವನ್ನು ಸಂಘಟಿಸಿ ಯಕ್ಷಗಾನ ಕಾರ್ಯಕ್ರಮ ಏರ್ಪಡಿಸುತ್ತಾ ಬಂದಿದ್ದಾರೆ. "ಬಸವೇಶ್ವರ" ಚರಿತ್ರೆ ಎಂಬ ಯಕ್ಷಗಾನ ಪ್ರಸಂಗವನ್ನು ಈ ಸಂಘಟನೆ ರಂಗಕ್ಕೆ ತಂದಿದೆ. ಪ್ರಸಂಗ ಕೃತಿಯನ್ನು ಹೊಸ್ತೋಟ ಮಂಜುನಾಥ ಭಾಗವತರು ರಚಿಸಿದ್ದಾರೆ. ಬಸವೇಶ್ವರ ಚರಿತ್ರೆ ನೂರು ರಂಗ ಪ್ರಯೋಗಗಳನ್ನು ಕಂಡಿದೆ. ಕರ್ನಾಟಕದಾದ್ಯಂತ ಪ್ರದರ್ಶನಗಳು ಏರ್ಪಟ್ಟು ಯಶಸ್ವಿಯಾಗಿದೆ.

ಹವ್ಯಾಸಿ ಕೂಟಗಳೆಂದರೆ ಯಕ್ಷಗಾನ ಪ್ರದರ್ಶನವು ಕಲಾತ್ಮಕವಾಗಿರುವುದಿಲ್ಲ ಎಂದೇನಿಲ್ಲ. ಪ್ರಖ್ಯಾತ ಕಲಾವಿದರಿಗೆ ಸರಿಸಮಾನಾದ ಪ್ರದರ್ಶನ ನೀಡಬಲ್ಲವರು ಆಗಿರುತ್ತಾರೆ. ಯಾವುದೋ ಕಾರಣದಿಂದ ಪ್ರತಿಭೆಯಿದ್ದು ಮೇಳದಲ್ಲಿ ವ್ಯವಸಾಯಿ ಕಲಾವಿದನಾಗಿ ಅಭಿನಯಿಸುವ ಅವಕಾಶದಿಂದ ವಂಚಿತರಾದವರು, ಬೇರೆ ಬೇರೆ ಉದ್ಯೋಗದಲ್ಲಿ ತೊಡಗಿಕೊಂಡವರು ಕೂಡ ಹವ್ಯಾಸವಾಗಿ ಯಕ್ಷಗಾನ ಕಲೆಯಗೀಳನ್ನು ಹೊಂದಿದವರಾಗಿರುತ್ತಾರೆ.

ದಕ್ಷಿಣೋತ್ತರ, ಮಲೆನಾಡು ಪ್ರದೇಶಗಳಲ್ಲಿ ಇಂತಹ ಹವ್ಯಾಸಿ ಕಲಾವಿದರ ಬಳಗ ನೂರಕ್ಕು ಹೆಚ್ಚಿದೆ. ದೇಶ–ವಿದೇಶಗಳಲ್ಲಿಯೂ ಬೇರೆ ಬೇರೆ ಉದ್ಯೋಗದಲ್ಲಿರುವವರು ಇದ್ದಾರೆ. ಶಿಕ್ಷಕರು, ಬ್ಯಾಂಕ್ ನೌಕರರು, ವೈದ್ಯರು, ಇಂಜಿನಿಯರುಗಳು ಹೀಗೆ ಬೇರೆ ಬೇರೆ ವೃತ್ತಿಗಳಲ್ಲಿದ್ದು ಯಕ್ಷಗಾನ ವೇಷಗಾರಿಕೆಯಲ್ಲಿ ಆಸಕ್ತಿ ಹೊಂದಿದವರಿಗೆ ಹವ್ಯಾಸಿ ಕಲಾ ಬಳಗ ಆಶ್ರಯ ನೀಡಿದೆ. ಇದು ಇಂದಿನ ಸ್ಥಿತಿಯಾಗಿದ್ದರೆ, ಅಂದು ಕೂಡ ಕೌಟುಂಬಿಕ ಸಾಮಾಜಿಕ ಕಾರಣಗಳಿಂದ ಮೇಳದಲ್ಲಿ ಕಲಾವಿದರಾಗಿ ತೊಡಗಿಕೊಳ್ಳದೆ ತಾವಿರುವ ಊರಿನಲ್ಲಿಯೆ ಬಿಡುವಿನ ವೇಳೆಯಲ್ಲಿ ಆಗಾಗ ಪ್ರದರ್ಶನ ನೀಡುವುದಕ್ಕೆ ಮೇಳ ಸಜ್ಜುಗೊಳ್ಳುತ್ತದೆ.

ಯಕ್ಷಗಾನ ಕಲೆಯ ಯಕ್ಷಗಾನವನ್ನು ನೋಡುತ್ತಾ ಕಲೆಯನ್ನು ಆರಾಧಿಸುವ ಪ್ರವೃತ್ತಿಯನ್ನು ಹೊಂದಿ ಅದೇ ಪ್ರದರ್ಶನದ ತುಡಿತಕ್ಕೆ ಕಾರಣವಾಗಿ ಉಳಿವಿಗೆ ಹವ್ಯಾಸಿಮೇಳಗಳ ಕೊಡುಗೆ ಮಹತ್ತರವಾದುದು. ಗ್ರಾಮೀಣ ಭಾಗದಲ್ಲಿ ಸಂಚಾರ–ಸಂಪರ್ಕ–ಮಾಧ್ಯಮ ವ್ಯವಸ್ಥೆಗಳಿಲ್ಲದ ಹಳ್ಳಿಗಳಲ್ಲಿ ಹವ್ಯಾಸಿ ಕಲಾವಿದರು ಯಕ್ಷಗಾನದ ಪ್ರದರ್ಶನ ನೀಡುತ್ತಾ ಬಂದಿದ್ದರಿಂದ ಕಲೆಯ ಅವಶೇಷಗಳು ಇಂದಿಗೂ ಹಳ್ಳಿ ಹಳ್ಳಿಗಳಲ್ಲಿ ಉಳಿದುಕೊಂಡಿದೆ. ಹವ್ಯಾಸಿಗಳು ದೇವಾಲಯಗಳಲ್ಲಿ ಊರಿನ ಪ್ರಮುಖರ ಮನೆಗಳಲ್ಲಿ ಕುಣಿತ. ಭಾಗವತಿಕೆ ಮಾತುಗಾರಿಕೆಯ ಅಭ್ಯಾಸ ಮಡುವುದರಿಂದ ಅಲ್ಲಿನ ಜನರಲ್ಲಿ ಕಲೆಯ ಕುರಿತಾದ ಆಸಕ್ತಿ ಬೆಳೆಯಲು ಹೊಸತಲೆಮಾರಿಗೆ ಪ್ರೇರಣೆಯಾಗಲು ಕಾರಣವಾಯಿತು.

ಘಟ್ಟದ ಮೇಲಿನ ಶಿರಸಿ, ಸಿದ್ದಾಪುರ, ಯಲ್ಲಾಪುರ, ಸಾಗರ ತಾಲ್ಲೂಕಿನ ಹಳ್ಳಿಗಳಲ್ಲಿ, ಯಕ್ಷಗಾನಾಭ್ಯಾಸಕ್ಕೆ ಪ್ರಸಿದ್ದ ಕಲಾವಿದರ ತಂಗುವಿಕೆ, ಬೋಧನೆಗೆ ಕಾರಣವಾಯಿತು. ಮೊಕ್ಕಾಂ ಪದ್ದತಿಯ ಮೇಳದಲ್ಲಿ ಉತ್ತರಕನ್ನಡದ ಪ್ರಸಿದ್ದ ಕಲಾವಿದರಾದ ಪರಮಯ್ಯ ಹಾಸ್ಯಗಾರರು. ಘಟ್ಟದ ಮೇಲಿನ ಪ್ರದೇಶಗಳಲ್ಲಿ ಸಂಚಾರದಲ್ಲಿದ್ದಾಗ ಅನೇಕ ಮನೆಗಳಲ್ಲಿ ಮೊಕ್ಕಾಂ ಮಾಡಿ ಅಲ್ಲಿಯ ಯಕ್ಷಗಾನದ ಹೆಜ್ಜೆಗಳನ್ನೂ ಕಲಿಸಿದ ಬಗ್ಗೆ ಇಂದಿನವರು. ಸ್ಮರಿಸುತ್ತಾರೆ.

೫.೭.೪. ಯಕ್ಷಗುರು ಹೊಸ್ತೋಟ ಮಂಜುನಾಥ ಭಾಗವತರ ಸಂಘಟನೆ

ಯಕ್ಷಗಾನದ ಭೀಷ್ಮಯೆಂದೇ ಖ್ಯಾತರಾಗಿರುವ ಹೊಸ್ತೋಟ ಮಂಜುನಾಥ ಭಾಗವತರು ಅರ್ಧ ಶತಮಾನಕ್ಕಿಂತ ಹೆಚ್ಚು ಕಾಲ ಯಕ್ಷಗಾನದ ಗುರುವಾಗಿ ಪ್ರಸಂಗ ಕರ್ತರಾಗಿ ಸಂಶೋಧಕರಾಗಿ ತೊಡಗಿಕೊಂಡಿದ್ದಾರೆ. ಅವರ ಇಡೀಯ ಜೀವಮಾನವೇ ಯಕ್ಷಗಾನಕ್ಕಾಗಿ ಸಮರ್ಪಿತವಾಗಿದೆ. ಇವರು ಪ್ರತಿಷ್ಠಿತ ಪಾರ್ತಿ ಸುಬ್ಬ ಪ್ರಶಸ್ತಿ ವಿಜೇತರು ಕೂಡ ಹೌದು. ತಮ್ಮದೆಂಬ ಆಸ್ತಿ ಪಾಸ್ತಿ, ಹೆಂಡತಿ, ಮಕ್ಕಳು ಯಾವ ಸಂಪತ್ತೂ ಇಲ್ಲದ ಬ್ರಹ್ಮಚಾರಿ. ನಿಜ ಅರ್ಥದಲ್ಲಿ ಅವರು ಅವಧೂತರು. ಅವರು ಯಕ್ಷಗಾನ ಪಸರಿಸಿದ ಪ್ರದೇಶದಲ್ಲಿ ಸಂಚರಿಸುತ್ತಾ ಸಾವಿರಾರು ಜನರಿಗೆ ಯಕ್ಷಗಾನ ಕಲಿಸುತ್ತಾ ಯಕ್ಷಗಾನ ಕಲೆಯು ಜೀವಂತವಾಗಿರುವಂತೆ ಪ್ರಯತ್ನಿಸುತ್ತಿದ್ದಾರೆ.

ಜಾತಿ ಮತ ಬೇಧವಿಲ್ಲದೆ ಎಲ್ಲರಿಗೂ ಯಕ್ಷಗಾನ ಕಲಿಸಿದ್ದಾರೆ. ಮಕ್ಕಳಿಗೆ ಶಿಕ್ಷಣ ನೀಡಿ ಮಕ್ಕಳ ಮೇಳ, ಹೆಣ್ಣುಮಕ್ಕಳಮೇಳ, ಅಂಧಮಕ್ಕಳಮೇಳ, ಹವ್ಯಾಸಿಮೇಳಗಳ ಸಂಘಟನೆಗೆ ಕಾರಣರಾದರು. ಕಲೆಯೊಂದರ ಚರಿತ್ರೆಯಲ್ಲಿ ಇಂತಹ ಕಲಾಸಮರ್ಪಿತ ಬದುಕನ್ನು ಕಾಣುವುದು ಅಪರೂಪವಾಗಿದೆ. ಅವರ ಸಾಧನೆಯನ್ನು ಅವರ ಸಂದರ್ಶನದಲ್ಲಿ ಅವರೇ ಬಿಚ್ಚಿಟ್ಟಿದ್ದಾರೆ.

"ನಾನು ಮೊದಲು ಯಕ್ಷಗಾನ ಕಲಿಸಿದ್ದು ಸಿದ್ದಾಪುರದ ಕಾಲೇಜಿನಲ್ಲಿ ಆಗ ಅಲ್ಲಿ ಬಿ.ಹೆಚ್. ಶ್ರೀಧರರು ಇದ್ದರು. ಅವರ ಸಹಕಾರದೊಂದಿಗೆ ನಾನು ಕಾಲೇಜಿನ ಮಕ್ಕಳಿಗೆ ಮತ್ತಿತರರಿಗೆ ಕಲಿಸಿದೆ. ಆಗ ಕಲಿತವರಲ್ಲಿ ದಿ. ಡಿ.ಜಿ. ಹೆಗಡೆ ಮತ್ತು ಶಿರಳಗಿ ಭಾಸ್ಕರಜೋಶಿ ಪ್ರಮುಖರು. "ಪೌಂಡ್ರಕ ವಧೆ" ಎಂಬ ಆಖ್ಯಾನವನ್ನು ಆಗ ನಾನು ಕಲಿಸಿ ನಿರ್ದೇಶಿಸಿದ್ದೆ. ಆಗಲೇ ಹೇಳಿದಂತೆ ನಾನು ಬಾಳೆಹದ್ದದವರ ಮನೆಯಲ್ಲಿರುವಾಗ ರೂಪಿಸಿದ ತಾಳ ಸೂತ್ರಗಳು ಕಲಿಸುವುದಕ್ಕೆ ನನಗೆ ಬಹಳ ಸಹಕಾರಿಯಾಗಿದೆ. ಮತ್ತೆ ನಾನು ತರಬೇತಿ ಕ್ಲಾಸುಮಾಡಿದ್ದು ಇದೆ. ಅಚವೆಯಲ್ಲಿ ಕೃಷ್ಣಹೆಬ್ಬಾರ್, ಮಾಲೆಗದ್ದೆ ಪರಮೇಶ್ವರ ಮೊದಲಾದವರಿದ್ದರು. ನೂರಾರು ಕಡೆ ನಾನು ಯಕ್ಷಗಾನ ತರಬೇತಿ ನೀಡಿದ್ದೇನೆ. ಸಾವಿರಾರು ಜನ ನನ್ನ ಹತ್ತಿರ ಯಕ್ಷಗಾನ ಕಲಿತಿದ್ದಾರೆ. ಪ್ರತಿವರ್ಷ ಕನಿಷ್ಠ ಹನ್ನೆರಡು ಜನರಿಗೆ ಯಕ್ಷಗಾನ ಕಲಿಸಿ ಮುಖಕ್ಕೆ ಬಣ್ಣ ಹಚ್ಚುವಂತೆ ಮಾಡಬೇಕೆಂದು ಇಪ್ಪತ್ತೈದು ವರ್ಷ ವ್ರತದಂತೆ ನಡೆಸಿಕೊಂಡು ಬಂದಿದ್ದೇನೆ.

ಶಿವಮೊಗ್ಗದಲ್ಲಿ ಅಂಧ ಮಕ್ಕಳ ಶಾಲೆಗೆ ಹೋಗಿ ನನ್ನ ಉಳಿದ ಆರ್ಯವಂತ ಶಿಷ್ಯರ ಸಹಾಯದಿಂದ ಪ್ರತಿಯೊಂದು ಅಂಧ ಬಾಲಕನ ಭುಜವನ್ನೂ ಹಿಡಿದುಕೊಂಡು ನೃತ್ಯದ ಆಕಾರ ಬರುವಂತೆ ಮಾಡಿ ಅವರಿಂದ ಯಶಸ್ವೀ ಯಕ್ಷಗಾನ ಪ್ರದರ್ಶನ ಕೊಡಿಸಿದ್ದೇನೆ. ಇದನ್ನು ಕಂಡು ಸ್ವತಃ ಶಿವರಾಮ ಕಾರಂತರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ಸಂದರ್ಭಗಳಲ್ಲಿಯೂ ನನ್ನ ತಾಳದ ಸೂತ್ರಗಳು ನನ್ನ ಸಹಾಯಕ್ಕೆ ಬಂದಿದೆ.

ಇನ್ನೂ ನನ್ನ ಶಿಷ್ಯರು ಐನ್‌ಬೈಲು ಪರಮೇಶ್ವರ ಹೆಗಡೆ, ನಾಗರಾಜಜೋಶಿ, ಇಡವಾಣಿ ತ್ರಯಂಬಕ ಹೆಗಡೆ ಇನ್ನೂ ಅನೇಕರಿದ್ದಾರೆ. ಮಹಿಳೆಯರಲ್ಲಿ ಪ್ರಜ್ಞಾಮತ್ತಿಹಳ್ಳಿ, ಮತ್ತು ಸೌಮ್ಯ ಗೋಟಗಾರು ಇವರು ಪ್ರಮುಖರು. ಮಹಿಳೆಯರಿಗೆ ಯಕ್ಷಗಾನ ಕಲಿಸುವಾಗ ಯಕ್ಷಗಾನ ಕಲಿತ ಮಹಿಳೆಯರು

ಗರ್ಭಿಣಿಯರಾದರೆ ಹುಟ್ಟುವ ಮಕ್ಕಳಿಗೆ ಯಕ್ಷಗಾನ ಗರ್ಭಸಂಸ್ಕಾರವಾಗುತ್ತದೆ. ಎಂದು ನನ್ನ ನಿರೀಕ್ಷೆಯಾಗಿತ್ತು.

ಇನ್ನೂ ಈ ಎಲ್ಲ ಶಿಷ್ಯರ ರಂಗ ಪ್ರಸ್ತುತಿ ನನಗೆ ಸಮಧಾನ ತಂದಿದೆಯೋ ಎಂದು ಕೇಳಿದರೆ ಉತ್ತರ ಹೇಳುವುದು ಕಷ್ಟ. ಕೆಲವರಿಗೆ ಆರ್ಥಿಕ ಅನಿವಾರ್ಯತೆ ಎದುರಾಯಿತು. ಇನ್ನು ಕೆಲವರು ವೃತ್ತಿಗಿಳಿದರು. ನನ್ನ ತಾಳಸೂತ್ರಗಳು ಹೆಜ್ಜೆಗಾರಿಕೆಯ ಮೇಲೆ ಮತ್ತು ತಾಳದ ಮೇಲೆ ಬಲುಬೇಗನೆ ಹಿಡಿತ ಸಾಧಿಸಲು ಶಿಷ್ಯರಿಗೆ ಅನುಕೂಲ ಒದಗಿಸಿದ್ದರಿಣದ ಅನೇಕರು ಪ್ರಾಥಮಿಕ ಹಂತದ ಕಲಿಕೆಯ ನಂತರ ಯಾರ್ಯಾರನ್ನೋ ಅನುಕರಣೆ ಮಾಡತೊಡಗಿದರು. ಇದರಿಂದ ನನಗೆ ಅಸಮಾಧಾನವಾದರೂ ನಾನೇನು ಮಾಡುವಂತಿಲ್ಲ."[೧೩]

ಅವರ ಧೀರ್ಘ ಉತ್ತರದಿಂದಲೆ ಹವ್ಯಾಸಿ ಯಕ್ಷಗಾನ ಸಂಘಗಳ ಉದಯದ ಎಲ್ಲಾ ಅಂಶಗಳು ಗರ್ಭೀಕರಿಸಿದೆ. ಇಂತಹ ಉದಾತ್ತ ಸೇವೆಯ ಕಲಾ ತಪಸ್ವಿ ಯಕ್ಷಗಾನಕ್ಕೆ ದೊರೆತದ್ದು ಕಲೆಯ ಭಾಗ್ಯವೇ ಸರಿ! ಹೀಗೆ ಅನೇಕರು ಜೀವನವನ್ನು ಮುಡಿಪಿಟ್ಟು ಯಕ್ಷಗಾನ ಬೆಳಸದಿದ್ದರು ಸಮಯವನ್ನು ಮುಡಿಪಿಟ್ಟು ಹಳ್ಳಿ ಹಳ್ಳಿಯಲ್ಲಿ ಅನೌಪಚಾರಿಕ ಶಿಕ್ಷಣ ನೀಡುತ್ತಿದ್ದಾರೆ. ಇವರೆಲ್ಲರ ಜೀವನದ ಸಾಧನೆಗಳನ್ನು ಉದಾಹರಿಸಿ ವಿಷಯವನ್ನು ಸಮರ್ಥಿಸುವುದು ಈ ಪರಿಮಿತಿಯಲ್ಲಿ ಅಸಾಧ್ಯವೆ ಸರಿ! ಯಾವುದೇ ಔಪಚಾರಿಕ ಶಿಕ್ಷಣ ವ್ಯವಸ್ಥೆಯಿಂದಲೂ ನೀಡಲಾಗದ ಕಲಾ ಶಿಕ್ಷಣವನ್ನು ಹಳ್ಳಿ ಹಳ್ಳಿಗಳಲ್ಲಿ ಅನೌಪಚಾರಿಕ ವಿಧಾನದಿಂದ ಬೋಧಿಸುತ್ತಿರುವುದರಿಂದ ಅಸಂಖ್ಯ ಯಕ್ಷಗಾನ ಕಲಾವಿದರು ಇಂದಿಗೂ ಸಿದ್ದಗೊಳ್ಳುತ್ತಿದ್ದಾರೆ.

ಘಟ್ಟದ ಮೇಲಿನ ಪ್ರದೇಶಗಳಲ್ಲಿ ಹಿಂದಿನಿಂದಲೂ ಶ್ರಾವಣಮಾಸದ ಧಾರೆ ಪೂಜೆಗಾಗಿ ಕರಾವಳಿಯ ವೈದಿಕರು ತೆರಳಿ ಒಂದು ತಿಂಗಳುಕಾಲ ವಾಸ್ತವ್ಯ ಹೂಡಿ ಪೂಜೆಯೊಂದಿಗೆ ವಿವಿಧ ಕಲಾಸೇವೆಯನ್ನು ದೇವತಾಪ್ರೀತ್ಯರ್ಥವಾಗಿ ನೆರವೇರಿಸಿದರು. ಅಂತಹ ವೈದಿಕರು ಪುರಾಣ ಜ್ಞಾನವನ್ನು ಪ್ರವಚನ, ತಾಳಮದ್ದಲೆಯ ಮೂಲಕ ಜನರಿಗೆ ಹಂಚಿದರು. ಹವ್ಯಕ ಈ ಸಂಪ್ರದಾಯದಿಂದ ತಾಳಮದ್ದಲೆ ಕಲೆ ಘಟ್ಟದ ಮೇಲಿನ ಪ್ರದೇಶಗಳಲ್ಲಿ ಅನುಷ್ಠಾನ ಪೂರ್ವಕವಾಗಿ ನಡೆಯಿತು. ಗೋಕರ್ಣದ ಪ್ರಸಿದ್ಧ ಅರ್ಥಧಾರಿಗಳಾದ ಬೈಲಕೇರಿ ರಾಮಕೃಷ್ಣಭಟ್ಟರು ಯಲ್ಲಾಪುರ ಸೀಮೆಗೆ ಹೋಗಿ ತಾಳಮದ್ದಲೆಗಳಲ್ಲಿ ಪಾಲ್ಗೊಗೊಳ್ಳುತ್ತಿದ್ದರು. ಹವ್ಯಕರು ಪುರಾಣಂತರ್ಗತ ಮೌಲ್ಯಗಳಲ್ಲಿ ಅಪಾರ ನಂಬಿಕೆ ಇಟ್ಟವರು. ನಿತ್ಯ ನೈಮಿತ್ಯಕ ಶ್ರಾದ್ಧ ಕರ್ಮಗಳು ದೇವತಾರಾಧನೆಯಲ್ಲಿ ಹಳೆಯ ತಲೆಮಾರಿನಲ್ಲಿ ಇಟ್ಟ ನಂಬಿಕೆ ಯಕ್ಷಗಾನದ ಮೂಲಕ ಪ್ರತಿಬಿಂಬಿಸಿದೆ. ಇಂತಹ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದವರು ಹೆಚ್ಚಾಗಿ

ಯಕ್ಷಗಾನದತ್ತ ಒಲವು ತೋರಿದರು. ಆದರೆ ವೃತ್ತಿ ಕಲಾವಿದರ ಬದುಕನ್ನು ಹವ್ಯಕರು ಇಷ್ಟಪಟ್ಟವರಲ್ಲ. ಕುಟುಂಬ, ಕೃಷಿ, ಹೈನುಗಾರಿಕೆಯ ಒಲವಿನಿಂದ ವೃತ್ತಿಕಲಾವಿದರಾಗಿರುವುದಕ್ಕಿಂತ

೧೩. ಗೋಪಾಲಕೃಷ್ಣ ಭಾಗವತ – ಹೊಸ್ತೋಟ ಮಂಜುನಾಥ ಭಾಗವತರ ಸಂದರ್ಶನ – ಯಕ್ಷರಂಗ – ಜುಲೈ ೨೦೧೧ – ಪು. ೮

ಹವ್ಯಾಸಿಗಳಾಗಿ ಯಕ್ಷಗಾನವನ್ನು ಆರಾಧಿಸಿದರು. ಹಿಂದೆ ಇಂತಹ ಹವ್ಯಾಸಿ ಮೇಳಗಳು ವರ್ಷಕ್ಕೆ ೧೦ರಿಂದ ೫೦ ಪ್ರದರ್ಶನ ನೀಡುತ್ತಿದ್ದವು.[೧೪]

ಹಿಂದಿನ ತಲೆಮಾರಿನ ಪ್ರಸಿದ್ಧ ಕಲಾವಿದರೆಲ್ಲ ತಮ್ಮ ವೃತ್ತಿ ಬದುಕನಲ್ಲಿ ಯಕ್ಷಗಾನ ಶಾಲೆಯನ್ನು ತೆರೆದೋ, ಅಥವಾ ಮನೆಯಲ್ಲಿಯೋ ಶಿಷ್ಯರನ್ನು ಸಿದ್ಧಪಡಿಸಿದ್ದು ಇದೆ. ಮೂಡ್ಕಣಿ ನಾರಯಣ ಹೆಗಡೆ, ಮೂರುರು ದೇವರು ಹೆಗಡೆ ಇನ್ನೂ ಅನೇಕರು ಇದಕ್ಕೆ ಉದಾಹರಣೆಯಾಗಿರುತ್ತಾರೆ.

ಈ ಹಿನ್ನಲೆಯಲ್ಲಿ ಯಕ್ಷಗಾನ ಬದುಕಿನ ಮನರಂಜನೆಯಾಗಿ ಸಾಂಸ್ಕೃತಿಕ ಕಾಳಜಿರುವ ಪ್ರತಿ ಊರಿನಲ್ಲೂ ಹವ್ಯಾಸಿ ಕಲಾವಿದರು, ಸಂಘಟಿತರಾಗಲು ಸಾಧ್ಯವಾಯಿತು.

ಯಕ್ಷಗಾನದ ಉಳಿವಿಗೆ ಇದಕ್ಕಿಂತ ಭಿನ್ನ ಮಾರ್ಗ ಯಾವುದಿದೆ? ಜಾಗತೀಕರಣದ ಪ್ರಭಾವ, ಆಧುನಿಕ ನಗರ ವಲಸೆ ಪರಿಣಾಮ, ಹಣಗಳಿಸುವ ವೃತ್ತಿಗಳತ್ತ ಒಲವು ಗ್ರಾಮೀಣ ಸಂಸ್ಕ್ರತಿಯನ್ನು ಈ ನಲೆಯಲ್ಲಿ ಉದ್ವಸ್ತಗೊಳಿಸಿದೆ. ಇದರಿಂದ ಇಂತಹ ಹವ್ಯಾಸಿ ಕಲಾವಿದರು ಕಲೆಯಿಂದ ದೂರವೇ ಉಳಿಯುತ್ತಿರುವುದು ಕಂಡು ಬರುತ್ತಿದೆ.

ಘಟ್ಟದ ಮೇಲಿನ ಪ್ರದೇಶಗಳಲ್ಲಿ ಸಂಘಟಣೆಗೊಂಡ ಮೇಳಗಳು ಹವ್ಯಾಸಿ ಮೇಳಗಳೇ ಅಧಿಕ. ವೃತ್ತಿ ಮೇಳದಷ್ಟೇ ಪ್ರಭಾವ ಶಾಲಿಯಾದ ಕಲಾಭಿವ್ಯಕ್ತಿಯನ್ನು ಇವು ಹೊಂದಿದ್ದವು.

"ಹುಲಿಕಲ್ಲು ಮೇಳ", ಶಿಂಗನಹಳ್ಳಿ ಮೇಳ, ಶಿವಳ್ಳಿ ಪಂಚಲಿಂಗೇಶ್ವರ ಮೇಳ,ಹೊಸತೋಟದ

ಶ್ಯಾಮಭಟ್ಟರ ಯಾನೆ ಓಣಿ ವಿಘ್ನೇಶ್ವರ ದೇವರ ಕೃಪಾಪೋಷಿತ ಮೇಳ, ಮಣಸೆ ಹೊಸಳ್ಳಿ ವೆಂಕಟ್ರಮಣ ಹೆಗಡೆ ಮೇಳ ಕೋಳಿಗಾರ ಮೇಳ ಅಣಲಗಾರ ಮೇಳ (ಸಿದ್ದಾಪುರ) ಮೇಳ,

ಮಳಗಿಮನೆ ಮೇಳ, ಮಣಸೆ ಕೆರೆಗದ್ದೆ ಮೇಳ,(ಶಿರಸಿ) ಮಂಜಗುಣಿ ಮೇಳ, ಶ್ರೀಸಿದ್ಧಿವಿನಾಯಕ ಮಿತ್ರಮಂಡಳಿ ಸೋಂದಾ (ಶಿರಸಿ) ಹೊಸಹಳ್ಳಿ ಸಣ್ಣ ಹೆಗಡೆ ಮೇಳ

ಅರಸಾಪುರ ಸುಬ್ರಾಯ ಹೆಗಡೆ ಮೇಳ ಸ್ವರ್ನವಲ್ಲಿ ಮೇಳ ಭರತನಳ್ಳಿ ಮೇಳ (ಯಲ್ಲಾಪುರ) ಶಿರಳಗಿ ಮೇಳ ಸಿದ್ದಾಪುರ ಕೊಳಗಿಬೀಸ್‌ಮೇಳ (ಸಿದ್ದಾಪುರ) ಹೇರೂರು ಮೇಳ (ಶಿರಸಿ) ಮೊದಲಾದ ಮೇಳಗಳು ಅರ್ಧಶತಮಾನದಷ್ಟು ಕಾಲ ಕಲಾಸೇವೆ ಗೈದವು"[೧೫]

ಇನ್ನೂ ಅನೇಕ ಮೇಳಗಳು ಯಕ್ಷಗಾನದ ವಿಕಾಸಕ್ಕೆ ಶ್ರಮಿಸಿದೆ. ಈ ಮೇಳಗಳ ಯಜಮಾನಿಕೆ ಹವ್ಯಕರದ್ದೆ ಆಗಿತ್ತು. ಅಲ್ಲದೆ ಕಲಾವಿದರೂ ಹವ್ಯಕರೆ ಆಗಿದ್ದರು. ಈ ಮೇಳಗಳ ಸಂಘಟನೆಯ ಶ್ರಮವನ್ನು ಆ ಕಾಲದ ಸ್ಥಿತಿಯಲ್ಲಿ ನಿಂತು ನೋಡಿದರೆ ಇದೊಂದು ಸಾಹಸವೆ ಸರಿ!

ಯಕ್ಷಗಾನಕಲೆಯ ಉಳಿವು ಕೇವಲ ಬಂಡವಾಳ, ದೈಹಿಕಬಲದಿಂದಲೋ ಸಾಧಿಸಿದ್ದಲ್ಲ. ಸಂಘಟಣೆಯ ಹಿಂದೆ ಕಲೆಯನ್ನು ಅಭ್ಯಾಸ ಮಾಡಿ ಶೈಕ್ಷಣಿಕ ನೆಲೆಗಟ್ಟನ್ನು ಅರ್ಥೈಸಿಕೊಳ್ಳಬೇಕಾಗಿದೆ.

---

೧೪. ಯಕ್ಷರಂಗ ಜುಲೈ ೨೦೦೪ ಪುಟ ನಂ ೧೪ ಕಡತೋಕಾ ಗೋಪಾಲಕೃಷ್ಣ ಭಾಗವತ.

೧೫. ಪಿ.ಟಿ.ಹೆಗಡೆ ಶೀಗೆಹಳ್ಳಿ ಘಟ್ಟದ ಹವ್ಯಕರ ಮೇಳ ವೈಜಯಂತಿ ಪುಟ ೮೯.

ಸುಮಾರು ನೂರು ಕುಟುಂಬಗಳು ಈ ರೀತಿಯಲ್ಲಿ ನೇರವಾಗಿ ಕಲೆಯಲ್ಲಿ ತೊಡಗಿಕೊಂಡಿದ್ದರೆ ಉಳಿದವರು ಕಲಾಸ್ವಾದನಾಂಗವಾಗಿ ಕಲೆಗೆ ನೆರವಾಗಿದ್ದರು. ಸೌಲಭ್ಯಗಳಿಲ್ಲದ ಪ್ರದೇಶಗಳಲ್ಲಿ ಬಡತನ ಆರ್ಥಿಕ ಸಂಕಷ್ಟ ಕೃಷಿಯಾಧಾರಿತ ಬದುಕಿನ ಜಂಜಾಟಗಳ ನಡುವೆ ಯಕ್ಷಗಾನವನ್ನು ಹವ್ಯಕರು ಘೋಷಿಸಿರುವದು ಹವ್ಯಾಸದಿಂದ ಎಂಬುದು ವಿಧಿತವಾಗುತ್ತದೆ.

೫.೮. ತಾಳಮದ್ದಳೆ ಸಂಘಟನೆ

ತಾಳಮದ್ದಲೆ ಬಯಲಾಟ ಸಂಘಟಣೆ ಹಾಗೂ ತಾಳಮದ್ದಳೆ ಸಂಘಟನೆಗಳು ಭಿನ್ನವಾದ ಅನುಭವವನ್ನು ನಿರೀಕ್ಷಿಸುತ್ತದೆ. ಯಕ್ಷಗಾನ ಬಯಲಾಟ ಸಂಘಟಣೆ ಭಿನ್ನಭಿನ್ನಕಾರ್ಯಕ್ಷಮತೆಯನ್ನು ಕಲಾವಿದರನ್ನು ಸಹಕಾರಿಗಳನ್ನು ಒಂದಡೆ ಕಲೆ ಹಾಕಬೇಕು. ಹಿಮ್ಮೇಳನ ಮುಮ್ಮೇಳಗಳಷ್ಟೇ ಅಲ್ಲದೆ ವ್ಯವಸ್ಥಾಪಕರು, ನೇಪಥ್ಯದ ಪರಿಚಾರಕರು ಕೂಡ ಅಷ್ಟೇ ಪ್ರಮುಖರು. ಆದರೆ ಯಕ್ಷಗಾನ ತಾಳಮದ್ದಳೆ, ರಂಗ ಸಜ್ಜಿಕೆ, ಬಣ್ಣಗಾರಿಕೆ ವೇಷಭೂಷಣಗಳಲ್ಲದೆ ಕೇವಲ ಅರ್ಥಗಾರಿಕೆ,ಃಹಿಮ್ಮೇಳನ ಕಲಾವಿದರನ್ನು ಕಲೆ ಹಾಕಿದರೆ ಸಾಕು . ಸಮಾನ ಮನಸ್ಕರ ಒಂದು ಗುಂಪು ತಾಳಮದ್ದಳೆಯನ್ನು ನೆರವೇರಿಸಲು ಸಾಧ್ಯ. ಆದರೂ ಇತ್ತೀಚಿನ ಬಹು ಮಾದ್ಯಮ ವ್ಯವಸ್ಥೆಯಲ್ಲಿ ಯಶಸ್ವಿ ತಾಳಮದ್ದಳೆಯನ್ನು ನಡೆಸುವುಸು ಸಂಘಟಿಸುವುದು ಕೂಡ ಸವಾಲಾಗಿದೆ. ಹಿಂದೆ ಪುರಾಣ ಪ್ರವಚನ, ಗಮಕ, ಭಾಗವತ ಕಥನಗಳಿಗೆ ಜನ ಭಕ್ತಿ ಶ್ರದ್ದೆಗಳಿಂದ ಪಾಲ್ಗೊಳ್ಳುತ್ತಿದ್ದರು. ಆಧುನಿಕತೆಯ ಸೋಂಕಿಲ್ಲದ ಹಳ್ಳಿಗರಿಗೆ ಬಿಡುವಿನ ವೇಳೆ ನಿರಾತಂಕವಾಗಿತ್ತು. ಈಗಿನ ಸಂಚಾರಿ ದೂರವಾಣಿ, ಆಧುನಿಕ ಶೈಲಿಯ ಬದುಕು ಜನರ ವಿರಾಮವೇಳೆಯನ್ನು ಕಸಿದುಕೊಂಡಿದೆ. ತಾಳಮದ್ದಲೆ ಪ್ರೇಕ್ಷಕರನ್ನು ಆಕರ್ಷಿಸುವುದು ಕೂಡ ಕಠಿಣವಾಗಿದೆ. ಸಮಕಾಲೀನ ಬದುಕಿನ ಸ್ಥಿತ್ಯಂತರದ ಆಧುನಿಕ ಜೀವನ ಶೈಲಿಯ ನಡುವೆಯೂ ಗ್ರಾಮೀಣ ಪರಿಸರ ಹಾಗೂ ನಗರ ವ್ಯವಸ್ಥೆಯಲ್ಲಿ ತಾಳಮದ್ದಲೆಯನ್ನು ಸಂಘಟಿಸುವುದು ಹಾಗೂ ಪರಮಪರೆಯನ್ನು ಉಳಿಸುವ ಪ್ರಯತ್ನ ಸುಲಭದ ಮಾತಲ್ಲ.

ದೂರದರ್ಶನದ ಪ್ರಭಾವ, ಸಿನೇಮಾದ ಅಕರ್ಷಣೆ, ವಿವಿದ ಮನರಂಜನಾಮಾಧ್ಯಮಗಳು ಜನರನ್ನು ನಿಶ್ಚೇಷ್ಟಿತರಾಗಿಸಿದೆ. ವಾಸ್ತವಿಕ ಬದುಕಿನಲ್ಲೆ ಕಾಲ್ಪನಿಕತೆಯನ್ನು, ಕಥೆಯನ್ನು ದೃಶ್ಯವಾಗಿಸುವ ಸನ್ನಿವೇಶದಿಂದ ವ್ಯಕ್ತಿ ನಾಲ್ಕುಗೋಡೆಗಳ ನಡುವೆಯೋ ತನ್ನ ನಿರೀಕ್ಷೆಯ ಬದುಕಿನ ಮನೋಭಾವಕ್ಕೆ ಪುರಾಣಕತೆಗಳ ವ್ಯಾಖ್ಯಾನ, ಘಟನೆಗಳ ಚರ್ವಿತ ಚರ್ವಣ ಆಕರ್ಷಣೆಯನ್ನು ಉಂಟುಮಾಡದು. ಅಭಿವ್ಯಕ್ತಿಯ ಆದರ್ಶವೆ ಮಾಧ್ಯಮಗಳಿಂದ ಬದಲಾಗಿರುವಾಗ ತಾಳಮದ್ದಳೆಯ ಪಾತ್ರಭಿವ್ಯಕ್ತಿಯ ಭಾಷೆ, ಮಾತುಗಾರಿಕೆ, ಅಪ್ಯಾಯಮಾನವೆನಿಸದು. ಬಹುತೇಕ ಸುಶಿಕ್ಷಿತರಲ್ಲದ ಹೊಸತಲೆಮಾರಿನವರಿಗೆ, ದುಡಿಮೆ ಮತ್ತು ಧನಸಂಪಾದನೆಯೇ ಕೇಂದ್ರವಾಗಿರುವ ಬದುಕಿಗೆ ಪೌರಾಣಿಕ ತತ್ವ, ಸಂಘರ್ಷ ವಿಚಾರ, ಉದಾತ್ತ ಚರಿತ್ರೆ, ಮೌಲ್ಯ, ಅಷ್ಟು ಪಥ್ಯವೆನಿಸುವದಿಲ್ಲ. ಇಂತಹ ಸಂದಿಗ್ಧ ಸನ್ನಿವೇಶದಲ್ಲೂ ತನ್ನದೆ ಆದ ಕಲಾರಸಿಕರನ್ನು ಹೊಂದಿದ ತಾಳಮದ್ದಳೆ. ನಿರಂತರ ಪ್ರದರ್ಶನದ ದೃಷ್ಟಿಯಿಂದ ಕ್ಷೀಣಿಸಿದರೂ ಸಂಘಟನೆಯ ದೃಷ್ಟಿಯಿಂದ ನವೀಕರಣಗೊಳ್ಳುತ್ತ ಸಾಗಿದೆ. ತಾಳಮದ್ದಳೆಯ ಸಂಘಟನೆ ಬದಲಾಗಿರುವದು. ಪ್ರೇಕ್ಷಕರನ್ನು ಆಕರ್ಷಿಸುವ ತಂತ್ರಗಳಲ್ಲಿ. ಹಿಂದೆ ಊರಿನಲ್ಲಿ ಪುರಾಣ, ಭಾಗವತಗಳನ್ನು, ರಾಮಾಯಣ ಮಹಾಭಾರತಗಳು ಓದಿದ ಸಂಸ್ಕøತ ಶ್ಲೋಕಗಳ ಉದ್ದರಿಸಬಲ್ಲ ವ್ಯಕ್ತಿಯೊಬ್ಬ ಅಥವಾ ಅಂಥವರೆ

ನಾಲ್ಕಾರು ಜನ ಸೇರಿ "ಕೂಟ" ವಾಗಿ ಅರ್ಥ ಹೇಳುವದು ವಾಡಿಕೆಯಾಗಿತ್ತು.

ಊರಿನ ಆದ್ಯರ ಮನೆಗಳಲ್ಲಿ, ದೇವಾಲಯಗಳಲ್ಲಿ, ಚಾವಡಿ ಚಪ್ಪರಗಳಲ್ಲಿ ಭಾಗವತಿಕೆ ಮೃದಂಗವಾದವನ್ನರಿತ. ಹಿಮೇಳದ ಹವ್ಯಾಸಿಯೊಂದಿಗೆ ನಾಲ್ಕಾರು ಜನ ಪಾತ್ರ ಹಂಚಿಕೊಂಡು ಜಾತ್ರೆ, ನೇಮ, ಮದುವೆ ಸತ್ಯನಾರಾಯಣ ಪೂಜೆ, ತ್ರಿಕಾಲ ಪೂಜೆ, ಶ್ರಾದ್ಧ ಮೊದಲಾದ ಸಂದರ್ಭಗಳಲ್ಲಿ ರಾತ್ರಿ ಜಾಗರವಾಗಿ ಬಂದಿರುವ ನೆಂಟರಿಷ್ಟರಿಗೆ, ಊರಿನ ಜನರಿಗೆ ಪ್ರೇಕ್ಷಕರಾಗಿರುವ ಸಭೆರಲ್ಲಿ ತಾಳಮದ್ದಳೆ ನಡೆಯುತ್ತಿತ್ತು. ಕುಳಿತು ಅರ್ಥಹೇಳುವ ಈ ಪ್ರಸಂಗಾವಧಾನಕ್ಕೆ ಬೈಠಕ್ಕು ಎಂದೂ ಕರೆಯುತ್ತಿದ್ದರು. ಈ ಕೂಟಗಳು ಗ್ರಾಮೀಣರ ಬದುಕಿನ ಅಭಿವ್ಯಕ್ತಿಯ ಮಾಧ್ಯಮವಾಗಿ ಆವೇಶಭರಿತ ಆಂಗಿಕಗಳನ್ನು ಅಭಿವ್ಯಕ್ತಿಸುತ್ತಾ ಜನಮನವನ್ನು ರಂಜಿಸುತ್ತಿದ್ದರು. ಯಕ್ಷಗಾನ ಬಯಲಾಟದ ಹವ್ಯಾಸಿ ವೇಷಧಾರಿಗಳು ಪಾಲ್ಗೊಂಡು ವಿಶೇಷ ಮೆರಗನ್ನು ನೀಡುತ್ತಿದ್ದರು. ಉತ್ತರ ಕನ್ನಡದ ಕರಾವಳಿಯ ವೈದಿಕ ಪರಂಪರೆಯ ಪುರೋಹಿತರು ಸಾಮಾನ್ಯವಾಗಿ ಅರ್ಥ, ಹೇಳುವದು ವಾಡಿಕೆಯಾಗಿತ್ತು. ವಾಲಿವಧೆ, ರಾವಣವಧೆ, ಪಟ್ಟಾಭಿಷೇಕ, ಏಕಾದಶಿಮಹಾತ್ಮೆ, ಪಂಚವಟಿ ಮುಂತಾದ ಪ್ರಸಂಗಗಳನ್ನು ವಿಶೇಷವಾಗಿ ಆಯ್ದುಕೊಳ್ಳಲಾಗುತ್ತಿತು.

ಉತ್ತರ ಕನ್ನಡದ ತಿರುಗಾಟದ ಮೇಳಗಳಾದ ಕರ್ಕಿಮೇಳ, ಕೆರೆಮನೆ ಮೇಳ, ಮೂಡ್ಕಣಿಮೇಳ, ಮುಂತಾದ ಮೇಳಗಳು ಕಲಾವಿದರು ಮಳೆಗಾಲದಲ್ಲಿ ಪ್ರಸಂಗಾವಧಾನ ನಡೆಸಿ ಪ್ರದರ್ಶನವಿಲ್ಲದ ಕಾಲಗಳಲ್ಲಿ ತಮ್ಮ ಕಲಾಭಿರುಚಿಯ ತುಡಿತವನ್ನು ವೇಷಭೂಷಣಗಳಿಲ್ಲದೆ ಹಿಮ್ಮೇಳ ಹಾಗೂ ಅರ್ಥಧಾರಿಗಳ ಸಹಯೋಗದೊಂದಿಗೆ ಅಲ್ಲಲ್ಲಿ ತಾಳಮದ್ದಳಗಳನ್ನು ಆಯೋಜಿಸುತ್ತಿದ್ದರು.

ಮೇಳಗಳ ತಿರುಗಾಟದ ಕಾಲದಲ್ಲಿ ಮೊಕ್ಕಾಂ ಪದ್ಧತಿಯ ಡೇರೆ ಮೇಳಗಳ್ಳಿದ್ದ ಕಾಲದಲ್ಲಿ ಒಂದು ಸ್ಥಳದಲ್ಲಿ ಉಳಿದುಕೊಂಡಾಗ ಬಿಡುವಿನ ದಿನಗಳಂದು ಬೈಠಕ್ಕನ್ನು ನಡೆಸಿದ ಬಗ್ಗೆಯೂ ಹಿರಿಯ ತಲೆಮಾರಿನ ಕಲಾವಿದರು ದಾಖಲಿಸಿರುತ್ತಾರೆ. ಕರ್ಕಿ ಪರಮಯ್ಯ ಹಾಸ್ಯಗಾರರು, ಕೆರೆಮನೆ ಶಿವರಾಮ ಹೆಗಡೆಯವರು, ಮೂಡ್ಕಣಿ ನಾರಾಯಣ ಹೆಗಡೆಯವರು ದೂರದ ಸ್ಥಳಗಳಿಗೆ ಹೋದಾಗ ಮೊಕ್ಕಾಂ ಮಾಡಿದ. ಊರಿನಲ್ಲಿ ಇಂತಹ ತಾಳಮದ್ದಳೆ ಸಂಗಘಟಿತವಾಗಿದ್ದನ್ನು ಉಲ್ಲೇಖಿಸಿದ್ದಾರೆ.

ಸಾರಿಗೆ ಸಂಪರ್ಕಗಳಿಲ್ಲದೆ ದೂರದ ಊರಿಗೆ ಪ್ರಯಾಣಿಸುವ ಸಂದರ್ಭದಲ್ಲಿ ಆಟದ ಪೆಟ್ಟಿಗೆಯನ್ನು ಹತ್ತಾರು ಮೈಲಿ ಹೋತ್ತು ಸಾಗುವ ಮಾರ್ಗ ಮಧ್ಯದಲ್ಲಿ ಮಾರ್ಗಯಾಸ ಪರಿಹಾರಕ್ಕಾಗಿ ಜಾಗರಣವನ್ನು ಏರ್ಪಡಿಸಿದ ಬಗ್ಗೆಯೂ ದಾಖಲಿಸಿರುತ್ತಾರೆ. ಹೊನ್ನಾವರ ಮತ್ತು ಸಿದ್ದಾಪುರ ತಾಲ್ಲೂಕಿನ ದುರ್ಗಮ ರಸ್ತೆಯ ನಡುವಿನ ದೇವಾಲಯದಲ್ಲಿ ಇಂತಹ ತಂಗುವಿಕೆಯಿಂದ ನಿರಂತರ ಯಕ್ಷಗಾನ ಸೇವೆ ನಿತ್ಯ ನಡೆಯುವ ಕ್ಷೇತ್ರಗಳಾದ ಬಗ್ಗೆ ಗುಂಡಬಾಳ ಕೂಡ ಸಾಕ್ಷಿಯಗಿದೆ.

ಮಳೆಗಾಲದಲ್ಲಿ ರಂಗಸ್ಥಳ ಸೇವೆಯಲ್ಲಿದ್ದ ಕಾಲದಲ್ಲಿ ಭಾಗವತರ ಮದ್ದಳೆವಾದಕರು ಮನೆಮನೆಗೆ ತಾಳಮದ್ದಳೆ ಕೊಂಡೊಯ್ಯುವ ಪದ್ಧತಿಯಿತ್ತೆಂದು ಸೇಡಿಯಾಪು ಕೃಷ್ಣಭಟ್ಟರು ತಾಳಮದ್ದಲೆ ಸುಧಾರಣೆ (೧೯೩೦) ಲೇಖನದಲ್ಲಿ ಉಲ್ಲೇಖಿಸಿದ್ದಾರೆ.'ಭಾಗವತರ ಮೇಳ' ಎಂಬ ಈ ಸಂಪ್ರದಾಯಬೈಠಕ್ಕಾಗಿ ಪರಿಣಮಿಸಿತು ಎಂಬ ಚರ್ಚೆಯೂ ನಡೆದಿದೆ. ಇದಕ್ಕೆ ಪೂರಕವಾಗೆ ಕಡತೋಕಾ ಮಂಜುನಾಥ

ಭಾಗವತರ "ತಮ್ಮ ಪೂರ್ವಜರು ಮೆಣಸೆ-ಕುರಗೋಡು ಸೀಮೆಯಿಂದ ದೇಶಾವರಕ್ಕಾಗಿ ಬಿಕ್ಷೆ ಬೇಡುತ್ತಾ ಬಂದು ನಲೆಸಿದರು, ಇಂದಿಗೂ ನಮ್ಮ ಹಳೆಯ ಮನೆಯಲ್ಲಿ ಅಟ್ಟದ ಮೇಲೆ ಇಂತಹ ಮರದ ಬಿಕ್ಷಾಪಾತ್ರೆಯಿತ್ತು ಎಂದು ಹೇಳಿರುತ್ತಾರೆ".[೧೬]

ಹಿಂದೆ ಐಗಳ ಮಠದಲ್ಲಿ ವಿದ್ಯಾಭ್ಯಾಸ ನಡೆಸಬೇಕಾದ ಸಂದಭದಲ್ಲಿ ವಿದ್ಯಾರ್ಥಿಗಳು ಪ್ರಸಂಗಗಳನ್ನು ಕಂಠಪಾಠ ಮಾಡಬೇಕಾಗಿತ್ತು, ಇಂತಹ ಸಂದರ್ಭದಲ್ಲಿ ಪ್ರಸಂಗವನ್ನು ಅರ್ಥ ಹೇಳುವ ಮೂಲಕ ಪುರಾಣವನ್ನು ಪಾತ್ರವಾಗಿ ವಿಶ್ಲೇಷಿಸಿ ಅಧ್ಯಯನ ಮಾಡಬೇಕಿತ್ತು. ರಾಮಯಣ ಮಹಾಭಾರತ ಪ್ರಸಂಗ ಪದಗಳೆ ಪಠ್ಯವಾಗಿದ್ದವು. ಎಂದು ಇದು ಕೂಡ ತಾಳಮದ್ದಳೆಯ ವಿಕಾಸಕ್ಕೆ ಕಾರಣವಾಗಿರಬಹುದೆಂದು ಊಹಿಸಲಾಗಿದೆ.

ಕ್ರಿಶ ೧೯೩೦ರ ನಂತರ ತಾಳಮದ್ದಳೆಯು ಕುರಿತು ಚರ್ಚೆ ಮಿಮರ್ಶೆಗಳು ಆರಂಭಗೊಂಡವು. ಅಲ್ಲಿಯವರೆಗೆ ತಾಳಮದ್ದಳ ಕೂಟಗಳು ಗ್ರಾಮೀಣ ಪ್ರದೇಶದಲ್ಲಿ ಸ್ಥಳೀಯ ಕಲಾವಿದರ ಹಾಗೂ ವೃತ್ತಿ ಕಲಾವಿದರ ವೇದಿಕೆಯಾಗಿತ್ತು. ಕ್ರಮೇಣ ವಿವಿಧ ಕ್ಷೇತ್ರಗಳಾದ ಪ್ರವಚನ, ಕೀರ್ತನೆ ಗಮಕ, ಪುರಾಣ ಮಿಮಾಂಸೆ ತರ್ಕ ಶಾಸ್ತ್ರಗಳನ್ನು ಅಧ್ಯಯನ ನಡೆಸಿದ ಪಂಡಿತರು ತಾಳಮದ್ದಳೆಯ ರಂಗವನ್ನು ಪ್ರವೇಶಿಸಿದರು.

ಯಕ್ಷಗಾನ ತಾಳಮದ್ದಳೆಯ ಕುರಿತು ಅಧ್ಯಯನಗಳು ಆರಂಭಗೊಂಡವು "ಲುಪ್ತನಾಟಕ" "ಕಾವ್ಯಮಯವಾಗ್ವಿಲಾಸ" "ಅಶುನಾಟಕ" ಎಂದೆಲ್ಲ ತಾಳಮದ್ದಳೆಯನ್ನು ವಿವೇಚಿಸಲಾಯಿತ್ತು. ತಾಳಮದ್ದಳೆ ಉಗಮ ವಿಕಾಸಗಳ ಕುರಿತಾದ ಶೋಧನೆಗಳು ಆರಂಭಗೊಂಡವು. ಇದರೊಂದಿಗೆ ತಾಳಮದ್ದಳೆಯ ಸುಧಾರಣೆಯು ಧ್ವನಿಯಿ ಗಟ್ಟಿಯಾಯಿತು.

ದಕ್ಷಿಣಕನ್ನಡ ಪ್ರಸಿದ್ದ ಅರ್ಥಧಾರಿಗಳಾದ ಶೇಣಿ ಗೋಪಾಲ ಕೃಷ್ಣಭಟ್ಟರು, ಮಲ್ಪೆರಾಮದಾಸ ಸಾಮಗಾರು ಮೂಡಂಬೈಲು ಗೋಪಾಲಕೃಷ್ಣಶಾಸ್ತ್ರಿ, ಎಂ.ಕೆ.ರಮೇಶಚಾರ್ಯ, ತೆಕ್ಕಟ್ಟೆ ಆನಂದ ಮಾಸ್ತರ್ ಕುಂಬಳೆಸುಂದರ್‌ರಾವ್, ಕೆ.ಗೋವಿಂದಭಟ್ ಪೆರ್ಲ ಕೃಷ್ಣಭಟ್, ಮಲ್ಪೆ ಲಕ್ಷ್ಮೀನಾರಯಣಸಾಮಗ, ಮುಂತಾದ ಮಹಾನ್ ಅರ್ಥಧಾರಿಗಳ ಧ್ವನಿಮುದ್ರಿಕೆಗಳು, ಹೊಸ ಸಂಚಾರವನ್ನು ಮೂಡಿಸಿದವು. ಪೊಳಲಿ ಶಂಕರನಾರಾಯಣ ಶಾಸ್ತ್ರಿಗಳು ಕಿರಿಕ್ಕಾಡು ವಿಷ್ಣುಮಾಸ್ತರು, ಕುಂಬಣೂರು ಬಾಲಕೃಷ್ಣರಾಯರು ನಾರಾಯಣ ಕಿಲ್ಲೆಯವರು, ದಿ. ವೆಂಕಪ್ಪಶೆಟ್ಟರು, ಅರ್ಕುಳ ಸುಬ್ರಾಯಚಾರ್ಯುರು ಹಿಂದಿನ ತಲೆಮಾರಿನಲ್ಲಿ ತಾಳಮದ್ದಳೆಯ ಕಟ್ಟಿದ ಮಾತಿನ ಮಂಟಪಕ್ಕೆ ಶೇಣಿಸಾಮಗಾರ ಪ್ರವೇಶ ತೋರಣದಂತಾಯಿತು. ದಕ್ಷಿಣಕನ್ನಡ ಮಾತುಗಾರಿಕೆಯಲ್ಲಿ ವಿಜ್ರುಂಭಿಸಿತು. ದಕ್ಷಿಣಕನ್ನಡದ ಅರ್ಥಧಾರಿಗಳನ್ನು ಉತ್ತರ ಕನ್ನಡಕ್ಕೆ ಮಲೆನಾಡಿಗೆ ಕರೆಸುವ, ತಾಳಮದ್ದಳೆ ಸಂಘಟಿಸುವ ಪ್ರಯತ್ನಗಳು ನಡೆದವು. ಈಮಾತಿನ ಲೋಕದ ಶಬ್ದ ಬ್ರಹ್ಮರ ಆಗಮನದಿಂದ ತರ್ಕ, ಜಿಜ್ಞಾಸೆ,ವಾದ-ವಿವಾದಗಳ ಪಾತ್ರದರ್ಶನಗಳಿಂದ ತಾಳಮದ್ದಳೆ ಕ್ಷೇತ್ರ ಅಕರ್ಷಣೆಯ ಕೇಂದ್ರವೆ ಆಯಿತು. ಸಂಘಟಣೆಯೆಂದರೆ ಅರ್ಥಧಾರಿಗಳನ್ನು ಕರೆಸಿ ಅರ್ಥ

೧೬. ಕಡತೋಕ ಮಂಜುನಾಥ ಭಾಗವತ - ಯಕ್ಷವನ ವಿಹಾರ - ಪು. ೧೬

ಹೇಳಿಸುವುದು. ಎನ್ನುವ ಪದ್ಧತಿ ರೂಢಿಯಾಯಿತು. ತಾಳಮದ್ದಳೆ ಸಂಘಟಣೆಗಳಿಗೆ ಜನ ಬೆಂಬಲವೂ ದೊರೆಯಿತು. ಸಾಗರದ ಸಿರಿವಂತೆ, ಯಲ್ಲಾಪುರ, ಸಿದ್ದಾಪುರ, ಶಿರಸಿ, ಕುಮಟ ಹೊನ್ನಾವಾರಗಳಲ್ಲಿ ಅಲ್ಲಲ್ಲಿ ಕೇಂದ್ರ ಸ್ಥಳಗಳಲ್ಲಿ ಇಂತಹ ತಾಳಮದ್ದಳೆಗಳು ಸಂಘಟಿಸಲ್ಪಟ್ಟವು. ಈ ಪ್ರತಿಭೆಗಳ ಪ್ರವೇಶದಿಂದ ಸ್ಥಳೀಯ ಹವ್ಯಾಸಿಗಳು ನೇಪಥ್ಯಕ್ಕೆ ಸರಿದರು. ಪ್ರೇಕ್ಷಕರ ನಿರೀಕ್ಷೆಯೂ ಬೆಳೆಯಿತು.

ತಾಳಮದ್ದಳೆಯ ಕಲೆಯನ್ನು ಸಂಶೋಧಿಸುವ ಶಾಸ್ತ್ರೀಯ ಶೋಧನೆಗಳು ದಾಖಲಿಸಿದ ವಿಕಾಸದ ಮಾರ್ಗವು ಭಿನ್ನಭಿನ್ನ ತಾರ್ಕಿಕ ಅಲೋಚನೆಯ ಫಲವಾಗಿದ್ದರೂ ವಾಸ್ತವಿಕವಾಗಿ ಜನರು ಯಕ್ಷಗಾನ ಬಯಲಾಟವನ್ನು ರಂಗಕಲೆಯಾಗಿಯೂ ತಾಳಮದ್ದಳೆಯನ್ನು ದೇವಾಲಯದ, ಮನೆಯ ಅಂಗಳದ ಕಲೆಯಾಗಿಯೂ ರೂಢಿಸಿಕೊಂಡಿದ್ದರು. ಕರಾವಳಿ, ಮಲೆನಾಡಿನ ವಿಶಾಲಮನೆಗಳಲ್ಲಿ ಜಗುಲಿಯ ಮೂಲೆಯಲ್ಲಿರುವ "ಹಕ್ಕೆಹೊಳ್ಳಿ" ಮತ್ತು ಮಣ್ಣಿನಿಂದ ಮಾಡಿದ ಮಂಚದಂತ (ಪಡಿಮಂಚ) ಎತ್ತರದ ವೇದಿಕೆಗಳು ಅಂದಿನ ತಾಳಮದ್ದಳೆಯ ವೇದಿಕೆಗಳಾಗಿದ್ದವು. ದೇವಾಲಯದ ವಾರ್ಷಿಕ ಪೂಜೆಗಳಾದ ಏಕದಾಶಿ ಪೂಜೆ, ಕಾರ್ತಿಕ ದೀಪೋತ್ಸವ, ಆರಾಧನೆಗಳಲ್ಲಿ ಸಾರ್ವಜನಿಕರು ಸೇರಿ ಪುರಾಣ ಶ್ರವಣ ಭಜನೆಗಳನ್ನು ಹಾಡಿ ಕುಣಿಯುವ ಪದ್ಧತಿಯ ಕ್ರಮದಲ್ಲಿ ತಾಳಮದ್ದಳೆಗಳು ಆರಂಭಗೊಂಡ ಸಂಗತಿಗಳು ಸಂಘಟನಾ ಕ್ರಮದಿಮದ ವೇದ್ಯವಾಗುತ್ತದೆ, ಉತ್ತರ ಕನ್ನಡದ ಕರಾವಳಿ ಮಲೆನಾಡಿನ ಭಾಗದಲ್ಲಿ ಪ್ರಚಲತವಿದ್ದ ಈ ಪದ್ಧತಿ ದಕ್ಷಿಣ ಕನ್ನಡದ ಕರಾವಳಿ ಮಲೆನಡಿನ ಭಾಗದಲ್ಲಿ ಪ್ರಚಲಿತವಿದ್ದ ಈ ಪದ್ಧತಿ ದಕ್ಷಿಣಕನ್ನಡದ ಹಾಗೂ ಕೇರಳದ ದಕ್ಷಿಣಭಾಗದ ದೇವಾಲಯಗಳಲ್ಲೂ ರೂಢಿಯಲ್ಲಿತು ಎಂಬುದು ಡಾ. ಮೋಹನ ಕುಂಟಾರರು ಯಕ್ಷಗಾನ ವಾಚಿಕಾಧ್ಯಯನದಲ್ಲಿ ದಾಖಲಿಸಿದ್ದಾರೆ.[೧೭]. ದೇವಾಲಯದಲ್ಲಿ ಸೇವೆಯಲ್ಲಿರುವ 'ಪಾಟಾಳಿಗಳು ಮತ್ತು ಪದಾರ್ಥಿಗಳು ಹಾಡುಗಾರರು, ಅರ್ಥಗಾರರು ಆಗಿದ್ದರೆಂದು ಊಹಿಸಿರುತ್ತಾರೆ.[೧೮]. ಶಿರಸಿಯ ಸ್ವರ್ಣವಲ್ಲಿ ಮಠದಲ್ಲಿ "ತಾಳಸೇವೆ" ಮಾಡಿದ ಭಾಗವತರಿಗೆ ತಾಂಬೂಲ ದಕ್ಷಿಣೆ ನೀಡಿದ ಉಲ್ಲೇಖಗಳು ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ಇಂದಿಗೂ ಈ ಪದ್ಧತಿ ಮುಂದುವರಿದುಕೊಂಡು ಬಂದಿದೆ. ದೇವಲಯಗಳು ಮಠಗಳು ತಾಳಮದ್ದಳೆ ಸೇವೆಯನ್ನು ಅಂಗೀಕರಿಸಿದ್ದವು. ಯಕ್ಷಗಾನ ಬಯಲಾಟದ ವೇಷಗಾರಿಕೆಯಲ್ಲಿ ಎಲ್ಲ ಜನಾಂಗದವರಿಗೆ ಅವಕಾಶವಿದ್ದರೂ ತಾಳಮದ್ದಳೆ ಸುಶಿಕ್ಷಿತರಿಗೆ ಮಾತ್ರ ಮೀಸಲಾಗಿತ್ತು.

ಹವ್ಯಕರು ತಾಳಮದ್ದಳೆ ಕೂಟಗಳನ್ನು ಬಹಳ ಹಿಂದಿನಿಂದಲೂ ನಡೆಸಿಕೊಂಡು ಬಂದವರಾಗಿದ್ದಾರೆ. ಸುಮಾರು ಎರಡು ನೂರು ವರ್ಷಗಳ ಇತಿಹಾಸವಿರುವ ತಾಳಮದ್ದಳೆ ಕೂಟಗಳನ್ನು ಇಂದಿಗೂ ಈ ತಲೆಮಾರಿನವರು ನಡೆಸಿಕೊಂಡು ಬರುತ್ತಿದ್ದಾರೆ. ಅವು,

೧) ಪ್ರಥಮ ಏಕಾದಶಿಯಿಂದ ಮೋಹಿನಿ ಏಕಾದಶಿಯ ವರೆಗಿನ ಏಕಾದಶಿಯಂದು ನಡೆಸುವ ತಾಳಮದ್ದಳೆಗಳು.

೨) ನವರಾತ್ರಿ ತಾಳಮದ್ದಳೆಗಳು.

---

೧೭. ಡಾ. ಮೋಹನ ಕುಂಟಾರ – ಯಕ್ಷಗಾನ ವಾಚಿಕಾಧ್ಯಯನ – ಪುಟ ೮

೧೮. ಡಾ. ಮೋಹನ ಕುಂಟಾರ – ಯಕ್ಷಗಾನ ವಾಚಿಕಾಧ್ಯಯನ – ಪುಟ ೭

೩) ವಿಶೇಷ ಪರ್ವದಿನ, ಹಬ್ಬಹರಿದಿನ, ಜಾತ್ರೆಮಹೋತ್ಸವಗಳ ತಾಳಮದ್ದಳೆ ಸೇವೆಗಳು,

ಎಂದು ಮೂರು ಪ್ರಮುಖ ಕಾಲ ನಿರ್ಣಯ ಆಚರಣೆ ವಾರ್ಷಿಕವಾಗಿ ನಡೆಯುತ್ತಲೆ ಬಂದಿವೆ. ಇಂತಹ ಕಲಾಸೇವೆಗಳು ದೇವಾಲಯದ ಮೊಕ್ತೆಸ್ತರರು, ಪಾರುಪತ್ಯಗಾರರು, ಆಡಳಿತ ಮಂಡಳಿಗಳು ಸೇವಾ ಪ್ರಮುಖರು ಹಾಗೂ ಗಣ್ಯ ವ್ಯಕ್ತಿಗಳಿಂದ ಸಂಘಟಿತವಾಗುತ್ತಿದ್ದವು.

೫.೯. ಪ್ರಮುಖ ಹವ್ಯಕ ತಾಳಮದ್ದಳೆ ಸಂಘಟನೆಗಳು

೫.೯.೧. ಶ್ರೀ ಮಹಾಗಣಪತಿ ಯಕ್ಷಗಾನ ಕಲಾಸಂಘ, ದೊಡ್ಡಬಾಳೆ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಆವಿನಹಳ್ಳಿ ಹೋಬಳಿಯಲ್ಲಿರುವ ಉದ್ರೆಗ್ರಾಮದಲ್ಲಿ ದೊಡ್ಡಬಾಳೆ ಒಂದು ಪುಟ್ಟ ಹಳ್ಳಿಯಾಗಿದೆ. ಜೀವನಾವಶ್ಯಕ ಸೌಕರ್ಯಗಳಿಂದಲೂ ವಂಚಿತವಾಗಿರುವ ಊರು ಇದಾಗಿತ್ತು. ಇಂತಹ ಹಳ್ಳಿಯಲ್ಲಿ ಎರಡುವರೆ ದಶಕಗಳ ಹಿಂದೆ ಕಲಾ ಸಂಘವು ಉದಯಿಸಿತ್ತು. ಸಾಗರದ ಪಡವಗೋಡಿನ ಅಮಚಿ ಮೂಲದವರಾದ ಸುಬ್ರಾಯರು ಈ ಸಂಘಟನೆಯನ್ನು ಆರಂಭಿಸಿದರು. ಇವರ ಮನೆಯೇ ತಾಳಮದ್ದಳೆಯ ಪ್ರದರ್ಶನ ಕೇಂದ್ರವಾಯಿತು. ವಿ.ಪಿ.ಗಣಪತ್‌ರಾವ್, ತುಂಬ್ರಿ, ದಿ.ಶಿವರಾಮಯ್ಯ, ಡಿ.ಎಸ್.ಗಜಾನನ (ಮೃದಂಗವಾದಕ) ಬಿ.ಎಸ್. ಶ್ರೀಧರ ಬೆಳೆಯೂರು ಕೃಷ್ಣಮೂರ್ತಿ (ಯಕ್ಷಗಾನ ವೃತ್ತಿ ಕಲಾವಿದ) ತುಂಬ್ರಿ ನಾರಾಯಣಪ್ಪ, ಎಮ್.ಎಸ್. ಮಂಜಪ್ಪ ಅರ್ಥಧಾರಿಗಳಾಗಿ ೧೯೭೬ರಲ್ಲಿ ತಾಳಮದ್ದಳೆ ಕೂಟ ಹಬ್ಬಹರಿದಿನಗಳಂದು ಪ್ರದರ್ಶನ ಏರ್ಪಡಿಸಿತು. ತಾಳಮದ್ದಳೆಗೆ ಆಗಮಿಸಿದ ಸರ್ವರಿಗೂ ಊಟ,ತಿಂಡಿಯ ಆತಿಥ್ಯವನ್ನು ಒದಗಿಸಲಾಗುತ್ತಿತ್ತು. ಪ್ರಸಿದ್ದ ಅರ್ಥಧಾರಿ ಕೆ.ಕೆ.ಮಧ್ಯಸ್ಥರು ಕಲಾವಿದರಾಗಿ, ಅಮಚಿ ಎ.ಎಸ್.ಮಹಾಬಲಗಿರಿ ಯುವಭಾಗವತರಾಗಿ, ವಿ.ಪಿ.ಗಣಪತ್‌ರಾಯರಿಗೆ ಸಹಕರಿಸಿದರು. ಇನ್ನೊಬ್ಬ ಭಾಗವತ ಅಂಬಾರಗೊಡ್ಲ ಎ.ಟಿ. ಯಜ್ಞೇಶ್ವರ ಇವರು ಅಲ್ಲದೆ ಅನೇಕ ಯುವಕರು ತಾಳಮದ್ದಳೆಯಿಂದ ಆಕರ್ಷಿತರಾದರು. ಶ್ರೀ ಎ.ಟಿ.ರಾಮಕೃಷ್ಣ, ಎ.ಟಿ.ಚಕ್ರಪಾಣಿ ಎ.ಟಿ.ಸತೀಶ್, ಎ.ಟಿ.ರಮೇಶ, ಎ.ಟಿ.ಪ್ರಕಾಶ, ಪ್ರಶಾಂತಮಧ್ಯಸ್ಥ, ಗುರುನಂದನ ಹೊಸೂರು ಮಹಾಬಲಭಟ್ಟ, ಅನೇಕರು ಕಲಾವಿದರಾಗಿ ಸೇರ್ಪಡೆಗೊಂಡರು. ಯುಗಾದಿಯಿಂದ ರಾಮನವಮಿ ತನಕ ಸಪ್ತಾಹಗಳು ನಡೆದವು. ಉಡುಪಿಯ ಯಕ್ಷಗಾನ ಕಲಾರಂಗದ ಸ್ಪರ್ದೆಯಲ್ಲಿ ಸಂಘವು ಭಾಗವಹಿಸಿ ಬಹುಮಾನಗಳಿಸಿದೆ. ಅನೇಕ ಕಷ್ಟನಷ್ಟ, ಕುಹಕ, ನೋವನ್ನು ಅನುಭವಿಸಿಯೂ ಇಂದಿಗೂ ಸಂಘವು ಮುನ್ನಡೆಯುತ್ತಿದೆ.[೧೯]

೫.೯.೨. ಉಮಾಮಹೇಶ್ವರ ಕಲಾವರ್ದಕ ಸಂಘ ಹೊಸಾಕುಳಿ ತಾ ಹೊನ್ನಾವರ : ೧೯೮೦ರ ಮೇ ತಿಂಗಳಿನಲ್ಲಿ ತಗಟಗೇರಿಯ ಯು.ಎಸ್.ಹೆಗಡೆ ಈ ಸಂಘವನ್ನು ಸ್ಥಾಪಿಸಿದರು. ಶ್ರೀಬೋಳ್ತಟ್ಟೆ ಗಣೇಶ ಶಾಸ್ತ್ರಿ ಶ್ರೀ.ಎಸ್.ಎಮ್.ಹೆಗಡೆ ಮುಡಾರೆ ಜಿ.ವಿ. ಹೆಗಡೆ ಗುಮ್ಮೇಕೇರಿ ಗುಡ್ಡೆಬಾಳು ಗೋವಿಂದ ಭಟ್, ಮೇಲಿನಗಂಟೆಗೆ ಸುಬ್ರಹ್ಮಣ್ಯ (ಭಾಗವತರು) ಕಪ್ಪೆಕೆರೆ ಮಾದೇವ ಹೆಗಡೆ, ಹಿರೇಮಕ್ಕಿ ವಿಷ್ಣುಹೆಗಡೆ (ಭಾಗವತರು) ಪೆರ್ಮನೆ ಗಜಾನನ ಹೆಗಡೆ, ದತ್ತಭಟ್, ಪಿ.ಕೆ.ಹೆಗಡೆ, ಇಡಗುಂಜಿ ಕೃಷ್ಣಯಾಜಿ (ಮೃದಂಗ) ನಿಲ್ಕೋಡ ವಿಷ್ಣುಭಟ್ಟರು, ಜಿ.ಕೆ.ಹಗಡೆ ಹರಿಕೇರಿ, ಎಸ್.ಐ ಹೆಗಡೆ ಲಕ್ಷ್ಮೀಕಾಂತ ಹೆಗಡೆ ಕೊಂಡದಕುಳಿ ಮೇಲಿನಗಂಟಗೆ ನಾರಾಯಣ ಭಟ್, ಕೊಂತಪಾಲ ಗಪ್ಪುಭಟ್ಟ, ಹಡಿನಬಾಳ ಶ್ರೀಪಾದಹೆಗಡೆ

೧೯. ಯಕ್ಷಗಾನ ಅನುಭವಬಿಂದು – ಬೆಳ್ಳಿ ಹಬ್ಬದ ಸ್ಮರಣಸಂಚಿಕೆ – ಪುಟ ನಂ ೧೧

(ಪ್ರಸಿದ್ಧ ಕಲಾವಿದ) ಇವರೆಲ್ಲ ಅರ್ಥಧಾರಿಗಳಾಗಿದ್ದರು.

ಸಂಘಕ್ಕೆ ಯಾವುದೇ ಸಹಾಯಧನವಿಲ್ಲದೆ ಇದುವರೆಗೂ ಅಷಾಡ ಶುದ್ದ ಏಕಾದಶಿಯಿಂದ ಕಾರ್ತಿಕ ಶುದ್ದ ಏಕಾದಶಿಯವರೆಗೆ ನಿರಂತರವಾಗಿ ನಡೆದುಕೊಂಡು ಬಂದಿದೆ. ಸಪ್ತಾಹ, ಉಪನ್ಯಾಸ, ಪ್ರಾತ್ಯಕ್ಷಿಕೆಗಳನ್ನು ಸಂಘ ಏರ್ಪಡಿಸುತ್ತಾ ಬಂದಿದೆ. "ಪಾದುಕಾ ಕಿರೀಟ" ಎಂಬ ಧ್ವನಿ ಸುರುಳಿ ಬಿಡುಗಡೆಯಾಗಿದೆ. ಖ್ಯಾತ ಕಲಾವಿದರಾದ ಕಣ್ಣಿಗಣಪತಿಭಟ್, ಲಕ್ಷ್ಮೀಕಾಂತ ಹೆಗಡೆ ಕೊಂಡದಕುಳಿ ಇಲ್ಲಿಯೇ ಪರಿಣತರಾದವರಾಗಿದ್ದಾರೆ.

೫.೯.೩. ತಡಗುಣಿ ತಾಳಮದ್ದಳೆ ಪರಂಪರೆ : ಶಿರಸಿ ತಾಲ್ಲೂಕಿನ ತಡಗುಣಿ ಒಂದು ಊರು. ವೆ. ಮೂ. ಮಂಜುನಾಥ ಸುಬ್ರಾಯ ಭಟ್ಟರು ಈಗಿನ ಸಂಘಟಕರು. ಸುಮಾರು ೨೦೦ ವರ್ಷಗಳಿಂದ ತಾಳಮದ್ದಳೆ ನಿರಂತರವಾಗಿ ಪ್ರತಿ ವರ್ಷ ವಿಜಯ ದಶಮಿಯಂದು ನಡೆದುಕೊಂಡು ಬಂದಿದೆ. ಪ್ರಸಿದ್ಧ ಕಲಾವಿದರೆಲ್ಲ ಇದರಲ್ಲಿ ಪಾಲ್ಗೊಂಡಿದ್ದಾರೆ. ಈ ಮನೆಯ ಯಜಮಾನ ಈ ತಾಳಮದ್ದಳೆಯನ್ನು ವಾರ್ಷಿಕ ಕಾರ್ಯವಾಗಿ ಧಾರ್ಮಿಕ ಕಾರ್ಯದಂತೆ ನಡೆಸುಕೊಂಡು ಬರುತ್ತಿದ್ದಾರೆ. "ತುಡುಗುಣಿ ತಾಳಮದ್ದಳೆ ಪರಂಪರೆ" ಕುರಿತು ಪುಸ್ತಕವನ್ನು ಅಶೋಕ ಹಾಸ್ಯಗಾರರು ಸಂಪಾದಿಸಿದ್ದಾರೆ.[೨೦]

೫.೯.೪. ಅಭಿನವ ತಾಳಮದ್ದಳೆ ಕೂಟ ಪುಟ್ಟನ ಮನೆ ನೂರು ವರ್ಷ ಇತಿಹಾಸವಿರುವ ಈ ಸಂಘಟನೆ ಒಂದು ವರ್ಷ ಪ್ರತಿ ರವಿವಾರದಂದು ಯಕ್ಷಗಾನ ತಾಳಮದ್ದಳೆ ಆಯೋಜಿಸುತ್ತಾ ಬಂದಿದೆ. ಜಿಲ್ಲೆಯ, ಹೊರ ಜಿಲ್ಲೆಯ ಪ್ರಸಿದ್ದರೆಲ್ಲ ಈ ತಾಳಮದ್ದಳೆಗೆ ಭಾಗವಹಿಸಿದ್ದಾರೆ. ಕೂಟವು ಯಕ್ಷಗಾನ ತಾಳಮದ್ದಳೆಯನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ನೀಡುತ್ತಿದೆ.

೫.೯.೫. ಸಿದ್ದಿವಿನಾಯಕ ಯಕ್ಷಕಲಾ ಬಳಗ, ಕಾರಣಗಿರಿ ಆರು ವರ್ಷಗಳಿಂದ ನಿರಂತರವಾಗಿ ಪಾಕ್ಷಿಕ ತಾಳಮದ್ದಳೆಯನ್ನು ಸಿದ್ದಿವಿನಾಯಕ ದೇವಾಲಯದಲ್ಲಿ ಏರ್ಪಡಿಸುತ್ತಾ ಬಂದಿದೆ. ಸುಧಾಕರ ನಾಗರ ಕೂಡಿಗೆ, ಎಚ್. ಎಸ್. ಕೃಷ್ಣಮೂರ್ತಿ, ಶ್ರೀಧರ ಮಳಲಿ, ರಮೇಶ್, ಲಕ್ಷ್ಮೀನಾರಾಯಣ, ಗಜಾನನ ಇವರೆಲ್ಲ ಕಲಾವಿದರಾಗಿದ್ದಾರೆ.[೨೧]

೫.೯.೬. ಕಲಾ ಭಾಸ್ಕರ (ರಿ). ಇಟಗಿ ಸಿದ್ದಾಪುರ ಅನೇಕ ವರ್ಷಗಳಿಂದ ಯಕ್ಷಗಾನ ಸಪ್ತಾಹ, ತಾಳಮದ್ದಳೆ ಸಪ್ತಾಹವನ್ನು ನಡೆಸಿಕೊಂಡು ಬಂದಿದೆ. ನಾಡಿನ ಖ್ಯಾತ ಯಕ್ಷಗಾನ ಕಲಾವಿದರೆಲ್ಲ ತಾಳಮದ್ದಳೆಯಲ್ಲಿ ಪಾಲ್ಗೊಂಡಿದ್ದಾರೆ.

೫.೯.೭. ಮಾಗೋಡು ಕಲಾವೇದಿಕೆ ಮುಖ್ಯಪ್ರಾಣ ಪ್ರಸನ್ನ ಯಕ್ಷಗಾನ ಸಾಂಸ್ಕೃತಿಕ ಕಲಾವೇದಿಕೆ (ರಿ). ಅನೇಕ ವರ್ಷಗಳಿಂದ ತಾಳಮದ್ದಳೆ ಸೇವೆಯನ್ನು ನಡೆಸಿಕೊಂಡು ಕಲಾವಿದರಿಗೆ ಸನ್ಮಾನ, ಮುಂತಾದ ಕಾರ್ಯಕ್ರಮವನ್ನು ಆಯೋಜಿಸುತ್ತಾ ಬಂದಿದೆ. ಶ್ರೀ ಮಾಗೋಡು ರಾಮಹೆಗಡೆ (ಯಕ್ಷಗಾನ ಮೇಳ ಸಂಘಟಕ ಕಲಾವಿದ) ಈಸಂಘಟನೆಯನ್ನು ನಡೆಸಿಕೊಂಡು ಬಂದಿದ್ದಾರೆ.

---

೨೦. ಯಕ್ಷರಂಗ ನ. ೨೦೧೧ – ಪು.೩೩.
೨೧. ಯಕ್ಷರಂಗ ಪು. ೩೪ ಜ. ೨೦೧೧

೫.೯.೮. ಶ್ರೀ ತ್ರಿಪುರಾಂತಕೇಶ್ವರ ಯಕ್ಷಗಾನ ಕಲಾಸಂಘ ಸಿರಿವಂತೆ ನಾಲ್ಕು ದಶಕಗಳಿಂದ ಯಕ್ಷಗಾನ ತಾಳಮದ್ದಳೆ ಸಂಘಟಣೆಯಲ್ಲಿ ತೊಡಗಿಕೊಂಡಿರುವ ಸಂಘವಿದಾಗಿದೆ. ಸಂಘದ ಸಂಚಾಲಕರು ಡಿ.ವಿ.ಶಿವರಾಮಯ್ಯನವರು, ನಿರಂತರವಾಗಿ ಚಾತುರ್ಮಾಸ ಏಕಾದಶಿ ತಾಳಮದ್ದಳೆಯನ್ನು ನಡೆಸಿಕೊಂಡು ಬಂದಿದ್ದಾರೆ. ದಕ್ಷಿಣೋತ್ತರ ಕನ್ನಡ ಪ್ರಸಿದ್ದ ಅರ್ಥಧಾರಿಗಳನ್ನು ಕರೆಸಿ ತಾಳಮದ್ದಳೆ ನಡೆಸಿದರು. ಶೇಣಿಯವರು ಸಿರಿವಂತೆ ತಾಳಮದ್ದಳೆಯ ಮೂಲಕ ಸಾಗರದ ಜನರಿಗೆ ಅರ್ಥವೈಭವ ತೋರಿದರು.

೫.೯.೯. ಶ್ರೀ ದುರ್ಗಾಪರಮೇಶ್ವರಿ ಯಕ್ಷಗಾನ ಕಲಾಸಂಘ ಬೆಂಕ್ಟವಳ್ಳಿ, ಸಾಗರ ಇಪ್ಪತ್ತು ವರ್ಷಗಳಿಂದ ಚಾತುರ್ಮಾಸ್ಯ, ಏಕಾದಶಿ ತಾಳಮದ್ದಳೆಯನ್ನು ಹಾಗೂ ವಿಶೇಷ ತಾಳಮದ್ದಳೆಗಳನ್ನು ನಡೆಸುತ್ತಾ ಬಂದಿದೆ. ಈಗಲೂ ಕ್ರಿಯಾಶೀಲವಾಗಿಯು ಉಳಿದುಕೊಂಡಿದೆ. ಬಿ.ಪಿ.ಅರುಣ ಈ ಸಂಘದ ಸಂಚಾಲಕರಾಗಿದ್ದು ಇವರು ಉತ್ತಮ ಅರ್ಥಧಾರಿಗಳು ಹೌದು.

೫.೯.೧೦ ಯಕ್ಷತಾರಾ ಬಳಗ ಸಾಗರ ಎಂಟು ವರ್ಷಗಳಿಂದ ಮಹಿಳಾ ತಾಳಮದ್ದಳೆಯನ್ನು ಸಂಘಟಿಸುತ್ತಾ ಬಂದಿದೆ. ಈ ಸಂಘಟನೆಯ ನಿರ್ದೇಶಕರು ಗುರುನಂದನ ಹೊಸೂರು,

೫.೯.೧೧. ಭಾರತಿ ಯಕ್ಷಗಾನ ಕಲಾಸಂಘ ಹೊಸೂರು ಯಕ್ಷಗಾನ ಹಿತ ಚಿಂತನಾ ವೇದಿಕೆ ಸಾಗರ ಈ ವೇದಿಕೆಯಲ್ಲಿ ಪುರುಷರು ಮತ್ತು ಮಹಿಳೆಯರು ಜೊತೆಯಾಗಿ ತಾಳಮದ್ದಳೆಯನ್ನು ನಡೆಸುತ್ತಾ ಬಂದಿರುತ್ತಾರೆ. ತಾಳಮದ್ದಳೆ ಸ್ಪರ್ಧೆ, ವಿಚಾರ ಸಂಕಿರಣಗಳನ್ನು ಏರ್ಪಡಿಸುತ್ತಾ ಬಂದಿರುತ್ತಾರೆ.

೫.೯.೧೨. ಯಕ್ಷವಾಹಿನಿ ಬ್ಯಾಕೋಡು ಈ ಸಂಘದ ನಿರ್ದೇಶಕರು ಕೆ.ಕೆ. ಮಧ್ಯಸ್ಥರಾಗಿರುತ್ತಾರೆ.

೫.೯.೧೩. ಸಂಕಲನ ಬಚ್ಚಗಾರು : ಬಚ್ಚಗಾರಿನ ಸಂಕಲನ ಅಪರೂಪದ ಸಾಂಸ್ಕೃತಿಕ ಸಂಘಟಣೆಯಾಗಿದೆ. ಸುಮಾರು ಹದಿನೈದು ವರ್ಷಗಳಿಂದ ಶ್ರೀ ಶುಂಠಿ ಸತ್ಯನಾರಾಯಾಣ ಭಟ್ಟರು ನಡೆಸಿಕೊಂಡು ಬಂದಿದ್ದಾರೆ. ಇವರು ಯಕ್ಷಗಾನ ಮೇಳ ಸಂಘಟಕರೂ ಆಗಿದ್ದರು. ಇವರ ಸಂಘಟಣೆಯಲ್ಲಿ (೧೯೯೮) ಮಹಾಗಣಪತಿ ಯಕ್ಷಗಾನ ಮಂಡಳಿ ಬಚ್ಚಗಾರು ಸರ್ವಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ, ಶ್ರೀಕೆರೆಮನೆ ಮಹಾಬಲಹೆಗಡೆ, ಶ್ರೀಮಂಟಪ ಪ್ರಭಾಕರ ಉಪಾಧ್ಯಾಯ ಇಂತಹ ಅನೇಕ ಮೇರು ಕಲಾವಿದರಿಂದೊಡಗೂಡಿ ಮೂರು ವರ್ಷ ಕಾಲ ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಅಮೋಘ ಪ್ರದರ್ಶನ ನೀಡಿತು. ೧೯೭೧-೮೫ರವರೆಗೆ ಶುಂಠಿ ಸತ್ಯನಾರಾಯಣ ಭಟ್ಟರು ಅಮೃತೇಶ್ವರೀ ಮೇಳದ ಮ್ಯಾನೇಜರ್ ಆಗಿ ಸಂಘಟಿಸಿದರು. ಇವರ ಸಂಕಲನದ ಏಕವ್ಯಕ್ತಿ ಸಂಘಟಿಕರಾಗಿದ್ದಾರೆ. ದಕ್ಷಿಣೋತ್ತರ ಕನ್ನಡದ ಪ್ರಸಿದ್ಧ ಕಲಾವಿದರನ್ನೆಲ್ಲ ಒಗ್ಗೂಡಿಸಿ ಪ್ರದರ್ಶನ ಏರ್ಪಡಿಸಿದ್ದಾರೆ. ಎಪ್ಪತ್ತರ ಇಳಿವಯಸ್ಸಿನಲ್ಲೂ ಯಕ್ಷಗಾನ ಸಂಘಟಣೆಗಾಗಿ ಸದಾ ಜಾಗೃತರಾಗಿ ಸಂಚರಿಸುತ್ತಿದ್ದರೆ.

ಇಂತಹ ಸಾಧನೆಯನ್ನು ಪ್ರತಿ ಸಂಘಟಣೆಯಲ್ಲೂ ಕಾಣಬಹುದಾಗಿದೆ. ಸಂಘಟನೆಯ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿದರೆ ಇನ್ನೊಂದು ಸಂಶೋಧನೆಗೂ ವಸ್ತುವಾಗಬಹುದು. ಯಕ್ಷಗಾನ ಸಂಘಟನೆಯ ಕುರಿತು ಪ್ರತ್ಯೇಕ ಅಧ್ಯಯನ ನಡೆಯಬೇಕಾದ ಅವಶ್ಯವಿದೆ. ಇವುಗಳ ಮಾಹಿತಿಗಳು ವಿಫುಲವಾಗಿದ್ದರೂ ಎಲ್ಲ ಸಂಘಟನೆಗಳ ಕುರಿತಾದ ವಿವರಣೆಯನ್ನು ಮಿತಿಗೊಳಿಸಿ ಕೇವಲ ಪ್ರಮುಖ ಸಂಘಟನೆಗಳನ್ನು ಮಾತ್ರ ಹೆಸರಿಸಲಾಗಿದೆ.

೫.೧೦. ಇತರ ಪ್ರಸಿದ್ಧ ಸಂಘಟನೆಗಳು

೧) ಸೇವಾರತ್ನ ಫೌಂಡೇಶನ್, ಕಾನಸೂರು, ಸಿದ್ದಾಪುರ

೨) ರಾಮೇಶ್ವರ ದೇವ ಪ್ರತಿಷ್ಠಾನ

೩) ಯಕ್ಷಸಂಭ್ರಮ, ಸಿರ್ಸಿ

೪) ಅಭಿನವ ತಾಳಮದ್ದಳೆ ಕೂಟ, ಪುಟ್ಟನ ಮನೆ

೫) ವಿದ್ಯಾ ಗಣಪತಿ ತಾಳಮದ್ದಳೆ ಕೂಟ, ಮೈಸೂರು

೬) ರಂಗ ಬಳಗ, ಮತ್ತಿಘಟ್ಟ

೭) ಸದ್ಗುರು ಕೃಪಾಶ್ರಿತ ಯಕ್ಷ ಕೂಟ,ಹಡಿನಬಾಳು

೮) ಕಲಾ ಕಿರಣ ತಾಳಮದ್ದಳೆ ಕೂಟ ಬೆಳಸಲಿಗೆ

೯) ಶ್ರೀ ಸಿದ್ಧಿವಿನಾಯಕ ದುರ್ಗಾಂಬಾ ಯಕ್ಷಗಾನ ಮಂಡಳಿ, ಹುಕ್ಲಮಕ್ಕಿ

೧೦) ಮೈತ್ರಿ ಕಲಾ ಬಳಗ, ತೇಲಂಗಾರ

೧೧) ಮುಖ್ಯಪ್ರಾಣ ಪ್ರಸನ್ನ ಯಕ್ಷಗಾನ, ಸಾಂಸ್ಕೃತಿಕ ಕಲಾ ವೇದಿಕೆ (ರಿ.), ಸಾಗರ ಮಾಗೋಡು ರಾಮ ಹೆಗಡೆಯವರಿಂದ ನಿರಂತರವಾಗಿ ೫ ವರ್ಷಗಳಿಂದ ತಾಳಮದ್ದಳೆ ಸಂಘಟನೆಗೊಳ್ಳುತ್ತಿದೆ.

೧೨) ಅಭಿನವ ತಾಳಮದ್ದಳೆ ಕೂಟ,ಪುಟ್ಟನ ಮನೆ ಸಿರ್ಸಿ

೧೩) ಭವತಾರಿಣಿ ಸೀಮಾ ಪರಿಷತ್, ಶ್ರೀ ಸಶಿವ ಶಾಂತಿಕಾ ಪರಮೇಶ್ವರಿ ಯಕ್ಷಗಾನ ಸಾಂಸ್ಕೃತಿಕ ಕಲಾ ಸಂಘ, ಭಟ್ಕಳ

೧೪) ಶ್ರೀ ಭಾರತಿ ಕಲಾಮಂಡಳಿ, ಹೊಸೂರು

೧೫) ಯಕ್ಷತಾರ ಕಲಾಬಳಗ, ಸಾಗರ

೧೬) ಯಕ್ಷ ಸಂಭ್ರಮ, ವಾನಳ್ಳಿ, ಸಿರ್ಸಿ

೧೭) ಶಿವಶಾಂತಿಕ ಪರಮೇಶ್ವರಿ ಯಕ್ಷಗಾನ ಕಲಾವರ್ಧಕ ಸಂಘ, (ಏಕಾದಶಿ ಕಲಾವರ್ದಕ ಸಂಘ)

೧೮) ಸ್ನೇಹಕೂಟ, ಹೊಸಾಕುಳಿ

೧೯) ಪ್ರಿಯದರ್ಶನ ಯಕ್ಷಗಾನ ತಾಳಮದ್ದಳೆ ಮಿತ್ರಸಂಘದ, ಮೈಸೂರು

೨೦) ಮುಖ್ಯಪ್ರಾಣ ಪ್ರಸನ್ನ ಯಕ್ಷಗಾನ ಸಾಂಸ್ಕೃತಿಕ ಕಲಾವೇದಿಕೆ (ರಿ.), ಗೇರುಸೊಪ್ಪ

೨೧) ಪಂಚಲಿಂಗೇಶ್ವರ ಲಕ್ಷ್ಮೀನಾರಾಯಣ ಕೃಪಾಶ್ರಿತ ಯಕ್ಷಗಾನ ತಾಳಮದ್ದಳೆ ಕೂಟ ಶಿವಳ್ಳಿ, ಪಂಚಲಿಂಗ ಶಿರ್ಸಿ.

೨೨) ರಾಮೇಶ್ವರ ಹವ್ಯಾಸಿ ಕಲಾತಂಡ, ಕರುಮನೆ, ಕಾರ್ಗಲ್.

೨೩) ಶಾಂಭವಿ ಸ್ವ ಸಹಾಯ ಸಂಘ, ಮಡವಿ ಅಡುಮನೆ, ನಿಟ್ಟೂರು.

೨೪) ಪಾಂಚಜನ್ಯ ಕಲಾವೇದಿಕೆ, ಅಂಬಾರಕೊಡ್ಲು, ಸಾಗರ

೨೫) ಮಂಡಲಮನೆ ವಿನಾಯಕ ಕಲಾಬಳಗ, ಹೊಸೂರು, ವರದಾಮೂಲ, ಸಾಗರ

೨೬) ಶ್ರೀ ಭಾರತಿ ಯಕ್ಷ ಮಿತ್ರ ಮಂಡಳಿ, ಬೇಳೂರು ಸಾಗರ

೨೭) ಶಂಕರ ನಾರಾಯಣ ಮಿತ್ರ ಮಂಡಳಿ, ಹೊಸಕೊಪ್ಪ, ದಿಡ್ಡೇರಿ, ಸೊರಬ

೨೮) ಹವ್ಯಾಸಿ ಯಕ್ಷಗಾನ ತಾಳಮದ್ದಳೆ ಬಳಗ, ನಿಟ್ಟೂರು, ಹೊಸನಗರ.

೨೯) ಪ್ರಜ್ಞಾಭಾರತಿ ಕಲಾಬಳಗ, ಶ್ರೀನಗರ, ಸಾಗರ

೩೦) ಯಕ್ಷ ಶುಭೋಧಯ ಶಿರಸಿ, ತಾಳಮದ್ದಲೆ ಸಂಘಟನೆ.

೩೧) ಶ್ರೀ ಮಾತಾವಿಷ್ಣು ಯಕ್ಷಮಿತ್ರ ಮಂಡಳಿ. ಬಂಡಿವಾಳ ಕುಮಟಾ

೩೨) ಶ್ರೀತ್ರಿಪುರಾಂತಕೇಶ್ವರ ಯಕ್ಷಗಾನ ಕಲಾ ಸಂಘ, ಸಿರಿವಂತೆ.

ದಕ್ಷಿಣಕನ್ನಡ, ಉಡುಪಿ, ಕಾಸರಗೋಡಿನ ಸಂಘಟನೆಗಳು

೧) ಯಕ್ಷದೇವ ಮಿತ್ರ ಕಲಾಮಂಡಳಿ, ಬೆಳುವಾಯಿ

೨) ಮುಳಿಯ ಗೋವಿಂದ ಭಟ್ ಮತ್ತು ಕಲಾ ಬಳಗ

೩) ಮಹಾಲಿಂಗೇಶ್ವರ ಯಕ್ಷಗಾನ ಸಂಘ, ವೇಣೂರು.

೪) ಜನಾರ್ಧನ ಸ್ವಾಮಿ ಯಕ್ಷಕಲಾ ತಂಡ,ಉಜಿರೆ

೫) ಯಕ್ಷ ವೇದಿಕೆ, ಪಡಿಬಾಗಿಲು ವಿಟ್ಲ

೬) ಆಂಜನೇಯ ಯಕ್ಷಗಾನ ತಂಡ, ಪುತ್ತೂರು.

೭) ಯುಗಾದಿ ಸಂಸ್ಕೃತಿ ವೇದಿಕೆ, ಮಂಗಳೂರು

೮) ಯಕ್ಷ ತಾಳ ಮದ್ದಳೆ ಮೇಳ-ಕೂಟ. ಸಂದರ್ಶನ ಉರಾಳರ ಸಂಯೋಜನೆ.

೫.೧೧. ಮಹಿಳಾ ಸಂಘಟನೆಗಳು

ಯಕ್ಷಗಾನ 'ವೇಷ' ಮಾಡುವುದು ಎನ್ನುವುದರಲ್ಲೆ ಕಲಾವಿದನೊಬ್ಬ ಪ್ರಾತ್ರಾಭಿವ್ಯಕ್ತಿಗಾಗಿ ಆಂಗಿಕ ಆಹಾರ್ಯ, ಸಾತ್ವಿಕ, ವಾಚಿಕ ಅಭಿನಯ ಕುಣಿತಗಳ ಮೂಲಕ ವಿಶೇಷ ವ್ಯಕ್ತಿತ್ವವನ್ನು ಆರೋಪಿಸಿಕೊಳ್ಳುತ್ತಾನೆ. ಎಂಬರ್ಥ ವಿದಿತವಾಗುತ್ತದೆ. ಕಲಾವಿದನ ಕಲೆ ಅಂತಸ್ತವಾಗಿದ್ದು ಅನಾವರಣಗೊಳ್ಳುತ್ತದೆ. ಅದಕ್ಕೆ ಪೂರಕವಾಗಿಯೇ ವೇಷ-ಭೂಷಣವಾಗುತ್ತದೆ. ಸರ್ವಾಂಗವು ಪಾತ್ರ ಪೋಷಣೆಗೆ ತಕ್ಕದಾದ ಆವರಣವನ್ನೆ ರೂಪಿಸಿಕೊಳ್ಳಬೇಕಾಗುತ್ತದೆ. ರಸಾಭಿವ್ಯಕ್ತಿ, ಭಾವಾಭಿವ್ಯಕ್ತಿಗೆ ಸಹಜ ಶರೀರದ ಸಾಮರ್ಥ್ಯಕ್ಕೂ ಮೀರಿದ ಬಲ ಕಲೆಯೊಂದಿಗೆ ಮಿಳಿತವಾಗಬೇಕು. ಕಂಠತ್ರಾಣ, ಗಟ್ಟಿಮುಟ್ಟಾದ ಮೈಕಟ್ಟು, ಮುಖವರ್ಣಿಕೆಗೆ ಸೂಕ್ತವಾದ ವದನ, ಗತ್ತು ಗಾಂಭೀರ್ಯಗಳ ಅಭಿವ್ಯಕ್ತಿಗೆ ತಕ್ಕದಾದ ಶರೀರ ಸಂರಚನೆಗಳು ಯಕ್ಷಗಾನ ಪಾತ್ರಾಭಿವ್ಯಕ್ತಿಗೆ

ಅವಶ್ಯವಾಗಿದೆ. ಕೇವಲ ರಂಗವಷ್ಟೇ ಅಲ್ಲದೆ ಮಾತಿನ ವೇದಿಕೆಗೂ ವೇಷಭೂಷಣವಿಲ್ಲದಿದ್ದರೂ ಭಾವಭಿವ್ಯಕ್ತಿಗೆ ಪೂರಕವಾದ ಧ್ವನಿ, ಶರೀರವೂ ಪ್ರಭಾವ ಬೀರುವ ಅಂಶವಾಗಿದೆ. ಈ ದೃಷ್ಟಿಯಿಂದ ಯಕ್ಷಗಾನರಂಗ ಮತ್ತು ತಾಳಮದ್ದಳೆಯ ವೇದಿಕೆಗಳೆರಡೂ ಬಹುಕಾಲ ಪುರುಷರಿಂದಲೆ ವಿಜೃಂಭಿಸಿತು. ಆಹಾರ-ವ್ಯವಹಾರ, ಗುಂಪಿನ ವರ್ತನೆ, ಸಮಾಜಿಕ ಗಮನಗಳು ಕೂಡ ಪುರುಷ ಸಮಾಜಕ್ಕೆ ಮೀಸಲಾದ ಮಿತಿಗಳನ್ನು ಹೊಂದಿದ್ದು ಸ್ತ್ರೀಯರಿಗೆ ಸವಾಲಾಗಿಯೇ ಕಲೆ ಉಳಿದುಕೊಂಡಿತ್ತು.

ಸ್ವಾತಂತ್ರ್ಯನಂತರದ ವಿದ್ಯಾಭ್ಯಾಸ, ಸ್ತ್ರೀಸಬಲೀಕರಣ ಚಿಂತನೆ, ಸಮಾನತೆಯ ಪ್ರಜ್ಞೆ ಅವ್ಯಕ್ತವಾಗಿ ಸ್ತ್ರೀಯರಲ್ಲಿದ್ದ ಕಲಾ ಸಂವೇದನೆ ಪ್ರೇರಣೆಯಾಗಿ ಸ್ತ್ರೀಯರು ಪುರುಷವೇಷದತ್ತ ಆಸಕ್ತರಾದರು. ಯಕ್ಷಗಾನದ ಸ್ತ್ರೀ ಎಂದರೆ ವಾಸ್ತವಿಕವಾಗಿ ಪುರುಷನೆ ಎಂಬಷ್ಟು ಪ್ರಚಲಿತವಾಗಿತ್ತು. ಸ್ವಾಭಾವಿಕ ಪುರುಷರು ಸ್ತ್ರೀಯರ ಸ್ವಭಾವವನ್ನು ಅಭಿವ್ಯಕ್ತಿಸುವಲ್ಲಿ ಅಸಾಮಾನ್ಯತೆಯನ್ನು ಮೆರೆದಿದ್ದಾರೆ. ಕೆರೆಮನೆ ಗಜಾನನ ಹೆಗಡೆ, ಪಾತಳ ವೆಂಕಟ್ರಮಣ ಭಟ್ರು, ಎಂ.ಎ. ನಾಯ್ಕ, ಮಂಟಪ ಪ್ರಭಾಕರ ಉಪಾಧ್ಯ, ನೀಲ್ಕೋಡ ಶಂಕರ, ಯಲಗುಪ್ಪೆ ಸುಬ್ರಹ್ಮಣ್ಯ ಇವರೆಲ್ಲ ಹೆಂಗಸರನ್ನೆ ನಾಚಿಸುವಷ್ಟು ಹೆಣ್ಣಾಗಿ ಕಣ್ಣಿಗೆ ಕೊರೈಸಿದ್ದಾರೆ. ಇಲ್ಲಿ ಬಹುತೇಕ ಪುರುಷ ಪಾತ್ರಾಧಾರಿಗಳು ಹೆಣ್ಣಾಗಿ ರಂಗದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಬಹುಶಃ ಪುರುಷರು ಸ್ತ್ರೀಯಾಗಿ ಸಾಧಿಸಿದ ಸಾಧನೆಗೆ ಹೋಲಿಸಿದರೆ ಯಕ್ಷಗಾನದಲ್ಲಿ ಸ್ತ್ರೀಯರು ಪುರುಷರಾಗಿ ಸಾಧಿಸದಿರುವುದಕ್ಕೆ ಅನೇಕ ಕಾರಣಗಳಿವೆ. ಈ ವಿಚಾರ ರಂಗ ಕ್ರಿಯೆಗಳಷ್ಟೇ ಅಲ್ಲದೆ ತಾಳಮದ್ದಳೆಗೂ ಅನ್ವಯಿಸುತ್ತದೆ. ಇದಕ್ಕೆ ಯಕ್ಷಗಾನೀಯ ವಾಡಿಕೆ. ಪಾತ್ರದ ಗುಣಗಳು ಕಾರಣವಾಗಿದೆ. ಆದರೂ ಈ ಇತಿಮಿತಿಗಳ ನಡುವೆಯು ಮಹಿಳೆಯರು ಪುರುಷ ವೇಷದಲ್ಲಿ ರಂಗದಲ್ಲಿ ಮೆರೆಯುವಲ್ಲಿ ತೊಡಗಿಕೊಂಡಿದ್ದು ಕಲೆಯ ಚರಿತ್ರಾರ್ಹ ಸಂಗತಿಯಾಗಿದೆ.

ಇತೀಚಿನ ವಷಗಳಲ್ಲಿ ಕರಾವಳಿ ಮಲೆನಾಡಿನಲ್ಲಿ ಈ ಪ್ರದೇಶದಿಂದ ವಲಸೆಹೋದ ನಗರವಾಸ ಮಹಿಳೆಯರಲ್ಲಿ ಯಕ್ಷಗಾನದ ಒಲವು ಯಕ್ಷಗಾನದ ಆಕರ್ಷಣೆಯನ್ನು ಹೆಚ್ಚಿಸಿದೆ. ಸ್ತ್ರೀ ವೇಷದಲ್ಲಿದ್ದ ಸ್ತ್ರೀ ವೇಷದಲ್ಲಿದ್ದ ಸ್ತ್ರೀಯರು ಪಾಲ್ಗೊಳ್ಳುವ ಪ್ರಯತ್ನದಿಂದ ಪುರಷ ಪಾತ್ರವನ್ನು ನಿಭಾಯಿಸುವತ್ತ ಸ್ತ್ರೀಯರು ಹಜ್ಜೆ ಹಾಕಿರುವುದು ಪ್ರಶಂಸಾರ್ಹವಾದುದು. ಆದರೆ ಯಕ್ಷಗಾನ ರಂಗ ಪ್ರಯೋಗದ

ದೃಷ್ಟಿಯಿಂದ ಪಾತ್ರ ಸಂಪ್ರದಾಯ, ವಾಡಿಕೆಯ ದೃಷ್ಟಿಯಿಂದ ಸಫಲತೆ ಸಾಧ್ಯವಾಗಿದೆಯೆ ಎಂಬ ಪ್ರಶ್ನೆ ಉಳಿದುಕೊಳ್ಳುತ್ತದೆ. ಸಹಜವಾಗಿ ಕುಣಿತವನ್ನು ಕರಗತ ಮಾಡಿಕೊಂಡು ಪ್ರೇಕ್ಷಕನ ಚಪ್ಪಾಳೆ ಪಡೆದ ಮಾತ್ರಕ್ಕೆ ಯಕ್ಷಗಾನದ ಪ್ರೇಕ್ಷಕ ಪಾತ್ರವನ್ನು ಒಪ್ಪಿಕೊಂಡಿದ್ದಾನೆ ಎಂದು ನಿರ್ಣಯಿಸುವಂತಿಲ್ಲ. ಪ್ರೇಕ್ಷಕನ ಮನೋಭೂಮಿಯಲ್ಲಿ ಪಾತ್ರ, ಪ್ರತಿಪಾತ್ರಗಳು ಬೇರೂರಿದ ಪಾತ್ರಕಲ್ಪನೆಗೆ ನ್ಯಾಯ ದೊರಕುತ್ತದೆ ಎಂದು ಭಾವಿಸಲಾಗದು. ಆದರೂ ಸ್ತ್ರೀಯರ ಕಲಾರಾಧನೆಯ ತುಡಿತ ಮಾತ್ರ ಶ್ಲಾಘನೀಯವಾದುದು. ವಾಸ್ತವಿಕವಾಗಿ ಇದು ಯಕ್ಷರಂಗದ ಸಾರ್ವತ್ರೀಕರಣವೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಯಕ್ಷಗಾನ ಮೂಲತಃ ಶ್ರಮ ಸಂಸ್ಕೃತಿಯ ಕಲೆಯಾಗಿದೆ. ಕೃಷಿಕರಾಗಿ ಮನೆಗೆಲಸದಲ್ಲಿ ದುಡಿದು ಶ್ರಮ ಜೀವನದ ಪರಿಣಾಮವಾಗಿ ರೂಪಗೊಂಡ ಶರೀರಬಲಕ್ಕೆ ಒಗ್ಗುವ ಕುಣಿತಗಳು, ದಣಿವನ್ನು ಸೈರಿಸಬಲ್ಲ ಆದ್ಯತೆಯನ್ನು ಹೊಂದಿದವರಿಗೆ ರಂಗದಲ್ಲಿನ ಕಸುಬು ತಿರುಗಾಟದ ಪ್ರವೃತಿಗೆ ಸುಲಭ ಸಾಧ್ಯವಾಗುವಂತಹದು. ಆದರೂ ಶ್ರಮ ಸಂಸ್ಕೃತಿಯ ಕಲೆ ಶರೀರ ಧರ್ಮಕ್ಕೆ ಸಹಜವೆ? ಎಂಬುದು ಸ್ತ್ರಿಯರಿಗೆ ಸವಾಲಾಗಿದೆ.

ಶರೀರ ಸಂರಚನೆ ಮತ್ತು ಸ್ತ್ರೀ ಸಹಜವಾದ ಗುಣಧರ್ಮಗಳು ತಾಳಮದ್ದಳೆಯಲ್ಲೂ ಹೆಣ್ಣಿಗೆ ಮಿತಿಯನ್ನು ನಿರ್ಧರಿಸುತ್ತದೆ. ಶೃಂಗಾರ, ವೀರ, ಭೀಭತ್ಸ, ಭಯಾನಕ ರೌದ್ರಾದಿರಸಗಳ ಪೂರ್ಣಾಭಿವ್ಯಕ್ತಿಗೆ ರಂಗದಲ್ಲಿ ಮಹಿಳೆ ಒಗ್ಗಿಕೊಳ್ಳಲು ಸಾಧ್ಯವೆ? ಶೃಂಗಾರ ರಸಾಭಿವ್ಯಕ್ತಿ, ವಿರಹಭಾವಾಭಿವ್ಯಕ್ತಿಯ ಸಂಧರ್ಭದಲ್ಲಿ ಮಾತು ಅಭಿವ್ಯಕ್ತಿಯ ಪ್ರೇರಣೆಗೆ ಪೂರ್ಣ ಸಹಕರಿಸುವಲ್ಲಿ ಸೋಲುತ್ತದೆ. ಘೋರ ಸನ್ನಿವೇಶ ನಿರ್ಮಾಣಕ್ಕೆ ಬೇಕಾದ ಸ್ವರ ಸಾಮರ್ಥ್ಯ ತಾಳಮದ್ದಳೆಯಲ್ಲಿ ಈಡೇರದೆ ಸನ್ನಿವೇಶವೆ ನಿರ್ಮಾಣಗೊಳ್ಳದ ಸಹಜಮಾತು ಪ್ರೇಕ್ಷಕನಿಗೆ ಪರಿಣಾಮಕಾರಿಗೊಳ್ಳಲು ಬೇಕಾದ ಅತ್ಯಗತ್ಯವಾದ ಶಾರೀರ ಸ್ತ್ರೀ ಸಹಜ ಮನೋಧರ್ಮಕ್ಕೆ ಸವಾಲಾಗುತ್ತದೆ. ಒಳತುಡಿತವಿದ್ದರೂ ಪ್ರೇಕ್ಷಕನ ನಿರೀಕ್ಷೆಯನ್ನು ಈಡೇರಿಸಲಾಗದ ಸ್ಥಿತಿ ನಿರ್ಮಾಣಗೊಳ್ಳುತ್ತದೆ.

ತಾಳಮದ್ದಳೆಯು ಅಪ್ಯಾಯಮಾನವಾಗುವುದೇ ಮಾತಿನ ಏರಿಳಿತ ಮತ್ತು ಧ್ವನಿ ಸಾಮರ್ಥ್ಯ, ಶೃತಿಬದ್ಧ, ಲಯಬದ್ಧ ಮಾತುಗಾರಿಕೆಯಿಂದಾಗಿದೆ. ಪುರುಷ ಪಾತ್ರಗಳಲ್ಲಿ ವ್ಯಕ್ತವಾಗುವ ಮಾತಿನ ಗತ್ತುಗಾರಿಕೆ, ಗಡುಸುತನ, ಮಹಿಳೆಯರಿಗೆ ಸುಲಭ ಸಾಧ್ಯವೆನಿಸದು. ಭಾಗವತಿಕೆ ಪದ್ಯಗಳ ಶೃತಿಯಲ್ಲಿಯೇ ಮಾತಿನ ಎತ್ತುಗಡೆ ಕ್ರಮವನ್ನು ಅನುಸಿರಸಿದಾಗ ಉಂಟಾಗುವ ಪರಿಣಾಮವೇ ಪ್ರೇಕ್ಷಕನನ್ನು ಅನುಸಂಧಾನಗೊಳಿಸುವಂತಹದು. ಮಹಿಳೆಯರಿಗೆ ಅಂತಹ ಧ್ವನಿ ಸಾಧ್ಯತೆ ಅಪರೂಪವೇ ಸರಿ.

ಪಾತ್ರ ಪೋಷಣೆಯ ತಾಳಮದ್ದಳೆಯಲ್ಲಿ ಬಹಳ ಮುಖ್ಯ. ಕಥಾಸಂವಿಧಾನದ ಮೂಲಕ ಪ್ರೇಕ್ಷಕ ವ್ಯಕ್ತಿಯಲ್ಲಿ ಗುಣವನ್ನು ಆರೋಪಿಸಿಕೊಳ್ಳುತ್ತಾನೆ. ಪಾತ್ರ ಪಾತ್ರಗಳ ನಡುವಿನ ಪ್ರಶ್ನೆ, ತರ್ಕ, ಜಿಜ್ಞಾಸೆಗಳು ಗುಣವಿಶ್ಲೇಷಣೆಗೆ ತಾರ್ಕಿಕತೆಯ ಮೂಲಕ ಅರ್ಥವ್ಯಂಜನಕ್ಕೆ ಕಾರಣವಾಗುವಂತಹದಾಗಿದೆ. ಮಹಿಳೆಯರಲ್ಲಿ ಈ ಸಾಮರ್ಥ್ಯವಿದ್ದರೂ ತಾರ್ಕಿಕ, ವೈಚಾರಿಕ, ಸಮಕಾಲೀನ ಪ್ರಜ್ಞೆಯ ವ್ಯಂಗದ ಅಭಿವ್ಯಕ್ತಿ ಪುರುಷರಿಗೆ ಸಹಜವೆನಿಸಿದಷ್ಟು ಸುಲಭವಲ್ಲ. ಇದರಿಂದಾಗಿ ಪದಕ್ಕೆ ಅರ್ಥ ಹೇಳುವ ಮಹಿಳೆ ಪಾತ್ರಅನುಸಂಧಾನಗೊಳ್ಳುವ ಕ್ರಿಯೆ ಮಾತಿನಲ್ಲಿ ವ್ಯಕ್ತಗೊಳ್ಳದೆ ಪ್ರೇಕ್ಷಕ ವಾಚ್ಯಾರ್ಥವನ್ನಷ್ಟೇ ಸ್ವೀಕರಿಸುವಷ್ಟಕ್ಕೆ ಸೀಮಿತಗೊಳ್ಳುತ್ತಾನೆ. ಇದು ಮಹಿಳಾ ತಾಳಮದ್ದಳೆಗಳಲ್ಲಿ ಕಂಡುಬರುವ ದೋಷವಾಗಿದೆ.

ತಾಳಮದ್ದಳೆಯು ಆಂಗಿಕಾಭಿನಯದ ಮಹತ್ವವನ್ನು ಹೊಂದಿರದಿದ್ದರೂ ಅಭಿವ್ಯಕ್ತಿಗೆ ಪೂರಕವಾದ ಭಾವಭಿವ್ಯಕ್ತಿಗೆ ಅಂಗಾಗಳ ಚಲನೆ ಸಹಜವಾಗಿದ್ದರೆ ಪರಿಣಾಮ ಹೆಚ್ಚಾಗುತ್ತದೆ. ಮಹಿಳೆಯರ ಉಡುಪು, ಶರೀರ ಸಂಬಂಧವಾದ ಸಹಜ ಲಕ್ಷಣಗಳು ಆಂಗಿಕಾಭಿನಯಕ್ಕೆ ಅಷ್ಟು ಪೂರಕವಾಗಿರುವುದಿಲ್ಲ. ಮಹಿಳೆ ವೇದಿಕಯಲ್ಲಿದ್ದರೂ ತನ್ನ ಸ್ವಶರೀರ ಪ್ರಜ್ಞೆಯನ್ನು ಮರೆತು ವ್ಯವಹರಿಸಲಾರಳು. ಇದಕ್ಕೆ ಶರೀರ ಗುಣಧರ್ಮ ಪೂರ್ಣಾಭಿವ್ಯಕ್ತಿಗೆ ಸಹಕರಿಸದ ಸಂದರ್ಭಗಳನ್ನು ಮಹಿಳೆ ರಂಗದಲ್ಲಿ ಎದುರಿಸಬೇಕಾಗುತ್ತದೆ.

ಪಾತ್ರದ ಪೀಠಿಕೆ, ಮನೋಧರ್ಮದ ಅಭಿವ್ಯಕ್ತಿ,ಇದಿರು ಪಾತ್ರವನ್ನು ಹಳಿಯುವ, ಸ್ವಪಾತ್ರ ಪೋಷಣೆಗೆ ಬೇಕಾದ ಸ್ವ ಅಭಿವ್ಯಕ್ತಿಯು ಯಾಂತ್ರಿಕವಾಗಿ ಕಂಠಪಾಠವೊ, ಕಂಠಸ್ಥವೋ ಎಂದು ಗುರುತಿಸಲಾಗದ ಸ್ತ್ರೀ ಸಹಜ ಅಭಿವ್ಯಕ್ತಿ ಪರಿಣಾಮದಲ್ಲಿ ಪುರುಷ ಪಾತ್ರಕ್ಕೆ ನ್ಯಾಯ ಒದಗಿಸಲು ವಿಫಲಗೊಳ್ಳುವುದನ್ನು ಮಹಿಳಾ ತಾಳಮದ್ದಳೆಯಲ್ಲಿ ಗುರುತಿಸಲು ಸಾಧ್ಯವಾಗುತ್ತದೆ. ಮೌಲ್ಯ ಸಂಘರ್ಷವನ್ನು ಅಭಿವ್ಯಕ್ತಿಸುವ ಪಾತ್ರ ಪೋಷಣೆಗೆ ಮಹಿಳೆಯ ಮಾತಿನಧಾಟಿ ಪರಿಣಾಮವಾಗುವುದು ಕಠಿಣವೆಂಬುದನ್ನು ಮಹಿಳಾ ತಾಳಮದ್ದಳೆಯಲ್ಲಿ ಗಮನಿಸಬಹುದಾಗಿದೆ.

ಯಕ್ಷಗಾನ ರಂಗಕ್ರಿಯೆಯಲ್ಲಿ ಕುಣಿತವು ಪುರುಷರಿನಿಗೆ ಸರಿಸಾಟಿಯಾಗಿದ್ದರೂ ಮಾತಿನಲ್ಲಿ ಮಹಿಳೆ "ಪುರುಷಪಾತ್ರ"ವಾಗದೆ ಪಾತ್ರ ವೇಷವಾಗಿಯೇ ಉಳದುಕೊಳ್ಳುವ ಸಂಭವನೀಯತೆಯನ್ನು ಮಹಿಳಾ ಕಲಾವಿದರ ಕಲಾಭಿವ್ಯಕ್ತಿಯಲ್ಲಿ ಕಾಣುತ್ತೇವೆ. ಯಕ್ಷಗಾನವೆಂದರೆ ಬರಿಯ ಕುಣಿತವಲ್ಲ ಎಂಬುದನ್ನು ಪುರುಷರ ಪಾತ್ರನಿರ್ವಹಣೆಯಲ್ಲಿ ಕಂಡರೆ, ಮಹಿಳೆಯ ಪಾತ್ರನಿರ್ವಹಣೆಯಲ್ಲಿ ತಾದಾತ್ಮ್ಯತೆ ನಿರ್ಮಾಣಗೊಳ್ಳುವುದಿಲ್ಲ.

ಮಹಿಳೆ ಸಹಜ ಬದುಕಿನ ಸುಕೋಮಲತೆಯನ್ನು ರಂಗಕ್ರಿಯೆ ಹಾಗೂ ತಾಳಮದ್ದಳೆಗಳೆರಡರಲ್ಲಿ ಪಾತ್ರ ಸೃಷ್ಠಿಗೆ ತೊಡಕನ್ನುಂಟು ಮಾಡುವ ವೈರುಧ್ಯ,ಪ್ರೇಕ್ಷಕನಿಗೆ ಗೋಚರಿಸಲು ಸಾಧ್ಯವಾಗುತ್ತದೆ.

ಪರುಷವೇಷದ ಭಾವಾಭಿವ್ಯಕ್ತಿಯ ಮುಖಭಾವ, ಗತ್ತು ಗೈರತ್ತಿನ ನಿಲುವು, ದಾರ್ಷ್ಟ್ಯ, ದುಷ್ಟಭಾವನೆಗಳ ಭಂಗಿಗಳನ್ನು ಅನುಕರಿಸುವಲ್ಲಿ ಸ್ತ್ರೀ ಸಹಜ ಲಾಲಿತ್ಯ ಲಜ್ಜೆಗಳು ಒನಪು ವೈಯಾರ ಸ್ವಭಾವಗಳು ವೈರುಧ್ಯವನ್ನು ಸೃಷ್ಟಿಸುತ್ತದೆ. ಮಹಿಳೆ ತಾತ್ವಿಕವಾಗಿ, ಕಲಾತ್ಮಕವಾಗಿ ಎದುರಿಸುವ ಸವಾಲುಗಳು ಒಂದೆಡೆಯಾದರೆ ಸಂಘಟನೆಯಲ್ಲಿ ಎದುರಿಸುವ ಸಮಸ್ಯೆಗಳು ಹಲವು ಇವೆ.

೧. ಮಹಿಳಾ ಯಕ್ಷಗಾನ ಅಥವಾ ತಾಳಮದ್ದಳೆ ಸಂಘಟಣೆಯಲ್ಲಿ ಹವ್ಯಾಸಿಗಳೆ ಹೆಚ್ಚು ವ್ಯವಸಾಯ ಕಲಾವಿದರು ಅಪರೂಪವೆ ಸರಿ. ಹವ್ಯಾಸಿಗಳಿಗೆ ನಿರಂತರ ಪ್ರಯೋಗ ಅಧ್ಯಯನ, ದೋಷಗಳನ್ನು ತಿದ್ದಿಕೊಳ್ಳುವುಕ್ಕೂ ಅನುಕೂಲಕರವಾದ ಹಿಮ್ಮಾಹಿತಿಗಳು ಮುಕ್ತವಾಗಿ ದೊರೆಯುವುದಿಲ್ಲ. ಪ್ರೇಕ್ಷಕನ ವಿಮರ್ಶಾತ್ಮಕವಾಗಿ ನೋಡದೆ ಮಹಿಳೆಯೆಂಬ ಕಾರಣದಿಂದಲೆ ಇಷ್ಟು ಸಾಕು ಎಂವ ಧೋರಣೆಯ ಭಾವನೆ ಹೊಂದುತ್ತಾನೆ. ಇದು ಸಾಧನೆಗೆ ಪೂರಕವಲ್ಲ.

೨. ಕೌಟುಂಬಿಕ ಜವಬ್ದಾರಿಗಳು, ಮನೆವಾರ್ತೆ, ಹಿರಿಯರ ಆಶೋತ್ತರಗಳ ನಡುವೆ ಗೃಹಿಣಿಯಾಗಿ, ಯಕ್ಷಗಾನ ಕಲಾವಿದೆಯಾಗಿ ನಿರ್ವಹಿಸುವುದು ಕಠಿಣವಾದುದು.

೩. ಯಕ್ಷಗಾನ ಪ್ರದರ್ಶನ ಏರ್ಪಡಿಸಲು ಬೇಕಾದ ಖರ್ಚುವೆಚ್ಚಗಳಿಗೆ ಆಯೋಜಕರು ದೊರೆಯುವುದು ಅಪರೂಪವೆ,. ವ್ಯವಸಾಯಿ ಮೇಳವಲ್ಲವಾದ್ದರಿಂದ ಆರ್ಥಿಕ ಹೊರೆಯು ಹೌದು.

೪. ಸಾಮಜಿಕ ಟೀಕೆ ಟಪ್ಪಣಿಗಳನ್ನು ಸಹಿಸುವ ವಿಶಾಲ ಮನೋಭಾವನೆ ಕೂಡ ಅಗತ್ಯವಿದೆ.

೫. ವಿಫುಲ ಅವಕಾಶಗಳೊದಗಿದರೂ ಪರಿಶ್ರಮದಾಯಕವಾದ್ದರಿಂದ ಆರೋಗ್ಯಯುತ ಬದುಕಿಗೂ ತೊಂದರೆಯಾಗಬಹುದು.

೬. ಹಿಮ್ಮೇಳನದ ಕಲಾವಿದರ ಸಂಖ್ಯೆ ಮಹಿಳೆಯರಲ್ಲಿ ಕಡಿಮೆ ಇರುವುದರಿಂದ ಬಹುಸಂಖ್ಯೆಯ ನಿರಂತರ ಪ್ರದರ್ಶನ ಕೊಡಲು ಸಾಧ್ಯವಿಲ್ಲ.

೭. ಹಿಮೇಳದ ಕಲಾವಿದರ ಸಂಖ್ಯೆ ಮಹಿಳೆಯರಲ್ಲಿ ಕಡಿಮೆ ಇರುವುದರಿಂದ ಬಹುಸಂಖ್ಯೆಯು ನಿರಂತರ ಪ್ರದರ್ಶನ ಕೊಡಲು ಸಾಧ್ಯವಿಲ್ಲ.

ಹೀಗೆ ಹತ್ತು ಹಲವು ಸಮಸ್ಯೆಗಳಿದ್ದರೂ ಮಹಿಳೆ ಯಕ್ಷಗಾನವನ್ನು ಸವಾಲಾಗಿ ಸ್ವೀಕರಿಸಿ ಇತ್ತೀಚಿನ ವರ್ಷದಲ್ಲಿ ರಂಗಕ್ಕೆ ಪ್ರವೇಶಿಸತ್ತಿರುವುದು ಪ್ರಶಂಸನೀಯ. ಪ್ರತಿಭೆ ಹಾಗೂ ಕಲೆಯ ದೃಷ್ಟಿಯಿಂದ ಮಹಿಳೆಯರ ಪಾಲ್ಗೊಳ್ಳುವಿಕೆ ಉಳಿದೆಲ್ಲ ಅಂಶಗಳನ್ನು ಗೌಣವಾಗಿಸಿದೆ.

ಮಹಿಳಾ ಯಕ್ಷಗಾನ ಕಲಾವಿದರು ವೇಷಧಾರಿಗಳಾಗಿ ರಂಗದಲ್ಲಿ ಪಾತ್ರನಿರ್ವಹಿಸುವಂತೆ ತಾಳಮದ್ದಳೆ ಪ್ರಯೋಗದಲ್ಲೂ ಪರಿಣಿತರೆ ಆಗಿರುತ್ತಾರೆ. ಬಹುತೇಕ ಕಲಾವಿದರು ಎರಡು ಪ್ರಕಾರಗಳಲ್ಲೂ ಸಮಾನ ಪ್ರತಿಭೆಯನ್ನು ಹೊಂದಿರುತ್ತಾರೆ.

೫.೧೨. ಪ್ರಮುಖ ಮಹಿಳಾ ತಾಳಮದ್ದಳೆ ಕೂಟಗಳು

೧) ಶ್ರೀ ಲಕ್ಷ್ಮೀನಾರಾಯಣ ಮಹಿಳಾ ಯಕ್ಷ ಬಳಗ, ಬನದಕೊಪ್ಪ, ಸುಮಾ ಜಗದೀಶ, ಶ್ರೀಮತಿ ವನಜಾಕ್ಷಿ ವಿಶ್ವೇಶ್ವರ, ಶೋಭಾರಾಘವೇಂದ್ರ, ರೇಖಾಲಿಂಗಪ್ಪ, ಬಿ.ಎನ್. ಸತ್ಯವತಿ, ಸಾವಿತ್ರಮ್ಮ, ಸರಸ್ವತಿ ವೆಂಕಟಾಚಲ, ಕುಮಾರಿ ಲೀಲಾವತಿ

೨) ಶ್ರೀ ಆಂಜನೇಯ ಯಕ್ಷಗಾನ ಕಲಾ ಸಂಘ ಪುತ್ತೂರು ೧೯೬೮ರಲ್ಲಿ ಸ್ಥಾಪನೆ. ಈ ಸಂಘಟನೆಯಡಿಯಲ್ಲಿ ಮಹಿಳಾ ತಾಳಮದ್ದಳೆ ಕೂಟಗಳು ನಡೆಯುತ್ತದೆ. ಬೊಳುವಾಯಿಯ ಪ್ರೇಮಲತಾರಾವ್, ವೀಣಾಕೊಳತ್ತಾಯ, ಶೋಭಿತಾಸತೀಶ್, ಉಮಾ ಡಿ. ಪ್ರಸನ್ನ, ಪದ್ಮಾ ಕೆ.ಆರ್., ಗೀತಾ ಪರಳಕುಂಜ, ಸುಗುಣ ಗಣೇಶ್, ಲಕ್ಷೀ ವಿ. ಭಟ್, ಜ್ಞಾನೇಶ್ವರಿ ಜೋಶಿ, ಗೀತಾ ಕೊಂಕೋಡಿ, ಶ್ರೀಮತಿ ಲೀಲಾವತಿ ಬೈಪಡಿತ್ತಾಯ್.

೩) ಶ್ರೀ ಲಕ್ಷೀ ಮಹಿಳಾ ತಾಳಮದ್ದಳೆ ಕೂಟ ಪುಟ್ಟನಮನೆ ಶಿರಸಿ ಶ್ರೀಮತಿ ಸುಮಾಭಟ್ಟ, ಸಾವಿತ್ರಿಭಟ್, ಲಲಿತಾ ಹೆಗಡೆ, ನಳಿನಿ ಹೆಗಡೆ, ಗಂಗಾ ಹೆಗಡೆ, ಶೈಲಜಾ ಹೆಗಡೆ.

೪) ದೇವರಗದ್ದೆ ಮಹಿಳಾ ತಂಡ ಶಿರಸಿ, ಸಂಗೀತಾ ಹೆಗಡೆ, ಸುಧಾ ಹೆಗಡೆ, ಕಮಲಾ ಭಟ್, ಸುಜಾತ ಹೆಗಡೆ.

೫) ಶ್ರೀಮಾತಾ ಸ್ವಸಹಾಯ ಸಂಘ ಕಳಚೆ, ಯಲ್ಲಾಪುರ ಕಮಲಾಕ್ಷಿ ಭಾಗವತ, ಭಾರತಿ ಭಾಗವತ್, ಲಲಿತಾಗದ್ದೆ, ಜಾಹ್ನವಿ ಗದ್ದೆ.

೬) ಭುವನಸಿರಿ ತಾಳಮದ್ದಳಾ ಕೂಟ ಕ್ಯಾದಗಿ, ಸಿದ್ದಾಪುರ, ಶುಭಾಭಟ್ಟ, ರಂಜನಾ ಹೆಗಡೆ, ಅಂಬಿಕಾ ಭಟ್ಟ, ಗೀತಾ ಭಟ್.

೭) ಕಲಾಕಿರಣ ತಾಳಮದ್ದಳಾಕೂಟ, ಬಿಳಸಲಿಗೆ, ಸಿದ್ದಾಪುರ ಗೀತಾ ಹೆಗಡೆ, ನಿರ್ಮಲಾ ಕೃಷ್ಣಮೂರ್ತಿ, ಕಲ್ಪನಾ ಎಂ.ಎನ್. ಶಾಂತಿ ಹೆಗಡೆ, ವನಿತಾಹೆಗಡೆ.

೮) ಶ್ರೀ ಮಹಮ್ಮಾಯಿ ಮಹಿಳಾ ಯಕ್ಷಗಾನ ಮಂಡಳಿ – ಸರಸ್ವತಿನಾಗರಾಜ

೯) ಕರ್ನಾಟಕ ಮಹಿಳಾ ಯಕ್ಷಗಾನ (ರಿ.) ಬೆಂಗಳೂರು.

೧೦) ಕಲಾಶ್ರೀ ಬಾಲಕಿಯರ ಯಕ್ಷಗಾನ ಮೇಳ ಚೆರ್ತಾಡಿ (ದ.ಕ.)

೧೧) ಹೆಜ್ಜೆಗೆಜ್ಜೆ ತಲವಾಟ, ಸಾಗರ

೧೨) ಸಹ್ಯಾದ್ರಿ ಮಹಿಳಾ ಯಕ್ಷಗಾನ ಸಮಾಜ ಸಿರ್ಸಿ.

೧೩) ಪೂರ್ಣಾಯು ಯಕ್ಷಕಲಾಕೂಟ, ಇಡುವಾಣಿ

೧೪) ಯಕ್ಷಸಿರಿ ಕಲಾವೇದಿಕೆ ಕಂಡಿಗೆಮೂಲೆ, ಸೂಳ್ಯ.

೧೫) ಗೋಪಾಲಕೃಷ್ಣ ಮಹಿಳಾ ಯಕ್ಷಗಾನ ಮಂಡಳಿ, ಹಳ್ಳಿಹೊಳೆ.

೧೬) ಸ್ತ್ರೀ ಶಕ್ತಿ ಮಹಿಳಾ ತಂಡ, ಮಲ್ಪೆ.

೧೭) ಸಹ್ಯಾದ್ರಿ ಮಹಿಳಾ ಯಕ್ಷಗಾನ ಗೀತಾಹೆಗಡೆ, ಡಾ. ಪ್ರಜ್ಞಾ ಶಶಿಧರ, ಮಯೂರಿ ಉಪಾಧ್ಯಾ, ಸೌಮ್ಯಭಟ್ಟ, ಮಹಿಮಾ, ಸಂಭ್ರಮ ಡಾ. ವಿಜಯ ನಳಿನಿ ರಮೇಶ್.

೧೮) ಮೈತ್ರಿ ಕಲಾ ಬಳಗ, ತೇಲಂಗಾರ ಯಲ್ಲಾಪುರ.

೧೯) ಚಿಣ್ಣರ ಮೇಳ, ನವಿಲಗೋಣ.

೨೦) ಯಕ್ಷವೈಭವ ಮತ್ತು ಮಕ್ಕಳ ತಂಡ ಕೋಟೇಶ್ವರ. ಕುಮಾರಿ ಮಾನಸ, ಕುಮಾರಿ ಪವಿತ್ರ, ಕು. ಪ್ರಕೃತಿ ಉಪಾಧ್ಯ, ಶ್ರೀಮತಿ ಲಲಿತ, ಶ್ರೀಮತಿ ನಿರುಪಮ.

೨೧) ಸಿರಿಕಲಾಮೇಳ : ಶ್ರೀಮತಿ ಗೀತಾ ಹೆಗಡೆ, ಶ್ರೀಮತಿ ಪಲ್ಲವಿ ಹೆಬ್ಬಾರ, ಅರ್ಪಿತಾ ಹೆಗಡೆ, ಮಯೂರಿ ಉಪಾಧ್ಯ,.ಜ್ಯೋತಿ ನಾಯಕ್, ನೀಹಾರಿಕಾ ಭಟ್.

೨೨) ಶ್ರೀ ದುರ್ಗಾಂಬಿಕಾ ಮಹಿಳಾ ಯಕ್ಷಗಾನ ತಂಡ ಉಡುಪಿ.

೨೩) ಮಹಾಲಿಂಗೇಶ್ವರ ಮಹಾಗಣಪತಿ ಮಹಿಳಾ ಯಕ್ಷಗಾನ ಸಂಘ, ಉಡುಪಿ.

೨೪) ವಿಪ್ರ ಮಹಿಳಾ ಸಂಘ, ಕುಂದಾಪುರ.

೨೫) ಗೋಪಾಲಕೃಷ್ಣ ಮಹಿಳಾ ಯಕ್ಷಗಾನ ಸಂಘ, ಹಳ್ಳಿಹೊಳೆ.

೨೬) ದುರ್ಗಾಪರಮೇಶ್ವರಿ ಮಹಿಳಾ ಸಂಘ, ಕೊರ್ಕ್ಕರ್ಣೆ

೨೭) ಮೈತ್ರೇಯಿ ಮಹಿಳಾ ತಾಳಮದ್ದಳೆ ತಂಡ ನಿಟ್ಟೂರು, ಹೊಸನಗರ.

28) ಜ್ಞಾನ ಜ್ಯೋತಿ ಯಕ್ಷಗಾನ ಮಹಿಳಾ ಸಂಘ, ಮಲ್ಪೆ.

29) ಹನುಮಾನ್ ಮಹಿಳಾ ಯಕ್ಷಗಾನ ತಂಡ, ಮಲ್ಪೆ.

೫.೧೨.೧. ಮಹಿಳಾ ಕಲಾವಿದರು

೧) ಸುಜಾತಾಧಾರೇಶ್ವರ- ಸುಬ್ರಹ್ಮಣ್ಯಧಾರೇಶ್ವರರ ಪತ್ನಿ ೧೯೮೦-೯೦ರಲ್ಲಿ ಮೋಹಿನಿ, ಸಾಲ್ವ ಪಾತ್ರದಲ್ಲಿ ಮಿಂಚಿದರು.

೨) ಡಾ. ವಿಜಯನಳಿನಿ ರಮೇಶ್-ತಾಳಮದ್ದಳೆ ಅರ್ಥದಾರಿಗಳು ಸಂಶೋಧಕರು.

೩) ಸುಮಾ ವಿ. ಹೆಗಡೆ, ಗಡಿಗೆಹೊಳೆ

೪) ಅನ್ನಪೂರ್ಣ ವಿಘ್ನೇಶ್ವರ ಭಟ್

೫) ವಿನೋದಾ ಎಂ.ಭಟ್

೬) ಸರಸ್ವತಿ ಪಿ. ಹೆಗಡೆ

೭) ಗೀತಾ ಕೆ. ಹೆಗಡೆ

೮) ನಿರ್ಮಲಾ ಎಂ. ಹೆಗಡೆ. ಗೋಳಿಕೊಪ್ಪ

೯) ಜಯಶ್ರೀ ರಾ. ಹೆಗಡೆ. ಕೊಡೆಮನೆ

೧೦) ಶ್ರೀಮತಿ ಗೀತಾ ಹೆಗಡೆ-ಬೆಂಗಳೂರು

೧೧) ಸೌಮ್ಯ ರಾಮಕೃಷ್ಣ

೧೨) ಅರ್ಚನಾ ಭಟ್-ಖಳಪಾತ್ರ

೧೩) ಪಲ್ಲವಿ ಮತಿಘಟ್ಟ

೧೪) ಮಯೂರಿ ಉಪಾಧ್ಯಾಯ

೧೫) ಶಾರದಾ ಭಟ್ (ಕಾಶಿಮಠ ಸುಬ್ರಾಯಭಟ್ಟರ ಮೊಮ್ಮಗಳು)

೧೬) ರಶ್ಮಿ ಹೆಗಡೆ (ಉಮೇಶ ಭಾಗವತರ ಸೊಸೆ)

೧೭) ಉಷಾ, ಶೀಲಾ, ಜ್ಯೋತಿ, ವಿದ್ಯಾಭಟ್ಟರು – ಬೊಮ್ಮನಹಳ್ಳಿ ಸಹೋದರಿಯರು – ಬೊಮ್ಮನಹಳ್ಳಿ ಜಿ.ಟಿ. ಭಟ್ಟರ ಮಕ್ಕಳು.

೧೮) ಗೌತಮಿ ಹೆಗಡೆ – ಸಿದ್ದಾಪುರ – ಇಡಗುಂಜಿ ಶ್ರೀಮಹಿಳಾ ಯಕ್ಷಗಾನ ಕೇಂದ್ರದ ವಿದ್ಯಾರ್ಥಿನಿ.

೧೯) ಮಹಾದೇವಿ ಭಟ್ಟ – ಗುಂಡಿಬೈಲು ವಿಷ್ಣುಭಟ್ಟರ ಮಗಳು. ಈಗ ಮಹಾದೇವಿ ಭಾಗ್ವತ್.

೨೦) ಸೌಮ್ಯ ಎನ್. ಹೆಗಡೆ ಹೊನ್ನವರ (ಎನ್.ಜಿ. ಹೆಗಡೆಯವರ ಮಗಳು)

೨೧) ಪ್ರೀತಿ ಚಿಟ್ಟಾಣಿ – ಚಿಟ್ಟಾಣಿ ಮೊಮ್ಮಗಳು

೨೨) ಸರಸ್ವತಿ ಭಟ್ಟ – (ಗುಂಡಿಬೈಲು ಸಬ್ರಾಯ ಭಟ್ಟರ ಮಗಳು ಈಗ ಸರಸ್ವತಿ ಎಸ್. ಅಯ್ಯಂಗಾರ್ ಅರ್ಥದಾರಿ)

೨೩) ಕುಮಾರಿ ಅಮೃತ ಭಟ್ಟ, ಇಡಗುಂಜಿ, ಡಾ. ಎನ್. ಭಟ್ಟರ ಮಗಳು. ಉಮೇಶಭಟ್ಟರ ಶಿಷ್ಯೆ

೨೪) ಲತಾ ಜೋಶಿ – ಧಾರೇಶ್ವರ

ಯಕ್ಷಗಾನ ಸೂತ್ರಧಾರ ಭಾಗವತರ ಪಾತ್ರ ಬಹಳ ಪ್ರಮುಖವಾದುದು. ಭಾಗವತರಾಟ ಎಂದೆ ಕರೆಯಲ್ಪಡುವ ಈ ಕಲೆಯಲ್ಪಡುವ ಈ ಕಲೆಯ ಸಂಕೀರ್ಣ ಜವಾಬ್ದಾರಿ ಸೂತ್ರಧಾರಿನಿಗಿದೆ. ಭಾಗವತಿಕೆ ಕ್ಷೇತ್ರದಲ್ಲಿ ಶ್ರೀಮತಿ ಲೀಲಾಬೈಪಡಿತ್ತಾಯಿ ತೆಂಕಿನಲ್ಲೂ, ಬಡಗಿನಲ್ಲಿ ಶ್ರೀಮತಿ ಸುಮಾ ಜಗದೀಶ ಇವರು ವೃತ್ತಿ ಮೇಳದ ಭಾಗವತರಿಗೆ ಕಡಿಮೆಯಿಲ್ಲದ ಪ್ರದರ್ಶನ ನೀಡಬಲ್ಲರು. ಯಕ್ಷಗಾನ ಹಾಗೂ ತಾಳಮದ್ದಳೆಗಳೆರಡಲ್ಲೂ ಭಾಗವತಿಕೆ ನಿರ್ವಹಿಸಿ ಇವರುಗಳು ದಕ್ಷಿಣೋತ್ತರ ಕನ್ನಡಹಾಗೂ ಮಲೆನಡಿನಲ್ಲಿ ಪ್ರಸಿದ್ದರಾಗಿದ್ದಾರೆ.

೫.೧೨.೨. ಯಕ್ಷಗಾನ ಕಲಾಶ್ರಿತ ಸಂಘಟನೆಗಳು

ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಅನೇಕ ಸಂಘಟನೆಗಳು ಪ್ರಯತ್ನಿಸುತ್ತಿವೆ ಇಂತಹ ಸಂಘಟನೆಗಳು ಕರಾವಳಿಯ ಮೂಲದಿಂದ ದೇಶವಿಧೇಶಗಳಲ್ಲಿಯೂ ಯಕ್ಷಗಾನವನ್ನು ಬೆಳಸುವ ಕೈಂಕರ್ಯದಲ್ಲಿ ತೊಡಗಿದೆ. ಅಶಕ್ತ ಕಲಾವಿದರಿಗೆ ವೃದ್ದಾಪದಲ್ಲಿ ಹಮ್ಮಿಣಿ ಸಮರ್ಪಣೆ ಅನಾರೋಗ್ಯ ಪೀಡಿತ ಕಲಾವಿದರಿಗೆ ಧನಸಹಾಯ ಕಲಾವಿದರ ಸಹಾಯರ್ಥ ಯಕ್ಷಗಾನ ಪ್ರದರ್ಶನಗಳನ್ನು ಸಂಘಟಿಸಲಾಗುತ್ತಿದೆ.

೫.೧೨.೩. ಯಕ್ಷಗಾನ ಯೋಗಕ್ಷೇಮ ಅಭಿಯಾನ

ಶ್ರೀ ವಿ.ಆರ್. ಹೆಗಡೆಯವರು ಈ ಸಂಘಟನೆಯನ್ನು ಮುನ್ನಡೆಸುತ್ತಿದ್ದಾರೆ. ಇವರ ಸಂಚಾಲಕತ್ವದಲ್ಲಿ ಬೆಂಗಳೂರಿನಲ್ಲಿ ಪೌರಣಿಕ ಪ್ರಸಂಗ ವೈಭವ, ಚಿಟ್ಟಾಣಿ ೭೦ ನಿಡ್ಲೆಗೋವಿಂದಭಟ್ಟರ ಪೌರಾಣಿಕ ಯಕ್ಷಗಾನ ಪ್ರಸಂಗ ಪೇರ್ಗಾನ್ ಗೋಪಾಲಕೃಷ್ಣಭಟ್ಟರ ಯಕ್ಷಗಾನ ಪ್ರದರ್ಶನ, ಮಂಟಪ ಪ್ರಭಾಕರ ಉಪಧ್ಯಾಯರ ಸಪ್ತಾಹ ಕಣ್ಣಿ ಹನಪತಿಭಟ್ಟರ ಕಲಾಪ್ರದರ್ಶನ ಸಪ್ತಾಹ, ಗೋಡೆಗೌರವ ಗೋಪಲಾಚಾರ್ಯ ೭೦ ಕೆರೆಮನೆ ಸಪ್ತಾಹ ಮುಂತಾದ ಕಾರ್ಯಕ್ರಮಗಳನ್ನು ಸಂಘಟಿಸಲಾಗಿದೆ. ಇದೇ ರೀತಿ ಯಕ್ಷ ದೇಗುಲ ಕರ್ನಾಟಕ ಯಕ್ಷಕಲಾದರ್ಶಿನಿ, ಸೃಷ್ಟಿ ಯಕ್ಷಮಿತ್ರಮಂಡಳಿ, ಯಕ್ಷಕಲಾಸಾಗರ, ಯಕ್ಷಕಲಾಮಂಡಳಂ ಮೊದಲಾದ ಸಂಸ್ಥೆಗಳು ಯಕ್ಷಗಾನ ಪ್ರದರ್ಶನ ಸನ್ಮಾನ ವಿಚಾರ ಸಂಕೀರ್ಣ ಪ್ರಕಟನೆಯ ಮೂಲಕ ಕಲೆಗೆ ಪ್ರೋತ್ಸಾಹ ನೀಡುತ್ತಿದೆ.

೫.೧೨.೪. ದತ್ತಿ ಕಾರ್ಯಕ್ರಮ

ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆ ಗೈದ ಸಾಧಕರಿಗೆ ನಿಧಿ ಪ್ರಕಶಾನ ಸಾಗರ ಇವರು ಗ್ರಂಥ ಪ್ರಶಸ್ತಿ ದತ್ತಿ ನಿಧಿಗಳನ್ನು ನೀಡುತ್ತಿದ್ದಾರೆ. ಡಾ. ಜಿ.ಎಸ್. ಭಟ್ ಸಾಗರ ಇವರು ಈ ಸಂಘಟನೆಯನ್ನು ಮುನ್ನಡೆಸುತ್ತಿದ್ದಾರೆ ಇದು ವರೆಗೆ ಗ್ರಂಥ ಪ್ರಶಸ್ತಿಯನ್ನು ಶ್ರೀ ಆರ್.ಗಣೇಶ್, ಡಾ.ಮೋಹನಕುಂಟಾರ್, ಶ್ರೀರಾಘವನಂಬಿಯಾರ್ ಇವರಿಗೆ ನೀಡಲಾಗಿದೆ. ಈ ಪ್ರಶಸ್ತಿಯು ಐದುಸಾವಿರ ರೂಪಾಯಿ ನಗದು ಹಾಗೂ ಫಲಕವನ್ನು ಒಳಗೊಂಡಿರುತ್ತದೆ.

೫.೧೨.೫. ಕಲಾವಿದ ಪ್ರಶಸ್ತಿ

ಕೆರೆಮನೆ ಮೇಳವು ದಿ.ಶಿವರಾಮಹೆಗಡೆ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಅಂತೆಯೆ ಡಾ. ಶೇಣಿ ಗೋಪಾಲ ಕೃಷ್ಣಭಟ್ಟ ಪ್ರಶಸ್ತಿ ಕೊಂಡದಕುಳಿ ಪ್ರಶಸ್ತಿಗಳನ್ನು ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ನೀಡಲಾಗುತ್ತದೆ.

ಹವ್ಯಕರು ಯಕ್ಷಗಾನ ಸಂಘಟನೆಯಲ್ಲಿ ಸ್ವ ಇಚ್ಛೆಯಿಂದ ತೊಡಗಿಸಿಕೊಂಡವರು. ಕೇವಲ ವೃತ್ತಿ ಮೇಳಗಳಲ್ಲದೆ, ಆರ್ಥಿಕ ಲಾಭವಿಲ್ಲದ ತಾಳಮದ್ದಳೆ ಸಂಘಟನೆಗಳನ್ನು ಹಳ್ಳಿಹಳ್ಳಿಗೆ ಹುಟ್ಟು ಹಾಕಿದರು. ಯಕ್ಷಗಾನ ಪ್ರಸಂಗಗಳ ಒಲವು ಕಲೆಯ ಕುರಿತಾದ ಗೀಳು ಮಾತುಗಾರಿಕೆಯಲ್ಲಿ ತಾರ್ಕಿಕವಾಗಿ ತೆರವ ಪುರಾಣಾಂತರ್ಗತ ಸತ್ಯಗಳು ಮೌಲ್ಯಗಳನ್ನು ಅರಿಯುವ ಅಸಕ್ತಿಯಿಂದಲೆ ಯಕ್ಷಗಾನ ಬಯಲಾಟ ಮತ್ತು ತಾಳಮದ್ದಳೆಗಳನ್ನು ಸಂಘಟಿಸಿದರು. ಹವ್ಯಕರು ನೆಲೆಸಿದ ಪ್ರದೇಶಗಳಲ್ಲಿ ಹೆಸರಿಸಬಹುದಾದ ಸಂಘಟನೆಗಳು ಇವುಗಳಾಗಿವೆ. ಆದರೆ ಅಲ್ಲಲ್ಲೆ ಆಕಸ್ಮಿಕವಾಗಿ ಸಂಘಟಿತವಾಗಿ ವರ್ಷಕ್ಕೊಂದು ಕಾರ್ಯಕ್ರಮ ನಿರ್ವಹಿಸುವ ಕೂಟಗಳು ಅಸಂಖ್ಯವಿದೆ. ಉದ್ಯೋಗ ನಿಮಿತ್ತ ಯುವಕರು ನಗರದತ್ತ ಮುಖಮಾಡಿದ ಆಧುನಿಕ ಸಂಧರ್ಭದಲ್ಲಿ ಈ ಸಂಘಟನೆಗಳಿಗೆ ಉತ್ತರಾಧಿಕಾರಿಗಳಿಲ್ಲದೆ ಸೊರಗುವ ಆತಂಕವಿದೆ. ಜೊತೆಗೆ ತಾಳಮದ್ದಳೆಯು ಹವ್ಯಕರು ನೆಲೆಸಿದ ಮಹಾನಗರಗಳತ್ತ ಸಾಗಿ ಅಲ್ಲಿಯೂ ಪ್ರದರ್ಶನ ಏರ್ಪಡುತ್ತಿದೆ. ಇಂತಹ ಸಂಘಟನಾ ಶಕ್ತಿಯು ಕಲಾ ಪರಂಪರೆಯನ್ನು ಪೋಷಿಸುತ್ತಿದೆ.

೫.೧೩. ಉಪಸಂಹಾರ :

ಹವ್ಯಕರು ಯಕ್ಷಗಾನ ಮೇಳ ಸಂಘಟನೆಯ ಪ್ರಯತ್ನಗಳು ಸುಮಾರು ನಾಲ್ಕು ನೂರು ವರ್ಷಗಳಷ್ಟು ಹಿಂದೆಯೆ ಆರಂಭಗೊಂಡಿವೆ. ಕರ್ಕಿಮೇಳದ ಮನೆತನ ಪರಂಪರೆ, ಸಭಾಹಿತ ಮನೆತನಗಳ ಪರಂಪರೆ ಇದಕ್ಕೆ ಸಾಕ್ಷ್ಯವನ್ನು ಒದಗಿಸುತ್ತವೆ. ವ್ಯವಸ್ಥಿತವಾದ ಡೇರೆಮೇಳ, ಸಂಚಾರಿ ಮೇಳಗಳನ್ನು ಸುದೀರ್ಘ ಕಾಲ ಮುಖ್ಯ ಕಲಾವಿದರೊಬ್ಬರು ನಡೆಸಿಕೊಂಡು ಬಂದುದಕ್ಕೆ ಕೆರೆಮನೆ ಮೇಳವು ನಿದರ್ಶನವಾಗಿದೆ. ಅಣಲಗಾರ ಮೇಳ, ಹೊನ್ನಗದ್ದೆ ಮೇಳ, ಬೆಳೆಯೂರು ಮೇಳಗಳು ಸುಮಾರು ನೂರೈವತ್ತು ವರ್ಷಗಳ ಇತಿಹಾಸವನ್ನು ದಾಖಲಿಸಿದೆ. ಇವೆಲ್ಲ ಹವ್ಯಕರ ಮೇಳಗಳೆ ಆಗಿವೆ. ಯಕ್ಷಗಾನ ಇಂದಿನ ಆಧುನಿಕ ಸಂದರ್ಭದಲ್ಲೂ ಹಳ್ಳಿಹಳ್ಳಿಗಳಲ್ಲಿ ಸಂಘಟಿತಗೊಳ್ಳುತ್ತಿದೆ. ಇಂತಹ ಹವ್ಯಾಸಿಗಳು ಯಾವ ನಿರ್ದಿಷ್ಟ ನೋಂದಾಯಿತ ಮೇಳಗಳಾಗದೆ ವರ್ಷಕ್ಕೊಂದು ಪ್ರದರ್ಶನ ನೀಡುತ್ತಿವೆ. ತಾಳಮದ್ದಳೆ ಕೂಟಗಳು ಹೆಸರು ವಾಸಿಯಾದ ಸಂಘಟನೆಗಳ ಹೊರತಾಗಿ ಅನೇಕ ಕೂಟಗಳು ಆಗಾಗ ಸಂಘಟಿತವಾಗಿ ಪ್ರದರ್ಶನ ನೀಡುತ್ತಿವೆ. ಇಂತಹ ಕಲಾತ್ಮಕ ಕೂಟಗಳ, ಮೇಳಗಳ ಸಂಘಟನೆಯಲ್ಲಿ ಆರ್ಥಿಕ ಲಾಭಕ್ಕಿಂತ ಕಲಾಭಿವ್ಯಕ್ತಿಯ ಸೆಳೆತ ಪ್ರಮುಖ ಉದ್ದೇಶವಾಗಿರುವುದು ಕಂಡುಬರತ್ತದೆ.

ಯಕ್ಷಗಾನ ಕಲೆ ಸಂಘಟಿತ ಪ್ರಯತ್ನದಿಂದ ನಿರಂತರತೆಯನ್ನು ಉಳಸಿಕೊಳ್ಳುತ್ತದೆ. ಇದರಿಂದ ಯಕ್ಷಗಾನ ಸಂಘಟನೆಯ ಪರಿಶ್ರಮಗಳು ಕಲೆಯ ವಿಕಾಸಕ್ಕೆ ತನ್ಮೂಲಕ ಸಾಮಾಜಿಕ ಮೌಲ್ಯಗಳನ್ನು ಪ್ರಚುರಪಡಿಸುವುದಕ್ಕೆ ಪ್ರೇರಣೆಯಾಗುತ್ತದೆ.

ಅಧ್ಯಾಯ – ೬

ಕಲಾವಿದರು

೬.೧. ಹಿಮ್ಮೇಳದ ಭಾಗವತರು

ಯಕ್ಷಗಾನದಲ್ಲಿ 'ಭಾಗವತ'ರಿಗೆ ಪ್ರಮುಖ ಸ್ಥಾನವಿದೆ. 'ಭಾಗವತರಾಟ' ಎಂದೇ ಹೆಸರಿತ್ತು ಎಂಬುದು ಇದಕ್ಕೆ ಸಾಕ್ಷಿ. ಮೊದಲ ವೇಷಧಾರಿ, ರಂಗದಲ್ಲಿ 'ಭಗವಂತನ' ಸ್ವರೂಪಿಯಾಗಿ ಕಾಣುವುದು ಧಾರ್ಮಿಕ ಚಿಂತನೆಯಾಗಿದೆ. ಸೂತ್ರಧಾರರಾಗಿಯೂ ರಂಗದಲ್ಲಿ ಪಾತ್ರನಿರ್ವಹಿಸುತ್ತಾರೆ. ಪ್ರಸಂಗದ ಆಯ್ಕೆ, ಕಲಾವಿದರ ಸಂಯೋಜನೆ, ಪಾತ್ರ ಹಂಚಿಕೆಯೂ ಭಾಗವತರಿಂದಲೆ ನಡೆಯುತ್ತದೆ. ಭಾಗವತ ಮತ್ತು ಚಂಡೆ ಮದ್ದಳೆ ಶೃತಿಗಳನ್ನು ಒಳಗೊಂಡು ಹಿಮ್ಮೇಳ ಎಂದು ಕರೆಯುತ್ತಾರೆ. ಭಾಗವತರುಗಳು ಪ್ರಸಂಗ ರಚನಾಕಾರರೂ ಆಗಿರುತ್ತಿದ್ದರು. ಈಗಲೂ ಅಂತವರಿದ್ದಾರೆ.

ಹವ್ಯಕರಲ್ಲಿ ಭಾಗವತ ಸಂಪ್ರದಾಯದ ಜನರು ವೈದಿಕ ಮಾರ್ಗದಿಂದ ದೂರವಾಗಿ ಯಕ್ಷಗಾನಕ್ಕೆ ತೊಡಗಿಕೊಂಡಿದ್ದು ಯಕ್ಷಗಾನದ ಉದಯಕ್ಕೆ ಕಾರಣವಾಯಿತೆಂಬ ವಾದವಿದೆ. ಇದಕ್ಕೆ ದೃಷ್ಟಾಂತವೆಂಬಂತೆ ಭಾಗವತ ಮನೆತನಗಳು ಹವ್ಯಕರಲ್ಲಿ ಕಂಡುಬರುತ್ತದೆ. ಕಲೆಯನ್ನು ಉಪಾಸನೆ ಮಾಡಿ ಅದೇ ಹೆಸರಿನ ಮನೆತನವಾಗಿ ಪರಂಪರೆ ಬೆಳೆದು ಬಂದಿದೆ. ಉಳಿದೆಡೆ ಈ ಮಾತು ಅನ್ವಯಿಸುವುದಿಲ್ಲ. ಉಳಿದ ಜನವರ್ಗದಲ್ಲೂ ಇದು ಕಂಡುಬರುವುದಿಲ್ಲ. ಈ ವಿಷಯದ ಕುರಿತು ಪೂರ್ವಚಿಂತನೆಯನ್ನು ಪ್ರಬಂಧದಲ್ಲಿ ಈಗಾಗಲೇ ವಿವರಿಸಲಾಗಿದೆ.

ಯಕ್ಷಗಾನ ಮೇಳ ವ್ಯವಸ್ಥೆಗೂ ಪೂರ್ವದಲ್ಲಿ ಭಜನೆ, ಹಾಡಿನ ಸಂಪ್ರದಾಯವನ್ನು ಹೊಂದಿರುವ ದೇವಾಲಯಗಳಲ್ಲಿ ಭಾಗವತರಿಗೆ ವಿಶೇಷ ಮನ್ನಣೆಯಿತ್ತು. ಇಂದಿಗೂ ಭಾಗವತ ಮನೆತನಕ್ಕೆ ವಿಶೇಷವಾದ ಗೌರವಸಲ್ಲಿಸುವ ಪದ್ಧತಿ ಹಾಗೂ ಅಷ್ಟಾವಧಾನ ಸೇವೆಯಲ್ಲಿ ಹಾಡುಗಳನ್ನು ಹೇಳುವ ಪದ್ಧತಿಯನ್ನು ಕೆಲವು ಮನೆತನಗಳು ನಡೆಸಿಕೊಂಡು ಬಂದಿರುವುದು, ವಾರ್ಷಿಕ ಪೂಜೆ ಹಬ್ಬಗಳಲ್ಲಿ ಮನೆತನ ಹೆಸರು ಹೇಳಿ ಫಲ ಪ್ರಸಾದ ಗೌರವವನ್ನು ನೀಡುವ ಪದ್ಧತಿಯಿದೆ.

ಯಕ್ಷಗಾನ ಹಿಮ್ಮೇಳದಲ್ಲಿ ಪ್ರಸಂಗಕರ್ತರಾಗಿ ಭಾಗವತರೂ ಆಗಿ ಭಾಗವತಿಗೆಗೆ ವಿಶಿಷ್ಟ ಸಂಪ್ರದಾಯವನ್ನು ರೂಪಿಸಿದ ಕೀರ್ತಿ ಹವ್ಯಕರಿಗಿದೆ. ಅಂತಹ ಪ್ರಸಿದ್ಧ ಭಾಗವತರ ಕೊಡುಗೆಗಳು ಯಕ್ಷಗಾನದ ವಿಕಾಸಕ್ಕೆ ಕಾರಣವಾಗಿದೆ.

೬.೧.೧ ಬಡಗುತಿಟ್ಟಿನ ಭಾಗವತರು

• **ವಿಷ್ಣು ಸಭಾಹಿತರು:** ಸು. ೧೭ನೇ ಶತಮಾನದ ಯಕ್ಷಗಾನ ಪ್ರಸಂಗಕರ್ತರು ಇವರು ೧. ಏಕಾದಶಿ ಪ್ರಸಂಗ, ೨. ಚಂದ್ರಹಾಸ, ೩. ಬಬ್ರುವಾಹನಕಾಳಗ, ೪. ಶತಾಸ್ಯರಾವಣ ಎಂಬ ಪ್ರಸಂಗಗಳನ್ನು ರಚಿಸಿದ್ದರು. ಇವರು ರೂಪಿಸಿದ ಹಾಡಿನಮಟ್ಟುಗಳನ್ನು ಸಭಾಹಿತ ಮಟ್ಟು ಎಂದು ಊಹಿಸಲಾಗಿದೆ. ಇವರಿಗಿಂತ ಹಿಂದೆ ಎಷ್ಟು ಜನ ಭಾಗವತರಾಗಿದ್ದಾರೆ ಇವರ ಕುಟುಂಬದಲ್ಲಿ ಎಂದು ತಿಳಿದಿಲ್ಲ. ಸಭಾಹಿತ ಮಟ್ಟಿನ ಭಾಗವತಿಕೆ ಕ್ರಮ, ಹಿಮ್ಮೇಳ ಕ್ರಮ ಉತ್ತರಕನ್ನಡದ ವೈಶಿಷ್ಟ್ಯವಾಗಿದೆ. ಇದು ಪ್ರಾಚೀನ ಪರಂಪರೆಯ ಯಕ್ಷಗಾನ ಎಂದು ಗುರುತಿಸಲಾಗಿದೆ. ಈ ತೆರನಾದ ಹೊಸ ಮಟ್ಟಿನ ಹರಿಕಾರರಾದವರು ವಿಷ್ಣುಸಭಾಹಿತರಾಗಿದ್ದಾರೆ. ಇವರು ಇಡಗುಂಜಿ ಮೂಲದ ಅಗ್ರಹಾರದ ಸಭಾಹಿತರಾಗಿದ್ದು, ಹೆಚ್ಚಿನ ಮಾಹಿತಿ ಇಲ್ಲ. ಸುಮಾರು ೩೦೦ ವರ್ಷಗಳ ಹಿಂದೆ ಸಭಾಹಿತ ಕುಟುಂಬ ಅಗ್ರಹಾರಕ್ಕೆ ಬಂದು ಬಸವರಾಜ ಪುರದಗ್ರಹಾರ ಎಂಬಲ್ಲಿ ನೆಲೆಸಿದ ಉಲ್ಲೇಖ ಇವರ ಕೃತಿಗಳಲ್ಲಿದೆ.

• **ಶಂಭು ಭಾಗವತ ಕಡತೋಕಾ** : ಕಡತೋಕಾ ಮಂಜುನಾಥ ಭಾಗವತರ ತಂದೆ. ನಾಟಕ ಕಂಪನಿಯ ಸಂಗೀತಗಾರರಾದ ಇವರು ಯಕ್ಷಗಾನದ ಭಾಗವತರಾಗಿ ಹೊಸಶೈಲಿಯ ಭಾಗವತಿಗೆ ರೂಪಿಸಿದರು. ಕೇದಾರಗೌಳ, ಶಂಕರಾಭರಣ, ತ್ರಿವುಡೆ ರಾಗವನ್ನು ನಾವಿನ್ಯದಿಂದ ಹಾಡುತ್ತಿದ್ದರು. ಇವರ ಹಾಡುಗಾರಿಕೆಯನ್ನು ಕೆಲವರು ವಿರೋಧಿಸಿದರು. ಕೊನೆಗೂ ನ್ಯಾಯ ತೀರ್ಮಾನವಾದ ಈ ಪ್ರಕರಣದಲ್ಲಿ ಶಂಭು ಭಾಗವತರೇ ಗೆದ್ದರು. ಇವರ ಕಂಠಸಿರಿ ಅದ್ಭುತವಾಗಿತ್ತು. ಧ್ವನಿವರ್ಧಕವಿಲ್ಲದೆ ಸುತ್ತಹತ್ತುಹಳ್ಳಿಗೆ ಇವರ ಹಾಡು ಕೇಳುತ್ತಿತ್ತು.[೧] ವಿಷ್ಣು ಭಾಗವತ ಊರಕೇರಿ – ೧೮ನೆ ಶತಮಾನದ ಉತ್ತರಾರ್ಧದಲ್ಲಿದ್ದರು. ಇವರು ಕಡತೋಕ ಶಂಭು ಭಾಗವತರ ಸಮಕಾಲೀನರಾಗಿದ್ದರು. ಇವರು ಅನೇಕ ಪ್ರಸಂಗಗಳನ್ನು ಬರೆದ ಉಲ್ಲೇಖವಿದೆ. ಸಭಾಹಿತ ಮಟ್ಟಿನಲ್ಲಿ ಹಾಡುವ ಅಧಿಕೃತ ಭಾಗವತರೆಂದು ಗುರುತಿಸಲಾಗಿತ್ತು. ಶಂಭು ಭಾಗವತರ ಭಾಗವತಿಕೆಯನ್ನು ಪ್ರಶ್ನಿಸಿದ್ದ ಇವರು ಕೂಡ ಅತ್ಯಂತ ಸಮರ್ಥವಾದ ಭಾಗವತರೆನಿಸಿದ್ದರು. ರಾಗ ತಾಳಗಳಲ್ಲಿ ಪರಿಣಿತರು ಎಂದು ಖ್ಯಾತರಾಗಿದ್ದರು. ಕೃತಿಗಳು ಲಭ್ಯವಿಲ್ಲ.

• **ಮಂಜಪ್ಪ ಭಾಗವತ ಮಾಳ್ಕೋಡು** : ಇವರು ಮೂಡ್ಕಣಿ ನಾರಾಯಣ ಹೆಗಡೆಯವರ ಸಮಕಾಲೀನರು. ಮೂಡ್ಕಣಿ ಮೇಳದ ಭಾಗವತರಾಗಿದ್ದರು. ರಾಗಜ್ಞಾನ, ಸ್ವರಜ್ಞಾನ ತಾಳಗಳ ಬಳಕೆಯಲ್ಲಿ ಪ್ರಸಿದ್ಧರಾದ ಇವರು ಮೂಡ್ಕಣಿ ನಾರಾಯಣ ಹೆಗಡೆಯವರ ಪ್ರತಿಭೆಗೆ ಸಮರ್ಥವಾಗಿ ಭಾಗವತಿಕೆ ಮಾಡಿದರು. ಮೇಳ ಇವರಿಂದಲೆ ಖ್ಯಾತಿಗಳಿಸಿತ್ತು.

• **ಮಾವಿನಕೆರೆ ವೆಂಕಟರಮಣ ಯಾಜಿ** : ಯಾಜಿ ಭಾಗವತರೆಂದೆ ಪ್ರಸಿದ್ಧರು. ರಾಮಚಂದ್ರ ಯಾಜಿ ಮತ್ತು ಗಂಗಮ್ಮ ಇವರ ಪುತ್ರರು. ಇಡಗುಂಜಿಯ ಸಮೀಪ ಮಾವಿನಕೆರೆಯವರು. ಕೆರೆಮನೆ ಶಿವರಾಮ ಹೆಗಡೆಯವರಿಗೆ ಇಡುಗುಂಜಿ ಮೇಳ ಸ್ಥಾಪನೆಗೆ ಪ್ರೇರಣೆ ನೀಡಿದರು. ಮೇಳದ ಭಾಗವತರಾಗಿ ಸೇವೆಸಲ್ಲಿಸಿದರು. ಕೆರೆಮನೆ ಶಿವರಾಮ ಹೆಗಡೆಯವರ ಅಭಿನಯ ಯಾಜಿ ಭಾಗವತರ ಹಾಡುಗಾರಿಕೆ ಮನೆಮಾತಾಗಿತ್ತು. ೧೯೫೮ರಲ್ಲಿ ಯಾಜಿ ಭಾಗವತರು ಕಾಲವಾದರು.

---

೧. ಹೊಸತೋಟ ಮಂಜುನಾಥ ಭಾಗವತರು – ಶಂಭು ಭಾಗವತರ ಕುರಿತು ಹೇಳಿದ್ದು. ಸಂದರ್ಶನ.

• **ಊರಕೇರಿ ಸುಬ್ರಾಯ ಭಾಗವತ** : ತಾಳೆಯೋಲೆಗಳಲ್ಲಿ ಅಪಾರಹಿಡಿತವಿದ್ದ ಇವರು ಬಯಲಾಟ ಮತ್ತು ತಾಳಮದ್ದಳೆಯ ಭಾಗವತರಾಗಿ ಪ್ರಸಿದ್ಧರು. ಸಭಾಹಿತ ಮಟ್ಟಿನ ಜ್ಞಾನ ಹಾಗೂ ವಿಷ್ಣು ಭಾಗವತರ ಪರಂಪರೆಯೂ ಇವರಲ್ಲಿತ್ತು. ಊರಕೇರಿ ವಿಷ್ಣುಭಾಗವತರ ಸುಪುತ್ರರಾದ ಇವರು 'ಶುಂಭಾಸುರನ ಕಾಳಗ' ಎಂಬ ಪ್ರಸಂಗವನ್ನು ರಚಿಸಿದ್ದಾರೆ.[೨]

ಈ ಕಾಲದಲ್ಲಿಯೇ ಮಣಿಗಾರ ಭಾಗವತರು ಕರ್ಕಿ, ಗಣೇಶ ಭಾಗವತ ಮಕ್ಕಿಮನೆ, ಇವರು ಎರಡುಮೂರು ತಲೆಮಾರಿಗಿಂತ ಹಿಂದಿನವರಾಗಿದ್ದರು. ಇವರ ಬಗ್ಗೆ ಅಲ್ಲಲ್ಲಿ ದಾಖಲೆಗಳಿವೆ. ಆದರೆ ನಿಖರವಾದ ಕಾಲದ ಉಲ್ಲೇಖವಿರುವುದಿಲ್ಲ. ಚಿತ್ರಗಿ ರಾಮ ಭಾಗವತರು, ಹೆಗಡೆ ಚರು ಭಾಗವತರು, ಹಂದಿಮನೆ ಭಾಗವತರು ಕರ್ಕಿ ಸುಬ್ರಾಯ ಭಾಗವತರು ಮುಂತಾದ ಭಾಗವತರ ಹೆಸರುಗಳಷ್ಟೆ ಉಲ್ಲೇಖವಿದೆ. ಇವರ ಕುರಿತಾದ ಕಲಾಸೇವೆಗಳು ಇನ್ನು ಜನರ ಮನದಲ್ಲಿವೆ. ಆದರೆ ದಾಖಲೆಗಳು ಮಾತ್ರ ಲಭ್ಯವಿಲ್ಲ.

• **ಮಕ್ಕಿಯ ಮಹಾಬಲೇಶ್ವರ ಹೆಗಡೆ** : ಕಡ್ಲೆ ಗ್ರಾಮದ ಹೆಬ್ಬಾರ್ನಕೆರೆಯವರು ಇವರು. ಜಿಲ್ಲೆಯ ಪ್ರಸಿದ್ಧ ಭಾಗವತರಾಗಿದ್ದರು. ಮೃದಂಗವಾದಕರೂ, ಯಕ್ಷಗಾನ ಗುರುವೂ ಆಗಿದ್ದರು. ಇವರು ಕರ್ಕಿ ಯಕ್ಷಗಾನ ಕೇಂದ್ರದ ಪ್ರಥಮ ಗುರುಗಳಾಗಿದ್ದರು. ಹಲವಾರು ಶಿಷ್ಯರನ್ನು ಸಿದ್ಧಪಡಿಸಿದ ಕೀರ್ತಿ ಇವರಿಗಿದೆ.

• **ಕಡತೋಕಾ ಸುಬ್ರಾಯ ಭಾಗವತರು** : ವ್ಯವಸಾಯಿಯಲ್ಲದಿದ್ದರೂ ಯಕ್ಷಗಾನ ಭಾಗವತಿಕೆಯಲ್ಲಿ ಪ್ರಸಿದ್ಧರು. ಶಂಭುಭಾಗವತರ ಪುತ್ರ ಸಾಂಪ್ರದಾಯಿಕ ಭಾಗವತಿಕೆ ಇವರದಾಗಿತ್ತು. ಕಡತೋಕಾ ಮಂಜುನಾಥ ಭಾಗವತರ ಹಿರಿಯ ಸಹೋದರರಲ್ಲಿ ಒಬ್ಬರು. ಕಾಗಾಲ ಈಶ್ವರ ಭಟ್ಟರು, ಗೋಕರ್ಣ ರಾಮೇಶ್ವರ ಮಾಸ್ತರ ಬಾಡದ ಶಿವರಾಮ ಹೆಗಡೆ, ಜಾಗನಳ್ಳಿ ಸುಬ್ರಾಯ ಹೆಗಡೆ, ರಾಮಚಂದ್ರ ಅವಧಾನಿ ಮುಂತಾದವರು ಹಿಂದಿನ ತಲೆಮಾರಿನ ಪ್ರಸಿದ್ಧ ಭಾಗವತರಾಗಿದ್ದರು.

• **ಹಂದಿಮನೆ ಭಾಗವತರು** : ಶಿರಸಿ ತಾಲ್ಲೂಕಿನ ಕಡಬಾಳ ಹಂದಿಮನೆಯವರು ಇವರ ಹಿರಿಯರ ತಲೆಮಾರಿನವರಾಗಿದ್ದರು. ಇವರ ವೈಶಿಷ್ಟ್ಯತೆ ಎಂದರೆ ಮನಸ್ಸಿನಲ್ಲಿ ಪ್ರಸಂಗವನ್ನು ಗಟ್ಟಿಮಾಡಿಕೊಂಡು ಭಾಗವತಿಕೆ ಮಾಡಬಲ್ಲವರಾಗಿದ್ದರು. ತಾಳೆ ಬರಹದ ಪ್ರತಿಯನ್ನು ನೋಡಿಕೊಂಡು ಭಾಗವತಿಕೆ ಮಾಡುವ ಸಾಮರ್ಥ್ಯ ಇವರಲ್ಲಿತ್ತು. ಶೃಂಗಾರ ಮತ್ತು ಕರುಣರಸದ ಪದ್ಯಗಳನ್ನು ಅತ್ಯಂತ ಸುಂದರವಾಗಿ ಹಾಡುತ್ತಿದ್ದರು. ಕಡಬಾಳ, ಕೋಳಿಗಾರ, ಮೆಣಸೆ, ಸೋಂದಾ ಮೇಳಗಳಲ್ಲಿ ಭಾಗವತಿಕೆ ಮಾಡುತ್ತಿದ್ದರು.[೩]

• **ಕೆರೆಗದ್ದೆ ಭಾಗವತರು** : ಮೆಣಸೆ, ಗೋಣಸರ, ಹೊಸಳ್ಳಿ ಮೇಳಗಳ ಭಾಗವತರಾದ ಇವರು ಶಿರಸಿ ತಾಲ್ಲೂಕಿನ ಹಳೆಯ ಕಲಾವಿದರು. ಇವರು ಅನಕ್ಷರಸ್ಥರಾಗಿದ್ದು ಪದಗಳನ್ನು ಕೇಳಿದ ಅಭ್ಯಾಸ ಬಲದಿಂದಲೇ ಹಾಡುತ್ತಿದ್ದರು.

---

೨. ಊರಕೇರಿ ಲಕ್ಷ್ಮೀನಾರಾಯಣ ಭಾಗವತರ ಸಂದರ್ಶನ ಹಾಗೂ ಮಾಹಿತಿ.
೩. ಹೊಸತೋಟ ಮಂಜುನಾಥ ಭಾಗವತರು ಗಟ್ಟದ ಮೇಲಿನ ಮೇಳಗಳಲ್ಲಿ ಭಾಗವತರಾಗಿದ್ದು ಈ ಮಾಹಿತಿಯನ್ನು ನೀಡಿರುತ್ತಾರೆ.

• **ಆಡುಕಳ ಪರಮೇಶ್ವರ ಹೆಗಡೆ ಕಲ್ಲಂಚು** : ಉತ್ತರಕನ್ನಡ ಯಕ್ಷಗಾನ ಪರಂಪರೆಯ ಅದ್ಭುತ ಕಲಾವಿದರಾಗಿದ್ದರು. ಆದರೆ ಯಾವುದೇ ದಾಖಲೆಗಳಿಲ್ಲದೆ ಅವರ ಕುರಿತಾದ ವಿವರಗಳಿಲ್ಲ. ಹಿರಿಯ ತಲೆಮಾರಿನವರ ಮನದಾಳದಲ್ಲಷ್ಟೆ ಇದೆ. ಇವರು ಕಿನ್ನೀರ ನಾರಾಯಣ ಹೆಗಡೆಯವರ ಗುರುಗಳಾಗಿದ್ದರು. ಮೃದಂಗವಾದಕರೂ, ಭಾಗವತರೂ ಆದ ಇವರ ಕಂಠಶ್ರೀ ಅದ್ಭುತವಾಗಿತ್ತು. ರಾಗ–ತಾಳ ಜ್ಞಾನವೂ ಉತ್ತಮವಾಗಿತ್ತು.[೪]

• **ಬೊಮ್ಮನಹೊಂಡ ಮಾಯಿ ಭಾಗವತರು** : ತಾಳ ಮದ್ದಳೆಯ ಭಾಗವತರಾಗಿದ್ದರು. ಹೊನ್ನಾವರ ತಾಲ್ಲೂಕಿನ ಬೊಮ್ಮಹೊಂಡದವರಾದ ಇವರು ಹಿಂದಿನ ತಲೆಮಾರಿನ ಪ್ರಸಿದ್ಧರು. ಏಕಾದಶಿ ಸರಣಿ ತಾಳಮದ್ದಳೆ ಭಾಗವತರು.

• **ವರ್ನಕೇರಿ ನಾರಾಯಣ ಹೆಗಡೆ** : ಹವ್ಯಾಸಿ ಭಾಗವತರಾದರೂ ಅತ್ಯಂತ ಪ್ರಸಿದ್ಧರು. ಉತ್ತಮ ಹಾಡುಗಾರಿಕೆಯಿಂದ ಪ್ರಸಿದ್ಧರಾಗಿದ್ದರು.

• **ಕೂಜಳ್ಳಿ ಲಕ್ಷ್ಮೀನಾರಾಯಣ ಭಾಗವತರು** : ಇವರು ಊರಕೇರಿ ಮೇಳ, ಹೆಗಡೆ ಮೇಳ, ಮೂರೂರು ಮೇಳಗಳಲ್ಲೂ ಭಾಗವತರಾಗಿದ್ದರು. ಉತ್ತರಕನ್ನಡ ಪರಂಪರೆಯ ಶೈಲಿಯ ಭಾಗವತರು ಇವರಾಗಿದ್ದರು.

• **ಬಂಡವಾಳ ಅಣ್ಣಯ್ಯ ಹೆಗಡೆ (ಅಣ್ಣಯ್ಯಜ್ಜ)** : ಬಂಡವಾಳ ಮೇಳದ ಭಾಗವತರು, ಧ್ವನಿವರ್ಧಕವಿಲ್ಲದೆ ಕಂಠಶ್ರೀಯಿಂದಲೇ ಪ್ರಸಿದ್ಧರಾಗಿದ್ದರು. ಇವರು ಆರಂಭದಲ್ಲಿ ಸ್ತ್ರೀಪಾತ್ರಗಳನ್ನು ಮಾಡುತ್ತಿದ್ದರು. ಒಳ್ಳೆಯ ನಿರ್ದೇಶಕರಾಗಿದ್ದರು.[೫]

• **ದೇವಗುಡಿ ಭಾಗವತರು** : ಶಿರಸಿ ತಾಲ್ಲೂಕಿನ ಹೆಗಡೆ ಕಟ್ಟಾದ ದೇವಗುಡಿಯವರು ಕಥಾನಕವನ್ನು ನೋಡಿ ಆಶು ಪ್ರಸಂಗವನ್ನು ರಚಿಸಿ ಭಾಗವತಿಕೆ ಮಾಡುತ್ತಿದ್ದರು. ತಾಳಲಯಗಳಲ್ಲಿ ಉತ್ತಮ ಸಾಧನೆ ಮಾಡಿದ್ದರು.

• **ಕೋಣೆಸರ ಸುಬ್ರಾಯ ಹೆಗಡೆ:** ಶಿರಸಿ ತಾಲ್ಲೂಕಿನ ಸೋಂದಾದವರು. ಭಾಗವತರೂ ಹೌದು. ವೇಷಧಾರಿಗಳು ಹೌದಾಗಿದ್ದರು. ಇವರು ಸುಧನ್ವ, ಕರ್ಣ, ಕೀಚಕ ಮುಂತಾದ ಪಾತ್ರಗಳನ್ನು ಮಾಡುತ್ತಿದ್ದರು.

• **ಬೊಮ್ಮನಹಳ್ಳಿ ಗಲ್ಲದಮನೆ ಭಾಗವತರು:** ರಾಮಕೃಷ್ಣ ಹೆಗಡೆ ಇವರ ಹೆಸರು. ಉತ್ತಮ ಭಾಗವತರಾಗಿ ಶಿರಸಿ ತಾಲ್ಲೂಕಿನ ವಿವಿಧ ಮೇಳಗಳಲ್ಲಿ ಭಾಗವತಿಕೆ ಮಾಡಿದರು.

• **ಬಾಳೆಹದ್ದಕೃಷ್ಣಭಾಗವತರು:** ಯಲ್ಲಾಪುರ ತಾಲ್ಲೂಕಿನಲ್ಲಿ ವಿಶೇಷವಾಗಿ ಭಾಗವತ ಮನೆತನಗಳಿವೆ. ಇಲ್ಲಿ ಹಿಂದೂಸ್ತಾನಿ ಸಂಗೀತ, ಕರ್ನಾಟಕ ಸಂಗೀತದ ಪ್ರಭಾವವೂ ಹೆಚ್ಚು. ಬಾಳೆಹದ್ದ, ಕವಾಳೆ ಇವು ಅತಿ ಪ್ರಸಿದ್ಧ ಭಾಗವತಿಕೆ ಮನೆತನಗಳಾಗಿವೆ. ಬಾಳೆಹದ್ದ ಕೃಷ್ಣ ಭಾಗವತ ಇವರು ಶಾಸ್ತ್ರೀಯ ಸಂಗೀತಗಾರರು. ಯಕ್ಷಗಾನ ಪದ್ಯವನ್ನು ಶಾಸ್ತ್ರೀಯರಾಗಕ್ರಮದಂತೆ ಹೇಳುವ ಭಾಗವತರು ಸಂಗೀತ ಸಾಹಿತ್ಯವನ್ನು

೪. ಕೆ. ವಿ. ಹೆಗಡೆ ಕವಲಕ್ಕಿ ಇವರು ನೀಡಿದ ಮಾಹಿತಿ.
೫. ಶ್ರೀಧರ ಹೆಗಡೆ ಬಂಡವಾಳ ಇವರು ನೀಡಿದ ಮಾಹಿತಿ.

ಕ್ರಮವಾಗಿ ತಿಳಿದು ಭಾಗವತಿಕೆಯನ್ನು ಮಾಡಿದವರು. ಇವರ ಪದ್ಯ ಹೇಳುವ ಕ್ರಮಕ್ಕೂ ಕಡತೋಕಾ ಲಕ್ಷ್ಮೀನಾರಾಯಣ ಭಾಗವತರ ಹಾಡುಗಾರಿಕೆಗೂ ತುಂಬಾ ಸಾಮ್ಯವಿರುವುದನ್ನು ಕಾಣಬಹುದು.[೬]

• **ಬಾಳೆಹದ್ದ ತಿಮ್ಮಪ್ಪ ಭಾಗವತರು:** ತಂದೆ ಕೃಷ್ಣ ಭಾಗವತರಿಂದ ಅಭ್ಯಾಸ ಮಾಡಿ ತಾಳ-ಲಯ-ಗಾನ ಚೆನ್ನಾಗಿರುವುದರಿಂದ ಪ್ರಸಿದ್ಧ ಭಾಗವತರಾಗಿ ಇಂದಿಗೂ ಭಾಗವತಿಕೆಯ ಅಭ್ಯಾಸಿಗಳಿಗೆ ಗುರುವಾಗಿದ್ದಾರೆ. ಇವರು ಶೃಂಗಾರ ರಸದ ಹಾಡುಗಳ ಹಾಡು ಅತ್ಯಂತ ರಮಣೀಯವಾಗಿರುತ್ತದೆ. ಪರಂಪರೆಯ ಶೈಲಿಗಿಂತ ಸ್ವಲ್ಪ ಭಿನ್ನವಾದ ರೀತಿ ಇದಾಗಿದೆ. ತಂದೆಯವರ ಪರಂಪರೆಯ ಶೈಲಿ ಇವರಲ್ಲಿ ಮುಂದುವರಿಯಲಿಲ್ಲ.

◆ **ನೆಬ್ಬೂರು ನಾರಾಯಣ ಭಾಗವತ :** ದೇವರು ಹೆಗಡೆ ಮತ್ತು ಗಣಪಿ ನೆಬ್ಬೂರರ ಮಾತಾಪಿತೃಗಳು. ಬಾಲ್ಯದಲ್ಲಿ ಬಸ್ತೀಕರ್ ಮಾಸ್ತರ್‌ರಿಂದ ಪ್ರೇರಣೆಗೊಂಡು ಯಕ್ಷಗಾನ ರಂಗಕ್ಕಿಳಿದರು. ಕೆರೆಮನೆ ಶಿವರಾಮ ಹೆಗಡೆಯವರ ಒಡನಾಟದಿಂದ ಇಡಗುಂಜಿ ಮೇಳಕ್ಕೆ ಸೇರಲು ಅವಕಾಶವಾಯಿತು. ಯಾಜಿ ಭಾಗವತರ ವೃದ್ಧಾಪ್ಯದಲ್ಲಿ ನೆಬ್ಬೂರು ನಾರಾಯಣ ಭಾಗವತರು ಇಡಗುಂಜಿ ಮೇಳದ ನೂತನ ಭಾಗವತರಾದರು. ೧೯೫೬ನೇ ಇಸ್ವಿಯಲ್ಲಿ ಅವರ ಇಪ್ಪತ್ತನೆ ವಯಸ್ಸಿನಲ್ಲಿ ಹೈಗುಂದ ಪದ್ಮನಾಭಯ್ಯನವರ ಮನೆಯಲ್ಲಿ ಯಕ್ಷಗಾನಾಭ್ಯಾಸ ಮಾಡಿದರು. ೧೯೫೯ರಲ್ಲಿ ಭಾಗವತಿಕೆಯನ್ನು ಇಡಗುಂಜಿ ಮೇಳದಲ್ಲಿ ಆರಂಭಿಸಿದರು. ಮುಂದೆ ಇಡಗುಂಜಿ ಮೇಳದೊಂದಿಗೆ ದೇಶವಿದೇಶ ಸುತ್ತಿದರು. ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕೆರೆಮನೆ ಶಿವರಾಮ ಹೆಗಡೆ ಪ್ರಶಸ್ತಿ ಇವರಿಗೆ ದೊರೆತಿದೆ. ಕಂಠಮಾಧುರ್ಯದಿಂದ ಬಹುಕಾಲ ಒಂದೇ ಮೇಳದಲ್ಲಿ ಭಾಗವತರಾಗಿ ಒಂದು ಪರಂಪರೆಯ ಮೂರು ತಲೆಮಾರಿನ ಕಲಾವಿದರನ್ನು ರಂಗದಲ್ಲಿ ಕುಣಿಸಿದ ಕೀರ್ತಿ ಇವರದು. ಅಂತೆಯೇ ಇಡಗುಂಜಿ ಮೇಳದ ಪ್ರಸಿದ್ಧಿಗೂ ಕಾರಣರಾದವರು ಇವರು. ಈಗಲೂ ಭಾಗವತಿಕೆ ಮಾಡುವ ಉತ್ಸಾಹದಲ್ಲಿದ್ದಾರೆ. "ನಿನಾದ" ಇವರ ಆತ್ಮಕಥನ.

◆ **ಗುಂಡಿಬೈಲು ಸುಬ್ರಾಯ ಭಟ್ಟ :** ಹೊನ್ನಾವರ ತಾಲ್ಲೂಕಿನ ಗುಂಡಿಬೈಲಿನವರು, ಜನನ ೧೬-೧೧-೧೯೪೪ ಇವರು ವೇಷಧಾರಿಗಳು ಪ್ರಸಂಗಕರ್ತರು, ಭಾಗವತರೂ ಹೌದು. ಯಕ್ಷಗಾನ ಕಲಿಕಾಕೇಂದ್ರ, ಗುಂಡಬಾಳಾ ಮೇಳ ಸಂಚಾಲಕರೂ ಆಗಿದ್ದರು.[೭]

◆ **ಉಮೇಶ ಭಾಗ್ವತ್ ಬಾಡ :** ಉಮೇಶ ಭಾಗವತರು ಅಮೃತೇಶ್ವರಿ, ಪಂಚಲಿಂಗೇಶ್ವರ ಮೇಳದ ಭಾಗವತರಾಗಿದ್ದರು. ಉತ್ತಮ ಕಂಠಸಿರಿ, ಸಾಂಪ್ರದಾಯಿಕ ಹಾಡುಗಾರಿಕೆಗೆ ಪ್ರಸಿದ್ಧರು. ಇವರು ನವಿಲುಗೋಣು ಮಕ್ಕಳ ಮೇಳ ಸಂಘಟಕರು ಆಗಿದ್ದಾರೆ. ನಾರಾಯಣಪ್ಪ ಉಪ್ಪೂರು ಇವರ ಶಿಷ್ಯರು ಆಗಿದ್ದ ಉಮೇಶ ಭಾಗವತರು ಯಕ್ಷಗಾನಕ್ಕೆ ವಿಶಿಷ್ಟ ಶೈಲಿಯ ಕೊಡುಗೆಗಳನ್ನು ನೀಡಿರುತ್ತಾರೆ.

◆ **ಸಹಸ್ರಳ್ಳಿ ಶಿವರಾಮ ಭಟ್ಟ:** ಕೊಳಗಿಬೀಸಿನ ಭಾಗವತರು, ಚಾರಗಲ್ಲು ಭಾಗವತರು, ಅಡಕಳ್ಳಿ ಭಾಗವತರು, ಜಾಗನಳ್ಳಿ ಭಾಗವತರು, ಹೊಸತೋಟ ನರಸಿಂಹ ಭಾಗವತರು, ಹೊಸತೋಟದ ವೆಂಕಪ್ಪಹೆಗಡೆ ಇವರೆಲ್ಲರೂ ಸಹಸ್ರಳ್ಳಿ, ಹೊಸತೋಟ, ಕೊಳಗಿಬೀಸು ಮೇಳದ ಭಾಗವತರಾಗಿದ್ದರು.

---

೬. ಯಲ್ಲಾಪುರ ತಾಲೂಕಿನ ಕ್ಷೇತ್ರ ಕಾರ್ಯ
೭. ಗುಂಡಿಬೈಲ್ ಸುಬ್ರಾಯ ಭಟ್ಟರ ಸಂದರ್ಶನ.

◆ **ಚಾರಗಲ್ಲು ಭಾಗವತರು** : ಶಿರಸಿ – ಸಿದ್ದಾಪುರ ಸೀಮೆಯಲ್ಲಿ ಪ್ರಸಿದ್ಧ ಭಾಗವತರು. ಈ ತಲೆಮಾರಿನಲ್ಲಿ ಈ ಮನೆತನದ ವಿಶ್ವನಾಥ ಹೆಗಡೆಇವರು ಭಾಗವತರಾಗಿರುತ್ತಾರೆ. ಉತ್ತರಕನ್ನಡದ ಹಿಂದಿನ ತಲೆಮಾರಿನಲ್ಲೂ ಚಾರಗಲ್ ಭಾಗವತರು ಅವಿಸ್ಮರಣೀಯರೇ ಆಗಿದ್ದಾರೆ.

❖ಹಿರಿಯ ತಲೆಮಾರು:

• **ರಾಮಚಂದ್ರ ಹೆಗಡೆ ಮತ್ತು ಅಣ್ಣಯ್ಯ ಹೆಗಡೆ** ಸುಮಾರು ೧೫೦ ವರ್ಷಗಳ ಹಿಂದೆ ಅಂಬಗಾಮೆ ಹೆಗಡೆಯವರ ಮನೆಯಲ್ಲಿ ಒಂದು ಮೇಳವಿತ್ತು. ಆ ಮೇಳದ ರಾಮಚಂದ್ರ ಹೆಗಡೆ ಮತ್ತು ಅಣ್ಣಯ್ಯ ಹೆಗಡೆ ಎಂಬ ಕಲಾವಿದರು ಅತ್ಯಂತ ಪ್ರಸಿದ್ಧರು. ರೇಗುಪ್ತಿ ಮತ್ತು ಸಾವೇರಿರಾಗಗಳನ್ನು ಹಾಡುತ್ತಿದ್ದ ರೀತಿ ಇಂದಿಗೂ ಜನಮನದಲ್ಲಿದೆ.[೮]

• **ಯಲ್ಲಾಪುರ ನಾಗಭಾಗವತರು** : ಭರತನಳ್ಳಿ ಮೇಳದ ಭಾಗವತರು, ಯಕ್ಷಗಾನದಲ್ಲಿ ಭರತನಳ್ಳಿಗೆ ಅದರದ್ದಾದ ಪರಂಪರೆಯಿತ್ತು. ಪರಂಪರೆ ಶೈಲಿಯ ಹಾಡುಗಾರಿಕೆಗೆ ನಾಗಭಾಗವತರು ಪ್ರಸಿದ್ಧರಾದರು.

• **ಕೋಮಾಳೆ ಭಾಗವತರು** : ಯಲ್ಲಾಪುರ ಸೀಮೆಯ ಹಿಂದಿನ ತಲೆಮಾರಿನ ಭಾಗವತರು ಕೋಮಾಳೆ ಭಾಗವರು. ಇವರು ಭರತನಳ್ಳಿ ಮೇಳದ ಭಾಗವತರಾಗಿದ್ದರು. ಹೊನ್ನಗದ್ದೆ, ಸಹಸ್ರಳ್ಳಿ ಮೇಳಗಳಲ್ಲೂ ಭಾಗವತರಾಗಿದ್ದರು.

• **ಹೆಗಡೇರಮನೆ ಸುಬ್ರಾಯ ಹೆಗಡೆ** : ಸುಬ್ರಾಯ ಹೆಗಡೆಯವರು ಎರಡು ತಲೆಮಾರಿನ ಹಿಂದಿನ ಭಾಗವತರು. ಯಲ್ಲಾಪುರ ಸೀಮೆಯಲ್ಲಿ ಪ್ರಸಿದ್ಧರು. ಇವರು ಭಾಗವತಿಕೆ ಮಾಡಲು ಯಾಣ, ಮತ್ತಿಘಟ್ಟ, ಮೆಣಸೆ ಸೀಮೆಗಳಿಗೆ ಹೋಗುತ್ತಿದ್ದರು. ಇವರು ಉತ್ತಮ ಕವಿಗಳಾಗಿದ್ದರಂತೆ. ಇವರು ಬಳಸುತ್ತಿದ್ದ ತಂಬೂರಿ ಇನ್ನೂ ಉಳಿದಿದೆ.

• **ಬಳಗಾರ ವೆಂಕಟ್ರಮಣ ಭಾಗವತರು** : ಹೊನ್ನಗದ್ದೆ ಮೇಳದ ನಾಲ್ಕನೆ ತಲೆಮಾರಿನ ಭಾಗವತರು. ಇವರು. ಯಾಣ, ಮತ್ತಿಘಟ್ಟ, ಗುಂದ, ಕಾರವಾರ, ಕಿನ್ನರ ಸಿದ್ಧರಗಳಲ್ಲೂ ಯಕ್ಷಗಾನ ಪ್ರದರ್ಶನ ನೀಡಿ ಭಾಗವತಿಕೆಯಲ್ಲಿ ಪಾಲ್ಗೊಂಡರು. ಸ್ವರ್ಣವಲ್ಲಿ ಸಂಸ್ಥಾನದಲ್ಲಿ ಕೂಡ ಯಕ್ಷಗಾನ ಏರ್ಪಡಿಸಿದರು.

• **ಮೂರೂರು ಕೃಷ್ಣ ಹೆಗಡೆ** : ಮೂಲತಃ ಕುಮಟಾ ತಾಲ್ಲೂಕು ಮೂರೂರಿನವರಾದ ಇವರು ಸ್ತ್ರೀ ಪಾತ್ರಧಾರಿ, ಮೃದಂಗ ವಾದಕ, ಅರ್ಥಧಾರಿ, ಭಾಗವತರೂ ಕೂಡ ಹೌದು. ಶಿರಸಿ–ಸಿದ್ದಾಪುರಗಳಲ್ಲಿ ಭಾಗವತಿಕೆಯಿಂದ ಜನಪ್ರಿಯರಾಗಿದ್ದರು.

• **ತಾರಿಕುಂಟೆ ತಮ್ಮಯ್ಯ ಭಾಗವತರು** : ಹೊನ್ನಗದ್ದೆ ಮೇಳದ ಐದನೆ ತಲೆಮಾರಿನ ಭಾಗವತರು. ಇವರಿಗೆ ೩೦–೪೦ ಪ್ರಸಂಗಗಳು ಕಂಠಸ್ಥವಾಗಿದ್ದವು. ಇವರು ಕಾರವಾರದ ಗುಂದ ಮುಂತಾದೆಡೆ ಮೆಣಸೆ ಸೀಮೆಯಲ್ಲಿ ಪ್ರಸಿದ್ಧರಾಗಿದ್ದರು.

---

೮. ಯಲ್ಲಾಪುರ ತಾಲೂಕಿನ ಕ್ಷೇತ್ರಕಾರ್ಯದಲ್ಲಿ ತಿಳಿದುಕೊಂಡ ಮಾಹಿತಿ.

• **ಕುಷ್ಟನಮನೆ ರಾಮ ಭಾಗವತರು** : ಯಲ್ಲಾಪುರ ಸೀಮೆಯ ಹೊನ್ನೆಗದ್ದೆ ಮೇಳದ ಕಲಾವಿದರು. ಅತ್ಯಂತ ಪ್ರಸಿದ್ಧ ಭಾಗವತರಾಗಿದ್ದರು.

❖ ವರ್ತಮಾನದ ಭಾಗವತರು

೧) **ಕಪ್ಪೆಕೆರೆ ಸುಬ್ರಾಯ ಹೆಗಡೆ** : 'ಕಪ್ಪೆಕೆರೆ' ಕುಟುಂಬದಲ್ಲಿ ಶ್ರೀಮಾಧವ ಹೆಗಡೆ ಕಲಾವಿದರಾಗಿ ಮೇಳದಲ್ಲಿದ್ದಾರೆ. ಸುಬ್ರಾಯ ಭಾಗವತರು ಮಾಧವ ಹೆಗಡೆಯವರ ಅಣ್ಣ. ಇವರು ಯಕ್ಷಗಾನದ ಭಾಗವತಿಕೆಯನ್ನು ಗುಂಡಬಾಳಾ ಮೇಳದಲ್ಲಿ ಆರಂಭಿಸಿದರು. ಬಹಳಕಾಲ ಅದೇ ಮೇಳದಲ್ಲಿ ಭಾಗವತರಾಗಿದ್ದರು. ಸುಬ್ರಾಯ ಹೆಗಡೆಯವರು ಯಕ್ಷಗಾನದ ಗುರುವಾಗಿ ಅನೇಕ ಜನರಿಗೆ ಭಾಗವತಿಕೆಯನ್ನು ಕಲಿಸಿದ್ದಾರೆ.

೨) **ಕೆ.ಪಿ. ಹೆಗಡೆ ಗೊಳಗೋಡು** : ಅಮೃತೇಶ್ವರಿ, ಶಿರಸಿಪಂಚಲಿಂಗೇಶ್ವರ, ಗುಂಡಬಾಳಾ ಮೇಳದ ಭಾಗವತರಾಗಿದ್ದರು. ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಶಿಕ್ಷಕರಾಗಿದ್ದಾರೆ.

೩) **ಕಡತೋಕಾ ಗೋಪಾಲಕೃಷ್ಣ ಭಾಗವತ (ಜೋಗಿಮನೆ)** : ಪ್ರಸ್ತುತ ಕರ್ಕಿ ಮೇಳದ ಭಾಗವತರಾಗಿದ್ದಾರೆ. ಇವರು ಕಡತೋಕಾ ಜೋಗಿ ಮನೆ ಶಂಕರ ಭಟ್ಟರ ಪುತ್ರರು. ೧೬ನೆ ವಯಸ್ಸಿನಲ್ಲಿ ಪಿ.ವಿ. ಹಾಸ್ಯಗಾರರ ಯಕ್ಷಗಾನ ಶಾಲೆಗೆ ಸೇರಿದರು. ಇವರ ಚಿಕ್ಕಪ್ಪ ಕಡತೋಕಾ ಕೃಷ್ಣ ಭಾಗವತರು. ಇವರೆ ಭಾಗವತಿಕೆಯ ಗುರುಗಳಾಗಿದ್ದರು. ಉತ್ತಮ ಕಂಠಶ್ರೀ, ರಾಗತಾಳಗಳ ಪರಿಜ್ಞಾನ ಇರುವ ಇವರು ಪರಂಪರೆಯ ಭಾಗವತರಾಗಿಯೇ ಉಳಿದುಕೊಂಡಿದ್ದಾರೆ. ಕರ್ಕಿ ಹಾಸ್ಯಗಾರರ ಮೇಳದ ಪ್ರದರ್ಶನ, ತಾಳಮದ್ದಳೆ ಹವ್ಯಾಸಿ ಆಟಗಳಲ್ಲಿ ಭಾಗವತಿಕೆ ಮಾಡುವ ಇವರು ವರ್ತಮಾನದ ಎಲ್ಲಾ ಪ್ರಸಿದ್ಧ ಕಲಾವಿದರಿಗೆ ಹಿಮ್ಮೇಳ ನೀಡಿದ್ದಾರೆ.

೪) **ರವೀಂದ್ರ ಭಟ್ಟ ಅಚವೆ** : ಪ್ರಸ್ತುತ ಬಡಗುತಿಟ್ಟಿನಲ್ಲಿ ಪ್ರಸಿದ್ಧರು. ಇವರು ಸಾಲಿಗ್ರಾಮ, ಪೆರ್ಡೂರು, ಮಂದರ್ತಿ ಮೇಳಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅತಿಥಿ ಭಾಗವತರಾಗಿ ಬಡಗಿನ ಮೇಳಗಳಿಗೆ ಭಾಗವತಿಕೆ ನೀಡುತ್ತಿದ್ದಾರೆ. ಸೊಗಸಾದ ಶೈಲಿ, ಉತ್ತಮ ಕಂಠದಿಂದ ಪ್ರಸಿದ್ಧರಾಗಿದ್ದಾರೆ.

೫) **ಶಂಕರಭಟ್ ಬ್ರಹ್ಮೂರು** : ಪೆರ್ಡೂರು ಮೇಳದ ಭಾಗವತರಾಗಿರುವ ಇವರು ಭರವಸೆಯ ಯುವ ಭಾಗವತರು. ಉತ್ತರ ಕನ್ನಡ ಪರಂಪರೆಯ ಪರಿಜ್ಞಾನವನ್ನು ಹೊಂದಿದ ಇವರ ಭಾಗವತಿಕೆ ಶೈಲಿ ಸಾಂಪ್ರದಾಯಕತೆಯಿಂದ ಪ್ರಸಿದ್ಧವಾಗಿದೆ.

೬) **ಮೋಹನ ಹೆಬ್ಬಾರ್ ಅಂತ್ರವಳ್ಳಿ** : ಹವ್ಯಾಸಿ ಭಾಗವತರು. ಕುಮಟಾ ತಾಲ್ಲೂಕಿನ ಅಂತ್ರವಳ್ಳಿಯವರು. ಇವರು ವಿವಿಧ ವೃತ್ತಿ ಮೇಳ ಹವ್ಯಾಸಿ ಕೂಟಗಳಲ್ಲಿ ಭಾಗವತರಾಗಿದ್ದಾರೆ.

೭) **ದಂಟಕಲ್ ಸತೀಶ ಹೆಗಡೆ** : ಸಿದ್ದಾಪುರ ತಾಲ್ಲೂಕಿನ ದಂಟಕಲ್ ಊರಿನವರು. ಇವರ ಮನೆತನದವರು ಕಲಾವಿದರೂ ಆಗಿದ್ದಾರೆ. ಇವರು ವೃತ್ತಿ ಮೇಳದ ಭಾಗವತರಾಗಿಯೂ ಪ್ರಸಿದ್ಧರು.

೮) ಪ್ರಸಾದ ಹೆಗಡೆಗೋಡೆ : ಪ್ರಸಿದ್ಧ ಕಲಾವಿದ ಗೋಡೆ ನಾರಾಯಣ ಹೆಗಡೆಯವರ ಪುತ್ರ. ಭಾಗವತಿಕೆಯನ್ನು ಕಪ್ಪೆಕೆರೆ ಸುಬ್ರಾಯ ಭಾಗವತರಲ್ಲಿ ಅಭ್ಯಾಸ ಮಾಡಿ ಗುಂಡಬಾಳಾ ಮೇಳದ ಭಾಗವತರಾಗಿದ್ದರು. ಇವರು ವಿವಿಧ ವೃತ್ತಿ ಮೇಳದಲ್ಲಿ ಭಾಗವತರಾಗಿ ಕಾರ್ಯನಿರ್ವಹಿಸಿರುತ್ತಾರೆ.

೯) ವಿಶ್ವನಾಥ ಭಾಗವತ ಚಾರಗಲ್ಲು : ಉತ್ತರಕನ್ನಡದ ಸಿದ್ದಾಪುರ ತಾಲ್ಲೂಕಿನವರು. ಇವರ ಕುಟುಂಬದ ಹಿರಿಯರು ಪ್ರಸಿದ್ಧ ಭಾಗವತರಾಗಿದ್ದರು. ಉತ್ತರಕನ್ನಡದ ಹಳೆಯ ಮೇಳಗಳಲ್ಲಿ ಹವ್ಯಾಸಿ ಕೂಟದಲ್ಲಿ ಭಾಗವತರಾಗಿ ಮನೆತನದ ಹಿರಿಯರು ಹೆಸರುವಾಸಿಯಾಗಿದ್ದಾರೆ.

೧೦) ಅಬ್ಬಳಮನೆ ಗಣಪತಿ ಹೆಗಡೆ ಹಿಲ್ಲೂರು : ಅಂಕೋಲ ತಾಲ್ಲೂಕಿನ ಹಿಲ್ಲೂರು ಇವರ ಸ್ವಂತ ಊರು. ಇವರು ವಿವಿಧ ಮೇಳಗಳಲ್ಲಿ ಭಾಗವತರಾಗಿ ಸೇವೆಸಲ್ಲಿಸಿದ್ದಾರೆ.

೧೧) ಗಜಾನನ ಹೆಗಡೆ ಧರ್ಮಶಾಲೆ : ಉಡುಪಿಯ ಸಂಯಮಂ ತಾಳಮದ್ದಳೆ ಕೂಟದ ಭಾಗವತರು ಗುಂಡಬಾಳ ಮೇಳದಲ್ಲಿ ಭಾಗವತರಾಗಿದ್ದಾರೆ.

೧೨) ಶ್ರೀಪಾದ ಭಟ್ಟ ಜೋಗಿಮನೆ : ಕಡತೋಕಾ ಜೋಗಿಮನೆ ಕೃಷ್ಣ ಭಾಗವತರಲ್ಲಿ ಭಾಗವತಿಕೆ ಅಭ್ಯಾಸ ಮಾಡಿದ್ದಾರೆ. ಇವರು ಕೃಷ್ಣ ಭಾಗವತರ ಕುಟುಂಬದವರು. ಹವ್ಯಾಸಿ ಭಾಗವತರಾಗಿ ತಾಳಮದ್ದಳೆ ಕೂಟ, ಬಯಲಾಟಗಳಲ್ಲಿ ಭಾಗವತಿಕೆ ಮಾಡಿದ್ದಾರೆ. ಇವರು ಕೃಷ್ಣಭಾಗವತರ ಭಾಗವತಿಕೆ ಶೈಲಿಯ ಪ್ರವರ್ತಕರೂ ಹೌದು.

೧೩) ಶ್ರೀಧರ ಭಟ್‌ಕತಗಾಲು : ವೃತ್ತಿ ವೇಳದ ಭಾಗವತರು, ಇವರು ಕುಮಟಾ ತಾಲ್ಲೂಕಿನ ಕತಗಾಲಿನವರು. ವಿವಿಧ ಮೇಳಗಳಲ್ಲಿ ಸೇವಸಲ್ಲಿಸುತ್ತಿದ್ದಾರೆ.

೧೪) ಅಳವಳ್ಳಿ ನಾರಾಯಣ ಹೆಗಡೆ : ಇವರದು ಯಕ್ಷಗಾನದ ಬಹುಮುಖ ಪ್ರತಿಭೆ. ಭಾಗವತರೂ ಆಗಿದ್ದರು. ವೇಷಧಾರಿಗಳು ಆಗಿದ್ದರು. ವಿವಿಧ ವೃತ್ತಿ ಮೇಳಗಳಲ್ಲಿ ಸೇವೆಸಲ್ಲಿಸಿದ್ದಾರೆ.

೧೫) ರಾಮ ಹೆಗಡೆ ಮೂರೂರು : ವೇಷಧಾರಿಗಳು ಯಕ್ಷಗಾನದ ಪರಿಕರ ತಯಾರಿಸುವವರೂ ಭಾಗವತರು ಆಗಿದ್ದಾರೆ. ಇವರು ಯಕ್ಷಗಾನ ಕೇಂದ್ರವನ್ನು ನಡೆಸುತ್ತಿದ್ದಾರೆ.

೧೬) ಬರತೋಟ ಗಣಪತಿ ಭಟ್ : ಭಾಗವತರಾಗಿ ವೃತ್ತಿ ಮೇಳ ಹವ್ಯಾಸಿ ಕೂಟದಲ್ಲಿ ಸೇವೆ ಸಲ್ಲಿಸಿದ್ದಾರೆ. ಉತ್ತಮವಾಗಿ ಹಾಡಬಲ್ಲ ಪ್ರತಿಭಾವಂತರಾಗಿ ಹೆಸರಾಗಿದ್ದಾರೆ.

೧೭) ನಾಗೇಂದ್ರ ಭಟ್ ಅಚವೆ : ಮಹಾಬಲ ಹೆಗಡೆಯವರ ಶಿಷ್ಯರಾಗಿದ್ದರು. ವೃತ್ತಿ ಮೇಳದ ಭಾಗವತರಾಗಿದ್ದಾರೆ. ಇವರು ಅಂಕೋಲ ತಾಲ್ಲೂಕಿನ ಅಚವೆಯವರು.

೧೮) ಲಕ್ಕಣ್ಣ ಭಾಗವತ ಊರುಕೇರಿ : ಊರಕೇರಿ ವಿಷ್ಣು ಭಾಗವತರ ಮನೆತನದ ಭಾಗವತರು. ಕಡತೋಕಾ ಮಂಜುನಾಥ ಭಾಗವತರಲ್ಲಿ ಭಾಗವತಿಕೆ ಅಭ್ಯಾಸ ಮಾಡಿದವರು. ಹವ್ಯಾಸಿ ಭಾಗವತರಾಗಿರುತ್ತಾರೆ.

೧೯) ವಿದ್ವಾನ್ ಗಣಪತಿ ಭಟ್ಟರು : ಯಲ್ಲಾಪುರ ತಾಲ್ಲೂಕಿನ ಮಾಗೋಡಿನವರು. ತಂದೆ ವೆಂಕಟರಮಣ ಭಟ್, ತಾಯಿ ಸರಸ್ವತಿ, ತಂದೆ ವೈದಿಕರಾಗಿದ್ದರು. ಇವರು ೨೦-೪-೧೯೬೦ರಲ್ಲಿ ಹುಟ್ಟಿದರು. ಉಡುಪಿ ಯಕ್ಷಗಾನ ಕೇಂದ್ರದಲ್ಲಿ ಭಾಗವತಿಕೆ ಅಭ್ಯಾಸ ಮಾಡಿದರು. ಸಂಸ್ಕೃತದಲ್ಲಿ ವಿದ್ವತ್ ಪದವಿ ಪಡೆದ ಇವರು ಭಾಗವತರಾಗಿ ಪಂಚಲಿಂಗ ಮೇಳ, ಸಾಲಿಗ್ರಾಮ ಮೇಳಗಳಲ್ಲಿ ಸೇವೆಸಲ್ಲಿಸಿದರು. ಉಡುಪಿಯ ಶಿವರಾಮಕಾರಂತ ಯಕ್ಷಗಾನ ಕೇಂದ್ರ, ಕೆರೆಮನೆಯ ಶ್ರೀಮಯ ಕಲಾಕೇಂದ್ರದ ಯಕ್ಷಗಾನ ಶಿಕ್ಷಕರಾಗಿಯೂ ಸೇವೆಸಲ್ಲಿಸಿದ್ದರು. ಇವರು ಪ್ರಸ್ತುತ ಹವ್ಯಾಸಿ ಭಾಗವತರಾಗಿ ಮಂಟಪ ಪ್ರಭಾಕರ ಉಪಾಧ್ಯರ ಏಕವ್ಯಕ್ತಿ ಯಕ್ಷಗಾನ ಪ್ರದರ್ಶನದ ಭಾಗವತರಾಗಿದ್ದಾರೆ.

❖ ಘಟ್ಟದ ಮೇಲಿನ ವರ್ತಮಾನದ ವೃತ್ತಿ ಭಾಗವತರು

೧) ಕೊಳಗಿ ಕೇಶವ ಹೆಗಡೆ : ಸಿದ್ದಾಪುರ ತಾಲ್ಲೂಕಿನ ಕೊಳಗಿ ಸ್ವಂತ ಊರು. ಕೊಳಗಿ ಅನಂತ ಹೆಗಡೆಯವರ ಪುತ್ರ. ವರ್ತಮಾನದ ಪ್ರಖ್ಯಾತ ಭಾಗವತರು. ಸಾಲಿಗ್ರಾಮ ಪೆರ್ಡೂರು ಮುಂತಾದ ವೃತ್ತಿ ಮೇಳಗಳಲ್ಲಿ ಸೇವೆಸಲ್ಲಿಸಿದವರು. ಪ್ರಖ್ಯಾತ ಕಲಾವಿದರಿಗೆ ಭಾಗವತಿಕೆ ಮಾಡಿದ್ದಾರೆ. ಉತ್ತಮ ಸ್ವರ, ತಾಳ, ರಾಗ ಜ್ಞಾನವೂ ಚೆನ್ನಾಗಿರುವ ಜನಪ್ರಿಯ ಭಾಗವತರೆಂದರೆ ಕೊಳಗಿ ಕೇಶವ ಹೆಗಡೆ.

೨) ಮಾಧವ ಹೆಗಡೆ ಕೊಳಗಿ : ಸಿದ್ದಾಪುರದ ಕೊಳಗಿಯವರಾದ ಇವರು ಹವ್ಯಾಸಿ ಭಾಗವತರು. ತಾಳಮದ್ದಳೆ, ಯಕ್ಷಗಾನಕ್ಕೆ ಅತಿಥಿ ಭಾಗವತರಾಗಿ ಉತ್ತಮ ಭಾಗವತರೆಂದು ಹೆಸರುಗಳಿಸಿದ್ದಾರೆ.

೩) ಐನ್‌ಬೈಲು ಪರಮೇಶ್ವರ : ಉತ್ತಮ ಭಾಗವತ, ಯಕ್ಷಗಾನ ಗುರು ತರಬೇತಿ ಕೇಂದ್ರವನ್ನು ನಡೆಸುತ್ತಿದ್ದಾರೆ. ಹೊಸ್ತೋಟ ಮಂಜುನಾಥ ಭಾಗವತರ ಮಾರ್ಗದರ್ಶನದಲ್ಲಿ ಮಕ್ಕಳಿಗೆ, ಮಹಿಳೆಯರಿಗೆ ಯಕ್ಷಗಾನ ತರಬೇತಿ ನೀಡುತ್ತಿದ್ದಾರೆ. ಇವರು ಅಂಧ ಮಕ್ಕಳಿಗೂ ಯಕ್ಷಗಾನ ಕಲಿಸಿದ ಕೀರ್ತಿಗೆ ಭಾಜನರಾಗಿದ್ದಾರೆ.

೪) ರಾಮಕೃಷ್ಣ ಹೆಗಡೆ ಅಚವೆ : ಹವ್ಯಾಸಿ ಭಾಗವತರು. ತಾಳಮದ್ದಳೆ, ಹವ್ಯಾಸಿ ಮೇಳಗಳ ಭಾಗವತರಾಗಿ ಸೇವೆಸಲ್ಲಿಸುತ್ತಿದ್ದಾರೆ.

೫) ಪ್ರಸನ್ನ ಭಟ್ ಬಾಳಕಲ್ : ಕೊಂಡದ ಕುಳಿಯವರ ಮೇಳದ ಭಾಗವತರಾಗಿದ್ದಾರೆ. ಪ್ರಸಿದ್ಧರೂ ಕೂಡ ಹೌದು.

೬) ದಂತಳಿಕೆ ಅನಂತ ಭಾಗವತ್ : ಯಲ್ಲಾಪುರ ತಾಲ್ಲೂಕಿನವರು. ಈಗ ಇಡಗುಂಜಿ ಮೇಳದಲ್ಲಿ ಭಾಗವತರಾಗಿದ್ದಾರೆ.

೭) ತಟ್ಟೀಸರ ಗಣಪತಿ ಹೆಗಡೆ : ಕೋಳಿಗಾರ್ ಮೇಳದ ಭಾಗವತರು. ಉತ್ತಮ ಭಾಗವತಿಕೆಯಿಂದ ಹೆಸರಾಗಿದ್ದಾರೆ.

೮) ಬೆಳ್ಳಿಮನೆ ಪ್ರಭಾಕರ ಹೆಗಡೆ : ಕೋಳಿಗಾರ ಮೇಳ ಹಾಗೂ ತಾಳಮದ್ದಳೆ ಕೂಟದ ಭಾಗವತರಾಗಿದ್ದಾರೆ.

೯) ಶೀರೂರಿನ ಶಂಕರನಾರಾಯಣ ಶಾನುಭೋಗ : ಉಪ್ಪಿನಕುದ್ರು ಕೊಗ್ಗಕಾಮತರ ಗೊಂಬೆಯಾಟದ ಭಾಗವತರು ಇವರು. ಉಪ್ಪಿನಕುದ್ರು ತಂಡದೊಂದಿಗೆ ಆಸ್ಟ್ರೇಲಿಯಾ, ಫ್ರಾನ್ಸ್, ಸ್ವಿಜರ್‌ಲ್ಯಾಂಡ್, ಗ್ರೀಸ್,

ಹಾಲೆಂಡ್, ಮಾರಿಷಸ್, ಇಟಲಿ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಭಾಗವತಿಕೆಗಾಗಿ ಗೊಂಬೆಯಾಟದ ಮೇಳದಲ್ಲಿ ಸಂಚರಿಸಿದ್ದಾರೆ.

ಈ ಮನೆತನವು ಭಾಗವತಿಕೆಯಲ್ಲಿ ಪ್ರಸಿದ್ಧವಾದುದು. ಇವರ ಅಜ್ಜ ಶಂಕರಯ್ಯ ಶಾನಭೋಗರು ಭಾಗವತರಾಗಿದ್ದರು. ಇವರ ಮೂಲ ಸಾಗರದ ಚದುರವಳ್ಳಿ. ಕ್ರಿ.ಶ. ೧೪೦೦ ನೇ ಇಸ್ವಿಯಲ್ಲಿ ಕುಂದಾಪುರ ಶಿರೂರಿನಲ್ಲಿ ಶಾನುಭೋಗ ವೃತ್ತಿಗೆ ನೇಮಿಸಿದ್ದರಿಂದ ರಾಜಶಾಸನದಂತೆ ಶೀರೂರಿಗೆ ಬಂದು ನೆಲೆಯಾದರು. ಶಂಕರನಾರಾಯಣ ಶಾನಭೋಗರ ತಂದೆ ವಿನಾಯಕ ಶಾನುಭೋಗರು ಭಾಗವತರಾಗಿದ್ದರು. ಶಂಕರನಾರಾಯಣ ಶಾನುಭೋಗರು ವಾಣಿಜ್ಯ ಪದವೀಧರರು. ನೌಕರಿಯತ್ತ ಆಸೆ ತೋರದೆ ೧೯೮೧ರಲ್ಲಿ ಉಪ್ಪಿನಕುದ್ರು ಶ್ರೀ ಗಣೇಶ ಯಕ್ಷಗಾನ ಮಂಡಳಿಯ ಭಾಗವತರಾದರು. ದಿ। ಕಾಳಿಂಗ ನಾವುಡರ ಶೈಲಿಯಲ್ಲಿ ಹಾಡುವ ಇವರು ಈವರೆಗೂ ಗೊಂಬೆಯಾಟದ ಭಾಗವತರಾಗಿ ಅಪಾರ ಮೆಚ್ಚುಗೆಗಳಿಸಿದ್ದಾರೆ.[೯]

೧೦. ತ್ರಯಂಬಕ ಇಡುವಾಣಿ : ತಲವಾಟದ ಹೆಜ್ಜೆ-ಗಜ್ಜೆ ತಂಡದ ನಿರ್ದೇಶಕರೂ, ಪ್ರಸಿದ್ಧ ಭಾಗವತರೂ ಆಗಿದ್ದಾರೆ. ಇವರು ಅನೇಕ ವೃತ್ತಿ ಮೇಳಗಳಲ್ಲಿ ಸೇವೆಸಲ್ಲಿಸುತ್ತಿದ್ದರು. ಹರಕೆ ಮೇಳಗಳಲ್ಲಿ ಸೇವೆಸಲ್ಲಿಸಿ ಪ್ರಸ್ತುತ ಯಕ್ಷಗಾನ ಕೇಂದ್ರವನ್ನು ನಡೆಸುತ್ತಿದ್ದಾರೆ.

೧೧. ಸರ್ವೇಶ್ವರ ಹೆಗಡೆ ಮೂರೂರು : ವೃತ್ತಿಮೇಳದ ಭಾಗವತರು. ವರ್ತಮಾನದಲ್ಲಿ ಸಾಲಿಗ್ರಾಮ ಮೇಳದಲ್ಲಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಪ್ರಸಿದ್ಧ ಭಾಗವತರು

೧. ಬೆಳೆಯೂರು ಮೇಳದ ಸುಬ್ಬಯ್ಯನ ವೆಂಕಪ್ಪ ಭಾಗವತರು : ದಕ್ಷಿಣ ಕನ್ನಡದ ಕುಂಜಾಲು ಶೇಷಗಿರಿ ಭಾಗವತರಲ್ಲೂ ಕರ್ಕಿ ಪುಟ್ಟಯ್ಯ ಹಾಸ್ಯರಲ್ಲೂ ಭಾಗವತಿಕೆ ಅಭ್ಯಾಸ ಮಾಡಿ ಬೆಳೆಯೂರು ಮೇಳದ ಪ್ರವರ್ತಕರಾದರು. ಇವರು ಅನೇಕ ಪ್ರಸಂಗಗಳನ್ನು ರಚಿಸಿದ್ದರು. ಇವರ ಭಾಗವತಿಕೆಯ ಕಾಲವನ್ನು ೧೯೩೦-೧೯೬೦ ಎಂದು ಊಹಿಸಲಾಗಿದೆ. ಇವರು ಸನ್ಯಾಸಿಗಳಾಗಿ ಜೀವನ ಸಾಗಿಸಿದರು.

೨. ಮೂಡಡಗೋಡು ಗಣೇಶ ಭಾಗವತರು: ಬೆಳೆಯೂರು ಮೇಳದ ಭಾಗವತರಾಗಿದ್ದರು. ನಡಗೋಡು, ಹೊಡಬಟ್ಟೆ, ದೊಡ್ಡೇರಿ, ರಂಜದಕಟ್ಟೆ, ಕಮಲಶಿಲೆ, ಸೌಕೂರು, ಕೊಲ್ಲೂರು ಮೇಳಗಳಲ್ಲಿ ಸೇವೆಸಲ್ಲಿಸಿದ್ದಾರೆ.

೬.೧.೨. ತೆಂಕುತಿಟ್ಟು ಭಾಗವತರು

❖ಪದ್ಯಾಣ ಮನೆತನ

೧)ಪದ್ಯಾಣ ಗಣಪತಿ ಭಟ್ಟ : ಪದ್ಯಾಣ ಮನೆತನ ತೆಂಕುತಿಟ್ಟಿನ ಭಾಗವತಿಕೆಗೆ ಹೆಸರಾದ ಮನೆತನ. ಪದ್ಯಾಣ ಶಂಕರಭಟ್ಟರು ಚಂಡೆಮದ್ದಳೆವಾದಕರಾಗಿದ್ದರು. ಇವರ ತಮ್ಮನ ಮಗ ಪುಟ್ಟಕುಂಜನಾರಾಯಣಭಟ್ಟರು ಸುಮಾರು ೧೮೯೦ ರಿಂದ ೧೯೩೦ರವರೆಗೆ ಯಕ್ಷಗಾನ

೯. ಕ್ಷೇತ್ರಕಾರ್ಯ ಕುಂದಾಪುರ ತಾಲೂಕು ಶಂಕರನಾರಾಯಣ ಶಾನಭಾಗರ ಸಂದರ್ಶನ.

ಭಾಗವತರಾಗಿದ್ದರು. ಇವರ ಮಗ ತಿರುಮಲೇಶ ಭಟ್ಟರು ಯಕ್ಷಗಾನಕ್ಕೆ ಸೇವೆಸಲ್ಲಿಸಿದವರು. ತಿರುಮಲೇಶಭಟ್ಟರ ಮನಗೆ ಪದ್ಯಾಣ ಗಣಪತಿಭಟ್ಟರು. ಇವರ ಭಾಗವತಿಕೆ ತೆಂಕಿನ ಪರಂಪರೆಯಲ್ಲಿ ಪದ್ಯಾಣ ಶೈಲಿಯೆಂದೆ ಹೆಸರಾಯಿತು. ಇಂದಿಗೂ ಇವರು ಮೇಳದ ಭಾಗವತರಾಗಿದ್ದಾರೆ. ತೆಂಕಿನ ಪ್ರಸಿದ್ಧ ಮೇಳಗಳಾದ ಧರ್ಮಸ್ಥಳಮೇಳದ ಈಗಿನ ಭಾಗವತರಿವರು.

೨) ಮಾಂಬಾಡಿ ನಾರಾಯಣ ಭಾಗವತ : ಹಿರಿಯ ತಲೆಮಾರಿನ ಭಾಗವತರಾಗಿದ್ದ ಇವರು ಉತ್ತರಕನ್ನಡದ ಯಾಜಿ ಭಾಗವತರ ಸಮಕಾಲೀನರು. ಕಡತೋಕಾ ಮಂಜುನಾಥಭಾಗವತರ ಗುರು ಆಗಿದ್ದರು. ಕಳೆದ ಶತಮಾನದ ಮೊದಲಾರ್ಧ ಭಾಗದಲ್ಲಿ ತೆಂಕುತಿಟ್ಟಿನಲ್ಲಿ ತನ್ನದೇ ಆದ ಚರಿತ್ರೆಯನ್ನು ನಿರ್ಮಿಸಿದ ಇಚ್ಲಂಪಾಡಿ ಮೇಳದ ಭಾಗವತರಾಗಿದ್ದರು. ಇವರ ಭಾಗವತಿಕೆಯನ್ನು ಮೆಚ್ಚಿ ಮಹಾರಾಣಿ ಶ್ರೀ ಇಚ್ಲಂಪಾಡಿ ಕೋಟ್ಯಣ್ಣಳ್ವರು ಬಂಗಾರದ ಬಳೆಗಳನ್ನು ಪಾರಿತೋಷಕವಾಗಿ ನೀಡಿದರು. ಪಿಟೀಲುವಾದಕ ಪುಟ್ಟಣ್ಣನವರಲ್ಲಿ ಶಾಸ್ತ್ರೀಯ ಸಂಗೀತವನ್ನು ಕಲಿತರು. ಇವರು ಚಂಡೆಮದ್ದಳೆ ವಾದಕರೂ ಆಗಿದ್ದರು. ಮೇಳದ ಭಾಗವತಿಕೆ ಬಿಟ್ಟು ಗುರುವಾಗಿ ಅನೇಕ ಪ್ರಸಿದ್ಧರನ್ನು ಸಿದ್ಧಗೊಳಿಸಿದರು. ಕುದ್ರೆಕೊಡ್ಲು ರಾಮ ಭಟ್ಟರಿಗೆ ಇವರೆ ಗುರುಗಳು. ಅಗ್ರಮಾನ್ಯ ಮದ್ದಳೆಗಾರರನ್ನು ಶಿಷ್ಯರಾಗಿ ನೀಡಿದರು.

೩) ಮಾಂಬಾಡಿ ಸುಬ್ಬಣ್ಣಭಟ್ಟರು : ಮಾಂಬಾಡಿ ಮನೆತನದ ಭಾಗವತರಾದ ಇವರು ತೆಂಕಿನ ಮೇಳಗಳಲ್ಲಿದ್ದು ಯಕ್ಷಗಾನ ಶಾಲೆ ಆರಂಭಿಸಿದರು.

೪) ಮಾಂಬಾಡಿ ಕೃಷ್ಣಭಟ್ಟರು: ಮೇಳದ ಯಜಮಾನರೂ, ಭಾಗವತರೂ ಆಗಿದ್ದರು.

೫) ಅಂಬೆಮೂಲೆ ಗೋವಿಂದಭಟ್ಟರು : ಇವರು ಪ್ರಸಂಗಕರ್ತರೂ, ಭಾಗವತರೂ ಆಗಿದ್ದರು.

ಹೊಸಮೂಲೆ ಗಣಪತಿ ಭಟ್ಟರು, ಬಾಯಾರು ಶಂಭಟ್ಟ, ಕಂಬಳಿಭಾಗವತ ಇವರೆಲ್ಲ ತೆಂಕಿನ ಮೇಳಗಳಾದ ಇಚ್ಲಂಪಾಡಿ, ಇರಾ, ಧರ್ಮಸ್ಥಳ, ಮೂಲ್ಕಿ, ಕೂಟೂರು ಮೇಳಗಳ ಭಾಗವತರಾಗಿದ್ದರು.

೬) ತಲೆಂಗಳ ಶಂಭುಭಟ್ಟ : ಮೂಲ್ಕಿ ಮೇಳದ ಮುಖ್ಯ ಭಾಗವತರಾಗಿದ್ದರು. ತೆಂಕುಶೈಲಿಯ ಪ್ರಸಿದ್ಧ ಹಾಡುಗಾರರು.

೭) ಮಾಲಂಗಾಯಿ ವೆಂಕಟರಮಣ ಭಟ್ಟರು : ತಾಳಮದ್ದಳೆ ಕೂಟದ ಭಾಗವತರಾಗಿದ್ದರು. ಲಯಬದ್ಧ ಹಾಡುಗಾರಿಕೆಗೆ ಇವರು ಪ್ರಸಿದ್ಧರು.

೮) ತೆಕ್ಕೆಕೆರೆ ಗೋವಿಂದ ಭಟ್ಟರು : ತೆಂಕಿನ ಪ್ರಸಿದ್ಧ ಭಾಗವತರು.

೯) ಪೆರವೋಡಿ ಸಂಕಯ್ಯ ಭಾಗವತರು : ತೆಂಕುತಿಟ್ಟಿನ ಹಿರಿಯ ಭಾಗವತರು. ತೆಂಕಿನ ಸಂಪ್ರದಾಯಶೀಲ ಭಾಗವತರು. ಕೂಡ್ಲು ಮೇಳದ ಮೂಲಕ ಪ್ರಸಿದ್ಧರಾದರು.[೧೦]

೧೦) ಮಾಂಬಾಡಿ ಈಶ್ವರ ಭಾಗವತರು : ಇವರು ಕೂಡ್ಲು ಮೇಳದಲ್ಲಿದ್ದರು. ರಾಗತಾಳಗಳ ಅಪಾರ ಜ್ಞಾನವಿತ್ತು.

೧೦. ಕಾಸರಗೋಡು ಪುತ್ತೂರು, ಬಂಟ್ವಾಳ ತಾಲೂಕಿನ ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ.

೧೧) ಅಣ್ಣೆ ಭಾಗವತರು : ಇವರು ಕೂಡ್ಲಿ ಮೇಳದ ಭಾಗವತರಾಗಿದ್ದರು. ತೆಂಕಿನ ಪ್ರಸಿದ್ಧರು. ಉತ್ತಮ ರಾಗತಾಳ ಜ್ಞಾನವುಳ್ಳ ಹಾಡುಗಾರರಾಗಿದ್ದರು.

೧೨) ಜತ್ತಿ ಈಶ್ವರ ಭಾಗವತರು : ಬಾಲ್ಯದಲ್ಲಿಯೇ ಪ್ರಸಂಗರಚಿಸಿದರು. ರಂಗಸ್ಥಳದಲ್ಲಿ ಇಸ್ಪೀಟ್ ಆಟ ಎಂಬ ಪ್ರಸಂಗ ರಚಿಸಿದರು. ಇವರಿಗೆ ಅನೇಕ ಪ್ರಸಂಗಗಳು ಕಂಠಸ್ಥವಾಗಿದ್ದವು. ಮೂಲ್ಕಿ, ಕಾಸರಗೋಡು, ಇರಾ ಮೇಳಗಳಲ್ಲಿ ಸೇವೆಸಲ್ಲಿಸಿದ್ದಾರೆ.

ಇವರಲ್ಲದೆ ಚಕ್ಕುಲಿ ಭಾಗವತರು, ಉಪ್ಪಂಗಾನ ಗೋಪಾಲಕೃಷ್ಣ ಭಟ್ಟ, ತಲ್ಪನಾಜೆ ವೆಂಕಟರಮಣಭಟ್, ಹೊಸಮೂಲೆ ಗಣಪತಿಭಟ್, ವಿಶ್ವವಿನೋದ ಬನಾರಿ, ಕಾಸರಗೋಡಿನ ಪ್ರಸಿದ್ಧ ಭಾಗವತರಾಗಿದ್ದಾರೆ.

೧೩) ಪೆರವೋಡಿ ಶ್ಯಾಮಭಟ್ : ಕೂಡ್ಲುಮೇಳ, ದುರ್ಗಾಪರಮೇಶ್ವರಿ ಮೇಳ, ಮಲ್ಲ ಮೇಳದ ಪ್ರಸಿದ್ಧ ಭಾಗವತರಾಗಿದ್ದರು.

೧೪) ಚೆ.ನಂ. ಶಾಸ್ತ್ರಿ : ಚಂಡೆಕುಳಿ ನರಸಿಂಹಶಾಸ್ತ್ರಿ, ಪುತ್ತೂರಿನ ಮಹಾಲಿಂಗೇಶ್ವರ ದೇವಾಲಯದ ಅರ್ಚಕರು. ವೃತ್ತಿ ಮೇಳದಲ್ಲಿ ಹಲವು ವರ್ಷಗಳ ಕಾಲ ಸೇವೆ ಮಾಡಿ ಈಗ ಜ್ಯೋತಿಷಿಗಳಾಗಿ ಪ್ರಸಿದ್ಧರಾಗಿದ್ದಾರೆ. ಮಲ್ಲಮೇಳ, ಬಪ್ಪನಾಡು ಮೇಳ, ಸುಂಕದಕಟ್ಟೆ ಮೇಳ, ಎಡನೀರು ಮೇಳದ ಭಾಗವತರಾಗಿದ್ದರು.

೧೫) ದುರ್ಗಾಪರಮೇಶ್ವರಿ ಕುಕ್ಕಿಲ : ಕುಕ್ಕಿಲದ ಮಹಿಳಾದ ಯಕ್ಷಗಾನ ಸಂಘದ ಭಾಗವತರು. ಮಹಿಳಾ ಭಾಗವತರಿವರು. ಕೋಡಪದವು ನಿವಾಸಿಯಾದ ಇವರು ತೆಂಕಿನಲ್ಲಿ ಪ್ರಸಿದ್ಧರು.

ಇವರಲ್ಲದೆ ತಿಮ್ಮಪ್ಪ ಭಾಗವತರು ಪೆರೋಡಿ ಶ್ಯಾಮಭಟ್ಟರು, ತಾಳ್ತಜೆ ಶಂಕರಭಟ್, ತಾಳ್ತಜೆ ತಿಮ್ಮಪ್ಪಣ್ಣ ಈ ತಲೆಮಾರಿನ ಪ್ರಸಿದ್ಧರು.

೧೬) ರಾಮಕೃಷ್ಣಶಾಸ್ತ್ರಿ ಮಣೆಲ : ಹಿಂದಿನ ತಲೆಮಾರಿನ ಪ್ರಸಿದ್ಧ ಭಾಗವತರು. ಪುತ್ತೂರು, ಬಂಟ್ವಾಳ ತಾಲ್ಲೂಕಿನ ಮೇಳಗಳಲ್ಲೂ ತಾಳಮದ್ದಳೆ ಕೂಟದಲ್ಲೂ ಭಾಗವತರಾಗಿದ್ದರು.[೧೧]

೧೭) ಕುಕ್ಕುಜೆ ಕೃಷ್ಣಭಟ್, ಕೆದಿಲ : ಯಕ್ಷಗಾನ ಕಲಾವರ್ಧಿನಿ ಸಭಾ ಕೆದಿಲ, ಬಂಟ್ವಾಳ ಮೇಳದಲ್ಲಿ ಭಾಗವತರಾಗಿ ಪ್ರಸಿದ್ಧರಾಗಿದ್ದರು. ಸುಮಾರು ಇಪ್ಪತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

೧೮) ತಲೆಂಗಾಳ ಶ್ಯಾಮಭಟ್ : ಕಡತೋಕ ಮಂಜುನಾಥ ಭಾಗವತರಿಗಿಂತ ಹಿಂದಿನವರು. ಇವರು ಮೂಲ್ಕಿ, ಇರಾ ಮುಂತಾದ ಹರಕೆ ಮೇಳದಲ್ಲಿ ಭಾಗವತರಾಗಿದ್ದರು.

೧೯) ಆನೆಕಲ್ಲು ಗಣಪತಿ ಭಟ್ಟ : ಬೆಳ್ಮಣ್ಣು ಮೇಳದಲ್ಲಿ ಸೇವೆಸಲ್ಲಿಸಿದ್ದಾರೆ. ಇವರು ಪ್ರಸಿದ್ಧ ತೆಂಕುತಿಟ್ಟಿನ ಭಾಗವತರಾಗಿದ್ದರು.

---

೧೧. ಕ್ಷೇತ್ರಕಾರ್ಯ – ಅಡಕ ಗೋಪಾಲ ಕೃಷ್ಣ ಭಟ್ಟರ ಮಾಹಿತಿ.

೨೦) ಮಾದಕಟ್ಟೆ ಈಶ್ವರ ಭಟ್ಟ : ಮಾದಕಟ್ಟೆ ಮೇಳದ ಭಾಗವತರು. ಅಲ್ಲದೆ ತಾಳಮದ್ದಲೆಯ ಭಾಗವತರು ಆಗಿದ್ದರು.

೨೧) ಸೋಕೆ ಕಿಟ್ಟಣ್ಣಶಾಸ್ತ್ರಿ : ಕುರಿಯ ಮೇಳದ ಸಂಘಟಕರಾದ ಇವರು ಭಾಗವತರಾಗಿ ಮೇಳವನ್ನು ಮುನ್ನೆಡೆಸಿದ್ದಾರೆ.

೨೨) ಹುಂಡೆಮನೆ ಕೃಷ್ಣ ಭಟ್ : ಮಾಣಿ, ನೇರಳಕಟ್ಟೆ ಮೇಳಗಳಲ್ಲಿ ಭಾಗವತರಾಗಿ ಮೇಳವನ್ನು ಸಂಘಟಿಸಿದರು.

೨೩) ಸರವು ಕೃಷ್ಣಭಟ್ : ೧೯೪೦-೭೦ ಪ್ರಸಿದ್ಧ ತೆಂಕುತಿಟ್ಟಿನ ಭಾಗವತರು. ಮೂಲ್ಕಿ, ಧರ್ಮಸ್ಥಳ ಮೇಳಗಳಲ್ಲಿ ಸೇವೆಸಲ್ಲಿಸಿದ್ದಾರೆ. ಇವರು ತೆಂಕಿನ ಶೈಲಿಯ ಹಾಡುಗಾರಿಕೆ ಪ್ರಸಿದ್ಧರು.

೬.೧.೩ ಸವ್ಯಸಾಚಿಗಳು:

ಯಕ್ಷಗಾನದ ಬಡಗು, ಬಡಾಬಡಗು ತೆಂಕುತಿಟ್ಟುಗಳು ಪ್ರಮುಖ ಪ್ರಬೇಧಗಳು. ಭಾಗವತಿಕೆಯಲ್ಲಿ ಈ ಪ್ರಭೇದಕ್ಕೆ ಸಂಬಂಧಿಸಿದ ಪ್ರತ್ಯೇಕ ಶೈಲಿಯಿದೆ. ಎಲ್ಲಾ ಪ್ರಭೇದದಲ್ಲೂ ಪ್ರತ್ಯೇಕ ಭಾಗವತರಿದ್ದಾರೆ. ಭಾಗವತಿಕೆಯಲ್ಲಿ ಮೂರು ತಿಟ್ಟುಗಳನ್ನು ಅಭ್ಯಾಸ ಮಾಡಿ ಮೂರೂ ತಿಟ್ಟುಗಳಲ್ಲೂ ಹಾಡುವ ಪರಿಣಿತಿಯನ್ನು ಹೊಂದಿದ ಭಾಗವತರು ಮತ್ತು ಕಲಾವಿದರು ಬಡಗು ತೆಂಕು ಮೇಳಗಳಲ್ಲಿ ಕಾಣಸಿಗುತ್ತಾರೆ. ಅಂತಹ ಭಾಗವತರನ್ನು ಸವ್ಯಸಾಚಿಗಳೆಂದು ಗುರುತಿಸಲಾಗಿದೆ. ಸವ್ಯಸಾಚಿ ಭಾಗವತರು ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲೂ ಹೆಸರು ಮಾಡಿದವರಾಗಿದ್ದಾರೆ.

೧. ಕಡತೋಕಾ ಕೃಷ್ಣಭಟ್ಟರು : ಜೋಗಿಮನೆ, ತೆಂಕು-ಬಡಗು ತಿಟ್ಟುಗಳೆರಡರಲ್ಲೂ ಪರಿಣಿತಿಯನ್ನು ಸಾಧಿಸಿದ್ದರು. ಪದ್ಯದ ಎತ್ತುಗಡೆ, ಪದ್ಯದವಿಸ್ತಾರ ಹಾಗೂ ಚಾಲೂಗಳನ್ನು ಅರಿತಿದ್ದರು. ಕರ್ಕಿ ಸಂಪ್ರದಾಯದ ಅಧಿಕೃತ ಭಾಗವತರೆಂದು ದಾಖಲಾಗಿದ್ದಾರೆ. ಮೂಲತಃ ಬಡಗಿನ ಸಾಂಪ್ರದಾಯಿಕ ಮಟ್ಟಿನ ಭಾಗವತರಾದ ಇವರು ತೆಂಕುತಿಟ್ಟಿನಲ್ಲೂ ಅಷ್ಟೇ ಪ್ರಸಿದ್ಧರು. ಇವರು ಮಧ್ಯಮಾವತಿ, ಪುನ್ನಾಗತೋಡಿ, ತುಜಾವಂತು, ಸಾವೇರಿ ರಾಗಗಳನ್ನು ಅಪೂರ್ವವಾಗಿ ಹಾಡಬಲ್ಲವರಾಗಿದ್ದರು. ಸಂಗೀತ ಅಭ್ಯಾಸವನ್ನು ಮಾಡಿದರು. ಸಭಾಹಿತ ಮಟ್ಟಿನ ಸಭಾಲಕ್ಷಣ, ಸ್ತ್ರೀವೇಷ, ಗೋಪಾಲವೇಷ, ಕಿರಾತ ವೇಷಗಳ ಒಡ್ಡೋಲಗ ಪದ್ಯವನ್ನು ಸಂಪ್ರದಾಯ ಬದ್ಧವಾಗಿ ಅಧಿಕೃತವಾಗಿ ಹಾಡುವ ಅಪರೂಪದ ಭಾಗವತರಾಗಿದ್ದರು.

ಮೂರೂರು ದೇವರ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆರೆಮನೆ ಶಿವರಾಮ ಹೆಗಡೆ, ಕೆ. ಗೋವಿಂದಭಟ್ ಮುಂತಾದ ಪ್ರಸಿದ್ಧ ಕಲಾವಿದರಿಗೆ ಹಿಮ್ಮೇಳ ನೀಡಿ ಶ್ರೇಷ್ಠ ಅಭಿನಯವನ್ನು ಅಭಿವ್ಯಕ್ತಿಗೊಳಿಸಿದ್ದರು. ಕರ್ಕಿ ಪರಮಯ್ಯ ಹಾಸ್ಯಗಾರರನ್ನು ರಂಗದಲ್ಲಿ ಮೆರೆಸಿದ ಕೀರ್ತಿ ಇವರಿಗಿದೆ.

ಮೂಲತಃ ಕಡತೋಕದವರಾದ ಇವರು ಜೋಗಿಮನೆ ಭಾಗವತರೆಂದು ಪ್ರಸಿದ್ಧರು. ಇವರ ಕುಟುಂಬದ ಜೋಗಿಮನೆ ಗೋಪಾಲಕೃಷ್ಣ ಭಾಗವತರು. ಈಗ ಅದೇ ಸಾಂಪ್ರದಾಯದಲ್ಲಿ ಹಾಡುವ ಕಲಾವಿದರಾಗಿದ್ದಾರೆ. ತಂದೆ ವಿದ್ವಾನ್ ಮಹಾಬಲೇಶ್ವರ ಭಟ್ಟರು, ತಾಯಿ ಮಹಾದೇವಿಯ ಮಗನಾಗಿ ಕಡತೋಕ ಹೆಬ್ಬಳೆಕೇರಿಯಲ್ಲಿ ೧೯೩೦ರಲ್ಲಿ ಜನಿಸಿದರು.

ಕರ್ಕಿ ಮೇಳ, ಕೆರೆಮನೆ ಮೇಳ, ಮೂರೂರು ಮೇಳ, ಕೊಳಗಿಬೀಸು ಮೇಳ, ಸುರತ್ಕಲ್ ಮೇಳ, ಧರ್ಮಸ್ಥಳ, ಪೆರ್ಡೂರು, ಅಮೃತೇಶ್ವರಿ ಮೇಳಗಳಲ್ಲಿ ಬಡಗು-ತೆಂಕುತಿಟ್ಟುಗಳೆರಡರಲ್ಲೂ ಸಮಾನವಾಗಿ ಸೇವೆಸಲ್ಲಿಸಿ ಎರಡು ತಿಟ್ಟುಗಳಲ್ಲೂ ಪ್ರಸಿದ್ಧರಾಗಿ ೧೯೯೦ರಲ್ಲಿ ಇಹಲೋಕ ಯಾತ್ರೆ ಪೂರೈಸಿದರು.

❖ಕಂಚಿನ ಕಂಠದ ಕಡತೋಕಾ ಮಂಜುನಾಥ ಭಾಗವತರು:

ಯಕ್ಷಗಾನರಂಗದ ಸವ್ಯಸಾಚಿಗಳಾದ ಕಡತೋಕ ಮಂಜುನಾಥ ಭಾಗವತರು ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಭಾಗವತಿಕೆಯಿಂದ ಮನೆಮಾತಾಗಿದ್ದಾರೆ. ಇವರು ತೆಂಕುತಿಟ್ಟಿನ ಧರ್ಮಸ್ಥಳ ಮೇಳದಲ್ಲಿ ಹಲವಾರು ವರ್ಷಗಳ ಸೇವೆ ಸಲ್ಲಿಸಿದರು ೧೯೩೧ರಲ್ಲಿ ಕಡತೋಕಾ ಶಂಭುಭಾಗವತ್ ಮತ್ತು ಗೌರಿ ಎಂಬುವವರ ಮಗನಾಗಿ ಜನಿಸಿದರು. ಇವರ ತಂದೆ ಹಿರಿಯ ತಲೆಮಾರಿನ ಭಾಗವತರು. ಶಂಭುಭಾಗವತರು ಆ ಕಾಲದಲ್ಲಿ ಉತ್ತರಕನ್ನಡದಲ್ಲಿ ತಮ್ಮದೇ ಆದ ಶೈಲಿಯಿಂದ ಸಾಂಪ್ರದಾಯಿಕವಾಗಿ ಭಾಗವತಿಕೆ ನಡೆಸಿ ಪ್ರಸಿದ್ಧರಾಗಿದ್ದರು. ಅವರ ಶೈಲಿಯನ್ನೇ ಅನುಸರಿಸಿ ಮಂಜುನಾಥ ಭಾಗವತರು ತಮ್ಮ ಭಾಗವತಿಕೆ ಆರಂಭಿಸಿದರು. ಇವರು ಸಿದ್ದಾಪುರ ತಾಲ್ಲೂಕಿನಲ್ಲಿ ಶಿಕ್ಷಕರಾಗಿದ್ದಾಗ ಜಾನಕೈ ತಿಮ್ಮಪ್ಪ ಹೆಗಡೆಯವರ ಪ್ರೇರಣೆಯ ಮೇರೆಗೆ ಭಾಗವತಿಕೆಯನ್ನು ಆರಂಭಿಸಿದರು.

ಕೆರೆಮನೆ ಶಿವರಾಮ ಹೆಗಡೆಯಂತಹ ಮಹಾನ್ ಕಲಾವಿದರಿಗೆ ಹಿಮ್ಮೇಳ ನೀಡಿದರು. ಕರ್ಕಿ ಪರಮಯ್ಯ ಹಾಸ್ಯಗಾರರ ಪರಿಚಯದಿಂದ ಕರ್ಕಿ ಮೇಳದಲ್ಲೂ ಸೇವೆ ಸಲ್ಲಿಸಿದರು.

ಸಭಾಹಿತ ಮಟ್ಟಿನ ಶೈಲಿಯನ್ನು ಕರಗತ ಮಾಡಿಕೊಂಡು ೧೯೫೦ರಲ್ಲಿ ಮೂರೂರ ಮೇಳದಲ್ಲಿ ಭಾಗವತರಾದರು. ಅಲ್ಲಿನ ಪ್ರಸಿದ್ಧ ಕಲಾವಿದ ದೇವರ ಹೆಗಡೆಯವರು ಇವರ ಹಿಮ್ಮೇಳದಿಂದ ಉತ್ತಮ ಕಲಾವಿದರಾಗಿ ಮೆರೆದರು. ಧರ್ಮಸ್ಥಳ ಮೇಳವನ್ನು ಸೇರಿ ತೆಂಕಿನ ಭಾಗವತರಾದರು. ತೆಂಕುತಿಟ್ಟಿನ ಹಾಡುಗಾರಿಕೆಯನ್ನು ಕರಗತ ಮಾಡಿಕೊಂಡು ಬಡಗು ಮತ್ತು ತೆಂಕು ಶೈಲಿಗಳೆರಡರಲ್ಲೂ ಹಿಡಿತ ಸಾಧಿಸಿದರು.

ಇವರು ಭಾಗವತರಷ್ಟೇ ಅಲ್ಲದೆ ಕೆಲವು ಪ್ರಸಂಗ ಕೃತಿಗಳನ್ನು ರಚಿಸಿದರು. (ನೋ. ಪ್ರಸಂಗ ಸಾಹಿತ್ಯ - ಅನುಬಂಧ) ಅಲ್ಲದೇ ಯಕ್ಷರಂಗ ಎಂಬ ಯಕ್ಷಗಾನಕ್ಕೆ ಮೀಸಲಾದ ಪತ್ರಿಕೆಯನ್ನು ನಡೆಸಿದರು. ಇವರ ಮಗ ಗೋಪಾಲಕೃಷ್ಣ ಭಾಗವತರು ಈಗ ಈ ಪತ್ರಿಕೆಯನ್ನು ಮುನ್ನೆಡೆಸಿಕೊಂಡು ಹೋಗುತ್ತಿದ್ದಾರೆ.

ಯಕ್ಷಗಾನದ ಭಾಗವತಿಕೆಯ ಶೈಲಿ ಸಾಂಪ್ರಾದಾಯಿಕ ಹಾಡುಗಾರಿಕೆ ಮಟ್ಟುಗಳ ಬಗ್ಗೆ ಅಧಿಕೃತವಾಗಿ ಮಾತನಾಡುವ ಸಾಮರ್ಥ್ಯ, ಜ್ಞಾನ ಮಂಜುನಾಥ ಭಾಗವತರಲ್ಲಿತ್ತು. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಕಲಾವಿದರುಗಳು ಇವರ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು. ಕೆರೆಮನೆ ಶಿವರಾಮ ಹೆಗಡೆ, ಪರಮಯ್ಯ ಹಾಸ್ಯಗಾರ, ಚಿಟ್ಟಾಣಿ ರಾಮಚಂದ್ರ ಹೆಗಡೆಯಂತಹ ಮಹಾನ್

ಕಲಾವಿದರ ರಂಗದಲ್ಲಿ ಪರಿಪೂರ್ಣವಾಗಿ ಕಲಾಭಿವ್ಯಕ್ತಿಗೆ ಪ್ರೇರಕವರಾಗಿದ್ದಾರೆ. ಭಾಗವತಿಕೆ ಹಾಗೂ ತಾಳಜ್ಞಾನ, ಲಯಗಾರಿಕೆಯಲ್ಲಿ ಮಂಜುನಾಥ ಭಾಗವತರು ಸಿದ್ಧಹಸ್ತರಾಗಿದ್ದರು.[೧೨]

ಪದ್ಯಾಣ ಜಯರಾಮ ಭಟ್ಟರು : ಯಕ್ಷಗಾನ ತೆಂಕುತಿಟ್ಟಿನಲ್ಲಿ ಪದ್ಯಾಣ ಮನೆತನ ಭಾಗವತಿಕೆಗೆ ಅತ್ಯಂತ ಪ್ರಸಿದ್ಧವಾಗಿದೆ. ಪದ್ಯಾಣ ಮನೆತನದ ಜಯರಾಮ ಭಟ್ಟರು ತೆಂಕು ಮತ್ತು ಬಡಗಿನ ಶೈಲಿಗಳಲ್ಲಿ ಭಾಗವತಿಕೆ ಮಾಡುವ ನೈಪುಣ್ಯತೆ ಹೊಂದಿದ್ದರು. ತೆಂಕಿನ ಮೂಲ್ಕಿ, ಧರ್ಮಸ್ಥಳ ಮೇಳಗಳಲ್ಲೂ ಸೇವೆ ಸಲ್ಲಿಸಿದ ಇವರು ಈಗ ಹೊಸನಗರ ಮೇಳದಲ್ಲಿದ್ದಾರೆ. ಬಡಗುತಿಟ್ಟಿನ ಮೇಳಗಳಾದ ಸಾಲಿಗ್ರಾಮ, ಮಂದರ್ತಿಗಳಲ್ಲಿ ಹಿಂದೆ ಭಾಗವತರಾಗಿದ್ದರು. ಇವರು ಎರಡೂ ಶೈಲಿಗಳಲ್ಲಿಯೂ ನೈಪುಣ್ಯತೆ ಸಾಧಿಸಿರುವುದರಿಂದ ಇವರನ್ನು ಸವ್ಯಸಾಚಿಗಳೆಂದೆ ಗುರುತಿಸಲಾಗಿದೆ.

ಹೊಸ್ತೋಟ ಮಂಜುನಾಥ ಭಾಗವತರು : ಯಕ್ಷಗಾನ ಕ್ಷೇತ್ರದಲ್ಲಿ ಯಕ್ಷ ಋಷಿ, ಯಕ್ಷರಂಗದ ಭೀಷ್ಮ ಮುಂತಾದ ಬಿರುದುಳ್ಳ ಹೊಸ್ತೋಟ ಮಂಜುನಾಥ ಭಾಗವತರು ಶಿರಸಿ ತಾಲ್ಲೂಕಿನ ಹೊಸ್ತೋಟದವರು. ಬಾಲ್ಯದಿಂದಲೆ ಯಕ್ಷಗಾನದ ಗೀಳನ್ನು ಬೆಳೆಸಿಕೊಂಡವರು. ಆಧ್ಯಾತ್ಮ, ಯಕ್ಷಗಾನ ಇವರ ಸಾಧನೆಗಳು ಸುಮಾರು ನಲವತ್ತು ವರ್ಷಗಳ ಸಾಧನೆಯಲ್ಲಿ ಯಕ್ಷಗಾನದ ಅತಿಹೆಚ್ಚು ಪ್ರಸಂಗವನ್ನು ರಚಿಸಿದ ದಾಖಲೆ ಇವರದ್ದಾಗಿದೆ. ರಾಗ–ತಾಳ–ಛಂದಸ್ಸಿನ ಕುರಿತಂತೆ ಅನೇಕ ಲೇಖನ ಬರೆದಿದ್ದಾರೆ. ತಾಳೆಗರಿಗಳ ಅಧ್ಯಯನದಿಂದ ಅಪೂರ್ವ ಮಾಹಿತಿಗಳನ್ನು ಕಲೆಹಾಕಿದ್ದಾರೆ. ಭಾಗವತಿಕೆ ವೇಷಗಾರಿಕೆ, ತಾಳಮದ್ದಳೆ, ಎಲ್ಲಾ ರಂಗದಲ್ಲೂ ಇವರು ನಿಸ್ಸೀಮರು. ವಾದನಗಳಲ್ಲೂ ಇವರಿಗೆ ಜ್ಞಾನವಿದೆ. ಕೆರೆಮನೆ ಹೊಸ್ತೋಟ ಮೇಳದ ಕಲಾವಿದರೂ ಆಗಿದ್ದರು. ಇಡಿ ಜೀವನವನ್ನು ಯಕ್ಷಗಾನಕ್ಕಾಗಿಯೇ ಮುಡಪಿಟ್ಟವರಾಗಿದ್ದಾರೆ. ಯಕ್ಷಗಾನ ಕಲಿಕಾ ಕೇಂದ್ರಗಳ ಮೂಲಕ ಅನೇಕರನ್ನು ಕಲಾವಿದರನ್ನಾಗಿಸಿದ್ದಾರೆ. ಅಂದಮಕ್ಕಳಿಗೆ ಯಕ್ಷಗಾನ ಕಲಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಪಾರ್ಥಿ ಸುಬ್ಬ ಪ್ರಶಸ್ತಿ, ಶಿವರಾಮಕಾರಂತ ಪ್ರಶಸ್ತಿಗಳನ್ನು ಇವರು ಪಡೆದಿರುತ್ತಾರೆ.

೬.೨ ಮದ್ದಳೆಗಾರರು

ಹವ್ಯಕರಲ್ಲಿ ಯಕ್ಷಗಾನದ ಮುಮ್ಮೇಳ, ಭಾಗವತಿಕೆಯಲ್ಲಿ ತೊಡಗಿಕೊಂಡಷ್ಟು ಸಂಖ್ಯೆಯ ಕಲಾವಿದರು ವಾದನ ವಿಭಾಗದಲ್ಲಿ ಕಂಡುಬಂದಿಲ್ಲ. ಆದರೂ ಶ್ರೇಷ್ಠ ಕೊಡುಗೆಗಳನ್ನು ನೀಡಿದ್ದು, ಹವ್ಯಕರ ವಿಶೇಷವಾಗಿದೆ. ಮದ್ದಳೆ ವಾದನದಲ್ಲಿ ನಾವಿನ್ಯತೆ ಹಾಗೂ ಕುಶಲತೆ ಹೊಂದಿ ರಾಷ್ಟ್ರ ರಾಜ್ಯ ಮಟ್ಟದ ವಿವಿಧೆಡೆ ಪ್ರದರ್ಶನ ನೀಡಿ ಪ್ರಶಸ್ತಿಗಳಿಸಿದ್ದು, ಹವ್ಯಕರ ಕೊಡುಗೆಯಾಗಿದೆ.

೬.೨.೧. ಬಡಗು–೧

ಬಡಗುತಿಟ್ಟಿನ ಪರಂಪರೆಯಲ್ಲಿ ಹಿಂದಿನ ತಲೆಮಾರಿನ ಕಲಾವಿದರೆಂದು ಕರ್ಕಿಮೇಳ, ಹೆಬ್ಬಯಲು ಮೇಳ, ಕೆರೆಮನೆ ಮೇಳ, ಗುಂಡಬಾಳ ಮೇಳದಲ್ಲಿ ಸೇವೆಸಲ್ಲಿಸಿದ ಮದ್ದಳೆ ವಾದಕರನ್ನು ಗುರುತಿಸಲಾಗಿದೆ.

---

೧೨. ಕಡತೋಕಾ ಮಂಜುನಾಥ ಭಾಗವತರ ಸಂದರ್ಶನ

೧. ಆಡುಕಳ ಪರಮೇಶ್ವರ ಹೆಗಡೆ ಕಲ್ಲಂಚು : ಎರಡು ತಲೆಮಾರು ಹಿಂದಿನ ಪ್ರಸಿದ್ಧ ಮದ್ದಳೆ ವಾದಕರು. ಮದ್ದಳೆಯ ಶ್ರೇಷ್ಠ ಕಲಾವಿದರೆಂದು ಪ್ರಸಿದ್ಧರಾದ ಕಿನ್ನಿರು ನಾರಾಯಣ ಹೆಗಡೆಯವರ ತಾಯಿಯ ತಂದೆ(ಅಜ್ಜ)ಯಾಗಿದ್ದರು. ಇವರ ಮೂಲ ಊರು ಬೇರಂಕಿ, ಕಿನ್ನೀರರ ಮೊದಲ ಗುರುವೇ ಇವರು. ಇವರು ಭಾಗವತರೂ ಕೂಡಾ ಆಗಿದ್ದರು.

೨. ಗಣೇಶ ಹೆಗಡೆ ಕಿನ್ನೀರು : ಕಿನ್ನೀರು ನಾರಾಯಣ ಹೆಗಡೆಯವರ ತಂದೆ. ಇವರು ಕೂಡ ಮದ್ದಳೆ ವಾದಕರೇ ಆಗಿದ್ದರು.

೩. ಮಾಳ್ಕೋಡು ದತ್ತ ಭಟ್ಟರು : ಮಾಳ್ಕೋಡು ಮೂಲದ ದತ್ತಾತ್ರೇಯ ಭಟ್ಟರು ಈ ಭಾಗದ ಮೇಳಗಳಿಗೆ ಮದ್ದಳೆ ವಾದಕರಾಗಿದ್ದರು. ಬಾಡದಮೇಳ, ಹೆಗಡೆ ಮೇಳದಲ್ಲೂ ಮದ್ದಳೆಗಾರರಾಗಿದ್ದರು.

೪. ಬಡಪ್ಪ ಹೆಗಡೆ ಹಡಿನಬಾಳು : ಉತ್ತಮ ಮದ್ದಳೆ ವಾದಕರು ಕಿನ್ನೀರು ನಾರಾಯಣ ಹೆಗಡೆಯವರಿಗಿಂತ ಪೂರ್ವಜರು. ಇವರು ಗುಂಡಬಾಳ ಮೇಳದಲ್ಲಿ ಹಾಗೂ ಹಿರಿಯ ತಲೆಮಾರಿನವರ ತಾಳಮದ್ದಳೆಯ ಕೂಟದಲ್ಲಿ ಪಾಲ್ಗೊಳ್ಳುತ್ತಿದ್ದರು.[೧೩]

೫. ಕಿನ್ನೀರು ನಾರಾಯಣ ಹೆಗಡೆ : ಹೊನ್ನಾವರ ತಾಲ್ಲೂಕಿನ ಮಾಳ್ಕೋಡಿನವರು. ಇಡಗುಂಜಿ ಸಾಲಿಗ್ರಾಮ ಮೇಳಗಳಲ್ಲಿ ಸೇವೆಸಲ್ಲಿಸಿದ್ದಾರೆ. ಕೆರೆಮನೆ ಮೇಳದಲ್ಲಿ ಬಹುಕಾಲ ಸೇವೆಸಲ್ಲಿಸಿದರು. ಸುಮಾರು ದಶಕಗಳು ಇವರು ಮದ್ದಳೆ ವಾದಕರಾಗಿ ವಿವಿಧ ಮೇಳಗಳಲ್ಲಿ ದುಡಿದರು. ದಕ್ಷಿಣ ಕನ್ನಡದ ರಾಮಚಂದ್ರ ಶಾನಭಾಗರಲ್ಲಿ ಮದ್ದಳೆ ವಾದನವನ್ನು ಕಲಿತರು. ೧೯೬೬ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಗೀತ ನಾಟಕ ಅಕಾಡೆಮಿಯ ಮೂಲಕ ಪ್ರದರ್ಶನ ನೀಡಿದರು. ೧೯೬೮ರಲ್ಲಿ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾದರು. ಯಕ್ಷರಂಗ ಕಂಡ ಮಹಾನ್ ಮದ್ದಳೆಗಾರರು ಇವರಾಗಿದ್ದಾರೆ.

೬. ಹಳದಿಪುರ ಪುಟ್ಟ ಸಭಾಹಿತರು : ಸಭಾಹಿತ ಮನೆತನ ಮತ್ತು ಯಕ್ಷಗಾನ ಪರಂಪರೆಯ ಸಂಬಂಧ ಚಾರಿತ್ರಿಕವಾದುದು. ಸಭಾಹಿತ ಮನೆತನದ ಪುಟ್ಟಸಭಾಹಿತರು ಉತ್ತರಕನ್ನಡದ ಹಿರಿಯ ಹಾಗೂ ಶ್ರೇಷ್ಠ ಮದ್ದಳೆಗಾರರಾಗಿದ್ದರು. ಕರ್ಕಿ ಮೇಳದಲ್ಲಿ ಮದ್ದಳೆ ವಾದಕರಾಗಿ ಸೇವೆಸಲ್ಲಿಸಿದರು.

೭. ದಿ|| ಮಕ್ಕಿ ಮಹಾಬಲೇಶ್ವರ ಹೆಗಡೆ : ಹೊನ್ನಾವರ ತಾಲ್ಲೂಕಿನ ಉಂಚಗೇರಿಯವರಾದ ಇವರ ತಂದೆ ದೇವರು ಹೆಗಡೆಯವರಿಂದ ಮದ್ದಳೆ ಅಭ್ಯಾಸ ಮಾಡಿದರು. ಭಾಗವತರಾಗಿ ಮದ್ದಳೆ ವಾದಕರಾಗಿ ಕರ್ಕಿ ಮೇಳದಲ್ಲಿ ಸೇವೆ ಸಲ್ಲಿಸಿದರು. ಇವರ ಕಲೆಗೆ ಮನ್ನಣೆಯಿತ್ತು ಸರ್ಕಾರ ರಾಜ್ಯ ಪ್ರಶಸ್ತಿಯನ್ನು ನೀಡಿದೆ.

ಮದ್ದಳೆಯಲ್ಲಿ ಬೆರಳುಗಾರಿಕೆ ಇವರ ವಿಶೇಷ ಸಾಧನೆಯಾಗಿತ್ತು. ಲಂಬೋದರ ಹೆಗಡೆ, ವೆಂಕರಮಣ ಹೆಗಡೆ, ಕಂಚಿಕೈ, ಕೇಶವ ಹೆಗಡೆ, ಹರಿಕೇರಿ ಇವರ ಶಿಷ್ಯರಾಗಿದ್ದರು.

---

೧೩. ಹೊನ್ನಾವರ ತಾಲೂಕಿನ ಕ್ಷೇತ್ರ ಕಾರ್ಯದ ಮಾಹಿತಿ.

೧. **ಶೇಡಿಮನೆ ನರಸಪ್ಪ** : ಹುಲೇಕಲ್ ಮೇಳದ ಮೃದಂಗ ವಾದಕರಾಗಿದ್ದರು. ಇವರು ಮೃದಂಗ ವಾದನದಲ್ಲಿ ವಿಶೇಷ ಪರಿಣಿತಿಯನ್ನು ಸಾಧಿಸಿ ಆ ಕಾಲದಲ್ಲಿ ಹೆಸರುವಾಸಿಯಾಗಿದ್ದರು.

೨. **ಕೆರೆಗದ್ದೆ ಸುಬ್ರಾಯ ಹೆಗಡೆ** : ಹೊಸತೋಟ ಮೇಳ, ಶಿವಳ್ಳಿ ಮೇಳ ಮತ್ತು ಪಂಚಲಿಂಗ ಮೇಳದ ಮದ್ದಳೆ ವಾದಕರಾಗಿದ್ದರು.

೩. **ಶಿವಗಾಂವ್ ಮಠದ ಗೋಪಾಲಕೃಷ್ಣ** : ಇವರು ಶಿವಳ್ಳಿ ಮೇಳದ ಮದ್ದಳೆ ವಾದಕರಾಗಿದ್ದರು.

೪. **ಅಗ್ರಹಾರ ಕೃಷ್ಣ ಗಾಂವ್ಕರ್**: ಕಂಚಿಮನೆ ಮತ್ತು ಮಾಧವ ಗಾಂವ್ಕರ್ ಇವರುಗಳು ಪ್ರಾಚೀನ ಮೇಳವಾದ ಹೊನ್ನಗದ್ದೆ ಮೇಳದಲ್ಲಿ ಮದ್ದಳೆ ವಾದಕರಾಗಿದ್ದರು.

೫. **ಜಾನಕೈ ತಿಮ್ಮಪ್ಪಹೆಗಡೆ** : ಸಿದ್ದಾಪುರ ತಾಲ್ಲೂಕಿನ ಜಾನಕೈ ತಿಮ್ಮಪ್ಪ ಹೆಗಡೆಯವರು ಹುಕ್ಲಮಕ್ಕಿ ಮೇಳದ ಸಂಘಟಕರೂ, ಪ್ರಸಿದ್ಧ ಮದ್ದಳೆ ವಾದಕರೂ ಆಗಿದ್ದರು.

೬. **ರಾಮಕೃಷ್ಣ ಹೆಗಡೆ ಜಲಭೂಮಿ** : ಇವರು ಹೊನ್ನಳ್ಳಿ ಮೇಳದ ಮದ್ದಳೆ ವಾದಕರಾಗಿ ದೀರ್ಘ ಕಾಲ ಸೇವೆ ಸಲ್ಲಿಸಿದ್ದಾರೆ.

೭. **ಕಲ್ಮನೆ ವಾಸು ಹೆಗಡೆ** : ಇವರು ಸಿದ್ಧಿವಿನಾಯಕ ಮಿತ್ರಮಂಡಳಿ ಕಲ್ಮನೆಯ ಮೇಳದ ಮದ್ದಳೆ ವಾದಕರಾಗಿದ್ದಾರೆ.

೮. **ಹೊಸತೋಟ ಗಜಾನನ ಭಟ್** : ಇವರು ಹೊಸತೋಟ ಮಂಜುನಾಥ ಭಾಗವತರ ಸಹೋದರರಾಗಿದ್ದು, ನೇಗಾರು ಮೇಳದಲ್ಲಿ ಮದ್ದಳೆ ವಾದಕರಾಗಿ ಕೆಲಸ ನಿರ್ವಹಿಸಿದ್ದಾರೆ.

೯. **ದೇವತೆ ಶಂಭುಭಟ್** : ಇವರು ಕೊಳಗಿಬೀಸ್ ಮೇಳದಲ್ಲಿ ದೀರ್ಘಕಾಲ ಮದ್ದಳೆ ವಾದಕರಾಗಿದ್ದರು.

೧೦. **ಮೂರೂರು ಕೃಷ್ಣ ಹೆಗಡೆ** : ಪ್ರಸಿದ್ಧ ವೇಷಧಾರಿಗಳು, ಭಾಗವತರು ಆಗಿದ್ದ ಇವರು ಶಿರಸಿ, ಸಿದ್ದಾಪುರ ತಾಲ್ಲೂಕಿನ ವಿವಿಧ ಮೇಳಗಳಲ್ಲಿ ಮದ್ದಳೆ ವಾದಕರಾಗಿಯೂ ಹೆಸರು ಗಳಿಸಿದ್ದಾರೆ.

೧೧. **ಸೋಂದೆ ನಾನಾಜೋಶಿ** : ಇವರು ಸೋಂದ ಮೇಳದಲ್ಲಿ ದೀರ್ಘಕಾಲ ಮದ್ದಳೆ ವಾದಕರಾಗಿ ಹಿಮ್ಮೇಳದ ಕಲಾವಿದರಾಗಿದ್ದರು.

೧೨. **ತಟ್ಟೀಸರ ಮಹಾಬಲೇಶ್ವರ ಹೆಗಡೆ** : ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ವಿವಿಧ ಮೇಳಗಳಲ್ಲಿ ಮದ್ದಲೆ ವಾದನದ ಮೂಲಕ ಚಿರಪರಿಚಿತರು.

೧೩. **ಶೀಗೆಹಳ್ಳಿ ಪರಂಭಟ್ಟರು** : ಶೀಗೆಹಳ್ಳಿ ಮೇಳದ ಸಂಘಟಕರೂ ಆಗಿದ್ದ ಇವರು ಮದ್ದಳೆ ವಾದನದ ಮೂಲಕ ಜನಪ್ರಿಯರಾಗಿದ್ದರು.

೧೪. **ಕಲ್ಮನೆ ವಾಸುದೇವ ಹೆಗಡೆ** : ಚಂಡೆ ಮತ್ತು ಮೃದಂಗಗಳೆರಡರಲ್ಲೂ ಪರಿಣಿತಿಯನ್ನು ಪಡೆದು ಕಲ್ಮನೆ ಮೇಳ, ನೇಗಾರ ಮೇಳಗಳಲ್ಲಿ ಸೇವೆ ಸಲ್ಲಿಸಿದವರು.

೧೫. ಸೀತಾರಾಮ ಹೆಗಡೆ ಹಿರೆಕೈ : ಅತ್ಯುತ್ತಮ ಮದ್ದಳೆ ವಾದಕರೆಂದು ಶಿರಸಿ–ಸಿದ್ದಾಪುರಗಳಲ್ಲಿ ಹೆಸರಾದ ಇವರು ಕಿನ್ನೀರು ನಾರಾಯಣ ಹೆಗಡೆಯವರ ಶಿಷ್ಯರಾಗಿದ್ದರು. ಅಕಾಲ ಮೃತ್ಯುವಿನಿಂದ ಮರಣ ಹೊಂದಿದ ಇವರು ಇಂದಿಗೂ ತಮ್ಮ ಜನಪ್ರಿಯತೆಯನ್ನು ಉಳಿಸಿಕೊಂಡಿದ್ದಾರೆ.

೧೬. ತಾರೇಸರ ಪರಮ ಹೆಗಡೆ : ವರ್ತಮಾನದ ವೃತ್ತಿ ಮೇಳಗಳಲ್ಲಿ ಹಾಗೂ ಹವ್ಯಾಸಿ ಮೇಳಗಳಲ್ಲಿ ಮದ್ದಳೆ ವಾದಕರಾದ ತಾರೇಸರ ಪರಮ ಹೆಗಡೆಯವರು ಅತ್ಯಂತ ಪ್ರಸಿದ್ಧರು ಹಾಗೂ ಮದ್ದಳೆ ವಾದನದ ಪರಿಣಿತಿಯನ್ನು ಪಡೆದವರಾಗಿದ್ದಾರೆ.

೧೭. ಚಂದ್ರಶೇಖರ ಹೆಗಡೆ : ಯಲ್ಲಾಪುರ ಓಣಿಕೇರಿಯವರಾದ ಇವರು ಹೊಸ ತಲೆಮಾರಿನ ಪ್ರಸಿದ್ಧರು. ಮದ್ದಳೆ ವಾದನದ ಮಟ್ಟುಗಳನ್ನು ಚೆನ್ನಾಗಿ ಅರಿತ ಇವರು ಉತ್ತಮ ವಾದನದ ಮೂಲಕ ಜನಪ್ರಿಯರಾಗಿದ್ದಾರೆ.

- **ಯಲ್ಲಾಪುರ ತಾಲ್ಲೂಕಿನ ಮದ್ದಳೆ ವಾದನ ಪರಂಪರೆಗೆ ಕೊಡುಗೆ ನೀಡಿದ ಕಲಾವಿದರು**

೧. ಹುತ್ಕಡ ಕಬ್ಬಿನಗದ್ದೆ ಮಹಾಬಲೇಶ್ವರ ಭಾಗವತ : ಭಾಗವತಿಕೆ ಮತ್ತು ಮದ್ದಳೆ ವಾದನವನ್ನು ಚೆನ್ನಾಗಿ ಅಭ್ಯಾಸ ಮಾಡಿದ ಇವರು ಬಾಳೆಹದ್ದ ಕೃಷ್ಣ ಭಾಗವತರಿಗೆ ಭಾಗವತಿಕೆಯನ್ನು ಕಲಿಸಿದರು.

೨. ಶಿಸ್ತುಮಡಿ ಶಂಕರ ಭಾಗವತ : ಇಂದಿನ ಶ್ರೇಷ್ಠ ಮದ್ದಳೆ ವಾದಕರು. ಇವರಿಗು ಕಬ್ಬಿನ ಗದ್ದೆ ಮಹಾಬಲೇಶ್ವರ ಭಾಗವತರು ಆರಂಭಿಕ ಗುರು ಆಗಿದ್ದರು. ಕೆರೆಮನೆ, ಸಾಲಿಗ್ರಾಮ ಮುಂತಾದ ಮೇಳಗಳಲ್ಲಿ ಇವರು ಸೇವೆ ಸಲ್ಲಿಸುತ್ತಿದ್ದಾರೆ. ಹವ್ಯಾಸಿ ಕೂಟಗಳಲ್ಲಿ ಮದ್ದಳೆ ವಾದನದ ಮೂಲಕ ಜನಮನವನ್ನು ರಂಜಿಸುತ್ತಿದ್ದಾರೆ.

೩. ಮಹಾಬಲ ಭಾಗವತ ನಂದೊಳ್ಳಿ : ೧೯೦೧ರಲ್ಲಿ ಯಲ್ಲಾಪುರದ ದೇವರಗದ್ದೆಯಲ್ಲಿ ಜನಿಸಿದರು. ಇವರು ಅಣಲಗಾರ ಮೇಳ, ಭರತನಳ್ಳಿ ಸೀಮೆ, ಹೊನ್ನಗದ್ದೆ ಮೇಳದಲ್ಲಿ ಮದ್ದಳೆ ವಾದಕರಾಗಿ ಪ್ರಸಿದ್ದರು. ಬಾಳೆಹದ್ದ ಕೃಷ್ಣ ಭಾಗವತರಿಗೆ ಮದ್ದಳೆವಾದನದ ಸಹಕಲಾವಿದರಾಗಿದ್ದರು.

೪. ಕೆರೆಗದ್ದೆ ಪಟೇಲಜ್ಜ : ಹಿಂದಿನ ತಲೆಮಾರಿನ ಪ್ರಸಿದ್ಧ ಮದ್ದಳೆವಾದಕರು. ಮದ್ದಳೆವಾದನದ ಮಟ್ಟುಗಳನ್ನು ಚೆನ್ನಾಗಿ ಅರಿತವರಾಗಿದ್ದರು.[೧೫]

೫. ವಿಶ್ವನಾಥ ಗೋಪಾಲ ಹೆಗಡೆ : ಉತ್ತಮ ಮದ್ದಳೆ ವಾದಕರು. ಬೆರಳಿನ ಸಮಸ್ಯೆಯಿಂದ ಮದ್ದಳೆ ವಾದನವನ್ನು ಬಿಟ್ಟು ಕಲೆಯಿಂದ ದೂರವಾಗದೆ ಮದ್ದಳೆಗೆ ಬೇಕಾದ ಕಲಶ ಕಡೆಯುವುದನ್ನು ವೃತ್ತಿ ಮಾಡಿಕೊಂಡರು.

೬. ತುದಿಮನೆ ಸುಬ್ಬಣ್ಣ : ಉತ್ತಮ ಮದ್ದಳೆ ವಾದಕರಾದ ಇವರು ಬಾಳೆಹದ್ದ ಕೃಷ್ಣ ಭಾಗವತರಿಗೆ ಮದ್ದಳೆ ವಾದನದ ಸಹಕಲಾವಿದರಾಗಿದ್ದರು.

---

೧೫. ಸಿರ್ಸಿ ಸಿದ್ದಾಪುರ ತಾಲೂಕಿನ ಕ್ಷೇತ್ರ ಕಾರ್ಯ

೭. ಕವಾಳೆ ಸುಬ್ಬಣ್ಣ ಭಾಗವತ : ಯಲ್ಲಾಪುರ ತಾಲ್ಲೂಕಿನ ಕವಾಳೆ ಮನೆತನ ಯಕ್ಷಗಾನ ಕಲೆಗೆ ಹೆಸರಾದದ್ದು. ಸುಬ್ಬಣ್ಣ ಭಾಗವತರು ಮದ್ದಳೆ ವಾದನವನ್ನು ಕಲಿತು ಪ್ರಸಿದ್ಧರಾದರು. ಇವರು ಕವಾಳೆ ರಾಮಚಂದ್ರ ಭಾಗವತರ ಸಹೋದರರಾಗಿದ್ದರು.

೮. ಮಾಧವ ಗಾಂವ್ಕರ್- ಗಣೇಶ್ ಗಾಂವ್ಕರ್, ಕಂಚಿಕುಳಿ : ಇವರಿಬ್ಬರು ಹೊನ್ನಗದ್ದೆ ಮೇಳ ಮತ್ತು ಅಣಲಗಾರ ಮೇಳದಲ್ಲಿ ಸೇವೆ ಸಲ್ಲಿಸಿದರು. ಮದ್ದಳೆ ವಾದನದಲ್ಲಿ ನಿಷ್ಣಾತರಾದ ಇವರು ಉತ್ತಮ ಹೆಸರು ಗಳಿಸಿದರು.

೯. ವಾಗಳ್ಳಿ ಜೈರಾಮ ಗಾಂವ್ಕರ್ : ಯಲ್ಲಾಪುರದ ಬಾಸಲದ ಸಮೀಪ ವಾಗಳ್ಳಿಯವರು. ಇವರು ಭಾಗವತರು, ಮದ್ದಳೆಗಾರರು ಆಗಿದ್ದರು. ಬಾಯಿಯಿಂದ ಪದ ಹೇಳುತ್ತ, ಕೈಯಿಂದ ಮದ್ದಳೆಯನ್ನು ವಾದಿಸಿ ಕಾಲಿನಿಂದ ತಾಳಹಾಕುತ್ತಿದ್ದರು.[೧೬]

೧೦. ರಾಮಚಂದ್ರ ಭಾಗವತ ಕವಾಳೆ : ಯಕ್ಷಗಾನ ರಂಗದಲ್ಲಿ ಭಾಗವತಿಕೆ ಮತ್ತು ಮೃದಂಗ ವಾದನದ ಪರಿಣಿತಿ ಸಾಧಿಸಿದ ಪ್ರತಿಭಾವಂತ ಕಲಾವಿದರು. ಇವರು ಕಲ್ಮನೆ ವಿಶ್ವನಾಥ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ ಮುಂತಾದವರಲ್ಲಿ ಭಾಗವತಿಕೆಯನ್ನು ಅಭ್ಯಾಸ ಮಾಡಿದರು. ಕೋಟ ಯಕ್ಷಗಾನ ಕೇಂದ್ರದಲ್ಲಿ ಶಿಕ್ಷಕರಾಗಿದ್ದರು. ಸಾಲಿಗ್ರಾಮ, ಪೆರ್ಡೂರು, ಅಮೃತೇಶ್ವರಿ ಮುಂತಾದ ಮೇಳಗಳಲ್ಲಿ ಮದ್ದಳೆ ವಾದನದ ಮೂಲಕ ಪ್ರಸಿದ್ಧಿ ಪಡೆದರು. ಶೃತಿಸುಭಗತೆ, ಶುದ್ಧಗುಂಪು, ಛಾಪು, ಭಾವಕ್ಕೆ ಹೊಂದುವ ಬಿಡ್ತಿಗೆ ಇವರ ವೈಶಿಷ್ಟ್ಯತೆಯಾಗಿತ್ತು. ಪ್ರಸಿದ್ಧ ಕಲಾವಿದರಿಗೆಲ್ಲ ಮದ್ದಳೆ ವಾದನ ನೀಡಿದ ಹೆಮ್ಮೆ ಇವರದು.

ಸಾಗರ ತಾಲ್ಲೂಕಿನ ಮದ್ದಳೆ ವಾದಕರು ೧೮೫೦-೧೯೦೦ರ ಕಾಲ

೧. ಶಂಕರಯ್ಯನ ತಿಮ್ಮಪ್ಪ ಬೆಳೆಯೂರು

೨. ಹಾಸ್ಯಗಾರ ಮರಿಯಪ್ಪ

೧೯೪೦ ರಿಂದ ೧೯೫೨

೧. ಮಾದಯ್ಯನ ಸುಬ್ಬಯ್ಯ ಬೆಳೆಯೂರು

೨. ಬಂಗಾರಿರಾಮಯ್ಯ ಬೆಳೆಯೂರು

೩. ಭೀಮಯ್ಯನ ನಾರಾಯಣಪ್ಪ ಬೆಳೆಯೂರು

೪. ಮಾಲ್ವೆ ಸಣ್ಣಭಟ್ಟರು

೫. ಕೋಡನಕಟ್ಟೆ ತಮ್ಮಣ್ಣ ಭಟ್ಟರು

೬. ಉಳ್ಳೂರು ಗುಂಡಾಭಟ್ಟರು

೧೬. ಸಂದರ್ಶನ - ಯಲ್ಲಾಪುರ ತಾಲೂಕಿನ ಕ್ಷೇತ್ರ ಕಾರ್ಯ

ಇವರೆಲ್ಲರು ಮಲೆನಾಡಿನ ವಿವಿಧ ಮೇಳಗಳಲ್ಲಿ ಮದ್ದಳೆ ವಾದಕರಾಗಿ ಬಡಗಿನ ವಿಶಿಷ್ಟ ಶೈಲಿಯನ್ನು ರೂಢಿಸಿದರು. ಇವರ ಸೇವೆಯಿಂದ ಮೇಳಗಳು ಪ್ರಸಿದ್ಧಗೊಂಡವು. ಮೃದಂಗ ವಾದನದ ಮೂಲಕ ಜನಪ್ರಿಯರಾದ ಈ ಕಲಾವಿದರ ಕುರಿತಾಗಿ ವಿಶೇಷ ಮಾಹಿತಿಗಳು, ವಿವರಗಳು ಲಭ್ಯವಾಗಿಲ್ಲ.

೬.೨.೩. ತೆಂಕುತಿಟ್ಟಿನ – ಮದ್ದಳೆಗಾರರು

ತೆಂಕುತಿಟ್ಟು ಯಕ್ಷಗಾನ ಪರಂಪರೆಯಲ್ಲಿ ಚಂಡೆ ಮತ್ತು ಮದ್ದಳೆ ಒಟ್ಟೊಟ್ಟಿಗೆ ಬೆಳೆದು ಬಂದಿದೆ. ದಕ್ಷಿಣ ಕನ್ನಡದ ತೆಂಕಿನ ಶೈಲಿಯಲ್ಲಿ ಚಂಡೆ ಮದ್ದಳೆ ವಾದನದ ಪರಂಪರೆ ಮನೆತನದಲ್ಲಿ ಬೆಳೆದು ಬಂದಿದೆ. ಅಂತಹ ಮನೆತನದ ಅನೇಕ ತಲೆಮಾರುಗಳು ಮೃದಂಗ ವಾದನದಲ್ಲಿ ತೊಡಗಿಕೊಂಡಿವೆ.

೧. ಪದ್ಯಾಣ ಶಂಕರಭಟ್ : ಪದ್ಯಾಣ ಮನೆತನದ ಹಿರಿಯ ತಲೆಮಾರಿನ ಕಲಾವಿದರು. ಇವರು ಚಂಡೆ ಮದ್ದಳೆಗಳೆರಡರಲ್ಲೂ ಪ್ರಸಿದ್ಧರಾಗಿದ್ದರು. ತೆಂಕಿನ ವಿವಿಧ ಮೇಳಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಪದ್ಯಾಣ ಮನೆತನವು ಭಾಗವತಿಕೆ ಕ್ಷೇತ್ರದಲ್ಲೂ ಹೆಸರಾಗಿದ್ದು, ಹಿಮ್ಮೇಳದ ಎಲ್ಲಾ ಅಂಗಗಳಲ್ಲೂ ಈ ಮನೆತನದ ಕಲಾವಿದರು ಪರಿಣಿತಿಯನ್ನು ಸಾಧಿಸಿದ್ದರು. ಧರ್ಮಸ್ಥಳ ಮೇಳದಲ್ಲಿ ಹಿಮ್ಮೇಳದ ಕಲಾವಿದರಾಗಿ ಇವರು ಸೇವೆ ಸಲ್ಲಿಸುತ್ತಿದ್ದಾರೆ.

೨. ಪದ್ಯಾಣ ಭೀಮಭಟ್ : ಪದ್ಯಾಣ ಭೀಮಭಟ್ಟರು ಚಂಡೆ ಮದ್ದಳೆಗಳೆರಡರಲ್ಲೂ ನಿಷ್ಣಾತರು. ತೆಂಕಿನ ಶೈಲಿಯಲ್ಲಿ ವಿಶಿಷ್ಟವಾಗಿ ವಾದಿಸುವ ಇವರ ಶೈಲಿ ಪ್ರಸಿದ್ಧವಾಗಿತ್ತು. ಧರ್ಮಸ್ಥಳ ಮೇಳದಲ್ಲಿ ಸುದೀರ್ಘವಾಗಿ ಸೇವೆಸಲ್ಲಿಸಿರುತ್ತಾರೆ.

೩. ಕುದ್ರೆಕ್ಕೋಡು ಮನೆತನ : ಕುದ್ರೆಕ್ಕೋಡು ಮನೆತನವರು ಚಂಡೆ ಮದ್ದಳೆ ಕ್ಷೇತ್ರಕ್ಕೆ ಕೊಡುಗೆ ಸಲ್ಲಿಸಿದ ಮನೆತನವಾಗಿದೆ. ಈ ಮನೆತನದ ಹೆಸರಾಂತ ಕಲಾವಿದರು ತೆಂಕಿನ ವೃತ್ತಿ ಮೇಳಗಳು ಮತ್ತು ಹವ್ಯಾಸಿ ಕೂಟಗಳಲ್ಲಿ ವಾದಕರಾಗಿ ಸೇವೆ ಸಲ್ಲಿಸಿರುತ್ತಾರೆ. ಹಿರಿಯ ತಲೆಮಾರಿನ ಕುದ್ರೆಕ್ಕೋಡು ರಾಮಭಟ್ಟರು ಬಹಳ ಪ್ರಸಿದ್ಧವಾಗಿದ್ದರು. ತೆಂಕುಶೈಲಿಯ ಮಟ್ಟು ಮತ್ತು ಪೆಟ್ಟುಗಳಲ್ಲಿ ಅವರು ಸಾಕಷ್ಟು ಪರಿಣಿತಿಯನ್ನು ಸಾಧಿಸಿದ್ದರು. ಇವರ ಮಗ ರಾಮಭಟ್ಟರು ಹಾಗೂ ಇದೇ ಮನೆತನದ ಮೂರನೇ ತಲೆಮಾರಿನಲ್ಲೂ ರಾಮಭಟ್ಟರೆಂದೆ ಹೆಸರಾದ ಈ ತಲೆಮಾರಿನ ಕುದ್ರೆಕ್ಕೋಡು ರಾಮಭಟ್ಟರು ಚಂಡೆ ಮದ್ದಳೆ ವಾದನದಲ್ಲಿ ಪ್ರಸಿದ್ಧರು. ಈ ಮನೆತನದ ಕಲಾವಿದರು ಕೂಡ್ಲುಮೇಳ, ಮುಲ್ಕಿ ಮೇಳ ಹಾಗೂ ಧರ್ಮಸ್ಥಳ ಮೇಳಗಳಲ್ಲಿ ಸೇವೆಸಲ್ಲಿಸಿದ್ದಾರೆ.[೧೭]

೪. ಮಾಂಬಾಡಿ ಮನೆತನ : ತೆಂಕುಶೈಲಿಯ ಮದ್ದಳೆ ವಾದನಕ್ಕೆ ಇನ್ನೊಂದು ಹೆಸರು ಮಾಂಬಾಡಿ ಮನೆತನ. ಮಾಂಬಾಡಿ ಸುಬ್ಬಣ್ಣ ಭಟ್ಟ, ಮಾಂಬಾಡಿ ಗೋಪಾಲಕೃಷ್ಣ ಭಟ್ಟ ಇವರಿಬ್ಬರು ಪ್ರಸಿದ್ಧ ಮದ್ದಳೆ ವಾದಕರೇ ಆಗಿದ್ದರು. ಇವರು ಮದ್ದಳೆ ವಾದನದ ಮಟ್ಟುಗಳನ್ನು ಬಿಡ್ತಿಗೆಗಳನ್ನು ಚೆನ್ನಾಗಿ ಅರಿತು ಮಾಂಬಾಡಿ ಶೈಲಿಯ ಪ್ರವರ್ತಕರಾಗಿದ್ದರು. ಇದೇ ಮನೆತನವು ಭಾಗವತಿಕೆಯಲ್ಲಿಯೂ ಹೆಸರಾದದ್ದನ್ನು ಸ್ಮರಿಸಬಹುದು.

---

೧೭. ಕ್ಷೇತ್ರಕಾರ್ಯ ಪುತ್ತೂರು ತಾಲ್ಲೂಕು – ಗೋವಿಂದ ಪ್ರಸಾದ ಕಜೆರವರು ನೀಡಿದ ಮಾಹಿತಿ.

ಇದಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯ ತೆಂಕುಶೈಲಿ ಎಂದು ಹೆಸರಾದ ಪರಂಪರೆಗೆ ಗಮನಾರ್ಹ ಕೊಡುಗೆಯನ್ನು ನೀಡಿದ ಅನೇಕರಿದ್ದಾರೆ. ಎಲೆಮರೆಯ ಕಾಯಿಯಂತೆ ಕಲಾ ಜೀವನವನ್ನು ಸಾಗಿಸಿ ಹಿಮ್ಮೇಳದ ಕಲಾವಿದರಾಗಿ ಮೇಳಗಳಲ್ಲಿ ತಾಳಮದ್ದಳೆ ಕೂಟಗಳಲ್ಲಿ ಚಂಡಮದ್ದಳೆಯನ್ನು ನುಡಿಸಿ ಹೆಸರಾಗದೆ ಹಳ್ಳಿಹಳ್ಳಿಯ ಮೂಲೆಯಲ್ಲಿ ವಾಸಿಸಿದ್ದಾರೆ. ಅಲ್ಲದೇ ಕೆಲವರು ಹಿಂದಿನ ತಲೆಮಾರಿನಲ್ಲಿ ಪ್ರಸಿದ್ಧರಾಗಿಯೂ ಅವರ ವಿವರಗಳು ಹೆಚ್ಚಿಗೆ ಲಭ್ಯವಾಗದೆ ಹಾಗೂ ಕ್ಷೇತ್ರ ಕಾರ್ಯ ಸಮಯದಲ್ಲೂ ವಿವರಗಳು ಲಭ್ಯವಾಗದಿರುವುದರಿಂದ ಅವರ ಹೆಸರುಗಳನ್ನಷ್ಟೇ ದಾಖಲಿಸಲಾಗಿದೆ. ಮದ್ದಳೆ ಕೇಚಣ್ಣ, ತಲೆಂಗಳ ಗೋಪಾಲಕೃಷ್ಣ ಭಟ್, ಮೆಟ್ಟು ಗುಂಡೆ ಕೇಶವಭಟ್, ಕಲ್ಮಡ್ಕ ಶಂಕರ್ ಭಟ್, ನಿಡ್ವಾಜೆ ಸುಬ್ರಾಯಭಟ್, ನಕರ ಮೂಲೆ ಗಣೇಶ ಭಟ್ ಇನ್ನೂ ಅನೇಕರು ಇದ್ದರು. ಕೇವಲ ಪ್ರಸಿದ್ಧಿ ಪಡೆದವರನ್ನಷ್ಟೇ ಗುರುತಿಸಿ ಇನ್ನುಳಿದವರ ಕುರಿತು ಮಾಹಿತಿಯನ್ನು ದಾಖಲಿಸಲಾಗಿದೆ. (ನೋ. ಚಂಡಮದ್ದಳೆ ವಾದಕರು ತೆಂಕು)

೬.೩. ಚಂಡೆ ವಾದಕರು:

೬.೩.೧. ಬಡಗು-೧

ಬಡಗು ತಿಟ್ಟಿನಲ್ಲಿ ಚಂಡೆವಾದನ ಆರಂಭಗೊಂಡಿದ್ದು, ಮೂರು ದಶಕಗಳಿಂದೀಚೆಗೆ ಅಲ್ಲಿಯವರೆಗೂ ತಾಸಮಾರನ್ನು ಚಂಡೆಯ ಸ್ಥಾನದಲ್ಲಿ ಬಳಸುತ್ತಿದ್ದರು. ಮೃದಂಗಕಾರರೇ ಚಂಡೆ ವಾದನದಲ್ಲೂ ಪರಿಣಿತಿ ಸಾಧಿಸಿದ್ದು, ಎರಡು ತಿಟ್ಟುಗಳಲ್ಲೂ ಕಾಣುತ್ತೇವೆ. ವರ್ತಮಾನದಲ್ಲಿ ಮೂವರು ಚಂಡೆವಾದಕರು ವೃತ್ತಿ ಮೇಳದಲ್ಲಿರುತ್ತಾರೆ.

೧. **ಸುಬ್ರಹ್ಮಣಿ ಕೆರೋಡಿ** : ಕುಮಟ ತಾಲ್ಲೂಕಿನ ಮೂರೂರಿನವರಾದ ಇವರು ಖ್ಯಾತ ಚಂಡೆ ವಾದಕರು. ಇವರು ವೃತ್ತಿ ಮೇಳದ ಕಲಾವಿದರಾಗಿ ಬಡಗು ತಿಟ್ಟಿನ ವಿವಿಧ ಮೇಳಗಳಲ್ಲಿ ಸೇವೆಸಲ್ಲಿಸುತ್ತಿದ್ದಾರೆ.

೨. **ಗಜಾನನ ಹೆಗಡೆ ಮೂರೂರು** : ಇವರು ಕುಮಟಾ ತಾಲ್ಲೂಕಿನ ಮೂರೂರು ಗ್ರಾಮದವರಾಗಿದ್ದು, ಪ್ರಸಿದ್ಧ ಚಂಡೆ ವಾದಕರು. ಬಡಗುತಿಟ್ಟಿನ ಮೇಳಗಳಾದ ಗುಂಡಬಾಳಾ, ಸಾಲಿಗ್ರಾಮ, ಪೆರ್ಡೂರು ಮುಂತಾದ ಮೇಳಗಳಲ್ಲಿ ವೃತ್ತಿ ಕಲಾವಿದರಾಗಿರುತ್ತಾರೆ.

೫.೩.೨. ಬಡಗು-೨

೧. **ಲಕ್ಷ್ಮೀನಾರಾಯಣ ಸಂಪ** : ವರ್ತಮಾನದ ಪ್ರಸಿದ್ಧ ಚಂಡೆ ವಾದಕರಾದ ಇವರು ಸಾಲಿಗ್ರಾಮ ಪೆರ್ಡೂರು ಮುಂತಾದ ಮೇಳಗಳಲ್ಲದೆ ವಿವಿಧ ಹವ್ಯಾಸಿ ಮೇಳಗಳಲ್ಲಿ ಚಂಡೆ ವಾದಕರಾಗಿ ದಕ್ಷಿಣೋತ್ತರ ಕನ್ನಡ ಜಿಲ್ಲೆ ಹಾಗೂ ಮಲೆನಾಡು ಭಾಗದಲ್ಲಿ ಪ್ರಸಿದ್ಧರಾಗಿದ್ದಾರೆ. ಇವರು ತುಂಬಾ ಬೇಡಿಕೆಯ ಕಲಾವಿದರು ಹೌದು. ಇವರಿಗೆ ಚಂಡೆ ವಾದನದ ಮಟ್ಟಿನ ಪರಿಜ್ಞಾನ ಹಾಗೂ ಕೌಶಲ್ಯ ಸಿದ್ಧಿಸಿರುವುದರಿಂದ ಜನಪ್ರಿಯತೆ ಸಹಜವಾಗಿಯೇ ಬೆಳೆದು ಬಂದಿದೆ.

೨. **ಮಾದಯ್ಯನ ಸುಬ್ಬಯ್ಯ ಬೆಳೆಯೂರು** : ಬೆಳೆಯೂರು ಮೇಳದ ಚಂಡೆ ವಾದಕರು. ದೀರ್ಘ ಇತಿಹಾಸವಿರುವ ಬೆಳೆಯೂರು ಮೇಳದಲ್ಲಿ ಚಂಡೆ ವಾದಕರಾಗಿ ಪ್ರಸಿದ್ಧರಾಗಿರುತ್ತಾರೆ.

೩. ಸೂರ್ಯನಾರಾಯಣ ರಾವ್ ಗುಡ್ಡೇದಿಂಬ : ಇವರು ಸಾಗರ ತಾಲ್ಲೂಕಿನ ಗುಡ್ಡೇದಿಂಬದವರು. ಬಡಗುತಿಟ್ಟಿನ ವಿವಿಧ ಮೇಳಗಳಲ್ಲಿ ಚಂಡೆ ವಾದಕರಾಗಿದ್ದಾರೆ.

೪. ಸುಬ್ರಾಯ ಹೆಬ್ಬಾರ ಸಾಗರ : ಇವರು ವರ್ತಮಾನದ ಪ್ರಸಿದ್ಧ ಚಂಡೆವಾದಕರು.

೬.೩.೩. ತೆಂಕುತಿಟ್ಟಿನ ಚಂಡೆವಾದಕರು

ತೆಂಕು ಶೈಲಿಯಲ್ಲಿ ಚಂಡೆ ಮತ್ತು ಮದ್ದಳೆ ವಾದನವು ಜೊತೆಯಾಗಿ ಬೆಳೆದಿರುವುದರಿಂದ ಮದ್ದಳೆ ವಾದನದ ಪರಂಪರೆಯಲ್ಲಿಯೇ ಚಂಡೆ ವಾದಕರ ಕುರಿತು ವಿವರಿಸಲಾಗಿದೆ.

೧. ದಿವಾನ ಭೀಮಭಟ್ಟ, ೨. ಕುದ್ರೆಕೋಡು ರಾಮಭಟ್ಟ, ೩. ರಾಮ ಕುದ್ರೆಕೋಡು, ೪. ತಲೆಂಗಳ ಗೋಪಾಲಕೃಷ್ಣ ಭಟ್, ೫. ಆನೆಗುಂಡಿ ಗಣಪತಿ ಭಟ್, ೬. ನಿಡುವಜೆ ಶಂಕರ್ ಭಟ್

೬.೪. ವಿಶಿಷ್ಟ ಹಾಗೂ ಪ್ರಸಿದ್ದ ಪಾತ್ರಧಾರಿಗಳು:

ಯಕ್ಷಗಾನ ರಂಗದಲ್ಲಿ ವ್ಯಕ್ತಿ ವಿಶಿಷ್ಟ ಶೈಲಿಯು ರೂಢಿಗೊಂಡಿದೆ. ಕಲಾವಿದರ ಅಭಿನಯ, ಮಾತುಗಾರಿಕೆ, ರಂಗನಡೆಗಳ ಆಧಾರದ ಮೇಲೆ ಜನರು ಅಂತಹ ಕಲಾವಿದರನ್ನು ವಿಶಿಷ್ಟ ಕಲಾವಿದರನ್ನಾಗಿ ಗುರುತಿಸಿ ಜನಪ್ರಿಯತೆಯನ್ನು, ಪ್ರಶಂಸೆಯನ್ನು ವ್ಯಕ್ತಪಡಿಸುತ್ತಾರೆ. ಸಾಮಾನ್ಯವಾಗಿ ದೈವದತ್ತವಾಗಿ ಪರಂಪರಾಗತವಾಗಿ ಸ್ವಸಾಮರ್ಥ್ಯ ಪ್ರತಿಭೆಗಳಿಂದಲೂ ಕಲಾವಿದನೊಬ್ಬ ರಂಗದಲ್ಲಿ ತನ್ನದೇ ಆದ ಪರಂಪರೆಯನ್ನು ಸೃಷ್ಟಿಸಿದ್ದು ಇದೆ. ಕೆಲವು ಮನೆತನದ ಕಲಾವಿದರು ಅವರ ಹಿರಿಯ ತಲೆಮಾರಿನ ಕಲಾವಿದರ ಕಲೆಗಾರಿಕೆಯನ್ನು ರೂಢಿಸಿಕೊಂಡು ಅದೇ ಶೈಲಿಯಲ್ಲಿ ಪರಂಪರೆಯನ್ನು ಉಳಿಸಿ ಬೆಳೆಸಿರುತ್ತಾರೆ. ಸಮಕಾಲೀನ ರಂಗಭೂಮಿಯ ಉತ್ತಮ ಕಲೆಗಾರಿಕೆಯನ್ನು ಪ್ರತಿನಿಧಿಸುವ ಸಾಮರ್ಥ್ಯವು ಕಲಾವಿದರಲ್ಲಿರುತ್ತದೆ. ಅಲ್ಲದೆ ಪರಂಪರೆಯ ಶೈಲಿಯನ್ನು ಅನುಕರಿಸುವ ಮೂಲಕ ವಿಶಿಷ್ಟತೆಯನ್ನು ಗುರುತಿಸಿಕೊಳ್ಳುವ ಸಾಧ್ಯತೆಗಳು ಇವೆ.

ಸ್ವಸಾಮರ್ಥ್ಯ ಮತ್ತು ಪ್ರತಿಭೆಗಳು ತಮ್ಮ ಪರಂಪರೆಯ ಶೈಲಿಯ ಪ್ರತಿನಿಧಿಸುವ ಬಲವಾದ ಪ್ರೇರಣೆಯಿಂದ ಉತ್ತಮ ನಟನಾಗಿ ರಂಗ ನಿರ್ವಹಣೆ ಮಾಡುವ ಕಲಾ ಆರಾಧನೆಯು ಕಲಾವಿದರಲ್ಲಿ ಇರುತ್ತದೆ. ಕಲಾವಿದನೊಬ್ಬ ತನ್ನ ಪ್ರತಿಭೆ ಮತ್ತು ಸಾಮರ್ಥ್ಯಗಳನ್ನು ಪರಂಪರೆಯ ಚೌಕಟ್ಟಿನಲ್ಲಿ ತನ್ನ ಆದರ್ಶ ಕಲಾವಿದರುಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ತನ್ನನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಕಾರಣದಿಂದ ಒಬ್ಬ ಪ್ರಸಿದ್ಧ ನಟನನ್ನು ಅನುಸರಿಸಿ ಒಂದು ಪರಂಪರೆ ಬೆಳೆಯುತ್ತದೆ. ಅಂತಹ ಶೈಲಿಯ ಕಲಾವಿದರು ವಿಶಿಷ್ಟ ಕಲಾವಿದರಾಗಿ ಹೆಸರಾಗುತ್ತಾರೆ. ಯಕ್ಷಗಾನ ಪರಂಪರೆಯಲ್ಲಿ ಅನೇಕ ಮನೆತನಗಳು ಇಂತಹ ಶೈಲಿಯನ್ನು ಬೆಳೆಸಿಕೊಂಡು ಬಂದಿದೆ. ಅಲ್ಲದೆ ಕೆಲವು ನಟರು ತಮ್ಮ ಪ್ರತಿಭೆಯಿಂದ ತಮ್ಮದೇ ಆದ ಶೈಲಿಯ ಕುಣಿತಾಭಿನಯಗಳನ್ನು, ಲಯಗಾರಿಕೆಯನ್ನು ಸಿದ್ದಿಸಿಕೊಂಡು ರಂಗನಿರ್ವಹಣೆಯ ಮೂಲಕ ಪ್ರಸಿದ್ಧರಾದ ಉದಹಾರಣೆಗಳು ಇವೆ.

ಹವ್ಯಕರಲ್ಲಿ ಯಕ್ಷಗಾನವು ಪರಂಪರೆಯಾಗಿ ಹರಿದು ಬಂದಿತು. ಅನೇಕ ಕಲಾವಿದರು ಅಂತಹ ಪರಂಪರೆಯನ್ನು ಅನುಸರಿಸಿ ಶ್ರೇಷ್ಠ ಕಲಾವಿದರಾದದ್ದು ಕಂಡುಬರುತ್ತದೆ. ಕಲೆಯನ್ನು

ಆರಾಧಿಸುವ ಮನೆತನ ಮತ್ತು ಕಲಾವಿದರನ್ನು ಗಮನಿಸಿದಾಗ ಪ್ರಸಿದ್ಧರೂ, ಜನಪ್ರಿಯರೂ ಆದ ಕಲಾವಿದರು ಕಲೆಗಾಗಿ ಕೊಡುಗೆ ಸಲ್ಲಿಸುವ ಮೂಲಕ ವಿಶಿಷ್ಟರೆನ್ನಿಸಿದ್ದಾರೆ.

ಪಾತ್ರ ನಿರ್ವಹಣೆ, ಮಾತುಗಾರಿಕೆ, ರಂಗನಡೆ, ಅಭಿನಯ ಕೌಶಲ್ಯ, ರಸಪ್ರತಿಪಾದನೆಯ ಅಂಶಗಳು ಒಬ್ಬ ನಟನ ವಿಶಿಷ್ಟತೆಯನ್ನು ಸಾದರಪಡಿಸುತ್ತದೆ. ಈ ಎಲ್ಲಾ ಕಲಾತ್ಮಕ ಅಂಶಗಳನ್ನು ಅಭಿವ್ಯಕ್ತಿಗೊಳಿಸಲು ಪ್ರತಿಭೆಯೇ ಕಾರಣವಾಗಿರುತ್ತದೆ. ಅಂತಹ ಪ್ರತಿಭಾನ್ವಿತರು ರಂಗದಲ್ಲಿ ಅಪಾರ ಜನರ ಪ್ರೀತಿ, ವಿಶ್ವಾಸಗಳನ್ನು ಗಳಿಸುವ ಮೂಲಕ ಪ್ರಸಿದ್ಧರಾಗುತ್ತಾರೆ. ಅಂತಹವರನ್ನು ಕುರಿತು ವಿಶ್ಲೇಷಿಸುವುದೇ ಈ ಅಧ್ಯಯನದ ಉದ್ದೇಶವೂ ಆಗಿದೆ.

೬.೪.೧. ಬಡಗು – ೧

➤ ದಿ॥ ಪರಮಯ್ಯ ಹಾಸ್ಯಗಾರರು ಕರ್ಕಿ : ೧೮೮೪–೧೯೭೧

ಉತ್ತರಕನ್ನಡ ಜಿಲ್ಲೆಯ ಪ್ರಾಚೀನ ಪರಂಪರೆಯಾದ ಕರ್ಕಿ ಮೇಳಕ್ಕೆ ನಾಲ್ಕುನೂರು ವರ್ಷಗಳ ಇತಿಹಾಸವಿದೆ. ದಿ॥ ವರದ ಹಾಸ್ಯಗಾರರು ಯಕ್ಷಗಾನವನ್ನು ಜಿಲ್ಲೆಯ ವಿವಿಧ ತಾಲ್ಲೂಕಿಗೆ ಪಸರಿಸಿದರು. ದಿ॥ ಪರಮಯ್ಯ ಹಾಸ್ಯಗಾರರು ಹಿಂದೆಯೇ ಯಕ್ಷಗಾನವನ್ನು ಪರರಾಜ್ಯಗಳಿಗೂ ಪರಿಚಯಿಸಿದರು. ಇವರ ಕುರಿತು ಜಿಲ್ಲೆಯ ಎಲ್ಲಾ ಕಲಾರಸಿಕರಿಗೆ ಎಲ್ಲಿಲ್ಲದ ಆದರವಿತ್ತು. ಎಲ್ಲರೂ ಗೌರವದಿಂದ ಕಾಣುತ್ತಿದ್ದರು. ಉತ್ತರಕನ್ನಡದ ಪರಂಪರೆಯ ಮೇಲೆ ಪರಮಯ್ಯ ಹಾಸ್ಯಗಾರರಿಗೆ ಆಳವಾದ ಜ್ಞಾನವಿರುವುದರಿಂದಲೇ ಸಭಾಹಿತ ಮಟ್ಟಿನ ನಿಘಂಟು ಎಂದು ಕರೆಯಲಾಗಿತ್ತು. ಅನೇಕ ಮಕ್ಕಳಿಗೆ ಯಕ್ಷಗಾನ ಕಲಿಸಿ, ಆಚಾರ್ಯ ಪುರುಷರಾಗಿ ಜಿಲ್ಲೆಗೆ ಸಂದರು. ಇವರ ನೇತೃತ್ವದಲ್ಲಿ ಮೇಳ ದೇಶ ವಿದೇಶಗಳಲ್ಲಿ ಸಂಚರಿಸಿ ಯಕ್ಷಗಾನವನ್ನು ಜನಪ್ರಿಯಗೊಳಿಸಿತು.

ಪರಮಯ್ಯ ಹಾಸ್ಯಗಾರರ ರಾಕ್ಷಸ ಒಡ್ಡೋಲಗ, ನೃತ್ಯ, ಲಾಲಿಕುಣಿತ, ಪ್ರವೇಶ, ರಾಸಕ್ರೀಡೆ, ಪ್ರಯಾಣನೃತ್ಯ, ಅದ್ಭುತ ಅಭಿವ್ಯಕ್ತಿಯಾಗಿತ್ತು. ಚಿಟ್ಟಾಣಿ ರಾಮಚಂದ್ರ ಹೆಗಡೆಯವರು "ಆ ಪ್ರಭಾವವೇ ಇಂದಿಗೂ ಉತ್ತರ ಕನ್ನಡದ ಮಹಾನ್ ಕಲಾವಿದರ ಪ್ರೇರಣೆ" ಎಂದಿದ್ದು ಹಾಸ್ಯಗಾರರ ಪ್ರತಿಭೆಯೇ ನಿದರ್ಶನವಾಗಿದೆ.

ಹಳೆಯ ಮಾದರಿಯ ಬಿಡತಿಗೆಗಳ ವಿರಳ ಪೆಟ್ಟಿನ ಗತಿ ಚಾಲನೆ ಮಾತ್ರೆ ಲೆಕ್ಕ ಸಹಿತ ಹೇಳಿ – ತೋರಿ – ಕುಣಿದು ತೋರಿಸುವ ಪ್ರೌಢಿಮೆ ಅವರಲ್ಲಿತ್ತು. ಆಕೃತಿ ಬದ್ಧ ಅಂಗಭಂಗಿಗಳು, ಚಲನ–ವಲನಗಳು, ಅರ್ಥಪೂರ್ಣ ಹೆಜ್ಜೆಗಳು, ಪ್ರಬುದ್ಧ ಭಾವಾಭಿನಯ, ಮೈನವಿರೇಳಿಸುವ ಭಾವಪ್ರಕಾಶ, ಲಯಶುದ್ಧಿಯಿಂದೊಡಗೂಡಿದ ನೃತ್ಯವೈಭವ, ಔಚಿತ್ಯ ಪ್ರಜ್ಞೆ ರೋಮಾಂಚನವನ್ನುಂಟು ಮಾಡುತ್ತಿತ್ತು.

ಸುಮಾರು ಎಂಭತ್ತಕ್ಕೂ ಮಿಕ್ಕಿ ಪ್ರಸಂಗಗಳಲ್ಲಿ ಪಾತ್ರ ಮಾಡಿದ ಪರಮಯ್ಯ ಹಾಸ್ಯಗಾರರಿಗೆ ಸೌಮ್ಯ, ಲಲಿತ, ಭಕ್ತಿಪ್ರಧಾನ ಪಾತ್ರಗಳಂತೆ ವೀರ, ರೌದ್ರ, ಗಂಭೀರ ಪಾತ್ರಗಳು ಸಿದ್ಧಿಸಿದ್ದವು.

ದಶರಥನ ಪಾತ್ರದಲ್ಲಿ (ಪಾದುಕಾಪಟ್ಟಾಭಿಷೇಕ) ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸುವ ಸನ್ನಿವೇಶಕ್ಕೆ ರಂಗದಲ್ಲಿನ ಬೆಂಚನ್ನು ಹತ್ತಿ ಅವರ ದಾರಿಯನ್ನೇ ದಿಟ್ಟಿಸುತ್ತಾ ನಿಲ್ಲುವ ವಿವಿಧ ಭಂಗಿಗಳು,

ವೃದ್ಧ ಮಹಾರಾಜನ ವೈವಿಧ್ಯಮಯ ಮಾನಸಿಕ ಸ್ಥಿತಿಯನ್ನು ಅಭಿನಯಿಸುವ ಸಾಮರ್ಥ್ಯ ಅವರಿಗೆ ಸಿದ್ಧಿಸಿದಷ್ಟು ಅನ್ಯರಿಗೆ ಸಾಧ್ಯವಿಲ್ಲವೇನೋ! ಹೀಗೆ ವಿವಿಧ ಪಾತ್ರಗಳ ರಸಸನ್ನಿವೇಶಗಳನ್ನು ರಂಗದಲ್ಲಿ ಕಡೆದು ನಿಲ್ಲಿಸಿದ್ದು ಅವರ ಸಾಧನೆಯಾಗಿದೆ. ಶಬರಾರ್ಜುನದ ಶಬರ, ಸುಧನ್ವಾರ್ಜುನದ ಸುಧನ್ವ, ಸುಭದ್ರಾ ಕಲ್ಯಾಣದ ಬಲರಾಮ, ಕಂಸವಧೆಯ ಅಕ್ರೂರ ಪಾತ್ರಗಳಿಗೆ ಹೊಸ ಆಯಾಮವನ್ನು ನೀಡಿದರು. ಪರಮಯ್ಯ ಹಾಸ್ಯಗಾರರ ಮತ್ತು ಮೂಡ್ಕಣಿ ನಾರಾಯಣ ಹೆಗಡೆಯವರ ಜೋಡಿ ಪಾತ್ರ ನೋಡುವುದೆಂದರೆ ಅಂದಿನ ಜನರಿಗೆ ರಸದೂಟವಾಗಿತ್ತು. ಶಬರ-ಶಿವ, ಕೀಚಕ-ವಲಲ, ಕರ್ಣ-ಶಲ್ಯ, ಪುಷ್ಕಳ-ದಮನ, ಕೃಷ್ಣ-ಅರ್ಜುನ, ಸುಧನ್ವ-ಅರ್ಜುನ, ಅನಿರುದ್ಧ-ಉಷಾ ಪಾತ್ರಗಳಲ್ಲಿ ಈ ಜೋಡಿ ಮಾಡಿದ ಮೋಡಿ ಅದ್ಭುತವಾದುದು. ಆ ಕಾಲದಲ್ಲಿ ಜನರು ಈ ಜೋಡಿ ವೇಷ ನೋಡಲೆಂದು ಯಕ್ಷಗಾನಕ್ಕೆ ಆಕರ್ಷಿಸಲ್ಪಟ್ಟರು.

ಪರಮಯ್ಯ ಹಾಸ್ಯಗಾರರು, ವೇಷಧಾರಿಗಳಷ್ಟೇ ಅಲ್ಲದೆ ಯಕ್ಷಗಾನದ ಎಲ್ಲಾ ಅಂಗಗಳನ್ನು ನಿರ್ವಹಿಸಬಲ್ಲವರಾಗಿದ್ದರು. ಇದರಿಂದ ಇವರು ಆಚಾರ್ಯರು ಅನಿಸಿದರು. ಇವರು ಘಟ್ಟದ ಮೇಲಿನ ಭಾಗಗಳಿಗೆ ಹೋದಾಗ ಯಕ್ಷಗಾನವನ್ನು ಅಲ್ಲಿನ ಆಸಕ್ತರಿಗೆ ಹೇಳಿಕೊಟ್ಟರು. ಚೌತಿ ಹಬ್ಬದ ಸಂದರ್ಭದಲ್ಲಿ ಮಣ್ಣಿನ ಗಣಪತಿ ತಯಾರಿಸುವುದು ಅವರಿಗೆ ಹವ್ಯಾಸವಾಗಿತ್ತು. ರಂಗಕಲಾವಿದರಲ್ಲದೆ ಶಿಲ್ಪಕಲೆಯೂ ಸಿದ್ಧಿಸಿದ್ದರಿಂದ ಅವರು ನಿಜ ಅರ್ಥದಲ್ಲಿಯೂ ಕಲಾವಿದರೇ ಆಗಿದ್ದರು.

ಹೊನ್ನಾವರದ ಹೊಸಕುಳಿ ಭಾಗಗಳಿಗೆ ಹೋದಾಗ ಅವರಿಗೆ ರಾಜಮರ್ಯಾದೆಯ ಪ್ರತೀಕವಾಗಿ ತೆಂಗಿನಕಾಯಿ ಅಡಿಕೆ, ಶಿಂಗಾರಕೊನೆಯನ್ನು ನೀಡುತ್ತಿದ್ದರು. ಅದು ಮನೆತನದ ಇತರರಿಗೂ ಸಲ್ಲುತ್ತಿತ್ತು. ಇಂತಹ ಪ್ರತಿಭೆ ಕರ್ಕಿ ಮನೆತನದ ಕಲೆಯನ್ನು ಮೊದಲು ಪ್ರಕಾಶಗೊಳಿಸಿತು.

➤ ಅಣ್ಣುಹಿತ್ಲು ಸದಾನಂದ ಹೆಗಡೆ – ಹೆಬ್ಬಯಲು ಮೇಳ

ಹೊನ್ನಾವರ ಅಪ್ಸರಕೊಂಡದ ಸಮೀಪ ಹೆಬ್ಬಯಲು ಮತ್ತು ಅಣ್ಣುಹಿತ್ಲು ಎಂಬುದು ಒಂದು ಕೇರಿಯಾಗಿತ್ತು. ಇಲ್ಲಿ ೧೯೦೮-೦೯ ರಿಂದ ೧೯೩೯-೪೦ರವರೆಗೆ ಹೆಬ್ಬಯಲು ಮೇಳ ಎಂಬ ಯಕ್ಷಗಾನ ಸಂಘಟನೆಯಿತ್ತು. ಈ ಮೇಳವನ್ನು ಸದಾನಂದ ಹೆಗಡೆಯವರು ಸಂಘಟಿಸಿದ್ದರು. ಸದಾನಂದ ಹೆಗಡೆಯವರ ಜನನ ೧೮೮೩ರಲ್ಲಾಯಿತು. ಇವರ ತಂದೆ ಶಂಭು ಹೆಗಡೆ ಆ ಕಾಲದಲ್ಲಿ ಮಗನನ್ನು ಮ್ಯಾಟ್ರಿಕ್‌ವರೆಗೆ ಓದಿಸಿದರು.[೧೮]

ವಿದ್ಯಾವಂತರಾದ ಇವರು ತಹಶೀಲ್ದಾರ್‌ರಾಗಿ ಕಾರ್ಯನಿರ್ವಹಿಸಿದ್ದರು. ಅಧಿಕಾರಿಗಳಾಗಿಯೂ ಯಕ್ಷಗಾನ ಪಾತ್ರಗಳನ್ನು ಮಾಡುತ್ತಾ ಮೇಳವನ್ನು ಸಂಘಟಿಸುತ್ತಾ ಕಲಾರಾಧನೆಯನ್ನು ಮಾಡಿದರು. ಉತ್ತಮ ಮಾತುಗಾರರಾದ ಇವರು ಅಪಾರ ಜನಮೆಚ್ಚುಗೆಯನ್ನು ಗಳಿಸಿದರು. ಸೌಲಭ್ಯಗಳಿಲ್ಲದ, ಆಧುನಿಕತೆಗಳಿಲ್ಲದ ಮೇಳ ವ್ಯವಸ್ಥೆಯಲ್ಲಿ ಅಂದು ಜನಮನವನ್ನು ರಂಜಿಸಿದ್ದು, ಇವರ ಸಾಧನೆಯೇ

---

೧೮. ಹೆಬ್ಬೈಲಿನ ಕೆ. ಈ. ಭಟ್ಟರ ಸಂದರ್ಶನ.

ಸರಿ. ೧೯೮೬ರಲ್ಲಿ ಇವರ ಜನ್ಮಶತಾಬ್ಧಿಯನ್ನು ಆಚರಿಸಲಾಯಿತು. ಅಂದರೆ ಸುಮಾರು ೧೨೦ ವರ್ಷಗಳ ಹಿಂದೆಯೇ ಉತ್ತರಕನ್ನಡದ ಕಲಾವಿದರಾಗಿ ಸದಾನಂದ ಹೆಗಡೆ ಹೆಸರುಗಳಿಸಿದರು. ಇವರ ಕುಟುಂಬದವರೇ ಎನ್ನಲಾದ ಕುಶಾಲ ಹೆಗಡೆಯವರು ಇವರೊಂದಿಗೆ ಪಾತ್ರ ನಿರ್ವಹಿಸುತ್ತಿದ್ದರು. ಈ ಕಲಾವಿದವರ ಜೋಡಿ ವೇಷವು ಅಂದು ಮನೆಮಾತಾಗಿತ್ತು.

೧೯೨೪ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಈ ಮೇಳದ ಕಲಾವಿದರು ಯಕ್ಷಗಾನ ಪ್ರದರ್ಶನ ನೀಡಿದರು. ಅಲ್ಲದೆ ಅನೇಕ ಪರಸ್ಥಳಗಳಲ್ಲೂ ಇವರು ಪ್ರದರ್ಶನ ಏರ್ಪಡಿಸಿದ್ದರು. ಇವರು ಮೂಡ್ಕಣಿ ನಾರಾಯಣ ಹೆಗಡೆಯವರ ಜೊತೆ ಕೂಡ ವೇಷ ಮಾಡಿದ್ದರು. ಇವರ ಪ್ರಸಿದ್ಧ ಪಾತ್ರಗಳು ಕರ್ಣಪರ್ವದ ಕರ್ಣ, ಕೃಷ್ಣಾರ್ಜುನದ ಕೃಷ್ಣ, ಅರ್ಜುನ, ರತ್ನಾವತಿ ಕಲ್ಯಾಣದ ಭದ್ರಸೇನ, ರುಕ್ಮಾಂಗದ ಚರಿತ್ರೆಯ ಭರತ, ಸಂಧಾನದ ಕೃಷ್ಣ ಮತ್ತು ಕೌರವ ಮುಂತಾದವು ಪ್ರಸಿದ್ಧವಾದವಾಗಿದೆ.

ಈ ಮಹಾನ್ ಕಲಾವಿದರ ಕುರಿತು ಹೆಚ್ಚಿನ ಮಾಹಿತಿಗಳನ್ನು ನೀಡುವ ದಾಖಲೆಗಳು ಲಭ್ಯವಿಲ್ಲ. ಇವರು ಕೊನೆಗಾಲದಲ್ಲಿ ಕೇರಳಕ್ಕೆ ಹೋಗಿ ವಾಸಿಸಿದ್ದಾರೆಂದು ಇವರ ಮೊಮ್ಮಗ ಕೆ.ಜಿ. ಹೆಗಡೆಯವರು ಕಲಾವಿದರ ಕುರಿತಾಗಿ ಮಾಹಿತಿ ನೀಡಿರುತ್ತಾರೆ.

➤ ದಿ। ಮೂಡ್ಕಣಿ ನಾರಾಯಣ ಹೆಗಡೆ

ಮೂಡ್ಕಣಿ ಮೇಳದ ಪ್ರಮುಖ ವೇಷಧಾರಿ, ಉತ್ತರಕನ್ನಡ ಕಲಾವಿದರಿಗೆ ಇವರು ಆದರ್ಶವಾಗಿದ್ದರು. ನೃತ್ಯ, ಅಭಿನಯ, ಮುದ್ರೆಗಳ ಬಳಕೆ ಕಲಾತ್ಮಕತೆಗೆ ಹೆಸರಾಗಿದ್ದರು. ಪಟ್ಟಾಭಿಷೇಕದ ದಶರಥ ಇವರ ಪ್ರಸಿದ್ಧ ಪಾತ್ರವಾಗಿತ್ತು. ಶೋಕರಸವನ್ನು ಕುಣಿತಾಭಿನಯದಲ್ಲಿ ತೋರಿಸುವ ಕಲೆಗಾರಿಕೆ ಇವರಲ್ಲಿತ್ತು. ಕೆರೆಮನೆ ಶಿವರಾಮ ಹೆಗಡೆಯವರು, ಚಿಟ್ಟಾಣಿ ರಾಮಚಂದ್ರ ಹೆಗಡೆಯವರು, ಮೂಡ್ಕಣಿ ನಾರಾಯಣ ಹೆಗಡೆಯವರ ಪ್ರಭಾವಕ್ಕೊಳಗಾಗಿದ್ದರು. ಉತ್ತರ ಕನ್ನಡದ ಯಕ್ಷಗಾನ ಪರಂಪರೆಗೆ ಮೂಡ್ಕಣಿಯವರು ನೀಡಿದ ಕೊಡುಗೆ ಅಪಾರ. ಅವರಿಂದ ಪ್ರಭಾವಿತರಾದ ಎಷ್ಟೋ ಕಲಾವಿದರು ಯಕ್ಷಗಾನದತ್ತ ಒಲಿದರು. ಪ್ರವೇಶ ಕುಣಿತದಲ್ಲೆ ಪಾತ್ರದ ಸ್ವಭಾವ ಮೂಡಿಸುವ ಕುಣಿತವನ್ನು ಮೊದಲು ರಂಗ ಪ್ರಯೋಗ ಮಾಡಿದವರು ಇವರಾಗಿದ್ದಾರೆ. ಸುಮಾರು ಎಪ್ಪತ್ತು ವರ್ಷಗಳ ಕಾಲ ರಂಗದಲ್ಲಿದ್ದು ಪಾತ್ರ ನಿರ್ವಹಿಸಿದರು. ತಮ್ಮ ಇಳಿವಯಸ್ಸಿನಲ್ಲೂ ಪಾತ್ರ ನಿರ್ವಹಿಸಿದ್ದು, ಇವರ ವಿಶೇಷ. ಎಲ್ಲಾ ಪಾತ್ರಗಳನ್ನು ನಿರ್ವಹಿಸುವ ಸಾಮರ್ಥ್ಯ ಅವರಲ್ಲಿತ್ತು. ಇವರು ರಾಜ್ಯ ಪ್ರಶಸ್ತಿ ಪುರಸ್ಕೃತ ಕಲಾವಿದರಾಗಿದ್ದರು.

ಮೂಡ್ಕಣಿ ನಾರಾಯಣ ಹೆಗಡೆಯವರ ಅಭಿಯನವೇ ಪ್ರೇರಣೆಯಾಗಿ ಕೆರೆಮನೆ ಶಿವರಾಮ ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆರೆಮನೆ ಶಂಭುಹೆಗಡೆ ಮುಂತಾದವರು ರಂಗದಲ್ಲಿ ಮಹಾನ್ ಕಲಾವಿದರೆನಿಸಿದರು. ಚಿಟ್ಟಾಣಿಯವರು "ಮೂಡ್ಕಣಿಯವರನ್ನು ಅನುಕರಿಸಿ ಪಾತ್ರ ಪ್ರವೇಶ ಮಾಡುತ್ತಿದ್ದೆ" ಎಂದು ಹೇಳಿಕೊಂಡಿದ್ದಾರೆ. ಮೂಡ್ಕಣಿಯವರ ಪ್ರತಿಭೆಯನ್ನು ಹಿರಿಯ ತಲೆಮಾರಿನ ಎಲ್ಲರೂ ಪ್ರಶಂಸಿಸಿದ್ದು ಅವರ ಸಾಧನೆಗೆ ಸಾಕ್ಷಿಯಾಗಿದೆ.

ಅಭಿಜಾತ ಕಲಾವಿದರಾದ ಮೂಡ್ಕಣಿಯವರು ಪ್ರಸಿದ್ಧರಾಗುತ್ತಿದ್ದ ಕಾಲದಲ್ಲಿ ಯಕ್ಷಗಾನ ತುಂಬ ಹೀನ ಸ್ಥಿತಿಯಲ್ಲಿತ್ತು. ಮಾನ-ಮನ್ನಣೆ, ಆರ್ಥಿಕ ಲಾಭದ ದೃಷ್ಟಿಯಿಂದಲೂ ಯಕ್ಷಗಾನಕ್ಕೆ

ಜನರ ಆಕರ್ಷಣೆ ಕಡಿಮೆಯೇ ಆಗಿತ್ತು. ಪ್ರಜ್ಞಾವಂತ ಪ್ರೇಕ್ಷಕರನ್ನು ಯಕ್ಷಗಾನದತ್ತ ಸೆಳೆದ ಹಿರಿಮೆ ಮೂಡ್ಕಣಿ ಮತ್ತು ಪರಮಯ್ಯ ಹಾಸ್ಯಗಾರರಿಗೆ ಸಲ್ಲುತ್ತದೆ. ರಂಗತಂತ್ರಜ್ಞಾನ, ನೃತ್ಯ, ಅಭಿನಯ ಪ್ರೌಢಿಮೆ, ಪ್ರಯೋಗ ಸೂಕ್ಷ್ಮತೆ, ಹಿಮ್ಮೇಳದ ಬಳಕೆ, ಎಲ್ಲ ಸೃಜನಶೀಲ ಅಂಶಗಳು ಮೂಡ್ಕಣಿಯವರ ಶೈಲಿಯನ್ನು ರೂಪಿಸಿತು. ಮೂಡ್ಕಣಿ ಶೈಲಿಎಂದೇ ಗುರುತಿಸಲು ಕಾರಣವಾಯಿತು. ಯಕ್ಷಗಾನದಲ್ಲಿ ವ್ಯಕ್ತಿಗತ ಶೈಲಿಯ ಛಾಪನ್ನೊತ್ತಿ ಪ್ರಸಿದ್ಧರಾದ ಇವರು ಯಕ್ಷ ಲೋಕದ ಸೀಮಾ ಪುರುಷರೆಂದೇ ಕರೆಯಲ್ಪಟ್ಟರು.

➤ ಕೆರಮನೆ ಶಿವರಾಮ ಹೆಗಡೆ : ೧೯೦೮-೧೯೯೨

ಕೆರೆಮನೆ ಮನೆತನದ ಶಂಭುಹೆಗಡೆ ಮತ್ತು ಸುಬ್ಬಮ್ಮ ಎಂಬುವವರ ಮಗನಾಗಿ ೧೯೦೮ರಲ್ಲಿ ಕೆರೆಮನೆ ಶಿವರಾಮ ಹೆಗಡೆ ಜನಿಸಿದರು. ಕೆರೆಮನೆ ಶಿವರಾಮ ಹೆಗಡೆ 'ಯಕ್ಷಲೋಕದ ಧೃವತಾರೆ', 'ಅಭಿನಯ ಚಕ್ರವರ್ತಿ', 'ಯಕ್ಷಗಾನ ಸಾಮ್ರಾಟ' ಎಂದೆಲ್ಲ ಬಿರುದು ಪಡೆದ ಮಹಾನ್ ನಟ. ಯಕ್ಷಗಾನ ರಂಗದಲ್ಲಿ ಮೊದಲ ರಾಷ್ಟ್ರಪ್ರಶಸ್ತಿಗೆ ಪಾತ್ರರಾದ ಕಲಾವಿದರಿವರು.

ಬಾಲ್ಯದಲ್ಲಿಯೇ ಯಕ್ಷಗಾನದ ಗೀಳನ್ನು ಹೊಂದಿ ನಾಲ್ಕನೆ ಇಯತ್ತೆಯವರೆಗಷ್ಟೆ ಪ್ರಾಥಮಿಕ ಶಿಕ್ಷಣ ಪಡೆದು ಬಣ್ಣದ ಬದುಕಿನತ್ತ ವಾಲಿದರು. ಯಕ್ಷಗಾನ ತಾಳಮದ್ದಳೆಯ ಪ್ರಭಾವದಿಂದ ಅರ್ಥಧಾರಿಯಾಗಿ ಮೊದಲು ರಂಗಪ್ರವೇಶ ಮಾಡಿದರು. ಕೃಷಿಯು ಕುಲ ಕಸುಬಾದ ಕಾರಣ ಕೃಷಿಯನ್ನು ಮೊದಲು ಆರಂಭಿಸಬೇಕಾಯಿತು. ಬಾಲ್ಯದಲ್ಲಿ ಬೇಸಾಯದ ಕೆಲಸಗಳು ರೂಢಿಗೊಂಡವು. ಆಗಲೇ ಊರಿನ ಪರವೂರಿನ ಕಲಾವಿದರ ಕೂಟಗಳು, ಯಕ್ಷಗಾನಗಳು ಪರಿಚಯವಾಗಿ ಆಕರ್ಷಿಸಲ್ಪಟ್ಟರು. ಬಸ್‌ಏಜೆಂಟರಾಗಿ, ಚಾಲಕರಾಗಿ ಊರೂರು ಸುತ್ತುವಾಗ ಯಕ್ಷಗಾನ ಕುರಿತಾದ ಗೀಳು ಇಮ್ಮಡಿಸಿತು. ಮೂಡ್ಕಣಿ ನಾರಾಯಣ ಹೆಗಡೆ, ಸದಾನಂದ ಹೆಗಡೆ ಮತ್ತು ಹಾಸ್ಯಗಾರ ಮನೆತನದ ಪ್ರಭಾವದಿಂದ ಯಕ್ಷಗಾನ ವೇಷಗಾರಿಕೆ ಆರಂಭಿಸಿದರು. ಅಂದು ಪ್ರಚಲಿತವಿದ್ದ ಮೂಡ್ಕಣಿ ನಾರಾಯಣ ಹೆಗಡೆಯವರ ಇಡಗುಂಜಿ ಮೇಳದಲ್ಲಿ ಪರಶುರಾಮ, ಕೀಚಕ, ಅರ್ಜುನನ ವೇಷ ಮಾಡಿ ಆರಂಭದಲ್ಲಿಯೇ ಪ್ರಸಿದ್ಧಗೊಂಡರು.

ಕೆರೆಮನೆ ಶಿವರಾಮ ಹೆಗಡೆಯವರು ೧೯೩೪ರಲ್ಲಿ 'ಕೆರೆಮನೆ ಮೇಳವನ್ನು' ಸಂಘಟಿಸಿದರು. ಆ ಕಾಲದಲ್ಲಿ ಡೇರೆ ಮೇಳ ವ್ಯವಸ್ಥೆಯಿತ್ತು. ಸ್ವಂತ ಮೇಳದ ವ್ಯವಸ್ಥೆಯಾದಾಗ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿ ಲಕ್ಷಾಂತರ ಅಭಿಮಾನಿಗಳನ್ನು ಯಕ್ಷಗಾನದತ್ತ ಸೆಳೆದರು. ಯಕ್ಷಗಾನ ರಂಗಭೂಮಿಯಲ್ಲಿ ಅಪಾರವಾದ ಆಸಕ್ತಿ ಜನರಿಗೆ ಬೆಳೆಯಲು ಕಾರಣವಾಯಿತು. ಶಿವರಾಮ ಹೆಗಡೆಯವರು ನಿರ್ವಹಿಸಿದ ಪಾತ್ರದ ಕುರಿತಾದ ಜನರು ಮೆಚ್ಚುಗೆಗಳು ಸುದ್ದಿಯಾಗಿ ಜನ ಹೆಚ್ಚೆಚ್ಚು ಯಕ್ಷಗಾನ ಪ್ರದರ್ಶನವನ್ನು ವೀಕ್ಷಿಸುವಂತಾಯಿತು.

ಪೌರಾಣಿಕ ಪ್ರಸಂಗದ ನಾಯಕ ಪ್ರತಿನಾಯಕನ ಪಾತ್ರಗಳಲ್ಲಿ ಸಮರ್ಥವಾಗಿ ಅಭಿನಯಿಸುವ ಆಳ್ತನ, ಮಾತು, ಅಭಿನಯ ಸೊಗಸುಗಾರಿಕೆ ಅವರಲ್ಲಿತ್ತು. ಅವರು ಅಭಿನಯಿಸಿದ ಗದಾಯುದ್ಧದ ಕೌರವ, ಕೀಚಕವಧೆಯ ಕೀಚಕ, ಹರಿಶ್ಚಂದ್ರ, ಮಾಗಧ ಅದ್ಭುತವಾದ ಪಾತ್ರಗಳಾಗಿದ್ದವು. ಅಭಿನಯಕ್ಕೆ

ಹೆಸರಾದ ಶಿವರಾಮ ಹೆಗಡೆಯವರ ಕುಣಿತ ಕೂಡ ಅಷ್ಟೇ ಪರಿಣಾಮ ಬೀರುತ್ತಿತ್ತು. ರಂಗದಲ್ಲಿ ಮಿಂಚು ಸಂಚರಿಸಿದಂತೆ ಉಂಟಾಗುವ ಅನುಭವವನ್ನು ನೀಡುವ ಪ್ರವೇಶ ಹಾಗೂ ಅಭಿನಯ ಅವರಿಗೆ ಮಾತ್ರ ಸಿದ್ಧಿಸಿತ್ತು. ಮಹಾನ್ ನಟನ ಪಾತ್ರಗಳನ್ನ ಕಂಡ ಜನರು ಮತ್ತೆ ಮತ್ತೆ ಅದೇ ಅಭಿನಯವನ್ನು ಹೇಳಿ ಮಾಡಿಸಿದ್ದುಂಟು. ಶಿವರಾಮ ಹೆಗಡೆಯವರಿದ್ದಾರೆಂದರೆ ಅಂದಿನ ಆಟಕ್ಕೆ ಹೊಸ ಆಕರ್ಷಣೆ. ಇಳಿವಯಸ್ಸಿನಲ್ಲೂ ಆಕರ್ಷಣೀಯ ಕಲಾವಿದರಾಗಿ ಉಳಿದುಕೊಂಡರು.

ಎದುರಾಳಿಯನ್ನು ರಂಗದಲ್ಲಿ ವ್ಯಂಗ್ಯ ಅಣಕದ ದಾಟಿಯ ಒಂದೇ ಮಾತಿನಿಂದ, ಕುಣಿತದಿಂದ ಮಣಿಸುವ ಶಿವರಾಮ ಹೆಗಡೆಯವರಿಗೆ ಕಲೆ ದೈವದತ್ತವಾದುದು ಎಂದು ಜನ ನಂಬಿದ್ದರು. ಯಾವುದೇ ಪಾತ್ರವನ್ನು ನಿರ್ವಹಿಸಿದರು ಅದು ವಿಶಿಷ್ಟವಾಗಿಯೇ ಅಭಿವ್ಯಕ್ತಗೊಳ್ಳುತ್ತಿತ್ತು.[೧೯]

ಈ ಮಹಾನಟನ ಪಾತ್ರಗಳನ್ನು ಕಂಡ ಅಂದಿನ ಪ್ರೇಕ್ಷಕರು ಮೆಲಕು ಹಾಕುತ್ತಲೆ ಇರುವಂತೆ ಮಾಡಿದ ಚಮತ್ಕಾರಿಕ ಪ್ರತಿಭೆ ಶಿವರಾಮ ಹೆಗಡೆಯವರದಾಗಿತ್ತು. ಅವರ ಆತ್ಮಚರಿತ್ರೆ ನೆನಪಿನ ರಂಗಸ್ಥಳ, ವ್ಯಕ್ತಿಚರಿತ್ರೆ, 'ಯಕ್ಷಲೋಕದ ಚರಿತ್ರೆ' ಮುಂತಾದ ಪುಸ್ತಕಗಳಲ್ಲಿ ಅವರ ಅಭಿನಯದ ಕುರಿತು ಸಾಕಷ್ಟು ವಿವರವಾದ ಮಾಹಿತಿಗಳಿವೆ. ಯಕ್ಷಗಾನ ರಂಗವನ್ನು ಕೆರೆಮನೆ ಶಿವರಾಮ ಹೆಗಡೆಯವರು

ಆಕರ್ಷಣೀಯ ರಂಗವಾಗಿ ಪರಿವರ್ತಿಸಿದರು. ಅವರ ಪ್ರತಿಭೆಗೆ ಸರಿಸಾಟಿಯಾದ ಕಲಾವಿದರಿಲ್ಲ ಎಂಬಷ್ಟು ಹೊಗಳಿಕೆಗೆ ಪಾತ್ರರಾದರು. ಜನಮನ್ನಣೆಯೊಂದಿಗೆ ರಾಷ್ಟ್ರ ಪ್ರಶಸ್ತಿಯು ಪ್ರಾಪ್ತವಾಯಿತು. ಯಕ್ಷನಟ ಸಾಮ್ರಾಟರಾಗಿ ೧೯೮೨ರಲ್ಲಿ ಜೀವನ ರಂಗದಿಂದ ನಿರ್ಗಮಿಸಿದರು.

➤ ದಿ। ಕೆರೆಮನೆ ಶಂಭು ಹೆಗಡೆ

ಕೆರೆಮನೆ ಶಿವರಾಮ ಹೆಗಡೆ ಮತ್ತು ಮೂಕಾಂಬೆ ದಂಪತಿಗಳ ಪುತ್ರನಾಗಿ ಶಂಭುಹೆಗಡೆಯವರು ೧೯೩೮ರಲ್ಲಿ ಜನಿಸಿದರು. ಕೆರೆಮನೆ ಶಿವರಾಮ ಹೆಗಡೆಯವರ ಪ್ರಸಿದ್ಧಿ, ಮಹಾಬಲ ಹೆಗಡೆಯವರ ಪ್ರೋತ್ಸಾಹದಿಂದ ಔಪಚಾರಿಕ ಶಿಕ್ಷಣ ಪಡೆದು, ಯಕ್ಷಗಾನ ರಂಗಕ್ಕೆ ಪ್ರವೇಶಿಸಿದರು. ದಿಲ್ಲಿಯಲ್ಲಿ ಮಾಯಾರಾವ್‌ರವರಿಂದ ಕೋರಿಯೋಗ್ರಫಿ ತರಬೇತಿಯನ್ನು ಪಡೆದು ಯಕ್ಷಗಾನ ರಂಗದಲ್ಲಿ ಸೃಜನಶೀಲತೆಯನ್ನು ಪ್ರಯೋಗವನ್ನು ಅಳವಡಿಸುವ ಪ್ರಯತ್ನಗಳನ್ನು ಪಾತ್ರಾಭಿವ್ಯಕ್ತಿ ಹಾಗೂ ಅಭಿನಯದಲ್ಲಿ ಮೈಗೂಡಿಸಿಕೊಂಡರು.

೧೯೭೩ರಲ್ಲಿ ಉತ್ತರಕನ್ನಡದಲ್ಲಿ ವೃತ್ತಿ ಮೇಳಗಳು ಇಲ್ಲವಾದಾಗ ಇಡಗುಂಜಿ ಮೇಳವನ್ನು ಸಂಘಟಿಸಿ ಸಾಹಸ ಮೆರೆದರು. ನೆಬ್ಬೂರು ನಾರಾಯಣ ಭಾಗ್ವತ, ಗೋಡೆ ನಾರಾಯಣ ಹೆಗಡೆಯವರೆಲ್ಲ ಕಲಾವಿದರಾದ ಆ ಮೇಳದಲ್ಲಿ ಪ್ರಮುಖ ಪಾತ್ರಧಾರಿಯಾಗಿ, ಸಂಘಟಕರಾಗಿ ಮೇಳ ನಡೆಸಿದರು.

ಶಂಭು ಹೆಗಡೆಯವರು ವಿವಿಧ ರಸಪ್ರಧಾನ ಪಾತ್ರಗಳನ್ನು ಅಭಿನಯಿಸಿ ಪಾತ್ರ ನಿರ್ವಹಣೆ ಮಾರ್ಗದಲ್ಲಿ ಹೊಸತನವನ್ನು ಪ್ರಯೋಗಿಸಿದರು. ಶೃಂಗಾರ, ಕರುಣ, ರೌದ್ರ, ಭಯಾನಕ, ಬೀಭತ್ಸ

೧೯. ಕೆರಮನೆ ಶಿವಾನಂದ ಹೆಗಡೆಯವರ ಸಂದರ್ಶನ

ರಸಗಳ ಪಾತ್ರಗಳ ಪದ್ಯಾಭಿನಯದಲ್ಲಿ ರಸಾಭಿವ್ಯಕ್ತಿಯ ಕುಣಿತಗಳನ್ನು, ನೃತ್ಯ, ಅಭಿನಯಗಳ ಮೂಲಕ ಅಭಿವ್ಯಕ್ತಿಗೊಳಿಸಿದರು. ಕೃಷ್ಣ, ಸುಧನ್ವ, ಹರಿಶ್ಚಂದ್ರ, ನಳ, ಕಾರ್ತವೀರ್ಯ, ಕಂಸ, ಸಾಲ್ವ, ದುರ್ಜಯ ಮೊದಲಾದ ಪಾತ್ರಗಳಲ್ಲಿನ ಪದ್ಯಗಳಲ್ಲಿ ಅವರು ನೀಡಿದ ಪಾತ್ರ ಚಿತ್ರಣಕ್ಕೆ ಪೂರಕವಾದ ಅಭಿವ್ಯಕ್ತಿ ನೃತ್ಯಾಭಿನಯದ ಮೂಲಕ ಅತ್ಯಂತ ಪರಿಣಾಮಕಾರಿಯಾದುದು. ಶಂಭುಹೆಗಡೆಯವರ ಕರುಣ ರಸದ ಪಾತ್ರವಾದ ಸತ್ಯಹರಿಶ್ಚಂದ್ರ, ಹರಿಶ್ಚಂದ್ರ, ನಳದಮಯಂತಿಯ ಬಾಹುಕ, ರಾಮನಿರ್ಯಾಣದ ರಾಮ ದಾಖಲೆಯ ಪ್ರದರ್ಶನಗೊಂಡಿತು.

ಶಂಭುಹೆಗಡೆಯವರು ಯಕ್ಷಗಾನದ ರಂಗಸಜ್ಜಿಕೆ, ಹಿಮ್ಮೇಳ, ಮುಮ್ಮೇಳಗಳಲ್ಲೂ ಸಾಕಷ್ಟು ಬದಲಾವಣೆ ಮಾಡಿ ಕೆರೆಮನೆ ಮೇಳವನ್ನು ಇವರ ಕಾಲದಲ್ಲಿ ನವೀಕರಿಸಿದರು. ಶಂಭು ಹೆಗಡೆಯವರ ಧ್ವನಿ, ಮಾತುಗಾರಿಕೆ, ಆಕರ್ಷಕವಾದುದಾಗಿತ್ತು. ಅವರ ಕರುಣರಸ ಪ್ರಧಾನ, ಪಾತ್ರಾಭಿವ್ಯಕ್ತಿ ಅದ್ಭುತ ಅನುಭವವನ್ನು ಸೃಷಿಸುವಂತಿತ್ತು. ಶಂಭುಹೆಗಡೆಯವರು ರಾಮನ ಪಾತ್ರದಲ್ಲಿ ತಲ್ಲೀನರಾಗಿ ಮಾತನಾಡುತ್ತಿದ್ದ ಬಗೆ ಅವರಿಗೆ ಆಪಾತ್ರ ಸಾಕಷ್ಟು ಪ್ರಸಿದ್ಧಿಯನ್ನು ತಂದುಕೊಟ್ಟಿತು.

ಯಕ್ಷಗಾನದ ರಂಗದಲ್ಲಿ ಮಹಾನ್ ಕಲಾವಿದನ ನಿಗರ್ಮನವು ಅಷ್ಟೇ ಔಚಿತ್ಯಪೂರ್ಣವಾಗಿದೆ. ಇಡಗುಂಜಿ ಗಣಪತಿಯ ಆರಾಧಕರಾದ ಇವರು ಇಡುಗುಂಜಿಯಲ್ಲಿಯೇ ರಾಮ ನಿರ್ಯಾಣ ಪ್ರದರ್ಶನ ಮಾಡುವಾಗ ರಾಮನಾಗಿ ಪಾತ್ರ ನಿರ್ವಹಣೆ ಮಾಡುತ್ತಲೇ ಇರುವಾಗ ರಂಗದಲ್ಲೇ ಕುಸಿದು ಇಹಲೋಕವನ್ನು ತ್ಯಜಿಸಿದರು. ಇದೊಂದು ದಾಖಲಾರ್ಹ ಸಂಗತಿಯೇ ಸರಿ.

➤ ಯಕ್ಷಲೋಕದ ಚಿರಕನ್ಯೆ ದಿ॥ ಗಜಾನನ ಹೆಗಡೆ ಕೆರೆಮನೆ:

ಯಕ್ಷಲೋಕದ ಕನ್ಯೆ ಎಂದು ಹೆಸರಾದ ಗಜಾನನ ಹೆಗಡೆ ತಮ್ಮ ಅದ್ಭುತ ಅಭಿನಯದಿಂದ ಕಲಾರಸಿಕರ ಮನೆತಣಿಸಿ ೩೨ನೇ ವಯಸ್ಸಿನಲ್ಲಿ ರಂಗದಿಂದ ಕಣ್ಮರೆಯಾದರು. ತಂದೆ ಶಿವರಾಮ ಹೆಗಡೆಯುವರಿಂದ ಅಭಿನಯುವನ್ನು ಕಲಿತು, ಅಂಬೆ, ಸುಭದ್ರೆ, ದಾಕ್ಷಾಯಿಣಿ, ರೇಣುಕಾ, ಪ್ರಭಾವತಿ ಮುಂತಾದ ಪಾತ್ರಗಳಲ್ಲಿ ಅಭಿನಯಿಸಿದರು. ಸುಂದರ ಶರೀರ, ಮೊನಚುಮಾತು, ಸಾಹಿತ್ಯ ಶುದ್ಧಿ, ಅವರ ಪಾತ್ರಕ್ಕೆ ಮೆರಗು ನೀಡಿತ್ತು. ಹೆಣ್ಣಿನ ಗುಣಸ್ವಭಾವ, ಆಸೆ ಆಕಾಂಕ್ಷೆಗಳನ್ನು ಸೂಕ್ಷ್ಮವಾಗಿ ಅರಿತು ಪ್ರಕಟಿಸುತ್ತಿದ್ದ ಅವರ ಅಭಿನಯ ಅದ್ಭುತವಾಗಿತ್ತು.

➤ ದಿ। ಕೆರೆಮನೆ ಮಹಾಬಲ ಹೆಗಡೆ

ಯಕ್ಷಗಾನ ಮಹಾಬಲ ಎಂದೇ ಹೆಸರಾದ ಮಹಾಬಲ ಹೆಗಡೆಯವರು ಯಕ್ಷಗಾನವನ್ನು ಆರಾಧಿಸಿ ಅದರ ಸತ್ವವನ್ನು ಅರಿತು ಸದಾ ಕಲಾಮೌಲ್ಯದ ಬಗ್ಗೆ ಚಿಂತನೆ ನಡೆಸುತ್ತಾ ಬಂದವರಾಗಿದ್ದರು. ಇವರ ಜನನ ೩೦-೬-೧೯೨೭. ತಂದೆ ರಾಮ ಹೆಗಡೆ. ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡು ಇವರು ಶಿಕ್ಷಣದಲ್ಲಿ ಆಸಕ್ತಿಯನ್ನು ತೋರಲಿಲ್ಲ. ಯಕ್ಷಗಾನದ ಕುರಿತು ಆಸಕ್ತಿ ಬೆಳೆಯಿತು. ಯಾಜಿ ಭಾಗವತರ ಸ್ನೇಹದಿಂದ ಯಕ್ಷಗಾನದ ಪರಿಸರ ಕೂಡ ದೊರೆಯಿತು. ಪತ್ನಿ ಮಹಾದೇವಿ ಮಕ್ಕಳಾದ ರಾಮಹೆಗಡೆ, ವಿಷ್ಣು, ಮಗಳು ಲಲಿತ ಇವರೊಂದಿಗಿನ ನೆಮ್ಮದಿಯ ಕುಟುಂಬ ಜೀವನ ಅವರದಾಗಿತ್ತು. ಶಿವರಾಮ ಹೆಗಡೆಯುವರು ಇವರ ಚಿಕ್ಕಪ್ಪನವರಾಗಿದ್ದರು. ಶಿವರಾಮ ಹೆಗಡೆಯವರೊಂದಿಗೆ ಕಂಸ-

ಕೃಷ್ಣ, ಬಲರಾಮ-ಕೃಷ್ಣ, ಸುಧನ್ವ-ಅರ್ಜುನ ಪ್ರಸಿದ್ಧ ಪಾತ್ರಗಳಾಗಿದ್ದವು. ಕೋಟ ಶಿವರಾಮ ಕಾರಂತರೊಂದಿಗೆ ಯಕ್ಷಗಾನ ಪ್ರದರ್ಶನದಲ್ಲಿ ಪಾಲ್ಗೊಂಡರು. ಕೆಲವು ಕಾಲ ಅಂಕೋಲಾದಲ್ಲಿ ಯಕ್ಷಗಾನ ಶಿಕ್ಷಕರಾಗಿದ್ದರು. ಕೆರೆಮನೆ ಮೇಳ, ಬಚ್ಚಗಾರು ಮುಂತಾದ ಮೇಳಗಳಲ್ಲಿ ಸೇವೆಸಲ್ಲಿಸಿದರು. ಬ್ರಹ್ಮಕಪಾಲದ ಈಶ್ವರ, ದಕ್ಷ, ಪರಶುರಾಮ, ಜಮದಗ್ನಿ, ಅರ್ಜುನ, ಭೀಷ್ಮ, ಸಂಧಾನದ ಕೌರವ ಮುಂತಾದ ಪಾತ್ರಗಳಲ್ಲಿ ಪ್ರಸಿದ್ಧರೆನಿಸಿದರು. ಮಹಾಬಲ ಹೆಗಡೆಯವರ ಕ್ರೋಧಾವೇಶದ ಪಾತ್ರಗಳು ಅವರ ಪಾತ್ರ ತಲ್ಲೀನತೆಯಿಂದ ಅನೇಕ ಸ್ವಾರಸ್ಯಕರ ಘಟನೆಗೂ ಕಾರಣವಾಗಿದೆ. ಭಾವುಕರಾಗಿ ಕರುಣರಸವನ್ನು ಅಭಿನಯಿಸುವಾಗ ಮೈಮರೆತು ಬಿಡುತ್ತಿದ್ದರು. ಜಮದಗ್ನಿ ಯಾಜಿ ಅವರು ಅಭಿನಯಿಸಿದ ಸನ್ನಿವೇಶಗಳು ಇತರರಿಗೆ ಅಸಾಧ್ಯವೇನೋ ಎನಿಸುತ್ತದೆ.

ಮಹಾಲಹೆಗಡೆಯವರ ಪಾತ್ರ ಚಿತ್ರಣದ ಪ್ರಭಾವದ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

ಒಮ್ಮೆ ಇವರು ಹರಿಶ್ಚಂದ್ರನ ಪಾತ್ರ ನಿರ್ವಹಿಸುತ್ತಿದ್ದಾಗ ಮಗನ ಶವಸಂಸ್ಕಾರಕ್ಕೆ ಕೊಂಡೊಯ್ಯುವ ದೃಶ್ಯವನ್ನು ರೋಮಾಂಚನಗೊಳಿಸಿ ಅಭಿನಯಿಸಿದರು. ಅದನ್ನು ಕಂಡ ಇಡೀ ಪ್ರೇಕ್ಷಕ ಸಮೂಹವೇ ಕಣ್ಣೀರಿಟ್ಟಿತು. ಅದರಲ್ಲೊಬ್ಬ ಪ್ರೇಕ್ಷಕನು ಅವರಿಗೆ ಹತ್ತುರೂಪಾಯಿಯನ್ನು ಕೊಟ್ಟು ನನ್ನಿಂದ ನಿಮ್ಮನ್ನು ನೋಡಲು ಸಾಧ್ಯವಿಲ್ಲವೆಂದು ಅಳುತ್ತ ಮನೆಗೆ ಹೋಗಿಬಿಟ್ಟ.

ಇನ್ನೊಮ್ಮೆ ಇವರ ನಳ ಪಾತ್ರ ಅಭಿನಯವನ್ನು ಕಂಡು ಮಂತ್ರಮುಗ್ಧನಾದ ಪ್ರೇಕ್ಷಕನೊಬ್ಬ ದೂರ ಮಾಡಿದ ತನ್ನ ಹೆಂಡತಿಯ ಜೊತೆ ಪುನಃ ಸಂಸಾರವನ್ನು ಆರಂಭಿಸಿದ ಉದಾಹರಣೆಯಿದೆ.

ಅವರ ದಕ್ಷಾಧ್ವರದ ಈಶ್ವರ, ಜಮದಗ್ನಿ ಮುಂತಾದ ವೀರಾವೇಷದ ಪಾತ್ರ ಪ್ರವೇಶವಾದಾಗ ಇಡೀ ಸಭೆಯೇ ಮೂಕವಿಸ್ಮಿತರಾಗಿ ಕುಳಿತುಕೊಳ್ಳುವುದು. ಅವರ ಅಭಿನಯದ ಕೌಶಲ್ಯಕ್ಕೆ ಉದಾಹರಣೆಯಾಗಿದೆ. ಇವರ ಈ ಕಲಾ ಕೊಡುಗೆಯನ್ನು ಜನರು ಸ್ವೀಕರಿಸಿ ಅವರನ್ನು ಸಾಕಷ್ಟು ಸಲ ಅಭಿನಂದಿಸಿದ್ದಾರೆ. ಇವರಿಗೆ ರಾಷ್ಟ್ರ ಪ್ರಶಸ್ತಿಯೂ ದೊರೆತಿದೆ.

❖ ಕೊಂಡದಕುಳಿ ಮನೆತನದ ಕಲಾವಿದರು

ಯಕ್ಷಗಾನದ ಇತಿಹಾಸದಲ್ಲಿ ಕೊಂಡದಕುಳಿರಾಮ ಹೆಗಡೆ, ಕೊಂಡದಕುಳಿ ಲಕ್ಷ್ಮಣ ಹೆಗಡೆ ಸಹೋದರರದು ಅಪರೂಪದ ಜೋಡಿ. ಅವರು ಯಕ್ಷಗಾನರಂಗ ಕಂಡ ಅಪರೂಪದ ಅವಳಿ ಸಹೋದರರು, ಮಾಡ್ಗಣಿ ನಾರಾಯಣ ಹೆಗಡೆಯವರಲ್ಲಿ ಯಕ್ಷಗಾನವನ್ನು ಅಭ್ಯಾಸ ಮಾಡಿದರು. ಕೆರೆಮನೆ ಮೇಳಕ್ಕಿಂತಲೂ ಮೊದಲು ಉತ್ತರಕನ್ನಡದಲ್ಲಿ ಇವರ ನೇತೃತ್ವದಲ್ಲಿ ಕೊಂಡದಕುಳಿ ಮೇಳ ಅಸ್ತಿತ್ವದಲ್ಲಿತ್ತು. ಇತ್ತೀಚೆಗೆ ಅವರ ಜನ್ಮಶತಮಾನೋತ್ಸವವನ್ನು ಆಚರಿಸಲಾಯಿತು. ನೂರುವರ್ಷಗಳ ಇತಿಹಾಸ ಹೊಂದಿರುವ ಈ ಮನೆತನದಲ್ಲಿ ರಾಮಹೆಗಡೆಯವರ ಮೊಮ್ಮಗ ಶ್ರೀರಾಮಚಂದ್ರ ಹೆಗಡೆ ಕೊಂಡದಕುಳಿ ಈಗಿನ ಪ್ರಖ್ಯಾತ ಕಲಾವಿದರಾಗಿದ್ದಾರೆ. ರಾಮಹೆಗಡೆ, ಲಕ್ಷ್ಮಣ ಹೆಗಡೆಯವರ ಮಕ್ಕಳು ಯಕ್ಷಗಾನದಿಂದ ದೂರವುಳಿದು ಅವರ ಮೊಮ್ಮಕ್ಕಳು ಯಕ್ಷಗಾನದಲ್ಲಿ ತೊಡಗಿಕೊಂಡಿದ್ದಾರೆ.

ಕೊಂಡದಕುಳಿ ಹೊನ್ನಾವರ ತಾಲ್ಲೂಕಿನ ಶರಾವತಿ ಎಡದಂಡೆಯಲ್ಲಿರುವ ಊರು. ಈ ಪ್ರದೇಶದ ಇಡಗುಂಜಿ ಮಾಳ್ಕೋಡು ಕಿನ್ನೀರು, ಕೆರೆಮನೆಗಳು ಯಕ್ಷಗಾನದ ಮಹಾನ್ ಕಲಾವಿದರಿಂದ ಪ್ರಸಿದ್ಧವಾದಂತೆ ಕೊಂಡದಕುಳಿಗೂ ಯಕ್ಷಗಾನದ ಮೆರಗು ಬಂದಿದ್ದು ರಾಮಹೆಗಡೆ, ಲಕ್ಷಣ ಹೆಗಡೆಯವರಿಂದಲೆ. ೧೯೪೫-೧೯೬೦ರ ಕಾಲದಲ್ಲಿ ಈ ಕಲಾವಿದರು ಯಕ್ಷಗಾನರಂಗದಲ್ಲಿ ದಕ್ಷಿಣೋತ್ತರ ಕನ್ನಡದಲ್ಲಿ ಮನೆಮಾತಾದರು.

೧. ಕೊಂಡದಕುಳಿ ರಾಮಹೆಗಡೆ : ಇವರು ವಾಲಿ, ರಾವಣ, ರಾಮ, ಕೃಷ್ಣ, ಶಲ್ಯ, ಕೌಂಡ್ಲೀಕ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಆದರೆ ರಾಮಹೆಗಡೆಯವರ ವಾಲಿಯೇ ಪ್ರಸಿದ್ಧ. "ಜಗಳ ಕಣ್ಣನ ಕರೆಯ ಅಗಣಿತ ಪರಾಕ್ರಮದಿ...... ಪದ್ಯಕ್ಕೆ ಎರಡು ಕೈಯಲ್ಲಿ ಮಾವಿನ ಟೊಂಗೆ ಹಿಡಿದು ರಾಮ ಹೆಗಡೆ ಪ್ರವೇಶಿಸಿದಾಗ ರೌದ್ರಾವೇಶದಿಂದ ಕೆಂಗಣ್ಣು ಬಿಟ್ಟು ಇಡಿ ದೇಹ ನಡುಗುವ ಆವೇಶಕ್ಕೆ ರಂಗಸ್ಥಳವೆ ನಡುಗಿದಂತೆ ಭಾಸವಾಗುತ್ತಿತ್ತು. "ಭಾನುತಮಭ ಭಳಿರೆ.... ಎಂಬ ಪದ್ಯಕ್ಕೆ ವೀರಾಟೋಪ ಪದ ಹೆಜ್ಜೆ ಇಟ್ಟು ದಾಪು ಹೆಜ್ಜೆಯಿಕ್ಕಿ ದೊಪ್ಪನೆ ಹಾರಿ ನಿಂತು ಮಾವಿನ ಟೊಂಗೆಯನ್ನು ಕತ್ತಿಯಂತೆ ಝಳಪಿಸುತ್ತಿದ್ದರು. ಸುಗ್ರೀವನ ವೇಷಧಾರಿ ಇವರ ಆರ್ಭಟಕ್ಕೆ ರಂಗಬಿಟ್ಟು ಓಡಿದ ಸತ್ಯ ಘಟನೆಯನ್ನು ನೆನಪಿಸಿಕೊಳ್ಳುವ ಪ್ರೇಕ್ಷಕರಿದ್ದಾರೆ. ಇಂದ್ರಜಿತು ಕಾಳಗದ ರಾವಣನ ಪಾತ್ರದಲ್ಲಿ 'ಮಕರಾಕ್ಷ' ಅಳಿದ ವಾರ್ತೆಯನ್ನು ಕೇಳಿದ ಅಭಿನಯ ಇಡಿ ರಂಗವನ್ನೇ ರಾವಣನ ಬಗ್ಗೆ ಅನುಕಂಪ ತಾಳುವಂತೆ ಅಭಿನಯಿಸುತ್ತಿದ್ದರು. ಪ್ರಹ್ಲಾದ ಚರಿತ್ರೆಯ ಹಿರಣ್ಯಕಶ್ಯಪು ಪಾತ್ರದಲ್ಲಿ ಖಯಾದುವಿನಲ್ಲಿ ಕಾಣಿಸುವ ಕಪಟ ಶೃಂಗಾರ, ನರಸಿಂಹನನ್ನು ಹುಡುಕುವ ಆರ್ಭಟಗಳು ಅದ್ಭುತವಾಗಿತ್ತು.

೨. ಲಕ್ಷ್ಮಣ ಹೆಗಡೆ ಕೊಂಡದಕುಳಿ

ರಾಮ ಹೆಗಡೆಯವರ ಪ್ರತಿಪಾತ್ರವನ್ನು ಲಕ್ಷ್ಮಣ ಹೆಗಡೆಯವರು ಮಾಡುತ್ತಿದ್ದರು. ಇವರು ಅನೇಕ ಪಾತ್ರದಲ್ಲಿ ಹೆಸರಾದರು 'ಹನುಮಂತ'ನ ಪಾತ್ರಕ್ಕೆ ಇವರದ್ದೆ ಮಾದರಿ. ಇಂದಿಗೂ "ಹನುಮಂತನೆಂದರೆ ಅಚ್ಚ ಹೆಗಡೆ" ಹನುಮಂತ ಎಂದೆ ಜನ ಹೊಗಳುತ್ತಾರೆ. ರಾಮಭಕ್ತಿಯ ಪರಾಕಾಷ್ಠೆಯ ಮಾತುಗಳು, ಸಮರ್ಥ ಅಭಿನಯ ಹನುಮಂತನ ಪಾತ್ರಕ್ಕೊಪ್ಪುವ ಕಿರುಕುಣಿತದಲ್ಲಿಯ ಲಯಗಾರಿಕೆ, ಲಾಲಿತ್ಯ ಅವರದಾಗಿತ್ತು. ಮಾರುತಿ ಪ್ರತಾಪದ ಮಾರುತಿ, ಲಂಕಾದಹನದ ಹನುಮಂತ, ರಾಮಾಂಜನೇಯದ ಆಂಜನೇಯ ಎಲ್ಲವೂ ಅಷ್ಟೇ ಪ್ರಸಿದ್ಧವಾಗಿತ್ತು. ಇವರ ದ್ರೌಪದಿ ಪ್ರತಾಪದ ಅರ್ಜುನ, ನಳಚರಿತ್ರೆಯ ಭೀಮಕ, ಭೀಷ್ಮ ವಿಜಯದ ಪರಶುರಾಮ, ಇವರಿಗೆ ಖ್ಯಾತಿ ತಂದುಕೊಟ್ಟ ಪಾತ್ರಗಳಾಗಿವೆ.

ರಾಮ ಹೆಗಡೆ-ಲಕ್ಷ್ಮಣ ಹೆಗಡೆಯವರ ಭೀಷ್ಮ-ಪರಶುರಾಮ, ಬಲಿ-ವಾಮನ, ಭರತ-ಧರ್ಮಾಂಗದ, ಭೀಮ-ಅರ್ಜುನ, ವಾಲಿ-ಸುಗ್ರೀವ ಜೋಡಿ ಪಾತ್ರಗಳು ಇಂದಿಗೂ ಯಕ್ಷಗಾನ ರಂಗದಲ್ಲಿ ಅಚ್ಚೊತ್ತಿದೆ.

೧. ಕೊಂಡದಕುಳಿ ರಾಮಚಂದ್ರ ಹೆಗಡೆ

ಕೊಂಡದಕುಳಿ ಮನೆತನದ ಪ್ರಸಿದ್ಧ ಕಲಾವಿದ ರಾಮ ಹೆಗಡೆಯವರ ಮೊಮ್ಮಗ ರಾಮಚಂದ್ರ ಹೆಗಡೆ ಕೊಂಡದಕುಳಿ, ಸಾಲಿಗ್ರಾಮ, ಪೆರ್ಡೂರು, ಕೆರೆಮನೆ ಮೇಳಗಳಲ್ಲಿ ಅಭಿನಯಿಸಿ ಈಗ "ಪೂರ್ಣಚಂದ್ರ ಯಕ್ಷಕಲಾ ಪ್ರತಿಷ್ಠಾನ" ಎಂಬ ಸ್ವಂತ ಮೇಳವನ್ನು ನಡೆಸುತ್ತಿದ್ದಾರೆ. ವರ್ತಮಾನದ ಪ್ರಸಿದ್ಧ ಕಲಾವಿದರು. ಇವರು ಕೀಚಕ, ಸುಧನ್ವ, ಅಭಿಮನ್ಯು ಮುಂತಾದ ಪಾತ್ರಗಳಲ್ಲಿ ಪ್ರಸಿದ್ಧರಾಗಿ ಈಗ ದಶರಥ, ಈಶ್ವರ, ದಕ್ಷ, ರಾವಣ, ಹರಿಶ್ಚಂದ್ರ, ರಾಮ ಹೀಗೆ ಹತ್ತಾರು ಪಾತ್ರಗಳಲ್ಲಿ ಹೆಸರು ಮಾಡಿದ್ದಾರೆ. ಉತ್ತಮ ಮಾತುಗಾರಿಕೆ, ಅಭಿನಯ, ಕುಣಿತ ಎಲ್ಲ ಅಂಗಗಳಲ್ಲೂ ಯಾವ ಕೊರತೆಯೂ ಇಲ್ಲದೆ ಪಾತ್ರವನ್ನು ನಿರ್ವಹಿಸುವುದು ಅವರ ವಿಶೇಷತೆ. ಕೊಂಡದಕುಳಿ ಮನೆತನದ ಕೀರ್ತಿಶೇಷಕಲಾವಿದರಾಗಿ ರಾಮಚಂದ್ರ ಹೆಗಡೆ ಅದೆ ಮನ್ನಣೆಗೆ ಅರ್ಹರಾಗಿದ್ದಾರೆ.[೨೦]

ಕೊಂಡದಕುಳಿ ಮನೆತನದ ಲಕ್ಷ್ಮೀಕಾಂತ ಹೆಗಡೆ, ಗಣಪತಿ ಹೆಗಡೆ ಹವ್ಯಾಸಿ ಯಕ್ಷಗಾನ ಕಲಾವಿದರಾಗಿದ್ದಾರೆ. ಗಣೇಶ ಹೆಗಡೆ ಕೊಂಡದಕುಳಿ ಕೂಡ ವೇಷಧಾರಿಗಳೇ. ಮನೆತನದ ಬಾಲ ಪ್ರತಿಭೆಗಳಾದ ಅಕ್ಷತಾ ಕೊಂಡದಕುಳಿ, ಅಶ್ವಿನಿ ಕೊಂಡದಕುಳಿ, ಶ್ರೀಚರಣ ಇವರೆಲ್ಲರೂ ಯಕ್ಷಗಾನವನ್ನು ಹವ್ಯಾಸವಾಗಿ ರೂಢಿಸಿಕೊಂಡಿದ್ದಾರೆ.

೨. ಮೂರೂರು ದೇವರು ಹೆಗಡೆ

ಯಕ್ಷಗಾನದ ಮಹಾನ್ ಕಲಾವಿದರ ಯಾದಿಯಲ್ಲಿ ದೇವರು ಹೆಗಡೆಯವರು ಒಬ್ಬರು. ಯಕ್ಷಗಾನದಲ್ಲಿ ಆ ಕಾಲದಲ್ಲಿ ಹೊಸತನ ತುಂಬಿ ಜನರನ್ನು ಆಕರ್ಷಿಸಿದ ಸಾಧನೆ ಅವರದು. ಸುಮಾರು ೧೯೨೨ರಲ್ಲಿ ಜನನ. ಮೂರೂರಿನ ಶಿವಹೆಗಡೆ ಮತ್ತು ಭಾಗೀರಥಿಹೆಗಡೆಯವರ ಪುತ್ರರು. ಬಾಲ್ಯದಲ್ಲಿಯೇ ಯಕ್ಷಗಾನದ ಗೀಳನ್ನು ಬೆಳೆಸಿಕೊಂಡು ಯಕ್ಷಗಾನ ಕಲಾವಿದರಾಗಿ ದೀರ್ಘಕಾಲ ರಂಗದಲ್ಲಿ ಮಿಂಚಿದರು. ದೇವರು ಹೆಗಡೆಯವರ ಕಲಾಜೀವನ ೧೯೪೦ರಲ್ಲಿ ಕರ್ಕಿ ಮೇಳದಲ್ಲಿ ಆರಂಭಗೊಂಡಿತು. ಪರಮಯ್ಯ ಹಾಸ್ಯಗಾರರ ಗರಡಿಯಲ್ಲಿ ಪಳಗಿದರು. ೧೯೪೫–೫೨ರ ಅವಧಿ ಬಡಗುತಿಟ್ಟಿನ ಸುವರ್ಣ ಅಧ್ಯಾಯ. ಕೆರೆಮನೆ ಶಿವರಾಮ ಹೆಗಡೆ ಮತ್ತು ದೇವರು ಹೆಗಡೆಯವರ ಜೋಡಿ "ಅದ್ಭುತ ಜೋಡಿ" ಎನಿಸಿ ಅಸಾಮಾನ್ಯ ಪರಿಣಾಮ ಬೀರಿದರು. ಗದಾಪರ್ವದ ಭೀಮ, ಭೂಕೈಲಾಸದ ರಾವಣ, ವಾಲಿವಧೆಯರ ವಾಲಿ, ಸುಗ್ರೀವ, ಇಂದ್ರಜಿತು, ಘಟೋತ್ಕಜ, ಚಂದ್ರಹಾಸ ಚರಿತ್ರೆಯ ದುಷ್ಟಬುದ್ಧಿ ಇವರ ಪ್ರಸಿದ್ಧ ಪಾತ್ರಗಳು.

೧೯೫೨ರಲ್ಲಿ "ಮಹಾವಿಷ್ಣು ಪ್ರಸಾದಿತ ಯಕ್ಷಗಾನ ಮಂಡಳಿ ಮೂರೂರು ಮೇಳವನ್ನು ಸಂಘಟಿಸಿ ಸಂಘಟಕರಾಗಿ, ಪ್ರಮುಖ ಪಾತ್ರಧಾರಿಯಾಗಿ ಮೇಳ ನಡೆಸಿ ಪ್ರಸಿದ್ಧರಾದವರು. ೧೯೫೪–೬೦ರಲ್ಲಿ ಕೆರೆಮನೆ ಸಂಯುಕ್ತ ಮೇಳವನ್ನು ಸೇರಿ ಪಾತ್ರ ಮಾಡಿ ಜನಮನ ಗೆದ್ದರು. ಧರ್ಮಸ್ಥಳ, ಕೂಡ್ಲು, ಸಾಲಿಗ್ರಾಮ, ಸುರತ್ಕಲ್ ಮೇಳಗಳಲ್ಲಿ ದಕ್ಷಿಣೋತ್ತರ ಕನ್ನಡದ ಪ್ರಸಿದ್ಧ ಕಲಾವಿದರೊಂದಿಗೆ

೨೦. ಕ್ಷೇತ್ರ ಕಾರ್ಯ ಮೂರೂರು – ರಾಮಹೆಗಡೆಯವರು ನೀಡಿದ ಮಾಹಿತಿ.

ಪಾತ್ರನಿರ್ವಹಿಸಿದರು. "ವಸಂತಸೇನೆ"ಯ ಮೈತ್ರೇಯಿ, ಧರ್ಮಸ್ಥಳ ಕ್ಷೇತ್ರಮಹಾತ್ಮೆಯ ಅಣ್ಣಪ್ಪಭೂತ, ಭೋಜಕಾಳಿದಾಸನ ಮಂಜರಾಜ, ನಳಚರಿತ್ರೆಯ ನಳ, ಕಂಸ, ದುಷ್ಟಬುದ್ಧಿ, ರಾವಣ ಪಾತ್ರಗಳಲ್ಲಿ ಅವರು ನೀಡಿದ ಅಭಿನಯ ಅದ್ಭುತವಾದುದು.

ನಾಟಕೀಯ ಮತ್ತು ಯಕ್ಷಗಾನ ಶೈಲಿಯ ಸಮನ್ವಯ, ಭವ್ಯಆಳ್ತನ, ಅಗಲವಾದ ಮುಖ, ಕಣ್ಣು ಸ್ವರಶಕ್ತಿ ಅವರ ಅಭಿನಯಕ್ಕೆ ಪೂರಕವಾಗಿದ್ದವು. ಭಾವಾಭಿವ್ಯಕ್ತಿ, ವಿನೂತನ ಅಭಿನಯ, ಚೊಕ್ಕ ಮಾತು ಅವರ ವಿಶೇಷ ಪ್ರತಿಭೆಯಾಗಿತ್ತು.

ಕಲಾವಿದರು, ಸಂಘಟಕರೂ ಆದ ಇವರು ಪ್ರಸಂಗಕರ್ತರಾಗಿ, ಪ್ರಚಂಡ ಲಂಕೇಶ್ವರ, ಗದಾಯುದ್ಧ, ಎಂಬ ಪ್ರಸಂಗವನ್ನು ವಿಶಿಷ್ಟ ಕಲ್ಪನೆಯಿಂದ ಬರೆದಿದ್ದಾರೆ. ಹಿಮ್ಮೇಳದಲ್ಲಿ ಪಿಟೀಲನ್ನು ಅಳವಡಿಸಿ ಪ್ರಯೋಗ ನಡೆಸಿದರು. ಮಕ್ಕಳಮೇಳ ಸಂಘಟಿಸಿ ತರಬೇತಿ ನೀಡಿದರು. ಕೆಲಕಾಲ ಮೂರೂರಿನಲ್ಲಿ ಯಕ್ಷಗಾನ ಕಲಾಶಾಲೆಯನ್ನು ನಡೆಸಿದರು. ಹೆಣ್ಣುಮಕ್ಕಳಿಗೆ ಯಕ್ಷಗಾನ ಕಲಿಸಿ ಮೇಳ ಕಟ್ಟಿದರು. ೧೯೯೧ರಲ್ಲಿ ವಿಧಿವಶರಾದ ಇವರು ಯಕ್ಷರಂಗದಲ್ಲಿ ಮನೆಮಾತಾಗಿದ್ದರು. ದೇವರಂಗ ಎಂಬ ಅಭಿನಂದನಾ ಗ್ರಂಥ ಇವರ ಕುರಿತಂತೆ ಪ್ರಕಟಗೊಂಡಿದೆ. ಮೂರೂರು ದೇವರು ಹೆಗಡೆ ಪ್ರತಿಷ್ಠಾನವು ಸ್ಥಾಪನೆಗೊಂಡಿದೆ.

೩. "ಏಕ್ಟರ್ ಜೋಶಿ" – ಗೋಕರ್ಣ

ಯಕ್ಷಗಾನದ ವಿಶಿಷ್ಟ ಕಲಾವಿದರು ಇವರು. ಅಪಾರ ಜನಮೆಚ್ಚುಗೆ ಗಳಿಸಿದ್ದರು. ಇವರು ನಾಟಕರಂಗಭೂಮಿಯಿಂದ ಯಕ್ಷಗಾನಕ್ಕೆ ಆಕರ್ಷಿತರಾಗಿ ಬಂದರು. ವಿಶಿಷ್ಟ ಅಭಿನಯಗಳಿಂದ 'ಏಕ್ಟರ್' ಜೋಶಿ ಎಂದೆ ಪ್ರಸಿದ್ಧರಾದರು. ಇವರ ಮೂಲ ಹೆಸರು ವಿಘ್ನೇಶ್ವರ ಜೋಶಿ, ನಾಟಕೀಯ ಅಭಿನಯ ಇವರ ಶೈಲಿ.[೨೨]

ಇಡಗುಂಜಿ, ಕರ್ಕಿ, ಮೂರೂರು ಮೇಳಗಳಲ್ಲಿ ನಟರಾಗಿ ಪ್ರಸಿದ್ಧಿಗೆ ಬಂದರು. ಗೋಕರ್ಣದಲ್ಲಿ ತಮ್ಮದೇ ಸ್ವಂತ ಮೇಳ ಕಟ್ಟಿಕೊಂಡು ಕೆಲವು ವರ್ಷ ಯಕ್ಷಗಾನ ರಂಗದಲ್ಲಿ ಸೇವೆಸಲ್ಲಿಸಿದರು.

ಅಭಿನಯದಲ್ಲಿ ಅಪಾರ ಪ್ರತಿಭೆ ಅವರಲ್ಲಿತ್ತು. ಅವರು ನಿರ್ವಹಿಸಿದ ಕಾಳಿದಾಸ ಪ್ರಸಂಗದ "ಕುರುಬರ ಕಾಳ" ಅತ್ಯಂತ ಪ್ರಸಿದ್ಧವಾದುದು. ಇಂದಿಗೂ ಹಿರಿಯರು ಅವರು ನೋಡಿದ "ಕುರುಬರ ಕಾಳ"ನ ಪಾತ್ರವನ್ನು ನೆನಪಿಸುತ್ತಾರೆ. ಏಕಲವ್ಯ, ಕುಳಿಂದ ಉತ್ತರ, ವಿದುರ, ಕಾಶಿಮಾಣಿ ಇತ್ಯಾದಿ ಪಾತ್ರಗಳು ಅವರ ಪ್ರಸಿದ್ಧ ಪಾತ್ರಗಳಾಗಿದ್ದವು. ಅಭಿಜಾತವಾದ ಕಲಾವಿದರಾದ ಏಕ್ಟರ್‌ಜೋಶಿ ಸಹಜಾಭಿನಯದ ಮೂಲಕ ಜನರ ಮನಸ್ಸನ್ನು ಗೆದ್ದ ಕಲಾವಿದರಾಗಿದ್ದಾರೆ.

೪. ಪಿ.ವಿ. ಹಾಸ್ಯಗಾರ

ಕರ್ಕಿ ಹಾಸ್ಯಗಾರ ಮನೆತನದ ಪರಂಪರೆಯ "ಅನರ್ಘ್ಯ ಸಂಪತ್ತು" ಎಂದು ಹೆಸರಾದ ಪರಮಯ್ಯ ವರದ ಹಾಸ್ಯಗಾರರು ತಿಮ್ಮ ಹಾಸ್ಯಗಾರರ ಮೊಮ್ಮಗ. (ಯಕ್ಷಗಾನದ ಶೈಲಿ ಪ್ರವರ್ತಕ ಮನೆತನದಲ್ಲೂ ಇವರ ಕುರಿತು ಸಾಕಷ್ಟು ವಿವರವಾಗಿ ವಿವರಿಸಿದೆ)

ಯಕ್ಷಗಾನ ಕಲೆ ಮತ್ತು ಪ್ರಯೋಗದ ಬಗ್ಗೆ ಅಧಿಕಾರಯುತವಾಗಿ ಮಾತನಾಡಬಲ್ಲವರಾಗಿದ್ದರು. ಚಿಟ್ಟಾಣಿಯವರು ಪಿ.ವಿ. ಹಾಸ್ಯಗಾರರನ್ನು ಗುರುಭಕ್ತಿಯಿಂದಲೇ ಕಾಣುತ್ತಿದ್ದರು. ಪಿ.ವಿ. ಹಾಸ್ಯಗಾರರ ಅಕಾಲ ಮರಣದಿಂದ ಉತ್ತರಕನ್ನಡ ಯಕ್ಷಗಾನ ಶೈಲಿಯ ಕುರಿತು ನಿಖರವಾಗಿ ಮಾತನಾಡುವ ಕಲಾವಿದರು ಇಲ್ಲವೆಂದೆ ಹೇಳಬಹುದು. ಕರ್ಕಿ ಮನೆತನದ ಇತರ ಕಲಾವಿದರು ತಮ್ಮ ಉತ್ಸಾಹವನ್ನು ಕಳೆದುಕೊಂಡರು.

ಹೊನ್ನಾವರದ ಸೇಂಟ್‌ಥಾಮಸ್ ಶಾಲೆಯ ಶಿಕ್ಷಕರಾದ ಇವರು ವೃತ್ತಿಯೊಂದಿಗೆ ಯಕ್ಷಗಾನವನ್ನು ಪ್ರವೃತ್ತಿಯಾಗಿ ಬೆಳೆಸಿಕೊಂಡು ಬಂದಿದ್ದರು. ಅತಿಥಿ ನಟನಾಗಿ ವಿವಿಧೆಡೆ ಬೇರೆ ಬೇರೆ ಮೇಳಗಳಲ್ಲಿ ಪಾತ್ರ ಮಾಡುತ್ತಿದ್ದರು. ಘಟ್ಟದ ಮೇಲೆ ಪಿ.ವಿ. ಹಾಸ್ಯಗಾರರ ವೇಷವನ್ನು ಜನರು ಗೌರವದಿಂದ ನೋಡಿ ಆನಂದಿಸುತ್ತಿದ್ದರು.

ಪಿ.ವಿ. ಹಾಸ್ಯಗಾರರ ಮಾಗಧ, ಕೌರವ, ಬಲರಾಮ, ಅರ್ಜುನ, ಕರ್ಣ, ಶಬರ ಪಾತ್ರ ನಿರ್ವಹಣೆ ಉಳಿದ ಕಲಾವಿದರಿಗಿಂತ ಭಿನ್ನವೆ ಇತ್ತು. ಸುಧನ್ವಾರ್ಜುನದ ಅರ್ಜುನ 'ಕಾರ್ತವೀರ್ಯ'ದ ರಾವಣ. ಎರಡೂ ಪಾತ್ರಗಳು ಜನ ಎಂದಿಗೂ ಮರೆಯದ ಅಭಿನಯವೆಂದು ಹಲವು ಕಲಾಭಿಮಾನಿಗಳು ನೆನಪಿಸಿಕೊಳ್ಳುತ್ತಾರೆ. ಮನೆತನದ ಪರಂಪರೆಯೊಂದಿಗೆ ಸ್ವಪ್ರತಿಭೆಯನ್ನು ಮೇಳೈಸಿ ಅಭಿನಯಿಸುವ ಪಿ.ವಿ. ಹಾಸ್ಯಗಾರರು ಶ್ರೇಷ್ಠಕಲಾವಿದರಾಗಿದ್ದರು.

೫. ಚಿಟ್ಟಾಣಿ ರಾಮಚಂದ್ರ ಹೆಗಡೆ – ಮನೆತನ

ಯಕ್ಷಗಾನ ರಂಗದಲ್ಲಿ 'ಪದ್ಮಶ್ರೀ' ಪ್ರಶಸ್ತಿಯ ಮೊದಲ ಗೌರವ, "ಜನಪದಶ್ರೀ" ಪ್ರಶಸ್ತಿ, ಅಕಾಡೆಮಿ ಪ್ರಶಸ್ತಿ ವಿವಿಧ ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವ ಕಲಾಗೌರವ ಪ್ರಶಸ್ತಿಗಳು, ನೂರಾರು ಸನ್ಮಾನಗಳಿಗೆ ಪಾತ್ರರಾಗಿರುವ ಚಿಟ್ಟಾಣಿ ರಾಮಚಂದ್ರ ಹೆಗಡೆ ಪ್ರಸ್ತುತ ಯಕ್ಷಗಾನ ರಂಗದ ಪ್ರಸಿದ್ಧರು, ಹಿರಿಯರು. "ಜನಮೆಚ್ಚಿದ ಕಲಾವಿದ ಚಿಟ್ಟಾಣಿ"ಗೆ ರಸರಾಜ, ನಟಸಾರ್ವಭೌಮ ಎಂದೆ ಜನಕರೆದಿದ್ದಾರೆ.

ಚಿಟ್ಟಾಣಿ ಸುಬ್ರಾಯಹೆಗಡೆ ಮತ್ತು ಗಣಪಿ, ರಾಮಚಂದ್ರ ಹೆಗಡೆಯ ತಂದೆ-ತಾಯಿ. ಅವಿಭಕ್ತ ಕುಟುಂಬದಲ್ಲಿ ಚಿಟ್ಟಾಣಿ ೧೮-೯-೧೯೩೪ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಭಾಸ್ಕೇರಿಯಲ್ಲಿ ಆರಂಭವಾದರೂ ಮುನ್ನಡೆಯಲಿಲ್ಲ. ಚಿಟ್ಟಾಣಿಗೆ ಓದು ಆಸಕ್ತಿದಾಯಕವಾಗಿರಲಿಲ್ಲ. ಶಾಲೆ ತಪ್ಪಿಸುವುದರಿಂದ ಮನೆಯಲ್ಲಿ ಶಿಕ್ಷೆ ಅನುಭವಿಸುತ್ತಾ ಬೆಳೆದ. ತೋಟದ ಕೆಲಸ ಬಾಲ್ಯದಲ್ಲೇ ರೂಢಿಯಾಯಿತು. ಮನೆತನದಲ್ಲಿ ಹಿಂದೆ ಯಾರೂ ಅಂತಹ ಕಲಾವಿದರಿರಲಿಲ್ಲ. ಯಕ್ಷಗಾನದತ್ತ ಮನಸ್ಸು ಆಕರ್ಷಿಸಿತು. ಮನರಂಜನೆಗಾಗಿ ಯಕ್ಷಗಾನ ನೋಡುತ್ತ ಆರಾಧಕರೆ ಆದರು ಚಿಟ್ಟಾಣಿ. ಮೂಡ್ಕಣಿ ನಾರಾಯಣ ಹೆಗಡೆ, ಪರಮಯ್ಯ ಹಾಸ್ಯಗಾರ ಕೊಂಡದಕುಳಿ ಸಹೋದರರು ಅಂದಿನ ವೈಭವದ ಪ್ರತಿಭೆ ಮತ್ತು ಪ್ರದರ್ಶನ ಚಿಟ್ಟಾಣಿಯವರನ್ನು ಆಕರ್ಷಿಸಿತು.[೨೧]

೨೧. ಚಿಟ್ಟಾಣಿ ರಾಮಚಂದ್ರ ಹೆಗಡೆ ಸಂದರ್ಶನ.

ಕೊಂಡದಕುಳಿರಾಮ ಹೆಗಡೆಯವರಗಾಲಿ, ಪರಮಯ್ಯ ಹಾಸ್ಯಗಾರರ ಕಿಮ್ಮೀರ, ಶಬರ, ಕೀಚಕ, ಭಸ್ಮಾಸುರ, ನರಸಿಂಹ, ಮೈರಾವಣ ಪಾತ್ರಗಳು ಮೂಡ್ಕಣಿ ನಾರಾಯಣ ಹೆಗಡೆಯವರ ಪರಂಪರೆಯ ಕುಣಿತಗಳು ಚಿಟ್ಟಾಣಿಯವರನ್ನು ಪ್ರೇರೇಪಣೆ ಮಾಡಿತು. ಕೆರೆಮನೆ ಶಿವರಾಮ ಹೆಗಡೆಯವರ ಗದಾಪರ್ವದ ಕೌರವ ಪಾತ್ರಾಭಿನಯ ಚಿಟ್ಟಾಣಿಯವರಲ್ಲಿ ಆಳವಾದ ಪರಿಣಾಮ ಬೀರಿತು. ಚಿಟ್ಟಾಣಿ ಮನೆಯ ವಿರೋಧದ ನಡುವೆಯೂ ಕಲಾವಿದರಾದರು. ಯಕ್ಷಗಾನಕ್ಕೆ ಕೊಡುಗೆಯಾಗಿಸಂದರು.

ಗುಂಡಬಾಳೆಮೇಳ, ಮೂಡ್ಕಣಿಮೇಳ, ಮೂರೂರು ಮೇಳ, ಕೊಳಗಿಬೀಸ್ ಮೇಳ, ಅಮೃತೇಶ್ವರಿ, ಸಾಲಿಗ್ರಾಮ, ಪಂಚಲಿಂಗೇಶ್ವರ, ಸಾಲಿಗ್ರಾಮ, ಬಂಗಾರಮಕ್ಕಿ ಹೀಗೆ ಹಲವು ಮೇಳಗಳಲ್ಲಿ ಚಿಟ್ಟಾಣಿಯವರು ಕಲಾಸೇವೆಗೈದಿದ್ದಾರರೆ.

ದಕ್ಷಿಣೋತ್ತರ ಕನ್ನಡದ ಸಮಕಾಲೀನ ಪ್ರಸಿದ್ಧ ಕಲಾವಿದರು ಚಿಟ್ಟಾಣಿಯವರೊಂದಿಗೆ ಪಾತ್ರ ಮಾಡಿದ್ದಾರೆ. ಚಿಟ್ಟಾಣಿಯವರೊಂದಿಗೆ ಬಾಲಪ್ರತಿಭೆಗಳು, ಹೆಣ್ಣು ಮಕ್ಕಳು, ಹಿರಿಯರು ಯಾರೆ ಪಾತ್ರಮಾಡಲಿ ಅವರನ್ನು ಗೌರವಿಸಿ ಪಾತ್ರನಿರ್ವಹಣೆ ಮಾಡುವ ಚಿಟ್ಟಾಣಿ ಎಲ್ಲರಿಗೂ ಆದರದ ಕಲಾವಿದರಾಗಿದ್ದಾರೆ.

ಚಿಟ್ಟಾಣಿಯವರು ಅಭಿಮಾನಿಗಳ ಆಹ್ವಾನದ ಮೇರೆಗೆ ದೇಶವಿದೇಶಗಳ ವಿವಿಧ ಸ್ಥಳಗಳಲ್ಲಿ ಪ್ರದರ್ಶನದಲ್ಲಿ ಪಾಲ್ಗೊಂಡು ಜನಮನಗೆದ್ದಿರುತ್ತಾರೆ. "ಚಿಟ್ಟಾಣಿ" ಹೆಸರಿನಲ್ಲಿ ಮಹಾನಗರಗಳಲ್ಲಿ ಅನೇಕ ಸಪ್ತಾಹಗಳು ನಡೆದಿವೆ. ಯಕ್ಷಗಾನದ 'ಬಾಕ್ಸಾಫೀಸ್' ಎಂದರೆ ಖ್ಯಾತಿಗೊಂಡು ಅತಿಥಿ ಕಲಾವಿದರಾಗಿ ಆಹ್ವಾನಿಸಿ ಮೇಳಗಳು ಆಕರ್ಷಣೀಯ ಕೇಂದ್ರವಾಗಿ 'ಚಿಟ್ಟಾಣಿ'ಯವರ ಕಲೆಯನ್ನು ಬಳಸಿದ್ದಾರೆ. ಚಿಟ್ಟಾಣಿಯವರಿಗೆ ಕಲೆ ಸಿದ್ಧಿಸಿದೆ. ಪ್ರವೇಶದಿಂದ ಪಾತ್ರ ನಿಷ್ಕ್ರಮಣದವರೆಗೆ ಪಾತ್ರದಲ್ಲಿ ತಲ್ಲೀನರಾಗಿ ಏಕಾಗ್ರತೆಯಿಂದ ಪಾತ್ರನಿರ್ವಹಿಸುವಬದ್ಧತೆ ಅವರದ್ದು. ಉತ್ತಮ ಲಯಸಿದ್ಧಿ, ಅಭಿನಯ, ರಸಪೋಷಣೆ ಚಿಟ್ಟಾಣಿಯವರ ಪ್ರಮುಖವಾದ ರಂಗತಂತ್ರಗಳು, ಕಣ್ಣು, ಮುಖಭಾವದ ಮೂಲಕ, ಭಾವಾಭಿವ್ಯಕ್ತಿಯನ್ನು ಪರಿಣಾಮಗೊಳಿಸುವ ಚಿಟ್ಟಾಣಿ ರಂಗದಲ್ಲಿ ನಿರ್ಮಿಸಿದ ಪಾತ್ರ ವೈಖರಿ, ಕುಣಿತಾಭಿನಯ ಚಿಟ್ಟಾಣಿ ಶೈಲಿ ಎಂದೆ ಜನಪ್ರಿಯಗೊಂಡಿತು.[೨೨]

ಚಿಟ್ಟಾಣಿಯವರು ನಿರ್ವಹಿಸಿದ ಭಸ್ಮಾಸುರ ಲೆಕ್ಕವಿಲ್ಲದಷ್ಟು, ರೌದ್ರ, ಬೀಭತ್ಸ, ಭಯಾನಕ ರಸಗಳನ್ನು ಅವರದೆ ಶೈಲಿಯಲ್ಲಿ ಸೆರೆಹಿಡಿಯಬಲ್ಲ ಶಕ್ತಿ ಅವರಿಗಿತ್ತು. ಕೀಚಕ, ರುದ್ರಕೋಪದ ಪಾತ್ರಗಳು ಅಷ್ಟೇ ಪ್ರಸಿದ್ಧವಾಗಿವೆ. "ಗದಾಯುದ್ಧದ ಕೌರವ" ಶಿವರಾಮ ಹೆಗಡೆಯವರ ನಂತರ ಅವರದ್ದೆ ಪ್ರಸಿದ್ಧವಾಗಿದೆ. ಹನುಮಂತ, ದಕ್ಷ, ಈಶ್ವರನ ಪಾತ್ರಗಳು ಅವರ ಖ್ಯಾತಿಯನ್ನು ಹೆಚ್ಚಿಸಿದೆ. ಅರ್ಜುನ, ಕೃಷ್ಣಗ ಪಾತ್ರಗಳೂ ಹೆಸರಾಗಿದೆ. ಬಹುತೇಕ ಪ್ರತಿ ಪಾತ್ರಗಳನ್ನು ಖಳಪಾತ್ರಗಳನ್ನು ಮಾಡುತ್ತ ಬಂದ ಚಿಟ್ಟಾಣಿ ತನ್ನದೆ ಛಾಪನ್ನು ಒತ್ತಲು ಸಮರ್ಥರಾದರು. ಯಕ್ಷರಂಗಕ್ಕೆ ಆಕಸ್ಮಿಕವಾಗಿ 'ಕಲಾಧಾರ'ನಾಗಿ ಮಂಜುನಾಥ ಭಾಗವತರಿಂದ ಪ್ರಕಾಶಕ್ಕೆ ಬಂದ 'ಕಲಾಧರ' ಇಂದಿಗೂ ಮತ್ತೆ ಚಿಟ್ಟಾಣಿಯವರಿಂದ ಅದೆ ಪಾತ್ರವನ್ನು ಮಾಡಿಸಿ ಜನ ಆನಂದಪಡುತ್ತಿದ್ದಾರೆ. ಶಿವರಾಮ ಹೆಗಡೆ ಕೆರೆಮನೆಯಿಂದ ಆರಂಭಿಸಿ

೨೨. ಚಿಟ್ಟಾಣಿ ರಾಮಚಂದ್ರ ಹೆಗಡೆ ಸಂದರ್ಶನ.

ಹವ್ಯಾಸಿ ಕಲಾವಿದರ ಜೋಡಿವೇಷಗಳವರೆಗೆ ಚಿಟ್ಟಾಣಿ ಎಂದಿಗೂ ಅಭಿನಯ, ಪಾತ್ರ ನಿರ್ವಹಣೆಯಲ್ಲಿ ಉಪೇಕ್ಷೆ ಮಾಡಿದವರೆ ಅಲ್ಲ. ಅವರು ಕಲೆಯಲ್ಲಿಟ್ಟ ನಂಬಿಕೆ ಅವರನ್ನು ಬೆಳೆಸಿದೆ. ಉಳಿದೆಲ್ಲ ಕಲೆಯ ಮಹಾನಟರಷ್ಟೆ ಚಿಟ್ಟಾಣಿ ಜನಾದರಕ್ಕೆ ಒಳಗಾಗಿದ್ದಾರೆ.

೧೯೮೫ರಿಂದ ಮಾಧ್ಯಮದ ಪ್ರಭಾವ, ದೂರದರ್ಶನ ಸಿನಿಮಾಗಳ ಪ್ರಭಾವ ಸಾಮಾಜಿಕರ ಮೇಲೆ ಗಂಭೀರವಾಗಿ ಪರಿಣಾಮಬೀರಿತು. ಜನಪದ ಕಲೆಗಳು ರಂಗಕಲೆಗಳಿಂದ ಜನ ದೂರವಾಗುತ್ತ ಬಂದರು. ಅಂತಹ ಕಾಲದಲ್ಲೂ ಚಿಟ್ಟಾಣಿಯವರ ಆಕರ್ಷಣೆ ಕಡಿಮೆಯಾಗಲಿಲ್ಲ. ಇಂದಿಗೂ ಜನರನ್ನು ಯಕ್ಷಗಾನದತ್ತ ಸೆಳೆದು ಹಿಡಿದಿಟ್ಟ ಪ್ರತಿಭೆ ಅವರದ್ದು.

ಚಿಟ್ಟಾಣಿಯವರ ಕುರಿತು ಅನೇಕ ಲೇಖನ ಗ್ರಂಥ, ಸಂಶೋಧನೆಗಳು ಪ್ರಕಟಗೊಂಡಿದೆ. ಚಿಟ್ಟಾಣಿಯವರ ಕೊಡುಗೆಗಳ ಕುರಿತು ಡಾ. ವಸುಧಾ ಹೆಗಡೆ, ರಂಗಸಂಕಥನ ಪರಂಪರೆ ಕುರಿತು ಡಾ. ಕಾ.ವೆಂ. ಶ್ರೀನಿವಾಸ ಸಂಶೋಧನೆ ಮಾಡಿರುತ್ತಾರೆ. 'ರಸರಾಜ' ಚಿಟ್ಟಾಣಿ ಅಭಿನಂದನಾ ಗ್ರಂಥ ಪ್ರಕಟಗೊಂಡಿದೆ. ವಿಶಿಷ್ಟವಾದ ಶೈಲಿಯಲ್ಲಿ ನಿರೂಪಿತವಾದ 'ನಿಮ್ಮ ಚಿಟ್ಟಾಣಿ' ಆತ್ಮಕಥನಕ್ಕೆ ಮಾದರಿಯಾಗಿದೆ. ಮನಸ್ಸಿಗೆ ಹತ್ತಿರವಾಗುವ ಕಲಾವಿದನ ಬದುಕಿನ ಕ್ಷಣಗಳನ್ನು ಅಭಿವ್ಯಕ್ತಿಸಿದಂತೆ ರೂಪಗೊಳಿಸಿದ ಡಾ. ಗೋಪಾಲಕೃಷ್ಣ ಹೆಗಡೆಯವರ ಕೃತಿ ನಿಮ್ಮ ಚಿಟ್ಟಾಣಿ ಜನಪ್ರಿಯ ಕಥನವಾಗಿದೆ.

'ಚಿಟ್ಟಾಣಿ ಶೈಲಿ' ಅನುಕರಣೀಯವಾದಂತೆ ಚಿಟ್ಟಾಣಿ ಮನೆತನದಲ್ಲೂ ಅದೆ ಪರಂಪರೆಯನ್ನು ಸುಬ್ರಹ್ಮಣ್ಯ ಚಿಟ್ಟಾಣಿ ಮುಂದುವರೆಸಿಕೊಂಡು ಬಂದಿರುತ್ತಾರೆ. ತಂದೆಯವರ ಮುಂದಾಳ್ವತದಲ್ಲಿ ಶ್ರೀವೀರಾಂಜನೇಯ ಯಕ್ಷಗಾನ ಮೇಳ, ಬಂಗಾರಮಕ್ಕಿಯ ಸಂಚಾಲಕರಾಗಿದ್ದಾರೆ. ಸುಬ್ರಹ್ಮಣ್ಯ ಚಿಟ್ಟಾಣಿಯವರು ಸುಧನ್ವ, ಕೃಷ್ಣ, ವಿಷ್ಣು, ಈಶ್ವರ, ಭೀಮ, ಕೀಚಕ, ದಕ್ಷ ಮುಂತಾದ ಪಾತ್ರಗಳಲ್ಲಿ ಪ್ರಸಿದ್ಧರಾಗಿದ್ದಾರೆ. ಅವರ ಶೈಲಿ, ಮೊನಚಾದ ಮಾತುಗಾರಿಕೆ, ಚುರುಕು ಲಯ, ನಡೆ, ತಂದೆಯಂತೆ ಆಕರ್ಷಣೀಯವಾಗಿದೆ. ಮಹಾಬಲ ಹೆಗಡೆಯವರೊಂದಿಗೆ ಅವರು ನಿರ್ವಹಿಸಿದ ಪಾತ್ರಗಳು ಪ್ರಸಿದ್ಧವಾಗಿವೆ. ತಂದೆಯಂತೆ ಜನರ ಆದರಕ್ಕೆ ಸುಬ್ರಹ್ಮಣ್ಯ ಚಿಟ್ಟಾಣಿಯವರು ಪಾತ್ರರಾಗಿದ್ದಾರೆ.

೬. ನರಸಿಂಹ ಹೆಗಡೆ ಚಿಟ್ಟಾಣಿ

ದಕ್ಷಿಣಕನ್ನಡ ಬಯಲಾಟದ ಮೇಳದಲ್ಲಿರುವ ನರಸಿಂಹ ಚಿಟ್ಟಾಣಿಯವರು ಕುಣಿತ, ಲಯಗಾರಿಕೆಗೆ ಪ್ರಸಿದ್ಧರು. ಗತ್ತು ಗಾಂಭೀರ್ಯ, ಶೈಲಿ, ಪಾತ್ರನಿರ್ವಹಣಾ ಕ್ರಮದಲ್ಲಿ ತಂದೆಯ ಮಾರ್ಗವನ್ನೆ ಅನುಸರಿಸಿದ ನರಸಿಂಹ ಚಿಟ್ಟಾಣಿ ಹನುಮಂತ, ಭೀಮ, ಕೀಚಕ, ಈಶ್ವರ, ದಕ್ಷನ ಪಾತ್ರಗಳಲ್ಲಿ ಹೆಸರು ಮಾಡಿದ್ದಾರೆ. ಇವರ ಭಸ್ಮಾಸುರ, ಮಾಗಧ ತಂದೆಯವರ ಪಾತ್ರಶೈಲಿಯೆ ಆಗಿದೆ. ಖಳಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸುವ ಪ್ರತಿಭೆ ನರಸಿಂಹ ಹೆಗಡೆಯವರಲ್ಲಿದೆ.

ನಾರಾಯಣ ಹೆಗಡೆ ಇವರು ಯಕ್ಷಗಾನದ ಹವ್ಯಾಸಿ ಕಲಾವಿದರು. ತೋಟದ ಬೇಸಾಯಕ್ಕೆ ಆದ್ಯತೆ ನೀಡಿ ರಂಗದಿಂದ ದೂರವೆ ಉಳಿದುಕೊಂಡಿದ್ದಾರೆ. ಆದರೆ ಯಕ್ಷಗಾನದಲ್ಲಿ ತೊಡಗಿಕೊಳ್ಳಬಹುದಾದಷ್ಟು ಪ್ರತಿಭೆ ನಾರಾಯಣ ಹೆಗಡೆಯಲ್ಲಿದೆ. ಹವ್ಯಾಸಿ ಮೇಳಗಳಲ್ಲಿ ಪಾತ್ರನಿರ್ವಹಿಸಿದ್ದರು.

೭. ಚಿಟ್ಟಾಣಿ ಮೊಮ್ಮಕ್ಕಳು

ಚಿಟ್ಟಾಣಿಯವರ ಮೊಮ್ಮಕ್ಕಳಾದ ರಾಘವ, ರವಿ, ಶ್ರೀಧರ ಇವರೆಲ್ಲ ಯಕ್ಷಗಾನದಲ್ಲಿ ಆಸಕ್ತರೆ. ಬಾಲಪ್ರತಿಭೆಗಳಾಗಿ ರಂಗದಲ್ಲಿ ಪಾತ್ರ ಮಾಡಿದ್ದಾರೆ. ಮೊಮ್ಮಗ ಕಾರ್ತಿಕ ಚಿಟ್ಟಾಣಿ ಈಗಾಗಲೇ ರಂಗದಲ್ಲಿ ಉದಯೋನ್ಮುಖ ಪ್ರತಿಭೆಯಾಗಿ ಹೆಸರುಗಳಿಸಿದ್ದಾರೆ.

ಚಿಟ್ಟಾಣಿಯವರಿಗೆ ಹಿಂದೆ ಅವರ ಮನೆತನದಲ್ಲಿ ಕಲಾವಿದರು ಇಲ್ಲವಾದರೂ, ಅವರಿಂದಲೆ ಆರಂಭವಾದ ಯಕ್ಷಗಾನ ಪರಂಪರೆ ನಿರಂತರವಾಗಿ ಸಾಗಿಬಂದಿದೆ. "ಚಿಟ್ಟಾಣಿ" ಯಕ್ಷಗಾನ ಕಲಾಮನೆತನವಾಗಿ ಬೆಳೆಯುತ್ತಿದೆ.

೮. ಬಳಕೂರು ಕೃಷ್ಣಯಾಜಿ

ಉತ್ತರಕನ್ನಡದ ಹಿರಿಯ ವೃತ್ತಿ ಕಲಾವಿದರಲ್ಲೊಬ್ಬರು. ಕೃಷ್ಣಯಾಜಿ ಯಕ್ಷಗಾನರಂಗದಲ್ಲಿ "ಕೃಷ್ಣಯಾಜಿ" ಸುದೀರ್ಘವಾಗಿ ಒಂದೇ ಮೇಳದಲ್ಲಿದ್ದವರು ಹೌದು!

ಮಲ್ಲಗದ್ದೆ ಗಣೇಶ ಹೆಗಡೆಯಲ್ಲಿ ಯಕ್ಷಗಾನ ಅಭ್ಯಾಸ ಮಾಡಿದರು. ಮಹಾಬಲ ಹೆಗಡೆಯವರಲ್ಲಿಯೂ ಕುಣಿತಾಭಿನಯ ತರಬೇತಿ ಪಡೆದವರು. ಕೆರೆಮನೆ ಮೇಳದಲ್ಲಿ ಆರಂಭಿಕ ಕಲಾಜೀವನ ಆರಂಭಿಸಿದರು. 'ಕೃಷ್ಣನ' ಪಾತ್ರದಲ್ಲಿ ಯಾಜಿಗಳಿಸಿದ ಮೆಚ್ಚುಗೆ ಆ ಪಾತ್ರಕ್ಕೆ ಹೊಂದುವ ಅಭಿನಯವನ್ನು ಚೆನ್ನಾಗಿ ಪ್ರಕಟಿಸಬಲ್ಲರು. ಸುಧನ್ವ, ಬಭ್ರುವಾಹನ, ಕೀಚಕ ಮುಂತಾದ ಪಾತ್ರಗಳಲ್ಲಿ ಯಾಜಿಯವರು ಪ್ರಸಿದ್ಧರೇ! ಸಾಲಿಗ್ರಾಮಮೇಳದಲ್ಲಿ ಕಾಳಿಂಗ ನಾವುಡರ ಹಿಮ್ಮೇಳಕ್ಕೆ ಸ್ಫೂರ್ತಿಗೊಂಡು ಹೊಸಪ್ರಸಂಗಗಳ ವಿವಿಧ ಪಾತ್ರಗಳಲ್ಲಿ ಯಾಜಿ ಹೆಸರು ಮಾಡಿದರು. ಯಾಜಿಯವರ "ಭೀಷ್ಮ" ಅನೇಕ ಪ್ರದರ್ಶನ ಕಂಡಿದೆ. ಕಾರ್ತವೀರ್ಯ, ರಾವಣ, ಅರ್ಜುನ ಮುಂತಾದ ಪಾತ್ರಗಳಲ್ಲಿಯೂ ಅಭಿನಯಿಸುವ ಇವರು ಯಾವ ಪಾತ್ರವನ್ನೆ ಆಗಲಿ ನಿರ್ವಹಿಸುವ ಸಾಮರ್ಥ್ಯವುಳ್ಳವರು.

ಕೃಷ್ಣಯಾಜಿಯವರಿಗೆ ಯಕ್ಷಗಾನಕ್ಕೊಪ್ಪುವ ಉತ್ತಮ ಧ್ವನಿಯಿದೆ. ಮಾತುಗಾರಿಕೆಗೆ ಲಯವಿದೆ. ಚುರುಕಾದ ಸಂಭಾಷಣೆ ವ್ಯಂಗ್ಯೋಕ್ತಿಗಳ ಬಳಕೆ ಹಿತಮಿತವಾದ ಅಭಿನಯ, ಗತ್ತುಗಾರಿಕೆ, ಸಾಂದರ್ಭಿಕವಾಗಿ ಹಾಸ್ಯಪ್ರಜ್ಞೆ ಎಲ್ಲವನ್ನೂ ಮೈಗೂಡಿಸಿಕೊಂಡು ದಕ್ಷಿಣೋತ್ತರ ಕನ್ನಡ ಜಿಲ್ಲೆಯಲ್ಲಿ ಹೆಸರು ಮಾಡಿದ್ದಾರೆ. ಪ್ರಸ್ತುತ ಕುಮಟಾ ತಾಲ್ಲೂಕಿನ ವಾಲಗಳ್ಳಿಯಲ್ಲಿ ನೆಲೆಸಿರುವ ಇವರು ಸಾಲಿಗ್ರಾಮ ಮೇಳದ ಪ್ರಮುಖ ಕಲಾವಿದರು. ಇವರ ಮೊಮ್ಮಗನು ನಾಲ್ಕನೆ ವಯಸ್ಸಿನಲ್ಲೆ ರಂಗಪ್ರವೇಶ ಮಾಡಿ ಬಾಲಪ್ರತಿಭೆ ಎನಿಸಿಕೊಂಡಿದ್ದಾನೆ.

೯. ಹಡಿನಬಾಳು ಶ್ರೀಪಾದಹೆಗಡೆ

ಮಾಳ್ಕೋಡು ಕುಟುಂಬದ ಶ್ರೀಪಾದ ಹೆಗಡೆ ಹಡಿನಬಾಳ ಕೆರೆಮನೆ ಮನೆತನಕ್ಕೂ ಸಂಬಂಧಿಗಳು. ವರ್ತಮಾನದಲ್ಲಿ ಸಾಂಪ್ರದಾಯಿಕ ರಂಗಭೂಮಿಯ ಪೌರಾಣಿಕ ವೇಷಗಾರಿಕೆಯಲ್ಲಿ ಹೆಸರಾದವರು. ಪಾತ್ರಧಾರಿ ಅಷ್ಟೆಅಲ್ಲದೆ ಬಣ್ಣಗಾರಿಕೆಯ ಚಿಂತನೆ ಮತ್ತು ಮಹತ್ವ ಅರಿತು ವೇಷ ಬರೆದುಕೊಂಡು ರಂಗದಲ್ಲಿ ಪರಿಣಾಮಕಾರಿಯಾಗಿ ಪಾತ್ರಾಭಿವ್ಯಕ್ತಿ ಮಾಡಬಲ್ಲವರಾಗಿದ್ದಾರೆ. ಇವರಿಗೆ

ಹಡಿನಬಾಳು ಸತ್ಯ ಹೆಗಡೆಯವರು ಆರಂಭಿಕ ಗುರುಗಳಾಗಿದ್ದಾರೆ. ಹಡಿನಬಾಳ ಶ್ರೀಪಾದ ಹೆಗಡೆ ವರ್ತಮಾನದ ಪ್ರಸಿದ್ಧ ಕಲಾವಿದರು. ಮಹಾಬಲ ಹೆಗಡೆಯವರ ಪಾತ್ರ ನಿರ್ವಹಣೆಯ ಕ್ರಮವನ್ನು ಇವರ ಅಭಿನಯದಲ್ಲೂ ನೋಡಲು ಸಾಧ್ಯ.[೨೪]

ಮೂಲತಃ ಗುಂಡಬಾಳಾ ಮೇಳದಲ್ಲಿ ಹಾಸ್ಯಕಲಾವಿದರಾದ ಇವರು ಅಮೃತೇಶ್ವರಿ ಮೇಳದ ಮೂಲಕ ಇತರ ವೇಷಗಾರಿಕೆ ಆರಂಭಿಸಿ ವೃತ್ತಿ ಕಲಾವಿದರಾದರು. ಅಮೃತೇಶ್ವರಿ, ಸಾಲಿಗ್ರಾಮ, ಪೆರ್ಡೂರು, ಮಂದರ್ತಿ, ಮಾರಣಕಟ್ಟೆ, ಸಿರ್ಸಿ ಮಾರಿಕಾಂಬ ಮೇಳ, ಕೆರೆಮನೆ ಮುಂತಾದ ಮೇಳಗಳಲ್ಲಿ ಪಾತ್ರ ಮಾಡಿದ್ದಾರೆ.

ಹನುಮಂತ ಇವರಿಗೆ ಒಲಿದ ಪಾತ್ರವಾಗಿದೆ. ದಕ್ಷ, ಕಂಸ, ಅರ್ಜುನ, ಬಲರಾಮ ಭೀಷ್ಮನ ಪಾತ್ರದಲ್ಲಿ ಗತ್ತು ಗಾಂಭೀರ್ಯ ನವಿರಾದ ಕುಣಿತ, ಲಯಗಾರಿಕೆಯಿಂದ ಪ್ರಸಿದ್ಧರು. ಇವರು ಯಕ್ಷಗಾನದ ಹಿಂದಿನ ತಲೆಮಾರಿನ ಸಾಂಪ್ರದಾಯಿಕ ಕುಣಿತದ ಶೈಲಿಯನ್ನು ಬಲ್ಲ ಅಪರೂಪದ ಕಲಾವಿದರಾಗಿದ್ದಾರೆ.

೧೦. ಹಡಿನಬಾಳು ಸತ್ಯ ಹೆಗಡೆ

ಹಡಿನಬಾಳು ರಾಮಹೆಗಡೆ ಮತ್ತು ಸಾವಿತ್ರಿಯ ಪುತ್ರರಾಗಿ ೨೦-೧೦-೧೯೨೮ರಲ್ಲಿ ಜನಿಸಿದರು. ಎರಡನೆ ತರಗತಿಯವರೆಗೆ ವಿದ್ಯಾಭ್ಯಾಸ. ಗೋಪಿನಾರಾಯಣ ಹೆಗಡೆ ಹಡಿನಬಾಳು ಇವರಲ್ಲಿ ಅಭ್ಯಾಸ ಮಾಡಿದರು. ೧೯೪೪ರಲ್ಲಿ ಯೋಗಿನಿ ಕಲ್ಯಾಣದ ಕೌಂಡ್ಲೀಕ ಇವರ ಮೊದಲ ಪಾತ್ರವಾಗಿತ್ತು. ೧೯೪೭ ರಿಂದ ೧೯೮೩ರವರೆಗೆ ಗುಂಡಬಾಳಾ ಮೇಳದ ಕಲಾವಿದರಾಗಿ ಪ್ರಸಿದ್ಧರಾದರು. ಕೃಷ್ಣ, ದುಷ್ಟಬುದ್ಧಿ, ಸುಧನ್ವ, ಹಂಸಧ್ವಜ, ದುರ್ಜಯ, ಹರಿಶ್ಚಂದ್ರ, ವಿಶ್ವಾಮಿತ್ರ ದಶರಥ, ಹನುಮಂತ, ಈಶ್ವರ, ಕೌರವ, ದುಷ್ಟಬುದ್ಧಿ ಮುಂತಾದ ಪಾತ್ರಗಳಲ್ಲಿ ಪ್ರಸಿದ್ಧಿ ಪಡೆದಿದ್ದರು. ಇವರಿಗೆ ಹನುಮಂತನ ಪಾತ್ರ ತುಂಬ ಪ್ರಸಿದ್ಧಿಯನ್ನು ತಂದುಕೊಟ್ಟಿತು. ಎಲ್ಲಾ ತೆರನಾದ ಪಾತ್ರಗಳನ್ನು ನಿರ್ವಹಿಸಿ ಸವ್ಯಸಾಚಿ ಕಲಾವಿದರಾಗಿದ್ದರು. ಸೂಕ್ಷ್ಮ ಅಭಿನಯದ ಮೂಲಕ ಪಾತ್ರಾಭಿವ್ಯಕ್ತಿಯನ್ನು ಮಾಡುವ ಸಾಮರ್ಥ್ಯವಿತ್ತು. ಹನುಮಂತನ ಪಾತ್ರ ನಿರ್ವಹಣೆಯಲ್ಲಿ ಭಾವುಕರಾಗಿ ಅಭಿನಯಿಸುತ್ತಿದ್ದರು. ಗುಂಡಬಾಳ ಮೇಳದಲ್ಲಿ ದೈವಭಕ್ತಿಯಿಂದಲೆ ದೀರ್ಘಕಾಲ ಸೇವೆ ಸಲ್ಲಿಸಿದರು.[೨೩]

೬.೪.೨. ಬಡಗು – ೨

➤ ಗೋಡೆನಾರಾಯಣ ಹೆಗಡೆ

'ಗೋಡೆ' ಎಂದೆ ಗುರುತಿಸುವ ಸಿದ್ದಾಪುರ ಕೂರ್ಲಕೈ ನಾರಾಯಣ ಹೆಗಡೆ ಹುಟ್ಟಿದ್ದು ದಿನಾಂಕ: ೧೫-೨-೧೯೪೦ ರಲ್ಲಿ ತಂದೆ ಗೋಡೆ ತಿಮ್ಮಯ್ಯ ಹೆಗಡೆ, ತಾಯಿ ಗೌರಮ್ಮ. ಐದನೆ ತರಗತಿಯವರೆಗೆ ವಿದ್ಯಾಭ್ಯಾಸ, ಯಕ್ಷಗಾನದ ಗುರುಕೊಳಗಿ ಸೀತಾರಾಮ ಭಾಗವತರು ಮತ್ತು ಕಾನಗೋಡು ಗಣೇಶಯ್ಯನವರು.

---

೨೩. ಕ್ಷೇತ್ರಕಾರ್ಯ – ಹಡಿನಬಾಳ ಶ್ರೀಪಾದ ಹೆಗಡೆಯವರ ಸಂದರ್ಶನ.

➢ ಗೋಡೆಯವರು ಪಾತ್ರನಿರ್ವಹಿಸಿದ ಮೇಳಗಳು

೧. ಸೀತಾರಾಮಚಂದ್ರ ಯಕ್ಷಗಾನ ಮಂಡಳಿ ಹಣಜಿಬೈಲು, ಮಹಾಗಣಪತಿ ಯಕ್ಷಗಾನ ಮಂಡಳಿ ಬಿಳಿಯೂರು, ಗೋಪಾಲಕೃಷ್ಣ ಯಕ್ಷಗಾನ ಮಂಡಳಿ ದೊಡ್ಡೇರಿ, ಸಿದ್ದಿವಿನಾಯಕ ಯಕ್ಷನಾಟ್ಯ ಸಂಘ ಶಿರಳಗಿ.

೨. ವೃತ್ತಿಮೇಳ, ಇಡಗುಂಜಿ ಮೇಳ (೧೯೭೩) ಅಮೃತೇಶ್ವರಿ, ಪಂಚಲಿಂಗೇಶ್ವರ, ಮೂಲ್ಕಿ, ಮಾರಿಕಾಂಬಾ ಮೇಳ.

ವಾಲಿವಧೆಯ ತಾರೆಯಾಗಿ (೧೪ನೆ ವರ್ಷದಲ್ಲಿ) ಮೊದಲ ವೇಷ ಮಾಡಿದರು. ಸ್ತ್ರೀ ವೇಷಧಾರಿಯಾಗಿ ಆರಂಭಿಸಿ ಅನೇಕ ವರ್ಷ ಸ್ತ್ರೀ ವೇಷದಲ್ಲೆ ಪ್ರಸಿದ್ಧರಾಗಿದ್ದರು. ಇಡಗುಂಜಿ ಮೇಳದಲ್ಲಿ ಶಂಭುಹೆಗಡೆಯವರೊಂದಿಗೆ ಬ್ರಹ್ಮ, ... ಇತ್ಯಾದಿ ಪಾತ್ರಗಳು ಪ್ರಸಿದ್ಧವಾಗಿದೆ. ಕೌರವ, ತ್ರಿಶಂಕು, ರಾವಣ, ಅಕ್ರೂರ, ಅರ್ಜುನ, ಸಾಲ್ವ, ದೇವವ್ರತ, ಪ್ರಮೀಳೆ, ದ್ರೌಪದಿ, ಪ್ರಭಾವತಿ ಇತ್ಯಾದಿ ಪಾತ್ರಗಳಲ್ಲಿ ಗೋಡೆ ಪ್ರಸಿದ್ಧರು.

ಗೋಡೆಯವರು ಅಭಿನಯಿಸಿದ "ಗದಾಯುದ್ಧ" ಕೌರವ ಜನಪ್ರಿಯಗೊಂಡಿದೆ. ಇದು ಪ್ರಥಮ 'ವೀಡಿಯೋ ಕ್ಯಾಸೆಟ್' ಆಗಿ ಬಿಡುಗಡೆಗೊಂಡಿದೆ.

ತನ್ನದೆ ಸ್ವಂತ ಶೈಲಿಯಿಂದ ಪಾತ್ರಕ್ಕೆ ಜೀವ ತುಂಬಿ ಅಭಿನಯಿಸಿದರು. ಹಿತಮಿತವಾದ ಮಾತು, ಲಯಬದ್ಧ ಅರ್ಥಗಾರಿಕೆ, ಕುಣಿತ ಸೂಕ್ಷ್ಮಾಭಿನಯ ಕಿರುಕುಣಿತಗಳಿಂದ ಗೋಡೆ ಪ್ರಸಿದ್ಧರು. ರಾಜ್ಯ ಪ್ರಶಸ್ತಿ ವಿಜೇತರು. ಇವರ ಅಭಿನಂದನಾಗ್ರಂಥ 'ಗೋಡೆಗಾರುಡಿ' ಆತ್ಮಕಥನ ಗೋಡೆ ಚಿತ್ತಾರ ಬಿಡುಗಡೆಗೊಂಡಿದೆ.

➢ ಕೆರೆಮನೆ ವೆಂಕಟಾಚಲ ಭಟ್ಟರು:

ಸಿದ್ಧಾಪುರದ ಕಾನಸೂರು ಕೆರೆಮನೆ ಎಂಬಲ್ಲಿ ೧-೯-೧೯೩೬ರಲ್ಲಿ ಜನಿಸಿದರು. ಬಾಲ್ಯದಲ್ಲಿ ಯಕ್ಷಗಾನವನ್ನು ಕಲಿಸಿದ ಗುರು ಪರಮೇಶ್ವರ ಭಟ್ಟರು. ಇವರು ಶೀಗೆಹಳ್ಳಿಯ ಕಲ್ಲೇಶ್ವರ ಪ್ರಾಸಾವಿಕ ಯಕ್ಷಗಾನ ಮಂಡಳಿಯ ವ್ಯವಸ್ಥಾಪಕರಾಗಿದ್ದರು.

ಶಂಭುಹೆಗಡೆಯವರ ಆಮಂತ್ರಣದ ಮೇರೆಗೆ ಕೆರೆಮನೆ ಮೇಳ ಸೇರಿದರು. ೧೯೬೬ರಲ್ಲಿ ಕೆರೆಮನೆಯ ಕಲಾವಿದರಾಗಿ ಸಂಚಾರ ಆರಂಭಿಸಿದರು. ಅಂಬೆ, ಸೈರಂಧ್ರಿ, ಕಂಸವಧೆಯಲ್ಲಿ ದೇವಕಿ, ಗದಾಪರ್ವ ಮತ್ತು ಕರ್ಣಪರ್ವದ ಕೃಷ್ಣ ಪ್ರಸಿದ್ಧ ಪಾತ್ರಗಳು. ೧೯೬೯ರಲ್ಲಿ ದೆಹಲಿ, ೧೯೭೩ ಬೆಂಗಳೂರು, ೧೯೭೬ರಲ್ಲಿ ಬೆಂಗಳೂರಿನಲ್ಲಿ ತಂಡದೊಂದಿಗೆ ಪ್ರದರ್ಶನದಲ್ಲಿ ಪಾಲ್ಗೊಂಡರು.

ಸುಧನ್ವಾರ್ಜುನದ ಪ್ರಭಾವತಿ, ಕೃಷ್ಣ ಸಂಧಾನದ ವಿದುರ, ಬಬ್ರುವಾಹನ ಕಾಳಗದ ಚಿತ್ರಾಂಗದೆ ಕೆರೆಮನೆಯವರ ಪ್ರಸಿದ್ಧ ಪಾತ್ರಗಳು.

ಯಕ್ಷಗಾನ ಅರ್ಥಗಾರಿಕೆಯಲ್ಲಿ ಇವರು ಅಪೂರ್ವ ಸಿದ್ಧಿ ಸಾಧಿಸಿದವರು. ಇವರು ತಾಳಮದ್ದಳೆ ಹಾಗೂ ರಂಗದಲ್ಲಿ ಅಭಿನಯ, ಮಾತುಗಾರಿಕೆಗೆ ಅಪಾರ ಪ್ರಸಿದ್ಧತೆ ಗಳಿಸಿದ್ದಾರೆ.

೬.೪.೧.೨. ತೆಂಕಿನ ವಿಶಿಷ್ಟ ವೇಷಧಾರಿಗಳು

೧. ಮಾಡಂಗಾಯಿ ಮನೆತನ

ಮಾಣಂಗಾಯಿ ಮನೆತನ ತೆಂಕಿನ ವಿಶಿಷ್ಟ ಕಲಾವಿದರ ಮನೆತನವಾಗಿದೆ. ಮಾಣಂಗಾಯಿ ನಾರಾಯಣಭಟ್ಟರು ಹಿರಿಯ ಕಲಾವಿದರು. ಇವರು ದಕ್ಷಿಣ ಕನ್ನಡದ ಹಳೆಯ ಮೇಳಗಳಲ್ಲಿ ವೇಷ ಮಾಡುತ್ತಿದ್ದರು. ಇವರ ವೇಷಗಾರಿಕೆ ಕುರಿತು ಹಿರಿಯ ತಲೆಮಾರಿನ ಜನರು ಮಾತನಾಡಿಕೊಳ್ಳುತ್ತಾರೆ. ನಾರಾಯಣಭಟ್ಟರು ಚಿಟ್ಟಿ ಇಟ್ಟು ಬಣ್ಣದ ಮೇಷ ಮಾಡುತ್ತಿದ್ದರು.

೨. ಮಾಡಂಗಾಯಿ ಕೃಷ್ಣಭಟ್ಟರು

ನಾಟಕೀಂಯುತೆಂಯುನ್ನು ವೇಷಗಾರಿಕೆಂಯುಲ್ಲಿ ರೂಢಿಸಿಕೊಂಡರು. ನಾಟಕೀಂಯು ವೇಷಭೂಷಣಗಳನ್ನು ರೂಢಿಗೆ ತಂದರು. ಇವರು ನಿರ್ವಹಿಸಿದ ಹಿರಣ್ಯಕಶ್ಯಪು, ಕಂಸನ ಪಾತ್ರ ಅತ್ಯಂತ ಪ್ರಸಿದ್ಧವಾಗಿತ್ತು. ಕಂಸನ ಪಾತ್ರದಲ್ಲಿ ಕೃಷ್ಣಭಟ್ಟರು ಅಪಾರ ಜನಮೆಚ್ಚುಗೆ ಪಡೆದಿದ್ದರು. ಇವರಿಗೆ ಕಂಸಭಟ್ಟರೆಂದೆ ಜನರು ಕರೆಯುತ್ತಿದ್ದರು. ಮೂರೂರು ದೇವರು ಹೆಗಡೆಯವರು ಇವರಿಂದ ಪ್ರಭಾವಿತರಾಗಿದ್ದರು. ಹಿರಣ್ಯಕಶ್ಯಪುವಿನ ಪಾತ್ರವನ್ನು ಅಭೂತಪೂರ್ವವಾಗಿ ಅಭಿನಯಿಸುತ್ತಿದ್ದರು. ಕೂಡ್ಲು, ಇರಾ, ಧರ್ಮಸ್ಥಳ ಮೇಳದಲ್ಲಿ ಕಲಾವಿದರಾಗಿದ್ದರು.

೩. ಕಡಾರು ನಾರಾಯಣಭಟ್ಟರು – ೧೯೪೫–೧೯೭೦

ಪ್ರಸಿದ್ಧ ಪಾತ್ರಧಾರಿ, ಇವರು ಕಾಸರಗೋಡಿನವರು. ಪೀಠಿಕೆ ವೇಷವನ್ನು ಇತರ ಪ್ರಮುಖ ವೇಷವನ್ನು ಮಾಡುತ್ತಿದ್ದರು. "ಇವರಿಗೆ ಅತಿಕಾಯ ಭಟ್ಟರು" ಎಂದೆ ಕರೆಯಲಾಗುತ್ತಿತ್ತು. ಸುಂದರವಾದ ವೇಷ ಇವರದಾಗಿತ್ತು. ಅತಿಕಾಯನ ಪಾತ್ರಕ್ಕೆ ಪ್ರಸಿದ್ಧರಾಗಿದ್ದರು.

೪. ಕೊಳ್ಳೂರು ನಾರಾಯಣ ಭಟ್ಟರು

ಹಿರಿಯ ನಾರಾಯಣ ಭಟ್ಟರು. ಇವರು ತೆಂಕಿನ ಖಳಪಾತ್ರಗಳಿಗೆ ಪ್ರಸಿದ್ಧರು. ಕಂಸ, ಮಾಗಧ, ಇಂದ್ರಜಿತು ಇವರ ಪ್ರಸಿದ್ಧ ಪಾತ್ರವಾಗಿತ್ತು.

೫. ಎರಡನೆ ಕೊಳ್ಳೂರು ನಾರಾಯಣಭಟ್ಟರು

ಕಿರಿಯ ನಾರಾಯಣಭಟ್ಟರು, ಅರ್ಜುನ, ದೇವೇಂದ್ರ, ಕರ್ಣನ ಪಾತ್ರವನ್ನು ನಿರ್ವಹಿಸುತ್ತಿದ್ದರು. ಇವರು ಪಾತ್ರನಿರ್ವಹಣೆಯಲ್ಲಿ ಕುಣಿತ, ಅಭಿನಯಗಳು, ಭಾವಾಭಿವ್ಯಕ್ತಿಗಳಲ್ಲಿ ವಿಶೇಷ ಸಿದ್ಧಿ ಪಡೆದಿದ್ದರು. ಕರ್ಣನ ಪಾತ್ರದ ನಿಸ್ಸಾಹಾಯಕತೆಯ ಶೋಕವನ್ನು ಅಭಿವ್ಯಕ್ತಿಸುವುದರಲ್ಲಿ ಎತ್ತಿದಕೈ: ಇವರ ಕರ್ಣನ ಪಾತ್ರ ಅನೇಕ ಕಲಾವಿದರಿಗೆ ಸ್ಫೂರ್ತಿಯಾಗಿತ್ತು.

೬. ಪುತ್ತೂರು ಕೃಷ್ಣಭಟ್ಟರು

ಧರ್ಮಸ್ಥಳ ಮೇಳದ ಕಲಾವಿದರಾಗಿ ಸೇವೆಗೈದಿದ್ದಾರೆ. ಇಂದ್ರಜಿತು, ಅತಿಕಾಯ, ಸುಂದರವಾದ ಪಾತ್ರಗಳಾಗಿದ್ದವು. ಇವ ಉತ್ತಮ ಮಾತುಗಾರಿಕೆ, ಗತ್ತು, ಗಾಂಭೀರ್ಯದಿಂದ ಪಾತ್ರ ಪೋಷಣೆ ಮಾಡುವುದರ ಮೂಲಕ ಪಾತ್ರಕ್ಕೆ ಕಳೆ ನೀಡುತ್ತಿದ್ದರು.

೭. ಹೊಸಹಿತ್ಲು ಗಣಪತಿ ಭಟ್ಟರು

ತೆಂಕುತಿಟ್ಟಿನ ಗದಾಯುದ್ಧದ ಕೌರವನ ಪಾತ್ರಕ್ಕೆ ಹೆಸರಾಗಿದ್ದರು. ಇವರು ಇರಾ ಸೋಮೇಶ್ವರ ಮೇಳದ ಹಿರಿಯ ಕಲಾವಿದರಾಗಿದ್ದರು. ಇವರು ಮಾಗಧ, ಕಂಸ ಮುಂತಾದ ಪಾತ್ರಗಳನ್ನು ನಿರ್ವಹಿಸಿದರೂ ಕೌರವ ಅವರಿಗೆ ಕೀರ್ತಿತಂದ ಪಾತ್ರವಾಗಿತ್ತು.

೮. ವೇಣೂರು ವೆಂಕಟ್ರಮಣ ಭಟ್ಟ

ವೇಣೂರು ವೆಂಕಟ್ರಮಣ ಭಟ್ಟರು, ಪುರೋಹಿತರು ಆಗಿದ್ದರು. ಇವರು ಇರಾ ಸೋಮನಾಥೇಶ್ವರ ಮೇಳದಲ್ಲಿ ಕಲಾವಿದರಾಗಿ ಹೊಸಹಿತ್ಲು ಗಣಪತಿಭಟ್ಟರ ನಂತರ ಅವರು ನಿರ್ವಹಿಸುವ ಪಾತ್ರಗಳನ್ನು ನಿರ್ವಹಿಸಿದರು. ಹೊಸಹಿತ್ಲು ಗಣಪತಿಭಟ್ಟರು ಕೌರವನ ವೇಷಗಾರಿಕೆ ಪ್ರಸಿದ್ಧರಾಗಿದ್ದರು. ಅದೇ ಪಾತ್ರವನ್ನು ವೇಣೂರು ವೆಂಕಟ್ರಮಣ ಭಟ್ಟರು ನಿರ್ವಹಿಸಿ ಮೆಚ್ಚುಗೆಗಳಿಸಿದರು. ಗದಾಯುದ್ಧದ ಕೌರವ ಭೀಷ್ಮ ವಿಜಯದ ಭೀಷ್ಮ ಕರ್ಣಪರ್ವದ ಕರ್ಣ ಪಾತ್ರದಲ್ಲಿ ಅಪಾರ ಯಶಸ್ಸು ಗಳಿಸಿದ್ದರು.

೯. ಕುರಿಯ ವಿಠ್ಠಲ ಶಾಸ್ತ್ರಿ

ತೆಂಕುತಿಟ್ಟಿನಲ್ಲಿಕುರಿಯ ಮನೆತನ ವೇಷಗಾರಿಕೆ ಭಾಗವತಿಕೆಎರಡರಲ್ಲೂ ಪ್ರಸಿದ್ಧವಾಗಿತ್ತು. ಕುರಿಯ ವಿಠ್ಠಲ ಶಾಸ್ತ್ರಿಗಳು ಧರ್ಮಸ್ಥಳ ಮೇಳದ ಪ್ರಮುಖಕಲಾವಿದರಾಗಿ ಸಂಘಟಕರಾಗಿ ದೀರ್ಘಕಾಲ ಮೇಳದಲ್ಲಿದ್ದರು.

ಬಾಲ್ಯದಲ್ಲಿ ಪಟ್ಟಾಭಿಷೇಕ ಯಕ್ಷಗಾನ ನೋಡಿ ಪ್ರೇರಿತರಾದರು ಆ ಕಾಲದಲ್ಲಿ ಕೂಡ್ಲು ಮೇಳ ಪ್ರಸಿದ್ಧವಾಗಿತ್ತು. ಹೊಸಹಿತ್ಲು ಗಣಪತಿಭಟ್ಟರು ಪಾತ್ರಗಳು ಪ್ರಸಿದ್ಧ ಪಡೆದ ಕಾಲವದಾಗಿತ್ತು. ಅರ್ಥದಾರಿಯಾಗಿ ಮೊದಲ ಕಲಾ ಜೀವನ ಆರಂಭಗೊಂಡಿತು. ನಾರಾಯಣ ಪ್ರಸಾದಿತ ಯಕ್ಷಗಾನ ನಾಟಕ ಮಂಡಳಿಯಲ್ಲಿ ನಾಟಕದಲ್ಲಿ ಪಾತ್ರ ಆರಂಭಿಸಿದರು. ಇವರಿಗೆ ನಾಟಕೀಯ ವೇಷಗಾರಿಕೆ ಶೈಲಿ ಇಲ್ಲದಂತೆ ಆರಂಭಗೊಂಡಿತು.

ಧರ್ಮಸ್ಥಳ ಮೇಳದ ಕಲಾವಿದರಾಗಿ ಕಲಾಜೀವನ ಆರಂಭಗೊಂಡಿತು. ಕುರಿಯ ವಿಠ್ಠಲ ಶಾಸ್ತ್ರಿಗಳು ಕೃಷ್ಣ ರೀತಿಯ ಕೃಷ್ಣನಾಗಿ, ಬ್ರಹ್ಮಕಪಾಲದ ಈಶ್ವರ, ದಕ್ಷಯಜ್ಞದ ಈಶ್ವರ, ವಿಶ್ವಾಮಿತ್ರ–ಮೇನಕಾದ ವಿಶ್ವಮಿತ್ರಚೂಡಾಮಣಿಯ ಹನುಮಂತನಾಗಿ ರಂಗದಲ್ಲಿ ಮಿಂಚಿದರು.

ವಿಠ್ಠಲಶಾಸ್ತ್ರಿಗಳು ಪಾತ್ರಗಳಿಗೆ ಹೊಸ ಮಾದರಿಯನ್ನು ನಿರ್ಮಿಸಿಕೊಟ್ಟರು. ಕರ್ಣ ಪರ್ವದಕರ್ಣನಾಗಿ "ಶಿವಶಿವಾ ಸಮರದೊಳು ಕೈಸೋತೆನಲ್ಲ" ಪದ್ಯಾಭಿನಯ ಅದ್ಭುತವಾಗಿ ಮಾಡುತ್ತಿದ್ದರು. ವಿದ್ಯುನ್ಮತಿ ಕಲ್ಯಾಣಜಯಂತಚಿತ್ರಕೇತ, ಕೃಷ್ಣಾರ್ಜುನ ಕೃಷ್ಣ, ಶಶಿಪ್ರಭಾ ಪರಿಣಯದ ಮಾರ್ತಾಂಡತೇಜ

ಪಾತ್ರಗಳು ವಿಶೇಷವಾಗಿತ್ತು. ದುಷ್ಟಬುದ್ಧಿ, ಕಂಸಚಂಡಾಸುರ ಪಾತ್ರಗಳನ್ನು ಮೈಬಿಟ್ಟು ಮಾಡುತ್ತಿದ್ದರು.

ಕುರಿಯ ವಿಠ್ಠಲಶಾಸ್ತ್ರಿಗಳು ೦೮/೦೯/೧೯೧೨ ರಲ್ಲಿ ಜನಿಸಿ ೧೮/೧೧/೧೯೭೨ ರಲ್ಲಿ ನಿಧನರಾದರು. ದೀರ್ಘಕಾಲ ಧರ್ಮಸ್ಥಳ ಮೇಳದಲ್ಲಿ ಪಾತ್ರಮಾಡಿದರು. ಇವರು ಮಾಡಿದ ಪಾತ್ರಗಳು ಇಂದಿಗೂ ಜೀವಂತವಾಗಿದೆ.

೧೦. ಡಾ. ಶೇಣಿ ಗೋಪಾಲ ಕೃಷ್ಣ ಭಟ್ಟರು

ಯಕ್ಷಗಾನ ಕಲಾವಿದರಾಗಿ ಪ್ರಸಿದ್ಧರಾದವರು ಹಲವರಾದರೆ ಶೇಣಿಯವರಿಂದ ಯಕ್ಷಗಾನ ಅರ್ಥಗಾರಿಕೆಯೆ ಪ್ರಸಿದ್ಧವಾಯಿತು. ಇವರ ಅರ್ಥಗಾರಿಕೆಯನ್ನು ಸರಸ್ವತಿಯ ತೀರ್ಥಾವತಾರ ಎಂದು ಭಾವಿಸಲಾಗಿದೆ. ಶೇಣಿಯವರು ಕೇವಲ ಅರ್ಥಧಾರಿಯಲ್ಲ ಪಾತ್ರಧಾರಿಯು ಹೌದು. ಹರಿದಾಸರೂ ಆಗಿ ಪ್ರಸಿದ್ಧರು. ಹರಿದಾಸರಾದ ಶೇಣಿ ಯಕ್ಷಗಾನಕ್ಕೆ ಕಾಲಿಟ್ಟಾಗಲೆ ಯಕ್ಷಗಾನ ಅಂದಿನ ತಲೆಮಾರಿನ ಕಣ್ಣು ತೆರೆಸಿತು. ಕೇವಲ ಕಲೆಯಾಗಿ ಆಸ್ವಾದನೆಗೊಳ್ಳುತ್ತಿದ್ದ ಯಕ್ಷಗಾನಕ್ಕೆ ವೈಚಾರಿಕತೆ, ಸೈದ್ಧಾಂತಿಕತೆ, ತತ್ವಧಾರಿತ ಪಾತ್ರಪೋಷಣೆಯನ್ನು ಕೇಳಲು, ನೋಡಲು ಜನ ಯಕ್ಷಗಾನದತ್ತ ಮುಖಮಾಡಿದರು. ವಿದ್ಯಾವಂತರಿಂದ ಪಂಡಿತರವರೆಗೆ ಶೇಣಿಯವರ ಪಾತ್ರಗಳು ಆಕರ್ಷಿಸಿದವು. ವೇಷಧಾರಿಯಾಗಿ ಶೇಣಿ ತೆಂಕುತಿಟ್ಟಿನ ವಿವಿಧ ಮೇಳಗಳಲ್ಲಿ ಅಭಿನಯಿಸಿ ಅಪಾರಜಯ ಮೆಚ್ಚುಗೆಗಳಿಸಿದರು.

ಶೇಣಿಯವರು ನಿರ್ವಹಿಸಿದ ಪಾತ್ರಗಳು ವಾಲಿ, ಕಂಸ, ಜರಾಸಂಧ, ಕೌರವ, ರಾಮ, ಕೃಷ್ಣ, ದುಷ್ಟಬುದ್ಧಿ ಚಂದಗೋಪ, ಒಪ್ಪಬ್ಯಾರಿ, ವಲಲ ಭೀಮ, ಇವೆಲ್ಲ ಪ್ರಸಿದ್ಧವೇ. ಶೇಣಿ ಎಲ್ಲಾ ಪಾತ್ರಗಳೂ ಆಕರ್ಷಣೀಯವಾದರೂ "ಒಪ್ಪ ಬ್ಯಾರಿ" ಶೇಣಿಯವರಿಗೆ ವಿಶೇಷ ಹೆಸರನ್ನು ತಂದಿತು. ಹಿಂದು ಮುಸ್ಲಿಂ ಮತಗಳ ಸಮನ್ವಯ ಕಲೆಯಿಂದ ಸಾಧ್ಯ ಎಂದು ಶೇಣಿ ತೋರಿಸಿ ಕೊಟ್ಟರು.

ಶೇಣಿ ವೇಷಗಾರರಾಗಿ ರಂಗದಲ್ಲಿ 'ಕುಣಿತದ' ಕಲಾವಿದರಾಗಲೂ ಸಾಧ್ಯವಾಗಿಲ್ಲ ಅವರಿಗೆ ಕುಣಿತ ಸಿದ್ದಿಸಲು ಅವರು ಬಾಲ್ಯದಿಂದಲೆ ಯಕ್ಷಗಾನ ರಂಗಕ್ಕೆ ಬಂದವರಲ್ಲ ಹಾಗೂ ಯಕ್ಷಗಾನದ ಎಲ್ಲಾ ವೇಷಗಳಲ್ಲೂ ಕುಣಿದು ಪ್ರಮುಖ ವೇಷಕ್ಕೆ ಬಂದ ಅವರು ರಂಗಕ್ಕೆ ಕಾಲಿಟ್ಟಾಗಲೇ ಪ್ರಮುಖ ವೇಷಧಾರಿಯಾದರು.

ಆದರೂ ರಂಗತಂತ್ರ, ರಂಗಚಲನೆ, ರಂಗಕ್ರಿಯೆಯನ್ನು ಆಳವಾಗಿ ಅರ್ಥೈಸಿಕೊಂಡ ಶೇಣಿ ಮಾತಿನಿಂದಲೆ ರಂಗದಲ್ಲಿ ಮಹಾನ್ ಕಲಾವಿದರಾಗಿ ಶೇಣಿಯವರ ಕುಣಿಯವರ ಕುಣಿತವೂ ಅವರ ಯಶಸ್ಸಿಗೆ ಪೂರಕವಾಯಿತು.

ಕಿರು ಹೆಜ್ಜೆಗಳಿಂದ ರಂಗದಲ್ಲಿ ಸುತ್ತು ಹಾಕಿ ಲಯಕ್ಕೆ ಭಂಗ ಬರುವಂತೆ ಅಭಿನಯಿಸುವುದು ಅವರ ಶೈಲಿ. ಕಣ್ಣು ಹುಬ್ಬುಗಳ ಚಲನೆಯಲ್ಲಿ ಶೇಣಿ ಭಾವಾಭಿವ್ಯಕ್ತಿ ಮಾಡಿ ರಂಗದಲ್ಲಿ ಭಾವಾಭಿವ್ಯಕ್ತಿಗೆ ಪೂರಕವಾದ ಮೂಖಾಭಿವ್ಯಕ್ತಿಯಿಂದ ಅಭಿಜಾತ ನಟನಾಗಿ ಮೆರೆಯುವುದು. ಶೇಣಿಯವರ ಪ್ರತಿಭೆ.

ವೇಷಗಾರರಾಗಿ ಶೇಣಿ ದೃಶ್ಯ ನಿರ್ಮಾಣ ಮಾಡಲು ಸಮರ್ಥರಾಗಿದ್ದರು. ತಿರುಪತಿ ಮಹಾತ್ಮೆಯ ಮಾಧವ ಭಟ್ಟ, ಶನಿಮಹಾತ್ಮೆ ವಿಕ್ರಮಾದಿತ್ಯನ ಪಾತ್ರ ಮಾಡುವಾಗ, ಬ್ರಾಹ್ಮಣ ಪ್ರವೇಶ,

ಸಂಗೀತ ಗಾಯನವನ್ನು ಏರ್ಪಡಿಸಿ ತಾವು ವ್ಯಾಖ್ಯಾನ ಮಾಡಿ ದೃಶ್ಯವನ್ನೆ ನಿರ್ಮಿಸುತ್ತಿದ್ದರು. ಚಂದಗೋಡ, ಮಾಧವಭಟ್ಟ, ರಾಘವೇಂದ್ರಸ್ವಾಮಿ, ಬಪ್ಪ ಬ್ಯಾರಿ ಪಾತ್ರಗಳ ವೇಷಗಾರಿಕೆ ಲೋಕಾನುಭವದ ಹಿನ್ನೆಲೆಯಲ್ಲಿ ಮನೋಜ್ಞವಾಗಿ ಮಾಡಿ ಪಾತ್ರಕ್ಕೆ ಸಹಜತೆಯನ್ನು ಮೂಡಿಸುತ್ತಿದ್ದರು.

ಕೂಡ್ಲುಮೇಳದಲ್ಲಿ ಸಂಚಾಲಕನಾಗಿ, ಸಂಘಟಕನಾಗಿ, ತೆಂಕಿನ ವಿವಿಧ ಮೇಳಗಳಲ್ಲು ಅತಿಥಿ ಕಲಾವಿದರಾಗಿ ಶೇಣಿಯವರ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ತಾಳಮದ್ದಳೆಯ ಅರ್ಥಧಾರಿಯಾಗಿ ಯಕ್ಷರಂಗದ ಸಾಮ್ರಾಟರಾಗಿ ಮೆರೆದರು.

೧೧. ಸೂರಿಕುಮೇರಿ ಗೋವಿಂದ ಭಟ್ಟ

ಕೆನಿಲ ಗೋವಿಂದ ಭಟ್ಟರು ತೆಂಕುತಿಟ್ಟಿನ ಹಿರಿಯ ಕಲಾವಿದರು. ಇವರು ಜನಿಸಿದ್ದು ೧೯೪೭ ಮಾರ್ಚ ೨೨, ಕುಕ್ಕಿಮನೆ ಬಂಟ್ವಾಳ ತಾಲೂಕು. ತಂದೆ ಶಂಕರನಾರಾಯಣ ಭಟ್ಟ, ತಾಯಿ ಲಕ್ಮೀ. ಅಮ್ಮ ಈಗ ತೀರ್ಥಹಳ್ಳಿ ತಾಲ್ಲೂಕಿನ ಹೆದ್ದೂರಿನಲ್ಲಿ ವಾಸವಾಗಿದ್ದಾರೆ.

ಧರ್ಮಸ್ಥಳ, ಮೂಲ್ಕಿ, ಕೂಡ್ಲು, ಸುರತ್ಕಲ್ ಇರಾಮೇಳದಲ್ಲಿದ್ದರು. ದೀರ್ಘಕಾಲ ಧರ್ಮಸ್ಥಳ ಮೇಳದ ಕಲಾವಿದರು.

ಇವರು ಕಲಾವಿದರು, ರಂಗತಜ್ಞರು, ಪ್ರಸಂಗಕರ್ತರು ಆಗಿದ್ದಾರೆ. ಧರ್ಮಸ್ಥಳ ಮೇಳದಲ್ಲಿ ನಲವತ್ತೈದಕ್ಕೂ ಹೆಚ್ಚು ಪ್ರಸಂಗಗಳಲ್ಲಿ ನೂರಾರು ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಸ್ತ್ರೀ ವೇಷ, ಪುಂಡು ವೇಷ, ಬಣ್ಣದ ವೇಷ, ರಾಜವೇಷಗಳಲ್ಲಿಯೂ ಪಾತ್ರಮಾಡಿದ ಸವ್ಯಸಾಚಿಗಳು ಕುರಿಯ ವಿಠ್ಠಲಶಾಸ್ತ್ರಿ, ಪರಮ ಶಿವನ್, ಮಾದವ ಮೆನ್‌ನ್‌ರಲ್ಲಿ ನೃತ್ಯಾಭ್ಯಾಸ ಮಾಡಿದ ಇವರು ಪಾತ್ರನಿರ್ವಹಣೆಯಲ್ಲಿ ನೃತ್ಯಕ್ಕೆ ಆದ್ಯತೆ ನೀಡುತ್ತಿದ್ದರು. ಶಾಸ್ತ್ರೀಯ ಹೆಜ್ಜೆಗಾರಿಕೆ, ಲಯಗಾರಿಕೆಯಿಂದ ಕೂಡಿದ ಕುಣಿತಕ್ಕೆ ಪ್ರಸಿದ್ಧರು ಭಾವಪೂರ್ಣ ಮಾತು, ಲಾಸ್ಯ ಪೂರ್ಣವಾದ ಪದ ಪ್ರಯೋಗ, ಶುದ್ಧವಾದ ಅಸ್ಖಲಿತ ನುಡಿ, ಇವರನ್ನು ಶ್ರೇಷ್ಠ ಮಾತುಗಾರನ್ನಾಗಿಸಿದೆ.

ಕೆ. ಗೋವಿಂದ ಭಟ್ಟರಿಗೆ ನೂರಾರು ಸನ್ಮಾನಗಳು ಪ್ರಶಸ್ತಿಗಳು ದೊರಕಿವೆ. ತೆಂಕುತಿಟ್ಟಿನ ಸರ್ವಾಂಗ ಸುಂದರ ಕಲಾವಿದರು ಇವರು.

೬.೫. ಇತರ ಕಲಾವಿದರು

೬.೫.೧. ಹಾಸ್ಯಗಾರ

ಹಾಸ್ಯಗಾರರೆಂದರೆ ನಗಿಸುವವ ಎಂಬುದು ಸಾಮಾನ್ಯ ಅರ್ಥ. ಒಬ್ಬನ ವೇಷ ಕಂಡು ಅಭಿನಯ ಕುಣಿತಗಳನ್ನು ಕಂಡು, ಮಾತು ಕೇಳಿ ನಗಬಹುದು. ಇವೆಲ್ಲವೂ ಯಕ್ಷಗಾನದಲ್ಲಿ ಹಾಸ್ಯಗಾರನ ಸಾಧ್ಯತೆಗಳು ಹಾಸ್ಯ ಪಾತ್ರಗಳಿಗೆ ಇದ್ದಷ್ಟು ಸ್ವಾತಂತ್ರ್ಯ ಮತ್ತೊಂದು ಪಾತ್ರಕ್ಕಿಲ್ಲ. ಅವುಗಳ ಜವಾಬ್ದಾರಿಯೂ ಅಷ್ಟೇ ಇದೆ. ಇಷ್ಟು ಸ್ವಾತಂತ್ರ್ಯವಿದ್ದರೂ ಅದು ಬೆಳೆಯುವುದು ಇದಿರು ಪಾತ್ರದ ಸಂಭಾಷಣೆಯ ಹಂತದಲ್ಲಿ, ಹಿಮ್ಮೇಳಗಳ ಸಹಕಾರದಲ್ಲಿ, ಇದಲ್ಲದೆ ಹಾಸ್ಯ ಪಾತ್ರಗಳಿಗೆ ನಗಿಸುವಷ್ಟೇ ಜವಬ್ದಾರಿಯಲ್ಲ,

ಪ್ರಸಂಗದ ಒಟ್ಟಂದವನ್ನು ಕಡೆದಂತೆ ಅವು ವ್ಯವಹರಿಸಬೇಕಾಗುತ್ತದೆ. ಇಂದಿನ ಯಕ್ಷಗಾನ ರಂಗದಲ್ಲಿ "ಸ್ವರ್ಗ ಲೋಕದ ದ್ವಾರದ ದೇವದೂತ ದೇವೇಂದ್ರನೊಡನೆ ಅಸಂಬದ್ಧವಾಗಿ ಹರಟುವುದು, ಋಷಿಮುನಿಗಳು, ಬ್ರಾಹ್ಮಣರು, ಮಂತ್ರಿಗಳು ಬುದ್ಧಿ ಸ್ವಾಧೀನವಿಲ್ಲದಂತೆ ಹಲುಬುವುದು ಮುಂತಾದ ವಾಕರಿಕೆ ತರಿಸುವಂತ ಹಲವಾರು ದೃಶ್ಯಗಳನ್ನು ನಾವು ಆಟದಲ್ಲಿ "ಹಾಸ್ಯ"ವೆಂಬ ಹೆಸರಿನಲ್ಲಿ ನೋಡುತ್ತೇವೆ. ಇದು ಹಾಸ್ಯವೆ? ಹಾಸ್ಯಾಸ್ಪದವೆ? ಎಂಬುದನ್ನು ಪ್ರೇಕ್ಷಕರು ಹಾಗೂ ಕಲಾವಿದರು ಅವಶ್ಯಕವಾಗಿ ಯೋಚಿಸಬೇಕಾಗಿದೆ.

ಯಕ್ಷರಂಗದಲ್ಲಿ ಮುಖ್ಯವಾಗಿ ಪೂರ್ವರಂಗದ ಹಾಸ್ಯಗಳು ಬದುಕಿ ಉಳಿದಿಲ್ಲ. ಆದರೆ ಕಥಾಪ್ರಸಂಗಕ್ಕೆ ಅನುಗುಣವಾಗಿ ಸಮಾಜದ ಹತ್ತು ಹಲವು ನಮೂನೆಯ ವರ್ಗದವರು ಇಲ್ಲಿ ಸಮಾವೇಶಗೊಂಡಿದ್ದಾರೆ.

ಯಕ್ಷಗಾನದ ಹಾಸ್ಯಗಾರ ತನ್ನ ಬಣ್ಣಗಾರಿಕೆಯಲ್ಲಿ ವಹಿಸಬೇಕಾದ ಕಾಳಜಿಯೆಂದರೆ ಮೇಲಿಂದ ಮೇಲೆ ಬಣ್ಣ ಬದಲಿಸುವ ತಂತ್ರಗಾರಿಕೆ ಕುರಿತದ್ದು. ರಾಜದೂತನಾಗಿ ಬಂದವ ಮತ್ತರ್ಧ ಗಂಟೆಯಲ್ಲಿ ರಾಕ್ಷಸ ದೂತನಾಗಬೇಕಾಗುತ್ತದೆ. ಇನ್ನೊಂದು ವೇಷಕ್ಕೆ ದೇವದೂತನಾಗಲೂಬಹುದು. ಮುದುಕಿ ಯಾಗಲೂಬೇಕಾಗಬಹುದು. ಕಡಿಮೆ ಶ್ರಮದಲ್ಲಿ ತಕ್ಷಣ ಬಣ್ಣ ಬದಲಿಸುವ ತಂತ್ರಗಾರಿಕೆ ಸಿದ್ಧಿಯವನಿಗೆ ಬೇಕು. ಆಹಾರ್ಯ ವಿಭಾಗದ ಸಣ್ಣ ಬದಲಾವಣೆಯಲ್ಲಿ ದೊಡ್ಡ ಪರಿಣಾಮವನ್ನು ಆತ ಮಾಡಿ ತೋರಿಸಬೇಕಾಗುತ್ತದೆ.

೧. ಮೂರೂರು ಈಶ್ವರ ಹೆಗಡೆ

ಮುಖ್ಯತಃ ಜಿಲ್ಲೆಯ ಪ್ರಥಮ ದರ್ಜೆಯ ಯಕ್ಷಗಾನ ವಿದೂಷಕರಾಗಿದ್ದಾರು. ಇಡಗುಂಜಿ, ಕರ್ಕಿ, ಮೂರೂರು ಮೇಳದಲ್ಲಿ ಅತ್ಯುತ್ತಮ ಹಾಸ್ಯಗಾರರಾಗಿ ಸೇವೆ ಸಲ್ಲಿಸಿದ್ದರು. ಗಾಂಭೀರ್ಯ ಕೆಡಿಸದ ಚುರುಕು ಮಾತು, ಚಟುವಟಿಕೆಯ ಅಡ್ಡ ಕುಣಿತ, ನಗೆ ಉಕ್ಕಿಸುವ ಮೈಮುಖಗಳ ಭಂಗಿ ಇವುಗಳಿಂದ ಕಂಡವರ ಕಣ್ಮನಗಳಲ್ಲಿ ಹಾಸ್ಯಗಾರರಾಗಿ ನಗೆ ಮೂಡಿಸುವ ಸಾಮರ್ಥ್ಯ ಅವರಲ್ಲಿತ್ತು.

೨. ಗಣಪತಿ ಹೆಗಡೆ ಸಾಲ್ಕೋಡು

ಉತ್ತರಕನ್ನಡದ ಪ್ರತಿಭಾನ್ವಿತ ವಿದೂಷಕರಾಗಿದ್ದರು. ಉತ್ತಮ ಗುಣಮಟ್ಟದ ಹಾಸ್ಯ ಚತುರತೆಯಿಂದ ಕೂಡಿರುತ್ತಿತ್ತು. ಕುಣಿತಾಭಿನಯದಿಂದ ಶುಚಿರುಚಿಯಾಗಿ ವ್ಯಂಗ್ಯ ಕಟಕಿಗಳ ಮೂಲಕ ಹಾಸ್ಯ ಸೃಷ್ಟಿಸಬಲ್ಲವರಾಗಿದ್ದರು. ಔಚಿತ್ಯ ಪರಿಜ್ಞಾನವಿದ್ದು ಹಿತಮಿತವಾದ ಪ್ರವೇಶ ಇವರ ವಿಶೇಷ. ಇವರು ರಂಗದಲ್ಲಿದ್ದಾಗ ಜೊತೆ ಪಾತ್ರದವರೆಂದೂ ಅರ್ಥಪೂರ್ಣತೆಯನ್ನು ಕಳೆದುಕೊಳ್ಳುತ್ತಿರಲಿಲ್ಲ. ಕಾಳಿದಾಸ ಪ್ರಸಂಗದ ಕುರುಬರ ಕಾಳ ಇವರ ಜನಮೆಚ್ಚಿದ ಪಾತ್ರವಾಗಿದೆ.

೩. ಗಣಪತಿಯಾಜಿ ಇಡಗುಂಜಿ

ಇಡಗುಂಜಿ ಮತ್ತು ಪೆರಡೂರು ಮೇಳದಲ್ಲಿ ಹಾಸ್ಯಗಾರರಾಗಿದ್ದರು, ಮೊನಚಾದ ಮಾತು, ನಗು ಉಕ್ಕಿಸುವ ಭಂಗಿ, ಕುಣಿತ ವಿವಿಧ ಶೈಲಿಯ ರಂಗನಡೆ ಹಿತಮಿತವಾದ ಮಾತು ಆಂಗಿಕಾಭಿನಯದ

ಮೂಲಕವೆ ನಗೆಗಳಲ್ಲಿ ತೇಲಿಸುವ ಸಾಮರ್ಥ್ಯ ಹೊಂದಿದ್ದರು.

೪. ಕೊಪ್ಪದ ಮಹಾಬಲೇಶ್ವರ ಹೆಗಡೆ

ಪ್ರಮುಖ ಹಾಸ್ಯಗಾರರಲ್ಲೊಬ್ಬರು. ಇವರ ಕುಣಿತ, ಮಾತು ಮಾರ್ಮಿಕವಾಗಿತ್ತು. ಉತ್ತಮ ಹಾಸ್ಯಗಾರಿಕೆ ಕೌಶಲ್ಯವಿತ್ತು. ಇವರು ಹುಲೇಕಲ್ ಮೇಳದ ಹಾಸ್ಯಗಾರರಾಗಿದ್ದರು.

೫. ಥಂಡಿ ಭಟ್ಟರು

ಹಾಸ್ಯಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಇವರು ಹುಲೇಕಲ್ಲು ಮೇಳದ ಕಲಾವಿದರಾಗಿದ್ದರು.

೬. ಕಕ್ರೆ ಈಶ್ವರ ಹೆಗಡೆ

ಕಡಬಾಳ ಮೇಳದ ಹಾಸ್ಯಗಾರರು. ದೂತ ಬ್ರಾಹ್ಮಣ ಮುಂತಾದ ಪಾತ್ರಗಳನ್ನು ನಿರ್ವಹಿಸಿ ಉತ್ತಮ ಹಾಸ್ಯವನ್ನು ರೂಢಿಸಿಕೊಂಡಿದ್ದರು.

೭. ಹಂದಿ ಮಾಬ್ಲ ಹೆಗಡೆ

ಮಾತಿನಲ್ಲಿ ಚುರುಕು, ವಕ್ರೋಕ್ತಿ ಚಮತ್ಕಾರಗಳಿಂದ ಹಾಸ್ಯವನ್ನು ಪರಿಣಾಮಕಾರಿಯಾಗಿ ಬಿಂಬಿಸುತ್ತಿದ್ದರು. ಇವರು ಕಡಬಾಳ ಮೇಳದ ವಿದೂಷಕರಾಗಿದ್ದರು.[೨೪]

೮. ಕಾಶೀ ಮಠದ ಗೋವಿಂದ ಭಟ್ಟರು

ಭರತನಹಳ್ಳಿ ಮೇಳದ ಹಾಸ್ಯಕಲಾವಿದರು. ಇವರು ಕುಣಿತದಲ್ಲಿ ಪ್ರಾವೀಣ್ಯತೆ, ಮಾತಿನಲ್ಲಿ ಹಾಸ್ಯಗಾರಿಕೆಯ ಶೈಲಿಕೃತ ಭಾಷೆ ಬಳಸುತ್ತಿದ್ದರು.

೯. ಕಿರಗಾರಿ ನರಸಿಂಹ ಗಾಂವ್ಕರ್

ಉತ್ತಮ ವಿದೂಷಕರು ಹೊನ್ನಗದ್ದೆ ಮೇಳದ ಕಲಾವಿದರು ಆಗಿದ್ದರು. ಹಿತಮಿತವಾದ ಮಾತಿನಿಂದ ಕುಣಿತದಿಂದ ರಂಜಿಸಿದ್ದರು.

೧೦. ಕೋಡಕ್ಕಾಲು ಗೋಪಾಲಕೃಷ್ಣ

ತೆಂಕಿನ ಪ್ರಸಿದ್ಧ ಹಾಸ್ಯಗಾರರು. ಇವರು ಈಗಲೂ ತೆಂಕಿನ ವಿವಿಧ ಮೇಳಗಳಲ್ಲಿ ಕಲಾವಿದರಾಗಿದ್ದಾರೆ.

೧೧. ಕೊಮ್ಮೆ ಮಹಾಬಲೇಶ್ವರ ಭಟ್ಟ ಭಾಗಮಂಡಲ

ಹೊಸನಗರ ಮೇಳದಲ್ಲಿದ್ದರು. ಇವರು ದೂತ, ಕಾಶಿ. ಮಣಿ ಮುಂತಾದ ಪಾತ್ರಗಳಲ್ಲಿ

---

೨೪. ಸಿದ್ದಾಪುರ ತಾಲೂಕಿನ ಕ್ಷೇತ್ರಕಾರ್ಯ

ಅತ್ಯುತ್ತಮ ಅಭಿನಯ ನೀಡಿದವರು.

೧೨. ನಯನ ಕುಮಾರ

ಧರ್ಮಸ್ಥಳ ಮೇಳದ ವಿದೂಷಕರು, ತೆಂಕು ಬಡಗು ಮೇಳದ ಕಲಾವಿದರು, ಜನಪ್ರಿಯ ಹಾಸ್ಯಕಲಾವಿದ, ಉತ್ತಮ ಹಾಸ್ಯಗಾರಿಕೆಗೆ ಹೆಸರಾದ ಕಲಾವಿದರು.

೧೩. ಚಪ್ಪರ ಮನೆ ಶ್ರೀಧರ

ವೃತ್ತಿ ಮೇಳದ ಕಲಾವಿದರಾದ ಇವರು ಸಿದ್ದಾಪುರದ ಚಪ್ಪರ ಮನೆಯವರು ವರ್ತಮಾನದಲ್ಲಿ ಉತ್ತಮ ಹೆಸರುಗಳಿಸುತ್ತ ಇರುವ ಕಲಾವಿದರು.

೧೪. ಶ್ರೀಧರ ಭಟ್ಟ ಕಾಸರಗೋಡು

ಗುಂಡುಬಾಳ ಮೇಳದ ಕಲಾವಿದರಾದ ಇವರು ಅದ್ಭುತ ಕುಣಿತ ಹಾಗೂ ಮಾತಿನ ಶೈಲಿಯನ್ನು ಹೊಂದಿದ್ದಾರೆ. ಅಭಿಜಾತ ಕಲಾವಿದರಾದ ಇವರು ಈಗಿನ ಶ್ರೇಷ್ಠ ಹಾಸ್ಯಗಾರರು.

೧೫. ಪೆರವೋಡಿ ನಾರಾಯಣ ಭಟ್ಟರು

ಕಾಸರಗೋಡು ಜಿಲ್ಲೆಯ ಬಾಯೂರು ಗ್ರಾಮದ ಪೆರುವೋಡಿ ಸಂಕಯ್ಯ ಭಾಗವತರ ವಂಶಸ್ಥರು ಪೆರುವೋಡಿ ನಾರಾಯಣ ಭಟ್ಟರು. ಪದ್ಯಾಣ ಮನೆತಲ್ಲಿ ೨೮.೫.೧೯೨೭ ರಲ್ಲಿ ಜನಿಸಿದರು ಕುರಿಯ ವಿಠ್ಠಲಶಾಸ್ತ್ರಿಯವರ ಪ್ರೇರಣೆಯಿಂದ ಕುಟುಂಬ ಸಂಕಷ್ಟ ಕಾರಣದಿಂದ ಯಕ್ಷಗಾನಕ್ಕೆ ಕಾಲಿಟ್ಟರು. ಧರ್ಮಸ್ಥಳ ಮೇಳದ ಹಾಸ್ಯಕಲಾವಿದರಾದರು. ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಪ್ರಸಿದ್ಧ ಹಾಸ್ಯಗಾರರಾಗಿ ಪ್ರಸಿದ್ಧರಾದರು. ಹಾಸ್ಯದಲ್ಲಿ ಅಭಿಜಾತಗುಣ, ರಸಸಿದ್ಧಿ, ರಾಜ ಹಾಸ್ಯಗಳಿಂದ ಅವರದ್ದೇ ಆದ ಪರಂಪರೆ ನಿರ್ಮಿಸಿದರು. 'ಪಾಪಣ್ಣ ವಿಜಯ'ದ ಪಾಪಣ್ಣನ ಪಾತ್ರ ಇವರದ್ದು ಅತ್ಯಂತ ಪ್ರಖ್ಯಾತವಾಗಿತ್ತು. ಇವರನ್ನು ಪಾಪಣ್ಣ ಭಟ್ಟರು ಎಂದೆ ಕರೆಯುತ್ತದ್ದರು. ಧರ್ಮಸ್ಥಳ ಮೇಳದ ಸಂಚಾಲಕರು ಆಗಿದ್ದರು. ಇವರ ಹಾಸ್ಯಗಾರನ ಅಂತರಂಗ ಎಂಬ ಆತ್ಮಕಥನ ನಿರೂಪಿಸಿದ್ದಾರೆ.

೬.೫.೨. ಸ್ತ್ರೀ ವೇಷಗಳು

ಯಕ್ಷಗಾನದ ಹಿಂದಿನ ಪ್ರೇರಣೆ ಸ್ತ್ರೀಯರು ಆದರೆ ಯಕ್ಷರಂಗದ ಸ್ತ್ರೀ ವೇಷಗಳ ಆಹಾರ್ಯ ವಿಚಾರಗಳ ಕುರಿತು ಬಡತನವಿದೆ. ಅವುಗಳಲ್ಲಿ ವೈವಿಧ್ಯಮಯವಿಲ್ಲ. ಆದರೆ ಈ ಸ್ತ್ರೀ ಪಾತ್ರಗಳು ಪುರುಷ ಪ್ರಧಾನ ಸಮಾಜದವುಗಳು ಎಂಬುದನ್ನು ನಾವು ಇಲ್ಲಿ ಗಮನಿಸಬೇಕಾದ ಅಗತ್ಯವಿದೆ. ಯಕ್ಷಗಾನ ಸ್ತ್ರೀ ವೇಷಗಳು ಮುಖಕ್ಕೆ ಹಾಕುವ ಪಾಟಲ ವರ್ಣವೊಂದನ್ನು ಬಿಟ್ಟರೆ ಪ್ರೇಕ್ಷಕವರ್ಗದ ಸ್ತ್ರೀಯರಿಗಿಂತ ಅವರ ರೂಪ ಅಲಂಕಾರಗಳು ಬೇರೆ ತೆರನಾಗಿಲ್ಲ. ಈ ವೇಷಧಾರಿಗಳು ತೋರಿಸುತ್ತದ್ದ ಒಂದಿಷ್ಟು ವ್ಯತ್ಯಾಸವೆಂದರೆ ಸಾಮಾನ್ಯ ಗರತಿಯರ ನಡೆ ನುಡಿಗಳನ್ನು ಬಿಟ್ಟು ವೇಶ್ಯೆಯರಿಗೆ ಒಪ್ಪುವ ವಯ್ಯಾರ, ಮೊದಲಿನಿಂದಲು ಸ್ತ್ರೀವೇಷ ಹೀಗೆ ಇತ್ತೇ – ಎಂಬ ಸಂಶಯ ಬರುತ್ತದೆ. ಮೂಲತಃ ದೇವದಾಸಿಯರ ಕುಣಿತವನ್ನು ಒಳಗೊಂಡ ಯಕ್ಷಗಾನದ ಸ್ತ್ರೀವೇಷಗಳು ಹಾಗೆ ಇದ್ದರೆ ಆಶ್ಚರ್ಯವೇನಿಲ್ಲ.

"ರಾಕ್ಷಸ ವೇಷಗಳು, ರಾಜವೇಷಗಳೂ ಹೆಚ್ಚು ಕಡಿಮೆ ಮೊದಲಿದ್ದ ಹಾಗೆ ಇದೆ ಎಂಬ ಅಭಿಪ್ರಾಯ ಹೆಚ್ಚುತ್ತದೆ. ಸ್ತ್ರೀವೇಷ ಮಾತ್ರ ತನ್ನ ಮೊದಲಿನ ಸ್ವರೂಪವನ್ನು ಸಂಪೂರ್ಣವಾಗಿ ಕಳೆದು ಕೊಂಡಿದ್ದು ಗೊತ್ತಾಗುತ್ತದೆ. ಈಗನ ಸ್ತ್ರೀವೇಷಗಳೂ ವಾಸ್ತವಿಕ ಪ್ರಪಂಚದಲ್ಲಿ ನಾವಿಂದು ಕಾಣಸಿಗುವ ಸ್ತ್ರೀವೇಷಗಳೇ ಆಗಿ ಕಾಣುತ್ತಿರುವಾಗ ಪುರುಷ ವೇಷಗಳೂ ಯಾವುದೋ ಬೇರೆಲೋಕದ ವ್ಯಕ್ತಿಗಳಾಗಿ ತೋರುತ್ತಾರೆ. ಅಸಂಗತವಾದ ಈ ರೂಪಾಂತರದಿಂದಾಗಿ ಯಾವ ಕಲೆಯಾಗಿದ್ದರು ಇರಲೆ ಬೇಕಾದ ಅನುರೂಪತೆ ತಪ್ಪಿಹೋಗಿ ಯಕ್ಷಗಾನ ದೃಷ್ಯದ ಸಮುದಾಯ ಶೋಭೆಗೆ ದೊಡ್ಡ ಆಗಾತವಾಗಿದೆ. ಯಕ್ಷಗಾನ ವೇಷರಚನಾ ವಿಧಾನವು ಭಾವಾತ್ಮಕವೆಂದು ತಥದಯವನ್ನು ತಿಳಿಯದ ಸುಧಾರಕರು ಅಜ್ಞರ ಹೊರಗಣ್ಣಿಗೆ ಸಮ ಸಾಮೂಹಕವಾದುದೆಣದು ಸುಂದರ ಸ್ತ್ರೀ ರೂಪವನ್ನು ಕಾಣಿಸುವ ಲವಲವಿಕೆಯಿಂದ ಮಾಡಿ ರೂಪಾಂತರ ವೆಂಬುದರಲ್ಲಿ ಸಂದೇಹವಿದೆತೆ? ಎಂದು ಸೇಡಿ ಯಾಪು ಕೃಷ್ಣ ಭಟ್ಟರು ಪ್ರಶ್ನಿಸಿದ್ದಾರೆ.

ಹೆಣ್ಣು ವೇಷಗಳನ್ನು ಶೈಲಿ ಕೃತಗೊಳಿಸದೆ ನೃತ್ಯ ಹಾಗೂ ಮಾತುಗಳಲ್ಲಿ ಮಾತ್ರ ಶೈಲೀಕೃತಗೊಳಿಸಿದ್ದರ ಹಿನ್ನೆಲೆಯಲ್ಲಿ ಪುರುಷ ಪ್ರಧಾನ ಸಮಾಜದ ನೆಲೆಯ ಮೌಲ್ಯವನ್ನು ಹುಡುಕ ಬಹುದಾಗಿದೆ.

೧. ದಿ| ಕರ್ಕಿದೇವ ಮಾಣಿ ಹೆಗಡೆ : ಕರ್ಕಿಮೇಳದಲ್ಲಿ ಸ್ತ್ರೀವೇಷ ಪಾತ್ರಧಾರಿಯಾಗಿ ಪಾತ್ರ ನಿರ್ವಹಿಸುತ್ತಿದ್ದರು. ಇವರ ಮೋಹಿನಿ, ಸೈರೇಂಧ್ರಿ, ಕೈಕೆಯ ಪಾತ್ರಗಳು ಪ್ರಸಿದ್ಧವಾಗಿದ್ದವು.

೨. ಕರ್ಕಿ ಮೇಳದ ಚಿರಕನ್ಯೆ : ಪುಟ್ಟ ಹಾಸ್ಯಗಾರರು.

ಪರಮಯ್ಯ ಹಾಸ್ಯಗಾರರು ಕರ್ಕಿಮೇಳದ ಸ್ತ್ರೀ ವೇಷಧಾರಿಯಾಗಿದ್ದರು. ಸೀತೆ, ಮಾಯಾ ಶೂರ್ಪನಕ್ಕಿ, ಹಿಡಿಂಬೆ ಸೈರೆಂಧ್ರಿ, ಪ್ರಭಾವತಿ, ಕೈಕೆಯ, ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಭಾವತನ್ಮಯತೆ, ಸೂಕ್ತ ಹಸ್ತಾಭಿನಯ ಇವರ ಪಾತ್ರಪೋಷಣೆಯ ವಿಶೇಷತೆಯಾಗಿತ್ತು. ಪರಮಯ್ಯ ಹಾಸ್ಯಗಾರರ ಭಿಸ್ಮಾಸುರ ಇವರ ಮೋಹಿನಿ ತುಂಬಾ ಜನಪ್ರಿಯವಾಗಿತ್ತು.

೩. ಕೆರೆಮನೆ ದಿ|| ಗಜಾನನ ಹೆಗಡೆ : ದಕ್ಷಿಣೋತ್ತರ ಕನ್ನಡ ಜಿಲ್ಲೆಯ ಪ್ರಥಮ ದರ್ಜೆಯ ಸ್ತ್ರೀವೇಷಧಾರಿಯಾಗಿದ್ದರು. ಇವರ ವೇಷಗಾರಿಕೆ ಸ್ತ್ರಿಸಹಜ ಪಾತ್ರಾಭಿವ್ಯಕ್ತಿ, ಅತ್ಯಂತ ಆಕರ್ಷಕವಾಗಿತ್ತು. ಭೀಷ್ಮ ವಿಜಯದ ಅಂಜೆ, ಸುಭದ್ರ ಕಲ್ಯಾಣದ ಸುಭದ್ರೆ, ದಕ್ಷಯಜ್ಞದ ದಾಕ್ಷಾಮಣಿ, ರೇಣುಕ, ಪ್ರಭಾವತಿ ಇತ್ಯಾದಿ ವೈವಿಧ್ಯಪೂರ್ಣ ಪಾತ್ರಗಳಿಗೆ ಜೀವಂತಿಕೆ ತುಂಬಿ ಅಭಿನಯಿಸುತ್ತಿದ್ದರು.

೪. ಬಂಡವಾಳ ಅಣ್ಣಯ್ಯ ಹೆಗಡೆ : ಬಂಡವಾಳ ಮೇಳದಲ್ಲಿ ಕಲಾವಿದರಾದ ಇವರು ದ್ರೌಪದಿ, ಮೋಹಿನಿ, ಅಂಚೆ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದರು, ಇವರು ಕುಮಟಾ ತಾಲ್ಲೂಕಿನ ಬಂಡವಾಳದವರು.

೫. ಅಳವಳ್ಳಿ ನಾರಾಯಣ ಹೆಗಡೆ : ಕುಮಟಾ ತಾಲ್ಲೂಕಿನ ಮೂರುರಿನವರಾದ ಇವರು ಬಾಡದ ಮೇಳ, ಹೆಗಡೆ ಮೇಳದಲ್ಲಿ ಸ್ತ್ರೀ ವೇಷಮಾಡುತ್ತಿದ್ದರು. ಇವರ ಕೈಕೆಯ, ಸೀತೆ ಪ್ರಸಿದ್ಧ ಪಾತ್ರಗಳಾಗಿದ್ದವು.

೬. ಮುರುಗುಡ್ಡನ ಮನೆ ಮಾಬ್ಲು ಹೆಗಡೆ : ಶಿರಶಿ ತಾಲ್ಲೂಕಿನ ಹುತಿಕಲ್ಲು ಮೇಳದ ಮುರುಗುಡ್ಡ ಮನೆ ಮಾಬ್ಲ ಹೆಗಡೆ ಉತ್ತಮ ಸ್ತ್ರೀ ವೇಷಧಾರಿಯಾಗಿದ್ದು ಸಖಿ, ಪ್ರಭಾವತಿ, ಸೈರಂಧ್ರಿ ಪಾತ್ರಗಳನ್ನು ನಿರ್ವಹಿಸಿದ್ದರು.

೭. ಕೆಸಿನಮನೆ ನರಸಪ್ಪ ಹೆಗಡೆ: ಓರ್ವ ಸಿದ್ದಾಪುರ ತಾಲ್ಲೂಕಿನ ಕೆಸಿನಮನೆ ನರಸಪ್ಪ ಹೆಗಡೆ ಓರ್ವ ಪ್ರತಿಭಾವಂತ ಸ್ತ್ರೀವೇಷಧಾರಿ. ಇವರು ಶೃಂಗಾರ ಪಾತ್ರಗಳಿಗೆ ಹೆಸರಾಗಿದ್ದರು. ಪ್ರಭಾವತಿ, ಮೋಹಿನಿ, ಪಾತ್ರಗಳು ಪ್ರಸಿದ್ಧವಾಗಿತ್ತು.

೮. ಜಗಳೆಮನೆ ನಾರಾಯಣಪ್ಪ ಹೆಗಡೆ : ಸಿದ್ದಾಪುರ ತಾಲ್ಲೂಕಿನ ಜಗಳೆಮನೆ ನಾರಾಯಣಪ್ಪ ಹೆಗಡೆಯವರು ಕಡಬಾಳ ಮೇಳದ ಸ್ತ್ರೀ ವೇಷಧಾರಿಯಾಗಿದ್ದರು. ಚಿತ್ರಾಂಗದೆ, ಚಿತ್ರಾಕ್ಷಿ, ಮೋಹಿನಿ ಪ್ರಸಿದ್ಧ ವೇಷಗಳಾಗಿದ್ದವು.

೯. ಕಡಬಾಳ ರಾಮಚಂದ್ರ ಹೆಗಡೆ : ಕಡಬಾಳ ಮೇಳದಲ್ಲಿ ಸ್ತ್ರೀ ವೇಷಧಾರಿಯಾಗಿ ವಿವಿಧ ಪಾತ್ರಗಳನ್ನು ಹೆಸರು ಮಾಡಿದ್ದಾರೆ.

೧೦. ಕಡಬಾಳ ಮೇಳದಲ್ಲಿ ಈಶ್ವರ ಹೆಗಡೆ ಗಡ್ಡೆಮನೆ, ಸುಬ್ರಾಯ ಹೆಗಡೆ ಕಡಬಾಳ, ರಾಮಚಂದ್ರ ಹೆಗಡೆ, ಕಲ್ಮನೆ ದತ್ತ ಹೆಗಡೆ ಇವರೆಲ್ಲ ಸ್ತ್ರೀ ವೇಷಧಾರಿಗಳಾಗಿದ್ದರು.

೧೧. ಸುಬ್ರಾಯ ಹೆಗಡೆ ಕಡಬಾಳ – ಪ್ರಮುಖ ಸ್ತ್ರೀ ವೇಷಧಾರಿ.

೧೨. ರಾಮಚಂದ್ರ ಹೆಗಡೆ – ಎರಡನೇ ಸ್ತ್ರೀ ವೇಷಧಾರಿ.

೧೩. ರಾಮಚಂದ್ರ ಹೆಗಡೆ – ಸ್ತ್ರೀ ವೇಷಧಾರಿ.

೧೪. ಬಕ್ಕಳ ನರಸಿಂಹ ಭಟ್ಟರು

ಪ್ರಮುಖ ಸ್ತ್ರೀ ವೇಷದ ಪಾತ್ರಧಾರಿ, ಶಿರಸಿ ತಾಲೂಕಿನ ಬಕ್ಕಳದವರು. ಪಾರ್ವತಿ, ಅಂಬೆ, ಪ್ರಸಿದ್ಧ ವೇಷವಾಗಿದ್ದವು.

❖ **ಓಣಿಗದ್ದೆ ತಿಮ್ಮಯ್ಯ**

ಶಿವಳ್ಳಿಮೇಳದ ಸ್ತ್ರೀ ವೇಷಧಾರಿ, ಅಂಬೆ, ಪಾರ್ವತಿ, ಸೈರೆಂದ್ರ ಪಾತ್ರಗಳಲ್ಲಿ ಉತ್ತಮವಾಗಿ ಅಭಿನಯಿಸಿದ್ದರು.

❖ **ಓಣಿಗದ್ದೆ ನಾರಾಯಣ ಹೆಗಡೆ**

ಪಂಚಲಿಗೇಶ್ವರ ಮತ್ತು ಶಿವಳ್ಳಿ ಎರಡು ಮೇಳಗಳಲ್ಲೂ ಸ್ತ್ರೀ ವೇಷಧಾರಿಗಳಾಗಿದ್ದರು.

❖ **ಸಂಪಿಗೆಮನೆ ಚಂದ್ರಶೇಖರ ಹೆಗಡೆ**

ಶಿರಸಿಯ ಸಿದ್ದಿವಿನಾಯಕ ಮಿತ್ರ ಮಂಡಳಿಯ ಮೇಳದಲ್ಲಿ ಸ್ತ್ರೀ ವೇಷಧಾರಿಗಳಾಗಿದ್ದರು.

❖ ರಾಮಚಂದ್ರ ಹೆಗಡೆ ಪುರ್ಲೆ ಇವರು ಮೇಳದ ಸಂಘಟಕರು, ಸ್ತ್ರೀ ವೇಷಧಾರಿಗಳು ಆಗಿದ್ದರು. ಅಂಬೆ, ದಾಕ್ಷಾಯನಿ, ಸೈರಂಧ್ರಿ ಮುಂತಾದ ಪಾತ್ರಗಳನ್ನು ನಿರ್ವಹಿಸುತ್ತಿದ್ದರು.

❖ **ಭಾಸ್ಕರ ಜೋಶಿ ಶಿರಳಗಿ**

ದಕ್ಷಿಣೋತ್ತರ ಕನ್ನಡದ ಪ್ರಸಿದ್ಧ ಕಲಾವಿದರು ಸಿದ್ದಾಪುರ ತಾಲ್ಲೂಕಿನ ಶಿರಳಗಿಯವರು. ಇವರು ಕೊಳಗಿ ಅನಂತ ಹೆಗಡೆಯವರ ಶಿಷ್ಯರಾಗಿ ಯಕ್ಷಗಾನದತ್ತ ಆಕರ್ಷಿತರಾದರು. ಹೊಸ್ತೋಟ ಮಂಜುನಾಥ ಭಾಗವತ ಕೆರೆಮನೆ ವೆಂಕಚಲಾಭಟ್ಟರಿಂದ ತರಬೇತಿ ಪಡೆದರು. ೧೯೭೪ರಲ್ಲಿ ಸ್ತ್ರೀ ವೇಷದ ಕಲಾವಿದರಾಗಿ ಇಡಗುಂಜಿ ಮೇಳವನ್ನು ಸೇರಿದರು. ಕೆರೆಮನೆ ಗಜಾನನ ಹೆಗಡೆಯವರಲ್ಲಿ ನೃತ್ಯಾಭ್ಯಾಸ ನಡೆಸಿದರು. ೧೯೭೫ – ೭೬ ರಲ್ಲಿ ಸ್ತ್ರೀವೇಷದ ಕಲಾವಿದರಾಗಿ ಶಿವರಾಮಕಾರಂತರ ನಿರ್ದೇಶನದಲ್ಲಿ ದೇಶ ವಿದೇಶಗಳಲ್ಲಿ ಅಭಿನಯಿಸಿದರು. ಈಗಲೂ ಅತಿಥಿ ಕಲಾವಿದರಾಗಿ ವಿವಿಧ ಮೇಳಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

❖ **ಮೂರೂರು ಕೃಷ್ಣ ಹೆಗಡೆ ಕಲ್ಮನೆ**

ಕುಮಟಾ ತಾಲ್ಲೂಕು ಮೂರೂರಿನವರಾದ ಇವರು ಶಿರಸಿಯ ಕಲ್ಮನೆಯಲ್ಲಿ ನೆಲೆಸಿದರು. ಯಕ್ಷಗಾನ ಸುಂದರಿಯೆಂದೆ ಇವರಿಗಿರುವ ಬಿರುದು. ದಾಕ್ಷಾಯಣಿ, ಅಂಬೆ, ವಿದ್ಯುನ್ಮತಿ, ಸೀತೆ, ದ್ರೌಪದಿ, ಕೈಕೆ, ಮೋಹಿನಿ ಇವರ ಪ್ರಸಿದ್ಧ ಪಾತ್ರಗಳು. ಇವರು ಕರ್ಕಿಮೇಳ, ಕೊಂಡದಕುಳಿ ಮೇಳದಲ್ಲಿ ಕಲಾವಿದರಾಗಿದ್ದರು.

❖ **ಕಲ್ಮನೆ ದತ್ತಾತ್ರಯ ಹೆಗಡೆ**

ಇವರು ಕಲ್ಮನೆ ಮೇಳದ ಪ್ರಸಿದ್ಧ ಸ್ತ್ರೀ ವೇಷಧಾರಿಗಳಾಗಿದ್ದರು.

❖ **ಸೋಕೆ ಕೃಷ್ಣ ಭಟ್ಟರು**

ಇವರು ದಕ್ಷಿಣಕನ್ನಡ ಜಿಲ್ಲೆಯ ಭಂಟ್ವಾಳ ತಾಲ್ಲೂಕಿನವರು. ತೆಂಕುತಿಟ್ಟಿನ ಅತ್ಯಂತ ಪ್ರಸಿದ್ಧ ಸ್ತ್ರೀ ವೇಷಧಾರಿ ನಾಟಕೀಯ ಅಭಿನಯಕ್ಕೆ ಹೆಸರಾದವರು ಕೂಡ್ಲು, ಕಟೀಲು ಮೇಳಗಳಲ್ಲಿದ್ದರು. ಇವರ ದೇವಕಿ ಮತ್ತು ದಮಯಂತಿ ಪಾತ್ರಗಳು ಜನರ ಮನಸ್ಸಿನಲ್ಲಿ ಇಂದಿಗೂ ಇವೆ.

❖ **ಮಂಡ್ರಕಜೆ ರಾಮಚಂದ್ರ ಭಟ್ಟ**

ತೆಂಕುತಿಟ್ಟಿನ ಸ್ತ್ರೀಪಾತ್ರಧಾರಿ, ಇವರು ನಿರ್ವಹಿಸಿದ ದೇವಿ ಮೋಹಿನಿ, ದಾಕ್ಷಾಯಿಣಿ ಪಾತ್ರಗಳು ಜನ ಮೆಚ್ಚುಗೆಗೆ ಪಾತ್ರವಾಗಿದೆ.[೨೫]

❖ **ಪಾತಾಳ ವೆಂಕಟ್ರಮಣ ಭಟ್ಟ**

ಪಾತಾಳ ವೆಂಕಟ್ರಮಣ ಭಟ್ಟರು ೧೯೩೩ರ ನವೆಂಬರ್ ೧೬ರಂದು ರಾಮಭಟ್ಟ ಹೇಮಾವತಿ

೨೫. ಕಲಾರಂಗ ಉಡುಪಿಯಲ್ಲಿ ಪಡೆದ ಮಾಹಿತಿ

ಇವರ ಪುತ್ರರಾಗಿ ಜನಿಸಿದರು. ಇವರ ಹುಟ್ಟೂರು ಕಬಕದ ಬಳಿ ಬೈದಪದವು.

ಆರಂಭದಲ್ಲಿ ಪುರುಷ ವೇಷಧಾರಿಯಾಗಿ ಉತ್ತರ ನಾರದ ಪಾತ್ರಗಳ ಮೂಲಕ ಪರಿಚಿತರಾದರು. ೧೯೫೫-೫೬ರಲ್ಲಿ ಬಡಗುತಿಟ್ಟಿನ ಸೌಕೂರು ಮೇಳಕ್ಕೆ ಸೇರಿದರು. ನಾಟ್ಯದ ಅಭ್ಯಾಸದೊಂದಿಗೆ ಸೌಕೂರು ಮೇಳಕ್ಕೆ ಗೌರಿ, ಮೇನಕೆ, ಶಾರದೆ, ಮೋಹಿನಿ ಪಾತ್ರದಲ್ಲಿ ಹೆಸರು ವಾಸಿಯಾದರು. ಇವರನ್ನು ಪೆರವೋಡೆ ನಾರಾಯಣ ಭಟ್ಟರು ಮೂಲ್ಕಿ ಮೇಳಕ್ಕೆ ಸೇರಿಸಿದರು. ಕಡಾರು ನಾರಾಯಣ ಭಟ್ಟರ ಮಾರ್ಗದರ್ಶನ ಇವರಿಗೆ ವರವಾಯಿತು. ಪ್ರಧಾನ ಸ್ತ್ರೀ ಪಾತ್ರದಲ್ಲಿ ಮೆರೆದರು. ೧೯೬೩ರಲ್ಲಿ ಧರ್ಮಸ್ಥಳ ಮೇಳ ಸೇರಿದ ಪಾತಾಳರು ಕೆ. ಗೋವಿಂದ ಭಟ್ಟ, ಕುಂಬಳೆ ಸುಂದರ್‌ರಾಮ್, ಪುತ್ತೂರು ನಾರಾಯಣ ಹೆಗಡೆಯವರೊಂದಿಗೆ ಪಾತ್ರ ಮಾಡುವ ಅವಕಾಶ ದೊರೆಯಿತು. ಸುಧನ್ವಕಾಳಗದ ಪ್ರಭಾವತಿ, ಭೀಷ್ಮವಿಜಯದ ಅಂಬೆ, ಅಮ್ಮದೇವಿ, ಊರ್ವಶಿ ಅಶೋಕ ಸುಂದರಿ, ರಂಭೆ ಮೋಹಿನಿ ಇತ್ಯದಿ ಪಾತ್ರಗಳಲ್ಲಿ ಅಭಿನಯಿಸಿ ಪ್ರಖ್ಯಾತಿ ಪಡೆದರು.[೨೫]

ಬಣ್ಣಗಾರಿಕೆ, ಭಾವಾಭಿವ್ಯಕ್ತಿ, ರಸ ಪ್ರತಿಪಾದನೆಯ ಅಭಿನಯದ ಮೂಲಕ ಪಾತಾಳರು ಅಗ್ರ ಪಂಕ್ತಿಯ ಕಲಾವಿದರೆನಿಸಿದರು. ಅವರ ಸುಂದರ ಶರೀರ, ನುಡಿ ಹಾವ ಭಾವಗಳು ಅಪಾರ ಜನ ಮೆಚ್ಚುಗೆ ಗಳಿಸಿತು, ಪಾತಾಳ ವೆಂಕಟ್ರಮಣ ಭಟ್ಟರು ಸ್ತ್ರೀ ವೇಷಕ್ಕೆ ಹೊಸ ಆಯಾಮವನ್ನು ಕೊಟ್ಟರು.

- **ಕೊಕ್ಕಡ ಈಶ್ವರ ಭಟ್ಟ**

ಕೊಕ್ಕಡ ಈಶ್ವರ ಭಟ್ಟರು 'ದೇವಿ' ಪಾತ್ರದಿಂದ ಪ್ರಸಿದ್ಧರಾದರು. ವೇಷಭೂಷಣಕ್ಕೊಡ್ಡುವ ಅವರ ವ್ಯಕ್ತಿತ್ವ, ಗಾಂಭೀರ್ಯ, ಚಾಕಚಕ್ಯತೆಯ ಮಾತು ಪಾತ್ರ ಪೋಷಣೆಗೆ ಪೂರಕ, ಈಶ್ವರ ಭಟ್ಟರು ಅಂಬೆ, ದಾಕ್ಷಾಯಿಣಿ ಪಾತ್ರಗಳು ಅಷ್ಟೇ ಪ್ರಸಿದ್ಧವಾಗಿದೆ. ಧರ್ಮಸ್ಥಳ, ಮೂಲ್ಕಿ ಮೇಳಗಳಲ್ಲಿ ಕಲಾ ಸೇವೆ ಗೈದು ಇವರು ತೆಂಕಿನ ಪ್ರಸಿದ್ಧ ಸ್ತ್ರೀ ವೇಷಧಾರಿ.

- **ಸರವು ರಮೇಶ ಭಟ್ಟ**

'ದೇವಿ' ಪಾತ್ರದಿಂದ ಪ್ರಸಿದ್ಧಿ ಪಡೆದವರು ಇವರ ಪಾತ್ರ ಪೋಷಣೆ ಲಾಲಿತ್ಯ ಪೂರ್ಣ ಮಾತು ಅವರ ಜನಪ್ರಿಯತೆಗೆ ಕಾರಣವಾಗಿದೆ.

- **ಅಂಬಾ ಪ್ರಸಾದ್ ಪಾತಾಳ್**

ಪಾತಾಳ್ ವೆಕಂಟ್ರಮಣ ಭಟ್ಟರ ಪುತ್ರರು ಅಂಬಾ ಪ್ರಸಾದರು ಧರ್ಮಸ್ಥಳ ಮೇಳದ ಸ್ತ್ರೀ ವೇಷಧಾರಿ ದಾಕ್ಷಾಯಿಣಿ, ಅಂಬೆ, ಮೋಹಿನಿ, ಅಮ್ಮದೇವಿ, ಪಾತ್ರಗಳು ಪ್ರಸಿದ್ಧಿ ತಂದಿದೆ. ತಂದೆಯಂತೆ ಪಾತ್ರಾಭಿವ್ಯಕ್ತಿ ರಸಪೋಷಣೆಯಲ್ಲಿ ಪ್ರವೀಣರು.

---

೨೫. ಪಾತಾಳ ವೆಂಕಟ್ರಮಣ ಭಟ್ಟರ ಸಂದರ್ಶನ.

❖ ಮೂರೂರು ವಿಷ್ಣು ಭಟ್ಟರು

ಬಡಗುತಿಟ್ಟಿನ ಪ್ರಮುಖ ಸ್ತ್ರೀ ವೇಷಧಾರಿಗಳಲ್ಲೊಬ್ಬರು. ಈಗಲೂ ಸ್ತ್ರೀ ವೇಷದ ಸಮರ್ಥ ಕಲಾವಿದರು. ಗುಂಡಾಬಾಳ ಮೇಳದಲ್ಲಿ ಆರಂಭದ ಕಲಾಜೀವನವನ್ನು ಪೂರೈಸಿ ಪಂಚಲಿಂಗ, ಪೆರ್ಡೂರು ಸಾಲಿಗ್ರಾಮ ಮೇಳಗಳಲ್ಲೂ ಪಾತ್ರ ಮಾಡಿದ್ದಾರೆ. ಪ್ರಸ್ತುತ ಕೊಂಡದಕುಳಿಯ ಪೂರ್ಣಚಂದ್ರ ಮೇಳದ ಕಲಾವಿದ್ದಾರಾಗಿದ್ದಾರೆ. ಭಾವಪೂರ್ಣ ಪಾತ್ರಗಳಲ್ಲಿ ಉತ್ತಮವಾಗಿ ಅಭಿನಯಿಸಿ ಹೆಸರು ಮಾಡಿದ್ದಾರೆ. ಅಂಬೆ, ದಾಕ್ಷಾಯಿನಿ, ದ್ರೌಪದಿ ಮುಂತಾದ ಪಾತ್ರಗಳಲ್ಲಿ ವಿಶೇಷ ಪರಿಣಿತಿ ಹೊಂದಿದ್ದಾರೆ. ಸ್ತ್ರೀ ವೇಷದ ಕಲಾವಿದರಾಗಿ ಎಲ್ಲಾ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಪೋಷಕಪಾತ್ರಗಳಲ್ಲಿ ಹಾಗೂ ರಾಜವೇಶ, ಪುಂಡುವೇಷಗಳನ್ನೂ ಇವರೂ ಮಾಡಬಲ್ಲ ಸಮರ್ಥಕಲಾವಿದರು.

❖ ಸುಬ್ರಹ್ಮಣ್ಯ ಯಲಗುಪ್ಪಾ

ವರ್ತಮಾನದ ಜನಪ್ರಿಯಾ ಸ್ತ್ರೀ ವೇಷಧಾರಿ ಸುಂದರ ಶರೀರ, ಕಂಠತ್ರಾಣ, ಲಾಲಿತ್ಯಪೂರ್ಣ ಅಭಿನಯ ನೃತ್ಯಾಭ್ಯಾಸದಿಂದ ಹದಗೊಂಡ ಕುಣಿತ, ಒನಪು ಒಯ್ಯಾರ, ಶೃಂಗಾರ ರಸ ಪ್ರಧಾನ ಪಾತ್ರಗಳನ್ನು ಉತ್ತಮವಾಗಿ ಅಭಿನಯಿಸಬಲ್ಲ ಕಲಾವಿದರಿವರು. ಕೆರೆಮನೆ, ಸಾಮಗ್ರಾಮ, ಪೆರ್ಡೂರು ಮೇಳಗಳಲ್ಲಿ ವಿವಿಧ ಪಾತ್ರಗಳಲ್ಲಿ ಅಭಿನಯಿಸಿ ಹೆಸರುಗಳಿಸಿದ್ದಾರೆ. ಭರವಸೆಯ ಕಲಾವಿದರು ಪ್ರತಿಭಾವಂತಿಕೆಯಿಂದ ನೃತ್ಯವನ್ನು ರಂಗದಲ್ಲಿ ಸೂಕ್ತ ಬಳಕೆ ಮಾಡುವ ಸಾಮಾರ್ಥ್ಯವಿರುವ ಕಲಾವಿದರಾಗಿದ್ದಾರೆ. ಇವರು ಹೊನ್ನಾವರ ತಾಲ್ಲೂಕಿನ ಯಲಗುಪ್ಪಾದವರಾಗಿದ್ದಾರೆ.

❖ ನೀಲ್ಕೋಡ್ ಶಂಕರ ಹೆಗಡೆ

ಪ್ರಸ್ತುತ ಅತಿಥಿಕಲಾವಿದರಾಗಿರುವ ಇವರು ಅನೇಕ ವರ್ಷ ಪೆರ್ಡೂರು ಮೇಳದಲ್ಲಿದ್ದರು. ಎಲ್ಲಾ ರೀತಿಯ ಸ್ತ್ರೀಪಾತ್ರವನ್ನು ಸಮರ್ಥವಾಗಿ ನಿರ್ವಹಿಸಬಲ್ಲರು. ಹೊಸ ಪ್ರಸಂಗಗಳಲ್ಲಿನ ಪಾತ್ರ ನಿರ್ವಹಣೆ ಇವರಿಗೆ ಅಪಾರ ಮೆಚ್ಚುಗೆ ಗಳಿಸಿಕೊಟ್ಟಿದೆ. ನಾಗವಲ್ಲಿಯಾಗಿ ಅವರು ತೋರುವ ಅಭಿನಯ ಅದ್ಭುತವಾದುದು. ಹೆಣ್ಣಿನ ಸಹಜ ಆಂಗಿಕವನ್ನು ಸಮರ್ಥವಾಗಿ ಅಭಿನಯಿಸಬಲ್ಲ ವರ್ತಮಾನದ ಪ್ರತಿಭಾವಂತ ಕಲಾವಿದರಾಗಿದ್ದಾರೆ.

೬.೫.೩. ರಾಜವೇಷ – (ಕಿರೀಟವೇಷ)

ಚಕ್ರವರ್ತಿಗಳಿಗೆ ರಾಜನಿಗೆ ಹೇಳಿದ ಶಿರೋಭೂಷಣವಿದು. ಯಕ್ಷಗಾನದ ವಿಶಿಷ್ಟತೆ ಈ ಬಗೆಯ ಕಿರೀಟಗಳಲ್ಲಿದೆ. ಇದನ್ನು ಹಿಂದೆಯೆ ಚರ್ಚಿಸಿದ್ದೇವೆ. ದೇವತೆಗಳ ಒಡಯನಾದ ಇಂದ್ರನಿಗೂ, ಬ್ರಹ್ಮನಿಗೂ ಕೀರಿಟ ತೊಡಿಸುವುದು ಪದ್ಧತಿ. ವಾನರ ರಾಜನಾದ ವಾಲಿಗೆ ಪಗಡೆಯೇ, ಆದರೆ ಸುಗ್ರೀವನಿಗೆ (ರಾಮನ ಸಖನೆಂಬ ಕಾರಣಕ್ಕೂ ಅವನೆ ರಾಜನೆಂಬ ನಂಬಿಕೆಯಿಂದಲೊ) ಕಿರೀಟ ಇದು ಉಪಯೋಗಿತವಾಗಿ ಕಾಣುವುದು ಹೌದಾದರೂ ರಾಜತ್ವದ ಸಾಂಕೇತಿಕತೆಯೇ ಧ್ವನಿಯೇ ಇಲ್ಲಾ ಮುಖ್ಯ ಒಂದೆ ತಾಯಿಯ ಮಕ್ಕಳು ಹೆಚ್ಚು ಕಡಿಮೆ ಒಂದೆತರ ಎಂಬ ಜೀವಶಾಸ್ತ್ರದ ಪರಿಭಾಷೆಗೆ ಇಲ್ಲಿ ವಿಶೇಷ ಅರ್ಥವಿಲ್ಲ. ಒಂದೆ ತಾಯಂದಿರ ಮಕ್ಕಳಲ್ಲಿ ರೂಪ ಸಾಮ್ಯವಿದ್ದರು ಗುಣ ಸ್ವಭಾವ

ಬೇಧ ಸ್ಪಷ್ಟವಾನೇ? ಆ ಕಾರಣದಿಂದಲೆ ಭೀಮನಿಗೆ ನಕುಲ ಸಹದೇವರಿಗೆ ಪೊಗಡೆ, ಧರ್ಮರಾಜ ಅರ್ಜುನರಿಗೆ ಕಿರೀಟ, ಕಿರೀಟ ಎನಿಸಿಹ ಅರ್ಜುನ ಬ್ರಹನ್ನಳೆಯಾದರೂ ಅವನ ಕಿರೀಟಕ್ಕೆ ಭಂಗವಿಲ್ಲ. ತೆಂಕಿನಲ್ಲ – ಕುಂದಾಪುರದಲ್ಲಿ ಕೂಡಾ ಭೀಮನಿಗೆ ಕಿರೀಟ, ಅರ್ಜುನನಿಗೆ ಪೊಗಡೆ, ಅಡವಿಗೆ ಹೋವರು ರಾಮನ ಕಿರೀತ ಹಾಗೆಯೆ ಇರಬೇಕು ರಾಮನನ್ನುಳಿದ ತಮ್ಮಂದಿರಿಗೆ ಪೊಗೆರಯ ಕಿರೀಟದಲ್ಲಿ ಮುಖ್ಯವಾಗಿ ೧. ರಾಜವೇಷದ ಕಿರೀಟ (ಗಣಪತಿ ಕಿರೀಟ) ೨. ಹನುಮಂತನ ಕಿರೀಟ ೩. ರಕ್ಕಸ ಕಿರೀಟ.

ರಾಜವೇಷ ಕಿರೀಟವನ್ನು ದೇವತೆಗಳಿಗೂ ವಾನರ ರಾಜನಿಗೂ ತೊಡಿಸುವುದುಂಟು. ಆಸರೆ ರಕ್ಕಸ–ರಕ್ಕಸಿಯರ ಕಿರೀಟವನ್ನು ಇತರರಿಗೆ ತೊಡಗಿಸುವುದಿಲ್ಲ. ಹನುಮಂತನ ಕಿರೀಟ ಹನುಮಂತನಿಗೆ ಮಾತ್ರ. ರಾಮ ಲಕ್ಮಣರ ಕಿರೀಟ ಎಂಬ ಕಲ್ಪನೆ ತೆಂಕಿನಲ್ಲಿದೆ. ಅವುಗಳ ಪ್ರಕಾರ ರಾಕ್ಷಸ ವೇಷದ ಕಿರಿಟವದ್ದೇ ಅಲ್ಲಿ ಭೀಮನ ಕಿರೀಟ ಪ್ರತ್ಯೇಕವಿದೆ. ಉತ್ತರಕನ್ನಡದಲ್ಲಿ ರಾಮಲಕ್ಷ್ಮಣರ ಕಿರೀಟವೆಂಬ ಪ್ರತ್ಯೇಕತೆ ಇಲ್ಲ.

ರಾಜವೇಷದ ಕಿರೀಟಗಳೆಲ್ಲ ಗಣಪತಿ ಕಿರೀಟವೆ ರಾಮಲಕ್ಮಣರಲ್ಲಿ ಯಾವ ಕಾಲಕ್ಕೂ ಅಧಿಕಾರವನ್ನು ಹಂಬಲಿಸದ ಲಕ್ಮಣನಿಗೆ ಉತ್ತರ ಕನ್ನಡದಲ್ಲಿ ಕಿರೀಟವೆ ಇಲ್ಲ.

ಯಕ್ಷಗಾನ ಕಿರೀಟಗಳು ಬೇರೆ ಬೇರೆಯಾಗಿ ಕಂಡರೂ ಮೂಲತಃ ಒಂದು ಮಾದರಿಯಿಂದ ಬೆಳೆದು ಬಂದಿದೆ. ತೆಂಕಿ ಕಿರೀಟದಲ್ಲಿ ಕೇದಗೆ ಬದಲು ಕೆನ್ನಪ್ಪು ಎಂಬ ಆಭರಣ ಬಳಸುತ್ತಾರೆ. ರಾಜವೇಷದ ಕಿರೀಟವು ಮೂರು ತಿಟ್ಟನಲ್ಲಿ ಕಿರೀಟ ತರುಕೊತ್ತಿನಿಂದಲೋ ಕಥಕ್ಕಳಿಯ ಮಾತ್ರಕೆಯಿಂದಲೊ ಆಕಾರ ಗೊಂಡದಲ್ಲ. ದೈತ್ಯ ವೇಷದ ಕಿರೀಟಗಳು ಕೂಡ ದಕ್ಷಿಣಕ್ಕೆ ಸಾಗುತ್ತಾ ಬದಲಾಯಿತು.

ರಾಜವೇಷದ ಮುಖ ವರ್ಣಿಕೆ ಸರಳವಾದರೂ ಆಕರ್ಷಕ ರಾಜವೇಷದ ಮುಖ ರಚನೆಯಲ್ಲಿ ಮೀಸೆಗೆ ಬಹಳ ಪ್ರಾಧ್ಯಾನತೆಯಿದೆ.

ಯಕ್ಷಗಾನ ರಂಗದಲ್ಲಿ ರಾಜವೇಷದ ಕಲಾವಿದರು ಹವ್ಯಕರಲ್ಲಿ ಹಲವರಿದ್ದಾರೆ. ಈಗಾಗಲೆ ವಿಶಿಷ್ಟ ಪಾತ್ರಧಾರಿಗಳಲ್ಲಿ ಕೆಲವರನ್ನು ಕುರಿತು ವಿವರಿಸಲಾಗಿದೆ. ಇನ್ನುಳಿದಂತೆ ರಾಜವೇಷದಲ್ಲಿ ಪಾತ್ರ ಮಾಡಿದ ಇತರ ಕಲಾವಿದರ ಕುರಿತು ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸಲಾಗಿದೆ.

ಒಡಗು ತಿಟ್ಟನ ಪರಂಪರೆಯಲ್ಲಿ ದಿ. ಸದಾನಂದ ಹೆಗಡೆ, ದಿ. ಮೂಡ್ಕಣಿ ನಾರಾಯಣ ಹೆಗಡೆ, ದಿ. ಶಿರಾಮ್ ಹೆಗಡೆ, ದಿ. ಮಹಾಬಲ ಹೆಗಡೆ ಕೆರೆಮನೆ, ದಿ. ಶಂಭು ಹೆಗಡೆ ಕೆರೆಮನೆ, ಶ್ರೀ ಚಿಟ್ಟಾಣಿ ರಾಮಚಂದ್ರ ಹೆಗಡೆ, ಶ್ರೀ ಹಡಿನಬಾಳು ಶ್ರೀಪಾದ ಹೆಗಡೆ, ಶ್ರೀಕೃಷ್ಣಯಾಜಿ ಬಳ್ಕೂರು, ಇವರೆಲ್ಲರೂ ರಾಜವೇಷದ ಕಲಾವಿದರೆ ಆಗಿದ್ದರು.

ಕೀರ್ತಿಶೇಷರಾದ ದಿ। ಮುಡಾರೆ ನಾಗಪ್ಪ ಹೆಡೆ ಹೊಸಾಕುಳಿ ಸುಬ್ರಾಯ ಹೆಗಡೆ, ಇಳಕಾರ ವಿರು ಹೆಗಡೆ, ಕರ್ಕಿ ರಾಧಾ ಭಟ್ಟ, ಗುಬ್ಬಿ ಗಣಪತಿ ಹೆಗಡೆ, ಹುಲಿಮಕ್ಕಿ ರಾಮಕೃಷ್ಣ ಹೆಗಡೆ, ಗೋಪಾಲ ಹೆಗಡೆ ಮೊದಲಾದವರು ರಾಜವೇಷದ ಕಲಾವಿದರಾಗಿ ರಂಗದಲ್ಲಿ ಮೆರೆದಿದ್ದಾರೆ.

ತೆಂಕುತಿಟ್ಟಿನ ಪ್ರಸಿದ್ಧ ಕಲಾವಿದರಾದ ಶೇಣಿ ಗೋಪಾಲಕೃಷ್ಣ ಭಟ್ಟರು ಕಡಾರು ನಾರಾಯಣ ಭಟ್ಟರು ವರ್ತಮಾನದ ತೆಂಕುತಿಟ್ಟಿನ ಪ್ರಸಿದ್ಧರಾದ ಸೂರುಕುಮೇರಿ ಗೋವಿಂದಭಟ್ಟರು ಇವರೆಲ್ಲ ರಾಜವೇಷದ ಅಗ್ರಮಾನ್ಯ ಕಲಾವಿದರು. ಇವರ ಕುರಿತಾಗಿಯೂ ಈ ಮೊದಲೆ ವಿಶಿಷ್ಟ ಪಾತ್ರಧಾರಿಗಳಾಗಿ ವಿವರಿಸಿದೆ.

ರಾಜವೇಷದ ಪಾತ್ರ ನಿರ್ವಹಣೆ ಮಾಡಿದ ಅನೇಕ ಹವ್ಯಕ ಕಲಾವಿದರು ದಕ್ಷಿಣೋತ್ತರ ಕನ್ನಡ ಮಲೆನಾಡು ಪ್ರದೇಶದ ವಿವಿಧ ಮೇಳಗಳಲ್ಲಿ ಸೇವೆ ಸಲ್ಲಿಸಿ ಕೀರ್ತಿ ಶೇಷರಾಗಿದ್ದಾರೆ. ಹಲವರು ರಂಗಭೂಮಿಯಲ್ಲಿದ್ದಾರೆ.

೧. ದಿ. ಸಂಕೊಳ್ಳಿ ನಾರಾಯಣ ಹೆಗಡೆ – ಹೆಸರಾಂತ ವೇಷಧಾರಿ ನವೀಲಗೋಣ ಮೇಳದಲ್ಲಿ ವಿವಿಧ ರಾಜವೇಷಗಳನ್ನು ನಿರ್ವಹಿಸಿದ್ದಾರೆ. ಇವರು ಹೊನ್ನಾವರ ತಾಲ್ಲೂಕಿನ ಸಂಕೊಳ್ಳಿಯವರು.

೨. ದಿ. ನವಿಲು ಗೋಣು ನಂದ ಭಟ್ಟರು – ಅರ್ಜುನ, ರಾವಣ, ಕಾರ್ತವೀರ್ಯ, ಮಾಗಧನೆ ಮುಂತಾದ ವೇಷಕ್ಕೆ ಹೆಸರಾದವರು ಹಾಗೂ ಉತ್ತಮ ಮಾತುಗಾರರು.

೩. ದಿ. ಭಟ್ರಮಕ್ಕಿ ಗಣೇಶ ಭಟ್ಟರು – ಇವರು ಮಾಗಧ ಅಂದು ನವಿಲುಗೋಣು, ಹೆಬ್ಬೈಲು ಮೇಳಗಳಲ್ಲಿ ಪ್ರಸಿದ್ಧವಾಗಿತ್ತು.

೪. ದಿ. ಮಹಾಬಲೇಶ್ವರ ಹೆಗಡೆ ಮೂರೂರು – ಇವರು ಕುಮಟಾ ತಾಲ್ಲೂಕಿನ ಮೂರೂರಿನವರು. ಪ್ರಸಿದ್ಧ ವೇಷಧಾರಿ ಕಿರೀಟ ವೇಷದ ಪಾತ್ರಗಳನ್ನು ಮನೋಜ್ಞವಾಗಿ ನಿರ್ವಹಿಸುತ್ತಿದ್ದರು.

೫. ದಿ. ಬೆಳ್ಳಿಮನೆ ಗಣೇಶ ಹೆಗಡೆ ನಂದಯ್ಯನ ಮನೆ – ಕುಮಟಾ ತಾಲ್ಲೂಕು ಕಲ್ಲಬ್ಬೆಯವರು ಇವರು ಮೂರೂರು ಮೇಳದ ಕಲಾವಿದರೂ ಆಗಿದ್ದರು.

❖ ಬಾವಿ ಕೇರಿ ತಿಮ್ಮಣ್ಣ ಭಟ್ಟರು – ಕೀಚಕನ ಪಾತ್ರಕ್ಕೆ ಹೆಸರಾದ ಕಲಾವಿದ ಅಂಕೋಲಾ ತಾಲ್ಲೂಕಿನ ಬಾವಿಕೇರಿಯವರು.

❖ ಹಡವ ನಾರಾಯಣ ಭಟ್ಟರು ಉತ್ತರನ ಪಾತ್ರಕ್ಕೆ ಹೆಸರಾದವರು ಇತರ ರಾಜ ವೇಷವನ್ನು ನಿರ್ವಹಿಸುತ್ತಾರೆ.

❖ ರಾಜವೇಷದಲ್ಲಿ ಪ್ರಸಿದ್ಧರಾದ ಇತರ ಕಲಾವಿದರೆಂದರೆ ಗೋಕರ್ಣದ ಅನಂತ ಹಾವಗೋಡ, ತಿಮ್ಮಣ್ಣ ಯಾಜಿ, ಮಣ್ಣಿಗೆ ಬಾಬಯಾಜಿ, ಬಳ್ಕೂರು, ರಾಮಚಂದ್ರಯಾಜಿ ಇಡಗುಂಜಿ ಸತ್ರಮಠ ಗಜಾನನ ಭಟ್ಟ, ಮೂರೂರುಹುಳ್ಸೆವಿರಕ್ಕಿ ರಾಮ ಹೆಗಡೆ, ಪಿ.ಎನ್.ಹೆಗಡೆ, ಹರಿಕೇರಿ ಎಸ್.ಕೆ. ಹೆಗಡೆ, ಮೂರೂರು ಸತ್ಯಭಟ್ಟ, ಗಜಾನನ ಹೆಗಡೆ ವರ್ಧನ್.

❖ ವರ್ತಮಾನದ ಕಲಾವಿದರು

೧. ಸುಬ್ರಾಯ ವೆಂಕಟರಮಣ ಭಟ್ಟ ಗುಂಡಿಬೈಲು : ೧೬/೧೧/೧೯೪೪ ರಂದು ಜನಿಸಿದರು. ಪಾತ್ರಧಾರಿಗಳು, ಪ್ರಸಂಗ ಕರ್ತರು ಯಕ್ಷಗಾನ ಮೇಳ ಸಂಘಟಕರು, ಯಕ್ಷಗಾನ ಮೇಳದ ಶಿಕ್ಷಕರು

ಆಗಿದ್ದಾರೆ. ಅಮೃತೇಶ್ವರಿ, ಸಾಲಿಗ್ರಾಮ, ಬಚ್ಚಗಾರು, ಯಲ್ಲಾಪುರದ ಬಯಲಾಟದ ಮೇಳದಲ್ಲಿ ಕಲಾವಿದರಾಗಿದ್ದರು. ಇವರು ಅತಿ ಕಾಯ, ಅಕ್ರೂರ, ಕಂಸ ಮುಂತಾದ ಪಾತ್ರಗಳನ್ನು ಮಾಡಿ ಹೆಸರು ಮಾಡಿದ್ದಾರೆ.

೨. ನಾರಾಯಣ ವೆಂಕಟ್ರಮಣ ಭಟ್ಟ : ಗುಂಡಬಾಳ ಮೇಳದ ಕಲಾವಿದರಾಗಿದ್ದಾರೆ. ರಾವಣನ ಪಾತ್ರ ಪ್ರಸಿದ್ಧವಾದುದು. ಇವರು ಬಣ್ಣದ ವೇಷಗಳಲ್ಲೂ ಹೆಸರಾದವರೂ.

೩. ಗುಂಡಿಬೈಲು ಗಣಪತಿ ಭಟ್ಟ : ಹೊನ್ನಾವರ ತಾಲ್ಲೂಕಿನ ಗುಂಡಿಬೈಲಿನವರು. ಇವರು ಕೆರೆಮನೆ ಯಕ್ಷಗಾನ ಕೇಂದ್ರದಲ್ಲಿ ಕಲಿತು ಈಗ ಮಂದರ್ತಿ ಮೇಳದ ಕಲಾವಿದರಾಗಿದ್ದಾರೆ. ರಾಜವೇಷದ ಕಲಾವಿದರು ಇವರಾಗಿದ್ದಾರೆ.

೪. ಗುಂಡಿಬೈಲು ನಾರಾಯಣ ಭಟ್ಟರು : ವೇಷಧಾರಿ, ಸಂಘಟಕರು, ಗುಂಡಬಾಳ ಮೇಳದ ಕಲಾವಿದರು ಇವರು ೧೯೮೦ ರಿಂದ ವೃತ್ತಿ ಆರಂಭಿಸಿದರು. ಜಾಂಬವ, ಬಲರಾಮ, ಅರ್ಜುನ, ವಾಲಿ, ಸುಗ್ರೀವ, ರಾಮಾಯಣ ಪ್ರಮುಖ ವೇಷಗಳು. ಗುಂಡುಬಾಳ ಮೇಳವನ್ನು ೧೪ ವರ್ಷ ಕಾಲ ಸಂಘಟಿಸಿದ್ದಾರೆ.

೫. ಗಣಪತಿ ಭಟ್ಟ ತೋಟಿಮನೆ : ಪೂರ್ಣಚಂದ್ರ ಯಕ್ಷಗಾನ ಮಂಡಳಿ ಕಲಾವಿದರಾಗಿದ್ದಾರೆ. ಹೊನ್ನಾವರ ತಾಲ್ಲೂಕಿನ ಮುಗ್ವಾ ಗ್ರಾಮದವರು. ಈ ತಲೆಮಾರಿನ ಸಮರ್ಥ ಪ್ರತಿಭಾವಂತ ಕಲಾವಿದರು. ರಾವಣ, ರಾಮ, ಭೀಮ, ಬಲರಾಮ ಇತ್ಯದಿ ಪಾತ್ರಗಳಲ್ಲೂ ಉತ್ತಮ ಅಭಿನಯದಿಂದ ಹೆಸರಾಗಿದ್ದಾರೆ.

೬. ಗಣಪತಿ ಭಟ್ಟ ಕಣ್ಣಿಮನೆ : ಹೊಸತಲೆಮಾರಿನ ಪ್ರತಿಭಾವಂತ ನಟ. ಉತ್ತಮ ಲಯಗಾರಿಕೆಯನ್ನು ಹೊಂದಿದ ಇವರು ನರ್ತನ ಶೈಲಿ ವಿಭಿನ್ನವಾಗಿದ್ದು, ಕಣ್ಣಿ ಶೈಲಿ ಎಂದೆ ಹೆಸರಾಗಿದೆ. ಹೊನ್ನಾವರ ತಾಲ್ಲೂಕಿನ ಮುಗ್ವಾ ಇವರ ಊರು. ಅತಿಥಿ ಕಲಾವಿದರಾಗಿ ಎಲ್ಲಾ ಮೇಳಗಳಲ್ಲು ಪಾತ್ರನಿರ್ವಹಿಸುತ್ತಾರೆ. ಪ್ರಸ್ತುತ ಮಂದರ್ತಿ ಮೇಳದ ಕಲಾವಿದರಾಗಿದ್ದಾರೆ.[೨೬]

೭. ಈಶ್ವರ ಭಟ್ಟ ಕಟ್ಟೆ : ಹೊನ್ನಾವರ ತಾಲ್ಲೂಕಿನ ನವಿಲುಗೋಣು ಗ್ರಾಮದವರಾದ ಇವರು ಕಮಲಶಿಲೆ ಮೇಳದ ಕಲಾವಿದರು. ಪುಂಡುವೇಶ ಕಿರೀಟ ವೇಷಗಳೆರಡನ್ನೂ ನಿರ್ವಹಿಸುತ್ತಾರೆ.

ಶಿರಸಿ ಸಿದ್ದಾಪುರ ತಾಲ್ಲೂಕಿನ ಮೇಳದಲ್ಲಿ ಪಾತ್ರ ನಿರ್ವಹಿಸಿದ ಕಲಾವಿದರನ್ನು ಗುರುತಿಸಲಾಗಿದೆ:

೧. ಹುಲೆಕಲ್ಲು ಮೇಳ : ಹಣಲಿಮನೆ ಗಣಪಭಟ್ಟ, ಅಮಚಿ ಮಂಜಪ್ಪ ಹೆಗಡೆ ಅರಸಾಪುರ ಸುಬ್ರಾಯ ಹೆಗಡೆ ಇವರು ಧರ್ಮರಾಯ, ರಾವಣ, ಅರ್ಜುನ, ಕಾರ್ತವೀರ್ಯ ಇತ್ಯಾದಿ ವೇಷಗಳಲ್ಲಿ ಪಾತ್ರಮಾಡಿದವರಾಗಿದ್ದಾರೆ.

೨. ಕಡೆಬಾಳ ಮೇಳ : ಕಡಬಾಳ ತಿಮ್ಮಯ್ಯ ಹೆಗಡೆ, ಬಟ್ಟುಡಿ ಈಶಪ್ಪ ಹೆಗಡೆ, ಮುಂದಿಗೆ

೨೬. ಕಣ್ಣಿಮನೆ ಗಣಪತಿ ಭಟ್ಟ ಸಂದರ್ಶನ

ಮನೆ ನಾಗಪ್ಪ ಹೆಗಡೆ, ಕಡಬಾಳ ತಿಮ್ಮಣ್ಣ ಹೆಗಡೆ ಇವರೆಲ್ಲರೂ ಕಡಬಾಳ ಮೇಳದ ಪ್ರಸಿದ್ಧರು. ರುಕ್ಮಾಂಗದ, ಕರ್ಣ, ರಾಮ, ಲಕ್ಷ್ಮಣ ಇತ್ಯಾದಿ ಪಾತ್ರಗಳಲ್ಲಿ ಪ್ರಸಿದ್ಧರು.

೩. **ಹೊಸ ತೋಟ ಮೇಳ :** ಕರಸುಳ್ಳಿ ಮಾಸ್ತರ ಭಟ್ಟರು, ಗೋಳಿಕೊಪ್ಪದ ತಿಮ್ಮಣ್ಣಭಟ್ಟರು, ಹಳೆಯೂರು ಶಾಮಭಟ್ಟರು ಪ್ರಮುಖ ಪಾತ್ರಧಾರಿಗಳಾಗಿದ್ದರು.

೪. **ಕೋಳಿಗಾರ್ ಮೇಳ:** ಗದ್ದೆಮನೆ ನಾರಾಯಣ ಹೆಗಡೆ, ಗೊಬ್ಬೆಮನೆ ಸುಬ್ರಾಯ ಹೆಗಡೆ, ಹಿತ್ಲಳ್ಳಿ ಕೃಷ್ಣಪ್ಪ ಹೆಗಡೆ; ಬಕ್ಕಳ ದೇವರು ಭಟ್ಟರು ಪ್ರಸಿದ್ಧ ರಾಜ ವೇಷದ ಕಲಾವಿದರಾಗಿದ್ದರು.

೫. **ಶಿವಳ್ಳಿ ಮೇಳ:** ಶಿವಗಾಂವ್ ಸೀತಾರಾಮ ಭಟ್ಟ, ನರಸಿಂಹ ಭಟ್ಟ ವಡಗೆರೆ ಶ್ಯಾಮ ಭಟ್ಟ, ಹೆಗ್ಗದ್ದೆ ದೇವರು ಭಟ್ಟ ರಾಜವೇಷದ ಕಲಾವಿದರಾಗಿದ್ದರು.

೬. **ಅರಸಾಪುರ ಮೇಳ:** ಮಹಾದೇವ ಶಾಸ್ತ್ರ ಸೋಂದಾ, ತೇರಗದ್ದೆ ವೆಂಕಟ್ರಮಣ, ಹೊಸಗದ್ದೆ ತಿಮ್ಮಯ್ಯ ಹೆಗಡೆ, ಹೊನ್ನೆಕಟ್ಟೆ ಸುಬ್ರಾಯ ಹೆಗಡೆ ಈ ಮೇಳದಲ್ಲಿ ರಾಜವೇಷ ಮಾಡುತ್ತಿದ್ದರು.

೭. **ನೀರನಳ್ಳಿ ಮೇಳ:** ನೀರನಳ್ಳಿ ನಾರಾಯಣ ಸಹೋದರರು, ಲಿಂಗದ ಕೋಣದ ಗಣಪತಿ ಹೆಗಡೆ, ತಾರಗೋಡ ಮಾಬ್ಲೇಶ್ವರ ಭಟ್ಟ, ದೇವರ ಕೇರಿ ಗಜಾನನ ಭಟ್ಟರು ರಾಜ ವೇಷದ ಕಲಾವಿದರಾಗಿದ್ದರು.

೬.೫.೪. ಪುಂಡುವೇಷ

೬.೫.೪.೨ ವರ್ತಮಾನದ ಪುಂಡುವೇಷದ ಕಲಾವಿದರು

೧. **ಗಣಪತಿ ಭಟ್ ಕಣ್ಣಿ :** ವರ್ತಮಾನದಲ್ಲಿ ಜನಪ್ರಿಯ ಕಲಾವಿದರಾದ ಗಣಪತಿ ಭಟ್ ಕಣ್ಣಿಮನೆ, ವಿಶಿಷ್ಟ ಪಾತ್ರಧಾರಿಕೆ ಮೂಲಕ ಪರಿಚಿತರು. ಇವರು ಹೊನ್ನವರ ತಾಲ್ಲೂಕಿನ ಮುಗ್ವಾ ಗ್ರಾಮದವರು. ಮನೆತನದ ಹಿನ್ನಲೆಯಿಲ್ಲದ ಕಲಾವಿದ. ೧೦.೭.೧೯೬೯ರಲ್ಲಿ ಜನಿಸಿದ ಇವರು ೧೯೮೪ರಲ್ಲಿ ಪ್ರೌಢಶಾಲೆಯಲ್ಲಿ ಓದುವಾಗ ಯಕ್ಷಗಾನದ ಪಾತ್ರ ಮಾಡುವ ಮೂಲಕ ರಂಗಕ್ಕೆ ಪ್ರವೇಶಿಸಿದರು. ಶಿಕ್ಷಕರಾದ ಕೆ.ವಿ.ಹೆಗಡೆಯವರ ಪ್ರೋತ್ಸಾಹವೆ ಕಾರಣವೆನ್ನುತ್ತಾರೆ. ಈಗ ಪ್ರಸಿದ್ಧರು, "ಕಣ್ಣಿ ಶೈಲಿ" ಎಂದೆ ಗುರುಸಿಸುವ ಶೈಲಿಕೃತ ಕುಣಿತಕ್ಕೆ ಹೆಸರಾಗಿದ್ದಾರೆ. ಇವರು ಪಂಚಲಿಂಗೇಶ್ವರ, ಶಿರಸಿ, ಸಾಲಿಗ್ರಾಮ, ಗುಂಡಬಾಳಾ, ಪೆರ್ಡೂರು, ಮಂದರ್ತಿ ಮೇಳಗಳಲ್ಲಿ ವೃತ್ತಿ ಕಲಾವಿದರಾಗಿ ಪಾತ್ರ ನಿರ್ವಹಿಸಿದ್ದಾರೆ. ಸುಮಾರು ೨೦ ವರ್ಷಗಳಿಂದ ಪಾತ್ರ ನಿರ್ವಹಿಸುತ್ತಿದ್ದಾರೆ. ಪುಂಡುವೇಷದ ಪಾತ್ರಕ್ಕೆ ಪ್ರಸಿದ್ಧರಾದವರು. ಅಭಿಮನ್ಯು, ಬಬ್ರುವಾಹನ, ರುದ್ರಕೋಪ, ಕೀಚಕ, ಮದನ, ಮುಂತಾದ ಅನೇಕ ಪಾತ್ರಗಳಲ್ಲಿ ಹೆಸರಾಗಿದ್ದಾರೆ. ಎಲ್ಲಾ ಬಗೆಯ ಪಾತ್ರವನ್ನು ನಿರ್ವಹಿಸಬಲ್ಲ ಕಲಾವಿದರು ಇವರಾಗಿದ್ದಾರೆ. ಲಯಬದ್ಧ ಕುಣಿತ, ಚಾಕಚಕ್ಯತೆಯ ಮಾತು, ಸುಂದರವೇಷ, ನರ್ತನ ಶೈಲಿ ಪ್ರಸಿದ್ಧವಾಗಿದೆ.

೨. **ಕಡಬಾಳ ಉದಯ ಹೆಗಡೆ :** ಸಿದ್ಧಾಪುರ ಕಡಬಾಳ ಉದಯ ಹೆಗಡೆ ಈಗಿನ ತಲೆಮಾರಿನ ಭರವಸೆಯ ಕಲಾವಿದರು ಗುಂಡಬಾಳಾ ಮೇಳದಲ್ಲಿ ಪ್ರಸಿದ್ದರಾಗಿದ್ದಾರೆ. ಇವರು ಪುಂಡುವೇಷದ

ಪಾತ್ರಗಳಲ್ಲಿ ಸುಂದರ ವೇಷಗಾರಿಕೆ, ಮಾತು, ಕುಣಿತ, ಎಲ್ಲ ಅಂಗಗಳಲ್ಲೂ ಉತ್ತಮವಾಗಿ ನಿರ್ವಹಿಸಿ ಭರವಸೆಯ ಕಲಾವಿದರಾಗಿ ಬೆಳೆಯುತ್ತಿದ್ದಾರೆ.

೩. ಈಶ್ವರ ಭಟ್ ಅಂಸಳ್ಳಿ : ಗುಂಡಬಾಳಾ ಮೇಳದ ಕಲಾವಿದರು ಕೆರೆಮನೆ ಶಂಭುಹೆಗಡೆಯವರ ಶ್ರೀಮಯ ಯಕ್ಷಗಾನ ಕೇಂದ್ರದಲ್ಲಿ ಯಕ್ಷಗಾನ ಕಲಿತು ಈಗ ಮೇಳದಲ್ಲಿ ಪಾತ್ರ ನಿರ್ವಹಿಸುತ್ತಿದ್ದಾರೆ. ಇವರು ಮನೋಜ್ಞವಾಗಿ ಪುಂಡು ವೇಷದ ಪಾತ್ರಗಳನ್ನ ನಿರ್ವಹಿಸಬಲ್ಲ ಕಲಾವಿದರಾಗಿದ್ದಾರೆ.

೪. ಕೆರೆಮನೆ ಶಿವಾನಂದ ಹೆಗಡೆ : ಕೆರೆಮನೆ ಕುಟುಂಬದ ಶಂಭು ಹೆಗಡೆಯವರ ಪುತ್ರರಾದ ಶಿವಾನಂದ ಹೆಗಡೆ ಸಂಘಟರು, ಮೇಳದ ಯಜಮಾನರೂ, ವೇಷಧಾರಿಗಳು ಆಗಿದ್ದಾರೆ. ಶಂಬು ಹೆಗಡೆಯವರ ಪರಂಪರೆಯಲ್ಲಿಯೆ ವೇಷ ನಿರ್ವಹಿಸುವ ಇವರು ಉತ್ತಮ ಅಭಿನಯದಿಂದ ವರ್ತಮಾನದಲ್ಲಿ ಪ್ರಸಿದ್ಧರಾಗಿದ್ದಾರೆ.

೬.೫.೪.೨. ಪುಂಡುವೇಷ– ಹಿರಿಯ ಕಲಾವಿದರು

ಪುಂಡುವೇಷದ ಪಾತ್ರ ನಿರ್ವಹಿಸಿದ ಕಲಾವಿದರ ಪರಂಪರೆ ಹಳೆಯ ತಲೆಮಾರಿನಿಂದ ಬಹುತೇಕ ಎಲ್ಲಾ ಕಲಾವಿದರನ್ನು ಒಳಗೊಳ್ಳುತ್ತದೆ. ಉತ್ತರ ಕನ್ನಡದ ಬಡಗು ತಿಟ್ಟಿನಲ್ಲಿ ಹಿಂದೆ ಪ್ರಸಿದ್ಧರಾದ ಎಲ್ಲಾ ಕಲಾವಿದರು ಪಾತ್ರ ನಿರ್ವಹಣೆ ಮಾಡಿರುತ್ತಾರೆ. ಇವರ ವಿವರಗಳನ್ನು ಬೇರೆ ಬೇರೆ ಪಾತ್ರ ವಿವರಣೆಯಲ್ಲಿ ಈಗಾಗಲೆ ನೀಡಿರುವುದರಿಂದ ಹೆಸರಗಳನ್ನಷ್ಟೆ ಪುನಃ ನೀಡಲಾಗಿದೆ.

೧. ಕೆರೆಮನೆ ಶಿವರಾಮ ಹೆಗಡೆ

೨. ಕೆರೆಮನೆ ಶಂಭು ಹೆಗಡೆ

೩. ಚಿಪ್ಪಾಣಿ ರಾಮಚಂದ್ರ ಹೆಗಡೆ

೪. ಸುಬ್ರಹ್ಮಣ್ಯ ಹೆಗಡೆ ಚಿಪ್ಪಾಣಿ

೫. ನರಸಿಂಹ ಹೆಗಡೆ ಚಿಪ್ಪಾಣಿ

೬. ಬಳ್ಕೂರು ಕೃಷ್ಣಯಾಜಿ

೭. ಕೊಂಡದ ಕುಳಿರಾಮ ಚಂದ್ರ ಹೆಗಡೆ

೮. ಚಿಪ್ಪಾಣಿ ಪ್ರಭಾಕರ ಹೆಗಡೆ

೯. ಗಣಪತಿ ಭಟ್ಟ ತೋಟಿಮನೆ

೧೦. ಹೊಸಹಿತ್ಲು ಮಹಾಲಿಂಗಭಟ್ಟ

೧೧. ಗೋಪಾಲಕೃಷ್ಣ ಭಟ್ಟ ಕುಡಾಣ

೧೨. ವಿಷ್ಣು ಶರ್ಮ ವಾಟಿ ಹದ್ದು

೧೩. ಗುಂಡಿ ಮಜಲು ಗೋಪಾಲ ಭಟ್ಟ

ಇವರೆಲ್ಲರೂ ಪ್ರಸಿದ್ಧವಾದ ಕಲಾವಿದರಾಗಿದ್ದಾರೆ. ಕೆರೆಮನೆ, ಚಿಪ್ಪಾಣಿ, ಮನೆತನದ ಕಲಾವಿದರು ಉತ್ತರ ಕನ್ನಡದಲ್ಲಿ ಪಾತ್ರಗಳಿಗೆ ನೀಡಿದ ಕೊಡುಗೆಗಳನ್ನು, ಶೈಲಿಯನ್ನು ಪಾತ್ರ ನಿರ್ವಹಣೆಯಲ್ಲಿ ಎಲ್ಲಾ ಕಲಾವಿದರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

೬.೬. ದೈತ್ಯವೇಷ

೧. ದಿ. ಬಾಡದ ನಾರಾಯಣ ಹೆಗಡೆ : ಉತ್ತರಕನ್ನಡದ ಕುಮಟಾ ತಾಲ್ಲೂಕಿನ 'ಬಾಡ'ದವರು, ೧೯೫೮ ರಲ್ಲಿ ತಮ್ಮ ೬೫ ನೇ ವರ್ಷದಲ್ಲಿ ಮರಣ ಹೊಂದಿದರು. ಇವರು ಬಾಡದ ಮೇಳ, ಹೆಗಡೆ ಮೇಳ, ಶಿರಸಿ ಸಿದ್ಧಾಪುರ ಯಲ್ಲಾಪುರದ ಮೇಳಗಳಲ್ಲಿ ಅತಿಥಿ ಕಲಾವಿದರಾಗಿ ಹೋಗುತ್ತಿದರು. ಭಾಗವತರೂ ಮೃದಂಗಕಾರರೂ ಆಗಿದ್ದರು. ಇವರು ಯಕ್ಷಗಾನ ನಟನಾಗಿ ಅಪರೂಪದ ವ್ಯಕ್ತಿತ್ವ ಅದ್ಭುತ ಪಾತ್ರಗಳ ರಂಜನೆ ನೀಡುವಲ್ಲಿ ಇವರು ಎತ್ತಿದ ಕೈ. ದೈತ್ಯವೇಷ ಪರಂಪರೆಯಲ್ಲಿ ಉತ್ತರ ಕನ್ನಡದಲ್ಲಿ ಪ್ರಸಿದ್ಧಿ ಪಡೆದವರು. ಬೇರೆ ಬೇರೆ ತಾಲ್ಲೂಕಿಗೂ ಆಕಾಲದಲ್ಲಿ ಇವರು ವೇಷಕ್ಕಾಗಿ ಹೋಗುತ್ತಿದ್ದರು. ಕಂಸ, ಭೀಮ, ಈಶ್ವರ ಪ್ರಮುಖ ಪಾತ್ರಗಳಾಗಿದ್ದವು. ವೀರಾವೇಶದ ಅಭಿನಯ, ಪಾತ್ರ ತಲ್ಲೀನತೆ ಇವರ ಅಭಿನಯದ ವಿಶೇಷತೆಗಳಾಗಿದ್ದವು.

೨. ದಿ. ಹೊಸಕೇರಿ ನಾರಾಯಣ ಹೆಗಡೆ : ಹೊನ್ನಾವರ ತಾಲ್ಲೂಕಿನ ನವಿಲುಗೋಣಗ್ರಾಮದ ಹೊಸಕೇರಿ ನಾರಾಯಣ ಹೆಗಡೆ ದೈತ್ಯವೇಷದ ಕಲಾವಿದರಾಗಿದ್ದರು. ಇವರು ಹವ್ಯಾಸಿ ಮೇಳಗಳಲ್ಲಿ ವಿವಿಧ ಡೇರೆ ಮೇಳಗಳಲ್ಲಿ ವೇಷ ಮಾಡಿದ್ದಾರೆ. ಅದ್ಭುತ ಅಭಿನಯ, ಮಾತುಗಾರಿಕೆ, ಬಣ್ಣಗಾರಿಕೆ ಎಲ್ಲದರಲ್ಲೂ ಸಿದ್ದಹಸ್ತರು, ಇವರ ದೈತ್ಯವೇಷಗಳಾದ ಕಂಸ, ರಾವಣ, ಅತಿರಾಮ ಅತ್ಯಂತ ಪ್ರಸಿದ್ಧವಾಗಿತ್ತು.

೩. ದಿ. ಗುಂಡಬೈಲು ಗಣೇಶ ಭಟ್ಟ : ಉತ್ತರ ಕನ್ನಡದ ಬಣ್ಣದ ವೇಷ ದೈತ್ಯವೇಷಕ್ಕೆ ಹೆಸರಾದವರು. ೧೯೫೫-೫೮ ರವರೆಗೆ ಗುಂಡಬಾಳಾ ಮೇಳದ ಸಂಘಟಕರಾಗಿದ್ದರು.

ಇವರು ಮಾಳ್ಕೋಡ್ ಗಣಪ ಹೆಗಡೆಯವರ ಕುಟುಂಬದವರು. ಗುಂಡಬಾಳಾ ಮೇಳದಲ್ಲಿ ರಾಕ್ಷಸ ಪಾತ್ರಗಳನ್ನು ನಿರ್ವಹಿಸುತ್ತಿದ್ದರು, ಬಣ್ಣಗಾರಿಕೆಯಲ್ಲಿ ಸಿದ್ಧಹಸ್ತರಾದ ಇವರು ಮನೋಜ್ಞ ಅಭಿನಯವನ್ನು ನೀಡಿ ಪ್ರಸಿದ್ಧರಾಗಿದ್ದರು. ಇವರು ನಿರ್ವಹಿಸಿದ ಪಾತ್ರಗಳೆಲ್ಲ ಪ್ರಸಿದ್ಧವಾದವುಗಳೇ.

೪. ದಿ. ಕೆರೋಡಿ ಗಣಪತಿ ಹೆಗಡೆ : ಮೂಲತಃ ಕುಮಟಾ ತಾಲ್ಲೂಕು ಮೂರೂರಿನವರಾದ ಇವರು ದೈತ್ಯವೇಷಕ್ಕೆ ಹೆಸರಾದವರು. ಗುಂಡಬಾಳಾ ಮೇಳದ ಕಲಾವಿದರಾಗಿದ್ದರು. ಇವರು ರಾವಣ, ಅತಿಕಾಯ, ಕುಂಬಾಪುರ ಮುಂತಾದ ಪಾತ್ರಗಳನ್ನು ನಿರ್ವಹಿಸಿ ಪ್ರಸಿದ್ಧರಾಗಿದ್ದಾರೆ.

೫. ದಿ. ಶಿಂಗನಳ್ಳಿ ಗಣಪಯ್ಯ ಹೆಗಡೆ : ಶಿಂಗನಳ್ಳಿ ಮೇಳದ ಕಲಾವಿದರು ಕಾಲದಂಥ, ಅತಿಕಾಯ, ರಾವಣ, ರಕ್ತ ಬಂಡಾಸರರು ಮುಂತಾದ ದೈತ್ಯ ಪಾತ್ರಗಳನ್ನು ನಿರ್ವಹಿಸುತ್ತಿದ್ದರು. ಹೆಚ್ಚಿನ ರಕ್ಕಸ

ಬರವಣಿಗೆ ಅಬ್ಬರದ ಲಾಲಿಕುಣಿತ ಇವರ ಪಾತ್ರದ ವಿಶೇಷತೆಗಳಾಗಿವೆ.

೬. ಮೂರೂರು ಈಶ್ವರ ಹೆಗಡೆ : ಕುಮಟಾ ತಾಲ್ಲೂಕಿನ ಮೂರೂರಿನವರಾದ ಈಶ್ವರ ಹೆಗಡೆ, ಮೂರೂರು ಮೇಳ, ಹೆಗಡೆ ಮೇಳ, ಬಾಡದ ಮೇಳದ ಕಲಾವಿದರಾಗಿದ್ದರು ದೈತ್ಯ ಪಾತ್ರಗಳಲ್ಲಿ ಹೆಸರಾಗಿದ್ದರು.

೭. ಲಕ್ಕಣ್ಣ ಹೆಬ್ಬಾರ : ಘಟ್ಟದ ಮೇಲಿನ ಮೇಳಗಳಲ್ಲಿ ದೈತ್ಯವೇಷಕ್ಕೆ ಪ್ರಸಿದ್ದರಾಗಿದ್ದರು. ಇವರ ಪಾತ್ರಗಳಲ್ಲಿ ಆವೇಶ, ಬಣ್ಣಗಾರಿಕೆ ರಂಗನಡೆ ಪ್ರಸಿದ್ಧವಾಗಿತ್ತು.

೮. ಕೃಷ್ಣಭಟ್ಟ ಮಾಡಾಂಗಾಯಿ : ತೆಂಗಿನ ದೈತ್ಯವೇಷದ ಕಲಾವಿದರು ಇವರು. ಕಂಸಭಟ್ಟರೆಂದೆ ಪ್ರಸಿದ್ಧರಾಗಿದ್ದ ದೈತ್ಯವೇಷದ ನಡೆಗಳನ್ನು ರಂಗದಲ್ಲಿ ಸಮರ್ಥವಾಗಿ ಅಭಿನಯಿಸಿ ಪ್ರಸಿದ್ಧರಾಗಿದ್ದರು.

೯. ಕಡೂರು ನಾರಾಯಣಭಟ್: ೧೯೪೫–೭೦ ರಲ್ಲಿ ತೆಂಕಿನ ಪ್ರಸಿದ್ಧ ದೈತ್ಯವೇಷದ ಕಲಾವಿದರು. "ಅತಿಕಾಯ ಭಟ್ಟ"ರು ಎಂದೇ ಪ್ರಸಿದ್ಧರಾದ ಇವರು ದೈತ್ಯವೇಷವನ್ನು ಮನೋಜ್ಞವಾಗಿ ಅಭಿನಯಿಸುತ್ತಿದ್ದರು.

೧೦. ಕೋಳೂರು ನಾರಾಯಣಭಟ್ : ಕಂಸ, ಮಾಗಧ, ಇಂದ್ರಜಿತು ಪಾತ್ರಗಳಲ್ಲಿ ಪ್ರಸಿದ್ಧರು. ತೆಂಕುತಿಟ್ಟಿನ ಕೂಡ್ಲು, ಸೋಮೇಶ್ವರ, ಮುಲ್ಕ, ಮೇಳಗಳಲ್ಲಿ ದೈತ್ಯವೇಷಗಳಿಂದ ಪ್ರಸಿದ್ಧರಾಗಿದ್ದರು.

೧೧. ಕೆ. ಪಿ. ಹಾಸ್ಯಗಾರರು ಕರ್ಕಿ : ಕರ್ಕಿ ಮನೆತನದ ಕೃಷ್ಣ ಹಾಸ್ಯಗಾರರು ಈಗಲೂ ವೇಷ ನಿರ್ವಹಿಸುತ್ತಿದ್ದಾರೆ. ಇವರ ರಾಕ್ಷಸ ವೇಷ, ಕಣ್ಣಿನ ಚಲನೆ, ಮುಖಭಾವ, ಲಾಲಿಕುಣಿತಗಳ ವಿಶಿಷ್ಟ ನಡೆಯಿಂದ ಕರ್ಕಿಶೈಲಿ ಎಂದೆ ಹೆಸರಾಗಿದೆ.

೧೨. ಹಡಿನಬಾಳು ಶ್ರೀಪಾದ ಹೆಗಡೆ : ಹೊನ್ನಾವರ ತಾಲ್ಲೂಕಿನ ಹಡಿನಬಾಳಿನ ಶ್ರೀಪಾದ ಹೆಗಡೆಯವರು ದೈತ್ಯ ಪಾತ್ರಗಳಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಗತ್ತುಗಾರಿಕೆ, ನಡೆ, ಅಬ್ಬರದ ಕುಣಿತ, ವೇಷಗಾರಿಕೆಯಲ್ಲಿ ವೇಷಕ್ಕೆ ಜೀವಂತಿಕೆ ಕೊಡುವುದರಲ್ಲಿ ಪ್ರವೀಣರಾಗಿದ್ದಾರೆ.

೧೩. ಥಂಡಿಮನೆ ಶ್ರೀಪಾದ ಭಟ್ಟ : ಸಿದ್ಧಾಪುರ ತಾಲ್ಲೂಕಿನ ಥಂಡಿಮನೆ ಶ್ರೀಪಾದಭಟ್ಟರು ಈಗ ಪೆರ್ಡೂರು ಮೇಳದ ಕಲಾವಿದರು. ಇವರು ಸಾಲಿಗ್ರಾಮ ಮೇಳದಲ್ಲಿ ಬಹುಕಾಲ ವೇಷಮಾಡಿದರು. ಇವರು ರಕ್ತಜಂಘ ಮಾಗಧ, ರಾವಣ, ಅತಿಕಾಯ ಮುಂತಾದ ವೇಷಗಳನ್ನು ಮಾಡಿ ಹೆಸರಾದವರು. ಇವರ ಆಳ್ತನ, ಧ್ವನಿ, ಗತ್ತುಗಾರಿಕೆಯ ರಂಗಚಲನೆ ಪಾತ್ರೋಚಿತವಾದ ಅಭಿನಯ ವೇಷಗಾರಿಕೆಯಲ್ಲಿ ಪ್ರಸಿದ್ಧಿಯನ್ನು ತಂದುಕೊಟ್ಟಿದೆ.

೬.೬.೧. ಇತರ ದೈತ್ಯವೇಷದ ಪ್ರಸಿದ್ಧ ಕಲಾವಿದರು

ದಿ. ಶಿಂಗನಳ್ಳಿ ವೆಂಕಟ್ರಮಣ ಹೆಗಡೆ ಕಿರಗಾರಿ ಗಣಪ ಗಾಂವ್ಕರ್, ಕಂಚಿನ ಮನೆ ಮಾಧವ ಗಾಂವ್ಕರ್, ನೆಲೆಪಾಲ ಈಶ್ವರ ಗಾಂವ್ಕರ್, ದಿ. ಮೂರೂರು ದೇವರು ಹೆಗಡೆ, ದಿ. ಶಂಕರಯ್ಯನ ತಿಮ್ಮಯ್ಯ ಬೆಳೆಯೂರು, ಕೊಲ್ಲುರಯ್ಯನ ಗಣೇಶಯ್ಯ, ದಿ. ಮರಿಯಪ್ಪನ ಸುಬ್ಬಯ್ಯ ಬೆಳೆಯೂರು ಮುಂತಾದ ಕಲಾವಿದರು ದೈತ್ಯವೇಷಗಳಲ್ಲಿ ಪ್ರಸಿದ್ದರಾಗಿದ್ದಾರೆ.

೬.೭. ಬಣ್ಣದ ವೇಷ

ಬಣ್ಣದ ವೇಷಗಳು

ಯಕ್ಷಗಾನದ ಅದ್ಭುತ ಕಲ್ಪನೆಗಳ ಪ್ರಾಣನಕ್ಷೆಯೆಂದರೆ ರಕ್ಕಸ ವೇಷಗಳ ಮುಖವರ್ಣಿಕೆ. ಈ ಬಗೆಯ ವೇಷಗಳೆಂದು ಹೇಳುತ್ತ ಬಂದಿದ್ದಾರೆ. "ಬಣ್ಣದ ವೇಷ" ಎಂಬುದು ಯಕ್ಷಗಾನ ಸಂದರ್ಭದಲ್ಲಿ ಒಂದು ಪಾರಿಭಾಷಿಕ ಪದವಾಗಿದ್ದು, ಕೆಲವು ವಿಲಕ್ಷಣ ಬಗೆಯ ವೇಷವರ್ಗಕ್ಕೆ ಈ ಹೆಸರು ಅನ್ವಯಿಸುತ್ತದೆ. ಮುಖ್ಯವಾಗಿ ರಾಕ್ಷಸ ಭೂಮಿಕೆಗಳು ಎದ್ದು ಕಾಣುವವುಗಳಾಗಿದ್ದರೂ ರಾಕ್ಷಸ ಕುಲಕ್ಕೆ ಹೊರತಾದ ಪಾತ್ರಗಳೂ ತಮ್ಮ ಸ್ವಭಾವಗುಣಗಳಿಂದಾಗಿ ಬಣ್ಣದ ವೇಷದ ವಿಶಿಷ್ಟ ವೈಖರಿಯ ಮೂಲಕ ಪ್ರಕಟಗೊಂಡಿವೆ. ಕಂಸ, ಜರಾಸಂಧ, ಅನುಸಾಲ್ವ ಮೊದಲಾದವರು ಕ್ಷತ್ರಿಯರಾಗಿದ್ದರೂ ತಮ್ಮ ಧೀರೋದ್ಧಾತ್ತ ಸ್ವಭಾವದಿಂದಾಗಿ ಬಣ್ಣದ ವೇಷದ ಮಾಧ್ಯಮದಲ್ಲಿ ಪ್ರಕಟಗೊಳ್ಳುತ್ತಾರೆ. ಕಪಿರಾಜನಾದ ವಾಲಿಯ ಪಾತ್ರವನ್ನೂ ವರಾಹ ನರಸಿಂಹ ವೀರಭದ್ರ ಮೊದಲಾದ ಉಗ್ರ ಪಾತ್ರಗಳನ್ನು ಬಣ್ಣದ ವೇಷದಲ್ಲಿ ಚಿತ್ರಿಸುತ್ತಾರೆ. ಉಗ್ರತಾಮಸ ಪ್ರಕೃತಿಯ ರಾಕ್ಷಸ ಸ್ತ್ರೀಯರ ಭೂಮಿಕೆಗಳನ್ನು "ಹೆಣ್ಣು ಬಣ್ಣ" ಎಂಬ ಪಾರಿಭಾಷಿಕ ಶಬ್ದದಿಂದ ಕರೆಯುತ್ತಾರೆ.

ಉತ್ತರ ಕನ್ನಡದಲ್ಲಿ ಬಣ್ಣದ ವೇಷ ಮಾಡುವವರು ಈಗ ಯಾರು ಎಂದು ಹುಡುಕಾಡಬೇಕು. ಆದರೆ ಒಂದು ಕಾಲಕ್ಕೆ ದೈತ್ಯವೇಷಕ್ಕೆ ಹೆಸರಾದ ಹವ್ಯಕರ ಒಂದು ಪರಂಪರೆಯೇ ಇತ್ತು. ಬಣ್ಣದ ವೇಷಗಳಲ್ಲಿ ಪಳಗಿದ ಕರ್ಕಿಯ ಕೆ.ಪಿ. ಹಾಸ್ಯಗಾರರನ್ನು ಬಿಟ್ಟರೆ ತಕ್ಷಣ ಇನ್ನೊಂದು ಹೆಸರನ್ನು ಹೇಳುವುದು ಕಷ್ಟವಾಗಿದೆ. ತಮ್ಮ ತಂದೆಯ ಪರಂಪರೆಯಿಂದ ತಿಳಿದ, ಗುಬ್ಬಿ ಅಜ್ಜ ಮುಂತಾದ ಪ್ರಸಿದ್ಧ ಬಣ್ಣದ ವೇಷದವರ ವೇಷವನ್ನು ಕಂಡ ಹಾಗೂ ಸ್ವತಃ ಅರ್ಧಶತಮಾನದ ಅನುಭವದಲ್ಲಿ ರೂಢಿಸಿಕೊಂಡ ಬಣ್ಣದ ಕ್ರಮಗಳನ್ನೆಲ್ಲ ಅವರು ಬಲ್ಲವರು. ಬರೇ ಬಣ್ಣಗಾರಿಕೆಯಷ್ಟೇ ಅಲ್ಲ ರಾಕ್ಷಸ ವೇಷಗಳಿಗೆಬೇಕಾದ ಅಟ್ಟಹಾಸ, ರಂಗತಂತ್ರ, ಮುಖಭಾವ ಸಂಪ್ರದಾಯ ಬದ್ಧವಾದ ತೆರೆ ಕುಣಿತ, ಕೈಕರಣ, ಪ್ರವೇಶಕುಣಿತ, ಪ್ರಯಾಣ ಕುಣಿತ ಆಹಾರ ಸಂಚಾರ ಕ್ರಮ, ಯುದ್ಧ ನೃತ್ಯಗಳನ್ನು ವ್ಯವಸ್ಥಿತವಾಗಿ ತೋರ್ಪಡಿಸಬಲ್ಲ ತಜ್ಞರು. ಅವರ ಮಾರ್ಗದರ್ಶನದಲ್ಲಿ ಇಲ್ಲಿನ ಕೆಲವು ಬಣ್ಣದ ಮುಖಗಳು ತಯಾರಾಗಿವೆ. ಮತ್ತೆ ಕೆಲವು ನಣ್ಣಗಳು ಅವರ ಮುಖದಲ್ಲೇ ಆವೇಶಗೊಂಡು ನಮಗೆ ಕಾಣಲು ಸಿಕ್ಕಿವೆ. ಮುಂದಿನ ಪುಟಗಳನ್ನು ಗಮನಿಸಬಹುದು.

ಉತ್ತರ ಕನ್ನಡದಲ್ಲಿ ಬಣ್ಣದವೇಷವನ್ನು ನಿರ್ವಹಿಸುವ ಕಲಾವಿದರು ದೈತ್ಯವೇಷಧಾರಿಗಳೆ ಹೆಚ್ಚಾಗಿ ಕಂಡು ಬರುತ್ತಾರೆ.

೧. ಕಿರಗಾರಿ ಗಣಪ ಗಾಂವ್ಕರ

ಯಲ್ಲಾಪುರ ಸೀಮೆಯ ಹಳೆಯ ಮೇಳದ ಹೊನಗದ್ದೆ ಮೇಳದಲ್ಲಿ ಬಣ್ಣದ ವೇಷದ ಕಲಾವಿದರಾಗಿ ಈಗ ಸುಮಾರು ೮೦ ವರ್ಷಗಳ ಹಿಂದೆ ಪ್ರಸಿದ್ಧರಾಗಿದ್ದರು ಕಿರಗಾರಿ ಗಣಪ ಗಾಂವ್ಕರ. ಇವರ ರಾಕ್ಷಸವೇಷ ಅದ್ಭುತವಾದದ್ದು. ವಿಚಿತ್ರವಾದ ಬಣ್ಣಗಾರಿಕೆಯ ಕುಶಲತೆಯನ್ನು ಪಾತ್ರ ಕಟ್ಟುವಿಕೆಯ ವಿಶೇಷತೆಯನ್ನು ಹೊಂದಿದ್ದರು. ಇವರು ಹತ್ತು ತಲೆಗಳ ರಾವಣನ ಕಿರೀಟ ಧರಿಸಿ ಪಾತ್ರ ಮಾಡಿದ

ಬಗ್ಗೆ ಆ ಸೀಮೆಯ ಜನರು ಇಂದಿಗೂ ನೆನಪಿಸುತ್ತಾರೆ.

೨. ಶಿಂಗನಳ್ಳಿ ಗಣಪ ಹೆಗಡೆ

ಹೆಚ್ಚಿನ ರಕ್ಕಸ ಪಾತ್ರದ ಬರವಣಿಗೆಗೆ ಸಿದ್ಧಹಸ್ತರಾದ ಶಿಂಗನಳ್ಳಿ ಗಣಪ ಹೆಗಡೆ ಬಣ್ಣದ ವೇಷಕ್ಕೆ ಪ್ರಸಿದ್ಧರಾಗಿದ್ದರು. ಇವರು ಭೀಕರವಾದ ಬಣ್ಣಗಾರಿಕೆಯೊಂದಿಗೆ ವಿಶಿಷ್ಟ ಭುಜ ಕೀರ್ತಿಯನ್ನು ಧರಿಸುತ್ತಿದ್ದರು. ಸೂಡಿಹಿಡಿದು ಖಡ್ಗ ಝುಳಪಿಸುತ್ತಾ ಅಬ್ಬರದ ವಾಲಿ ಕುಣಿತದೊಂದಿಗೆ ಪ್ರವೇಶಿಸುವ ಥಾಟು ಅದ್ಭುತವಾಗಿತ್ತು. ಆ ಕಾಲದ ವಿವಿಧ ಮೇಳಗಳಲ್ಲಿ ಪ್ರದರ್ಶನ ನೀಡಿ ಪ್ರಖ್ಯಾತ ಬಣ್ಣದ ವೇಷದ ಕಲಾವಿದರು ಎನಿಸಿದ್ದರು.

೩. ಶಿಂಗನಳ್ಳಿ ವೆಂಕಟ್ರಮಣ ಹೆಗಡೆ

ಇವರು ಶಿಂಗನಳ್ಳಿ ಮೇಳದ ಕಲಾವಿದರಾಗಿದ್ದರು ಇವರು ವೇಷ ಕಟ್ಟುವುದರಲ್ಲಿ ನಿಸ್ಸೀಮರಾಗಿದ್ದರು. ಅದ್ಭುತ ವೇಷಗಾರಿಕೆಯೊಂದಿಗೆ ಅಬ್ಬರದ ಕುಣಿತ ರೋಮಾಂಚನವನ್ನುಂಟು ಮಾಡುತ್ತಿತ್ತು.

೪. ಕರ್ಕಿ ಮನೆತನದ ಕಲಾವಿದರು

ಕರ್ಕಿ ಮನೆತನದ ಕಲಾವಿದರು ಬಣ್ಣದ ವೇಷಕ್ಕೆ ಹೊಸ ಕಾಯಕಲ್ಪ ಶಾಸ್ತ್ರೀಯ ರೂಪ ಕೊಟ್ಟವರಾಗಿದ್ದಾರೆ. ಕರ್ಕಿಯ ಕೃಷ್ಣ ಹಾಸ್ಯಗಾರರು ಮುಂಬಯಿಯ ಜೆ.ಜೆ. ಕಲಾಶಾಲೆಯಲ್ಲಿ ಚಿತ್ರಕಲೆಯನ್ನು ಅಭ್ಯಾಸ ಮಾಡಿ ಯಕ್ಷಗಾನದ ಬಣ್ಣಗಾರಿಕೆ ಕಲೆಗಾರಿಕೆಗೆ ವಿಶಿಷ್ಟ ರೂಪು ನೀಡಿದರು. ಇವರ ಬಣ್ಣದ ವೇಷದ ಲಾಲಿಕುಣಿತ ಸಾಂಪ್ರದಾಯಿಕ ಶೈಲಿಯ ತೆರೆಕುಣಿತ ರಾಕ್ಷಸರ ಪ್ರವೇಶ ಒಡ್ಡೋಲಗ, ರಂಗದಲ್ಲಿ ಪಾತ್ರ ನಿರ್ವಹಿಸುವಾಗ ಅವರ ಕಣ್ಣಿನ ಚಲನೆಗಳು ರಾಕ್ಷಸ ಪಾತ್ರದ ಗತ್ತು ಗಾಂಭೀರ್ಯಗಳು ಅದ್ಭುತವಾದುದಾಗಿದೆ.

೫. ಮಾಲಂಗಾಯಿ ನಾರಾಯಣ ಭಟ್ಟರು : ತೆಂಕುತಿಟ್ಟಿನ ಬಣ್ಣದ ವೇಷದ ಪ್ರಸಿದ್ಧ ಕಲಾವಿದರು ತೆಂಕುತಿಟ್ಟಿನ ಮೂಲ್ಕಿ, ಧರ್ಮಸ್ಥಳ ಹಾಗೂ ಇತರ ಮೇಳಗಳಲ್ಲಿ ವೇಷಗಾರರಾಗಿದ್ದರು. ವಿವಿಧ ಬಣ್ಣದ ವೇಷಗಳಲ್ಲಿ ಅದ್ಭುತ ಅಭಿನಯ ನೀಡಿದವರು. ಇವರ ಪ್ರವೇಶ, ರಂಗನಡತೆ, ಪಾತ್ರ ಜನಪ್ರಿಯವಾಗಿತ್ತು. ಭಟ್ಟ ಇಟ್ಟ ಬಣ್ಣಗಾರಿಕೆಯಲ್ಲಿ ವೇಷ ಬರೆಯುತ್ತಿದ್ದರು.

೬. ಮಾಣಂಗಾಯಿ ಕೃಷ್ಣ ಭಟ್ : ಇವರು ತೆಂಕುತಿಟ್ಟಿನ ಹೆಸರಾದ ಬಣ್ಣದ ವೇಷದ ಕಲಾವಿದರು. ಅದ್ಭುತವಾದ ವೇಷಗಾರಿಕೆ, ಆಕರ್ಷಕ ಶೈಲಿಕೃತ ಭಾಷೆ, ಪ್ರವೇಶ ಇವರಿಗೆ ಕೀರ್ತಿ ತಂದುಕೊಟ್ಟಿವೆ. ವಿವಿಧ ರಾಕ್ಷಸ ಪಾತ್ರಗಳನ್ನು ಮಾಡಿದವರು ಇವರು.

೭. ಕಾವು ಕೃಷ್ಣ ಭಟ್ಟರು : ಈಗ ಸುಮಾರು ೪೫ ವರ್ಷ ಹಿಂದೆ ವೇಷ ಮಾಡುತ್ತಿದ್ದರು. ತೆಂಕಿನ ವಿವಿಧ ಮೇಳಗಳಲ್ಲಿ ಬಣ್ಣದ ವೇಷದ ಕಲಾವಿದರಾಗಿದ್ದರು ಭಟ್ಟ ಇಟ್ಟ ವೇಷಗಾರಿಕೆಯ ಸಿದ್ಧತೆಯಲ್ಲಿ ಪ್ರವೀಣರಾಗಿದ್ದರು.

೮. ಬೆಳ್ಳಾರೆ ಮಂಜುನಾಥ ಭಟ್ಟ : ತೆಂಕುತಿಟ್ಟಿನ ಪ್ರಸಿದ್ಧ ಬಣ್ಣದ ವೇಷದ ಕಲಾವಿದರು ಇವರು ಪರಂಪರೆಯ ಬಣ್ಣದ ವೇಷದ ಬಣ್ಣಗಾರಿಕೆಯಲ್ಲಿ ಪ್ರಸಿದ್ಧರಾಗಿದ್ದರು.

೯. ಧರ್ಮಸ್ಥಳ ಗೋಪಾಲ ಭಟ್ಟ : ಧರ್ಮಸ್ಥಳ ಗೋಪಾಲ ಭಟ್ಟರು ಮೂಲ್ಕಿ, ಧರ್ಮಸ್ಥಳ ಹಾಗೂ ಇತರ ಮೇಳಗಳಲ್ಲಿ ಬಣ್ಣದ ವೇಷಕ್ಕೆ ಪ್ರಸಿದ್ಧರು. ಇವರು ಪರಂಪರೆಯ ಬಣ್ಣಗಾರಿಕೆಯ ಕೌಶಲ್ಯ ಹಾಗೂ ಪಾತ್ರ ನಿರ್ವಹಣೆಯ ಮೂಲಕ ಪ್ರಸಿದ್ದರಾಗಿದ್ದರು.

೧೦. ಎಡನೀರು ಹರಿ : ವರ್ತಮಾನದ ಬಣ್ಣದ ವೇಷದ ಕಲಾವಿದರು. ತೆಂಕಿನ ವಿವಿಧ ಮೇಳಗಳಲ್ಲಿ ಬಣ್ಣದ ವೇಷ ಮಾಡಿದ್ದಾರೆ. ವೇಷಗಾರಿಕೆ, ಪಾತ್ರ ನಿರ್ವಹಣೆಯಲ್ಲಿ ಪ್ರಸಿದ್ಧರು.

೧೧. ರವಿ ಪನೆಯಾಲ : ವರ್ತಮಾನದ ಪ್ರಸಿದ್ಧ ಬಣ್ಣದ ವೇಷದ ಕಲಾವಿದರು, ಧರ್ಮಸ್ಥಳ ಮೇಳದ ಕಲಾವಿದರಾಗಿದ್ದಾರೆ. ಇವರ ವೇಷಗಾರಿಕೆ, ಕುಣಿತಾಭಿನಯಗಳಲ್ಲಿ ಪರಿಣಿತರಾಗಿದ್ದಾರೆ.

೧೨. ಶಿವಪ್ರಸಾದ ಪೆರುಬಾಳೆ : ವರ್ತಮಾನದ ಬಣ್ಣದ ವೇಷದ ಕಲಾವಿದರು ಇವರು. ಮೂಲ್ಕಿ, ಈರಾ, ಧರ್ಮಸ್ಥಳ ಮೇಳದ ಕಲಾವಿದರಾಗಿ ಸೇವೆಸಲ್ಲಿಸಿದ್ದಾರೆ. ಇವರ ವೇಷಗಾರಿಕೆಯಿಂದ ಪ್ರಸಿದ್ಧರಾಗಿದ್ದಾರೆ.

ಮಲೆನಾಡಿನ ಕೀರ್ತಿಶೇಷ ಬಣ್ಣದ ವೇಷದ ಕಲಾವಿದರು

೧ ಶಂಕರಯ್ಯನ ತಿಮ್ಮಯ್ಯ ಬೆಳೆಯೂರು

೨ ಹಂಚಿನ ಮನೆ ಪುಟ್ಟಯ್ಯ ಬೆಳೆಯೂರು

೩ ಹೆಗಡೆ ದೇವಪ್ಪ ಬೆಳೆಯೂರು

೪ ರಾಮಯ್ಯನ ಲಕ್ಷ್ಮಯ್ಯ ಬೆಳೆಯೂರು

೫ ಬರಿಗೆ ಹರಿಯಪ್ಪ ಬೆಳೆಯೂರು

೬ ಕಟ್ಟೆ ಪರಮಯ್ಯನವರು ಬನದಕೊಪ್ಪ

ಈ ಎಲ್ಲಾ ಕಲಾವಿದರು ಬಣ್ಣದ ವೇಷದ ಕಲಾವಿದರಾಗಿದ್ದು, ಇವರ ಕುರಿತಾದ ಹೆಚ್ಚಿನ ವಿವರಗಳ ಲಭ್ಯತೆ ಇರುವುದಿಲ್ಲ.

೬.೮ ಚಿನ್ನದ ಪೆಟ್ಟಿಗೆ

ಯಕ್ಷಗಾನದ ವೇಷ ಭೂಷಣಗಳನ್ನು ಇಡುವ ಪೆಟ್ಟಿಗೆಗೆ ಚಿನ್ನದ ಪೆಟ್ಟಿಗೆ ಎಂದು ಹೆಸರು. ಮುಖವಾಡದ ಪೆಟ್ಟಿಗೆ, ಗಣಪತಿ ಪೆಟ್ಟಿಗೆ, ಬಣ್ಣದ ಪೆಟ್ಟಿಗೆ ಇತ್ಯಾದಿ ಹೆಸರುಗಳಿಂದಲೂ ಇದನ್ನು ಕರೆಯುತ್ತಾರೆ. ಇದಕ್ಕೆ ಚಿನ್ನದ ಪೆಟ್ಟಿಗೆ ಹೆಸರು ಬರಲು ಪ್ರಾಚೀನ ಕಾಲದ ದೇವಾಲಯಗಳಲ್ಲಿ

ನಡೆಯುವ ನರ್ತನ ಸೇವೆಗಳಿಗೆ ಆಗ ಚಿನ್ನದ ಆಭರಣಗಳನ್ನೆ ಬಳಸುತ್ತಿದ್ದರು. ನರ್ತಕಿಯರಾದ ದೇವದಾಸಿಯರು ಅವರದ್ದೇ ಆದ ಪೆಟ್ಟಿಗೆ ಹೊಂದಿರುತ್ತಿದ್ದರು. ಈಗಲೂ ಹೆಂಗಸರ ಆಭರಣಗಳನ್ನು ಇಡಲು ಪೆಟ್ಟಿಗೆಗಳನ್ನು ಬಳಸುವುದನ್ನು ಕಾಣುತ್ತೇವೆ. ಹೆಂಗಸರ ಸೌಂದರ್ಯ ವರ್ಧಕಗಳಿಗೂ ಪ್ರತ್ಯೇಕ ಪೆಟ್ಟಿಗೆಯ ವ್ಯವಸ್ಥೆ ಇರುತ್ತದೆ. ಅಲ್ಲದೇ ಆಭರಣ ಪ್ರಿಯರಾದ ಪ್ರಾಚೀನರು ಆಭರಣಗಳನ್ನು ಧರಿಸಿ ಅವುಗಳನ್ನು ಸಂರಕ್ಷಿಸಲು ಈತರನಾದ ವ್ಯವಸ್ಥೆಯನ್ನು ಮನೆಯಲ್ಲೂ ಹೊಂದಿರುತ್ತಿದ್ದರು. ಯಕ್ಷಗಾನದ ವೇಷ ಭೂಷಣಗಳಂತೂ ಆರಾಧನಾ ಸ್ವರೂಪದ ನೆಲೆಯಲ್ಲಿ ಪ್ರತ್ಯೇಕವಾದ ರೀತಿಯಿಂದ ಆಭರಣವನ್ನು ವ್ಯವಸ್ಥಿತವಾಗಿಡುವ ಪದ್ಧತಿ ಮೇಳದಲ್ಲಿದೆ. ಇವುಗಳನ್ನು ಸಿದ್ಧಪಡಿಸುವುದು ಕಲೆಗಾರಿಕೆಯೆ. ಹವ್ಯಕರಲ್ಲಿ ಹತ್ತಾರು ಕುಟುಂಬಗಳು ಈ ರೀತಿ ಆಭರಣಾ ತಯಾರಿಕಾ ಕಾರ್ಯದಲ್ಲಿ ತೊಡಗಿದ್ದು ಕಂಡುಬರುತ್ತದೆ.

ಬಡಗು – ೧

❖ರಾಮಚಂದ್ರ ಕೃಷ್ಣ ಹೆಗಡೆ ಮೂರುರು

ಇವರು ಮೂರುರಿನ ಹುಳಸೆಮಕ್ಕಿಯವರು, ಇವರು ೮.೩.೧೯೪೦ರಲ್ಲಿ ಜನಿಸಿದರು. ಕನ್ನಡ ನಾಲ್ಕನೆ ತರಗತಿಯವರೆಗೆ ವಿದ್ಯಾಭ್ಯಾಸಮಾಡಿ ಕೃಷಿಯೊಂದಿಗೆ ಯಕ್ಷಗಾನ ಭಾಗವತಿಕೆ, ವಾದನ, ವೇಷಗಾರಿಕೆ ಕಲಾಶಾಲೆಯ ಶಿಕ್ಷಕ ವೇಷದ ಸಾಮಾನು ತಯಾರಕರಾಗಿ ಯಕ್ಷಗಾನದ ಎಲ್ಲ ಅಂಗಗಳಲ್ಲೂ ಕೃಷಿಮಾಡಿದ ದಕ್ಷಿಣೋತ್ತರ ಕನ್ನಡದ ವಿರಳಯಕ್ಷರಂಗದ ಸಾಧಕರಲ್ಲಿ ಒಬ್ಬರಾಗಿದ್ದಾರೆ.

ಯಕ್ಷಗಾನ ಶಿಕ್ಷಕರಾಗಿ ಮೂರುರು ಮುಸಗುಪ್ಪೆ ಬಡಾಳ ಬಂಗಣಿಯಲ್ಲಿ ಹಿಂದುಳಿದ ವರ್ಗ ಮರಾಠಿ ಭಾಷಕರಿಗೂ ಯಕ್ಷಗಾನ ಕಲಿಸಿದರು. ಯಕ್ಷಗಾನದ ಸರ್ವಾಂಗ ಪರಿಣಿತಿಯಿರುವ ಇವರೇ ಕಲಾಶಾಲೆಯಾಗಿದ್ದಾರೆ.

❖ ಉಡುಪುಸಿದ್ಧತೆ

ತೆಂಕು, ಬಡಗಿನ ಯಕ್ಷಗಾನದ ಉಡುಪು, ಕಿರೀಟ, ಎದೆಹಾರ, ಭುಜಕೀರ್ತಿ, ಮಣಿ, ಆಭರಣಗಳನ್ನು ಸಿದ್ಧಗೊಳಿಸುತ್ತಾರೆ. ಯಕ್ಷಗಾನ ಮೇಳದ ಎಲ್ಲಾ ಸಾಮಗ್ರಿಗಳನ್ನು ಸಿದ್ಧಪಡಿಸುತ್ತಾರೆ. ಅದಕ್ಕೆ ಬೇಕಾದ ಶಿಮಣಿ, ಮರದ ಕಾಂಡಗಳನ್ನು ಸಿದ್ಧಪಡಿಸಿ ಕೆತ್ತನೆ ಕೆಲಸವನ್ನು ಮಾಡುತ್ತಾರೆ.

ಧರ್ಮಸ್ಥಳಮೇಳ, ಅಮೃತೇಶ್ವರಿ, ಶಿರಸಿ ಪಂಚಲಿಂಗ, ಮಾರಿಕಾಂಬಾ ಮೇಳ, ಪಲ್ಲಾಡಿಮೇಳ, ಸಾಲಿಗ್ರಾಮ, ಪೆರ್ಡೂರು, ಮಂದರ್ತಿ, ಉಡುಪಿ ಎಲ್ಲಾ ಮೇಳಗಳಿಗೂ ಪರಿಕರಗಳನ್ನು ಒದಗಿಸುತ್ತಾರೆ. ಬಡಗು ತೆಂಕಿನ ಪುರುಷವೇಷ, ಸ್ತ್ರೀ ವೇಷ, ರಾಕ್ಷಸವೇಷಗಳಿಗೆ ಬೇಕಾದ ಉಡುಪುಗಳನ್ನು ಸಿದ್ಧಪಡಿಸಿ ಕೊಟ್ಟಿರುತ್ತಾರೆ.

ವೇಷಭೂಷಣಗಳ ಸಿದ್ಧತೆಗೆಬೇಕಾದ ಉಪಕರಣ ಕುಸುರಿ ಕೆತ್ತನೆ ಕೆಲಸಗಳ ಸಾಮಗ್ರಿಗಳ, ಅಂಚು, ಬೇಗಡೆ ಮುಂತಾದ ಪರಿಕರಗಳ ಹೊಂದಿದ ಇವರಮನೆ ಯಕ್ಷಗಾನದ ಕಮ್ಮಟವೆ ಆಗಿದೆ.

ತೆಂಕು ಬಡಗುಗಳ ಸಾಮಗ್ರಿಗಳಷ್ಟು ತಯಾರಿಸುವ ಏಕೈಕ ವ್ಯಕ್ತಿಯೂ ಇವರಾಗಿದ್ದಾರೆ.

❖ **ಗಣಪ ಹೆಗಡೆ ಗೋಪಿಮನೆ:**

ಕುಮಟಾ ತಾಲ್ಲೂಕಿನ ಬಾಡದ ಗೋಪಿಮನೆ ಗಣಪ ಹೆಗಡೆ ಹಿಂದೆ ಯಕ್ಷಗಾನ ಮೇಳದ ವಸ್ತು ತಯಾರಕರಾಗಿದ್ದರು. ಬಾಡ, ಹೆಗಡೆ, ಮೇಳಗಳಿಗೆ ಇವರೆ ವಸ್ತುಗಳನ್ನು ತಯಾರಿಸಿದ್ದರು. ಈಗ ಈ ಮನೆತನದಲ್ಲಿ ಯಾರೂ ಇಲ್ಲದ ಕಾರಣ ಇವರ ಬಗ್ಗೆ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಆದರೆ ಅವರು ತಯಾರಿಸಿದ ವಸ್ತುಗಳು ಇಂದಿಗೂ ಅವಶೇಷಗಳಾಗಿ ಮನೆಯಲ್ಲಿದೆ.

ಬಡಗು ೨

❖ **ನಾರಾಯಣ ಹೆಗಡೆ ಬೆಳ್ಳಿಮನೆ**

ಸಿದ್ಧಾಪುರ ತಾಲ್ಲೂಕಿನ ಬೆಳ್ಳಿಮನೆಯವರಾದ ನಾರಾಯಣ ಹೆಗಡೆಯವರು ಹಿಂದೆ ಪರಿಕರಗಳನ್ನು ಸಿದ್ಧಪಡಿಸುತ್ತಿದ್ದರು. ಅವರು ಕಾರಣಾಂತರಗಳಿಂದ ಈ ವೃತ್ತಿಯನ್ನು ನಿಲ್ಲಿಸಿ ಇವರ ನಂತರದಲ್ಲಿ ಇವರು ತಯಾರಿಸಿದ ವಸ್ತುಗಳನ್ನು ಡಿ.ಜಿ. ಹೆಗಡೆಯವರಿಗೆ ವಹಿಸಲಾಯಿತು. ಈಗ ಡಿ. ಜಿ. ಹೆಗಡೆಯವರು ಈ ವೃತ್ತಿಯಲ್ಲಿ ಮುಂದುವರೆದಿದ್ದಾರೆ.

ಡಿ.ಜಿ. ಹೆಗಡೆಯವರು ಬಡಗಿನ ವೇಷಭೂಷಣಗಳನ್ನು ಸಿದ್ಧಪಡಿಸುತ್ತಿದ್ದರು. ಇವರು ೨೦ ವರ್ಷಗಳಿಂದ ಮೇಳದ ಪರಿಕರಗಳನ್ನು ಸಿದ್ಧಗೊಳಿಸುತ್ತಿದ್ದಾರೆ. ಮೇಳದ ವಸ್ತು ತಯಾರಿಕೆಯಲ್ಲಿ ಆಧುನಿಕ ಸೌಲಭ್ಯಗಳನ್ನು ಬಳಸಿಕೊಂಡು ಸಿದ್ಧಗೊಳಿಸುವುದು ಇವರ ವಿಶೇಷತೆ.

ಇತ್ತೀಚಿನ ಥರ್ಮಕೋಲನ್ನು ಬಳಸಿ ಪಗಡೆ, ಕಿರೀಟಗಳನ್ನು ಸಿದ್ಧಪಡಿಸಿದ್ದಾರೆ. ಕಮಲನಾಥೇಶ್ವರ ಯಕ್ಷಗಾನ ಮಂಡಳಿಯ ಸಂಘಟಕರಾಗಿ ಇವರು ಮಕ್ಕಳ ಮೇಳಕ್ಕಾಗಿ ಹಗುರವಾದ ಪೊಗಡೆ ಕಿರೀಟಗಳನ್ನು ಥರ್ಮಕೋಲನ್ನು ಬಳಸಿಯೆ ಸಿದ್ಧಗೊಳಿಸುತ್ತಿದ್ದಾರೆ.

ಸಾಗರ ತಾಲ್ಲೂಕಿನ ಪರಿಕರಸಿದ್ಧತೆ

೧. ಸಂಜಯ ಬೆಳೆಯೂರು

ಬೆಳೆಯೂರು ಸಂಜಯ ಯಕ್ಷಗಾನ ವೇಷಧಾರಿಗಳು ಇವರು ಬೆಳೆಯೂರು ಮೇಳದ ಕಲಾವಿದರು. ಇವರು ಯಕ್ಷಗಾನ ಪರಿಕರ ಸಿದ್ಧತೆಯಲ್ಲಿ ಪರಿಣಿತರು. ಬೆಳೆಯೂರು ಮೇಳದ ಸಂಚಾಲಕರಾದ ಬಿ. ರಂಗನಾಥರ ಪುತ್ರರಾಗಿದ್ದಾರೆ.

ಪರಿಕರ ಸಿದ್ಧತೆ: ಮರದಿಂದಲೇ ಕಿರೀಟವನ್ನು ಇಂದಿಗೂ ತಯಾರಿಸುವ ಇವರು ಮನೆಯಲ್ಲೆ ಕೆತ್ತನೆ, ಕುಸುರಿ ಕೆಲಸ ಮಾಡುವುದರಲ್ಲಿ ಸದಾ ನಿರತರಾಗಿರುತ್ತಾರೆ. ಕಿರೀಟಸಿದ್ಧತೆ ಮೇಳದ ಪರಿಕರ ಸಿದ್ಧತೆಗಾಗಿ ಸಕಲ ಸಾಮಗ್ರಿಗಳನ್ನು ಹೊಂದಿರುತ್ತಾರೆ. ಪರಂಪರೆಯ ಕಿರೀಟಗಳನ್ನು ಸಿದ್ಧಪಡಿಸುವುದು ಇವರ ವೈಶಿಷ್ಟ್ಯತೆ. ವಿವಿಧ ಕಿರೀಟ ಮಾದರಿಯನ್ನು ಅಭ್ಯಸಿಸಿ ಅದೇ ರೀತಿಯಲ್ಲಿ ಸಿದ್ಧಗೊಳಿಸುತ್ತಾರೆ.

ಇವರ ಮನೆಯಲ್ಲಿ ಪುರಾತನ ಕಾಲದ್ದೆಂದು ಹೇಳಲಾದ ಕಿರೀಟವನ್ನು ದೇವರ ಪೀಠದಲ್ಲಿಟ್ಟು ಪೂಜಿಸುವುದು ವಾಡಿಕೆಯಾಗಿದೆ. ನೂರಾರು ವರ್ಷಗಳ ಹಿಂದಿನ ಎದೆಹಾರ, ಮಣಿಕಟ್ಟು ಮುಂತಾದ ವಸ್ತುಗಳು ಇವರ ಮನೆಯಲ್ಲಿದೆ. ಬಡಗಿನ ಅನೇಕ ಮೇಳಗಳಿಗೆ ಪರಿಕರಗಳನ್ನು ಇವರು ತಯಾರಿಸಿಕೊಟ್ಟಿದ್ದಾರೆ.

ಬೆಳೆಯಾರು ಸುಮಾರು ನೂರೈವತ್ತು ವರ್ಷಗಳ ಯಕ್ಷಗಾನ ಇತಿಹಾಸವನ್ನು ಹೊಂದಿದ ಮೇಳ ಹಾಗೂ ಊರು ಈ ಊರಿನಲ್ಲಿ ೧೮೫೦ರಿಂದ ೧೯೦೦ರಲ್ಲಿಯೆ ಯಕ್ಷಗಾನ ಸಾಮಗ್ರಿ ತಯಾರಿಸುವವರಿದ್ದರು.

೧. ಸಂಕಯ್ಯ ಹಾರೆಗೊಪ್ಪ

೨. ಲಕ್ಷ್ಮಯ್ಯ ಭಾಗವತರು

ಇವರುಗಳ ಬಗ್ಗೆ ವಿಶೇಷ ಮಾಹಿತಿಗಳು ಲಭ್ಯವಿಲ್ಲ. ಈ ಊರಿನಲ್ಲಿ ಇತ್ತು ಎನ್ನಲಾದ ಗೊಂಬೆ ಮಾಡಿದ ಯಕ್ಷಗಾನ ಮೇಳವೊಂದು ಬೆಂಕಿಗಾಹುತಿಯಾಗಿದ್ದನ್ನು ಹಿರಿಯರು ಸ್ಮರಿಸುತ್ತಾರೆ.

ತೆಂಕು : ತೆಂಕುತಿಟ್ಟಿನಲ್ಲಿ ದೇವಕಾನ ಕೃಷ್ಣ ಭಟ್ಟರು ತೆಂಕಿನ ವೇಷಗಳನ್ನು ತಯಾರಿಸುತ್ತಾರೆ. ಇವರು ಕಾಸರಗೋಡಿನ ದೇವಕಾನ ಮನೆತನದವರು. ತೆಂಕಿನ ಕಿರೀಟ, ಎದೆಹಾರ, ಆಭರಣಗಳನ್ನು ತಯಾರಿಸುತ್ತಾರೆ. ಇವರೂ ಕೂಡ ಪರಿಕರಗಳ ತಯಾರಿಕೆಗಾಗಿ ಮರದ ವಸ್ತುಗಳನ್ನು ಬಳಸುತ್ತಾರೆ. ದೇವಕಾನ ಕೃಷ್ಣ ಭಟ್ಟರು ವೇಷಧಾರಿಗಳೂ ಆಗಿದ್ದಾರೆ.

೬.೯. ಪ್ರಶಸ್ತಿ ವಿಜೇತರು

ಯಕ್ಷಗಾನ ರಂಗದ ಕಲಾವಿದರು ಇತರ ಕಲೆಗಳಂತೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಪ್ರಶಸ್ತಿಯನ್ನು ಪಡೆಯುವುದರೊಂದಿಗೆ ಕಲೆಯ ಗೌರವನ್ನು ಹೆಚ್ಚಿಸಿದ್ದಾರೆ. ಭಾರತದ ಇತರ ಕಲೆಗಳಿಗೆ ನೀಡಲಾಗುವ ಪದ್ಮಶ್ರೀ, ರಾಷ್ಟ್ರ ಪ್ರಶಸ್ತಿ ಮುಂತಾದ ಅತ್ಯುನ್ನತ ಪ್ರಶಸ್ತಿಗಳಿಗೆ ಯಕ್ಷಗಾನ ಕಲಾವಿದರು ಭಾಜನರಾಗಿದ್ದಾರೆ. ಒಂದು ಕಲೆ ಕಲಾವಿದನ ಮೂಲಕ ತನ್ನನ್ನು ಗುರುತಿಸಿಕೊಳ್ಳುತ್ತದೆ. ಆದುದರಿಂದ ಕಲೆಯಿಂದ ಕಲಾವಿದನು ಕಲಾವಿದನಿಂದ ಕಲೆಯು ಪ್ರವರ್ಧಮಾನಕ್ಕೆ ಬರುತ್ತದೆ. ಹೀಗೆ ಯಕ್ಷಗಾನ ಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತಿದ್ದ ಹವ್ಯಕರು ಯಕ್ಷಗಾನಕ್ಕೆ ಸಾಕಷ್ಟು ಪ್ರಸ್ತಿಗಳನ್ನು ತಂದುಕೊಡುವ ಮೂಲಕ ಯಕ್ಷಗಾನವನ್ನು ಬಹುಜನಪ್ರಿಯ ಗೊಳಿಸಿದ್ದಾರೆ.

ರಾಷ್ಟ್ರ ಪ್ರಶಸ್ತಿ: ಯಕ್ಷಗಾನ ಕಲೆಗೆ ರಾಷ್ಟ್ರ ಪ್ರಶಸ್ತಿ ಮತ್ತು ರಾಷ್ಟ್ರಮಟ್ಟದ ಪ್ರಶಸ್ತಿಯಾದ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳು ನೀಡಲಪಟ್ಟಿದೆ. ಕೆರಮನೆ ಶಿವರಾಮ ಹೆಗಡೆಯವರು ಈ ನಾಡಿನ ಯಕ್ಷಗಾನ ಕ್ಷೇತ್ರದ ಮೊದಲ ರಾಷ್ಟ್ರ ಪ್ರಶಸ್ತಿ ವಿಜೇತರು. ಇವರ ನಂತರ ಕೆರಮನೆ ಮಹಾಬಲ ಹೆಗಡೆಯವರು ಹಾಗೂ ಶಂಭು ಹೆಗಡೆಯವರು ರಾಷ್ಟ್ರಮಟ್ಟದ ಅಕಾಡೆಮಿ ಪ್ರಶಸ್ತಿಯನ್ನು ಪಡೆದರು.

ಪದ್ಮಶ್ರೀ ಪ್ರಶಸ್ತಿ: ರಂಗದಲ್ಲಿ ಮೊದಲ ಸಲ ಪದ್ಮಶ್ರೀ ಪ್ರಶಸ್ತಿಗೆ ಪಾತ್ರರಾದವರು ಚಿಟ್ಟಾಣಿ ರಾಮಚಂದ್ರ ಹೆಗಡೆಯವರು. ಯಕ್ಷಗಾನ ರಂಗದ ಬಹುದೀರ್ಘಾವಧಿ ನಟಿಸಿದ ಕಲಾವಿದನಿಗೆ ಈ

ಪ್ರಶಸ್ತಿಯು ಅವರ ಕಲಾ ಸೇವೆಗೆ ಸಂದುದಾಗಿದೆ.

ರಾಜ್ಯ ಪ್ರಶಸ್ತಿ: ರಾಜು ಪ್ರಶಸ್ತಿಯನ್ನು ಕೆ. ಗೋವಿಂದ ಭಟ್ಟರು, ಹೊಸ್ತೋಟ ಮಂಜುನಾಥ ಭಾಗವತರು, ಕಡತೋಕಾ ಮಂಜುನಾಥ ಭಾಗವತರು, ಚಿಟ್ಟಾಣಿ ರಾಮಚಂದ್ರ ಹೆಗಡೆ, ಕೆ.ಪಿ. ಹಾಸ್ಯಾಗರರು, ಗೋಡೆನಾರಾಯಣ ಹೆಗಡೆಯವರು ಮುಂತಾದವರಿಗೆ ನೀಡಲಾಗಿದೆ.

ಯಕ್ಷಗಾನ ರಾಜ್ಯ ಅಕಾಡೆಮಿಯು ಪ್ರತಿ ವರ್ಷವು ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡುತ್ತ ಬಂದಿದೆ. ಎಚ್. ಸುಬ್ಬಣ್ಣ ಭಟ್ಟ, ಕರ್ಕಿ ನಾರಾಯಣ ಹಾಸ್ಯಗಾರ, ಹೊಸಹಿತ್ಲು ಮಾಲಿಂಗ ಭಟ್ಟ, ಕಡಂದೇಳು ಪುರುಷೋತ್ತಮ ಭಟ್ಟ, ಪೆರವಡಿ ನಾರಾಯಣ ಭಟ್ಟ, ಧರ್ಮಶಾಲಾ ಮಹಾಬಲೇಶ್ವರ ಭಟ್ಟ ಮುಂತಾದವರು ಪಡೆದಿರುತ್ತಾರೆ. ಡಾ. ಜಿ.ಎಸ್. ಭಟ್ ಹಾಗೂ ಹೊಸಾಕುಳಿ ನಾರಾಯಣ ಭಟ್ಟ ಇವರುಗಳಿಗೂ ರಾಜ್ಯ ಅಕಾಡೆಮಿ ಪ್ರಶಸ್ತಿ ದೊರೆತಿರುತ್ತದೆ.

ಹೊಸ್ತೋಟ ಮಂಜುನಾಥ ಭಾಗವತರು ಪಾರ್ಥಿಸುಬ್ಬ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿಗಳನ್ನು ಪಡೆದವರಾಗಿದ್ದಾರೆ.

ಆರ್ಯಭಟ ಪ್ರಶಸ್ತಿ: ಕುಮಾರ ಶಶಾಂಕ ಎಮ್. ಕಾಶಿ, ಕೆರಮನೆ ಶಂಭು ಹೆಗಡೆ, ಡಾ. ಎಮ್. ಚಿದಾನಮದಮೂರ್ತಿ, ಇವರು ಆರ್ಯಭಟ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ೨೦೦೭ ರಲ್ಲಿ ಧರ್ಮಶಾಲೆ ಮಹಾಬಲೇಶ್ವರ ಭಟ್ಟರಿಗೆ ಪ್ರತಿಷ್ಠಿತ ಉಪ್ಪೂರು ಪ್ರಶಸ್ತಿಯು ಸಂಧಿದೆ. ಇನ್ನು ಅನೇಕ ಹವ್ಯಕ ಕಲಾವಿದರಿಗೆ ವಿವಿಧ ಪ್ರಶಸ್ತಿಗಳು ದೊರೆತಿದ್ದು ಅದರಲ್ಲಿಯೂ ಮೂರು ರಾಷ್ಟ್ರ ಪ್ರಶಸ್ತಿಗಳು ಮತ್ತು ಪದ್ಮಶ್ರೀ ಪ್ರಶಸ್ತಿ ಹವ್ಯಕರಿಗೆ ಸಂದಿರುವುದು ಹವ್ಯಕರ ಹೆಮ್ಮೆಯ ಸಂಗತಿಯಾಗಿದೆ.

ಅಧ್ಯಾಯ ೭

ಸಮಾರೋಪ

1) ಯಕ್ಷಗಾನ ಕಲೆ ಕನ್ನಡನಾಡಿನ ಹೆಮ್ಮೆಯ ಕಲೆಯಾಗಿದೆ. ಲಕ್ಷಾಂತರ ಜನರಿಗೆ ಅನೌಪಚಾರಿಕ ಶಿಕ್ಷಣವಾಗಿ ಮೌಲ್ಯಯುತ ಬದುಕನ್ನು ರೂಪಿಸಿದೆ. ಮನರಂಜನೆಯ ಮಾಧ್ಯಮವಾಗಿ ಉತ್ತಮ ಜೀವನ ಮೌಲ್ಯಗಳನ್ನು ಬೋಧಿಸುವ ಭಾರತೀಯ ಸಂಸ್ಕೃತಿಯ ಸಾರವನ್ನು ಕಲೆಯ ಮೂಲಕ ಜನರಿಗೆ ಸುಲಭವಾಗಿ ಸಾರಿದ ಸಾಂಸ್ಕೃತಿಕ ಕಮ್ಮಟವಾಗಿದೆ. ಮಹಾನ್ ಕಾವ್ಯಗಳ ವಸ್ತುಗಳನ್ನು ವಾಕ್ ಪರಂಪರೆಗೆ, ಹಾಡಿನ ಶೈಲಿಗೆ, ಕಥಾರೂಪಕಕ್ಕೆ ಅಳವಡಿಸಿ ಜನರ ಭಾಷೆ, ವೈಚಾರಿಕತೆ, ತಾರ್ಕಿಕತೆಯನ್ನು ಬೆಳೆಸಿದೆ. ಅವಿದ್ಯಾವಂತರು ಯಕ್ಷಗಾನರಂಗದ ಕಲಾವಿದರಾಗಿ ಜ್ಞಾನಸಂಪತ್ತು ಗಳಿಸಿ ಜನರ ಅಜ್ಞಾನವನ್ನು ತೊಡೆದು ಹಾಕಲು ಶ್ರಮಿಸಿದ್ದಾರೆ. ಸಮಕಾಲೀನ ಜಗತ್ತಿನ ಮನೋರಂಜನ ಮಾಧ್ಯಮಗಳಿಗಿಂತ ಉತ್ತಮ ವಿಚಾರಗಳನ್ನಷ್ಟೆ ರಂಜಿಸಿದ ಯಕ್ಷಗಾನ ರಂಗ ಬಹುಕಾಲ ಜನರ ಆರಾಧನಾ ಕಲೆಯಾಗಿ ಬೆಳೆದು ಬಂದಿದೆ. ಯಕ್ಷಗಾನದ ಕಲಾಪ್ರಸಾರಕರು ಮತ್ತು ಕಲೋಪಾಸಕರು ಎಂದು ಕಲಾವಿದರನ್ನು ಮತ್ತು ಸಾಮಾಜಿಕರನ್ನು ಗುರುತಿಸಿದರೆ ಹವ್ಯಕ ಜನಾಂಗವು ಪೂರ್ಣವಾಗಿ ಯಕ್ಷಗಾನ ಕಲೆಯ ಪರಿಧಿಯೊಳಗೆ ತನ್ನನ್ನು ಗುರುತಿಸಿಕೊಂಡಿದೆ. ಯಕ್ಷಗಾನ ಕಲೆಯ ಇತಿಹಾಸವು ಈವರೆಗೆ ನಾಲ್ಕುನೂರು ವರ್ಷಗಳ ನೆಲೆಯನ್ನಷ್ಟೆ ಶೋಧಿಸಿದರೆ, ಹವ್ಯಕರ ನೆಲೆಗಳು ಅವರ ಸಂಸ್ಕೃತಿಯ ಆಧಾರದ ಮೇಲೆ ಇದನ್ನು ಇನ್ನೂ ಪ್ರಾಚೀನ ಕಲೆ ಎಂದು ನಿರ್ಧರಿಸಲಾಗಿದೆ. ಹಾಡುಹಬ್ಬಗಳಲ್ಲಿ ವೇದ ಪುರಾಣಗಳ ಮೌಲ್ಯವನ್ನು ಪಾತ್ರಮುಖೇನ ಅಭಿವ್ಯಕ್ತಿಗೊಳಿಸುವ ಕಲೆ ಹವ್ಯಕರ ಆರಾಧನಾ ಪರಂಪರೆಯ ಮೂಲದಲ್ಲೆ ಅಡಗಿದೆ. ದೇವತಾ ಪೂಜೆಯ ಅಂಗವಾಗಿ ದೇವಾಲಯಗಳೆ ಕೇಂದ್ರವಾಗಿ ಯಕ್ಷಗಾನ ಬೆಳೆದುದರಿಂದ ಯಕ್ಷಗಾನ ಆರಾಧನಾ ಕಲೆಯಾಗಿದೆ. ಪ್ರಜಾವಿಧಾನದ ಕಲಾಸ್ವರೂಪವಾಗಿ ವಿಕಾಸಗೊಂಡು ಸಾಮಾಜಿಕ ಕಲೆಯಾಗಿ ರೂಪಗೊಂಡಿದೆ.

2) ಹವ್ಯಕರ ನೆಲೆಗಳಲ್ಲೆ ಇದು ಇಂದಿಗೂ ನೆಲೆಗೊಂಡಿದ್ದು ಇದಕ್ಕೆ ಸಾಕ್ಷಿಯಾಗಿದೆ. ಹವ್ಯಕರ ಭಾಷೆ, ಭಾವನೆಗಳಿಗೆ ಅಭಿವ್ಯಕ್ತಿ ವಿಧಾನಗಳಿಗೆ ಯಕ್ಷಗಾನ ಗದ್ಯಪದ್ಯಗಳು ಆವರಣವಾಗಿದೆ. ಯಕ್ಷಗಾನ ಲಿಖಿತ ಸಾಹಿತ್ಯ ರೂಪದಲ್ಲಿ ಪ್ರಸಂಗ ಸಾಹಿತ್ಯ ರಚನೆ ಸುಮಾರು ನಾಲ್ಕುನೂರು ಕವಿಗಳು ರಚಿಸಿದ ೨೧೬೦ ಪ್ರಸಂಗ ಕೃತಿಗಳು ಉಪಲಬ್ಧವಿದೆ. ಇನ್ನೂ ಹವ್ಯಕರಿಂದ ಸಾಹಿತ್ಯ ರಚನೆಗೊಳ್ಳುತ್ತಲೆ ಇದೆ.

3) ಯಕ್ಷಗಾನ ಕಲೆಯಿಂದಲೆ ಹವ್ಯಕರ ಮನೆತನಗಳಿಗೆ ಭಾಗವತ, ಸಭಾಹಿತ, ಹಾಸ್ಯಗಾರ ಎಂಬ

ಹೆಸರು ಬಂದಿದೆ. ಈ ಮನೆತನಗಳ ಇತಿಹಾಸ ಕಲೆಯ ಇತಿಹಾಸದಷ್ಟೇ ಪ್ರಾಚೀನವಾಗಿದೆ. ಈ ಮನೆತನಗಳೆ ಯಕ್ಷಗಾನವನ್ನು ರೂಪಿಸಿದ್ದು ಬೆಳೆಸಿದ್ದು ಎಂಬುದು ಅರಿವಾಗುತ್ತದೆ.

4) ಯಕ್ಷಗಾನ ಇತಿಹಾಸದಲ್ಲಿ ಹಳೆಯ ಮೇಳವೆಂದು ಗುರುತಿಸಲ್ಪಟ್ಟು ಕರ್ಕಿದುರ್ಗಾಂಬಾ ಪ್ರಾಸಾದಿತ ಯಕ್ಷಗಾನ ಮಂಡಳಿಯ ಕಲಾವಿದರ ಮನೆತನದ ಚರಿತ್ರೆ ಒಂಭತ್ತು ತಲೆಮಾರಿನಷ್ಟು ಹಿಂದಿನದಾಗಿದ್ದು ಅಂದಿನಿಂದಲೂ ಕಲಾಪರಂಪರೆ ಬಳುವಳಿಯಾಗಿ ಮನೆತನದಲ್ಲಿ ಬೆಳೆದು ಬಂದಿದೆ. ಇಂದಿಗೂ ಯಕ್ಷಗಾನದ ಪ್ರಾಚೀನ ಸ್ವರೂಪ ಸಾಂಪ್ರದಾಯಿಕ ಶೈಲಿಯನ್ನು ಕರ್ಕಿಹಾಸ್ಯಗಾರ ಮನೆತನದಲ್ಲಿ ಕಾಣಬಹುದಾಗಿದೆ.

5) ಉತ್ತರಕನ್ನಡದ ಹವ್ಯಕರ ನೆಲೆಯು ಕದಂಬ ರಾಜರಿಂದ ಸ್ಥಾಪಿತಗೊಂಡಿದ್ದು ಸುಮಾರು ೧೭೦೦ ವರ್ಷಗಳ ಇತಿಹಾಸ ಈ ನೆಲೆಗಳಿಗಿವೆ. ಈ ನೆಲೆಯನ್ನು ಕೇಂದ್ರವಾಗಿ ಹೊರಪ್ರದೇಶಗಳಿಗೆ ವ್ಯಾಪಿಸಿದ ಹವ್ಯಕರ ಪ್ರಸ್ತುತ ಜನಸಂಖ್ಯೆ ೩ ಲಕ್ಷದ ೨೦ ಸಾವಿರ ಎಂದು ಇತ್ತೀಚಿನ ಸಮೀಕ್ಷೆ ದಾಖಲಿಸಿದೆ. ಈವರೆಗೆ ಯಕ್ಷಗಾನ ಕಲಾಪ್ರಸಾರಕರಾಗಿ ೩೦೦೦ ಕುಟುಂಬಗಳು ಕ್ಷೇತ್ರಕಾರ್ಯದಿಂದ ಲಭ್ಯವಾಗಿದೆ. ಇದರಲ್ಲಿ ಗ್ರಂಥಬಾಹುಳ್ಯದ ಲಕ್ಷದಿಂದ ಒಂದು ಸಾವಿರಕ್ಕೂ ಹೆಚ್ಚು ಜನರನ್ನು ಮಾತ್ರ ದಾಖಲಿಸಲಾಗಿದೆ. ಉದ್ಯೋಗನಿಮಿತ್ತ ದೇಶವಿದೇಶಗಳಲ್ಲಿ ಚದುರಿಹೋದ ಹವ್ಯಕರ ನೆಲೆಗಳ ಮೂಲ ನೆಲೆಯ ಕುಟುಂಬಗಳಿಂದಲೆ ಯಕ್ಷಗಾನ ಆ ಎಲ್ಲ ಪ್ರದೇಶಗಳಿಗೂ ಪ್ರಸಾರಗೊಂಡಿದೆ. ಅಂದರೆ ಇಂದಿನ ಸಮೀಕ್ಷೆಯ ಪ್ರಕಾರ ಮೂರು ಲಕ್ಷ ಜನರೂ ಯಕ್ಷಗಾನ ಕಲಾರಾಧಕರೆ ಆಗಿರುತ್ತಾರೆ. ಪ್ರತಿ ಊರಿನ ಪ್ರದರ್ಶನದಲ್ಲಿ ಸರಾಸರಿ ನೂರು ಹವ್ಯಕರ ಕುಟುಂಬದ ಸದಸ್ಯರು ವೀಕ್ಷಕರಾಗಿರುತ್ತಾರೆ. ಹವ್ಯಕರು ಯಕ್ಷಗಾನದ ಪೋಷಕರು ಹೌದು.

6) ಹವ್ಯಕರು ಮತ್ತು ಯಕ್ಷಗಾನ ಅಧ್ಯಯನವು ಕೇವಲ ಒಂದು ಚಿತ್ರಣ ಮಾತ್ರ ಎಂದು ನಂಬಲಾಗಿದೆ. ಇನ್ನು ಆಳವಾಗಿ ಹವ್ಯಕ ನೆಲೆಗಳ ಪರಿಶೋಧನೆ, ಸಾಹಿತ್ಯ ಪರಿಶೋಧನೆಯ ಸಾಧ್ಯತೆಗಳಿವೆ. ಭಾಷಾವಿಕಾಸದ ದೃಷ್ಟಿಯಿಂದಲೂ ಯಕ್ಷಗಾನ ಸಾಹಿತ್ಯವು ಅತ್ಯಂತ ಮಹತ್ವದ್ದಾಗಿದ್ದು ಭಾಷಿಕ ಸಂರಚನೆಯ ಅಧ್ಯಯನಕ್ಕೂ ಅವಕಾಶವಿದೆ.

ಕನ್ನಡಸಾಹಿತ್ಯ ಚರಿತ್ರೆಯಲ್ಲಿ ಯಕ್ಷಗಾನ ಸಾಹಿತ್ಯವು ಒಂದು ಪ್ರಕಾರವಾಗಿ ಪರಿಗಣಿಸಬೇಕಾದ ಅಗತ್ಯತೆ ಅಧ್ಯಯನದಿಂದ ಕಂಡುಬರುತ್ತದೆ.

7) ಯಕ್ಷಗಾನ ಕವಿಗಳು, ಕಲಾವಿದರನ್ನು ಆಧರಿಸಿ ಯಕ್ಷಗಾನ ಸಾಹಿತ್ಯ ಚರಿತ್ರೆಯನ್ನು ರೂಪಿಸಲು ಸಾಧ್ಯವಿರುವಷ್ಟು ಸಾಹಿತ್ಯ ಮತ್ತು ಕಲೆಯ ಅಂಶಗಳನ್ನು ಅಧ್ಯಾಯದಲ್ಲಿ ಗುರುತಿಸಲಾಗಿದ್ದು ಯಕ್ಷಗಾನ ಸಾಹಿತ್ಯ ಚರಿತ್ರೆಯ ರಚನೆಗೆ ಈ ಅಧ್ಯಯನ ಪ್ರೇರಣೆಯಾಗಿದೆ ಎಂದು ಭಾವಿಸಲಾಗಿದೆ.

8) ಕನ್ನಡನಾಡಿನ ಕಲೆಗೆ ಹೆಮ್ಮೆ ತರುವ ರಾಷ್ಟ್ರ ಮಟ್ಟದ ಪ್ರಶಸ್ತಿಗಳು, ರಾಷ್ಟ್ರಪ್ರಶಸ್ತಿಗಳು, ಇತ್ತೀಚಿಗೆ ಪದ್ಮಶ್ರೀ ಪ್ರಶಸ್ತಿ ಹವ್ಯಕ ಕಲಾವಿದರಿಗೆ ಸಂದಿದೆ. ಈ ಪ್ರಶಸ್ತಿಗಳಿಂದ ಕಲೆಯ ಗೌರವವು ಹೆಚ್ಚಿದೆ. ಇಂತಹ ಮಹಾನ್ ಕಲಾಪರಂಪರೆಯ ಕಲಾವಿದರನ್ನು ಕಲೆ ಹುಟ್ಟುಹಾಕಿದೆ. ಎಲ್ಲರ ಶ್ರಮದಿಂದಲೇ ಕಲೆ ಬೆಳೆದುಬಂದಿದೆ. ಒಬ್ಬೊಬ್ಬ ಮಹಾನ್ ನಟರು ಪ್ರೇಕ್ಷಕರಲ್ಲಿ ಯಕ್ಷಗಾನದ ಒಲವನ್ನು ಬೆಳೆಸಿ

ಕಲೆಯನ್ನು ಜನಪ್ರಿಯಗೊಳಿಸಿದ್ದಾರೆ. ಆಧುನಿಕ ತಂತ್ರಜ್ಞಾನದ ಮನರಂಜನೆಯ ಮಾಧ್ಯಮಗಳ ನಡುವೆಯೂ ಯಕ್ಷಗಾನ ಉಳಿದುಕೊಂಡಿದೆ.

9) ಹವ್ಯಕರು ದೈವೀ ಆರಾಧಕರು, ಆಸ್ತಿಕತೆಯಲ್ಲಿ ನಂಬಿಕೆ ಇಟ್ಟವರು. ವೈದಿಕಮತದ ಯಜ್ಞಯಾಗಾದಿಗಳಿಂದ ಮನೆದೇವರ ಪೂಜೆಯವರೆಗೆ ದೇವರನ್ನು ಎಲ್ಲೆಲ್ಲು ಕಂಡು ಸಾಂಕೇತಿಕತೆಯಲ್ಲಿ ದೇವರನ್ನು ಬಿಂಬಿಸಿದರು. ಯಕ್ಷಗಾನ ಕಿರೀಟದಲ್ಲಿ ಯಕ್ಷಗಣಪತಿಯ ಆರಾಧನೆಯ ಸಾಂಕೇತಿಕತೆಯನ್ನು ಈಗಾಗಲೇ ವಿದ್ವಾಂಸರು ದೃಢಪಡಿಸಿದ್ದಾರೆ. ಗಣಪತಿ ಉಪಾಸಕರ ಗಾಣಪತ್ಯ ನೆಲೆಗಳಲ್ಲಿ ಯಕ್ಷಗಾನಾರಾಧಕರು ಸಾಕಷ್ಟು ನೆಲೆಸಿರುವುದು ಸಮೀಕ್ಷೆಯಿಂದಲೂ ತಿಳಿದುಬರುತ್ತದೆ. ಹವ್ಯಕರಿಗೆ ಯಕ್ಷಗಾನ ಪೂಜನೀಯ ಕಲೆ ಎಂಬುದರಲ್ಲಿ ಸಂದೇಹವೇ ಇಲ್ಲ.

10) ಹವ್ಯಕರಲ್ಲಿ ಬಹುತೇಕ ಆರ್ಥಿಕವಾಗಿ ಮಧ್ಯಮ ವರ್ಗದವರೇ ಹೆಚ್ಚು. ತೋಟದ ಬೇಸಾಯ ಅವರ ಬದುಕಿನ ಜೀವಾಳವಾಗಿದೆ. ಈ ಅರೆಉದ್ಯೋಗದ ನಡುವೆ ಹವ್ಯಕರಿಗೆ ಜೀವನೋಪಾಯದ ಮಾರ್ಗವಾಗಿಯೂ ಯಕ್ಷಗಾನವನ್ನು ಕಲಾವಿದರ ಕುಟುಂಬಗಳು ಅವಲಂಬಿಸಿದೆ. ಯಕ್ಷಗಾನವನ್ನು ನೆಚ್ಚಿದ ಬಡಕುಟುಂಬಗಳು ಯಕ್ಷಗಾನ ಪ್ರದರ್ಶನ ಎಲ್ಲೆ ಇರಲಿ ಎಷ್ಟೆ ದೂರವೇ ಇರಲಿ ಕಷ್ಟಪಟ್ಟು ಹಳ್ಳಿಯಿಂದ ನಡೆದು ಹಣಕೊಟ್ಟು ರಾತ್ರಿಯಿಡಿ ನೋಡಿ ಆನಂದಿಸುವ ಹವ್ಯಕರಿಗೆ ಯಕ್ಷಗಾನವು ಗೀಳು! ಎಂದರೂ ಅತಿಶಯೋಕ್ತಿಯಲ್ಲ.

11) ಉದ್ಯೋಗಾಕಾಂಕ್ಷಿಗಳಾಗಿ ದೇಶವಿದೇಶಗಳಲ್ಲಿ ಉನ್ನತ ಸ್ಥಾನಮಾನ ಹಣಗಳಿಕೆಯ ಉದ್ಯೋಗದಲ್ಲಿದ್ದರೂ ಯಕ್ಷಗಾನವು ಅಲ್ಲಿಗೆ ಒಯ್ದು ತಮ್ಮ ಕಲೆಯೆಂಬ ಆದರದಿಂದ ಸಂತೋಷಪಡುವ ಆಕಾಂಕ್ಷೆಯಿಂದಲೇ ಯಕ್ಷಗಾನ ಅಮೇರಿಕಾ ದೇಶದ ಕನ್ನಡಿಗರ ನೆಲೆಯವರೆಗೆ ಪ್ರದರ್ಶನಗೊಂಡಿದೆ. ಬೆಂಗಳೂರು, ಮುಂಬೈಗಳಂತಹ ಮಹಾನಗರಗಳಲ್ಲೂ ಅನೇಕ ಯಕ್ಷಗಾನ ಸಂಘಗಳು ಸ್ಥಾಪನೆಗೊಂಡಿದೆ. ಅಲ್ಲಿ ವಾಸಿಸುವ ಹವ್ಯಕರ ಮಕ್ಕಳು ಯಕ್ಷಗಾನ ಕಲಿತು ಪ್ರದರ್ಶಿಸಿ ಸಂತೋಷಪಡುತ್ತಿದ್ದಾರೆ. ಇದು ಯಕ್ಷಗಾನ ಮುಂದಿನ ತಲೆಮಾರಿನಲ್ಲೂ ಹೊಸರೂಪತಾಳಿ ವಿಜೃಂಭಿಸುವ ಮುನ್ಸೂಚನೆಯಾಗಿದೆ.

12) ಯಕ್ಷಗಾನ ತನ್ನ ಮೇಳ ಸ್ವರೂಪದ ಪ್ರತಿಬಿಂಬವೂ ಎಂಬಂತೆ ಯಕ್ಷಕಲಾಕೂಟಗಳಾಗಿ ಹಳ್ಳಿಹಳ್ಳಿಗಳಲ್ಲೂ, ಮಹಾನಗರದ ವಿವಿಧ ಬಡಾವಣೆಗಳಲ್ಲೂ ಸಾಕಷ್ಟು ತಲೆ ಎತ್ತಿದೆ. ತಾಳಮದ್ದಳೆಯ ರಂಗವಂತೂ ಇಂದಿಗೂ ಆಕರ್ಷಣೆ ಕಳೆದುಕೊಂಡಿಲ್ಲ. ವರ್ತಮಾನದ ಬದುಕಿನ ಜಂಜಾಟಗಳು, ಮಾಧ್ಯಮಗಳ ಆಕರ್ಷಣೆಯಿಂದ ಕೆಲವು ಕಲೆಗಳು ನಾಮಾವಶೇಷಗೊಂಡರೂ ಯಕ್ಷಗಾನ ತನ್ನ ಆಕರ್ಷಣೆ ಕಳೆದುಕೊಳ್ಳದಿರುವುದಕ್ಕೆ ಅದು ಹವ್ಯಕರ ಜೀವನಕಲೆಯಾಗಿರುವುದರಿಂದಲೇ ಸಾಧ್ಯ. ಇದೊಂದು ಶೈಲಿಕೃತ ಕಲೆಯಾಗಿದ್ದು, ಅದರ ಪಠ್ಯ ಹಾಗೂ ಪ್ರಯೋಗಗಳ ಭಾಷೆಯನ್ನು ಹಾಗೂ ಕಥಾವಸ್ತುಗಳನ್ನು ಗಮನಿಸಿದರೆ ಯಕ್ಷಗಾನ ಶಿಷ್ಟ ಜನಪದ ಮೂಲದಿಂದ ಉದ್ಭವಿಸಿದೆ. ಅದು ನಾಗರೀಕರನ್ನು ವ್ಯಾಪಿಸಿ ಪಾಮರರಿಂದ ಪಂಡಿತರವರೆಗೆ ಆಕರ್ಷಣೀಯವಾಗಿ ಬೆಳೆದಿದೆ. ಮಹಾಕಾವ್ಯಗಳ ಮೌಲ್ಯಗಳು ಸಾರಗಳು ಜನಸಾಮಾನ್ಯರಿಗೆ ಓದಿ ಅರಿಯುವ ಆಸೆ ದೂರವೆ

ಇದ್ದರೂ ಯಕ್ಷಗಾನ ಪಸರಿಸಿದ ಪ್ರದೇಶಗಳಲ್ಲಿ ರಾಮಾಯಣ ಮಹಾಭಾರತದ ಮೌಲ್ಯವನ್ನೇ ಉದಾಹರಿಸಿ ಮಾತನಾಡುವ ಸಾಮರ್ಥ್ಯವಿರುವ ವರದಿಗಳು ದೊರಕುತ್ತವೆ. ಇದಕ್ಕೆ ಕಲಾ ಸಂಸ್ಕಾರವೇ ಕಾರಣವಾಗಿದೆ.

13) ಯಕ್ಷಗಾನಮೇಳ ಕಲೆಗೆ ಜಾತಿಯ ಕಟ್ಟುಪಾಡುಗಳಿಲ್ಲ ಆದರೆ ಕಲೆಗೊಂದು ನೆಲೆಯಿದೆ. ಎಲ್ಲಾ ವರ್ಗದ ಜನರನ್ನೂ ಆದರದಿಂದ ಕಂಡು ಸರ್ವಸಮಭಾವದಿಂದ ಕಲೆ ರೂಪಗೊಂಡಿದೆ. ಆದರೆ ವಾಸ್ತವಿಕವಾಗಿ ಕಲೆಗೆ ಕೊಡುಗೆ ನೀಡಿದವರನ್ನು ಸಮಷ್ಟಿಯಿಂದ ಗುರುತಿಸುವಾಗ ಹವ್ಯಕರು ಯಕ್ಷಗಾನದಲ್ಲಿ ತೊಡಗಿಕೊಂಡಿದ್ದು ಗಣನೀಯವಾಗಿದೆ. ಇದು ಕಲೆಯ ಕುರಿತಾದ ಅಭಿಮಾನ ಗೌರವ ಸಮರ್ಪಣೆಯೇ ಹೊರತು ಹೆಚ್ಚುಗಾರಿಕೆಯಲ್ಲ.

14) ಯಕ್ಷಗಾನ ಕಲೆಯ ಅಂಗೋಪಾಂಗಗಳ ಕುರಿತು ಈವರೆಗೆ ಸಾಕಷ್ಟು ಅಧ್ಯಯನಗಳು ಸಂಶೋಧನಾತ್ಮಕ ಗ್ರಂಥಗಳು ಪ್ರಕಟಗೊಂಡಿದೆ. ಕಲಾವಿದರ ಕುರಿತಂತೆ ವ್ಯಕ್ತಿಗತ ಅಧ್ಯಯನಗಳು ನಡೆದಿವೆ. ಯಕ್ಷಗಾನ ಕಲೆಯು ವಿಕಾಸಗೊಂಡ ನೆಲೆಗಳ ಕುರಿತು ಇಡಿಯಾದ ಚಿಂತನಗಳ ಕೊರತೆಯಿತ್ತು. ಯಕ್ಷಗಾನವನ್ನು ಆದರಣೀಯವಾಗಿ ಬೆಳೆಸಿದ ಕುಟುಂಬಗಳು ಸಾವಿರಾರು ಕಲಾವಿದಕಲಾ ಕೊಡುಗೆಗಳು ನಾಲಿಗೆಯಿಂದ ನಾಲಿಗೆಗೆ ಹರಿದುಬರುತ್ತಿದ್ದು ಅವುಗಳು ಮರೆತುಹೋಗುವ ಮುನ್ನ ಅರಿತ ವಿದ್ವಾಂಸರಿಂದ ಕೇಳಿ ದಾಖಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ.

15) ಈ ಶೋಧನೆ ಹಲವು ಸಂಶೋಧನೆಗೆ ದಾರಿಮಾಡಿ ಕೊಡುತ್ತದೆ ಎಂದು ಆಶಿಸಲಾಗಿದೆ. ಯಕ್ಷಗಾನ ಸಂಘಟನೆಯ ಆಶೋತ್ತರಗಳ ಪ್ರೇರಣೆ, ಕನ್ನಡ ಭಾಷೆಯ ಪ್ರಭಾವ, ಇತರ ಜನಾಂಗಗಳ ಕೊಡುಗೆಗಳು, ನಟನ ಪಾತ್ರಾಭಿವ್ಯಕ್ತಿಯ ಮನಶಾಸ್ತ್ರೀಯ ಚಿಂತನೆಗಳ ಅಧ್ಯಯನ ಮಾಡಬಹುದಾದ ಸಾಧ್ಯತೆಗಳಿವೆ.

ಈ ಸಂಶೋಧನೆಯ ಆರಂಭದಲ್ಲಿದ್ದ ಸಂದೇಹಗಳಿಗೆ ದೊರೆತ ಪರಿಹಾರವನ್ನು ಅಧ್ಯಯನದ ಫಲಿತಗಳಲ್ಲಿ ಕಂಡುಕೊಳ್ಳಲಾಗಿದೆ.

1) ಕಲೆಯು ಆರಾಧನೆ ಮತ್ತು ಪರಂಪರೆ ಎಂದು ಭಾವಿಸಿದ ಹವ್ಯಕರಿಗೆ ಆರ್ಥಿಕ ಲಾಭಕ್ಕಿಂತ ಕಲಾಭಿವ್ಯಕ್ತಿಯೆ ಶ್ರೇಷ್ಠ ಎಂಬ ಧೋರಣೆಯನ್ನು ಹೊಂದಿದ್ದರಿಂದ ಆರ್ಥಿಕ ಸಂಕಷ್ಟವನ್ನು ಎದುರಿಸಿಯೂ ಮೇಳ ಸಂಘಟನೆಯನ್ನು ಮುನ್ನಡೆಸುತ್ತಿದ್ದಾರೆ.

2) ಹವ್ಯಕರು ಸಾಮಾಜಿಕ ಕಟ್ಟುಪಾಡು, ಧಾರ್ಮಿಕ ಕಟ್ಟುಪಾಡು, ಮಠಮಂದಿರದ ಅವಗಣನೆ ಇದ್ದ ಕಾಲದಲ್ಲೂ ಎಲ್ಲವನ್ನು ಮೀರಿ ಯಕ್ಷಗಾನದಲ್ಲಿ ತೊಡಗಿಕೊಂಡಿದ್ದಾರೆ.

3) ಹವ್ಯಕ ಕಲಾವಿದರು ಸಮಾಜದ ಎಲ್ಲ ವರ್ಗದವರನ್ನು ಕಲೆಯಲ್ಲಿ ಪೋಷಿಸಿದ್ದಾರೆ. ಎಲ್ಲ ವರ್ಗದಿಂದಲೂ ಗೌರವವನ್ನು ಗಳಿಸಿದ್ದಾರೆ.

4) ಹವ್ಯಕರು 'ಮನೆತನದ ಕಲೆಯಾಗಿ' ಬೆಳೆಸಿದ್ದರಿಂದ ವಂಶಪಾರಂಪರ್ಯವಾಗಿ ಕಲೆಯನ್ನು ಕಾಯ್ದುಕೊಂಡಿದ್ದಾರೆ.

5) ಹವ್ಯಕರು ಉನ್ನತ ಶಿಕ್ಷಣ ಪಡೆದವರಿದ್ದರು, ಉನ್ನತ ಸ್ಥಾನಮಾನದಲ್ಲಿದ್ದರೂ, ವಿದೇಶಗಳಲ್ಲಿದ್ದರೂ ಕಲೆಯನ್ನು ಎಂದಿಗೂ ಅವಗಣನೆಯಿಂದ ಕಂಡವರಲ್ಲ.

6) ವೈದಿಕ ಪರಂಪರೆಯವರಾಗಿದ್ದ ಹವ್ಯಕರಿಗೆ ಪುರಾಣಗಳು ಸುಲಭ ಗ್ರಾಹ್ಯವಾದುದರಿಂದ ಕಲೆ ಪರಂಪರೆಯಾಗಿ ಮುಂದುವರಿಯಿತು ಎಂದೆನ್ನಿಸುತ್ತದೆ.

7) ವೈದಿಕ ಮತಾಚರಣೆಯು ಪುರಾಣಗಳಲ್ಲಿ ಮರುಹುಟ್ಟು ಪಡೆದು ಯಕ್ಷಗಾನಾರಾಧನೆಯಲ್ಲಿ ಮುಂದುವರೆದಂತೆ ತೋರುತ್ತದೆ. ಯಕ್ಷಗಾನ ಕಲಾವಿದರು ಸ್ವಮತ ಧರ್ಮಾಚರಣೆಯ ಆರಾಧನೆಯನ್ನು, ದೇವೋಪಾಸನೆಯನ್ನು ಯಕ್ಷಗಾನದಲ್ಲೇ ಕಂಡುಕೊಂಡಿದ್ದಾರೆ. ಯಕ್ಷಗಾನ ಪುರಾಣ ಮರುಹುಟ್ಟಿದ ಸ್ವರೂಪದಿಂದಾಗಿ ಆಧುನಿಕ ಅವಸರದ ವಿಜ್ಞಾನ ತಂತ್ರಜ್ಞಾನ ಯುಗದಲ್ಲಿಯೂ ನಶಿಸದೆ ಬೆಳೆಯುತ್ತಿದೆ ಎಂಬುದನ್ನು ಕಲೆಯ ನೆಲೆಯ ಶೋಧನೆಯಿಂದ ಕಂಡುಕೊಳ್ಳಲಾಗಿದೆ.





© RAMMOHAN PHOTOGRAPHY




ಅನುಬಂಧ

ಅನುಬಂಧ – I

ಅಡಿಟಿಪ್ಪಣಿಗಳು ಮತ್ತು ಆಧಾರ ಗ್ರಂಥಗಳು

ಅಧ್ಯಾಯ – ೨

೧. ಡಾ. ಎನ್.ಆರ್. ನಾಯಕರು ಕಾರವಾರ ಜಿಲ್ಲೆಯ ಜನಪದ ಗೀತೆಗಳು ಎಂಬ ಅಧ್ಯಯನದಲ್ಲಿ ಕೊಂಕಣ ಎಂಬ ಪ್ರದೇಶದ ಕುರಿತು, ಸಪ್ತಕೊಂಕಣಗಳಲ್ಲಿ ಹೈಗ ದೇಶದ ಕುರಿತು ಉಲ್ಲೇಖಿಸಿದ್ದಾರೆ ಪು. ೧೮ರಲ್ಲಿ ಗಮನಿಸಲಾಗಿದೆ.

೨. "ಹವ್ಯಕರ ಇತಿಹಾಸ" ಕೃತಿಯನ್ನು ಶ್ರೀ ಹೆಚ್.ಎಂ. ಕಲಸಿಯವರು ಬರೆದು ಪ್ರಕಟಿಸಿರುತ್ತಾರೆ. ಇದೇ ಕೃತಿಯನ್ನು "ಹವ್ಯಕರ ಇತಿಹಾಸ ದರ್ಶನ" ಶೀರ್ಷಿಕೆಯಲ್ಲಿ ಹವ್ಯಕ ಅಧ್ಯಯನ ಕೇಂದ್ರವು ಪ್ರಕಟಿಸಿದೆ. ಗ್ರಂಥವು ೨೦೧೨ರಲ್ಲಿ ಪ್ರಕಟವಾಗಿದೆ. ಗ್ರಂಥದಲ್ಲಿ ಹವ್ಯಕರ ಮೂಲ ವಲಸೆ, ಹವ್ಯಕರ ಕುರಿತಾಗಿ ಸಹ್ಯಾದ್ರಿ ಖಂಡ ಗೆಝೆಟಿಯರ್; ಮಠದ ದಾಖಲೆಗಳು ಹಾಗೂ ಇತಿಹಾಸಕಾರರ ಸಂಶೋಧನೆಗಳ ಆಧಾರವನ್ನು ನಿರೂಪಿಸಲಾಗಿದೆ.

೩. ಸಾಗರ ತಾಲ್ಲೂಕಿನ ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ಗೋಕರ್ಣ ಇತಿಹಾಸ ಭಾಗ ೧, ೨ನ್ನು ಗಮನಿಸಿದೆ. ಬಿ.ಹೆಚ್. ಶ್ರೀಧರರು ಹೈಗನಾಡಿನ ಚರಿತ್ರೆ ಗ್ರಂಥದಲ್ಲಿ ಈ ವಿಷಯದ ಉಲ್ಲೇಖವಿದೆ.

೪. ಟಿ. ಕೇಶವ ಭಟ್ಟ ಹವ್ಯಕ ಸೋಭಾನೆಗಳು ಗ್ರಂಥದಲ್ಲಿ ಹವ್ಯಕ ಪದವ್ಯುತ್ಪತ್ತಿಯನ್ನು ವಿವರಿಸಿದ್ದನ್ನು ಗಮನಿಸಲಾಗಿದೆ. ಗ್ರಂಥವು ೧೯೮೬ರಲ್ಲಿ ಪ್ರಕಟಗೊಂಡಿದೆ. ಚಿರ ಸಾಹಿತ್ಯ ಪ್ರಕಾಶನ ಬೆಂಗಳೂರು ಕೃತಿಯನ್ನು ಪ್ರಕಟಿಸಿದೆ. ಹವ್ಯಕ ಪದದ ವ್ಯುತ್ಪತ್ತಿ ಹಾಗೂ ಹವ್ಯಕ ಹಾಡುಗಳನ್ನು ಸಂಗ್ರಹಿಸಿ ಲಕ್ಷಣಗಳನ್ನು ವಿವೇಚಿಸಿದ್ದಾರೆ.

ಹಾಡುಗಳಲ್ಲಿ ೩, ೬, ೧೯, ೨೩, ೪೪ನೇ ಅಷ್ಟತಾಳದ ಹಾಡುಗಳು, ೪೫, ೪೬, ೬೧ರ ಏಕತಾಳದ ಹಾಡುಗಳು ಇವು ಯಕ್ಷಗಾನದ ಮಟ್ಟಿನ ಹಾಡುಗಳಾಗಿದ್ದು ಇವುಗಳಲ್ಲಿ ಧವಳಾರಗಳ ಯಕ್ಷಗಾನದ ಮಂಗಳ ಪದ್ಯದಲ್ಲಿ ಬಳಕೆಯಲ್ಲಿದೆ ಎಂದು ದಾಖಲಿಸಿದ್ದಾರೆ.

೫. ಹವ್ಯಕ ಮಾಸಪತ್ರಿಕೆ ಜೂನ್ ೨೦೧೦ ಪುಟ ೨೦ರಲ್ಲಿ ಈ ಲೇಖನ ಗಮನಿಸಲಾಗಿದೆ.

೬. ಹವ್ಯಕ ಮಾಸ ಪತ್ರಕೆ ಮೇ ೨೦೦೬ ಪುಟ ೧೯ರಲ್ಲಿ ಗಮನಿಸಿದೆ. ಈ ಲೇಖನ ಮೊದಲು ಹೆಚ್.ಎಂ. ತಿಮ್ಮಪ್ಪ ಕಲಸಿಯವರೆ ಪ್ರಕಟಿಸಿದ ಹವ್ಯಕ ಇತಿಹಾಸ ಗ್ರಂಥದಲ್ಲಿ ನೋಡಲಾಗಿದೆ. ಹಾಗೂ ಹವ್ಯಕ ಇತಿಹಾಸ ದರ್ಶಣ (ಮೂರ್ವೋಕ್ತ)ದಲ್ಲಿ ಪು ೩೮ರಲ್ಲಿ ಗಮನಿಸಲಾಗಿದೆ.

೭. ಅಗ್ನಿಸೇವಾ ಟ್ರಸ್ಟ್ ಬೆಂಗಳೂರು ಸ್ಮರಣ ಸಂಚಿಕೆ ಅಹೋಜಾದಲ್ಲಿ ಗಮನಿಸಿದೆ. (ಪು. ೫೦)

೮. ಉತ್ತರ ಸಹ್ಯಾದ್ರಿ ಖಂಡ – ಹವ್ಯಕರ ಕುರಿತಾದ ದಾಖಲೆ ಇರುವ ಪ್ರಾಚೀನ ಆಧಾರ

ಗ್ರಂಥವಾಗಿದೆ. ಸ್ಕಂದ ಪುರಾಣದ ೧೩ನೇ ಮಹಾಪುರಾಣವಾಗಿದೆ. (ಒಟ್ಟು ೧೮ ಪುರಾಣಗಳಲ್ಲಿ) ಇದರಲ್ಲಿ ೮೧೦೦೦ ಶ್ಲೋಕಗಳಿವೆ. ಬೆಂಗಳೂರಿನ ತ್ಯಾಗರಾಜ ನಗರದ ಶ್ರೀ ವಿದ್ಯಾಗಣಪತಿ ಪ್ರಕಾಶನದಿಂದ ಪ್ರಕಟಗೊಂಡಿದೆ. ಉತ್ತರ ಸಹ್ಯಾದ್ರಿ ಖಂಡವನ್ನು "ರಾಮ್ ಏಶಿಯಾಟಿಕ್ ಸೊಸೈಟಿಯ" J. Gerson Da Kunha ಸಂಪಾದಿಸಿದ್ದಾರೆ. ಕನ್ನಡದಲ್ಲಿ ಸೊರಬ ತಾಲ್ಲೂಕಿನ ಅನಂತ ಶರ್ಮ ಇವರು ಸಂಗ್ರಹಿಸಿ ನಡಹಳ್ಳಿ ವೆಂಕಪ್ಪ ಲಕ್ಷ್ಮಿವಿಲಾಸ ಮುದ್ರಾಕ್ಷರ ಶಾಲೆಯಲ್ಲಿ ಕ್ರಿ.ಶ. ೧೯೧೨ರಲ್ಲಿ ಮುದ್ರಿಸಿದ್ದಾರೆ. ಇದರಲ್ಲಿ ಹವ್ಯದೇಶೋತ್ಪತ್ತಿ, ಹವ್ಯಕ ದೇಶದ ಸ್ಥಿತಿ ವರ್ಣನೆಯಿದೆ. ಈ ವಿವರವನ್ನು ಹವ್ಯಕ ಇತಿಹಾಸ ದರ್ಶನ ಪು. ೩೨೦ರಲ್ಲಿ ಗಮನಿಸಲಾಗಿದೆ.

೯. ಹವ್ಯಕ ಇತಿಹಾಸ ದರ್ಶನ (ಪೂರ್ವೋಕ್ತ) ಪು. ೩೬೯–೩೭ ಶಾಸನ ಪಾಠಗಳ ಸಾರಾಂಶ ಗಮನಿಸಲಾಗಿದೆ.

೧೦. ಅದೇ ಪುಟ

೧೧. ಹವ್ಯಕ ಇತಿಹಾಸ ದರ್ಶನ (ಪೂರ್ವೋಕ್ತ) ಪುಟ ೬೦ ಮತ್ತೀಯ ದಾಖಲೆಗಳನ್ನು ಗಮನಿಸಲಾಗಿದೆ.

೧೨. ಅದೇ

೧೩. ಅದೇ

೧೪. ಹವ್ಯಕರ ಇತಿಹಾಸ – ಹೆಚ್.ಎಂ. ತಿಮ್ಮಪ್ಪ ಕಲಸಿಯವರ ಮೂಲಗ್ರಂಥದಲ್ಲಿನ ಪ್ರಸ್ತಾಪವನ್ನು ಗಮನಿಸಿದೆ.

೧೫. ಪೂರ್ವೋಕ್ತ – ತಿಗಳಾರಿಲಿಪಿ – ದ್ರಾವಿಡ ಭಾಷಾ ಪರಿವಾರದಲ್ಲಿ ೭೭ ಭಾಷೆಗಳನ್ನು ೧೧ ಉಪಭಾಷೆಗಳನ್ನು ಗುರುತಿಸಲಾಗಿದೆ. ತಿಗಳಾರಿಲಿಪಿಯ ಕುರಿತು ಹೆಚ್ಚಿನ ಅಧ್ಯಯನ ನಡೆದಿಲ್ಲ. ಈ ಲಿಪಿಯ ಅಧ್ಯಯನದಿಂದ ಭಾಷಾ ಶಾಸ್ತ್ರೀಯ ಹಾಗೂ ಸಮಾಜ ಶಾಸ್ತ್ರೀಯ ನೆಲೆ ಇನ್ನು ಸ್ಪಷ್ಟಗೊಳ್ಳುವ ಸಾಧ್ಯತೆಯಿದೆ. ಈ ಲಿಪಿ ೫೦ ಅಕ್ಷರಗಳ ಧ್ವನಿ ಸಂಕೇತಗಳನ್ನು ಹೊಂದಿದೆ. ತನ್ನದೆ ಆದ ಕಾಗುಣಿತವನ್ನು ಹೊಂದಿದೆ. ಮಲೆಯಾಳಂ ಲಿಪಿಗೆ ಹತ್ತಿರವಾದುದಾಗಿದೆ. ಪ್ರಾಚೀನ ಹಸ್ತಪ್ರತಿಗಳು ತಿಗಳಾರಿ ಲಿಪಿಯಲ್ಲಿದೆ. ಹಿಂದಿನ ಕಾಲದಲ್ಲಿ ಬ್ರಾಹ್ಮಣರಲ್ಲಿ ಹೆಚ್ಚಿನವರು ಓದು ಬರಹ ಬಲ್ಲವರಾಗಿದ್ದರಿಂದಲೂ ಮಂತ್ರ–ತಂತ್ರ ಜ್ಯೋತಿಷ್ಯಾದಿ ಕೃತಿಗಳನ್ನು ಉಪಯೋಗಿಸುತ್ತಿದ್ದರಲ್ಲಿ ಬ್ರಾಹ್ಮಣರೆ ಮುಂಚೂಣಿಯಲ್ಲಿದ್ದರಿಂದಲೂ ತಿಗಳಾರಿ ಲಿಪಿ ಬ್ರಾಹ್ಮಣರ ಲಿಪಿ ಎಂದು ಕರೆಸಿಕೊಂಡಿದೆಯೆಂದು ಅಭಿಪ್ರಾಯವಿದೆ.

೧೬. ಹವ್ಯಕರ ಪ್ರಾಚೀನ ನೆಲೆಗಳು : ರಾಜರುಗಳು ಬ್ರಾಹ್ಮಣರಿಗೆ ವಿವಿಧ ಕಾರ್ಯೋದ್ದೇಶಿತವಾಗಿ ಭೂಮಿಯನ್ನು ದಾನವಾಗಿ ನೀಡುತ್ತಿದ್ದರು. ಇವುಗಳು ಅಗ್ರಹಾರಗಳೆಂದು ಕೂಡ ಪ್ರಸಿದ್ಧಿಗೆ ಬಂದವು. ಅಗ್ರಹಾರಗಳು ಶಿಕ್ಷಣ ಕೇಂದ್ರಗಳೂ ಆಗಿದ್ದವು. ಧಾರ್ಮಿಕ ಕಾರ್ಯಕ್ಕಾಗಿ ನಿಯೋಜಿಸಲ್ಪಟ್ಟ ಬ್ರಾಹ್ಮಣರಿಗೆ ಗ್ರಾಮಗಳನ್ನು ಬಿಟ್ಟುಕೊಟ್ಟ ಕಾರಣದಿಂದ ಕರಾವಳಿಯ ಹೈಗದೇಶದಲ್ಲಿ ಹದಿನಾರು ಗ್ರಾಮ, ಹತ್ತು ಘಟ್ಟ ಪ್ರದೇಶ, ಹತ್ತು ದುರ್ಗಾಸ್ಥಾನ, ಐದು ಶೈವ ಕ್ಷೇತ್ರ, ಹತ್ತು ಪಟ್ಟಣಗಳನ್ನು ರಚಿಸಿ ಹವ್ಯಕರನ್ನು ಪ್ರತಿಷ್ಠಾಪಿಸಲಾಯಿತು. ಈ ಪ್ರದೇಶಗಳು ಈಗಲೂ ಅದೇ ಹೆಸರಿನಲ್ಲಿ

ಪ್ರಚಲಿತವಿದೆ. ಇವುಗಳು ಅಲ್ಲಿನ ಭೌಗೋಳಿಕ ಪ್ರದೇಶಗಳ ಅನ್ವರ್ಥಕನಾಮವಾಗಿದ್ದು ಕ್ರಮೇಣ ರೂಢಿಯಿಂದ ಆ ಹೆಸರು ಪರಿವರ್ತನೆಯಾಗಿ ಉಳಿದುಕೊಂಡಿದೆ. ಈ ನೆಲೆಗಳು ಹವ್ಯಕರ ನೆಲೆಗಳಾಗಿದ್ದು ಇವುಗಳ ಬಗ್ಗೆ ಪ್ರತ್ಯೇಕ ಅಧ್ಯಯನ ನಡೆಸಲು ಅವಕಾಶವಿದೆ. ಈ ಪ್ರದೇಶಗಳು ಯಕ್ಷಗಾನದ ಕೇಂದ್ರಗಳಾಗಿ ಇಂದಿಗೂ ಪ್ರಸಿದ್ಧವೆ ಆಗಿವೆ.

೧೭. ಸಭಾಹಿತರು : ಹೊನ್ನಾವರ ತಾಲ್ಲೂಕಿನ ಇಡಗುಂಜಿ ಗಣಪತಿ ದೇವಾಲಯ ಪ್ರಸಿದ್ಧವಾಗಿದೆ. ಈ ದೇವಾಲಯ ಮತ್ತು ಸಭಾಹಿತ ಮನೆತನಗಳ ಕುರಿತು ಡಾ. ಎ.ಕೆ. ಶಾಸ್ತ್ರಿಯವರು ಸಂಶೋಧನೆ ನಡೆಸಿ ಪ್ರಕಟಿಸಿದ್ದಾರೆ. ಸಭಾಹಿತರನ್ನು ದೇವಾಲಯ ಆಡಳಿತಕ್ಕಾಗಿ ನಿರ್ಮಿಸಿದ್ದನ್ನು ಐತಿಹಾಸಿಕ ದಾಖಲೆಗಳಿಂದ ದೃಢಪಡಿಸಿದೆ. ಸಭಾಹಿತ ಮನೆತನ ಯಕ್ಷಗಾನವನ್ನು ಸಂಘಟಿಸಿದ ಪ್ರಾಚೀನ ಮನೆತನವಾಗಿದೆ. ಸಭಾಹಿತ ಪ್ರತಿ ಯಕ್ಷಗಾನ ಪ್ರಸಂಗ ಪ್ರತಿಗಿರುವ ಉತ್ತರಕನ್ನಡದ ವಿಶಿಷ್ಟ ಮುದ್ರೆ. ಇದನ್ನು ಸಭಾಹಿತಮಟ್ಟು ಎಂದು ಕರೆಯುತ್ತಿದ್ದರು. ಸಭಾಹಿತ ಮನೆತನ ಇಂದಿಗೂ ಇಡಗುಂಜಿ ದೇವಾಲಯದ ಆಡಳಿತಗಾರರಾಗಿಯೆ ಮುಂದುವರಿಯುತ್ತಿದೆ.

೧೮. ಗೋಕರ್ಣದಿಂದ ಕೇರಳದವರೆಗೆ ಅನೇಕ ಪ್ರಸಿದ್ಧ ಗಣಪತಿ ದೇವಾಲಯಗಳಿವೆ. ಕುಮಟಾದ ಉಪ್ಪಿನ ಗಣಪತಿ, ಕರ್ಕಿಯ ಗಣಪತಿ ದೇವಸ್ಥಾನ, ಊರಕೇರಿ ಗಣಪತಿ, ವಾಲಗಳ್ಳಿಯ ಗಣಪತಿ, ಇಡಗುಂಜಿ ಗಣಪತಿ, ಮಧೂರು ಗಣಪತಿ, ಸಾಗರದ ಬಚ್ಚಗಾರಿನ ಗಣಪತಿ ದೇವಾಲಯ, ಯಲ್ಲಾಪುರದ ಅಣಲಗಾರಿನ ಗಣಪತಿ ದೇವಾಲಯ, ಬೆಳೆಯೂರಿನ ಕಾನ್‌ಗಣಪತಿ ದೇವಾಲಯಗಳು ಪ್ರಸಿದ್ಧವಾದವು. ಇವು ಅನೇಕ ತಲೆಮಾರಿನಿಂದ ಯಕ್ಷಗಾನ ಮೇಳದ ಅಧಿಪತ್ಯ ದೇವತೆಯಾಗಿಯೂ ಉಳಿದುಕೊಂಡಿದೆ. ಈ ಹೆಸರಿನಲ್ಲೆ ತಿರುಗಾಟದ ಮೇಳಗಳಿವೆ.

೧೯. ಹವ್ಯಕರಲ್ಲಿ ಹಾಡು ಹೇಳುವುದು ಸಂಭ್ರಮ, ಪರಂಪರೆ ಎಂಬ ನಂಬಿಕೆಯಿದೆ. ಎಲ್ಲಾ ಧಾರ್ಮಿಕ ಕಾರ್ಯದಲ್ಲಿ, ದೇವಾಲಯಗಳಲ್ಲಿ, ಮಂಗಳ ಕಾರ್ಯದಲ್ಲಿ ಹಾಡುವ ಕ್ರಮ ಇಂದಿಗೂ ರೂಢಿಯಲ್ಲಿದೆ. ಕಾಲಕ್ಕೆತಕ್ಕಂತೆ ಹಾಡುಗಳು ಬದಲಾಗಿವೆ. ಆದರೆ ಹಾಡು ಹೇಳುವುದು ಹೆಂಗಳೆಯರಿಗೆ ಶೋಭೆ ಎಂಬ ಭಾವನೆಯಿದೆ.

೨೦. ಭಜನೆ ಹೇಳುವುದು ಒಂದು ಮುಸ್ಸಂಜೆಯ ವಿಧಿ ಇದು ಇಂದಿಗೂ ನಡೆಯುತ್ತ ಬಂದಿದೆ. ಮೂರೂರು, ಕರ್ಕಿ, ಬಂಟ್ವಾಳ ತಾಲ್ಲೂಕಿನಲ್ಲಿ ಈ ಭಜನಾ ಕ್ರಮಗಳನ್ನು ಗಮನಿಸಲಾಯಿತು. ಊರಿನ ಯುವಕರು ಸಂಜೆ ದೇವಾಲಯದಲ್ಲಿ ಸೇರುತ್ತಾರೆ. ಎಲ್ಲರೂ ತಾಳ ತಂದಿರುತ್ತಾರೆ. ಮಧ್ಯದಲ್ಲಿ ದೀಪವನ್ನಿಟ್ಟು ದೇವಾಲಯದ ಮೊಗಸಾಲೆಯಲ್ಲಿ ವೃತ್ತಾಕಾರವಾಗಿ ಚಲಿಸುತ್ತಾ ಭಜನೆ ಹೇಳುತ್ತರೆ. ಅದಕ್ಕೊಂದು ತಾಳಬದ್ಧ ಕುಣಿತವೂ ಇದೆ. ಇದನ್ನು ಭಜನೆ ಕುಣಿತಗಳು ಎಂದು ಗುರುತಿಸಲಾಗಿದೆ.

೨೧. ಸಾಗರ, ಹೊನ್ನಾವರ, ಕುಮಟಾ, ಬೆಳ್ತಂಗಡಿ, ಪುತ್ತೂರು ತಾಲ್ಲೂಕಿನಲ್ಲಿ ಕಂಡಹಾಗೆ ಯಕ್ಷಗಾನ ಪ್ರದರ್ಶನಕ್ಕೆ ಅಭಿಮಾನದಿಂದ ಇಂದಿಗೂ ಜನ ರಾತ್ರಿ ನಡೆದು, ವಾಹನಗಳಲ್ಲಿ ದೂರದ ಊರುಗಳಿಗೆ ಹೋಗುತ್ತಿರುತ್ತಾರೆ. ಹಿಂದೆ ಈ ವ್ಯವಸ್ಥೆಯಿರಲಿಲ್ಲ. ತೆಂಗಿನ ಗರಿಗಳ ಸೂಡಿಮಾಡಿ ಉರಿಸುತ್ತಾ ಮುಂದೊಬ್ಬ ದಾರಿ ತೋರಿಸುವನಿದ್ದ. ಉಳಿದವರು ಆ ಬೆಳಕಿನಲ್ಲೆ ತೆರಳುತ್ತಿದ್ದರು.

ಈಗಲೂ ಕೆಲವು ಊರಿನಲ್ಲಿ ಪ್ರಾಕೃತಿಕವಾಗಿಯೆ ರಸ್ತೆ ಸೌಕರ್ಯವಿಲ್ಲದಿರುವ ಗ್ರಾಮಗಳಿವೆ.

೨೨. ಹೊಸ್ತೋಟ ಮಂಜುನಾಥ ಭಾಗವತ : ಯಕ್ಷಗಾನದ ಅತಿ ಹೆಚ್ಚು ಪ್ರಸಂಗ ರಚನೆ ಮಾಡಿದ ಕೀರ್ತಿ ಇವರಿಗೆ ಇದೆ. ಅಂಧಮಕ್ಕಳಿಗೂ ಯಕ್ಷಗಾನ ಕಲಿಸಿದ ಗುರು ಇವರಾಗಿದ್ದಾರೆ. ಮಹಿಳಾ ಸಂಘಟನೆಗಳಿಗೆ ಪ್ರೇರಣೆ ನೀಡಿ ಪ್ರದರ್ಶನ ಕೊಟ್ಟಿರುತ್ತಾರೆ. ಇವರು ಇಡೀ ಜೀವನವನ್ನು ಯಕ್ಷಗಾನಕ್ಕಾಗಿ ಮುಡುಪಿಟ್ಟವರು. ಸುಮಾರು ೫೦೦ ತಾಡವಾಲೆ, ಹಸ್ತಪ್ರತಿಗಳನ್ನು ಅಧ್ಯಯನ ಮಾಡಿದವರು. ಅವರಿಗೀಗ ಸುಮಾರು ೪೦ ವರ್ಷ. ಈಗಲೂ ಯಕ್ಷಗಾನಕ್ಕಾಗಿ ಚಿಂತನೆ ನಡೆಸುತ್ತಾ ಊರಿಂದ ಊರಿಗೆ ಸಂಚಾರಿಸುತ್ತಾರೆ. ಇವರು ಅರವತ್ತು ವರ್ಷಗಳಿಂದ ಈ ಕಾರ್ಯ ನಡೆಸುತ್ತಿದ್ದಾರೆ. ವರ್ಷಕ್ಕೆ ೧೨ ಜನರಿಗೆ ಮುಖಕ್ಕೆ ಬಣ್ಣ ಹಚ್ಚಿ ಕಲಾವಿದರಾಗಿಸುವುದು ಅವರ ಪ್ರಯತ್ನವಾಗಿದೆ. ಇದರಿಂದ ಅನೇಕ ಸಂಘಟನೆ ಆರಂಭಗೊಂಡಿದೆ. ಇವರ ಜೀವನ ಸಾಧನೆಯೆ ಒಂದು ಸಂಶೋಧನೆಯ ವಸ್ತುವಾಗಬಲ್ಲದು.

೨೩ ಪೂರ್ವೋಕ್ತ

೨೪ ಹೈಗುಂದ ಉತ್ತರ ಕನ್ನಡದ ಕದಂಬರ ಒಂದು ಕೇಂದ್ರವಾಗಿತ್ತು. ಅಲ್ಲಿ ಯಕ್ಷ ದೇವಾಲಯವಿದೆ. ಯಕ್ಷಗಾನಕ್ಕೂ ಈ ಸ್ಥಳ ಪ್ರಸಿದ್ಧವಾಗಿದೆ. ಹೈಗರು ವಾಸಿಸುವ ಸ್ಥಳದಿಂದ ಈ ಹೆಸರು ಬಂದಿದೆ. ಹೈಗರೆಂದರೆ ಹವ್ಯಕರಾಗಿದ್ದಾರೆ.

೨೫. ಯಕ್ಷಾಂದೋಳ ಅಮೃತ ಸೋಮೇಶ್ವರ ಬರಹಗಳ ಕುರಿತಾದ ಗ್ರಂಥ (೧೯೯೫) ಯಕ್ಷಗಾನದ ಹೆಜ್ಜೆಗುರುತುಗಳನ್ನು ಕೃತಿ ದಾಖಲಿಸಿದೆ.

೨೬. ಯಕ್ಷಗಾನ ವರ್ಣ ವೈಭವ – ೧೯೯೯ – ಡಾ. ಗೋಪಾಲ ಕೃಷ್ಣ ಹೆಗಡೆ ಯಕ್ಷಗಾನದ ಪ್ರಾಚೀನತೆ, ಉಗಮ ವಿಕಾಸದ ಹಂತ, ಹವ್ಯಕರ ಹಳೆಯ ಮೇಳ, ಗಣಪತಿ ಆರಾಧನೆ, ವೇಷಭೂಷಣಗಳ ಮನಶಾಸ್ತ್ರೀಯ ಹಿನ್ನೆಲೆ, ಸಮಾಜ ಶಾಸ್ತ್ರೀಯ ಚಿಂತನೆಗಳನ್ನು ಒಳಗೊಂಡ ಗ್ರಂಥವಾಗಿದೆ.

೨೭. ಪೂರ್ವೋಕ್ತ

೨೮. ಪೂರ್ವೋಕ್ತ

೨೯. ಹೊನ್ನಾವರ ತಾಲ್ಲೂಕಿನಲ್ಲಿ ಗುಂಡಿಬೈಲು ಚಿಕ್ಕ ಊರು. ಇಲ್ಲಿ ೧೯೫೮ರಲ್ಲಿ ಮಹಾಗಣಪತಿ ಯಕ್ಷಗಾನ ಮೇಳ ಸ್ಥಾಪಿಸಲಾಗಿತ್ತು. ಹಡಿನಬಾಳು ಗಣೇಶಭಟ್ಟರು ಮೇಳದ ಸ್ಥಾಪಕರು. ಇವರ ಮನೆತನದವರಾದ ನಾರಾಯಣ ಭಟ್ಟರ ಪೂಜಾಗ್ರಹದಲ್ಲಿ ಗಣಪತಿ ಕಿರೀಟ ಪೂಜೆಗೊಳ್ಳುತ್ತಿದೆ. (ಫೋಟೋ) ಇದಕ್ಕೆ ನಾಲ್ಕ ತಲೆಮಾರಿನ ಇತಿಹಾಸವಿದೆ.

೩೦. ಯಲ್ಲಾಪುರದ ಅಣಲಗಾರಿನ ಮಂಗಳಾರ್ತಿ ಮನೆಯಲ್ಲಿ ಕಿರೀಟ ಪೂಜೆ ಗಮನಿಸಿದೆ. ಈ ಮನೆ ಯಕ್ಷಗಾನದ ಪರಂಪರೆಯ ಮನೆತನವೂ ಆಗಿದೆ.

೩೧. ರಂಗನಾಥ ಬೆಳೆಯೂರು ಎಂಬವರ ಮನೆಯಲ್ಲೂ ಕಿರೀಟ ಪೂಜೆಗೊಳ್ಳುತ್ತಿದೆ. ಈ ಮೇಳಕ್ಕೆ ೧೫೦ ವರ್ಷಗಳ ಇತಿಹಾಸ ದಾಖಲೆಯಾಗ "ಹಿಲಾಲು ಹಿನ್ನೆಲೆಯ ಮೇಳ" ಪುಸ್ತಕದಲ್ಲಿ

ದಾಖಲಾಗಿದೆ. ಊರಿನ ಕ್ಷೇತ್ರ ಕಾರ್ಯ ನಡೆಸಿದಾಗ ಯಕ್ಷಗಾನದ ಆ ಕಾರ್ಯಗಳನ್ನು ಗಮನಿಸಲಾಗಿದೆ.

೩೨. ರಾತ್ರಿಯಿಡಿ ಭಜನೆ ಹೇಳುತ್ತಾ ಕುಣಿಯುವ ಭಜನೆ ಸೇವೆಯನ್ನು ಯಾಮಾಷ್ಟಕ ಸೇವೆ ಎಂದು ಕರೆಯುತ್ತಾರೆ. ಇದು ಇಡಿ ರಾತ್ರಿ ನಡೆಯುವುದರಿಂದ ಹೀಗೆ ಹೆಸರು ಬಂದಿದೆ. ಇದನ್ನು ವಾರ್ಷಿಕವಾಗಿ ಆರಾಧಿಸುವ ಪರಿಪಾಠವಿದೆ. ಭಜನೆ ಕುಣಿತಗಳು ನಿತ್ಯನಡೆಯುತ್ತಿದ್ದ ಭಜನಾ ಮಂದಿರಗಳಿವೆ. ಇಂದಿಗೂ ಇಂತಹ ಸೇವೆಗಳನ್ನು ದೇವಾಲಯಗಳಲ್ಲಿ ಗಮನಿಸಲಾಗಿದೆ.

ಅಧ್ಯಾಯ – ೩

೧. ಸಭಾಹಿತ : ಡಾ. ಜಿ.ಜಿ. ಸಭಾಹಿತರು ಸಭಾಹಿತ ಮನೆತನದವರು. ಪ್ರಸ್ತುತ ಇಡಗುಂಜಿ ಕ್ಷೇತ್ರದ ಮೊಕ್ತೇಸರರು ಇವರು ನೀಡಿದ ಮಾಹಿತಿ. ಈ ಕುರಿತು ಹವ್ಯಕ ಇತಿಹಾಸದಲ್ಲಿ ದಾಖಲಿಸಿದ ತಿಮ್ಮಪ್ಪ ಕಲಸಿಯವರೊಂದಿಗೆ ಚರ್ಚಿಸಿದೆ.

೨. ಯಕ್ಷಗಾನ ವನವಿಹಾರ (೧೯೯೯) ಕಡತೋಕ ಮಂಜುನಾಥ ಭಾಗವತರು (ಆತ್ಮಕಥೆ) ಪುಟ ೨೮ರಲ್ಲಿ ಗಮನಿಸಿದೆ.

೩. ಯಕ್ಷವನ ವಿಹಾರ – ಪೂರ್ವೋಕ್ತ – ಪುಟ ೨೭

೪. ಹೊಸ್ತೋಟ ಮಂಜುನಾಥ ಭಾಗವತರ ಲೇಖನ "ಸತ್ಯಲೋಕ" ಸತ್ಯಹೆಗಡೆಯವರ ಅಭಿನಂದನ ಪುಸ್ತಕದಲ್ಲಿ ಗಮನಿಸಿದೆ.

೫. ಯಕ್ಷಗಾನ ವಿಹಾರ – ಪೂರ್ವೋಕ್ತ ಪು. ೨೮

೬. ಹೊಸ್ತೋಟ ಮಂಜುನಾಥ ಭಾಗವತರು ಸಂದರ್ಶನದಲ್ಲಿ ನೀಡಿದ ಲಕ್ಷಣಗಳು.

೭. ನಾರಾಯಣ ಹಾಸ್ಯಗಾರರು ಸಂದರ್ಶನದಲ್ಲಿ ವಿಳಂಬ ಲಯದ ಅಭಿನಯಪೂರ್ವಕವಾಗಿ ತೋರಿಸಿ ಕರ್ಕಿ ಶೈಲಿಯ ಕುರಿತು ವಿವರಿಸಿರುತ್ತಾರೆ.

೮. ಪೂರ್ವೋಕ್ತ – ಉತ್ತರ ಕನ್ನಡದ ವೈಶಿಷ್ಟ್ಯಗಳು – ಸತ್ಯಲೋಕ – ಪು ೧೩೫

೯. ಪೂರ್ವೋಕ್ತ – ಪುಟ ೬೪

೧೦. ಯಕ್ಷಗಾನ ಹಾಡುಗಾರಿಕೆ – ಮಂಜುನಾಥ ಭಾಗವತ ಕಡತೋಕ – ವೈಜಯಂತಿ – ಪು. ೧೭ರಲ್ಲಿ ಗಮನಿಸಿದೆ.

೧೧. ಪೂರ್ವೋಕ್ತ – ಪು. ೨೩

೧೨. ಹವ್ಯಕ ಸಂದೇಶ – ಪತ್ರಿಕೆಯಲ್ಲಿ ಗಮನಿಸಿದೆ – ಪು. ೭

೧೩. ಪೂರ್ವೋಕ್ತ – ಪು. ೨೧

೧೪. ನಾರಾಯಣ ಹಾಸ್ಯಗಾರ ಕರ್ಕಿ ಮನೆತನದ ಕಲಾವಿದರು ಇವರೊಂದಿಗೆ ಸಂದರ್ಶನ ನಡೆಸಿದಾಗ ನೀಡಿದ ವಂಶದ ವಿವರ.

೧೫. ಪೂರ್ವೋಕ್ತ – ಪು. ೨೧

೧೬. ಡಾ. ಹೆಚ್.ಎಸ್. ಮೋಹನ – ಪರಂಪರೆ ರೂಪಿಸಿದ ಕರ್ಕಿಮೇಳ ಪು. ೮, ಡಾ. ಹೆಚ್.ಎಸ್. ಮೋಹನ ವೃತ್ತಿಯಲ್ಲಿ ವೈದ್ಯರಾಗಿದ್ದು ಯಕ್ಷಗಾನ ಸಂಸ್ಥೆ ಯಕ್ಷಶ್ರೀ ಸಾಗರವನ್ನು ಮುನ್ನಡೆಸುತ್ತಿದ್ದಾರೆ.

೧೭. ಗೋಪಾಲಕೃಷ್ಣ ಭಟ್ಟ ಜೋಗಿಮನೆ ಕರ್ಕಿಮೇಳದ ವರ್ತಮಾನದ ಭಾಗವತರು ಉತ್ತರ ಕನ್ನಡ ಶೈಲಿಯ ಹಾಡುಗಾರಿಕೆಗೆ ಪ್ರಸಿದ್ಧರು.

೧೮. ಪೂರ್ವೋಕ್ತ

೧೯. ವೈಜಯಂತಿ – ಪು. ೬೪. ಉತ್ತರ ಕನ್ನಡದ ಯಕ್ಷಗಾನ ಪರಂಪರೆಯನ್ನು ದಾಖಲಿಸಿದ ಸ್ಮರಣಸಂಚಿಕೆ. ಸಂಪಾದಕರು ಡಾ. ಜಿ.ಎಸ್. ಭಟ್ಟ.

ಅಧ್ಯಾಯ – ೪

೧. ಯಕ್ಷಗಾನ ರಂಗಭಾಷೆ – ಲೇಖನ, ಸಂಕಲನ ಸಂಸ್ಮರಣ ಗ್ರಂಥ – ಪು. ೫

೨. ಪೂರ್ವೋಕ್ತ

೩. ಅದೇ ಪುಟ

೪. ಡಾ. ಮೋಹನ ಕುಂಟಾರ ಯಕ್ಷಗಾನ ವಾಚಿಕಾಧ್ಯಯನ ಪು. ೧೫೯. ಯಕ್ಷಗಾನದ ವಾಚಿಕದ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳನ್ನು ಅಧ್ಯಯನ ಮಾಡಿದ ಸಂಶೋಧನ ಗ್ರಂಥವಾಗಿದೆ. ಕನ್ನಡ ವಿಶ್ವವಿದ್ಯಾಲಯ – ಹಂಪಿ – ಪ್ರಸಾರಾಂಗ ಪ್ರಕಟಿತ.

೫. ಪೂರ್ವೋಕ್ತ

೬. ಪೂರ್ವೋಕ್ತ – ಪು. ೨೫

೭. ಪೂರ್ವೋಕ್ತ – ಪು. ೨೬

೮. ಪೂರ್ವೋಕ್ತ – ಪು. ೨೪೦

೯. ಪೂರ್ವೋಕ್ತ – ಪು. ೨೭

೧೦. ಡಾ. ಕಬ್ಬಿನಾಲೆ ವಸಂತ ಭಾರದ್ವಾಜ – ಯಕ್ಷಗಾನ ಛಂದಸ್ಸು – ಪು. ೨೪೫ರಲ್ಲಿ ಗಮನಿಸಿದೆ.

೧೧. ಡಾ. ಶಿವರಾಮ ಕಾರಂತ, ಯಕ್ಷಗಾನ ಬಯಲಾಟ – ಕವಿಕಾವ್ಯ ಪರಿಚಯ – ಪು. ೩೦೨

೧೨. ಯಕ್ಷಗಾನದ ಹಸ್ತಪ್ರತಿಗಳು – ಮಂಜುನಾಥ ಭಾಗವತ ಹೊಸ್ತೋಟ – ಪು. ೧೧೩. ಯಕ್ಷಗಾನದ ಹಸ್ತಪ್ರತಿಗಳನ್ನು ಅಧ್ಯಯನ ಮಾಡಿ ದಾಖಲಿಸಿದ ಗ್ರಂಥವಿದಾಗಿದೆ.

೧೩. ಡಾ. ಕಬ್ಬಿನಾಲೆ ವಸಂತ ಭಾರದ್ವಾಜ – ಪು. ೨೪೨ (೧೯೯೮) ಯಕ್ಷಗಾನ ಛಂದಸ್ಸಿನ ಕುರಿತು ಅಧ್ಯಯನ ಮಾಡಿದ ಸಂಶೋಧನಾ ಗ್ರಂಥವಾಗಿದೆ.

೧೪. ಪೂರ್ವೋಕ್ತ – ಪು. ೨೪೨

೧೫. ಪೂರ್ವೋಕ್ತ – ಪು. ೨೯

೧೬. ಪೂರ್ವೋಕ್ತ – ಪು. ೧೧೧

೧೭. ಪೂರ್ವೋಕ್ತ – ಪು. ೧೧೯

೧೮. ಅದೇ ಪುಟ

೧೯. ಡಾ. ಜಿ.ಎಸ್. ಭಟ್ – ಯಕ್ಷಗಾನ ಪರಿಶೀಲನಾ ಪು. ೯೪, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಣೆ ೧೯೯೫.

೨೦. ಪೂರ್ವೋಕ್ತ – ಪು. ೨೮

೨೧. ನಾರಾಯಣ ಶಾನಭಾಗ (ಸಂ.) ಯಕ್ಷಗಾನ ಕವಿಕಾವ್ಯ ಸೂಚಿ, ಪು. ೧. ಹವ್ಯಕ ಅಧ್ಯಯನ ಕೇಂದ್ರ, ಬೆಂಗಳೂರು ಪ್ರಕಟನೆ.

೨೨. ಪೂರ್ವೋಕ್ತ – ಪು. ೧೧೩

೨೩. ಪೂರ್ವೋಕ್ತ – ಪು. ೧೧೧

೨೪. ಜಿ.ಎಸ್. ಅವಧಾನಿ – ಪೂರ್ವೋಕ್ತ – ಪು. ೨೧

೨೫. ಡಾ. ಜಿ.ಎಸ್. ಭಟ್ಟರ ಸಂದರ್ಶನ

೨೬. ಡಾ. ಆನಂದರಾವ್ ಉಪಾಧ್ಯ – ೨೦೦೭, ಸಂಶೋಧನಾ ಗ್ರಂಥ, ಧಾತ್ರಿ ಪುಸ್ತಕ, ಬೆಂಗಳೂರು ಪ್ರಕಟಣೆ.

೨೭. ಪೂರ್ವೋಕ್ತ – ಪು. ೫೨.

೨೮. ಡಾ. ಜಿ.ಎಸ್. ಭಟ್, ಸಾಗರ ಕೆರೆಮನೆ ಶಂಭುಹೆಗಡೆ, ಅಧ್ಯಯನ ಸಂಶೋಧನ ಗ್ರಂಥ, ಪು. ೨೧೧, ನಿಧಿ ಪ್ರಕಾಶನ, ಸಾಗರ ಪ್ರಕಟಣೆ.

೨೯. ಪೂರ್ವೋಕ್ತ – ಪು. ೨೬೦

೩೦. ಪೂರ್ವೋಕ್ತ – ಪು. ೫೭

೩೧. ಪೂರ್ವೋಕ್ತ – ಪು. ೨೪೨

೩೨. ಪೂರ್ವೋಕ್ತ – ಪು. ೫೧

೩೩. ಪೂರ್ವೋಕ್ತ – ಪು. ೪೮

೩೪. ಪೆರವೋಡಿ ನಾರಾಯಣ ಭಟ್ಟ – ಯಕ್ಷ ಶಾಂತಲಾ – ಪು. ೬೨ – ಅಭಿನಂದನ ಕೃತಿ – ಎಂ. ಪ್ರಭಾಕರ ಜೋಶಿ – ದೇರಾಜೆ

೩೫. ರಾಮಾಯಣ – ದೇರಾಜೆ ಸೀತಾರಾಮಯ್ಯ – ಪು. ೧೬ – ಬ್ರಹ್ಮಶ್ರೀ ಮತ್ತೂರು ಪುರೋಹಿತ ತಿಮ್ಮಯ್ಯ ಭಟ್ಟ ಸಂಪ್ರತಿಷ್ಠಾನ (ರಿ.), ಪ್ರಕಟಣೆ ೧೯೯೯

೩೬. ಕೆರೆಮನೆ ಶಂಭು ಹೆಗಡೆ – ಶೇಣಿ ಭಾರತ – ಪು. ೪, ಗೋಪಾಲಕೃಷ್ಣ ಹೆಗಡೆ – ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೭. ಡಾ. ಎಂ. ಪ್ರಭಾಕರ ಜೋಶಿ Talamaddale Text Context and Performance (1990) ಪುಟ ೧೦೫, ಡಾ. ಮಾಧವ ಪೆರಾಜೆಯವರ "ತಾಳಮದ್ದಳೆ ರಂಗ ಸಂಕಥನ, ಯಕ್ಷಗಾನ ಸಮೀಕ್ಷೆ ಮತ್ತು ಪಾದೆಕಲ್ಲು ವಿಷ್ಣು ಭಟ್ಟರು ಸಂಪಾದಿಸಿದ 'ವಾಚಿಕ' ಗ್ರಂಥದಲ್ಲೂ ಗಮನಿಸಿದೆ.

೩೮. ಪೂರ್ವೋಕ್ತ – ಪು. ೨೫

೩೯. ಅದೇ ಪುಟ

೪೦. ಪೂರ್ವೋಕ್ತ – ಪು. ೨೦

೪೧. ಕೃಷ್ಣಭಟ್ಟ – ತಾಳಮದ್ದಳೆಯಲ್ಲಿ ಅರ್ಥಗಾರಿಕೆ "ವಾಚಿಕ" – ಪು. ೬೫

೪೨. ವಾಚಿಕ – (ಸಂ.) ಡಾ. ಪಾದೆಕಲ್ಲು ವಿಷ್ಣುಭಟ್ಟ, ಡಾ. ಎಂ. ಪ್ರಭಾಕರ ಜೋಶಿ, ಯಕ್ಷಗಾನ ಕಲಾರಂಗ ಉಡುಪಿ, ಪ್ರಕಟಣೆ ೨೦೦೯.

೪೩. ಪೂರ್ವೋಕ್ತ – ಪು. ೪೩

೪೪. ಸ್ವರ್ಣಕಮಲ – (ಸಂ.) ಪ್ರೊ. ಎಂ.ಆರ್. ಶಾಸ್ತ್ರಿ, ಅರ್ಕುಳ ಸುಬ್ರಾಯಾಚರ್ಯರ ಸಂಸ್ಮರಣ ಗ್ರಂಥ, ಪು. ೩೫೧. Prof. Walterfalt - A Pure Language of Theater ಸ್ವರ್ಣಕಮಲ – ಪು. ೩೫೩

೪೫. ಪೂರ್ವೋಕ್ತ – ಪು. ೨೩೭

೪೬. ಪೂರ್ವೋಕ್ತ – ಪು. ೯೩

೪೭. ಪೂರ್ವೋಕ್ತ – ಪು. ೧೫

೪೮. ಪೂರ್ವೋಕ್ತ – ಪು. ೮೯

೪೯. ಯಕ್ಷರಂಗ – ಯಕ್ಷಗಾನ ಪತ್ರಿಕೆ, ಪು. ೧೯, ಜುಲೈ ೨೦೦೮ರ ವರದಿಯನ್ನು ಗಮನಿಸಿದೆ.

೫೦. ಕಣಿಪುರ ಯಕ್ಷಗಾನ ಪತ್ರಿಕೆ, ಅಕ್ಟೋಬರ್ ಸಂಚಿಕೆಯ ವರದಿಯನ್ನು ಗಮನಿಸಿದೆ.

೫೧. ಎಂ.ಎ. ಹೆಗಡೆ – ಕೃಷ್ಣಸ್ಮರಣ – ಕೆರೆಕೈ ಕೃಷ್ಣಭಟ್ಟರ ಸಂಸ್ಮರಣ ಗ್ರಂಥ – ಪು. ೭೦. ಹಿರಿಯರು ಮತ್ತು ಸಮಕಾಲೀನರು ಲೇಖನದಲ್ಲಿ ಗಮನಿಸಿದೆ.

ಅಧ್ಯಾಯ - ೫

೧. ಡಾ. ಜಿ.ಎಸ್. ಭಟ್ - ಪೂರ್ವೋಕ್ತ - ಪು. ೩೬೫
೨. ಪೂರ್ವೋಕ್ತ - ಪು. ೩೬೯.
೩. ಪೂರ್ವೋಕ್ತ - ಪು. ೩೯೦
೪. ಡಾ. ರಾಮಕೃಷ್ಣ ಜೋಶಿ - ಕೆರೆಮೇಳದ ಕೊಡುಗೆ (೧೯೯೮)
೫. ಡಾ. ನಾರಾಯಣ ಮಧ್ಯಸ್ಥ - ಕರ್ಕಿಹಾಸ್ಯಗಾರ ಮೇಳ - ಪು. ೩೨
೬. ಪೂರ್ವೋಕ್ತ - ಪು. ೨೬
೭. ಶೇಣಿಗೋಪಾಲಕೃಷ್ಣ ಭಟ್ಟ - ಯಕ್ಷಗಾನ ಮತ್ತು ನಾನು (ಆತ್ಮಕಥನ) ಯಕ್ಷರಂಗ ಏಪ್ರಿಲ್ ೨೦೦೭, ಪು. ೩೨
೮. ಪೂರ್ವೋಕ್ತ - ಪು. ೩೧
೯. ಪೂರ್ವೋಕ್ತ - ಪು. ೧೮
೧೦. ಪೂರ್ವೋಕ್ತ - ಪು. ೨೪
೧೧. ಅದೇ
೧೨. ಬೆಳೆಯೂರು ದೇವೇಂದ್ರ ಇವರೊಡನೆ ಸಂದರ್ಶನ
೧೩. ಗೋಪಾಲಕೃಷ್ಣ ಭಾಗವತ ಇವರು ಹೊಸ್ತೋಟ ಮಂಜುನಾಥ ಭಾಗವತರ ಸಂದರ್ಶನ ನಡೆಸಿದ ವರದಿ - ಜುಲೈ ೨೦೧೧, ಪು. ೪
೧೪. ಕಡತೋಕಾ ಗೋಪಾಲಕೃಷ್ಣ ಭಾಗವತ - ಯಕ್ಷರಂಗ - ಪೂರ್ವೋಕ್ತ - ಜುಲೈ ೨೦೦೪, ಪು. ೧೪
೧೫. ಪೂರ್ವೋಕ್ತ - ಪು. ೮೯
೧೬. ಪೂರ್ವೋಕ್ತ - ಪು. ೧೬
೧೭. ಪೂರ್ವೋಕ್ತ - ಪು. ೮
೧೮. ಪೂರ್ವೋಕ್ತ - ಪು. ೭
೧೯. ಯಕ್ಷಗಾನ ಅನುಭವ ಭೀಮ - ಸಂ. ಕೆ.ಕೆ. ಮಧ್ಯಸ್ಥ - ಮಹಾಗಣಪತಿ ತಾಳಮದ್ದಳೆ ಸಂಘ, ದೊಡ್ಡಬಾಳೆ ಇವರ ಸ್ಮರಣ ಸಂಚಿಕೆ, ಪು. ೧೧.
೨೦. ಪೂರ್ವೋಕ್ತ
೨೧. ಪೂರ್ವೋಕ್ತ

ಅಧ್ಯಾಯ - ೬

೧. ಹೊಸತೋಟ ಮಂಜುನಾಥ ಭಾಗವತರು - ಶಂಭು ಭಾಗವತರ ಕುರಿತು ಹೇಳಿದ್ದು. ಸಂದರ್ಶನ.

೨. ಊರಕೇರಿ ಲಕ್ಷ್ಮಿನಾರಾಯಣ ಭಾಗವತರ ಸಂದರ್ಶನ ಹಾಗೂ ಮಾಹಿತಿ.

೩. ಹೊಸತೋಟ ಮಂಜುನಾಥ ಭಾಗವತರು ಗಟ್ಟದ ಮೇಲಿನ ಮೇಳಗಳಲ್ಲಿ ಭಾಗವತರಾಗಿದ್ದು ಈ ಮಾಹಿತಿಯನ್ನು ನೀಡಿರುತ್ತಾರೆ.

೪. ಕೆ. ವಿ. ಹೆಗಡೆ ಕವಲಕ್ಕಿ ಇವರು ನೀಡಿದ ಮಾಹಿತಿ.

೫. ಶ್ರೀಧರ ಹೆಗಡೆ ಬಂಡವಾಳ ಇವರು ನೀಡಿದ ಮಾಹಿತಿ.

೬. ಯಲ್ಲಾಪುರ ತಾಲೂಕಿನ ಕ್ಷೇತ್ರ ಕಾರ್ಯ

೭. ಗುಂಡಿಬೈಲ್ ಸುಬ್ರಾಯ ಭಟ್ಟರ ಸಂದರ್ಶನ.

೮. ಯಲ್ಲಾಪುರ ತಾಲೂಕಿನ ಕ್ಷೇತ್ರಕಾರ್ಯದಲ್ಲಿ ತಿಳಿದುಕೊಂಡ ಮಾಹಿತಿ.

೯. ಕ್ಷೇತ್ರಕಾರ್ಯ ಕುಂದಾಪುರ ತಾಲೂಕು ಶಂಕರನಾರಾಯಣ ಶಾನಭಾಗರ ಸಂದರ್ಶನ.

೧೦. ಕಾಸರಗೋಡು ಪುತ್ತೂರು, ಬಂಟ್ವಾಳ ತಾಲೂಕಿನ ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ.

೧೧. ಕ್ಷೇತ್ರಕಾರ್ಯ - ಅಡಕ ಗೋಪಾಲ ಕೃಷ್ಣ ಭಟ್ಟರ ಮಾಹಿತಿ.

೧೨. ಕಡತೋಕಾ ಮಂಜುನಾಥ ಭಾಗವತರ ಸಂದರ್ಶನ

೧೩. ಹೊನ್ನಾವರ ತಾಲೂಕಿನ ಕ್ಷೇತ್ರ ಕಾರ್ಯದ ಮಾಹಿತಿ.

೧೪. ಕರ್ಕಿ ನಾರಾಯಣ ಹಾಸ್ಯಗಾರರು ನೀಡಿದ ಮಾಹಿತಿ.

೧೫. ಸಿರ್ಸಿ ಸಿದ್ದಾಪುರ ತಾಲೂಕಿನ ಕ್ಷೇತ್ರ ಕಾರ್ಯ

೧೬. ಸಂದರ್ಶನ - ಯಲ್ಲಾಪುರ ತಾಲೂಕಿನ ಕ್ಷೇತ್ರ ಕಾರ್ಯ

೧೭. ಕ್ಷೇತ್ರಕಾರ್ಯ ಪುತ್ತೂರು ತಾಲ್ಲೂಕು - ಗೋವಿಂದ ಪ್ರಸಾದ ಕಜೆರವರು ನೀಡಿದ ಮಾಹಿತಿ.

೧೮. ಹೆಬ್ಬೈಲಿನ ಕೆ. ಈ. ಭಟ್ಟರ ಸಂದರ್ಶನ.

೧೯. ಕೆರಮನೆ ಶಿವಾನಂದ ಹೆಗಡೆಯವರ ಸಂದರ್ಶನ

೨೦. ಕ್ಷೇತ್ರ ಕಾರ್ಯ ಮೂರೂರು - ರಾಮಹೆಗಡೆಯವರು ನೀಡಿದ ಮಾಹಿತಿ.

೨೧. ಚಿಟ್ಟಾಣಿ ರಾಮಚಂದ್ರ ಹೆಗಡೆ ಸಂದರ್ಶನ.

೨೨. ಚಿಟ್ಟಾಣಿ ರಾಮಚಂದ್ರ ಹೆಗಡೆ ಸಂದರ್ಶನ.

೨೩. ಕ್ಷೇತ್ರಕಾರ್ಯ - ಹಡಿನಬಾಳ ಶ್ರೀಪಾದ ಹೆಗಡೆಯವರ ಸಂದರ್ಶನ.

೨೪. ಸಿದ್ದಾಪುರ ತಾಲೂಕಿನ ಕ್ಷೇತ್ರಕಾರ್ಯ

೨೫. ಪಾತಾಳ ವೆಂಕಟ್ರಮಣ ಭಟ್ಟರ ಸಂದರ್ಶನ.

೨೬. ಕಣ್ಣಿಮನೆ ಗಣಪತಿ ಭಟ್ಟ ಸಂದರ್ಶನ

ಅನುಬಂಧ – II

ಪರಾಮರ್ಶನ ಗ್ರಂಥಗಳು

೧) ಅತಿಕಾರಿ ಸಿ.ಪಿ., ೧೯೯೫, **ಯಕ್ಷ ಸಮಿತಿ,** (ಲೇಖನ ಸಂಚಯ)

೨) ಆಚಾರ್ಯ ಮ.ಗು., ೨೦೦೪, **ಯಕ್ಷಗಾನ ಮೂಲಸ್ವರೂಪ,** ವಾದಿರಾಜ ಗುರುರಾಜ ಆಚಾರ್ಯ

೩) ಆನಂದಮೂರ್ತಿ ಜಿ.ವಿ., ೨೦೦೦, **ಕರಾವಳಿ ಯಕ್ಷಗಾನ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

೪) ಆನಂದರಾಮ ಉಪಾಧ್ಯ (ಡಾ.), ೧೯೯೦, **ಯಕ್ಷಗಾನ ಮಹಾಭಾರತ ಪ್ರಸಂಗಗಳು,** ಧಾತ್ರಿ ಮಸ್ತಕ ಮಾಲೆ

೫) ಉದ್ಯಾವರ ಮಾಧವ ಆಚಾರ್ಯ, **೧೯೯೯, ಯಕ್ಷ ಪ್ರಬಂಧಗಳು,** ವ್ಯಾಸ ಪ್ರಕಾಶನ, ಸಿರಿಮನೆ.

೬) ಕಬ್ಬಿನಾಲೆ ವಸಂತಭಾರದ್ವಾಜ, (ಡಾ.), **೧೯೯೬, ಯಕ್ಷಗಾನ ಛಂದಸ್ಸು – ಒಂದು ಅಧ್ಯಯನ** ಪ್ರಾದೇಶಿಕ ಯಕ್ಷಗಾನ ಶಿಕ್ಷಣ ಕೇಂದ್ರ, ಉಡುಪಿ.

೭) **ಕೃಷ್ಣ ಸ್ಮರಣ,** ೨೦೦೯, ದಿ। ಕೆರೆಕೈ ಕೃಷ್ಣ ಭಟ್ಟರ ಸಂಸ್ಮರಣ ಗೌರವ ಗ್ರಂಥ

೮) ಗೋಪಾಲಕೃಷ್ಣ ಹೆಗಡೆ (ಡಾ.), ೧೯೯೩, **ಪ್ರಸಂಗ ದರ್ಶನ,** ಶೇಣಿ ರಾಮಾಯಣ, ಸುದರ್ಶನ ಪ್ರಕಾಶನ, ಕುಮಟಾ.

೯) ಗೋಪಾಲಕೃಷ್ಣ ಹೆಗಡೆ (ಡಾ.), ೧೯೯೯, **ಯಕ್ಷಗಾನ ವರ್ಣ ವೈಭವ,** ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೦) ಗೋಪಾಲಕೃಷ್ಣ ಎಲ್. ಹೆಗಡೆ (ಡಾ.), ೨೦೦೭, **ಶೇಣಿ ಭಾರತ,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೧೧) ಚಿಟ್ಟಾಣಿ ರಾಮಚಂದ್ರ ಹೆಗಡೆ, ೧೯೯೧, **ರಸರಾಜ,** ಅಭಿನಂದನ ಸಮಿತಿ

೧೨) **ದೇವರಂಗ,** ೧೯೯೨ ದೇವರು ಹೆಗಡೆ ಸ್ಮಾರಕ ಪ್ರತಿಷ್ಠಾನ, ಮರೂರು, ಕುಮಟಾ.

೧೩) ದೇವಾನಂದ ಭಟ್ಟ ಎಂ., ೨೦೧೧, **ಯಕ್ಷಲೋಕ ದರ್ಶನ,** ಯಕ್ಷದೇವ ಮಿತ್ರ ಯಕ್ಷಕಲಾ ಮಂಡಳಿ, ಬೆಳುವಾಯಿ.

೧೪) ದೇರಾಜೆ ಸೀತಾರಾಮಯ್ಯ, ೧೯೭೭, ಶ್ರೀಮನ್ಮಹಾಭಾರತ ಕಥಾಮೃತಾ, **ದೇರಾಜೆ ಭಾರತ,** ಮಾರ್ಗದರ್ಶಿ ಪ್ರಕಾಶನ, ಮಂಗಳೂರು.

೧೫) ದೇರಾಜೆ ಸೀತಾರಾಮಯ್ಯ, ೧೯೯೯, ಶ್ರೀರಾಮಚರಿತಾಮೃತ (**ದೇರಾಜೆ ರಾಮಾಯಣ**), ಬ್ರಹ್ಮಶ್ರೀ, ಮತ್ತೂರು.

೧೬) ನಾರಾಯಣ ಕೆ.ಜಿ., (ಸಂ.), ೧೯೯೯, ಹೊಸ್ತೋಟ ಮಂಜುನಾಥ ಭಾಗವತರ ಜೀವನ ಕೃತಿ ವಿಮರ್ಶೆ, **ಷಷ್ಟ್ಯಬ್ಧಿ** ಅಕ್ಷರ ಪ್ರಕಾಶನ, ಹೆಗ್ಗೋಡು.

೧೭) ನಾರಾಯಣ ಮಧ್ಯಸ್ಥ (ಡಾ.), ೨೦೦೮, **ಕರ್ಕಿಹಾಸ್ಯಗಾರ ಮೇಳ**, ಭಂಡಾರ ಪ್ರಕಾಶನ, ಮಸ್ಕಿ

೧೮) ಪರಮೇಶ್ವರಿ ತನಯ – ೨೦೧೦, **ಅತೀತದಲ್ಲೊಂದು ಪ್ರಯಣ**, ಸದಾನಂದ ಕೃಷ್ಣ ಹೆಗಡೆ, ಮೂರೂರು.

೧೯) ಪ್ರಭಾಕರ ಜೋಶಿ ಎಂ., ೧೯೯೪, **ಯಕ್ಷಗಾನ ಪದಕೋಶ**, ಪ್ರಾದೇಶಿಕ ಲೇಖನಗಳ ಅಧ್ಯಯನ ಕೇಂದ್ರ ಉಡುಪಿ.

೨೦) ಪಾದೆಕಲ್ಲು ವಿಷ್ಣುಭಟ್ಟ (ಡಾ.), (ಸಂಪಾದಕ) **ವಾಚಿಕ**, ತಾಳಮದ್ದಳೆ ಅಧ್ಯಯನ ಗ್ರಂಥ,

೨೧) ಪೆರ್ಲಗುರು ಕೃಷ್ಣ ಭಟ್ಟ, **ಯಕ್ಷಗಾನದಲ್ಲಿ ಅರ್ಥಗಾರಿಕೆ**

೨೨) ಪೆರ್ಲಕೃಷ್ಣ ಭಟ್ಟ ೨೦೦೭, ವಾದ–ಪ್ರತಿವಾದಗಳು, **ತಾಳಮದ್ದಳೆಯ ಅರ್ಥಗಾರಿಕೆಯಲ್ಲಿ**, ಗುರುಕುಲ ಗ್ರಾಫಿಕ್ಸ್, ಪೆರ್ಲ.

೨೩) ಭಟ್ಟ ಜಿ.ಎಸ್., ಸಾಗರ ೨೦೦೯, **ಕೆರೆಮನೆ ಶಂಭು ಹೆಗಡೆ**, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು.

೨೪) ಭಟ್ಟ ಜಿ.ಎಸ್., (ಡಾ.), ೧೯೯೪, **ಕೆರೆಮನೆ ಶಿವರಾಮ ಹೆಗಡೆ**, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ

೨೫) ಭಟ್ಟ ಜಿ.ಎಸ್., (ಡಾ.), ೧೯೯೫, ನೆನಪಿನ ರಂಗಸ್ಥಳ, ಕೆರೆಮನೆ ಶಿವರಾಮ ಹೆಗಡೆಯವರ ಆತ್ಮಕಥನ ಅಕ್ಷರ ಪ್ರಕಾಶನ, ಹೆಗ್ಗೋಡು.

೨೬) ಭಟ್ಟ ಜಿ.ಎಸ್., (ಡಾ.), ೧೯೯೫, **ಯಕ್ಷಗಾನ ಪರಿಶೀಲನ**, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೭) ಭಟ್ಟ ಜಿ.ಎಸ್. (ಸಂ), **ವೈಜಯಂತಿ,** ಉತ್ತರಕನ್ನಡ ಯಕ್ಷಗಾನ ಸಂಚಿಕೆ

೨೮) ಭಾಸ್ಕರ ರೈ ಕುಕ್ಕುವಳ್ಳಿ ೨೦೦೨, **ಒಡ್ಡೋಲಗ,** ಬಂಟರ ಯಕ್ಷಗಾನ ಕಲೋತ್ಸವ ಸಮಿತಿ

